
ಸಮಗ್ರ ದಾಸ ಸಾಹಿತ್ಯ

ಸಂಪುಟ : ೩೦



ಶಾಮಸುಂದರವಿಠಲರು
ಶ್ರೀ ತಿಮ್ಮಪ್ಪದಾಸರು ಮತ್ತು
ಇತರ ಹರಿದಾಸರ ಕೀರ್ತನೆಗಳು

ಸಮಗ್ರ ದಾಸ ಸಾಹಿತ್ಯ

ಸಂಪುಟ : ೩೦

ಶ್ರೀ ಶಾಮಸುಂದರವಿಠಲರು,
ಶ್ರೀ ತಿಮ್ಮಪ್ಪದಾಸರು ಮತ್ತು ಇತರ ಹರಿದಾಸರ ಕೀರ್ತನೆಗಳು

ಸಂಪಾದಕರು

ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ

ಎನ್. ಹನುಮನಗೌಡ

ಪ್ರೊ. ನಾ. ಗೀತಾಚಾರ್ಯ

ಎನ್.ಎಸ್.ರಾಮಸ್ವಾಮಿ ಅಯ್ಯರ್

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಬೆಂಗಳೂರು

SAMAGRA DASA SAHITYA VOLUME - 30

Complete Keerthanas of *Sri Shamasundra Vittala, Sri Thimmappa Dasaru Mattu Ithara Haridasara Keerthanegalu.* Edited by Prof. Shashvataswami Mukkundimath, N. Hanumanagowda, Prof. N. Geethacharya and N.S. Ramaswami Iyer; published by Sri. Y.K. Muddukrishna, Director, Directorate of Kannada and Culture, Kannada Bhavana. J.C. Road, Bangalore - 560 002.

ಪುಟಗಳು : 109 + ೬೩೯

ಪ್ರಥಮ ಮುದ್ರಣ : ೨೦೦೩

ಪ್ರತಿ : ೧೨೫೦

ಬಿಡಿ ಪ್ರತಿ ಬೆಲೆ : ರೂ. ೬೦=೦೦

ಸಮಗ್ರ ಸಂಪುಟಗಳ ಬೆಲೆ : ರೂ. ೨೪೦೦=೦೦

ಮುದ್ರಣ ನಿರ್ವಹಣೆ :

ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
೩೬, ಕನ್ನಿಂಗ್ ಹ್ಯಾಮ್ ರಸ್ತೆ
ಬೆಂಗಳೂರು - ೫೬೦ ೦೫೨.

ಮುದ್ರಕರು :

ಮೆ. ಡಾಟ್ಸ್
೧೨೪, ಸುಲ್ತಾನ್‌ಪೇಟೆ
ಬೆಂಗಳೂರು - ೫೬೦ ೦೫೩.

ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆ

ಸಂಪಾದಕ ಮಂಡಳಿ

ಕಾರ್ಯನಿರ್ವಾಹಕ ಸಂಪಾದಕರು

ಡಾ. ಶ್ರೀನಿವಾಸ ಹಾವನೂರ
ಡಾ. ಟಿ. ಎನ್. ನಾಗರತ್ನ
ಪ್ರೊ. ವಸಂತ ಕುಷ್ಟಗಿ

ಸದಸ್ಯರು

ಡಾ. ಎಂ. ಎಂ. ಕಲಬುರ್ಗಿ
ಪ್ರೊ. ಎಂ. ರಾಜಗೋಪಾಲಾಚಾರ್ಯ (ಫೆಬ್ರವರಿ '೯೮ ರವರೆಗೆ)
ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಡಾ. ಮಂದಾಕಿನಿ
ಪ್ರೊ. ಸುಧಾಕರ
ಡಾ. ಬಸವರಾಜ ಸಬರದ

ಸದಸ್ಯ ಕಾರ್ಯದರ್ಶಿ

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುನ್ನುಡಿ

ಹರಿದಾಸ ಸಾಹಿತ್ಯ ಕನ್ನಡ ಸಂಸ್ಕೃತಿ ಪರಂಪರೆಯ ಮಹತ್ವಪೂರ್ಣ ಭಾಗವಾಗಿದೆ. ದೇಶೀಯತೆ ಹಾಗೂ ಗೇಯತೆಗಳೆರಡನ್ನೂ ಮೇಳವಿಸಿಕೊಂಡು, ಕನ್ನಡ ಸಾಹಿತ್ಯವಾಹಿನಿಗೆ ಇದು ಹೊಸತನವನ್ನು ನೀಡಿದೆ. ಮನುಜಮತ, ಸಾಹಿತ್ಯಪಥ ಹಾಗೂ ಭಕ್ತಿಸಿದ್ಧಾಂತದ ತ್ರಿವೇಣಿಯಾಗಿರುವ ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ಪ್ರಜಾಸತ್ತಾತ್ಮಕ ಸರಕಾರದ ಆದ್ಯ ಕರ್ತವ್ಯವಾಗಿದೆ.

ಕನ್ನಡ ಭಾಷಿಕಶಕ್ತಿಯ ವಿವಿಧ ಆಯಾಮಗಳನ್ನು ಸೆಳೆದು ತೋರಿರುವ, ಸಾಹಿತ್ಯ–ಸಂಗೀತಗಳ ಸಾಮರಸ್ಯವನ್ನು ಮೆರೆದಿರುವ ಈ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಜಾಗತಿಕ ಮಹತ್ವವನ್ನು ತಂದುಕೊಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಮಾನವಾನುಕಂಪ, ಸಮಾಜಸುಧಾರಣೆ, ಲೋಕದ ಡೊಂಕುಗಳನ್ನು ನಗೆ ವಿಡಂಬನೆಗಳ ಮೂಲಕ ತಿದ್ದುವ ಕೌಶಲ ದಾಸಸಾಹಿತ್ಯದ ಪ್ರಮುಖ ಲಕ್ಷಣವಾಗಿದೆ.

ಆಧ್ಯಾತ್ಮಿಕ ಸಾಧನೆ, ಅನುಭವ – ಅನುಭಾವಗಳು ದಾಸಸಾಹಿತ್ಯದ ಪ್ರಮುಖ ಅಂಶವಾದರೂ, ಸುತ್ತಮುತ್ತಲಿರುವ ಜೀವನದ ಕಡೆಗೆ, ಮಾನವ ಸ್ವಭಾವದ ಕಡೆಗೆ ಕಣ್ಣು ಹರಿಸಿದ ಹರಿದಾಸರು ಸಾತ್ತ್ವಿಕ ಜೀವನ ನಿರ್ವಹಣೆಗೆ, ಮಾನವನ ಮೇಲ್ಮೆಗೆ, ನೈತಿಕ ಆಚರಣೆಗೆ ಒತ್ತು ನೀಡಿದವರು.

ಹರಿದಾಸ ಸಾಹಿತ್ಯ ಅಪಾರವಾದುದು ಹಾಗೂ ವೈವಿಧ್ಯವಾದುದು. ಈ ವಿಪುಲ ಸಾಹಿತ್ಯರಾಶಿಯನ್ನು ಒಂದೆಡೆ ಕ್ರೋಡೀಕರಿಸಿ, ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಕನ್ನಡ ಜನತೆಗೆ ನೀಡುತ್ತಿದೆ.

ಈ ಯೋಜನೆಗೆ ದುಡಿದ ಸಂಪಾದಕ ಮಂಡಳಿಯ ಶ್ರದ್ಧೆ ಹಾಗೂ ಮಾರ್ಗದರ್ಶನವನ್ನು, ವಿವಿಧ ಸಂಪುಟಗಳ ಸಂಪಾದಕರಾಗಿ ನಾಡಿನ ಅನೇಕ ವಿದ್ವಾಂಸರು ತೋರಿರುವ ಆಸಕ್ತಿ ಹಾಗೂ ನೆರವನ್ನು ಮತ್ತು ಈ ಸಂಪುಟದ ಸಂಪಾದಕರ ಶ್ರಮವನ್ನು ಸ್ಮರಿಸುತ್ತ ಕನ್ನಡ ಜನತೆಯ ಕೈಗೆ ಈ ಮೌಲಿಕ ಪ್ರಕಟಣೆಗಳನ್ನು ಸಂತೋಷದಿಂದ ಅರ್ಪಿಸುತ್ತೇನೆ.

ಎಸ್. ಎಂ. ಕೃಷ್ಣ

ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ಎರಡು ಮಾತು

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕರ್ನಾಟಕದ ಸಾಹಿತ್ಯ, ಸಂಗೀತ, ಸಂಸ್ಕೃತಿಗಳನ್ನು ಪ್ರಭಾವಪೂರ್ಣವಾಗಿ ಸಮೃದ್ಧಿಗೊಳಿಸಿದವರು ಹರಿದಾಸರು. ಬದುಕಿನಲ್ಲಿ ನಿಷ್ಠೆ, ಸಾಹಿತ್ಯದಲ್ಲಿ ಬದುಕಿನ ತತ್ತ್ವಗಳನ್ನು ಅಡಗಿಸಿ ಜನಸಾಮಾನ್ಯರನ್ನು ಉನ್ನತ ಜೀವನದತ್ತ ಉದ್ದೀಪಿಸುವ ಮಹಾಕಾಯಕದಲ್ಲಿ ತೊಡಗಿದವರು ಹರಿದಾಸರು. ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯಾಗಿರುವ ಹರಿದಾಸ ಸಾಹಿತ್ಯ ಸಮಾಜದ ಮೌಢ್ಯವನ್ನು ಬಯಲಿಗೆಳೆದು, ಜಾತಿ, ಮತ, ಪಂಥಗಳನ್ನು ಮೀರಿ ನಿಂತ ಮಾನವೀಯ ಮೌಲ್ಯಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿತು.

ಹರಿದಾಸ ಸಾಹಿತ್ಯಕ್ಕೆ ಪ್ರೇರಣೆ ಭಕ್ತಿಯಾದರೂ, ಕರ್ನಾಟಕ ಸಂಗೀತಕ್ಕೆ ಸಮೃದ್ಧಿಯನ್ನು ನೀಡಿದವರು ಹರಿದಾಸರು. ಗ್ರಾಮ್ಯ ಮತ್ತು ದೇಶ್ಯ ಶಬ್ದಗಳಿಗೆ ಸಾಹಿತ್ಯದ ಮುದ್ರೆಯನ್ನು ಒತ್ತಿ, ಭಾಷೆಗೊಂದು ಪರಿಪಕ್ವತೆಯನ್ನು ತಂದುಕೊಟ್ಟರು. ಇಂಥ ಸಾಹಿತ್ಯ ಸಂಪತ್ತನ್ನು ರಕ್ಷಿಸುವುದು ಮತ್ತು ಪ್ರಸಾರ ಮಾಡುವುದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆಗೆ ಸಮಿತಿಯೊಂದನ್ನು ರಚಿಸಿದ್ದು, ಇದರಲ್ಲಿ ನಾಡಿನ ಅನೇಕ ವಿದ್ವಾಂಸರು ಸಂಪುಟ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಸಂಪುಟಗಳು ಹೊರಬರಲು ಕಾರಣರಾದ ಸಂಪಾದಕ ಮಂಡಳಿಯ ಸದಸ್ಯರಿಗೆ ಹಾಗೂ ಈ ಸಂಪುಟದ ಸಂಪಾದಕರಿಗೆ ನನ್ನ ಕೃತಜ್ಞತೆಗಳು.

ದಾಸರು ತಮ್ಮ ಸಾಹಿತ್ಯದಲ್ಲಿ ಸಾರ್ವಕಾಲಿಕ ಮೌಲ್ಯಗಳನ್ನು ಉಳಿಸಿ ಹೋಗಿದ್ದಾರೆ. ನಮ್ಮ ಸಾಮಾಜಿಕ ಜೀವನವನ್ನು ರೂಪಿಸುವಲ್ಲಿ ಈ ಕೀರ್ತನೆಗಳು ಮೌಲಿಕವಾದುವು. ಕನ್ನಡ ಜನತೆ ಈ ಕೃತಿಯ ಪ್ರಯೋಜನವನ್ನು ಪಡೆದರೆ ಪಟ್ಟ ಶ್ರಮ ಸಾರ್ಥಕವಾಗುತ್ತದೆ.

ರಾಣಿ ಸತೀಶ್

ಕನ್ನಡ ಮತ್ತು ಸಂಸ್ಕೃತಿ ಸಚಿವರು

ಯೋಜನೆಯನ್ನು ಕುರಿತು

ಕನ್ನಡ ಸಾಹಿತ್ಯ ಚರಿತ್ರೆಯ ಸಿರಿವಂತಿಕೆಯಲ್ಲಿ ಕೀರ್ತನ ಸಾಹಿತ್ಯದ ಕೊಡುಗೆ ವಿಪುಲವಾದುದು; ವೈಶಿಷ್ಟ್ಯಪೂರ್ಣವಾದುದು. ಈ ಸಮಗ್ರ ಸಾಹಿತ್ಯದ ಸಂಗ್ರಹ ಮತ್ತು ಪ್ರಕಾಶನದ ಕಾರ್ಯ ಪೂರ್ಣವಾಗಿ ಆಗಿರಲಿಲ್ಲ. ಇದನ್ನು ಮನಗಂಡ ಸರ್ಕಾರ ಸಮಗ್ರ ದಾಸ ಸಾಹಿತ್ಯ ಪ್ರಕಟಣೆಯ ಕಾರ್ಯವನ್ನು ಕೈಗೆತ್ತಿಕೊಂಡಿತು.

ಸುಮಾರು ಒಂದು ನೂರ ಮೂವತ್ತೊಂಬತ್ತು ಜನ ದಾಸರ ಸುಮಾರು ಹದಿನಾರು ಸಾವಿರ ಕೀರ್ತನೆಗಳ ಬೃಹತ್ ಸಾಹಿತ್ಯ ಸಾಮಗ್ರಿ ದೊರಕಿತು. ಹೀಗೆ ಸಾಂಪ್ರದಾಯಿಕ ರೀತಿಯಲ್ಲಿ ಸಂಗ್ರಹಿಸಿ, ಸಂಪಾದಿಸಿದ ಕೀರ್ತನ ಸಾಹಿತ್ಯವನ್ನು ಸಂಪುಟಗಳಲ್ಲಿ ಮುದ್ರಿಸುವುದು ಕಷ್ಟವೇನಾಗಿರಲಿಲ್ಲ. ಆದರೆ, ಅದನ್ನು ಮಾಹಿತಿ ತಂತ್ರಜ್ಞಾನದ ಇವತ್ತಿನ ಸಂದರ್ಭದಲ್ಲಿ ಬಹು ಉಪಯೋಗಿ ನೆಲೆಯಲ್ಲಿ ಬಹುಮಾಧ್ಯಮದಲ್ಲಿ ಹೊರತರಬೇಕೆಂಬ ಕನಸು ರೋಮಾಂಚಕಾರಿ ಅನುಭವವೇ ಸರಿ. ಇದನ್ನು ಕೃತಿ ರೂಪಕ್ಕಿಳಿಸುವ ಹಾದಿಯಲ್ಲಿ ಎದುರಾದ ತಾಂತ್ರಿಕ ಸವಾಲು ಬಹು ಕ್ಲಿಷ್ಟಕರವಾಗಿಯೇ ಕಂಡಿತು.

ದಿಟ, ಈ ಸಮಗ್ರ ಸಾಹಿತ್ಯವನ್ನು ಕೇವಲ ಮುದ್ರಣದಲ್ಲಷ್ಟೇ ಅಲ್ಲ, ಆಯ್ದ ಕೀರ್ತನೆಗಳನ್ನು ಗಾಯನಕ್ಕೆ ಅಳವಡಿಸಿ, ಸಿ.ಡಿ. ಮತ್ತು ಅಂತರ್ಜಾಲದಲ್ಲಿ ಹೊರತರ ಬೇಕೆಂದಾಗ ಬಳಕೆದಾರರ ಆವಶ್ಯಕತೆಯನ್ನು ಆಧರಿಸಿ ತಯಾರಿಸುವ ಅಗತ್ಯ ಇತ್ತು. ಆದರೆ ಇವುಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಸರ್ಚ್ ಎಂಜಿನ್ (ಹುಡುಕುವಿಕೆ) ಇಲ್ಲದಿರುವುದು ಒಂದು ತಾಂತ್ರಿಕ ಸಮಸ್ಯೆಯೇ ಆಯಿತು.

ಈ ರೀತಿಯ ಪ್ರಯತ್ನ ಕನ್ನಡ ಭಾಷೆಯಲ್ಲಿ ಹಿಂದೆಂದೂ ಆಗದಿದ್ದುದರಿಂದ ತಂತ್ರಾಂಶವನ್ನು ಹೊಸದಾಗಿಯೇ ಅಭಿವೃದ್ಧಿ ಪಡಿಸಬೇಕಾದ ಸವಾಲನ್ನು ಕೈಗೆತ್ತಿ ಕೊಳ್ಳಲಾಯಿತು. ಇದಕ್ಕಾಗಿ ಕನ್ನಡ ಗಣಕ ಪರಿಷತ್ತು, ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್‌ಐಸಿ), ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ, ಮಹಾಭಾರತ ಸಂಶೋಧನಾ ಪ್ರತಿಷ್ಠಾನ ಮುಂತಾದ ಹಲವಾರು ತಂತ್ರಾಂಶ ಸಂಸ್ಥೆಗಳೊಂದಿಗೆ ನಿರಂತರ ಸಮಾಲೋಚನೆ, ಚಿಂತನೆಗಳನ್ನು ನಡೆಸಲಾಯಿತು.

ಹೀಗೆ ಸಾಹಿತ್ಯ ಸಂಗ್ರಹ, ಸಂಪಾದನೆ, ಸಂಗೀತ ಸಂಯೋಜನೆ, ಧ್ವನಿಮುದ್ರಣ, ಬಹುಮಾಧ್ಯಮಕ್ಕೆ ಅಳವಡಿಸುವ ತಾಂತ್ರಿಕ ಕುಶಲತೆಯ ನಿರಂತರ ಕಾರ್ಯಾನುಷ್ಠಾನಕ್ಕೆ ಸಂಪಾದಕ ಮಂಡಳಿ ಸದಸ್ಯರು, ಸಂಪುಟ ಸಂಪಾದಕರು, ಇಲಾಖಾ ಅಧಿಕಾರಿಗಳು, ತಂತ್ರಜ್ಞರು, ಕೋರ್ ಸಮಿತಿ ಸದಸ್ಯರು, ಸಂಗೀತ ನಿರ್ದೇಶಕರು, ಗಾಯಕರು – ಈ ಎಲ್ಲರ ಪರಿಶ್ರಮ ಅಗಾಧವಾಗಿ ದೊರಕಿದೆ. ಈ ಶ್ರಮದ ಫಲವಾಗಿ ಬಹುಮಾಧ್ಯಮದಲ್ಲಿ ಸಮಗ್ರ ದಾಸ ಸಾಹಿತ್ಯ ಯೋಜನೆಯ ಬೃಹತ್ ಕಾರ್ಯ ಸಾಕಾರಗೊಂಡಿದೆ.

ಈ ವಿಪುಲ ಸಾಹಿತ್ಯವನ್ನು ಕನ್ನಡ ಅಕ್ಷರಜ್ಞಾನಿಗಳು ಪುಸ್ತಕ ರೂಪದಲ್ಲಿಯೂ ಬಹುಗಾತ್ರದ ಸಾಹಿತ್ಯವನ್ನು ಕೈ ಅಳತೆಯ ಸಿ.ಡಿ. ರೂಪದಲ್ಲಿಯೂ ಈಗ ಪಡೆಯಬಹುದಾಗಿದೆ. ಅಲ್ಲದೆ, ಅಂತರ್ಜಾಲದ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಿರುವ ಆಸಕ್ತ ಜನತೆ ಕುಳಿತಲ್ಲಿಯೇ ಆರಾಮವಾಗಿ ವೀಕ್ಷಿಸುವ, ಕೇಳುವ ಹಾಗೂ ಕನ್ನಡ ಅಕ್ಷರ ಜ್ಞಾನವಿರದ ಭಾಷಿಕರು ಸಹಿತ ಸಂಗೀತವನ್ನು ಕೇಳಿ ಆಸ್ವಾದಿಸುವ ಅವಕಾಶವನ್ನು ಏಕಕಾಲದಲ್ಲಿ ಕಲ್ಪಿಸಲಾಗಿದೆ. ಪ್ರಕಾಶನದ ಇತಿಹಾಸದಲ್ಲಿಯೇ ದಾಖಲನೀಯವಾದ ಈ ಕಾರ್ಯ ಮುಂದೆ ಸರ್ಕಾರಿ ಸಂಸ್ಥೆಗಳಿಗಾಗಲಿ, ಖಾಸಗಿ ಸಂಸ್ಥೆಗಳಿಗಾಗಲಿ ಮಾದರಿಯಾಗಬಹುದೆಂದು ನಂಬಲಾಗಿದೆ.

ನಮ್ಮ ಸಂಸ್ಕೃತಿಯನ್ನು ಬಿತ್ತರಿಸಲು ನಾಲ್ಕು ಗೋಡೆಗಳೊಳಗಿನ ರಂಗ ಮಂದಿರಗಳು, ವೇದಿಕೆಗಳು ಅಗತ್ಯವಿದೆ ದಿಟ. ಆದರೆ ಭವಿತವ್ಯದಲ್ಲಿ ವಿಶ್ವದ ಜನರನ್ನು ತಲಪಲು ಮತ್ತು ಮುಖ್ಯವಾಗಿ ಯುವಜನಾಂಗಕ್ಕೆ ನಮ್ಮ ಸಾಂಸ್ಕೃತಿಕ ಕ್ಷಿತಿಜದ ವಿಸ್ತಾರವನ್ನು ಪರಿಚಯಿಸಲು ಸೂಕ್ಷ್ಮ ಸಂವೇದನಾಶೀಲವಾದ ಸಾಹಿತ್ಯವನ್ನು ಬಹುಮಾಧ್ಯಮದಲ್ಲಿ ಅಳವಡಿಸುವುದು ಅತ್ಯಾವಶ್ಯಕ. ಈ ನಿಟ್ಟಿನಲ್ಲಿ ಇದೊಂದು ವಿನೂತನ ಪ್ರಯೋಗ; ಈ ಪ್ರಯೋಗದ ಫಲ ಎಲ್ಲರಿಗೂ ಲಭ್ಯವಾಗಲೆಂಬುದು ನಮ್ಮ ಆಶಯ.

ಸಿ. ಎಸ್. ಕೇದಾರ್
ಸರ್ಕಾರದ ಕಾರ್ಯದರ್ಶಿ

ಪ್ರಕಾಶಕರ ಮಾತು

ಕರ್ನಾಟಕದ ಧಾರ್ಮಿಕ, ಸಾಂಸ್ಕೃತಿಕ ಇತಿಹಾಸದಲ್ಲಿ ಹರಿದಾಸರ ಸ್ಥಾನ ವಿಶಿಷ್ಟವಾದದ್ದು. ಸಾವಿರಾರು ವರ್ಷಗಳಿಂದ ಭಾರತದಲ್ಲಿ ಅವಿರತವಾಗಿ ಹರಿದುಬಂದ ಜೀವನಮೌಲ್ಯಗಳನ್ನು ಜನಸಾಮಾನ್ಯರ ಆಡುಭಾಷೆಯಲ್ಲಿ ಮುಟ್ಟಿಸಿ, ಲೌಕಿಕ ವಿಡಂಬನೆಯ ಮೂಲಕ ಅವರ ಮಾನಸಿಕ ವಿಕಾಸವನ್ನು ಯಶಸ್ವಿಯಾಗಿ ಸಾಧಿಸಿದವರು ಹರಿದಾಸರು. ಪಾಂಡಿತ್ಯ, ಲೋಕಾನುಭವಗಳ ಹಿನ್ನೆಲೆಯಿಂದಾಗಿ, ಆಡುಭಾಷೆಯ ಸೊಗಡಿನಿಂದಾಗಿ ಇವರು ಹಾಡಿದ್ದೆಲ್ಲ ಸಾಹಿತ್ಯವಾಯಿತು, ಕಾವ್ಯವಾಯಿತು, ಕೇಳುಗರನ್ನು ಸೆರೆಹಿಡಿಯಿತು. ಗೇಯಗುಣವುಳ್ಳ, ನೃತ್ಯಕ್ಕೆ ಅಳವಡುವ, ಛಂದೋಬದ್ಧವಾದ, ಜನತೆಯ ಮಧ್ಯದಲ್ಲಿಯೇ ಸಂದರ್ಭಾನುಸಾರ ಹುಟ್ಟಿದ ಹರಿದಾಸ ಸಾಹಿತ್ಯ ವೈಶಿಷ್ಟ್ಯಪೂರ್ಣವೆನಿಸಿತು. ಕನ್ನಡ ವಾಙ್ಮಯದಲ್ಲಿ ದಾಸಸಾಹಿತ್ಯ ಒಂದು ವಿಶೇಷ ಸ್ಥಾನ ಪಡೆಯಿತು. ಹೀಗೆ ಸಾಹಿತ್ಯ, ಸಂಗೀತ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ದಾಸಸಾಹಿತ್ಯದ ಕೊಡುಗೆ ಗಣನೀಯವಾದುದು.

ಸುಮಾರು ನೂರಮೂವತ್ತೊಂಬತ್ತು ಜನ ದಾಸರು ಆಗಿಹೋಗಿದ್ದು, ಅವರ ಕೀರ್ತನೆಗಳ ಸಂಖ್ಯೆ ಸುಮಾರು ಹದಿನಾರು ಸಾವಿರಕ್ಕೂ ಅಧಿಕ. ಈವರೆಗೆ ಕೆಲವು ದಾಸರ ಕೀರ್ತನೆಗಳು ಬಿಡಿ ಬಿಡಿಯಾಗಿ ಪ್ರಕಟವಾಗಿವೆಯಾದರೂ, ಇನ್ನೂ ಅನೇಕ ದಾಸವರೇಣ್ಯರ ಕೀರ್ತನೆಗಳು ಹಸ್ತಪ್ರತಿ ರೂಪದಲ್ಲಿಯೇ ಉಳಿದುಕೊಂಡಿವೆ. ಅವುಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ, ಸಮಗ್ರ ದಾಸಸಾಹಿತ್ಯವು ಕನ್ನಡಿಗರಿಗೆ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರ ದಾಸಸಾಹಿತ್ಯ ಪ್ರಕಟಣೆಯ ಬೃಹತ್ ಯೋಜನೆಯನ್ನು ಹಾಕಿಕೊಂಡಿದೆ. ಈ ಉದ್ದೇಶಕ್ಕಾಗಿ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಶ್ರೀನಿವಾಸ ಹಾವನೂರ, ಡಾ. ಟಿ. ಎನ್. ನಾಗರತ್ನ, ಪ್ರೊ. ವಸಂತ ಕುಷ್ಟಗಿ, ಸದಸ್ಯರಾದ ಡಾ. ಎಂ. ಎಂ. ಕಲಬುರ್ಗಿ, ಡಾ. ಬಸವರಾಜ ಸಬರದ, ಪ್ರೊ. ಸುಧಾಕರ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ಡಾ. ಮಂದಾಕಿನಿ (ಈಗ ದಿವಂಗತರು) ಹಾಗೂ ಪ್ರೊ. ಎಂ. ರಾಜಗೋಪಾಲಾಚಾರ್ಯ (ಈಗ ದಿವಂಗತರು) ಅವರನ್ನೊಳಗೊಂಡಂತೆ ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಇಲಾಖಾ ನಿರ್ದೇಶಕರು ಸಮಿತಿಯ ಸದಸ್ಯ-ಕಾರ್ಯದರ್ಶಿಗಳಾಗಿರುತ್ತಾರೆ. ಇದರಲ್ಲಿ ನಾಡಿನ ಅನೇಕ ವಿದ್ವಾಂಸರ ನೆರವನ್ನು ಬಳಸಿಕೊಳ್ಳಲಾಗುತ್ತಿದೆ.

ಈ ಯೋಜನೆಯನ್ವಯ 'ಸಮಗ್ರ'ವಾಗಿ ದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಪ್ರಕಟಿಸುವುದಿದ್ದರೂ ಕೆಲವು ಹರಿದಾಸರ ರಚನೆಗಳು ಬಿಟ್ಟು ಹೋಗಿರುವ ಸಾಧ್ಯತೆ ಇರುತ್ತದೆ. ಅಂಥ ಹರಿದಾಸರ ಕೀರ್ತನೆಗಳು ದೊರೆತಲ್ಲಿ ಮುಂದೆ ಪರಿಷ್ಕರಣ ಸಂದರ್ಭದಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳಲಾಗುವುದು.

ಸಮಗ್ರ ದಾಸಸಾಹಿತ್ಯ ಯೋಜನೆಯಡಿ ಪ್ರಕಟವಾಗುತ್ತಿರುವ ಆಯಾ ಸಂಪುಟಗಳ ಸಂಪಾದಕರಿಗೆ ಹಾಗೂ ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಸಂಪಾದಕ ಮಂಡಳಿಯವರಿಗೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ, ಶ್ರೀ ಸಿ. ಸೋಮಶೇಖರ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರಿಗೆ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ. ಎಸ್. ವಿಜಯಲಕ್ಷ್ಮಿ ಹಾಗೂ ಡಾ. ಮಂಜುಳ ಅವರಿಗೆ ಕೃತಜ್ಞತೆಗಳು.

ಹರಿದಾಸರ ಕೀರ್ತನೆಗಳನ್ನು ಆಯ್ದು ಸಂಗೀತಕ್ಕೆ ಆಯ್ಕೆ ಮಾಡಲು ನೆರವಾದ ಶ್ರೀ ವಿನಾಯಕ ತೊರವಿ, ಶ್ರೀ ಮೈಸೂರು ವಿ. ಸುಬ್ರಹ್ಮಣ್ಯ, ಶ್ರೀ ಆರ್. ಕೆ. ಪದ್ಮನಾಭ, ಶ್ರೀ ಬಾನಂದೂರು ಕೆಂಪಯ್ಯ ಹಾಗು ಶ್ರೀಮತಿ ಮಾಲತಿ ಶರ್ಮರವರಿಗೆ, ಮತ್ತು ಈ ಯೋಜನೆಯಲ್ಲಿ ಪಾಲ್ಗೊಂಡ ಎಲ್ಲ ಸಂಗೀತ ನಿರ್ದೇಶಕರಿಗೆ ಹಾಗೂ ಗಾಯಕರಿಗೆ ಕೃತಜ್ಞತೆಗಳು.

ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸುವ ಕಾರ್ಯ ನಿರ್ವಹಿಸಿದ ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಅನಂತ ಪದ್ಮನಾಭರಾವ್ ಮತ್ತು ಪ್ರೊ. ನಾ. ಗೀತಾಚಾರ್ಯ ಇವರಿಗೂ ಸಹ ಕೃತಜ್ಞತೆಗಳು.

ಈ ಸಮಗ್ರ ದಾಸಸಾಹಿತ್ಯ ಸಂಪುಟಗಳ ಮುದ್ರಣ ಕಾರ್ಯವನ್ನು ನಿರ್ವಹಿಸಿದ ಎಂ.ಎಸ್.ಐ.ಎಲ್. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅಶೋಕ್ ವಿ. ಡೇವಿಡ್ ಹಾಗೂ ವಿಶೇಷಾಧಿಕಾರಿಗಳಾದ ಶ್ರೀ ಎಂ. ರವಿಶಂಕರ್ ಅವರಿಗೆ ನನ್ನ ಕೃತಜ್ಞತೆಗಳು. ಸಮಗ್ರ ದಾಸಸಾಹಿತ್ಯವನ್ನು ಪ್ರಕಟಿಸುವುದು ಹರಿದಾಸರಿಗೂ ಕನ್ನಡ ಜನತೆಗೂ ನಾವು ಸಲ್ಲಿಸಬೇಕಾದ ಸೇವೆಯೆಂದು ಭಾವಿಸಿದ್ದೇನೆ. ಪಂಡಿತ–ಪಾಮರರನ್ನು ಏಕಕಾಲಕ್ಕೆ ಆಕರ್ಷಿಸಬಲ್ಲ ವಿಶಿಷ್ಟ ಸಾಮರ್ಥ್ಯ ದಾಸಸಾಹಿತ್ಯದ್ದು ಎಂದರೆ ತಪ್ಪಾಗಲಾರದು. ಕನ್ನಡ ಜನತೆಯು ಈ ಪ್ರಕಟಣೆಯ ಸದುಪಯೋಗ ಪಡೆದುಕೊಂಡೀತು ಎಂದು ಆಶಿಸಿದ್ದೇನೆ.

ವೈ. ಕೆ. ಮುದ್ದುಕೃಷ್ಣ

ನಿರ್ದೇಶಕರು

ಸಂಪಾದಕ ಮಂಡಳಿಯ ನುಡಿ

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕನ್ನಡಜನಕ್ಕೆ ಪಂಪನಂತಹ ಪ್ರೌಢಕವಿಗಳು ಗೊತ್ತಿರಲಿ ಬಿಡಲಿ, ದಾಸರ ಹಾಡುಗಳು ಗೊತ್ತಿಲ್ಲದವರು ಮಾತ್ರ ಅಪರೂಪ. ಜನರ ಮೇಲೆ ನಿರಂತರ ಪ್ರಭಾವವನ್ನು ಬೀರುವ ಜನಸಮ್ಮುಖತೆ ದಾಸಸಾಹಿತ್ಯದ ಪ್ರಮುಖ ಲಕ್ಷಣಗಳಲ್ಲಿ ಒಂದು. ಇಂತಹ ದಾಸರ ಹಾಡುಗಳು ಜ್ಞಾನಸಂಪದ ಹಾಗೂ ಭಕ್ತಿಸಂಪದಗಳ ಸಾರ್ವತ್ರಿಕ ಹಬ್ಬುಗೆಗೆ ಸಾಧನವಾಗಿ ಪರಿಣಮಿಸಿವೆ.

ಕನ್ನಡ ನಾಡಿನಾದ್ಯಂತ ಎಲ್ಲ ಸ್ತರಗಳಲ್ಲಿ ವರ್ಗ–ವರ್ಣಗಳ ಭೇದವಿಲ್ಲದೆ, ಜನರ ಬಾಯಲ್ಲಿ ಉಳಿದುಕೊಂಡು ಬಂದ ಈ ಸಾಹಿತ್ಯವನ್ನು ಮೊಟ್ಟಮೊದಲಿಗೆ ಪ್ರಕಟಿಸಿದ ಶ್ರೇಯಸ್ಸು ಬಾಸೆಲ್ ಮಿಶನ್ನಿನ ರೆ. ಹರ್ಮನ್ ಮೊಗ್ಲಿಂಗ್‌ರಿಗೆ ಸೇರುತ್ತದೆ. ಇವರು ತಮ್ಮ ಇಲ್ಲಿಯ ವಾಸ್ತವ್ಯದಲ್ಲಿ (೧೮೩೬ರಿಂದ) ನಾಲ್ಕುನೂರಕ್ಕೂ ಮೀರಿದ ದಾಸರಪದಗಳನ್ನು ಸಂಗ್ರಹಿಸಿದ್ದರು. ಅವುಗಳಲ್ಲಿಯ ಒಂದು ನೂರು ಪದಗಳ ಸಂಗ್ರಹವನ್ನು 'ದಾಸರ ಪದಗಳು' ಎಂಬ ಹೆಸರಿನಿಂದ ಕ್ರಿ. ಶ. ೧೮೫೦ರಲ್ಲಿ, ಮತ್ತೆ ಕ್ರಿ.ಶ. ೧೮೫೨ರಲ್ಲಿ ೧೭೪ ಪದಗಳುಳ್ಳ ಸಂಕಲನವನ್ನು ಮಂಗಳೂರಿನಲ್ಲಿ ಕಲ್ಲಚ್ಚಿನಲ್ಲಿ ಛಾಪಿಸಿ ಪ್ರಕಟಿಸಿದರು. ಈ ವಿಷಯವನ್ನು ೧೮೭೩ರಲ್ಲಿ ಪ್ರಕಟವಾದ ಇಂಡಿಯನ್ ಎಂಟಿಕ್ವೆರಿಯ 'On the Karnataka Vaishnava Dasas' – ಎಂಬ ತಮ್ಮ ಲೇಖನದಲ್ಲಿ ರೆ. ಕಿಟೆಲ್ಲರು ಕಾಣಿಸಿದ್ದಾರೆ. ಇದರಿಂದ ಕಿಟೆಲ್‌ರಂಥವರು ಕೂಡ ದಾಸರ ಪದಗಳ ಮಹತ್ವವನ್ನು ಮತ್ತು ಜನಪ್ರಿಯತೆಯನ್ನು ಗುರುತಿಸಿದ್ದರು ಎಂಬುದು ಗೊತ್ತಾಗುತ್ತದೆ. ಪ್ರಾಸಂಗಿಕವಾಗಿ ಇದುವೇ ದಾಸಸಾಹಿತ್ಯದ ಕುರಿತಾದ ಮೊದಲ ಲೇಖನವೂ ಆಗಿದೆ.

ಆ ನಂತರದ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಹಲವಾರು ಜನರು ಕೆಲಸವನ್ನು ಮುಂದುವರಿಸಿದರು. ರೆ. ಮೊಗ್ಲಿಂಗರ 'ದಾಸರ ಪದಗಳು' ಇದರ ದ್ವಿತೀಯ ಆವೃತ್ತಿಯನ್ನು ೧೮೭೧ರಲ್ಲಿ ಜಾನ್ ಗ್ಯಾರೆಟರ ಸೂಚನೆಯ ಮೇರೆಗೆ ಹೊಳಕಲ್ಲು ನರಸಿಂಹಯ್ಯನವರು ಬೆಂಗಳೂರಿನಿಂದ ಪ್ರಕಟಿಸಿದರು. ೧೮೭೩ರಲ್ಲಿ ಹಿಂದೂ ಭಾಷಾ ಸಂಜೀವಿನೀ ಮುದ್ರಣ ಶಾಲೆಯಲ್ಲಿ 'ಹರಿಭಜನೆ, ಕೀರ್ತನೆ' ಎಂಬ ಸಂಗ್ರಹ ಪ್ರಕಟವಾಯಿತು. ೧೮೯೦ನೆಯ ದಶಕದಲ್ಲಿ ಬೆಳಗಾವಿಯ ಆಬಾಜಿ ರಾಮಚಂದ್ರ ಸಾವಂತ ಇವರು ದೇವನಾಗರಿ ಲಿಪಿಯಲ್ಲಿ "ದಾಸರ ಪದಗಳ ಸಂಗ್ರಹವು" ಎಂಬುದಾಗಿ ಎರಡು ಭಾಗಗಳಲ್ಲಿ ಪ್ರಕಟಿಸಿದರು. ಆ ದಶಕದಲ್ಲಿಯೇ ಮಡಕಶಿರಾದ ಬಾಲಕೃಷ್ಣರಾಯರು ೧೮೯೪ರಲ್ಲಿ 'ಪುರಂದರ ದಾಸರು ಮೊದಲಾದ ಅಪರೋಕ್ಷ ಜ್ಞಾನಿಗಳ ಪದಗಳು' ಎಂಬ ಪುಸ್ತಕವನ್ನು ತೆಲುಗು ಲಿಪಿಯಲ್ಲಿ ಮುದ್ರಿಸಿದ್ದು ಗಮನಾರ್ಹವಾಗಿದೆ. ಮತ್ತೆ ೧೯೦೮ರಲ್ಲಿ ಅವರೇ ಇನ್ನೊಂದು ಸಂಕಲನವನ್ನೂ ಪ್ರಕಟಿಸಿದ್ದಾರೆ.

ಹೀಗೆ ೧೮೫೦ರಷ್ಟು ಹಿಂದೆಯೇ ಪ್ರಾರಂಭವಾದ ದಾಸರ ಪದಗಳ ಸಂಗ್ರಹ ಹಾಗೂ ಪ್ರಕಟಣೆಯ ಕಾರ್ಯಕ್ಕೆ ಒಂದು ವ್ಯವಸ್ಥಿತ ರೂಪವನ್ನು ಕೊಟ್ಟು, ನಾಡಿನಾದ್ಯಂತ ಹರಿದು ಹಂಚಿಹೋದ, ಜನರ ಬಾಯಲ್ಲಿ ಉಳಿದುಕೊಂಡು ಬಂದ ವಿವಿಧ ದಾಸರ ಪದಗಳನ್ನು ಸಂಗ್ರಹಿಸಿ ಪ್ರಕಟಿಸಲು ಪ್ರಾರಂಭಿಸಿದವರು ಉಡುಪಿಯ ಪಾವಂಜೆ ಗುರುರಾಯರು. ಅವರು ೧೯೧೪ರಲ್ಲಿ ಪ್ರಕಟಿಸಿದ ಮೊದಲ ಸಂಕಲನದ ಹೆಸರು 'ಉದಯರಾಗವು' ಎಂಬುದು. ಅನಂತರದ ದಿನಗಳಲ್ಲಿ ಪುರಂದರದಾಸರ ಕೀರ್ತನೆಗಳನ್ನು ಐದು ಸಂಪುಟಗಳಲ್ಲಿ ಮತ್ತು ಉಳಿದ ದಾಸರ ಕೃತಿಗಳನ್ನು ಬಿಡಿಬಿಡಿಯಾಗಿ ಪ್ರಕಟಿಸಿದರು. ಹೀಗೆ ನಾಡಿನ ದಕ್ಷಿಣದ ಅಂಚಿನ ಉಡುಪಿಯಲ್ಲಿ ಪ್ರಾರಂಭವಾದ ಕೆಲಸವನ್ನು ಉತ್ತರದ ಅಂಚಿನ ಲಿಂಗಸುಗೂರಿನಲ್ಲಿ ಗೊರಾಬಾಳ ಹಣಮಂತರಾಯರು 'ವರದೇಂದ್ರ ಸಾಹಿತ್ಯ ಮಾಲೆ'ಯನ್ನು ಪ್ರಾರಂಭಿಸಿ ತಮ್ಮ ಇಡೀ ಜೀವನವನ್ನೇ ಹರಿದಾಸ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆಗೆ ಮೀಸಲಾಗಿರಿಸಿದರು. ಇತ್ತ ಮೈಸೂರು ಭಾಗದಲ್ಲಿ ಸುಪ್ರಸಿದ್ಧ ದಾಸರ ಹಾಡುಗಳನ್ನು ತಕ್ಕಮಟ್ಟಿಗೆ ಶಾಸ್ತ್ರಶುದ್ಧವಾಗಿ ಪ್ರಕಟಿಸಲು

ಸುಬೋಧ ರಾಮರಾಯರು ಮುಂದಾದರು. ಇದೇ ಬಗೆಯ ಕೆಲಸವನ್ನು ಧಾರವಾಡ ಪ್ರದೇಶದಲ್ಲಿ ನಾರಾಯಣರಾವ ಕಲಮದಾನಿ, ಹುಚ್ಚರಾವ ಬೆಂಗೇರಿ ಹಾಗೂ ಬೆಟಗೇರಿ ಕೃಷ್ಣಶರ್ಮರು ಮಾಡಿದರು. ಇದರೊಂದಿಗೆ, ಭಜನೆಯ ದೃಷ್ಟಿಯಿಂದ ಅನುಕೂಲವಾಗುವಂತೆ ನಾಡಿನ ವಿವಿಧ ಭಾಗಗಳಲ್ಲಿ ದಾಸಸಾಹಿತ್ಯಾಸಕ್ತರು ತಮತಮಗೆ ಬೇಕಾದ ಪದಗಳ ಸಂಗ್ರಹವನ್ನು ಪ್ರಕಟಿಸತೊಡಗಿದರು. ಇದರಿಂದಾಗಿ ನಾಡಿನ ಬಹುತೇಕ ಭಾಗಗಳಲ್ಲಿ ಬೇರೆ ಬೇರೆ ದಾಸರು ಇದ್ದುದು ಮತ್ತು ಅವರು ಹಾಡುಗಳನ್ನು ಬರೆದಿದ್ದಾರೆ ಎಂಬುದು ಗಮನಕ್ಕೆ ಬಂದಿತು. ಅದು 'ದಾಸ-ಪೀಳಿಗೆ'ಯನ್ನು ಗುರುತಿಸಲು ಸಹಾಯವಾಯಿತು.

ಶ್ರೀಪಾದರಾಜರಿಂದ ಪ್ರಾರಂಭವಾದ ಕೀರ್ತನೆಗಳ ರಚನೆಯ ಸಂಪ್ರದಾಯದಲ್ಲಿ ಈ ಐದುನೂರು ವರ್ಷಗಳಲ್ಲಿ ಸುಮಾರು ಮುನ್ನೂರು ಜನ ಹರಿದಾಸರು ಹುಟ್ಟಿ ಮೂವತ್ತು ಸಾವಿರಕ್ಕೂ ಮಿಕ್ಕ ಕೀರ್ತನೆಗಳನ್ನು ರಚಿಸಿದ್ದಾರೆಂದರೆ ಅವುಗಳ ಮಹತ್ವ ಗೊತ್ತಾಗದೇ ಇರದು.

ಇಡಿಯಾಗಿ-ಬಿಡಿಬಿಡಿಯಾಗಿ ವ್ಯಕ್ತಿಗಳಿಂದ, ಸಂಘ ಸಂಸ್ಥೆಗಳಿಂದ ದಾಸರ ಪದಗಳು ಪ್ರಕಟವಾಗುತ್ತ ಬರುತ್ತಿರುವಾಗಲೇ ಪುರಂದರ ಕನಕದಾಸರ ಚತುಃಶತಮಾನೋತ್ಸವ ಸಂದರ್ಭಗಳಲ್ಲಿ ಅವರ ಸಮಗ್ರ ಕೃತಿಗಳು ಸರ್ಕಾರದಿಂದ ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಪ್ರಕಟವಾದವು. ಆದರೆ ಸಮಗ್ರ ದಾಸಸಾಹಿತ್ಯದ ಪ್ರಕಟಣೆ ಈವರೆಗೆ ಆಗಲೇ ಇಲ್ಲವೆಂದು ಹೇಳಬಹುದು. ಇಂಥದೊಂದು ಪ್ರಯತ್ನವನ್ನು ಮೂರು ದಶಕಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯವು ಕೈಗೊಂಡಿತು. ವೈಜ್ಞಾನಿಕ ರೀತಿಯಲ್ಲಿ ಶಾಸ್ತ್ರಶುದ್ಧವಾಗಿ ದಾಸಸಾಹಿತ್ಯವನ್ನು ಪ್ರಕಟಿಸುವುದರ ಅಡಿಗಲ್ಲನ್ನು ಹಾಕಿದ ಶ್ರೇಯಸ್ಸು ಆ ಮಾಲೆಯ ಸಂಪಾದಕರಾಗಿದ್ದ ಡಾ. ಜಿ. ವರದರಾಜರಾವ್ ಅವರಿಗೆ ಸಲ್ಲಬೇಕು. ಇದುವರೆಗೆ ಕೆಲವು ಸಂಪುಟಗಳು ಮಾತ್ರ ಬಂದಿವೆ. ಆದರೆ ಹಸ್ತಪ್ರತಿಗಳಲ್ಲಿ ವಿಪುಲ ದಾಸಸಾಹಿತ್ಯವನ್ನು ಸಂಗ್ರಹಿಸಲಾಗಿದೆ. ಅದೇ ರೀತಿಯಲ್ಲಿ ಲಿಂಗಸುಗೂರಿನಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹಾಗೂ ತಿರುಪತಿಯ ದಾಸಸಾಹಿತ್ಯ ಪ್ರೊಜೆಕ್ಟನಲ್ಲಿ ಕೂಡ ವಿಪುಲ ಹಸ್ತಪ್ರತಿಗಳ ಸಂಗ್ರಹವಿದೆ. ಇವರೆಲ್ಲರ ಸಹಕಾರದಿಂದ ಈಗ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಪ್ರಕಟಿಸುವ ಸಾಹಸದ ಕಾರ್ಯವನ್ನು ಮಾಡುತ್ತಿದೆ.

ಸಂಪುಟ ಯೋಜನೆ

ದಾಸಸಾಹಿತ್ಯದ ಪರಿಷ್ಕರಣ ಕಾರ್ಯ ತುಂಬ ಜಟಿಲವಾದುದೆಂಬುದು ಸಂಪಾದಕ ಮಂಡಳಿಯ ಪ್ರಥಮ ಸಭೆಯಲ್ಲಿಯೇ ಅನುಭವಕ್ಕೆ ಬಂದಿತು. ಕಳೆದ ಐದು ಶತಮಾನಗಳಿಂದ ನಿರಂತರ ಹರಿದುಬಂದ ದಾಸಸಾಹಿತ್ಯ ರಚನೆಯಲ್ಲಿಯ ದಾಸರ ಹಾಗೂ ದಾಸರ ಪದಗಳ ಸಂಖ್ಯಾಬಾಹುಳ್ಯವನ್ನು ಗಮನಿಸಿ ಅದಕ್ಕೊಂದು ಕಾಲಮಿತಿಯನ್ನು ಹಾಕಿಕೊಳ್ಳುವುದು ಅನಿವಾರ್ಯ ವಾಯಿತು. ಹಾಗೆ ದಾಸಸಾಹಿತ್ಯದ ಪ್ರಾರಂಭ ಕಾಲದಿಂದ ೧೯ನೆಯ ಶತಮಾನದ ಅಂತ್ಯದವರೆಗೆ ರಚಿತಗೊಂಡ ವೈದಿಕ ಪರಂಪರೆಯ ದಾಸರ ಪದಗಳನ್ನು ಸಂಗ್ರಹಿಸುವುದೆಂದೂ, ಅದರಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಪರಂಪರೆಯ ಲಭ್ಯವಿದ್ದ ಹಾಡುಗಳನ್ನು ಸೇರಿಸಿಕೊಂಡು ೩೫ ಸಂಪುಟಗಳಲ್ಲಿ ಪ್ರಕಟಿಸುವುದೆಂದೂ ನಿರ್ಧರಿಸಲಾಯಿತು.

ಈ ೩೫ ಸಂಪುಟಗಳನ್ನು* ಸಂಪಾದಕ ಮಂಡಳಿಯ ಸದಸ್ಯರಲ್ಲದೆ ನಾಡಿನ ಹಲವಾರು ವಿದ್ವಾಂಸರನ್ನು ಸಂಪಾದಿಸಿಕೊಡಲು ಕೇಳಿಕೊಳ್ಳಲಾಯಿತು.

ಇಂಥದೊಂದು ಬೃಹತ್ ಕಾರ್ಯವನ್ನು ಕೈಗೊಂಡಾಗ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸುವುದು ಅನಿವಾರ್ಯವಾಗುತ್ತದೆ. ಅನ್ಯ ಮತ–ಪಂಥಗಳ ಟೀಕೆಗಳು ಬಂದಿದ್ದರೆ ಅಂಥ ಹಾಡುಗಳನ್ನು ಕೈಬಿಡಬೇಕು. ಒಂದೇ ಹಾಡು ಇಬ್ಬರು ದಾಸರ ಅಂಕಿತದಲ್ಲಿ ಪ್ರಚಲಿತದಲ್ಲಿದ್ದರೆ, ಎರಡೂ ಕಡೆಗೆ ಅವುಗಳನ್ನು ಕೊಟ್ಟು, ಕೆಳಗೆ 'ಈ ಕೀರ್ತನೆ . . . . ದಾಸರ ಅಂಕಿತದಲ್ಲೂ ಇದೆ' ಎಂದೂ ಸೂಚಿಸಬೇಕು. ದ್ವೈತ ಸಂಪ್ರದಾಯದ ಕೀರ್ತನೆಗಳನ್ನು ಪ್ರಕಟಿಸುವಾಗ ದೇವ–ಗುರು ತಾರತಮ್ಯವನ್ನು ಪಾಲಿಸಬೇಕು ; ಉಳಿದೆಡೆ ಗಣೇಶ ಪ್ರಾರ್ಥನೆ, ಭಗವಂತನ ನಾಮಸಂಕೀರ್ತನೆ, ಆತ್ಮನಿವೇದನೆ, ಲೋಕನೀತಿ, ತಾತ್ವಿಕ, ಕಥನಾತ್ಮಕ, ಸಂಪ್ರದಾಯ ಹಾಗೂ ವಿಶೇಷ ಹಾಡುಗಳೆಂದು ಮುಂತಾಗಿ ವಿಂಗಡಿಸಿಕೊಡಬೇಕು– ಎಂಬುದಾಗಿ ನಿರ್ಧರಿಸಲಾಯಿತು.

---

*ಇವುಗಳಲ್ಲಿ ಕೆಲವಕ್ಕೆ ಎರಡು ಮೂರು ಭಾಗಗಳಿವೆ.

ಪ್ರತಿಯೊಂದು ಸಂಪುಟದ ಪ್ರಾರಂಭದಲ್ಲಿ ಹಾಡುಗಳ ಪರಿವಿಡಿಯನ್ನು ಕೊಟ್ಟು ಪ್ರಸ್ತಾವನೆಯಲ್ಲಿ ಆಯಾ ದಾಸರ ಸಂಕ್ಷಿಪ್ತ ಜೀವನ ಚರಿತ್ರೆ, ಕೃತಿಗಳ ಸಮೀಕ್ಷೆ, ಶೈಲಿ ಇತ್ಯಾದಿಗಳನ್ನು ವಿವರಿಸಿ, ಗ್ರಂಥಸಂಪಾದನೆಯ ಆಕರಗಳನ್ನೂ ಕೊಡಲು ಪ್ರಯತ್ನಿಸಲಾಗಿದೆ. ಕೊನೆಯಲ್ಲಿ ಬರುವ ಅನುಬಂಧಗಳಲ್ಲಿ ಕಠಿಣ ಶಬ್ದಗಳ ಅರ್ಥ, ಟಿಪ್ಪಣಿ ಮತ್ತು ವಿಶಿಷ್ಟ ಅಂಕಿತನಾಮಗಳ ಸೂಚಿ ಹಾಗೂ ಹಾಡುಗಳ ಅಕಾರಾದಿಯನ್ನು ಕೊಡಲಾಗಿದೆ.

ಈ ಸಂಪುಟಗಳು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿದೆ. ಅನ್ಯ ಪಾಠಗಳನ್ನು ಅಡಿಯಲ್ಲಿ ನಮೂದಿಸಿಲ್ಲ. ಆದರೂ ಇವು ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ರೀತಿಯಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

ಕೃತಜ್ಞತೆಗಳು

ಕಳೆದ ನೂರೈವತ್ತು ವರ್ಷಗಳಿಂದ ಪಾಶ್ಚಾತ್ಯ ಮಿಶನರಿಗಳಿಂದ ಹಿಡಿದು ಈ ಮೊದಲು ಉಲ್ಲೇಖಿಸಿದ ನಾಡಿನ ಅನೇಕ ವಿದ್ವಜ್ಜನರು, ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ದಾಸಸಾಹಿತ್ಯ ಕುರಿತು ನಿರಂತರ ದುಡಿದು ವಿಪುಲ ಸಾಮಗ್ರಿಯನ್ನು ಪ್ರಕಟಿಸಿದ್ದಾರೆ. ಈ ಎಲ್ಲ ವ್ಯಕ್ತಿಗಳಿಗೂ, ಸಂಘ ಸಂಸ್ಥೆಗಳಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆ ಅಸ್ತಿತ್ವಕ್ಕೆ ಬಂದುದೂ ಒಂದು ವಿಶಿಷ್ಟ ಸಂದರ್ಭದಲ್ಲಿ ಎಂಬುದನ್ನು ಇಲ್ಲಿ ನಮೂದಿಸಬೇಕು. ಕರ್ನಾಟಕ ಸರ್ಕಾರವು ನಾಡಿನ ಖ್ಯಾತ ಸಂಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಸಮಗ್ರ ವಚನಸಾಹಿತ್ಯವನ್ನು ಪ್ರಕಟಿಸಿತಷ್ಟೇ. ಅವರೇ 'ದಾಸಸಾಹಿತ್ಯ' ಯೋಜನೆಯನ್ನು ರೂಪಿಸಿ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥರ ಮೂಲಕ ಈ ಯೋಜನೆಯತ್ತ ಸರ್ಕಾರದ ಗಮನ ಸೆಳೆದರು. ಇದನ್ನು ಅರಿತ ಅಂದಿನ ಮುಖ್ಯಮಂತ್ರಿಗಳೂ, ಅನಂತರ ಭಾರತದ ಪ್ರಧಾನಮಂತ್ರಿಗಳೂ ಆಗಿದ್ದ ಸನ್ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡರು ಮುಧೋಳದಲ್ಲಿ (೧೯೯೫) ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, "ಸರ್ಕಾರವು ಸಮಗ್ರ

ದಾಸಸಾಹಿತ್ಯವನ್ನು ಪ್ರಕಟಿಸಲು ಒಪ್ಪಿಕೊಂಡಿದೆ" ಎಂದು ಘೋಷಿಸಿದರು. ಅದರಂತೆ, ಸರ್ಕಾರವು ಒಂಬತ್ತು ಜನರ ಸಂಪಾದಕ ಮಂಡಳಿಯನ್ನು ರಚಿಸಿತು. ಅದರಲ್ಲಿ ಡಾ. ಶ್ರೀನಿವಾಸ ಹಾವನೂರ, ಡಾ. ಟಿ.ಎನ್. ನಾಗರತ್ನ ಮತ್ತು ಪ್ರೊ. ವಸಂತ ಕುಷ್ಟಗಿ ಅವರನ್ನು ಸಮಿತಿಯ ಕಾರ್ಯನಿರ್ವಾಹಕ ಸಂಪಾದಕರೆಂದು ನಿಯಮಿಸಿತು. ಜೊತೆಗೆ ಈ ಮೊದಲು ಇಂಥ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ ಅನುಭವಿ ಡಾ. ಎಂ. ಎಂ. ಕಲಬುರ್ಗಿ, ದಾಸಸಾಹಿತ್ಯದಲ್ಲಿ ನುರಿತ ವಿದ್ವಾಂಸರುಗಳಾದ ಪ್ರೊ. ಎಂ. ರಾಜಗೋಪಾಲಾಚಾರ್ಯ, ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಡಾ. ಮಂದಾಕಿನಿ, ಪ್ರೊ. ಸುಧಾಕರ ಮತ್ತು ಡಾ. ಬಸವರಾಜ ಸಬರದ ಅವರನ್ನು ಸಂಪಾದಕ ಮಂಡಳಿಯ ಸದಸ್ಯರನ್ನಾಗಿ ನಿಯಮಿಸಿತು. ಅವರುಗಳ ನಿರಂತರ ಪರಿಶ್ರಮದ ಫಲವೇ ಈ ಸಮಗ್ರ ದಾಸಸಾಹಿತ್ಯದ ಪ್ರಕಟಣಾ ಕಾರ್ಯ. ಈ ಪ್ರಕಟಣಾ ಕಾರ್ಯದಲ್ಲಿ ಅವರುಗಳೊಂದಿಗೆ ೩೫ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಸರ್ವಶ್ರೀ ಡಾ. ಅರಳುಮಲ್ಲಿಗೆ ಪಾರ್ಥಸಾರಥಿ, ಡಾ. ಡಿ. ಆರ್. ಪಾಂಡುರಂಗ, ಡಾ. ಅನಂತಪದ್ಮನಾಭರಾವ್, ಪ್ರೊ. ಬಿ. ಆರ್. ಕುಲಕರ್ಣಿ, ಡಾ. ಕೆ. ಜಿ. ವೆಂಕಟೇಶ್, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಕೆ. ಗೋಕುಲನಾಥ, ಡಾ. ಕೆ. ಎಂ. ಕೃಷ್ಣರಾವ್, ಶ್ರೀ ಹಣಮಂತ ತಾಸಗಾಂವಕರ್, ಪ್ರೊ. ನಾ. ಗೀತಾಚಾರ್ಯ, ಡಾ. ಸ್ವಾಮಿರಾವ್ ಕುಲಕರ್ಣಿ, ಶ್ರೀ ಹನುಮನಗೌಡ, ಶ್ರೀ ಎ. ಎನ್. ಅನಂತಸ್ವಾಮಿರಾವ್, ಡಾ. ನಾರಾಯಣಾಚಾರ್ಯ ಧೂಳಖೇಡ, ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ಶ್ರೀ ಕೆ. ಎಸ್. ವೆಂಕಟೇಶ್ ಮತ್ತು ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ ಅವರುಗಳು ಹಾಗೂ ಶ್ರೀಮತಿಯರಾದ ನಳಿನಿ ವೆಂಕಟೇಶ್, ಮೀನಾರಾವ್, ಲೀಲಾವತಿ ಎಸ್. ರಾವ್, ಡಾ. ಜಯಲಕ್ಷ್ಮಿ ಮಂಗಳಮೂರ್ತಿ, ಡಾ. ಅಕ್ಕಮಹಾದೇವಿ, ಶೀಲಾ ದಾಸ್, ಡಾ. ರಮಾ ಕಲ್ಲೂರಕರ, ಡಾ. ಸೀತಾ ಗುಡೂರ ಕುಲಕರ್ಣಿ, ಹೆಚ್. ಎಸ್. ಪದ್ಮಾ ಮೂರ್ತಿ, ಮತ್ತು ಡಾ. ರುಕ್ಮಿಣಿ ಗಿರಿಮಾಜಿ ಅವರುಗಳು ತುಂಬ ಶ್ರಮವಹಿಸಿ ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಅವರುಗಳಿಗೆ ಸಂಪಾದಕ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಈ ಮಧ್ಯೆ ಸಂಪಾದಕ ಸಮಿತಿಯ ಸದಸ್ಯರಲ್ಲೊಬ್ಬರಾದ ಪ್ರೊ. ಎಂ. ರಾಜಗೋಪಾಲಾಚಾರ್ಯರು ಮತ್ತು ಡಾ. ಮಂದಾಕಿನಿ ಹಾಗೂ ಸಂಪುಟ ಸಂಪಾದಕರಲ್ಲಿ ಒಬ್ಬರಾದ ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ, ಡಾ. ಕೆ.ಎಂ. ಕೃಷ್ಣರಾವ್, ಶ್ರೀಮತಿ ಪದ್ಮಾ ಮೂರ್ತಿ ಹಾಗೂ ಶ್ರೀ ಹನುಮನಗೌಡ ಮಾನ್ವಿ ಅವರು ನಮ್ಮನ್ನು ಅಗಲಿದ್ದು ದುಃಖದ ವಿಷಯವಾಗಿದೆ.

ಆಯಾ ಕಾಲದಲ್ಲಿ ಈ ಯೋಜನೆಗೆ ಸಹಕರಿಸಿದ ಹಾಗೂ ಈ ಯೋಜನೆಯ ಪರಿಕಲ್ಪನೆ ಯಶಸ್ವಿಯಾಗಿ ಕಾರ್ಯಾನುಷ್ಠಾನಕ್ಕೆ ಬರುವ ದಿಸೆಯಲ್ಲಿ ಸಹಕರಿಸಿದ ಈ ಹಿಂದಿನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ವಿಶೇಷವಾಗಿ ಇಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ರಾಣಿ ಸತೀಶ್ ಅವರಿಗೆ, ಇಲಾಖೆಯ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ಚಂದ್ರಹಾಸ ಗುಪ್ತ ಮತ್ತು ಈಗಿನ ಕಾರ್ಯದರ್ಶಿಗಳಾದ ಶ್ರೀ ಸಿ. ಎಸ್. ಕೇದಾರ್ ಅವರಿಗೆ ನಮ್ಮ ನಮನಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ಈ ಯೋಜನೆಗೆ ನೆರವಾದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರುಗಳು ಹಾಗೂ ಈಗಿನ ನಿರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ ಮತ್ತು ಡಾ. ಮಂಜುಳಾ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ನೆರವಾದ ಎಂ. ಎಸ್. ಐ. ಎಲ್. ಸಂಸ್ಥೆಯ ಅಧಿಕಾರಿ ಹಾಗೂ ಸಿಬ್ಬಂದಿವರ್ಗಕ್ಕೆ, ವಿಶೇಷವಾಗಿ ಶ್ರೀ ಎಂ. ರವಿಶಂಕರ್, ವಿಶೇಷಾಧಿಕಾರಿ, ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳು ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ಗೊಂದಲಕ್ಕೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಅಂಕಿತ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ಕೀರ್ತನೆಗಳನ್ನು ಶುದ್ಧೀಕರಿಸುವುದು ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ದಾಸಸಾಹಿತ್ಯದ ಮೇಲಿನ ಗೌರವ ಪ್ರೀತಿಗಳು ನಮ್ಮಿಂದ ಈ ಕೆಲಸ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತೇವೆ. ಈ ಮೂವತ್ತೈದು ಸಂಪುಟಗಳನ್ನು ಸಹೃದಯ ಲೋಕಕ್ಕೆ ಅರ್ಪಿಸುತ್ತಿದ್ದೇವೆ. ಸಮಗ್ರ ದಾಸಸಾಹಿತ್ಯವು ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ-ಮನಗಳಲ್ಲಿ ಬೆಳಗಲೆಂದು ಹಾರೈಸುತ್ತೇವೆ.

ಸಂಪಾದಕ ಮಂಡಳಿ

ಪರಿವಿಡಿ

ಪ್ರಸ್ತಾವನೆ

ಶ್ರೀ ಶಾಮಸುಂದರವಿಠಲರ ಹಾಡುಗಳು

ಪ್ರವೇಶ : 'ಶಾಮಸುಂದರವಿಠಲ' ಅಂಕಿತದಿಂದ ನೂರಾರು ಹಾಡುಗಳು, ಸುಳಾದಿಗಳು ಹಾಗೂ ಬಯಲಾಟಗಳನ್ನು ರಚಿಸಿದ ಮಾನವಿಯ ಗುಂಡಾಚಾರ್ಯರು ೧೦೮ ವರ್ಷಗಳ ಹಿಂದೆ ಬದುಕಿ, ಬಾಳಿದರು. ಲಿಂಗಸೂಗೂರು, ಚೀಕಲಪರ್ವಿ, ಅಸ್ಕಿಹಾಳ, ಮಾನವಿ, ಐಕೂರುಗಳಲ್ಲಿ ಭಾಗವತಧರ್ಮ ಪ್ರಕಾಶಮಾನವಾಗಿದ್ದ ಕಾಲ. ಅದು ಅನೇಕ ದಾಸವರೇಣ್ಯರಿಗೆ ಭಾಗವತಧರ್ಮವನ್ನು ಮತ್ತು ಭಕ್ತಿಜ್ಞಾನವನ್ನು ಬೋಧಿಸಲು ಪ್ರೇರಣೆ ನೀಡಿತು. ಕೊಪ್ಪರದ ಶ್ರೀ ನರಸಿಂಹದೇವರ ಮಹಿಮೆಯೂ, ಮಂತ್ರಾಲಯದ ಶ್ರೀರಾಘವೇಂದ್ರಸ್ವಾಮಿಗಳ ಅನುಗ್ರಹವೂ, ಚೀಕಲಪರ್ವಿಯ ಶ್ರೀವಿಜಯದಾಸರ ಪ್ರಭಾವವೂ ಹರಿದಾಸ ಸಾಹಿತ್ಯರಚನೆಗೆ ದಿವ್ಯಶಕ್ತಿಯನ್ನು ತಂದು ಕೊಟ್ಟಿತು. ಈ ಪುಣ್ಯಭೂಮಿಯಲ್ಲಿ ತೊಳಗಿಬೆಳಗಿದ ಹರಿದಾಸರನೇಕರ ಪ್ರಭಾವವು ಗುಂಡಾಚಾರ್ಯರ ಮೇಲೆ ಗಾಢವಾಗಿ ಪರಿಣಾಮ ಬೀರಿತು. ಹರಿದಾಸರ ಹಾಡುಗಳ ಪವಿತ್ರ ಜಲದಲ್ಲಿ ಮಿಂದು ಅವರು ಪುನೀತರಾದರು. ಇದರಿಂದ ಅವರ ಭಗವದ್ಭಕ್ತಿ ಜಾಗೃತಗೊಂಡಿತು. ಅದರಲ್ಲಿ ಸ್ವರೂಪದರ್ಶನ ಪಡೆದರು. ಅವರಿಗೆ ದೈವಾನುಗ್ರಹವೂ ಲಭಿಸಿತು.

ಗುಂಡಾಚಾರ್ಯರು ದೈವಾಂಶರು. ಅವರಿಗೆ ಮಾನವಿಯ ಶ್ರೀಜಗನ್ನಾಥದಾಸರ ಪೂರ್ಣಾನುಗ್ರಹವುಂಟಾಗಿತ್ತು. ಅವರನ್ನು ಕುರಿತು ಗುಂಡಾಚಾರ್ಯರು ಹಲವಾರು ಹಾಡುಗಳನ್ನು ರಚಿಸಿ ಹಾಡಿದ್ದಾರೆ, ಸ್ತೋತ್ರಗೈದಿದ್ದಾರೆ. ಅವರ ಹಾಡುಗಳಲ್ಲಿ ಮಂತ್ರಾಲಯ ರಾಯರ ನಂತರ ಶ್ರೀಜಗನ್ನಾಥದಾಸರಿಗೇ ಹೆಚ್ಚು ಭಕ್ತಿ ಪ್ರದರ್ಶಿಸಿರುವುದು ತಿಳಿಯುತ್ತದೆ. ಇದರಿಂದ ಅವರು ಮಾನವಿಯ ದಾಸರ ಪೂರ್ಣ ಕೃಪಾಕಟಾಕ್ಷಕ್ಕೆ ಪಾತ್ರರಾಗಿರುವುದು ಸ್ಪಷ್ಟವಾಗುತ್ತದೆ. ಇದಲ್ಲದೆ 'ಶಾಮಸುಂದರವಿಠಲ'

ಅಂಕಿತದಿಂದ ಹಾಡುಗಳನ್ನು ರಚಿಸುವ ಕರುಣೆ ಅವರಿಗೆ ಪ್ರಾಪ್ತವಾಯಿತು. ಹರಿದಾಸರು ಹಾಕಿಕೊಟ್ಟ ಪರಂಪರೆಯಲ್ಲಿ ನಡೆದು ಅವರು ಅನೇಕ ದೇವರ ಸ್ತೋತ್ರಹಾಡುಗಳನ್ನು ರಚಿಸಿ ಹರಿದಾಸಶ್ರೇಷ್ಠರೆನಿಸಿದರು. ಗುಂಡಾಚಾರ್ಯರು ಹರಿದಾಸಚರಿತ್ರೆಯಲ್ಲಿ ಇಪ್ಪತ್ತನೆಯ ಶತಮಾನ ಕಂಡ ದಾಸವರೇಣ್ಯರು ಮತ್ತು ಮೂರನೆಯ ಘಟ್ಟದ ಪ್ರಮುಖ ದಾಸರಾಗಿ ಕೀರ್ತಿಗೆ ಭಾಜನರಾಗಿದ್ದಾರೆ.

ಕಾಲ ಮತ್ತು ಸ್ಥಳ : ರಾಯಚೂರು ಜಿಲ್ಲೆ ಮಾನವಿ ತಾಲ್ಲೂಕಿನ 'ಕುರುಡಿ' ಗ್ರಾಮದಲ್ಲಿ ಗುಂಡಾಚಾರ್ಯರು ೧೮೯೬ನೇ ಇಸ್ವಿಯಲ್ಲಿ ಜನಿಸಿದರು. ಕುರುಡಿ ಗ್ರಾಮವು ಹನ್ನೆರಡನೆಯ ಶತಮಾನದಲ್ಲಿ ಪ್ರಸಿದ್ಧವಾದ ಅಗ್ರಹಾರವಾಗಿತ್ತು. ಅದು ಬ್ರಾಹ್ಮಣರ ಅಧ್ಯಯನ- ಅಧ್ಯಾಪನಗಳಿಂದಲೂ ಮತ್ತು ಯಜ್ಞ-ಯಾಗಾದಿಗಳಿಂ-ದಲೂ ಕಂಗೊಳಿಸುತ್ತಿತ್ತೆಂದು ಅಲ್ಲಿಯ ಶಾಸನಗಳು ವರ್ಣಿಸುತ್ತವೆ. ಶಾಸನಗಳಲ್ಲಿ ಕುರುಡಿಯನ್ನು 'ರೂಡಿ' ಎಂದು ಉಲ್ಲೇಖಿಸಲಾಗಿದೆ. ಈ ಗ್ರಾಮದ ಶಾಮಾಚಾರ್ಯ ಮತ್ತು ಕೊಪ್ರಮ್ಮ ಎಂಬ ವಿಪ್ರದಂಪತಿಗಳು ಗುಂಡಾಚಾರ್ಯರ ತಂದೆತಾಯಿಯರು. ಮಾನವಿಯು ಅವರ ಚಿಕ್ಕಮ್ಮನ ಮನೆಯಲ್ಲಿ ಇವರ ಜನನವಾಯಿತು. ಗುಂಡಾಚಾರ್ಯರ ತಾಯಿಯ ತಂಗಿ ರಿಂದಮ್ಮನ ಪತಿ ಗುರುಭೀಮಾಚಾರ್ಯರು ಮಾನವಿಯ ಪುರೋಹಿತರು. ಇವರಿಗೆ ಒಬ್ಬಳೆ ಮಗಳು. ಆಕೆಯನ್ನು ಬಲ್ಲಟಗಿಯ ಪುರೋಹಿತಮನೆತನಕ್ಕೆ ಮದುವೆಮಾಡಿಕೊಟ್ಟಿತ್ತು. ಗುರುಭೀಮಾಚಾರ್ಯರಿಗೆ ಗಂಡುಸಂತಾನವಿಲ್ಲದ್ದರಿಂದ ಗುಂಡಾಚಾರ್ಯರು ಅವರಿಗೆ ಮಗನಾಗಿ ಬೆಳೆದರು. ಗುರುಭೀಮಾಚಾರ್ಯರಿಂದ ಸಂಸ್ಕೃತ ಮತ್ತು ವೈದಿಕವನ್ನು ಕಲಿತು ಅವರು ಮಾನವಿಯಲ್ಲಿ ಪೌರೋಹಿತ್ಯ ವೃತ್ತಿಯನ್ನು ಕೈಕೊಂಡರು. ಬಲ್ಲಟಗಿಯ ತಂಗಿಯ ಗಂಡ ತೀರಿಕೊಂಡಿದ್ದರಿಂದ ಗುಂಡಾಚಾರ್ಯರು ಕೆಲವು ವರ್ಷ ಬಲ್ಲಟಗಿಯಲ್ಲಿ ಕಳೆದರು. ಕುರುಡಿ-ಮಾನವಿ-ಬಲ್ಲಟಗಿಗಳಲ್ಲಿ ಅವರು ಪೌರೋಹಿತ್ಯ ವೃತ್ತಿಯಿಂದ ತಮ್ಮ ಜೀವನ ನಿರ್ವಹಿಸಿದರು.

ಗುಂಡಾಚಾರ್ಯರ ವಿದ್ಯಾಭ್ಯಾಸ ಮಾನವಿಯಲ್ಲಿ ನಡೆಯಿತು. ವೆಂಕಪ್ಪ ಮಾಸ್ತರರಲ್ಲಿ ಮೂರನೆಯ ಪುಸ್ತಕದವರೆಗೆ ಓದಿದ ಅವರಿಗೆ ಕನ್ನಡ ಮತ್ತು ಉರ್ದುವಿನಲ್ಲಿ ಉತ್ತಮ ಪರಿಣತಿ ಇದ್ದಿತು. ಜೊತೆಗೆ ಸಂಸ್ಕೃತಭಾಷೆಯ ಪರಿಜ್ಞಾನವೂ

ಬೇರೆ. ಈ ಪದವಿಗಳು ಆ ಕಾಲದಲ್ಲಿ ಶಾಲಾಮಾಸ್ತರರಾಗಲು ಸಾಕಾಗಿತ್ತು. ಗುಂಡಾಚಾರ್ಯರು ಮಾನವಿ ತಾಲ್ಲೂಕಿನ ಶಿರಿವಾರದಲ್ಲಿ ಶಾಲಾಶಿಕ್ಷಕರಾಗಿ ಒಂದು ವರ್ಷ ಕೆಲಸ ಮಾಡಿದರು. ಅಂತರಂಗದಲ್ಲಿಯ ಪರಮಾತ್ಮನ ಧ್ಯಾನ ಅವರನ್ನು ಸರಕಾರಿ ದಾಸ್ಯದಲ್ಲಿ ಮುಂದುವರಿಯಲು ಬಿಡಲಿಲ್ಲ. ಅಂದೇ ಅವರು ಶಿಕ್ಷಕವೃತ್ತಿಗೆ ತಿಲಾಂಜಲಿಯಿತ್ತು ಹೊರಬಂದರು. ಅಲ್ಲಿಂದ ಮಾನವಿಗೆ ಬಂದು ಉದರಪೋಷಣೆಗಾಗಿ ವೈದಿಕ ವೃತ್ತಿಗೆ ಶರಣಾದರು. ಗುಂಡಾಚಾರ್ಯರಿಗೆ ಇಬ್ಬರು ಹೆಂಡಂದಿರು–ಸೀತಕ್ಕ ಮತ್ತು ಹನುಮಕ್ಕ. ಇವರಿಬ್ಬರಿಂದ ಎರಡು ಗಂಡು ಮತ್ತು ಎರಡು ಹೆಣ್ಣುಮಕ್ಕಳು. ಬಲ್ಲಟಗಿಯ ತಂಗಿಗೆ ಮಕ್ಕಳಿಲ್ಲದ್ದರಿಂದ ಆಕೆ ಅಣ್ಣನಮಗ ವ್ಯಾಸಮುನಿಯನ್ನು ತನ್ನಲ್ಲಿಟ್ಟುಕೊಂಡು ಸಲಹಿದಳು.

ಕಾವ್ಯಪ್ರತಿಭೆ : ಗುಂಡಾಚಾರ್ಯರು ವರಕವಿಗಳು. ಕಾವ್ಯರಚನಾ ಪ್ರತಿಭೆಯು ಅವರಿಗೆ ಬಾಲ್ಯದಿಂದಲೇ ಅಂಕುರಿಸಿತ್ತು. ಮೂರನೆಯ ವರ್ಗದಲ್ಲಿ ಓದುತ್ತಿದ್ದಾಗ ವೆಂಕಪ್ಪ ಮಾಸ್ತರರ ಪ್ರೇರಣೆಯಿಂದ ಶಾಲೆಗೆ ಆಗಮಿಸಲಿದ್ದ ಮೇಲಧಿಕಾರಿಗಳ ಸ್ವಾಗತಕ್ಕೆ ಗೀತೆಯೊಂದನ್ನು ಕಟ್ಟಿಕೊಟ್ಟರು. ಅದು ಹೀಗಿದೆ: 'ರಾಜಾ ರವಿಸುತ ತೇಜಾ ನೈಜಾಂ। ರಾಜಾ ಜಯಸುಮಂಗಲಂ। ದಿನಜನ ಸಮೂಹ ದಿವಿಜಧೇನುಮಣಿ ಮಂದಾರ ಭೋಜಾ। ಜ್ಞಾನಪ್ರಿಯ ಪ್ರಭು ಸನ್ಮಾನಿ ಉಸ್ಮಾನಾಲಿ ಖಾನ್ ಮಂಗಲಂ'। ಎಂಬ ಈ ಸ್ವಾಗತ ಗೀತೆ ಉಚಿತ ಸಂಸ್ಕೃತ ಪದಪುಂಜಗಳಿಂದ ಆಕರ್ಷಿಸಿತು. ಎಲ್ಲರೂ ಅವರನ್ನು ಪ್ರಶಂಸಿಸಿದರು.

ಆಶುಕವಿಗಳಾದ ಗುಂಡಾಚಾರ್ಯರು ಕೇಳಿದವರಿಗೆಲ್ಲ ಕವಿತೆಗಳನ್ನು ರಚಿಸಿಕೊಡುತ್ತಿದ್ದರು. ಮೊದಮೊದಲು ಮದುವೆಗೆ ಬೇಕಾದ ಭೂಮ, ಉರುಟಣೆ, ಆರತಿ, ಬೀಗರ ಹಾಡು, ಮುಂತಾದ ಜಾನಪದ ಮಟ್ಟುಗಳ ಹಾಡುಗಳನ್ನು ಲೀಲಾಜಾಲವಾಗಿ ರಚಿಸುತ್ತಿದ್ದರು. ಹೊಸ ಹೊಸ ಹಾಡು, ಒಗಟುಗಳ ತಮ್ಮ ಬೇಡಿಕೆಗಳೊಂದಿಗೆ ಹೆಂಗೆಳೆಯರು ಅವರಿಗೆ ಮುಗಿಬೀಳುತ್ತಿದ್ದರು. ಅವರಿಗೆಲ್ಲ ಹಾಡುಗಳನ್ನು ರಚಿಸಿಕೊಟ್ಟ ಗುಂಡಾಚಾರ್ಯರು ಹೆಣ್ಣುಮಕ್ಕಳ ಮೆಚ್ಚುಗೆಗೆ ಪಾತ್ರರಾದರು. ಅವರ ಪ್ರತಿಭಾನ್ವಿತ ಕವಿತೆಗಳು ರಸಭರಿತವಾಗಿದ್ದವು. ಕಾವ್ಯರಸಿಕರಲ್ಲಿ ರಸಾನಂದವುಂಟುಮಾಡಿದವು. ಅವರು ಉತ್ತಮ ಆಶುಕವಿಗಳಾಗಿ ಪ್ರಸಿದ್ಧರಾದರು.

ಬಯಲಾಟಗಳು : ಬಯಲಾಟಗಳು ಜನರನ್ನು ಬೇಗ ಆಕರ್ಷಿಸಿ, ಒಂದೆಡೆ ಕೂಡಿಸುವ ಪ್ರಬಲ ದೃಶ್ಯಮಾಧ್ಯಮ. ಜಾನಪದಸಾಹಿತ್ಯದಲ್ಲಿ ಇದೊಂದು ಪ್ರಮುಖ ಪ್ರಕಾರ–ಸಂಭಾಷಣೆ, ಹಾಡು, ನೃತ್ಯ, ಪಾತ್ರ, ವೇಷಭೂಷಣ ಮತ್ತು ನಟನೆ ಇವುಗಳ ಸಂಕೀರ್ಣವಾದ ಬಯಲಾಟದ ಕಲೆ ಗ್ರಾಮೀಣರಲ್ಲಿ ಬಹು ಜನಪ್ರಿಯವಾಯಿತು. ಅಂತೆಯೇ ಹರಿದಾಸರು ಮಧ್ವತತ್ವ ಸಂದೇಶಗಳನ್ನು ಸಾಮಾನ್ಯ ಜನರಲ್ಲಿ ಮೂಡಿಸಲು ಬಯಲಾಟವನ್ನು ಸಮರ್ಥವಾಗಿ ಬಳಸಿಕೊಂಡರು. ಅಂಥ ಹರಿದಾಸರಲ್ಲಿ ಅಸ್ಕಿಹಾಳ ಗೋವಿಂದದಾಸರು ಮತ್ತು ಶಾಮಸುಂದರದಾಸರು ಪ್ರಸಿದ್ಧ.

ಗುಂಡಾಚಾರ್ಯರು ಬಯಲಾಟ ಆಡಿಸುವ ತಂಡವನ್ನು ಕಟ್ಟಿದರು. ಮಾನವಿಯಲ್ಲಿ ಇಂಥ ಬಯಲಾಟದ ತಂಡ ಸಿದ್ಧವಾಯಿತು. ದಿನ್ನಿ ಶೀನಪ್ಪ ತಂಡದ ಮುಂದಾಳು. ಮೊದಮೊದಲು ಹಳೆಯ ಬಯಲಾಟಗಳಿಗೆ ಹೊಸ ಹಾಡುಗಳನ್ನು ಬರೆದು ನೂತನವಾಗಿ ಹಾಡಿಸುತ್ತಿದ್ದರು. ಗುಂಡಾಚಾರ್ಯರು ತಮ್ಮ ತಂಡದೊಂದಿಗೆ ಮಾನವಿಯಲ್ಲಿ 'ಭೋಜಪ್ರಬಂಧ' ಬಯಲಾಟವನ್ನು ರಂಗದ ಮೇಲೆ ಪ್ರದರ್ಶಿಸಿದರು. ನಾಟಕ ಯಶಸ್ವಿಯಾಯಿತು. ಮುಂದೆ ಅವರು ಹೊಸ ಬಯಲಾಟಗಳನ್ನು ರಚಿಸಿ ರಂಗದ ಮೇಲೆ ಆಡಿಸಿದರು. ಪ್ರಾರಂಭದಲ್ಲಿ ಸ್ತ್ರೀಯರ ಪಾತ್ರಗಳನ್ನು ಪುರುಷರೇ ಅಭಿನಯಿಸುತ್ತಿದ್ದರು. ಗುಂಡಾಚಾರ್ಯರು ತಮ್ಮ ನಾಟಕಗಳಲ್ಲಿ ಸ್ತ್ರೀಯರ ಪಾತ್ರಗಳನ್ನು ಸ್ತ್ರೀಯರ ಕೈಯಿಂದಲೇ ಅಭಿನಯಿಸಿ ಬಯಲಾಟದಲ್ಲಿ ಹೊಸ ಪ್ರಯೋಗವನ್ನು ತಂದುಕೊಟ್ಟರು. ತಮ್ಮ ನಾಟಕಗಳಲ್ಲಿ ಸ್ತ್ರೀಪಾತ್ರಗಳನ್ನು ಬಾಳಮ್ಮನಿಂದ ಅಭಿನಯಿಸಿದರು. ಗುಂಡಾಚಾರ್ಯರ ಬಯಲಾಟಗಳ ಪ್ರದರ್ಶನಗಳು ಇರುವವರೆಗೂ ಬಾಳಮ್ಮ ಬಯಲಾಟದ ಒಂದು ಅಂಗವಾಗಿ ಬಾಳಿದಳು. ಗುಂಡಾಚಾರ್ಯರಿಂದ ಮೂರು ಬಯಲಾಟಗಳು ರಚನೆಯಾದವು. ೧.ಶ್ರೀರಾಮಪಾದುಕಾ ಪಟ್ಟಾಭಿಷೇಕ, ೨. ಏಕಾದಶಿ ವ್ರತಮಹಾತ್ಮೆ(ಋಕ್ಮಾಂಗದ ಚರಿತ್ರೆ) ಮತ್ತು ೩.ಲಂಕಾದಹನ. ಇವುಗಳ ಕಥಾವಸ್ತು ರಾಮಾಯಣ ಮತ್ತು ಭಾಗವತ ಪುರಾಣಗಳಿಂದ ಆಯ್ದುಕೊಳ್ಳಲಾಗಿದೆ. ಹಳೆಯ ಬಯಲಾಟಗಳಿಗೆ ರಮ್ಯತೆಯನ್ನು ತಂದುಕೊಡಲು ಅವರು ಹೊಸ ಹಾಡುಗಳನ್ನು ಕಟ್ಟುತ್ತಿದ್ದರು. ಅವುಗಳಲ್ಲಿ ಶ್ರೀನಿವಾಸಕಲ್ಯಾಣ, ಸುಭದ್ರಾಪರಿಣಯ ಮತ್ತು ಭೋಜಪ್ರಬಂಧಗಳು ಮುಖ್ಯವಾದುವು.

ಲೌಕಿಕ–ಪಾರಮಾರ್ಥಿಕ : ಗುಂಡಾಚಾರ್ಯರು ಲೌಕಿಕ ಮತ್ತು ಪಾರಮಾರ್ಥಿಕ ಎರಡನ್ನೂ ಸಾಧಿಸಿ ತೋರಿಸಿದರು. ಅವರ ದ್ವಂದ್ವ ವರ್ತನೆಗಳು ನಿಂದನೆಗೆ ಕಾರಣವಾದವು. ಅವರು ಬಯಲಾಟ ಆಡಿಸುವುದು, ತಂಬಾಕುಯುಕ್ತ ತಾಂಬೂಲ ಸೇವಿಸುವುದು, ಇಸ್ಪೀಟ್ ಆಡುವುದು, ಬಾಳಮ್ಮನಿಂದ ಬಯಲಾಟಕ್ಕೆ ರಂಗುತಂದುದು, ವ್ರತನಿಯಮಗಳನ್ನು ಪರಿಪಾಲಿಸದೆ ಇರುವುದು – ಇವು ಕೆಲವರಿಗೆ ರಂಜನೆಯೆನಿಸಿದವು. ಮತ್ತೆ ಕೆಲವರಿಗೆ ನಿಂದನೆಯೆನಿಸಿದವು. ಅಂತರಂಗದಲ್ಲಿ ಅನವರತ ಭಗವಂತನ ಚಿಂತಾಸಕ್ತರಾದ ಗುಂಡಾಚಾರ್ಯರು ಲೌಕಿಕ ನಿಂದೆಗಳಿಗೆ ಕಿವಿಗೊಡಲಿಲ್ಲ. ತಮ್ಮನ್ನು ಸಂಪೂರ್ಣ ಭಗವಂತನಿಗೆ ಅರ್ಪಿಸಿಕೊಂಡು ಭಗವದ್ಧ್ಯಾನದಲ್ಲಿ ನಿರತರಾಗಿದ್ದ ಅವರ ಅಂತರಾತ್ಮದಲ್ಲಿ ದೈವಶಕ್ತಿ ಸ್ಫುಟಗೊಂಡಿತ್ತು.

ಪುಣ್ಯಜೀವಿಗಳು ಪ್ರಾರಬ್ಧಕರ್ಮಗಳನ್ನು ಸವೆಸಲೆಂದು ಭೂಮಿಯ ಮೇಲೆ ಜನ್ಮತಾಳುತ್ತಾರೆ. ಪ್ರಾರಬ್ಧ ಕರ್ಮಾನುಸಾರ ಅವರು ನಿಂದ್ಯಾಕರ್ಮಗಳನ್ನು ಮಾಡುತ್ತಾರೆ. ದೇಹಕ್ಕೆ ಅಂಟಿಕೊಂಡ ತಮ್ಮ ಕರ್ಮಗಳನ್ನು ಪರಮಾತ್ಮನಿಗೆ ಸಲ್ಲಿಸಿ, ಅಂತರಂಗವನ್ನು ಶುಚಿಯಾಗಿಟ್ಟುಕೊಳ್ಳುತ್ತಾರೆ. ಇದೇ ತತ್ವವನ್ನು ಶ್ರೀ ಜಗನ್ನಾಥದಾಸರ ಈ ಕೀರ್ತನೆ ಸಾರುತ್ತದೆ:

ಯಾವದಿಂದ್ರಿಯದ ವ್ಯಾಪಾರಗಳ ನಡೆಸುವರೆ।
ಆವಕಾಲಕೂ ಜೀವತತಿಗೆ ಸ್ವಾಧೀನವಿಲ್ಲ।
ಪಾವನಮೆನಿಪ್ಪ ಹರಿಯಿಟ್ಟ ತೆರದಂತಿರುವುದು
ಜೀವಧರ್ಮಕರ್ಮ॥

ಇಂಥ ಜೀವಿಗಳೇ ಪುಣ್ಯಜೀವಿಗಳು. ಲೌಕಿಕದಲ್ಲಿಯೂ ಪಾರಮಾರ್ಥಿಕವನ್ನು ಸಾಧಿಸಿದ ಸಾಧಕರು.

ಗುಂಡಾಚಾರ್ಯರು ಮಾನವಿನಿಲಯನಾದ ಶ್ರೀಜಗನ್ನಾಥದಾಸರಿಗೆ ಸಂಪೂರ್ಣ ಶರಣಾಗತರಾಗಿದ್ದರು. ಅವರ ಪೂರ್ಣ ಕೃಪೆಗೆ ಪಾತ್ರರಾಗಿದ್ದರು. ಶ್ರೀಜಗನ್ನಾಥದಾಸರನ್ನು ಬಹುಸಂಖ್ಯೆಯ ಕೀರ್ತನೆಗಳಲ್ಲಿ ಸ್ತವಿಸಿ, ಸ್ತುತಿಸಿ, ಕೀರ್ತಿಸಿ, ಹಾಡಿಪಾಡಿದ್ದಾರೆ.

ಮಾನಿತ ನಿನಗನು। ಮಾನವ್ಯಾತಕೆ ತವ
ಸೂನು ನಾನಲ್ಲವೆ। ಮಾನವಿನಿಲಯ॥

ಎಂದು ಮುಂತಾಗಿ ತಮ್ಮನ್ನು ದಾಸರ ಮಗನೆಂದು ವಿಶ್ವಾಸವನ್ನು ವ್ಯಕ್ತಪಡಿಸುತ್ತಾರೆ. 'ಕಂದನನುದಾಸಿಸುವದು ತಂದೆಗೆ ತರವೆ' ಎಂದು ಅವರು ದಾಸರ ಮಗನೆಂಬ ವಚನವನ್ನು ಮತ್ತೆ ದೃಢಪಡಿಸುತ್ತಾರೆ.

ಅಂಕಿತಪ್ರದಾನ : ಗುಂಡಾಚಾರ್ಯರ 'ಶಾಮಸುಂದರವಿಠಲ' ಅಂಕಿತವು ಪ್ರದಾನವಾಗಿರುವ ಬಗ್ಗೆ ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಕೆಲವರು ಇದು ಸ್ವಪ್ನಾಂಕಿತವೆಂದು ಅಭಿಪ್ರಾಯಪಡುತ್ತಾರೆ. ಶ್ರೀಜಗನ್ನಾಥದಾಸರಿಂದ ಕುರುಹು ದೊರೆತು ಪಡೆದ ಅಂಕಿತವಿರಬೇಕೆಂದು ತರ್ಕಿಸುತ್ತಾರೆ. ಅಸ್ಕಿಹಾಳ ಗೋವಿಂದದಾಸರ ದರ್ಶನ ಪ್ರಸಂಗದಲ್ಲಿ ಜರುಗಿದ ಪವಾಡಸದೃಶ ಘಟನೆಯಿಂದ ಅಂಕಿತಕ್ಕೆ ಸುಳುಹು ಸಿಕ್ಕಿದೆಯೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಅಸ್ಕಿಹಾಳ ಗೋವಿಂದ-ದಾಸರನ್ನು ಗುಂಡಾಚಾರ್ಯರು ದರ್ಶನಪಡೆಯುವ ಮೊದಲು ರಚಿಸಿದ ಅನೇಕ ಹಾಡುಗಳಲ್ಲಿ ಅಂಕಿತವಿರುವುದಿಲ್ಲ. ಅಸ್ಕಿಹಾಳ ಗೋವಿಂದದಾಸರಲ್ಲಿ ಗುಂಡಾಚಾರ್ಯರಿಗೆ ಗುರುಸಮಾನ ಗೌರವವಿತ್ತು.

ಅವರು ಗುರುಗಳನ್ನು ಕಾಣಲು ಅಸ್ಕಿಹಾಳಕ್ಕೆ ಬಂದಿದ್ದರು. ಆಗ ಗೋವಿಂದದಾಸರು ಊರಹೊರಗಿನ ಬಾವಿಯಲ್ಲಿ ಸ್ನಾನಮಾಡುತ್ತಿರುವ ಸಂಗತಿ ತಿಳಿದ ಅವರು ಅಲ್ಲಿಗೆ ಹೋದರು. ಗುರುಗಳು ಸ್ನಾನಪೂರೈಸಿಕೊಂಡು ಬರುವವರೆಗೂ ಅವರಿಗೆ ಬೆನ್ನುಮಾಡಿ ಕಾಯ್ದುಕೊಂಡ ಶಿಷ್ಯನನ್ನು ನೋಡಿದ ಗೋವಿಂದದಾಸರು ಒಂದು ಕಲ್ಲಿನ ಹರಳನ್ನು ಅವರೆಡೆಗೆ ಬೀಸಿದರು. ಆ ಹರಳು ಗುಂಡಾಚಾರ್ಯರ ತಲೆಗೆ ತಾಗಿ ರಕ್ತಸುರಿಯಿತು. ಆಗ ಗೋವಿಂದದಾಸರು ಒಸರುತ್ತಿರುವ ರಕ್ತವನ್ನು ತಮ್ಮ ಕೈಯಿಂದ ಒತ್ತಿಹಿಡಿದು ಗುಂಡಾಚಾರ್ಯರ ಕಿವಿಯಲ್ಲಿ ಮಂತ್ರೋಪದೇಶಮಾಡಿ ಅಂಕಿತ ಪ್ರದಾನಮಾಡಿದರೆಂದು ಅವರ ಸಮಕಾಲೀನರು ಹೇಳುತ್ತಾರೆ. ಅಂದಿನಿಂದ ರಚಿಸಿದ ತಮ್ಮ ಹಾಡುಗಳಿಗೆ 'ಶಾಮಸುಂದರವಿಠಲ' ಅಂಕಿತವನ್ನು ಪ್ರಯೋಗಿಸಿದರೆಂದು ಹೇಳಿಕೆಗಳಿವೆ. ಗುಂಡಾಚಾರ್ಯರು

ಶಾಮಸುಂದರದಾಸರಾಗಲು ಅಸ್ಕಿಹಾಳದಲ್ಲಿ ನಡೆದ ಘಟನೆ ಪವಾಡವಾಗಿ ಪರಿಣಮಿಸಿದೆಯೆಂದು ಬಲ್ಲವರ ಮತವಾಗಿದೆ.

'ಶಾಮಸುಂದರವಿಠಲ' ಅಂಕಿತ ಪ್ರೇರಣೆಗೆ ಕಾರಣಗಳನ್ನು ಹುಡುಕುತ್ತಹೋದರೆ ನಮಗೆ ಒಂದು ಹೊಳಹು ದೊರೆಯುತ್ತದೆ. ಗುಂಡಾಚಾರ್ಯರ ತಂದೆಯ ಹೆಸರು ಶಾಮಾಚಾರ್ಯ. ಈ ಶಾಮಾಚಾರ್ಯ ಹೆಸರಿನಿಂದ ಅಂಕಿತಕ್ಕೆ ಪ್ರೇರಣೆ ದೊರೆತಿದ್ದರೆ ಅದನ್ನು ಸ್ವೀಕರಿಸಿ ಒಪ್ಪಬಹುದಾಗಿದೆ.

ಆಧ್ಯಾತ್ಮಿಕ ಗುರುಪರಂಪರೆ : ಶಾಮಸುಂದವಿಠಲರ ಗುರುಪರಂಪರೆ ದೊಡ್ಡದು. ಮಧ್ವಸಿದ್ಧಾಂತದಲ್ಲಿ ವಿಶೇಷವಾಗಿ ಹರಿಕಥಾಮೃತಸಾರದ ವ್ಯಾಖ್ಯಾನದಲ್ಲಿ ಅವರಿಗೆ ಸಮಾನರು ಇರಲಿಲ್ಲ. ಅನೇಕರು ಹರಿಕಥಾಮೃತಸಾರದಲ್ಲಿಯ ಪ್ರಮೇಯಗಳಿಗೆ ಶಾಮಸುಂದರವಿಠಲರಿಂದ ಅರ್ಥಪಡೆದುಕೊಳ್ಳುತ್ತಿದ್ದರು. ಅವರಿಗೆ ಈ ಪಾಂಡಿತ್ಯ ಶ್ರೀಜಗನ್ನಾಥದಾಸರ ಅನುಗ್ರಹದಿಂದ ಪ್ರಾಪ್ತಿಯಾಗಿತ್ತೆಂದು ಅಭಿಪ್ರಾಯಪಡುವವರಿದ್ದಾರೆ. ದ್ವೈತ ಸಿದ್ಧಾಂತದಲ್ಲಿ ಪ್ರಭುತ್ವಪಡೆದ ಕೆಲವು ವಿದ್ವಾಂಸರಿದ್ದರು. ಅವರಲ್ಲಿ ಐಕೂರಿನ ಶ್ರೀನರಸಿಂಹಾಚಾರ್ಯರು ಹಾಗೂ ಅಸ್ಕಿಹಾಳ ಗೋವಿಂದ ದಾಸರು ಪ್ರಮುಖರು. ಗುಂಡಾಚಾರ್ಯರು ಇವರೀರ್ವರನ್ನು ತಮ್ಮ ಗುರುಗಳೆಂದು ಸ್ವೀಕರಿಸಿದ್ದರು. ಲಿಂಗಸೂಗೂರು ಸುಳಾದಿ ಶ್ರೀ ಕುಪ್ಪೆರಾಯರು, ಶಿರವಾರ ಶ್ರೀರಾಮಚಂದ್ರರಾಯರು ಮತ್ತು ಶ್ರೀರಾಮಾಚಾರ್ಯರು ಹಾಗೂ ಮಾನವಿ ಗುಂಡಾಚಾರ್ಯರು ಇವರು ಐಕೂರು ಶ್ರೀನರಸಿಂಹಾಚಾರ್ಯರಲ್ಲಿ ಹೋಗಿ-ಬರುತ್ತಿದ್ದರು. ಆಧ್ಯಾತ್ಮಿಕ ತತ್ವಗಳನ್ನು ಚರ್ಚಿಸುತ್ತಿದ್ದರು. ಶಾಮಸುಂದರದಾಸರು ಐಕೂರು ಶ್ರೀನರಸಿಂಹಾಚಾರ್ಯರ ಅಂತರಂಗದ ಶಿಷ್ಯರಾಗಿದ್ದರೆಂದು ಹೇಳುತ್ತಾರೆ. 'ಒಂದೂರಾರ್ಯರ ಅನುಗ್ರಹವೋ' ಎಂದು ಅವರಲ್ಲಿದ್ದ ಭಕ್ತಿ ವ್ಯಕ್ತವಾಗುತ್ತದೆ. ಐಕೂರಾರ್ಯರ ದ್ವೈತಸಿದ್ಧಾಂತದ ಪಾಂಡಿತ್ಯವನ್ನು ಹೀಗೆ ಪ್ರಶಂಸಿಸಿದ್ದಾರೆ.

'ಪವನಶಾಸ್ತ್ರ ವೇದವ್ಯಾಸ। ಕವನವೆನ್ನುತ
ವಿವರಿಸುತಲಿ। ತನ್ನವರ ಪೊರೆವರ॥

'ಆಹಾಕೆಮ್ಮನಗಲಿ ಪರಲೋಕಸೇರಿದೆ ಗುರು' ಎಂದು ಗತಿಸಿದ ಐಕೂರಾರ್ಯರಿಗೆ ಅವರು ಅಂತಿಮ ಭಕ್ತಿಗೌರವವನ್ನು ಅರ್ಪಿಸಿದ್ದಾರೆ.

ಹೀಗೆ ಐಕೂರಾರ್ಯರ ಕೃಪೆ, ಶ್ರೀ ಜಗನ್ನಾಥದಾಸರ ಅನುಗ್ರಹ, ದಾಸವೃಂದ ಸೇವಾಕೃತಾವಶೇಷ ಫಲಗಳು ಗುಂಡಾಚಾರ್ಯರನ್ನು ಆಧ್ಯಾತ್ಮಿಕ ಜೀವಿಗಳನ್ನಾಗಿಮಾಡಿ ದಾಸಶ್ರೇಷ್ಠರನ್ನಾಗಿಮಾಡಿತು.

ತೀರ್ಥಯಾತ್ರೆ : ಶಾಮಸುಂದರವಿಠಲರು ತೀರ್ಥಯಾತ್ರೆ ಕೈಕೊಂಡರು. ಬಡತನ ಕಿತ್ತು ತಿನ್ನುತ್ತಿದ್ದರೂ ಗೆಳೆಯರ ಸಹಕಾರದಿಂದ ನಾಡಿನ ಅನೇಕ ಪ್ರಸಿದ್ಧ ಕ್ಷೇತ್ರಗಳ ತೀರ್ಥಯಾತ್ರೆ ಮಾಡಿದರು. ಅವರಿಂದ ಹರಿಕಥಾಮೃತಸಾರದ ತಾತ್ಪರ್ಯವನ್ನು ಪಡೆಯಬೇಕೆಂಬುವರು, ಹಾಡುಗಳನ್ನು ಕೇಳಬಯಸುವ ಆತ್ಮೀಯ ಮಿತ್ರರನೇಕರು ಅವರ ತೀರ್ಥಯಾತ್ರೆಗೆ ನೆರವಾದರು. ಉಡುಪಿ, ಪಂಢರಾಪುರ, ತಿರುಪತಿ, ಕಾವೇರಿರಂಗನಾಥ, ಹಂಪಿ, ಕೊಪ್ಪರ, ಕನಕಗಿರಿ ಇತ್ಯಾದಿ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿದರು. ಉಡುಪಿಯಲ್ಲಿ ನಡೆದ ಪರ್ಯಾಯಪೀಠದ ಉತ್ಸವದಲ್ಲಿ ಪಾಲ್ಗೊಳ್ಳುವ ಅವಕಾಶ ಅವರಿಗೆ ಲಭಿಸಿತು. ರಾಯಚೂರು ಜಿಲ್ಲೆಯಲ್ಲಿ ಪ್ರಸಿದ್ಧವಾದ ಪ್ರಾಣದೇವರ, ಮಹಾದೇವರ, ಲಕ್ಷ್ಮೀನರಸಿಂಹದೇವರ, ವೆಂಕಟೇಶ್ವರ, ರಾಮ–ಕೃಷ್ಣ, ರಂಗನಾಥರ ಕ್ಷೇತ್ರಗಳ ಯಾತ್ರೆಗೈದರು. ಮಂತ್ರಾಲಯ ಪ್ರಭುಗಳ ದರ್ಶನಪಡೆದರು. ಅವರು ದರ್ಶನಪಡೆದ ಕ್ಷೇತ್ರದೇವತೆಗಳನ್ನು ಕುರಿತು ಸ್ಥಳದಲ್ಲಿ ಹಾಡುಗಳನ್ನು ರಚಿಸುತ್ತಿದ್ದರು. ಸಿಂಧನೂರಿನ ಶ್ರೀರಾಮಚಂದ್ರದೇವರ ದರ್ಶನಪಡೆದ ಅವರು ಒಂದು ಸುಂದರ ದೇವರಸ್ತೋತ್ರಗೈದಿದ್ದಾರೆ.

ಶಾಮಸುಂದರವಿಠಲರು ಆಶುಕವಿಗಳಾಗಿದ್ದು, ಅವರು ಸಂದರ್ಶಿಸಿದ ಕ್ಷೇತ್ರಗಳಲ್ಲಿಯೇ ಸ್ತೋತ್ರಪದಗಳನ್ನು ಬರೆಯುತ್ತಿದ್ದರು. ಕೆಲವೊಮ್ಮೆ ತಾವೇ ಹಾಡುತ್ತಿದ್ದರು. ಅವರು ಚತುರ ಕವಿಗಳಾಗಿದ್ದಂತೆ ರಸಿಕರೂ, ಸ್ನೇಹಪರರೂ ಆಗಿದ್ದರೆಂದು ಅವರ ಒಡನಾಡಿಗಳು ಹೇಳುತ್ತಾರೆ. ಮಾನವಿ ಮತ್ತು ಬಲ್ಲಟಗಿಯ ಅನೇಕ ಮಿತ್ರರು ಗುಂಡಾಚಾರ್ಯರೊಂದಿಗೆ ನಿಕಟವಾಗಿ ವರ್ತಿಸಿ ಅವರ ಸರಸ ಸಂಭಾಷಣೆ ಮತ್ತು ರಸಿಕೋಕ್ತಿಯ ಸವಿಯನ್ನು ಸವಿದಿದ್ದರು. ಮಧ್ವಸಿದ್ಧಾಂತಗಳ

ತಾತ್ಪರ್ಯಗಳನ್ನು ಪಡೆದುಕೊಳ್ಳುತ್ತಿದ್ದರು. ಅವರಲ್ಲಿ ಸಂಪ್ರತಿ ರಾಮರಾವ್, ಪೇಷ್ಕಾರ್ ಸುಬ್ಬಾರಾವ್, ದಿನ್ನಿ ಶೀನಪ್ಪ, ತುಪ್ಪದೂರು ಶೀನಪ್ಪ ಮತ್ತು ನರಸಿಂಹಾಚಾರ್ (ಬೂಚಪ್ಪ) ಇವರುಗಳು ಪ್ರಮುಖರು.

ಗುಂಡಾಚಾರ್ಯರು ಅನೇಕ ಶಿಷ್ಯರನ್ನು ಪಡೆದಿದ್ದಾರೆ. ಮಂತ್ರಾಲಯದ ರಾಘವೇಂದ್ರಾಚಾರ್ಯರು (ಲಕುಮೀಶಾಂಕಿತ), ಮಾನವಿಯ ದಾಸರ ಮೂರ್ತಿ ಮುಖ್ಯರು. ಅಂತ್ಯಜನಾದ ದಾಸರ ಮೂರ್ತಿಗೆ ಗುಂಡಾಚಾರ್ಯರು ಶಿಷ್ಯತ್ವನೀಡಿ, ಅವನ ಜೀವನಶೈಲಿಯನ್ನು ಮಾರ್ಪಡಿಸಿದರು. ದಾಸರ ಮೂರ್ತಿ ಗುರುಗಳ ಹಾಡುಗಳನ್ನು ಹಾಡುತ್ತ ಅದರಲ್ಲಿ ಆನಂದ ಪಡೆದು ಶುಚಿಜೀವನವನ್ನು ನಡೆಸಿ ಬಾಳಿದನು. ಹರಿಜನರಿಗೆ ಶಿಷ್ಯತ್ವನೀಡಿ ಅವರ ಜೀವನವನ್ನು ಶುಚಿಗೊಳಿಸಿದ್ದು ಗುಂಡಾಚಾರ್ಯರ ಶ್ರೇಷ್ಠತೆಯೆನಿಸಿದೆ. ಅವರ ಸಮಕಾಲೀನರಾಗಿದ್ದ ಅಸ್ಕಿಹಾಳ ಗೋವಿಂದದಾಸರು ನೂರಾರು ಅಂತ್ಯಜರಿಗೆ ದೀಕ್ಷೆನೀಡಿ ಶಿಷ್ಯರನ್ನಾಗಿಮಾಡಿದ ಗುರುಗಳ ಮಾರ್ಗ ಗುಂಡಾಚಾರ್ಯರಿಗೆ ಆದರ್ಶವಾಯಿತು.

ಗುಂಡಾಚಾರ್ಯರ ಹಾಡುಗಳಿಂದ ಪ್ರಭಾವಿತರಾಗಿ ಅನೇಕರು ಅವರ ಶಿಷ್ಯರಾಗಿ ಹಾಡು, ಸುಳಾದಿಗಳನ್ನು ರಚಿಸಿದ್ದಾರೆ. ಅವರೆಲ್ಲರೂ ಗುಂಡಾಚಾರ್ಯರು ಪರಂಧಾಮ ಹೊಂದಿದಾಗ ಅವರನ್ನು ಕುರಿತು ಹಾಡುಗಳನ್ನು ಬರೆದಿದ್ದಾರೆ. ಅವರ ಮತ್ತೊಬ್ಬ ಶಿಷ್ಯ ಮೋತಿ (ಮೋತಪ್ಪಲ್ಲಿ) ಗುರುಗಳ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಾರೆ.

ಗುಂಡಾಚಾರ್ಯರು ನೂರಾರು ಹಾಡುಗಳನ್ನು ರಚಿಸಿ, ಸುಳಾದಿ, ಉಗಾಭೋಗಗಳಿಂದ ದಾಸಸಾಹಿತ್ಯಕ್ಕೆ ಅನುಪಮ ಸಂಪತ್ತು ನೀಡಿದ್ದಾರೆ, ಅವರು ಜೀವಿತ ಕಾಲದಲ್ಲಿ ದಂತಕಥೆಯಾದರು. ವೈರುಧ್ಯಗಳಿಂದ ಒಗಟಾಗಿ ಪರಿಣಮಿಸಿದರು. ಅಷ್ಟೇ ಶ್ರೀಹರಿಯ ಅಂತರಂಗದ ಭಕ್ತರಾಗಿ ಇಂದಿಗೂ ಅವರು ಜನರಲ್ಲಿ ಭಕ್ತಿಶ್ರದ್ಧೆ ಅಭಿಮಾನಗಳಿಂದ ಪೂಜಿತರಾಗಿದ್ದಾರೆ. ಗುಂಡಾಚಾರ್ಯರು ಇಹಲೋಕಕ್ಕೆ ಬಂದ ಕಾರ್ಯ ಮುಗಿಯುತ್ತಿದ್ದಂತೆ ಅವರು ದುರ್ಮುಖಿ ನಾಮಸಂವತ್ಸರ ವೈಶಾಖ ಶುದ್ಧ ನವಮಿಯಂದು (೧೯೫೬ ನೇ ಇಸ್ವಿ) ಶ್ರೀಹರಿಯ

ಪಾದವನ್ನು ಸೇರಿದರು. ದಾಸರ ಪುಣ್ಯತಿಥಿಯನ್ನು ಪ್ರತಿವರ್ಷ, ಮಾನವಿಯಲ್ಲಿ ಕಪಗಲ್ ಭೀಮಸೇನಾಚಾರ್ಯರು ಆಚರಿಸುತ್ತಾರೆ.

ಗುಂಡಾಚಾರ್ಯರ ಸಮಗ್ರ ಜೀವನ ಚರಿತ್ರೆಯನ್ನು ಅವರ ಒಡನಾಡಿಗಳು, ಹತ್ತಿರದಿಂದ ನೋಡಿದವರು ಹಾಗೂ ಸಾಹಿತಿಗಳೂ ಆದ ರಾ.ಗು.ಜ್ಯೋತಿಗಳವರು ಬರೆದಿದ್ದಾರೆ. ಈ ಪುಸ್ತಕವು ಮಾನವಿಯ ಶ್ರೀರಂಗನಾಥ ಪ್ರಕಾಶನದಿಂದ (೧೯೮೧) ಪ್ರಕಟವಾಗಿದೆ.

ಹಾಡುಗಳ ಭಾವಮೌಲ್ಯಗಳು : ಗುಂಡಾಚಾರ್ಯರ ನೂರಾರು ಹಾಡುಗಳು ಹರಿದಾಸ ಪರಂಪರೆಯಲ್ಲಿ ರಚಿತವಾಗಿವೆ. 'ಶಾಮಸುಂದರವಿಠಲ' ಅಂಕಿತವಿರುವ ಹಾಡುಗಳು ಪುರಂದರದಾಸ, ವಿಜಯದಾಸರ ಪರಂಪರೆಯನ್ನು ಅನುಸರಿಸಿ ಮುಂದುವರೆದಿವೆ. ಇಲ್ಲಿಯ ಸ್ತೋತ್ರಪದಗಳು ಮಧ್ವಶಾಸ್ತ್ರದಂತೆ ತಾರತಮ್ಯೋಕ್ತವಾಗಿವೆ. ಹರಿಸರ್ವೋತ್ತಮತ್ವ, ವಾಯುಜೀವೋತ್ತಮತ್ವ, ಪಂಚಭೇದಜ್ಞಾನ ಇತ್ಯಾದಿ ಪ್ರಮೇಯಗಳು ಹಾಡುಗಳಲ್ಲಿ ಪ್ರತಿಪಾದಿತವಾಗಿವೆ. ದೇವತೆ, ಯತಿ, ದಾಸವೃಂದಗಳಂಥ ದಾಸಪರಂಪರೆಯ ಹಾಡುಗಳು ಮನೋಜ್ಞವಾಗಿವೆ. ಆತ್ಮನಿವೇದನೆ, ಸಾಮಾಜಿಕ ನೀತಿನಿಂದನೆ ಮತ್ತು ಬೋಧಪ್ರದವಾದ ಹಾಡುಗಳಿವೆ. ಬದುಕಿನ ವಿಡಂಬನೆ ಇಲ್ಲಿ ಮೊನಚಾಗಿ ವ್ಯಕ್ತವಾಗಿವೆ. ಸಮಕಾಲೀನ ಜೀವನಮೌಲ್ಯಗಳ ಅನುಭವವು ದಟ್ಟವಾಗಿ ಮೂಡಿಬಂದಿವೆ.

ಇಲ್ಲಿಯ ಹಾಡುಗಳು ಪ್ರಮುಖವಾಗಿ ಸ್ತೋತ್ರಪ್ರಧಾನವಾಗಿರುವುದರಿಂದ ಅವು ಶಾಸ್ತ್ರ, ಪುರಾಣ, ಭಾಗವತಗಳ ಚೌಕಟ್ಟಿನಲ್ಲಿ ರಚನೆಯಾಗಿವೆ. ಇಲ್ಲಿ ವರ್ಣನೆ, ಕಲ್ಪನಾವಿಲಾಸಕ್ಕೆ ಇಂಬುದೊರೆತಿಲ್ಲ. ಹಾಡುಗಳು ಚಿಕ್ಕದಾಗಿದ್ದು, ಸುಂದರವಾಗಿವೆ. ಗುಂಡಾಚಾರ್ಯರು ತಮ್ಮ ಕೀರ್ತನೆಗಳನ್ನು ಚೆಲುವ ಕನ್ನಡ ಭಾಷೆಯಲ್ಲಿ ರಚಿಸಬೇಕೆಂದಿದ್ದರೂ ಮಧ್ವಸಿದ್ಧಾಂತದಂಥ ಮತಪ್ರಕ್ರಿಯೆಗಳನ್ನು ಪ್ರತಿಪಾದಿಸಲು ಹೊರಟಾಗ ಸಂಸ್ಕೃತ ಪದಬಂಧುರತೆಯು ಒತ್ತೊತ್ತಾಗಿ ಬಂದಿರುವುದು

ಕಂಡುಬರುತ್ತದೆ. ಇಲ್ಲಿಯ ಹಾಡುಗಳಲ್ಲಿ ಸಂಸ್ಕೃತ ಪದರಚನೆಯ ಗಾಂಭೀರ್ಯದ ಸೊಬಗನ್ನೂ, ಅಚ್ಚಗನ್ನಡದ ಪದರಚನೆಯ ಸರಳತೆಯ ಸೊಗಸನ್ನೂ ಸವಿದ ಅನುಭವವುಂಟಾಗುತ್ತದೆ.

ಹಾಡುಗಳಲ್ಲಿ ಪಾಂಡಿತ್ಯಕ್ಕೆ ಪ್ರಾಧಾನ್ಯತೆಯಿರುವುದರಿಂದ ಪ್ರಾಸಾನುಪ್ರಾಸ, ಛೇಕಾನುಪ್ರಾಸ, ಅರಿಸಮಾಸ, ವಿಲಕ್ಷಣ ಪದಮೈತ್ರಿಗಳ ಅತಿಯಾದ ಪ್ರಯೋಗದಿಂದ ಮತ್ತು ದ್ವಂದ್ವಾರ್ಥ, ಶ್ಲೇಷಾರ್ಥ, ವಕ್ರೋಕ್ತಿ, ಚತುರೋಕ್ತಿ, ಕನ್ನಡ ಪದಗಳಿಗೆ ಸಂಸ್ಕೃತೀಕರಣ, ಸಂಸ್ಕೃತಪದಗಳಿಗೆ ಕನ್ನಡೀಕರಣಗಳ ಚಮತ್ಕಾರದಿಂದ ಕಾವ್ಯಾಂಶ ಪ್ರಕಟನೆಗೆ ಆಸ್ಪದವಿಲ್ಲದಾಗಿದೆ. ಇದರಿಂದ ರಸಿಕರಿಗೆ ರಸಾಸ್ವಾದನೆಯುಂಟಾಗು ವುದಿಲ್ಲವೆಂಬ ಕೊರತೆ ಸ್ವಲ್ಪಮಟ್ಟಿಗೆ ನಿಜವೆನಿಸುತ್ತದೆ.

ಅಂತ್ಯಪ್ರಾಸ, ಆದಿಪ್ರಾಸ, ಪ್ರಾಸಾನುಪ್ರಾಸ, ಛೇಕಾನುಪ್ರಾಸಗಳ ಪ್ರಯೋಗದ ಶಬ್ದಾಡಂಬರ ಆಶ್ಚರ್ಯಗೊಳಿಸುತ್ತದೆ.

೧. ದೇವ ಹನುಮಶೆಟ್ಟಿ । ಜಯಜಗಶೆಟ್ಟಿ
ಕಾವೋದೋಭಾವಿ ಪರಮೇಷ್ಠಿ

೨. ವಾನರ ಕುಲನಾಯಕ। ಜಾನಕೀ ಶೋಕ
ಕಾನನ ತೃಣಪಾವಕ। ಹೀನ ಕೌರವ ನಾಯಕ

೩. ಭವಕಮಲಭವ ಭ್ರಕುಟ ಭವ ಹರನೆ ನೀಎನ್ನ

ಸ್ತೋತ್ರಗಳಲ್ಲಿ ಮಧ್ವಸಿದ್ಧಾಂತವನ್ನು ಪ್ರತಿಪಾದಿಸುವಾಗ ಸಂಸ್ಕೃತಪದಗಳ ಅಧಿಕ ಪ್ರಯೋಗ ಅನಿವಾರ್ಯವೆಂದು ತೋರುತ್ತದೆ. ಇಲ್ಲಿ ಉದಾಹರಣೆ ನೋಡಬಹುದು.

೧. ಭೂಲೋಲ ಕೋಲದ। ಕೋಲಸ ಮಂದಿರ
ಫಾಲಾಕ್ಷ ಪಾಲೋಮಿ ಪತಿ ವಂದಿತ.

೨. ಸಾಮಗಾನಲೋಲ। ಸುರರಾಜ ಪೂಜಿತ
ಹೇಮ ಕಶ್ಯಪ ಕಾಲ। ಕರಿದನುಜ ಹರನುತ.

ಕನ್ನಡ ಪದಗಳ ಹಿತವಾದ ಬಳಕೆಯಿಂದ ಹಾಡುಗಳಲ್ಲಿ ಸರಳತೆ ಮತ್ತು ಲಾಲಿತ್ಯಗಳು ಚೇತೋಹಾರಿಯಾಗಿವೆ. ಕೆಲವೊಮ್ಮೆ ಕಾವ್ಯಮಯವಾಗಿ ಆಕರ್ಷಿಸುತ್ತವೆ. ಉದಾಹರಣೆ ಇಲ್ಲಿದೆ.

೧. ಬಾಲೆಯೋರ್ವಳು ಬಂದು ಪ್ರಾರ್ಥಿಸೆ।
ಕೇಳುತಾಕೆಯ ಪತಿಯನು॥
ಕಾಲಪಾಶವ ಬಿಡಿಸಿ ಕರುಣದಿ।
ಪಾಲಿಸಿದ ಸುಮಾತ್ಮರು॥

೨. ನಾನೆಂಬೋ ಅಹಂಕಾರಸಲ್ಲ। ನಿನ್ನ
ಮಾನಿನಿ ಸುತರು ಸಂಗಡ ಬಾಹೋರಿಲ್ಲ॥
ಈ ನುಡಿ ದಿಟ ಸಟೆಯಲ್ಲ। ಹೀಗೆ
ನೀನಾಚರಿಸಲು ಬಲವು ಶ್ರೀ। ಸಲ್ಲ

ದಾಸರು ಈ ಮುಂಚೆ ಮದುವೆ ಹಾಡುಗಳು, ಶೋಭಾನೆ ಹಾಡುಗಳು, ಮಂಗಳಾರತಿ ಪದಗಳು ಮತ್ತು ಜೋಗುಳಪದಗಳನ್ನು ಹೆಂಗೆಳೆಯರಿಗೆ ಬರೆದು ಕೊಡುತ್ತಿದ್ದ ಪರಿಯನ್ನು ಮುಂದುವರಿಸಿ ಜಾನಪದ ಮಟ್ಟನ್ನು ದೇವರ ನಾಮಗಳಲ್ಲಿಯೂ ಪ್ರಯೋಗಿಸಿ ಹಾಡುಗಳನ್ನು ರಚಿಸಿದ್ದಾರೆ. ಉದಾಹರಣೆಗೆ:

೧. ಜೋಗುಳಪದ : ಜೋಜೋಜೋಜೋ ಪ್ರಹ್ಲಾದರಾಜ
ಜೋಜೋಜೋಜೋ ಪ್ರಹ್ಲಾದನುಜ
ಜೋಜೋಜೋಜೋ ಪ್ಯಾತರೂಪ ಶಯ್ಯಜ
ಜೋಜೋಜೋಜೋ ಭಕ್ತಸುರಕಲ್ಪಭೂಜ

೨. ತೊಟ್ಟಿಲ ಹಾಡು: ತೂಗಿರೆ ಶ್ರೀರಂಗವೊಲಿದ ದಾಸರ
ತೂಗಿರೆ ಜಗನ್ನಾಥರಾಯರ॥

೩. ಮಂಗಳಾರತಿ ಹಾಡು: ಮಂಗಳಂ ಮಂಗಳಂ ಜಯಾಬ್ಜೆಜಯ
ಮಂಗಳಂ ಶ್ರೀರಂಗವೊಲಿದ ದಾಸಾರ್ಯ॥

ಕಾವ್ಯಗುಣಗಳ ಹಾಡುಗಳು : ಸ್ತೋತ್ರರೂಪದ ಹಾಡುಗಳಲ್ಲಿ ಕಲ್ಪನಾವಿಲಾಸ, ರಸಸ್ಯಂದನಗಳಂಥ ಕಾವ್ಯಗುಣಗಳನ್ನು ಕಾಣುವುದು ಬಹು ಅಪರೂಪ. ಸಂಸ್ಕೃತ ಶಬ್ದಾಡಂಬರವು ಕಾವ್ಯಗುಣವನ್ನು ಕುಗ್ಗಿಸುತ್ತದೆ. ಆದರೆ ಸಮರ್ಥ ಕಾವ್ಯಗುಣವುಳ್ಳ ಗುಂಡಾಚಾರ್ಯರು ಹಲವು ಹಾಡುಗಳಲ್ಲಿ ಕಾವ್ಯಗುಣಗಳನ್ನು ಮೆರೆದಿದ್ದಾರೆ. ಅಂಥ ಹಾಡುಗಳು ರಸವಂತಿಕೆಯಿಂದ ಶೋಭಿಸುತ್ತವೆ. ಕಲ್ಪನಾವಿಲಾಸ ಗರಿಗೆದರಿ ನರ್ತಿಸುತ್ತವೆ. ಕಾವ್ಯಗುಣಗಳ ಈ ಹಾಡುಗಳು ರಸಿಕರಿಗೆ ರಸದೌತಣ ನೀಡುತ್ತವೆ. ಇಲ್ಲಿಯ ಕೆಲವು ದೃಷ್ಟಾಂತಗಳು ಮನತಣಿಸುತ್ತವೆ:

೧. ಉಡುಪಿಯ ನಂದಗೋಪಾಲನನ್ನು ಕಾಣುವ ಹಂಬಲ, ತವಕ, ತುಡಿತಗಳಿಂದ ಬಾಲಕೃಷ್ಣನ ವರ್ಣನೆ ಮನೋಹರವಾಗಿದೆ.:

ಎಂದು ಕಾಂಬೆನು ನಂದಗೋಪನ।
ಕಂದ ಶ್ರೀಗೋವಿಂದನ।
ಮಂದರಾಚಲಧರ ಶ್ರೀಯದುಕುಲ
ಚಂದ್ರಗುಣ ಗಣಸಾಂದ್ರನಾ ಪ
ಪಾಲುದಧಿ ನವನೀತ ಚೋರನ।
ಬಾಲಕೃಷ್ಣ ಗೋಪಾಲನ।
ಶೈಲ ಬೆರಳೊಳು ತಾಳಿ ಗೋಕುಲ।
ಪಾಲಿಸಿದ ಪರಮಾತ್ಮನ॥

ಬಾಲಗೋಪಾಲನ ಕೋಮಲ ಭಾವವನ್ನು ವರ್ಣಿಸುವಲ್ಲಿ ಪದಗಳು ಮೃದು ಕೋಮಲವಾಗಿದೆ. ಪ್ರಾಸಾದಗುಣವನ್ನು ವ್ಯಕ್ತಪಡಿಸುತ್ತದೆ.

೨. ಕಾವೇರಿರಂಗನಾಥನನ್ನು ಪ್ರಾರ್ಥಿಸುವ ಈ ಹಾಡು ದೀರ್ಘ ನಿವೇದನೆಯ ಸಮುಚಿತ ಪದಪ್ರಯೋಗದಿಂದ ಹಿತವಾಗಿದೆ. ಆರ್ತಭಾವವನ್ನು ಉದ್ದೀಪನಗೊಳಿಸುವ ರೀತಿ ಮನಮೋಹಕವಾಗಿದೆ.

ಕಾಯೋ ಕಾವೇರಿರಂಗ। ಕಾರುಣ್ಯಪಾಂಗ ಪ

ಕಾಯೋ ಕಾಯೋ ಕಾವೇರಿನಿಲಯನೆ
ಕಾಯೋ ವಾಙ್ಮನ ಪೂರ್ವಕದಿ ತವ ।
ತೋಯಜಾಂಘ್ರಿಯ ನಂಬಿದೆನು ಭವ
ಮಾಯೆ ಗೆಲುವ ಉಪಾಯವ ತೋರಿ ಅಪ

೩. ಗುಂಡಾಚಾರ್ಯರ ಮಗ ವ್ಯಾಸಮುನಿ ಅನಾರೋಗ್ಯಪೀಡಿತನಾದಾಗ ಆತನಿಗೆ ಆರೋಗ್ಯ ದಯಪಾಲಿಸುವಂತೆ ಬಲ್ಲಟಗಿಯ ಪ್ರಾಣದೇವರಲ್ಲಿ ಮೊರೆಯಿಡುವ ಹಾಡಿನಲ್ಲಿ ವಾತ್ಸಲ್ಯ, ಪ್ರೀತಿ ಮತ್ತು ಭಕ್ತಿಭಾವಗಳು ಹೃದಯಾಂತರಾಳದಿಂದ ಒಡಮೂಡಿಬಂದಿವೆ:

ಪೋತನ ಪಾಲಿಸೋ ಪವಮಾನ। ;ಈ
ಭೂತಳದೊಳು ನಿನ್ನ ಖ್ಯಾತಿ ಘನಾ ಪ

ಒದಗಿದ ವ್ಯಾಧಿಯ ಪರಿಹರಿಸೋ । ನಿನ್ನ
ಪದರಿಗೆ ಬಿದ್ದವನೆಂದು ಗ್ರಹಿಸೋ ೧

ತಾಯಿಯಿಲ್ಲದ ಬಾಲಕನು। ಇವನ
ಕಾಯಲು ನೀ ದಯಾಸಾಗರನು ೨

ಶ್ವಾಸದೊಡೆಯ ನೀನೆಂತೆಂದು । ಶ್ರುತಿ
ಘೋಷಿಸುವುದು ಆತನ ಬಂಧು ೩

ಶಿಶುವಿಗೊಲಿದು ನೀ ಸಲುಹಿದೆ ।ದೇವ
ಅಸುನಾಯಕನೆಂಬ ಬಿರುದ ಖರೆ ೪

ಗ್ರಾಮ ಬಲ್ಲಟಗಿ ಕೃತವಾಸ । ಶಿರಿ
ಶಾಮಸುಂದರನಂಘ್ರಿಯ ದಾಸ ೫

ಮನೋಜ್ಞವಾದ ಹಾಡು ಇದು.

೬. ಇದೊಂದು ನಿಂದನಾತ್ಮಕ ಸ್ತುತಿಹಾಡು. ಮಧ್ವ ಮತ ಹೊಂದದವರನ್ನು ನಿಂದಿಸುವದರಲ್ಲಿಯೂ ನೀತಿಬೋಧನೆಯಿದೆ. ತತ್ವದ ವಿವೇಚನೆಯಿದೆ.

ಗಂಧವಾಹನನ ಮತವ ಪೊಂದದವರು
ಹಂದಿನಾಯಿಗಳಾಗಿ ಬಹುಕಾಲ ಕಳೆದಂತೆ॥
ಇಳೆಯಾಣ್ಮನಿಲ್ಲದಾ ನಾಡು ಶೋಭಿಸದಂತೆ
ಜಲವಿಲ್ಲದಾ ವಾಪಿ ಕೂಪದಂತೆ॥
ನಳಿನ ಬಾಂಧವ ಮಿತ್ರನುದಯಿಸದ ದಿನದಂತೆ
ಕುಲಹೀನಮಾಡಿದವರ ಸಂಗಮಾಡಿದಂತೆ॥

ಬೋಧಪ್ರದವಾದ ಈ ಹಾಡು ಮಾನವನ ಬಾಳಿಗೆ ದಾರಿದೀಪವಾಗಿದೆ.

ಆತ್ಮನಿವೇದನಾ ಹಾಡುಗಳು : ಆತ್ಮಶೋಧನೆ, ಅಂತರಂಗದ ತುಡಿತ, ಭಾವಶುದ್ಧಿಗಳು ಮಾನವನನ್ನು ಸತ್ಯಶೋಧನೆಗೆ ಗುರಿಪಡಿಸಿದಾಗ ಅಪರಾಧದ ಅರಿವಾಗುತ್ತದೆ. ಪಶ್ಚಾತ್ತಾಪದ ಅಗ್ನಿಯಿಂದ ಅವು ದಗ್ಧವಾಗುತ್ತವೆ. ಆತ್ಮನ ನಿಜಸ್ವರೂಪ ಪ್ರಕಟವಾಗುತ್ತದೆ. ಇಂಥ ಹಲವಾರು ಆತ್ಮ ನಿವೇದನಾ ಹಾಡುಗಳು ಮನುಜರ ಹೃದಯವನ್ನು ತಟ್ಟಿ ಎಚ್ಚರಗೊಳಿಸುತ್ತವೆ.

೧. ಸ್ವಾಹಂಕಾರವನ್ನು ಖಂಡಿಸುವ ಈ ಹಾಡು ನಮ್ಮೆಲ್ಲರ ಆತ್ಮನಿರೀಕ್ಷಣೆ ಮಾಡಿಸುವಂತಿದೆ:

ಎನಗ್ಯಾಕೆ ಕವಿಯೆಂಬ ಶ್ರೇಷ್ಠನಾಮ।
ಜನರೊಳಗೆ ನಾನೋರ್ವ ಮನುಜಾಧಮ॥
ಸ್ನಾನ ಜಪತಪ ಮೌನ ಧ್ಯಾನ ವರಮಂತ್ರಗಳ।
ಖೂನವಿಲ್ಲದೆ ಜ್ಞಾನವಿಹೀನನಾಗಿ॥
ಏನು ಹೇಳಲಿ ದುಷ್ಟ ಮಾನಿನಿಗೆ ಮನಸೋತು।
ಶ್ವಾನನಂದದಿ ದಿನವ ನೂಕಿದವನಯ್ಯ॥

ಕೊನೆಯಲ್ಲಿ "ಶಾಮಸುಂದರ ಧ್ಯಾನವಮಾಡದೆ ಜಡವಾದ ನಾಮದಲಿ ಚರಿಸುವೆನು" ಎಂದು ಪಶ್ಚಾತ್ತಾಪಪಡುವದು ಜ್ಞಾನಿಯ ಲಕ್ಷಣ.

೨. ಹೇಯವಾದ ಸಂಸಾರ ನಿರಸನದ ಬಗ್ಗೆ ಜ್ಞಾನಿಗಳು ಉಪದೇಶಿಸಿದ್ದಾರೆ ಮತ್ತು ಸಂಸಾರವೆಂಬ ಮಾಯೆಯಿಂದ ಹೊರಗೆ ಬರಲು ಅವರು ಜೀವಿಗಳಿಗೆ ಕಾಲಕಾಲಕ್ಕೆ ಬೋಧಿಸುತ್ತ ಬಂದಿದ್ದಾರೆ. ಆದರೆ ಮಾನವ ಆದರ ಹಿಡಿತದಿಂದ ಬಿಡಿಸಿಕೊಳ್ಳಲಾಗುತ್ತಿಲ್ಲವೆಂಬುದು ಕಳವಳಕಾರಿ.

ನೆಚ್ಚದಿರು ಸಂಸಾರ ಕಾಡ।
ಗಿಚ್ಚಿನಂದದಿ ದಹಿಸುವದತಿ ಘೋರ॥
ಕ್ಷುದ್ರ ಜನರ ಸಂಗ ತ್ಯಜಿಸೊ। ಸದಾ
ಮಧ್ವಸುಶಾಸ್ತ್ರವ ಕೇಳಿ ನೀ ಗ್ರಹಿಸೊ।
ಸದ್ಗುರುಗಳ ಪಾದಾಶ್ರೈಸೊ। ನೀನೆ
ಉದ್ಧಾರಕನೆಂದು ಹರಿಯನ್ನೆ ಬಯಸೊ॥

"ಶಾಮಸುಂದರವಿಠಲನ್ನ ಪೊಂದಿ ನೀ ಸುಖಿಸೋ" ಎಂಬಲ್ಲಿ 'ಶ್ರೀಹರಿ'ಯೆನ್ನುವ ತಾರಕ ಮಂತ್ರ ವೊಂದೇ ಸಂಸಾರದಿಂದ ವಿಮುಖಿಗೊಳಿಸುವ ಮಾರ್ಗವೆಂದು ಹೇಳಲಾಗಿದೆ.

೩. ಸ್ತ್ರೀಕುಲಕ್ಕೆ ಬುದ್ಧಿಹೇಳುವ ಈ ಎರಡು ಹಾಡುಗಳು ಸ್ತ್ರೀಜನ್ಮವನ್ನು ಪಾವನಗೊಳಿಸುತ್ತವೆ.

೧) ಕೇಳಮ್ಮ ತಂಗಿ ಕೇಳಮ್ಮ।
ಕೇಳೀ ಪುರಾಣದಿ ಪೇಳಿದ ಕೃಷ್ಣನ
ಲೀಲೆಯ ಪಾಡುತ 'ಬಾಳಮ್ಮ'॥
ನಿಷ್ಠೆಯಿಂದಲಿ ಬಲು ಶಿಷ್ಟಳಾಗುತ
ದುಷ್ಟರಿಂದ ದೂ'ರಾಗಮ್ಮ'॥

ಎಂದು ಸ್ತ್ರೀಯರ ಹೆಸರುಗಳನ್ನು ಅನ್ವರ್ಥಗೊಳಿಸಿ ನೀತಿಯನ್ನು ಬೋಧಿಸುವ ಈ ಹಾಡಿನಲ್ಲಿ ೨೫ ನುಡಿಗಳಿವೆ. ಅಷ್ಟೇ ಸ್ತ್ರೀಯರ ಬೇರೆಬೇರೆ ಹೆಸರುಗಳಿವೆ. ಆ ಹೆಸರಿಗೆ ಅನ್ವಯಿಸುವಂತೆ ನೀತಿಬೋಧನೆಯಿದೆ. ಇದೊಂದು ವಿಶಿಷ್ಟವಾದ ಹಾಡು.

೨) ಸುಖದಿ ಜೀವಿಸು ಬಾಲೆ ಸುಗುಣಶೀಲೆ।
ಸುಖದಿ ಜೀವಿಸು ಬಾಲೆ॥

ಜೀವನವನ್ನು ಸುಖಮಯಗೊಳಿಸಲು ತ್ಯಾಗ, ಧೈರ್ಯ, ಧರ್ಮಭೀರುತ್ವ ಉತ್ತಮ ಆಚರಣೆಗಳನ್ನು ತಂದುಕೊಳ್ಳುವ ಮತ್ತು ಉದಾತ್ತ ವಿಚಾರಗಳನ್ನು ಬೋಧಿಸುವ ಈ ಹಾಡು ಹೆಣ್ಣು ಮಕ್ಕಳಿಗೆ ಆಶೀರ್ವಾದದ ಹಾಡಾಗಿದೆ.

ಹಾಡುಗಳಲ್ಲಿ ಸಮಕಾಲೀನ ಪ್ರಜ್ಞೆ : ಗುಂಡಾಚಾರ್ಯರು ೧೯೫೬ನೇ ಇಸ್ವಿಯವರೆಗೆ ಬದುಕಿದ್ದ ತಮ್ಮ ಜೀವಿತಕಾಲದ ಪರಿಸ್ಥಿತಿಯನ್ನು ಕಂಡು ಅನುಭವಿಸಿದ್ದಾರೆ. ಕವಿಯ ಸಮಸಾಮಯಿಕ ಸಾಮಾಜಿಕ ಮತ್ತು ರಾಜಕೀಯ ಪ್ರಭಾವ ಆತನ ಕಾವ್ಯಗಳಲ್ಲಿ ಬಿಂಬಿತವಾಗುತ್ತದೆಯೆಂಬ ತತ್ವಕ್ಕೆ ಗುಂಡಾಚಾರ್ಯರ ಹಾಡುಗಳು ಹೊರತಾಗಿಲ್ಲ. ಸೂಕ್ಷ್ಮಸಂವೇದನಾಶೀಲರಾದ ಅವರು ಜೀವಿಸಿದ ಹೈದರಾಬಾದ ಕರ್ನಾಟಕ ಪ್ರದೇಶದ ಅಂದಿನ ಪರಿಸ್ಥಿತಿಗೆ ತೀವ್ರವಾಗಿ ಸ್ಪಂದಿಸಿದರು. ನಿಜಾಮ್ ಸರ್ಕಾರದ ದಮನನೀತಿಯ ಆಡಳಿತದಲ್ಲಿ ಜನರ ಕಷ್ಟಕಾರ್ಪಣ್ಯ, ಬಡತನದ ಬವಣೆ, ಭೀಕರ ಬರ, ರಜಾಕಾರರ ಹಾವಳಿ, ಸಾಹಿತ್ಯ-ಸಂಸ್ಕೃತಿಗಳು ದು:ಸ್ಥಿತಿಗಳನ್ನು ಅನುಭವಿಸಿದ ಅನುಭವದ ಪ್ರಖರತೆ ಹಾಡುಗಳಲ್ಲಿ ವ್ಯಕ್ತವಾಗಿದೆ. ಸನ್ನಿವೇಶಗಳ ಚಿತ್ರಣ ಹೃದಯವನ್ನು ಕಲಕುತ್ತವೆ. ಮಾನವಿ ತಾಲ್ಲೂಕಿನಲ್ಲಿ ದೊಡ್ಡ ಬರಬಂದಿತು. ಜನರ ಕಷ್ಟಗಳನ್ನು ಕೇಳುವರೇ ಇಲ್ಲ. ಬರದ ಬವಣೆಗೆ ಸಿಲುಕಿದ ಜನರ ಬವಣೆ ಹಾಡಿನಲ್ಲಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ.

ಬಲು ಕಷ್ಟ ಬರಗಾಲ ಬಂದಿತಯ್ಯ।
ಕೊಲುವ ವೈರಿ ಜನಕೆ ಬರಬಾರದಯ್ಯ॥

ಎಂದು ಪ್ರಾರಂಭವಾಗುವ ಈ ಹಾಡು ಭೀಕರ ಬರಗಾಲದ ಪರಿಸ್ಥಿತಿಯನ್ನು ಮನಸ್ಸಿಗೆ ನಾಟುವಂತೆ ಬಣ್ಣಿಸುತ್ತದೆ.

ಶಿಶುಗಳಿಗೆ ಹಾಲಿಲ್ಲ। ಪಶುಗಳಿಗೆ ಮೇವಿಲ್ಲ।
ಉಸುರಲು ಬಾಯಿಲ್ಲ ವೃದ್ಧ ಜನಕೆ।

ಮಳೆರಾಯ ಮುನಿದುದಕೆ। ಹೊಲ ಬೆಳೆಯದಿದ್ದದಕೆ
ಬೀಳುತಿಹವು ಬಡಜನರ ಕಣ್ಣಿಂದ ನೀರು॥

ಹೃದಯದ್ರಾವಕ ಸನ್ನಿವೇಶವನ್ನು ಬಣ್ಣಿಸಿ, ಕೊನೆಗೆ"ಕ್ಷಾಮದೇವಿಗೆ ತನ್ನ ಧಾಮಸೇರುವಂತೆ ನೀ ಮಾಡಿ ಸಾಕು ಸಕಲ ಜೀವಕೇ" ಎಂಬ ಹಾರೈಕೆಯ ನುಡಿಗಳು ಸಾಂತ್ವನ ಹೇಳುತ್ತವೆ.

ಕವಿ ದ.ರಾ.ಬೇಂದ್ರೆಯವರನ್ನು ಕುರಿತ ಸ್ವಾಗತ ಹಾಡು ಬಹುರಮ್ಯವಾಗಿದೆ. ಮಾನವಿಯಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನಕ್ಕೆ ಬರುವಂತೆ ವ್ಯವಸ್ಥಾಪಕರು ಮಾಡಿಕೊಂಡ ಮನವಿಯನ್ನು ಕವಿ ಬೇಂದ್ರೆಯವರು ಮನ್ನಿಸದಿದ್ದುದಕ್ಕೆ ಇಡೀ ಸಮ್ಮೇಳನದ ಉತ್ಸಾಹವು ಕುಗ್ಗಿದ್ದನ್ನರಿತ ಗುಂಡಾಚಾರ್ಯರು ಕವಿ ಬೇಂದ್ರೆಯರಿಗೆ ಮಾನವಿಗೆ ಬರುವಂತೆ ಆಹ್ವಾನಿಸಿ ಒಂದು ಸ್ವಾಗತ ಹಾಡನ್ನು ಬರೆದು ಧಾರವಾಡಕ್ಕೆ ಕಳುಹಿಸಿದರು. ಸ್ವಾಗತ ಹಾಡಿನಲ್ಲಿ ನಿರೂಪಿತ ಸಾಹಿತ್ಯಸತ್ವವನ್ನು ಓದಿದ ಕವಿ ಬೇಂದ್ರೆ ಕೂಡಲೇ ಮಾನವಿಗೆ ಬಂದು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಸ್ವಾಗತ ಹಾಡು ಹೀಗೆ ಪ್ರಾರಂಭವಾಗುತ್ತದೆ:

ಸತ್ಕವೀಂದ್ರ ಬಾ ಬೇಂದ್ರೆ। ಸುಗುಣ ಸಾಂದ್ರ
ನಮ್ಮ ಮಾನವಿ ಸ್ಥಳದಿ ಅಚ್ಚಗನ್ನಡದ ನುಡಿಯ।
ಸಮ್ಮಿಲನ ಸಾಗಿಸಲು ನಿಶ್ಚಯಿಸಿದೆ॥
ನಿಮ್ಮ ಬರುವಿಕೆ ಬಯಕೆ। ಇಮ್ಮಡಿಸಿಹುದೆಮಗೆ।
ಸಮ್ಮತಿಸಿ ಬಾರಯ್ಯ ಸತ್ಕವೀಂದ್ರ ಶ್ರೀಬೇಂದ್ರೆ ಸುಗುಣೇಂದ್ರ॥

ಎಂದು ಸಂಭ್ರಮದಿಂದ ಸ್ವಾಗತಿಸಿ ಕೊನೆಯಲ್ಲಿ–

ಪ್ರೇಮದಿಂದಲಿ ನಿನ್ನ ಕಾಮಿತಾರ್ಥವಗರೆದು
ಶಾಮಸುಂದರವಿಠಲ ಸಲಹೋ ಎಂದು।
ನಾಮದಡಿ ಪ್ರಾರ್ಥಿಸುವೆ ನೀ ಮಾಡ್ವ ಉಪಕಾರ॥

ಶುಭ ಹಾರೈಸುತ್ತಾರೆ. ಆಶುಕವಿ ಗುಂಡಾಚಾರ್ಯರ ಕವಿತಾಶಕ್ತಿಯನ್ನು ವರಕವಿ ಬೇಂದ್ರೆಯವರು ಮನಸಾರೆ ಕೊಂಡಾಡಿದ್ದಾರೆ.

ಇಸ್ಪೇಟ್ ಆಟ, ಬಯಲಾಟಗಳ ಅನುಭವವಿದ್ದ ಗುಂಡಾಚಾರ್ಯರು ಇಸ್ಪೇಟ್ ಆಟದ ಮೇಲೆ ಒಂದು ಹಾಡನ್ನೇ ರಚಿಸಿದ್ದಾರೆ. ಇಸ್ಪೇಟ್ ಆಟದ ಎಲ್ಲ ಮಜಲುಗಳನ್ನೂ, ಎಲೆಗಳ ಪಕ್ಕರಂಗನ್ನೂ, ಎಕ್ಕ-ರಾಜ-ರಾಣಿ-ಗುಲಾಮರ ಚಾಲನ್ನೂ. ಜೋಕರ್‌ನ ಕೈವಾಡದ ಪಾತ್ರವನ್ನೂ ಹಾಡಿನಲ್ಲಿ ಮನಂಬುಗುವಂತೆ ಚಿತ್ರಿಸಲಾಗಿದೆ. 'ಮೂರೆಲೆ' ಆಟದ ಬಡವ-ಬಲ್ಲಿದರ ಚಲ್ಲಾಟ-ಗೋಳಾಟಗಳ ಚಮತ್ಕಾರದ ಕಟು ಸತ್ಯ ಇಲ್ಲಿ ಅನಾವರಣಗೊಳ್ಳುತ್ತದೆ.

ಜಾಣೆ ನಂಬಿದೆ ಇಸ್ಪೇಟ್ ರಾಣಿ ನೀನೊಲಿದೆನ್ನ।
ಪಾಣಿಯೊಳಗೆ ಬಂದು ಕಾಣಿಸಮ್ಮಾ॥

ಈ ಆಟದಲ್ಲಿ ಇಸ್ಪೇಟ್ ರಾಣಿ ಎಲೆಯ ಮಹತ್ವ ಹಿರಿದು. ರಾಣಿ 'ಒಲಿದರೆ ಉಪಕಾರಿ ಮುನಿದರೆ ಮನೆಗೆ ಮಾರಿ' ಎಂತಿರುವ ಇಸ್ಪೇಟ್ ಆಟದ ಗತಿಯನ್ನು ಆಧ್ಯಾತ್ಮಕ್ಕೆ ತಿರುಗಿಸಿ_

ಶಾಮಸುಂದರ ಸಾರ್ವಭೌಮರಾಣಿ।
ಶ್ರೀಮಂತ ಜೋಕರನ ಪ್ರೇಮದ ಭಗಿನಿಯೆ।
ನಾ ಮೊರೆ ಹೊಕ್ಕೆನು ನೀಮಾಡು ನೀ ಮಾಡು ಮಮ ತಾಯೆ॥

ಎಂದು ಹಾಡಿನ ಅಂತ್ಯವನ್ನು ವೇದಾಂತದ ಸಂದೇಶವಾಗಿ ಮಾರ್ಪಡಿಸಿರುವುದು ಈ ಹಾಡಿನ ಹಿರಿಮೆಯೆನಿಸಿದೆ.

ಹಾಡುಗಳ ಮಹತ್ವ : ಇಲ್ಲಿಯ ೨೫೫ ಹಾಡುಗಳು ಹಲವು ಬಗೆಯಿಂದ ಮಹತ್ವಪೂರ್ಣವಾಗಿವೆ ಮತ್ತು ವಿಶಿಷ್ಟವಾಗಿವೆ. ಇಪ್ಪತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ರಚಿತವಾದ ಈ ಹಾಡುಗಳು ದಾಸಸಾಹಿತ್ಯದಲ್ಲಿ ಒಂದು ಮಹತ್ವದ ಸ್ಥಾನವನ್ನು ಪಡೆದುಕೊಂಡಿವೆ. ಸಮಕಾಲೀನ ಹರಿದಾಸರ ಹಾಗೂ ಮಂತ್ರಾಲಯದ

ಯತಿಗಳ ಚರಿತ್ರೆಯನ್ನು ಹೇಳುವ ಇಲ್ಲಿಯ ಹಾಡುಗಳು ದಾಸಸಾಹಿತ್ಯ ಚರಿತ್ರೆಯಲ್ಲಿ ಒಂದು 'ಪುಟ್ಟ ವಿಶ್ವಕೋಶ' ದಂತಿದೆಯೆಂದರೆ ಅತಿಶಯೋಕ್ತಿಯೆನಿಸಲಾರದು. ಹರಿವೃಂದಸ್ತೋತ್ರ, ದಾಸವೃಂದ ಮತ್ತು ಸುಳಾದಿಗಳಲ್ಲಿ ಇಪ್ಪತ್ತನೆಯ ಶತಮಾನದ ದಾಸ–ಯತಿಗಳ ಚರಿತ್ರೆಯಿದೆ. ಶ್ರೀ ಐಕೂರು ನರಸಿಂಹಾಚಾರ್ಯರು, ಶ್ರೀ ಅಸ್ಕಿಹಾಳ ಗೋವಿಂದದಾಸರು. ಕೊಪ್ಪರದ ಶ್ರೀ ಭೀಮಸೇನಾಚಾರ್ಯರು, ಶಿರವಾರದ ಶ್ರೀ ರಾಮಚಂದ್ರರಾಯರು ಮತ್ತು ಶ್ರೀರಾಮಾಚಾರ್ಯರು, ಶ್ರೀ ಅಭಿನವ ಪ್ರಾಣೇಶದಾಸರು, ಶ್ರೀಗುರುಪ್ರಾಣೇಶದಾಸರು ಸಮಾವೇಶಗೊಳ್ಳುತ್ತಾರೆ.

ಅದರಂತೆ, ಶ್ರೀವರದೇಂದ್ರರು, ಶ್ರೀಸುಶೀಲೇಂದ್ರರು, ಶ್ರೀ ಜಿತಾಮಿತ್ರರು ಮೊದಲಾಗಿ ಶ್ರೀಮಂತ್ರಾಲಯದ ಯತಿಗಳ ಚರಿತ್ರೆಯಿದೆ. ಇವರುಗಳಲ್ಲದೆ ಶ್ರೀಸತ್ಯಪ್ರಮೋದ ತೀರ್ಥರು ಮತ್ತು ಶ್ರೀ ವಿದ್ಯಾಮಾನ್ಯಮುನೀಂದ್ರರ ಸ್ತೋತ್ರಗಳಿವೆ. ಇನ್ನೊಂದು ಮಹತ್ವದ ವಿಷಯವೆಂದರೆ, ಬಲ್ಲಟಗಿಯಲ್ಲಿ ಆಗಿಹೋದ ವೀರಶೈವ ಗುರುಪರಂಪರೆಯ ಶ್ರೀ ಜಡೆಸಿದ್ಧಶಿವಯೋಗಿಗಳ ಕರ್ತೃಗದ್ದುಗೆಯಿದೆ. ಇವರ ಮಹಿಮೆಯನ್ನು ಗುಂಡಾಚಾರ್ಯರು 'ಶ್ರೀಜಡೆಮುನೀಂದ್ರ' ಹಾಡಿನಲ್ಲಿ ವರ್ಣಿಸಿ, ಅವರು ಧರ್ಮಸಮನ್ವಯದ ಹಿರಿಮೆಯನ್ನು ಮೆರೆದಿದ್ದಾರೆ.

ಸಂಪಾದನೆಯ ಕಾರ್ಯ : ಗುಂಡಾಚಾರ್ಯರ ಹಾಡುಗಳನ್ನು ಒಂದೆಡೆ ಸಂಗ್ರಹಿಸಿ ಪ್ರಕಟಿಸುವ ಕಾರ್ಯ ೧೯೮೧ರಲ್ಲಿ ಪ್ರಾರಂಭವಾಯಿತು. ಈ ಮೊದಲು ಕೆಲವರಿಂದ ನಿತ್ಯ ಪಾರಾಯಣಕ್ಕಾಗಿ ಬಿಡಿಬಿಡಿಯಾಗಿ ಹಾಡುಗಳ ಚಿಕ್ಕಪುಸ್ತಕಗಳು ಬಂದಿದ್ದವು. ಆದರೆ ಸಮಗ್ರ ಹಾಡುಗಳ ಸಂಪಾದನೆಯ ಕಾರ್ಯ ನಡೆದಿರಲಿಲ್ಲ. ಮಾನವಿಯ ಶ್ರೀ ರಂಗನಾಥ ಪ್ರಕಾಶನವು ಪ್ರಥಮವಾಗಿ ಸಂಪಾದನೆಯ ಕಾರ್ಯವನ್ನು ಕೈಗೆತ್ತಿಕೊಂಡಿತು. ಆಗ ಲಭ್ಯವಾದ ಹಾಡುಗಳನ್ನು ಸಂಗ್ರಹಿಸಿ, 'ಶ್ರೀಶಾಮಸುಂದರವಿಠಲರ ಹಾಡುಗಳು' ಎಂಬ ಭಾಗ–೧, ಭಾಗ–೨ ರಲ್ಲಿ ೧೯೮೧ನೇ ಇಸ್ವಿಯಲ್ಲಿ ಪ್ರಕಟಗೊಂಡಿತು. ಎರಡೂ ಭಾಗಗಳು ಸೇರಿ ೧೬೦ ಹಾಡುಗಳು ಮಾತ್ರ ಪ್ರಕಟವಾದವು. ಗುಂಡಾಚಾರ್ಯರು ಐದುನೂರಕ್ಕೂ ಹೆಚ್ಚು ಹಾಡುಗಳನ್ನು ರಚಿಸಿದ್ದಾರೆಂದು ಕೆಲವರು ಹೇಳುತ್ತಿದ್ದು, ಈ ದಿಸೆಯಲ್ಲಿ ಸಂಗ್ರಹಕಾರ್ಯ ನಡೆಯಿತು. ಈ ಸಂಗ್ರಹಕಾರ್ಯದಲ್ಲಿ ರಾಯಚೂರು ಜಿಲ್ಲೆಯ

ಅನೇಕ ಮಹನೀಯರು ಗುಂಡಾಚಾರ್ಯರ ಹಾಡುಗಳಿರುವ ಮಾಹಿತಿಯನ್ನು ನೀಡಿದರು. ಇನ್ನೂ ಕೆಲವು ಮಹನೀಯರು ತಮ್ಮಲ್ಲಿರುವ ಹಾಡಿನ ಹಸ್ತಪ್ರತಿಗಳನ್ನು ನೀಡಿ ಪ್ರತಿಮಾಡಿಕೊಳ್ಳಲು ಸಂತೋಷದಿಂದ ಅನುಮತಿ ದಯಪಾಲಿಸಿದರು. ಅವರಲ್ಲಿ ಶ್ರೀ ಸಂಪ್ರತಿ ರಾಘವೇಂದ್ರರಾಯರು ನಮಗೆ ಕೊಟ್ಟ ಸಂಗ್ರಹದಲ್ಲಿ ೧೫೦ ಹಾಡುಗಳಿದ್ದವು. ಇನ್ನೂ ಮಿಕ್ಕ ಹಾಡುಗಳನ್ನು ಗುಂಡಾಚಾರ್ಯರ ಶಿಷ್ಯರಿಂದ ಪಡೆದುಕೊಳ್ಳಲಾಯಿತು. ಅವರುಗಳಲ್ಲಿ ಶ್ರೀ ಸಂಪ್ರತಿ ರಾಮರಾವ್, ಶ್ರೀ ಪೇಷ್ಕಾರ್ ಸುಬ್ಬಾರಾವ್, ಶ್ರೀ ದಿನ್ನಿ ಶೀನಪ್ಪ ಮತ್ತು ಶ್ರೀ ನರಸಿಂಹಾಚಾರ್ ಇವರು ಪ್ರಮುಖರು.

ಈಗ ನಮಗೆ ಲಭ್ಯವಿರುವ ೨೫೫ ಹಾಡುಗಳನ್ನು ಈ ಸಂಪುಟದಲ್ಲಿ ಸಂಗ್ರಹಿಸಿ ಸಂಪಾದಿಸಲಾಗಿದೆ. ಈವರೆಗೂ ಪ್ರಕಟಗೊಂಡ ಗುಂಡಾಚಾರ್ಯರ ಹಾಡುಗಳ ಸಂಖ್ಯೆ ೨೫೫ನ್ನು ಮೀರಿರುವಂತೆ ನಮ್ಮ ಗಮನಕ್ಕೆ ಬಂದಿರುವುದಿಲ್ಲ. ಆದುದರಿಂದ ೨೫೫ ಹಾಡುಗಳಿರುವ 'ಶ್ರೀಶಾಮಸುಂದರವಿಠಲರ ಹಾಡುಗಳು' ಈ ಸಂಪುಟವು ಸದ್ಯ ಅವರ ಸಮಗ್ರ ಹಾಡುಗಳ ಸಂಪಾದನೆಯ ಸಂಪುಟವಾಗಿದೆ. ಹಾಡುಗಳ ಸಂಗ್ರಹದ ಹಸ್ತಪ್ರತಿಗಳು ಒಂದಕ್ಕಿಂತ ಹೆಚ್ಚು ದೊರೆಯದೆಹೋದುದರಿಂದ ಪಾಠಾಂತರಕ್ಕೆ ಅನುವುಮಾಡಿಕೊಡಲಿಲ್ಲ. ಇದರಿಂದ ಇಲ್ಲಿ ಲೋಪದೋಷಗಳು ನುಸುಳಿಕೊಂಡಿರುವುದು ಸಹಜ. ಪ್ರಾಜ್ಞರು ಅವುಗಳನ್ನು ನಮ್ಮ ಗಮನಕ್ಕೆ ತಂದುಕೊಟ್ಟು ಮುಂಬರುವ ಪ್ರಕಟಣೆಯಲ್ಲಿ ದೋಷಗಳನ್ನು ತಿದ್ದಿಕೊಳ್ಳಲು ಸಹಕರಿಸಬೇಕೆಂದು ಕೋರುತ್ತೇವೆ.

ಇನ್ನು, ಹಾಡುಗಳ ಹೆಸರಿನ ಚರಣಗಳನ್ನು ಕುರಿತು ಒಂದು ಮಾತು : ಪ್ರತಿ ಹಾಡುಗಳ ಮೊದಲನೆಯ ಚರಣ ಹಾಡಿನ ಹೆಸರಾಗಿರುವುದು ಸಾಮಾನ್ಯ ರೂಢಿ. ಆದರೆ ಈ ಸಂಪುಟದ ಹಾಡುಗಳ ಹೆಸರಿನ ಚರಣಗಳು ಮೊದಲನೆಯ ಚರಣವಾಗಿರುವುದಿಲ್ಲ. ಅದು ಹಾಡಿನ ಅರ್ಥಪೂರ್ಣವಾದ ಒಂದು ಚರಣವಾಗಿರುತ್ತದೆ. ಅದು ಹಾಡಿನ ಮೊದಲನೆಯ, ಇಲ್ಲವೆ ಕೊನೆಯ, ಇಲ್ಲವೆ ಒಡಲಿನ ಒಂದು ಚರಣವಾಗಿರುತ್ತದೆ. ಆದ್ದರಿಂದ ವಾಚಕಮಹಾಶಯರು ಹಾಡಿನ ಹೆಸರಿನ ಚರಣದಲ್ಲಿ ಮಾಡಿದ ಬದಲಾವಣೆಯನ್ನು ಗಮನದಲ್ಲಿಟ್ಟುಕೊಳ್ಳಲು ಕೋರುತ್ತೇವೆ.

ಉಪಸಂಹಾರ : ಗುಂಡಾಚಾರ್ಯರು ಇಪ್ಪತ್ತನೆಯ ಶತಮಾನದ ಮತ್ತು ದಾಸಸಾಹಿತ್ಯದ ಮೂರನೆಯ ಘಟ್ಟದ ಕೊನೆಯ ಭಾಗದಲ್ಲಿ ಆಗಿಹೋದ ಪ್ರಮುಖ ದಾಸಶ್ರೇಷ್ಠರು, ಆಶುಕವಿಗಳು. ದಾಸ ಪರಂಪರೆಯಲ್ಲಿ ಸಾಗಿಬಂದರೂ ಆಧುನಿಕತೆಯನ್ನು ಮೇಳೈಸಿಕೊಂಡ ಅವರದು ವಿಶಿಷ್ಟ ವ್ಯಕ್ತಿತ್ವ. ಅವರು ಅಂತ್ಯಜರಿಗೆ ದಾಸದೀಕ್ಷೆಯನ್ನು ನೀಡಿ, ಅವರ ಪಾರಿಶುದ್ಧತೆಗಾಗಿ ಶ್ರಮಿಸಿದ ವಿಚಾರಪುರುಷರು. ಬಯಲಾಟದಂಥ ಜಾನಪದ ಕಲೆಯನ್ನು ಪ್ರೋತ್ಸಾಹಿಸಿದ ಜಾನಪದ ತಜ್ಞರು. ಆಚಾರಕ್ಕಿಂತ ವಿಚಾರಗಳಿಗೆ ಮಹತ್ವಕೊಟ್ಟ ಬಂಡಾಯ ಮನೋಧರ್ಮದ ಮನುಜಶ್ರೇಷ್ಠರು. ಇಂಥ ಅಮೋಘ ಗುಣಗಳನ್ನು ಪಡೆದ ಗುಂಡಾಚಾರ್ಯರ ಹಾಡುಗಳು ಮೌಲಿಕವಾಗಿವೆ, ವೈಶಿಷ್ಟ್ಯ ಪೂರ್ಣವಾಗಿವೆ. ಇಪ್ಪತ್ತನೆಯ ಶತಮಾನದಲ್ಲಿ ಆಗಿಹೋದ ದಾಸ-ಯತಿಗಳನೇಕರ ಚರಿತ್ರೆಗಳುಳ್ಳ ಹಾಡುಗಳು ಒಂದು 'ಪುಟ್ಟ ವಿಶ್ವಕೋಶ' ವಾಗಿದೆ. ಇದಕ್ಕೆ ದಾಸ ಸಾಹಿತ್ಯ ಚರಿತ್ರೆಯಲ್ಲಿಯೇ ಒಂದು ಮಹತ್ವಸ್ಥಾನ. ಅಂತೆಯೇ, 'ಶ್ರೀ ಶಾಮಸುಂದರವಿಠಲರ' ಹಾಡುಗಳ ವ್ಯಾಪಕ ಪ್ರಚಾರ ಮತ್ತು ಅಧ್ಯಯನಗಳು ಇಂದು ನಡೆಯಬೇಕಾಗಿದೆ.

ಕೃತಜ್ಞತೆಗಳು

'ಶ್ರೀ ಶಾಮಸುಂದರವಿಠಲರ ಹಾಡುಗಳು' ಸಂಪುಟ ಪ್ರಕಟನೆಗೆ ಅನೇಕ ಮಹನೀಯರು ನಮಗೆ ಸಹಾಯ-ಸಹಕಾರಗಳನ್ನು ನೀಡಿದ್ದಾರೆ. ಅವರ ಉಪಕಾರವನ್ನು ಸ್ಮರಿಸುವುದು ನಮ್ಮ ಆದ್ಯಕರ್ತವ್ಯವೆಂದು ನಾವು ಭಾವಿಸಿದ್ದೇವೆ. ಸಮಗ್ರ ದಾಸವಾಙ್ಮಯ ಪ್ರಕಟನ ಯೋಜನೆಯಡಿಯಲ್ಲಿಯ ೩೦ನೆಯ ಸಂಪುಟವನ್ನು ಸಂಪಾದಿಸಿಕೊಡಲು ನಮಗೆ ಅವಕಾಶ ಕಲ್ಪಿಸಿಕೊಟ್ಟ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಅಧಿಕಾರಿಗಳಿಗೂ ಹಾಗೂ ಕಾರ್ಯನಿರ್ವಾಹಕ ಸಂಪಾದಕಮಂಡಳಿಗೂ ಕೃತಜ್ಞತೆಗಳು ಸಲ್ಲಲೇಬೇಕು.

ಈ ಸಂಪುಟದ ಸಂಪಾದನೆಯ ಕಾರ್ಯದಲ್ಲಿ ವಿಳಂಬಮಾಡುವ ಮೂಲಕ ನಾವು ಕೊಟ್ಟ ಹಿಂಸೆ, ತೊಂದರೆಗಳನ್ನು ಪ್ರೀತಿಯಿಂದ ಸಹಿಸಿಕೊಂಡು ಸಂಪುಟದ ಸಂಪಾದನೆಯ ಕಾರ್ಯ ಪೂರ್ಣವಾಗುವವರೆಗೂ ನಮಗೆ ಸಲಹೆ ಸಹಕಾರಗಳನ್ನು ನೀಡಿ ಸಂಪುಟದ ಪ್ರಕಟನೆಗೆ ಸದಾ ಪ್ರೋತ್ಸಾಹ ನೀಡಿದ ಕಾರ್ಯನಿರ್ವಾಹಕ

ಸಂಪಾದಕರಲ್ಲಿ ಒಬ್ಬರಾದ ಕಲಬುರ್ಗಿಯ ಪ್ರಸಿದ್ಧ ಸಾಹಿತಿಗಳೂ, ಹಿರಿಯರೂ, ಅಭಿಮಾನಿಗಳೂ ಆದ ಪ್ರೊ॥ ವಸಂತ ಕುಷ್ಟಗಿಯವರನ್ನು ಸ್ಮರಿಸದೆ ಇರಲಾರೆವು.

ಸಂಪಾದನೆಯ ಕಾರ್ಯದಲ್ಲಿ ನಮ್ಮನ್ನು ಸದಾ ಪ್ರೋತ್ಸಾಹಿಸುತ್ತಬಂದ ರಾಯಚೂರಿನ ಹಿರಿಯರಾದ ದಿವಂಗತ ಡಾ॥ಮಂದಾಕಿನಿ, ಶ್ರೀ ಕೆ.ಗುರುರಾವ್, ಶ್ರೀ ಎನ್.ಕೆ.ಕುಲಕರ್ಣಿ ಅವರಿಗೂ ಹಾಗೂ ನಾಡಿನ ದಾಸಸಾಹಿತ್ಯಾಭಿಮಾನಿಗಳಿಗೂ ಅನಂತ ಕೃತಜ್ಞತೆಗಳು.

ಇನ್ನೊಂದು ಮನೋವೇದನೆಯ ವಿಷಯ: ಈ ಸಂಪುಟದ ಸಂಪಾದಕರ–ಲ್ಲೊಬ್ಬರಾದ ನನ್ನ ನಿರ್ವ್ಯಾಜ ಸನ್ಮಿತ್ರರಾದ ಮಾನವಿಯ ಶ್ರೀ ಎನ್.ಹನುಮನಗೌಡರು, ವಕೀಲರು, ಸಂಪುಟ ಪ್ರಕಟವಾಗುವ ಮುನ್ನ (ಜನವರಿ ೨೦೦೨ ಇಸ್ವಿ) ದೈವಾಧೀನರಾದರು. ಈ ಸಂಪುಟದ ರಚನೆಯಲ್ಲಿ ಅವರ ಶ್ರಮ ಅನುಪಮ. ಅವರು ದಾಸಸಾಹಿತ್ಯದ ಪ್ರಕಟಣೆ–ಪ್ರಸಾರಕ್ಕಾಗಿ ಇನ್ನೂ ನಮ್ಮೊಂದಿಗೆ ಇರಬೇಕಾಗಿತ್ತು. ದೈವೇಚ್ಛೆಗೆ ನಾವು ತಲೆಬಾಗಲೇಬೇಕು. ದಿವಂಗತ ಎನ್. ಹನುಮನಗೌಡರಿಗೆ ಕಂಬನಿಮಿಡಿದು, ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

ಪ್ರೊ.ಶಾಶ್ವತಸ್ವಾಮಿ ಮುಕ್ಕುಂದಿಮಠ
ವಿಶ್ರಾಂತ ಪ್ರಾಂಶುಪಾಲರು ಸಿಂಧನೂರು.
ಸಂಪಾದಕರು.

ಶ್ರೀ ತಿಮ್ಮಪ್ಪದಾಸರು ಹಾಗೂ ಇತರ ಹರಿದಾಸರು

೧ : ಪೀಠಿಕೆ

ಕನ್ನಡ ಹರಿದಾಸ ಸಾಹಿತ್ಯವನ್ನು ಮುಖ್ಯವಾಗಿ ಮಾಧ್ವ ಸಂಪ್ರದಾಯದಲ್ಲೇ ಗುರುತಿಸುವುದು ವಾಡಿಕೆ. ೧೪ನೇ ಶತಮಾನದಿಂದ ಇದರ ಇತಿಹಾಸವನ್ನು ಗುರುತಿಸುತ್ತೇವೆ. ಈ ವೇಳೆಗಾಗಲೆ ಕರ್ನಾಟಕದಲ್ಲಿ ಸ್ಮಾರ್ತ, ಮಾಧ್ವ ಮತ್ತು ಶ್ರೀವೈಷ್ಣವ ಈ ಮೂರೂ ತತ್ವಗಳು ಆಳವಾಗಿ ಬೇರೂರಿ ಜನಜನಿತವಾಗಿದ್ದವು. ೧೨ನೇ ಶತಮಾನದಲ್ಲಿ ವ್ಯಾಪಕವಾಗಿ ಬೆಳೆದ ಜನಪರಸಾಹಿತ್ಯವಾದ ವಚನಸಾಹಿತ್ಯದ ನಂತರ ಕನ್ನಡ ಸಾಹಿತ್ಯ ತನ್ನ ಅಸ್ತಿತ್ವವನ್ನು ಜನಗಳ ನಡುವೆಯೇ ಗುರುತಿಸಿಕೊಳ್ಳುವ ಅನಿವಾರ್ಯತೆಗೆ ಬದ್ಧವಾಯಿತು. ವೈದಿಕಧರ್ಮ ಸಂಪೂರ್ಣವಾಗಿ ಸಂಸ್ಕೃತ ಭೂಯಿಷ್ಠವಾಗಿದ್ದು ಧಾರ್ಮಿಕ ವಿಧಿವಿಧಾನಗಳೆಲ್ಲ ಸಂಸ್ಕೃತಭಾಷೆಯಲ್ಲೇ ನಡೆಯುತ್ತಿತ್ತು. ವಚನಧರ್ಮದ ಪ್ರಚಂಡ ಜನಪ್ರಿಯತೆಯ ಹಿನ್ನೆಲೆಯಲ್ಲಿ ವೈದಿಕಧರ್ಮದ ಉಳಿವಿಗೆ ಈ ಮಡಿವಂತಿಕೆ ಸಾಧ್ಯವಿಲ್ಲ ಎಂದು ಮನವರಿಕೆಯಾದ ಮಾಧ್ವಯತಿಗಳಿಂದ ಕನ್ನಡದಲ್ಲಿ ಹರಿದಾಸಸಾಹಿತ್ಯ ಮೂಡಿಬಂದಿತು. ಆದ್ದರಿಂದಲೇ ಸಹಜವಾಗಿ ಮಾಧ್ವಧರ್ಮದ ಮುಖವಾಣಿಯಾಗಿ ಈ ಸಾಹಿತ್ಯ ಪ್ರವಹಿಸಿತು. ಇದರಲ್ಲಿ ಪ್ರತಿರೋಧ ಕಂಡುಬಂದು ಸಂಸ್ಕೃತಪ್ರಿಯರು 'ವ್ಯಾಸಕೂಟ'ವನ್ನು ಮಾಡಿಕೊಂಡು ಕನ್ನಡ ಪರವಾದ 'ದಾಸಕೂಟ'ದಿಂದ ಪ್ರತ್ಯೇಕವಾಗಿ ಉಳಿದರೂ ದಾಸಕೂಟ ಅವಿಚ್ಛಿನ್ನ ಜಯಭೇರಿಯನ್ನು ಸಾಧಿಸಿತು. ಜನಸಾಮಾನ್ಯರು ಇದರ ಅಧ್ವರ್ಯುಗಳಾಗಿ (ಕನಕ, ಪುರಂದರ, ಇತ್ಯಾದಿ) ಜನಮನದಲ್ಲಿ ವೈದಿಕ ಧರ್ಮವನ್ನು, ಅದು ಸಾರುವ ಮಾನವಧರ್ಮವನ್ನು ಕೀರ್ತನೆಗಳ ಮೂಲಕ ಸ್ಥಿರಗೊಳಿಸಿದರು.

ಈ ಸಾಮಾಜಿಕ ಕಾರ್ಯಕ್ಕೆ ವಾಸ್ತವವಾಗಿ ಧರ್ಮದ ಕಟ್ಟುಪಾಡು ಇರಲಿಲ್ಲ. ದಾಸಸಾಹಿತ್ಯ ಕಾಣಿಸಿಕೊಂಡ ಆರಂಭಕಾಲದಲ್ಲೇ ಅದ್ವೈತ ತತ್ವ ಪ್ರತಿಪಾದಕರಾದ

ಮಹೀಪತಿದಾಸರು ವಿಶಿಷ್ಟಾದ್ವೈತಿಗಳಾದ ಬೇಲೂರು ವೈಕುಂಠದಾಸರುಗಳೂ ಕಾಣಸಿಗುತ್ತಾರೆ, ಇವರು ಆಯಾ ಧರ್ಮದ ತತ್ವಗಳನ್ನು ಇದೇ ಕೀರ್ತನೆಗಳ ಮೂಲಕ ಪ್ರವಹಿಸಿದ್ದಾರೆ. ಆದರೆ ಮುಖ್ಯ ಪ್ರವೇಶ ಮಾಧ್ವಮತವಾದ್ದರಿಂದ ಮಾಧ್ವಪೀಠಗಳ ಮೂಲಕವೇ ಇದರ ಮುಂದುವರಿಕೆಯಿದ್ದುದರಿಂದ ಇವರ ಮಾತುಗಳು ಇಲ್ಲಿ ಗೌಣವಾಗಿ ಇವರನ್ನೂ ಮುಖ್ಯವಾಹಿನಿಯಲ್ಲೇ ಗುರುತಿಸತೊಡಗಿದುದರಿಂದ ಹರಿದಾಸಸಾಹಿತ್ಯ ಎಂದರೆ ಮಾಧ್ವಪರಂಪರೆ ಎಂಬ ಅಭಿಪ್ರಾಯವೇ ಮೂಡಿತ್ತು.

೧೯೭೦ರ ದಶಕದಲ್ಲಿ ಪ್ರೊ॥ ಎಂ.ವಿ.ಸೀತಾರಾಮಯ್ಯನವರು ತಮ್ಮ ವಂಶಸ್ಥರೇ ಆದ ತಿಮ್ಮಪ್ಪದಾಸರ ಕೀರ್ತನೆಗಳನ್ನು ಪ್ರಕಟಿಸುವುದರ ಮೂಲಕ ಈ ಹರಿದಾಸ ಸಾಹಿತ್ಯದಲ್ಲಿ ಅದ್ವೈತ ಪರಂಪರೆಯೂ ಬೆಳೆದುಬಂದಿದೆ ಎಂಬುದನ್ನು ಕನ್ನಡ ಸಾಹಿತ್ಯಕ್ಕೆ ಪರಿಚಯಿಸಿಕೊಟ್ಟರು. ಅಂದಿನಿಂದ ಕನ್ನಡ ಹರಿದಾಸ ಸಾಹಿತ್ಯದಲ್ಲಿ ಮಾಧ್ವ ಸಂಪ್ರದಾಯದೊಂದಿಗೆ ಸ್ಮಾರ್ತಸಂಪ್ರದಾಯವೂ ಇದೆ ಎಂಬುದನ್ನು ವಿದ್ವಾಂಸರು ಗುರುತಿಸತೊಡಗಿದರು.

ಹಿಂದೂಧರ್ಮದ ಇನ್ನೊಂದು ಮುಖ್ಯವಾಹಿನಿಯಾದ ವಿಶಿಷ್ಟಾದ್ವೈತ ತತ್ವದಲ್ಲಿಯೂ ಈ ಕೀರ್ತನ ಪರಂಪರೆ ಏಕಿರಬಾರದು ಎಂಬ ಪ್ರಶ್ನೆಗೆ ಉತ್ತರವಾಗಿ ಪ್ರಸ್ತುತ ಸಂಪಾದಕನ ಸಂಶೋಧನೆಯಿಂದ ೧೯೯೦ರ ದಶಕದಲ್ಲಿ ಶ್ರೀವೈಷ್ಣವ ಕೀರ್ತನಕಾರರೂ ಕನ್ನಡ ಸಾಹಿತ್ಯಕ್ಕೆ ಪರಿಚಿತರಾದರು. ಪುರಂದರದಾಸ–ಕನಕದಾಸರ ಸಮಕಾಲೀನರಾದ ಬೇಲೂರು ವೈಕುಂಠದಾಸರನ್ನೇ ಆದ್ಯ ಶ್ರೀವೈಷ್ಣವ ಕೀರ್ತನಕಾರರೆಂದು ಗುರುತಿಸಲಾಗಿದ್ದು ಅಲ್ಲಿಂದ ಇಲ್ಲಿಯವರೆಗೆ (೨೦ನೇ ಶತಮಾನದ ವರೆಗೆ) ೧೫ಕ್ಕೂ ಹೆಚ್ಚು ಜನ ಶ್ರೀವೈಷ್ಣವ ಹರಿದಾಸರು ಕಾಣಿಸಿಕೊಂಡಿದ್ದು ೧೫೦೦ಕ್ಕೂ ಅಧಿಕ ಕೀರ್ತನೆಗಳು ಶೋಧನೆಯಾಗಿವೆ.

ಹೀಗೆ ದ್ವೈತ, ಅದ್ವೈತ, ವಿಶಿಷ್ಟಾದ್ವೈತ – ಈ ಮೂರು ಪರಂಪರೆಗಳಲ್ಲಿ ಕನ್ನಡ ಕೀರ್ತನ ಸಾಹಿತ್ಯ ವಿಪುಲವಾಗಿ ಬೆಳೆದಿದೆ. ಇದೀಗ ಕರ್ನಾಟಕ ಸರ್ಕಾರ ಸಮಗ್ರ ದಾಸಸಾಹಿತ್ಯ ಪ್ರಕಟನ ಯೋಜನೆಯೊಂದನ್ನು ಹೊರತಂದಿದ್ದು, ಇದರಲ್ಲಿ ಸು.೩೫ ಸಂಪುಟಗಳು ಇವೆ. ಪ್ರತಿ ಸಂಪುಟದಲ್ಲಿ ಕನಿಷ್ಠ ೫೦೦ ಕೀರ್ತನೆಗಳೆಂದರೂ ೧೬ ಸಾವಿರ ಕೀರ್ತನೆಗಳ ಸಂಗ್ರಹ ಇದರಿಂದಾಗುತ್ತದೆ. ಇದರಲ್ಲಿ ಈವರೆಗೆ ಪ್ರಕಟವಾಗಿರುವ

ಕೀರ್ತನೆಗಳೊಂದಿಗೆ ಅಪ್ರಕಟಿತ ಕೀರ್ತನೆಗಳೂ ನೂತನ ಸಂಶೋಧನೆಯ ಕೀರ್ತನಕಾರರೂ ಸೇರ್ಪಡೆಯಾಗಿದ್ದರೂ ಇದರಾಚೆಗೂ ಸಂಶೋಧನೆಯ ಮೂಲಕ ಬೆಳಕು ಕಾಣಬೇಕಾದ ಕೀರ್ತನಕಾರರು ಇನ್ನೂ ಉಳಿದಿರುತ್ತಾರೆ. ಇದರಲ್ಲಿ ೩-೪ ಸಂಪುಟಗಳಲ್ಲಿ ಅದ್ವೈತ ಕೀರ್ತನೆಗಳೂ ಅಷ್ಟೇ ಸಂಪುಟಗಳಲ್ಲಿ ವಿಶಿಷ್ಟಾದ್ವೈತ ಕೀರ್ತನೆಗಳೂ ಪ್ರಕಟವಾಗುವುದರ ಮೂಲಕ ಕನ್ನಡ ಕೀರ್ತನ ಸಾಹಿತ್ಯ ಕೇವಲ ಮಾಧ್ವ ಸಂಪ್ರದಾಯದ್ದು ಎಂಬ ಧೋರಣೆ ಬದಲಾಗಿ ಮೂರೂ ಸಂಪ್ರದಾಯಗಳಿಂದ ಕೂಡಿದ ಒಟ್ಟು ವೈದಿಕ ಧರ್ಮದ ಕೊಡುಗೆ ಎಂಬ ಅಭಿಪ್ರಾಯ ಸ್ಥಿರವಾಗುತ್ತದೆ. ಈ ಆಲೋಚನೆಯ ಹಿನ್ನೆಲೆಯಲ್ಲಿ ಇಡೀ ಕೀರ್ತನ ಸಾಹಿತ್ಯಕ್ಕೆ ಹೊಸ ವ್ಯಾಖ್ಯಾನದ, ಪುನರ್ಮೌಲ್ಯ ವಿವೇಚನೆಯ ಅಗತ್ಯವಿದ್ದು ಹೊಸ ಸಹಸ್ರಮಾನದ ಹೊಸ ಶತಮಾನ ಇತ್ತ ಗಮನಹರಿಸಬೇಕಾಗಿದೆ.

ಅ) ಕನ್ನಡ ಸಾಹಿತ್ಯದಲ್ಲಿ ಅದ್ವೈತ

ನಾಗವರ್ಮ, ಬಸವಣ್ಣ, ದುರ್ಗಸಿಂಹ, ಜನ್ನ, ರುದ್ರಭಟ್ಟ ಮೊದಲಾದ ಕವಿಗಳನ್ನು ವಿದ್ವಾಂಸರು ಸ್ಮಾರ್ತಮತೀಯರು ಎಂದು ಪ್ರಾಚೀನ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹೆಸರಿಸಿದ್ದಾರೆ. ಮತೀಯವಾಗಿ ಇವರು ಅದ್ವೈತಿಗಳಾದರೂ ಇವರ ಕೃತಿಗಳು ಮತಾತೀತವಾಗಿ ಮಾನವಧರ್ಮವನ್ನು ಪ್ರತಿಪಾದನೆ ಮಾಡುತ್ತವೆ ಮತ್ತು ಧರ್ಮಕ್ಕಿಂತ ಇವು ಸಾಹಿತ್ಯಕೃತಿಗಳಾಗಿ ಮುಖ್ಯವಾಗುತ್ತವೆ. ಇವನ್ನು ಬಿಟ್ಟರೆ ಅದ್ವೈತಧರ್ಮವನ್ನೇ ನೇರವಾಗಿ ಪ್ರತಿಪಾದಿಸುವ ಕೆಲವು ಕೃತಿಗಳನ್ನು ಒಂದೆಡೆ ಸಮೀಕ್ಷಿಸಲಾಗಿದೆ. ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ ೧೯೮೯ರಲ್ಲಿ 'ಕನ್ನಡ ಸಾಹಿತ್ಯದಲ್ಲಿ ಅದ್ವೈತ' ಎಂಬ ವಿಚಾರ ಗೋಷ್ಠಿಯೊಂದನ್ನು ಏರ್ಪಡಿಸಿ ಅದರಲ್ಲಿ ಮಂಡಿತವಾದ ಪ್ರಬಂಧಗಳನ್ನು ಅದೇ ವರ್ಷ ಅದೇ ಹೆಸರಿನಲ್ಲಿ ಪುಸ್ತಕರೂಪದಲ್ಲಿ ಪ್ರಕಟಿಸಿದೆ. ಇದೊಂದು ಪ್ರಯತ್ನವನ್ನು ಬಿಟ್ಟರೆ ಬೇರೆ ಪ್ರಯತ್ನ ನಡೆದಂತೆ ಕಂಡುಬರುವುದಿಲ್ಲ. ಹಾಗೆ ನೋಡಿದರೆ ದ್ವೈತ ಮತ್ತು ವಿಶಿಷ್ಟಾದ್ವೈತಗಳಿಗೆ ಇಂಥ ಪ್ರಯತ್ನವೂ ಆದಂತೆ ತೋರುವುದಿಲ್ಲ.

ವಾಸ್ತವವಾಗಿ ಸಾಹಿತ್ಯಕ್ಕೆ ಈ ರೀತಿ ಧರ್ಮದ ಚೌಕಟ್ಟನ್ನು ತೊಡಿಸಬಾರದು, ಸಾಹಿತ್ಯ ಯಾವಾಗಲೂ ಧರ್ಮವನ್ನು ಮೀರಿದ್ದು ಎಂಬ ಪ್ರಬಲ ವಿಮರ್ಶನಪ್ರಜ್ಞೆ ಪ್ರಚಲಿತವಾಗಿದ್ದರೂ ಇತಿಹಾಸ ಮತ್ತು ಸಂಶೋಧನೆಯ ದೃಷ್ಟಿಯಿಂದ ಸಾಹಿತ್ಯದ

ಈ ವೈಶಿಷ್ಟ್ಯಕ್ಕೆ ಕಾರಣವಾದ ಮೂಲ ಪ್ರೇರಣೆಯೂ ಮುಖ್ಯವಾಗುತ್ತದೆ. ಯಾವುದೇ ಕವಿ ಹುಟ್ಟುತ್ತಲೇ ಧರ್ಮಾತೀತವಾಗಿರುವುದಿಲ್ಲ. ಯಾವುದಾದರೂ ಒಂದು ಧರ್ಮಕ್ಕೆ ಅಂಟಿಕೊಂಡೇ ಇರುತ್ತಾನೆ ಮತ್ತು ಆ ಧರ್ಮದ ತತ್ವಗಳ ಪ್ರಭಾವದಿಂದಲೇ ಬೆಳೆದಿರುತ್ತಾನೆ. ಆನಂತರ ಅವನ ವಿಮರ್ಶನ ಮನೋಧರ್ಮ ಧರ್ಮವನ್ನು ಮೀರಿ ಬೆಳೆಯುತ್ತದೆ. ಹೀಗೆ ಇವನನ್ನು ಬೆಳೆಸಿದ ಮೂಲಧರ್ಮದ ಕೊಡುಗೆ ಇಲ್ಲಿ ಮುಖ್ಯವಾಗುತ್ತದೆ. ಈ ಸತ್ಯವನ್ನು ಕಡೆಗಣಿಸುವುದು ಒಂದು ರೀತಿಯಲ್ಲಿ ಸಾಹಿತ್ಯಕ್ಕಾಗಲಿ ಇತಿಹಾಸಕ್ಕಾಗಲಿ ಅಪಚಾರ ಮಾಡಿದಂತೆಯೇ ಸರಿ. ಆದ್ದರಿಂದ ಈ ಸತ್ಯವನ್ನು ದಾಖಲಿಸುವುದು ಒಬ್ಬ ನಿಜವಾದ ಇತಿಹಾಸಜ್ಞನ, ಸಂಶೋಧಕನ ಕರ್ತವ್ಯವಾಗುತ್ತದೆ. ಈ ದೃಷ್ಟಿಯಲ್ಲಿ ಸಾಹಿತ್ಯದ ಅಧ್ಯಯನ ಧರ್ಮದ ದೃಷ್ಟಿಯಲ್ಲಿ ನಡೆದರೆ ಅದಕ್ಕೆ ಹಿಂಜರಿಯುವಿಕೆಯಾಗಲಿ ಮೂಗೆಳೆಯುವಿಕೆಯಾಗಲಿ ಅಗತ್ಯವಿಲ್ಲ.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಕ್ರಿ.ಶ. ೧೦೭೧ರ ಶಾಸನೋಕ್ತಮುನಿ 'ಗುಣಗಳ್ಳ'ನಿಂದ ಅದ್ವೈತ ಪರಂಪರೆ ಪ್ರಾರಂಭವಾಯಿತೆಂದು ಸೀತಾರಾಮಯ್ಯನವರು ನಿರೂಪಿಸುತ್ತ; ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅಂದರೆ ಹೊಸಗನ್ನಡದ ಅರುಣೋದಯ ಕಾಲವಾದ ೧೭-೧೮ನೇ ಶತಮಾನದಿಂದ ಕನ್ನಡ ಸಾಹಿತ್ಯದಲ್ಲಿ ಅದ್ವೈತದ ಪ್ರಭಾವ ಸ್ಪಷ್ಟವಾಗಿ ಗೋಚರವಾಗುತ್ತದೆಂದೂ ಚಿಕ್ಕನಾಯಕನಹಳ್ಳಿಯ ವಾಸುದೇವಾರ್ಯರೂ ಶಿಷ್ಯರಾದ ಕೃಷ್ಣಯೋಗೀಂದ್ರ ಹಾಗೂ ಗೋಪಾಲಾರ್ಯರೂ ಇದರ ಪ್ರವರ್ತಕ- ರಾಗಿರಬಹುದೆಂದೂ ಊಹಿಸುತ್ತಾರೆ. ಡಾ॥ ತಾರಾನಾಥ್ ಅವರು ಅವಧೂತ ಪಂಥದಿಂದ ಇದರ ಆರಂಭವಾಯಿತೆಂದು 'ಸಚ್ಚಿದಾನಂದ' ಎಂಬುವವನು ಇದರ ಮೊದಲಿಗನೆಂದೂ ಹೇಳುತ್ತಾರೆ. ಈ ಸಚ್ಚಿದಾನಂದ ಯಾರು ಎಂಬುದು ಇನ್ನು ನಿರ್ಧಾರವಾಗಬೇಕಾಗಿದೆ. (ಕೆಲವರು ೧೬೨೨-೧೬೮೮ರ ಅವಧಿಯಲ್ಲಿದ್ದ ಶೃಂಗೇರಿ ಮಠಾಧಿಪತಿಗಳಾದ 'ಸಚ್ಚಿದಾನಂದ ಭಾರತಿ' ಎಂದು ಸಮೀಕರಿಸಿದರೂ ಅವರು ಅವಧೂತರಾಗಿದ್ದವರಲ್ಲ) ಇವನ ನಂತರ ಇವನ ಶಿಷ್ಯ 'ಮಹಲಿಂಗರಂಗ'ನಿಂದ ಇದು ಹೆಚ್ಚು ಪ್ರಾಚುರ್ಯವನ್ನು ಪಡೆದಂತೆ ತೋರುತ್ತದೆ. ಮಹಲಿಂಗರಂಗನ 'ಅನುಭವಾಮೃತ'ವೇ ಆಧುನಿಕ ಕನ್ನಡ ಸಾಹಿತ್ಯದ ಅದ್ವೈತ ತತ್ವ ಪ್ರತಿಪಾದನೆಗೆ ಮುಖ್ಯಪ್ರೇರಣೆ ಎಂದು ಎಲ್ಲ ವಿದ್ವಾಂಸರೂ ಉಲ್ಲೇಖಿಸುತ್ತಾರೆ. ಮುಂದೆ ಇವನ ಶಿಷ್ಯರಾದ ಬ್ರಹ್ಮಾನಂದ, ನಿಜಾನಂದ ಮತ್ತು ಮುಖ್ಯವಾಗಿ 'ಚಿದಾನಂದ'ರು ಈ ಪರಂಪರೆಯನ್ನು ಬೆಳೆಸಿದುದರ ಪರಿಣಾಮವಾಗಿ

ವಿಪುಲವಾಗಿ ಅದ್ವೈತ ಚಿಂತನೆ ಕಾಣಿಸಿಕೊಂಡಿದೆ. ಈ ಚಿದಾನಂದವಧೂತರೇ ಅದ್ವೈತ ಕೀರ್ತನ ಸಾಹಿತ್ಯದ ಆದ್ಯರು ಎಂದು ಒಂದು ಅಭಿಪ್ರಾಯವಿದೆ. ಇವರ ಸಮಕಾಲೀನರಾದ ಚಿಕ್ಕನಾಯ್ಕನಹಳ್ಳಿಯ ವಾಸುದೇವಯತಿಗಳು ಮತ್ತು ಇವರ ಶಿಷ್ಯಪರಂಪರೆ ಹಾಗೂ ಆನಂದಪಂಥದ ಪರಂಪರೆ ಇವೆಲ್ಲ ದಕ್ಷಿಣ ಕರ್ನಾಟಕದ ಭಾಗದಲ್ಲಿ ಅದ್ವೈತ ತತ್ವವನ್ನು ಬೆಳೆಸಿದರೆ ಉತ್ತರ ಕರ್ನಾಟಕದಲ್ಲಿ ಕವಿ ಹರಿದಾಸ, ಕವಿ ಪರಮದೇವ ಮುಂತಾದವರೂ ಅದ್ವೈತ ತತ್ವ ಪರಂಪರೆಯನ್ನು ಮುಂದುವರಿಸಿದ್ದಾರೆ ಎನ್ನಬಹುದು. ಈ ಅವಧಿಯಲ್ಲಿ ನೇರವಾಗಿ ಅದ್ವೈತ ತತ್ವವನ್ನೇ ಪ್ರತಿಪಾದಿಸುವ ಹಲವು ಗ್ರಂಥಗಳು ರಚನೆಯಾಗಿದ್ದು ಅವುಗಳಲ್ಲಿ ಚಿದಾನಂದಾವಧೂತರ 'ಜ್ಞಾನಸಿಂಧು' ವಾಸುದೇವಾರ್ಯರ 'ವಾಸುದೇವಮನನ' ಮುಂತಾದ ಕೃತಿಗಳು ಅನೇಕ ಪ್ರತಿಗಳನ್ನು ಕಂಡಿದ್ದವಲ್ಲದೆ ತೆಲುಗು, ಸಂಸ್ಕೃತಾದಿ ಅನ್ಯಭಾಷೆಗಳಿಗೂ ಅನುವಾದವಾಗುವಷ್ಟು ಜನಪ್ರಿಯವಾಗಿದ್ದವು.

ಈ ಅದ್ವೈತ ತತ್ವ ಚಿಂತಕರು ತತ್ವಪ್ರತಿಪಾದಕ ಕೃತಿಗಳನ್ನಷ್ಟೇ ಬರೆಯದೆ ಅವುಗಳ ಜೊತೆಗೇ ಸರಳವಾದ ಹಾಡುಗಳನ್ನು ರಚಿಸುವ ಮೂಲಕ ಅದ್ವೈತ ಕೀರ್ತನ ಪರಂಪರೆಗೆ ನಾಂದಿ ಹಾಡಿದ್ದಾರೆನ್ನಬಹುದು. ಹೀಗೆ ೧೭–೧೮ನೇ ಶತಮಾನದಲ್ಲಿ ವಿಪುಲವಾಗಿ ಬೆಳೆದ ಅದ್ವೈತ ಚಿಂತನೆಯ ಪರಿಣಾಮವಾಗಿ ಅದು ಸರಳವಾದ ಮತ್ತು ಜನಪ್ರಿಯವಾಗಿದ್ದ ಹಾಗೂ ಜನಸಾಮಾನ್ಯರ ಹತ್ತಿರಕ್ಕೆ ಸುಲಭವಾಗಿ ಹೋಗಬಹುದಾದ ಕೀರ್ತನೆಗಳಲ್ಲೂ ಕಾಣಿಸಿಕೊಳ್ಳುವ ಮೂಲಕ ಕನ್ನಡ ಕೀರ್ತನ ಸಾಹಿತ್ಯದಲ್ಲಿ ಅದ್ವೈತದ ಪ್ರವೇಶವಾಯಿತು.

ಆ) ಕೀರ್ತನ ಸಾಹಿತ್ಯದಲ್ಲಿ ಅದ್ವೈತ

ಕನ್ನಡ ಹರಿದಾಸ ಸಾಹಿತ್ಯದ ಎರಡನೇ ಘಟ್ಟದಲ್ಲಿ ಕಂಡುಬರುವ ಮಹಿಪತಿದಾಸರ ಕೀರ್ತನೆಗಳಲ್ಲಿ ಅದ್ವೈತ ಚಿಂತನೆಯಿದೆ ಎಂದು ಹಲವು ವಿದ್ವಾಂಸರು ಹೆಸರಿಸಿದರೂ ಅವರು ಜನ್ಮತಃ ಮಾಧ್ವ ಸಂಪ್ರದಾಯದವರು. (ಅವರ ಊರು ಬಿಜಾಪುರ ಜಿಲ್ಲೆಯ ಕಾಖಂಡಕಿ) ಆದ್ದರಿಂದ ಅವರ ಕೀರ್ತನೆಗಳಲ್ಲಿ ಮಾಧ್ವ ಪರಂಪರೆಯೇ ಮುಖ್ಯತತ್ವವಾಗಿದ್ದು ಶಾಂಕರ ಅದ್ವೈತಕ್ಕೂ ಒಲಿದಿದ್ದರೆನ್ನಬಹುದೇ ವಿನಾ ಅವರನ್ನು ಅದ್ವೈತ ಕೀರ್ತನಕಾರರೆಂದು ಗುರುತಿಸಲು ಬರುವುದಿಲ್ಲವೆಂದು

ಕೆಲವರ ಅಭಿಪ್ರಾಯ. ಇವರ ಶಿಷ್ಯಪರಂಪರೆಯಾಗಲಿ ಇತರ ಅದ್ವೈತ ಕೀರ್ತನಕಾರರಾಗಲಿ ಚಿದಾನಂದಾವಧೂತರವರೆಗೆ ಕಂಡುಬರುವುದಿಲ್ಲ. ಆದ್ದರಿಂದ ಚಿದಾನಂದಾವಧೂತರನ್ನೇ (೧೭೦೦-೧೭೪೧) ಅದ್ವೈತ ಕೀರ್ತನ ಪರಂಪರೆಯ ಆದ್ಯರು ಎನ್ನಬೇಕಾಗುತ್ತದೆ. ಆದರೆ ಈ ಸಂಪುಟದಲ್ಲಿರುವ ಗೋಪಾಲಾರ್ಯರನ್ನು ಎಂ-ವಿ-ಸೀಯವರು ರಚಿಸಿರುವ ವಂಶಾವಳಿಯ ಹಿನ್ನಲೆಯಲ್ಲಿ ಲೆಕ್ಕಹಾಕಿದರೆ ಚಿದಾನಂದಾವಧೂತರಿಗಿಂತ ಹಿಂದಿನವರಾಗುತ್ತಾರೆ. ಈ ಬಗ್ಗೆ ಹೆಚ್ಚಿನ ಶೋಧ ಆಗಬೇಕಾಗಿದೆ. ಇವರ ನಂತರ ಕನ್ನಡ ಸಾಹಿತ್ಯದಲ್ಲಿ ಅನೇಕ ಜನ ಅದ್ವೈತ ಕೀರ್ತನಕಾರರು ಕಾಣಿಸಿಕೊಂಡಿದ್ದಾರೆ. ಕೆಳದಿ ವೆಂಕಣ್ಣ ೧೭ನೇ ಶತಮಾನದ ಮುಖ್ಯ ಅದ್ವೈತ ಕೀರ್ತನಕಾರನಾಗಿ ಕಾಣಿಸಿಕೊಳ್ಳುತ್ತಾನೆ.

ಇದೇ ಕಾಲದಲ್ಲಿ ವಾಸುದೇವಾರ್ಯರ ಶಿಷ್ಯರಾದ ವೆಂಕಟದಾಸರ್ಯ ಮತ್ತು ನರಸಾರ್ಯರು ಹಲವು ಹಾಡುಗಳನ್ನು ರಚಿಸಿರುವುದಾಗಿ ಕಂಡುಬರುತ್ತದೆ. ಇವರ ಶಿಷ್ಯ ತಿಮ್ಮಪ್ಪದಾಸರು ಒಬ್ಬ ಮುಖ್ಯ ಅದ್ವೈತ ಕೀರ್ತನಕಾರರಾಗಿ ಕಾಣಿಸಿಕೊಂಡಿದ್ದಾರೆ (೧೭೭೦-೧೮೬೦). ಇವರ ಶಿಷ್ಯ-ಮಗ ನಾರಾಯಣದಾಸರೂ (೧೮೨೩-೧೯೦೨) ಹಲವು ಕೀರ್ತನೆಗಳನ್ನು ರಚಿಸಿದ್ದಾರೆ. ತಿಮ್ಮಪ್ಪದಾಸರ ಸಮಕಾಲೀನದವರೇ ಆಗುವ ಅರಸೀಕೆರೆ ತಿಮ್ಮಪ್ಪದಾಸರು 'ಸುರಗಿರೀಶ', ಅಂಕಿತದಲ್ಲಿ ನೂರಾರು ಕೀರ್ತನೆ ರಚಿಸಿದ್ದಾರೆ. ಇವು ಆ ಕಾಲಕ್ಕೇ 'ಕೀರ್ತನ ಕಂಠಾಭರಣ'ದಲ್ಲಿ ಸೇರಿ ಜನಪ್ರಿಯವಾಗಿವೆ.

ಇದಕ್ಕೂ ಮುಂಚೆ ತುರಂಗಭಾರತದ ಕವಿ ಪರಮದೇವನನ್ನು ಉಲ್ಲೇಖಿಸ ಬೇಕಾಗುತ್ತದೆ. ಈತನ ಕಾಲ ಕ್ರಿ.ಶ.೧೭೨೧-೧೮೦೫. ಚಿದಾನಂದನಿಂದ ಈತ ಪ್ರಭಾವಿತನಾಗಿದ್ದಾನೋ ಇಲ್ಲವೋ ತಿಳಿಯದು. ಚಿದಾನಂದನ ಊರು ಆಂಧ್ರದ ಆದವಾನಿಯ ದೊಡ್ಡ ಹರಿವಾಣ. ಇವನ ಊರು ಶಿವಮೊಗ್ಗದ ಸುಳಿಗೋಡು (ಹೊಸನಗರ ತಾ||) ಅಷ್ಟೇನೂ ದೂರವಲ್ಲ. ಆದರೂ ಇವನು ಚಿದಾನಂದರನ್ನು ಸ್ತುತಿಸಿಲ್ಲ. ಇವರ ಕೃತಿಗಳನ್ನು ವಿವರವಾಗಿ ಪರಿಶೀಲಿಸದ ಹೊರತು ಈ ಬಗ್ಗೆ ನಿರ್ಧರಿಸಲಾಗುವುದಿಲ್ಲ. ಈತನ ಹೆಸರಿನಲ್ಲಿ ೮೦ ಕೀರ್ತನೆಗಳಿವೆ.

೨೦ನೇ ಶತಮಾನದಲ್ಲಿ ಬರುವ ಆನಂದ ಪಂಥದ ಗಗನಾನಂದ, ನಿರಂಜನಾನಂದ, ಶಿವಾನಂದ, ಶಂಕರಾನಂದ ಇವರುಗಳೂ ಅದ್ವೈತಕೀರ್ತನ

ಪರಂಪರೆಯನ್ನು ಮುಂದುವರಿಸಿದ್ದಾರೆ. ಈ ಪರಂಪರೆಯಲ್ಲಿ ಅರಕಲುಗೂಡು ಕೃಷ್ಣಪ್ಪ ವೇದಾಂತ ಶಿವರಾಮಶಾಸ್ತ್ರಿಗಳ ಶಿಷ್ಯ (೧೮೨೬–೧೯೦೬). ಅನೇಕ ಹಾಡುಗಳನ್ನು ರಚಿಸಿದ್ದಾನೆ. ಭಗವದ್ಗೀತಾರ್ಥಸಾರ ಇವನ ಕೃತಿ. ಏಕೈಕ ಮಹಿಳಾ ಕೀರ್ತನಕಾರ್ತಿ ಹೆಳವನಕಟ್ಟೆ ಗಿರಿಯಮ್ಮ (೧೮ನೇ ಶತಮಾನದ ಪೂರ್ವಾರ್ಧ) ಅದ್ವೈತ ತತ್ವ ಪ್ರತಿಪಾದಕಳಾಗಿ ಕಂಡುಬರುತ್ತಾಳೆ. ಇದೇ ಕಾಲದ ರಾಮದಾಸ (ಬಡೇಸಾಹೇಬ) ಹಾಗೂ ಶಿಶುನಾಳ ಶರೀಫರು (೧೮೮೯) ಮುಸ್ಲಿಂ ಮತೀಯಾರಾದರೂ ಅದ್ವೈತ ತತ್ವವನ್ನು ಪ್ರತಿಪಾದಿಸಿದ ಕೀರ್ತನಕಾರರಾಗಿ ಕಾಣಿಸಿಕೊಂಡಿರುವುದು ಅದ್ವೈತ ತತ್ವದ ಜನಪ್ರಿಯತೆಯನ್ನು ಸಾರುತ್ತದೆ. ರಾಮದಾಸರ ಹೆಸರಿನಲ್ಲಿ ೨೮೧ ಕೃತಿಗಳಿರುವುದಾಗಿ ತಿಳಿದುಬಂದಿದೆ. ಶರೀಫರದು ಸುಮಾರು ೪೦೦ ಕೀರ್ತನೆಗಳಿವೆ. ಇಂತಹ ಇನ್ನೂ ಅನೇಕ ತತ್ವಪದಕಾರರಿದ್ದಾರೆ. ಇವರ ಹಾಡುಗಳು ಅದ್ವೈತವನ್ನೇ ಪ್ರತಿಪಾದಿಸುತ್ತಿದ್ದರೂ ಇವರನ್ನು ಕೀರ್ತನಕಾರರೆಂದು ನೋಡದೆ ಪ್ರತ್ಯೇಕವಾಗಿ ಗುರುತಿಸಲಾಗುತ್ತಿದೆ. ಆದರೆ ವಾಸ್ತವವಾಗಿ ಇವರೂ ಕೀರ್ತನಕಾರರೇ ಆಗುತ್ತಾರೆ. ಮೈಸೂರಿನ ವೇದಾಂತ ಶಿವರಾಮಶಾಸ್ತ್ರಿಗಳು ೧೯ನೇ ಶತಮಾನದ ಆರಂಭದಲ್ಲಿ ಕಾಣಿಸಿಕೊಂಡಿರುವ ಪ್ರಮುಖ ಅದ್ವೈತ ಕೀರ್ತನಕಾರರು. ಆ ಕಾಲದಲ್ಲೇ ೧೫ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ ಕೆಲವು ಮರುಮುದ್ರಣಗಳಾಗಿ ಜನಪ್ರಿಯವಾಗಿದ್ದವು. 'ಶಂಕರಾನಂದ' 'ಶಂಕರದಾಸ' ಹೆಸರಿನಲ್ಲಿ ಇವರ ನೂರಾರು ಹಾಡುಗಳಿದ್ದು, ವಿಶಿಷ್ಟಾದ್ವೈತ ಕೀರ್ತನಕಾರರಾದ ತುಳಸಿರಾಮದಾಸರಿಂದ ಇವರು ಪ್ರಭಾವಿತರಾಗಿದ್ದಾರೆ.

ಪಾವಂಜೆ ಲಕ್ಷ್ಮೀನಾರಣಪ್ಪ ೧೮೧೪ರಲ್ಲಿ ದ.ಕ.ದ ಮೂಲ್ಕಿಯ ಸಮೀಪದ ಆತ್ಕೂರಿನಲ್ಲಿ ಜನಿಸಿದವರು. ಮೂಲತಃ ಹರಿಕಥಾ ವಿದ್ವಾಂಸರು. ಸುಮಾರು ೨ ಸಾವಿರ ಕೃತಿ ರಚನೆಯಿದೆಯೆಂದು ಪ್ರತೀತಿಯಿದೆಯಾದರೂ ೨೩೭ ಮಾತ್ರ ಪ್ರಕಟವಾಗಿರುವ ಕೀರ್ತನೆಗಳು. ತುಮಕೂರು ಜಿಲ್ಲೆ ತುರುವೇಕೆರೆಯ ಬೇಟೆರಾಯ ದೀಕ್ಷಿತರು ೧೦೦ಕ್ಕೂ ಅಧಿಕ ಕೀರ್ತನೆಗಳನ್ನು ರಚಿಸಿದ್ದಾರೆ. ಇವರೂ ಹರಿಕಥಾ ವಿದ್ವಾಂಸರು. 'ಧೇನುಪುರೀಶ' ಇವರ ಅಂಕಿತ, ಇವರು ಕೆಲವು ನಾಟಕಗಳನ್ನೂ ರಚಿಸಿದ್ದಾರೆ. 'ಗುರು ಕೃಷ್ಣ' ಅಂಕಿತದ ಕೀರ್ತನಕಾರರೊಬ್ಬರು ಮುಮ್ಮಡಿ ಕೃಷ್ಣರಾಜ ಒಡೆಯರ ಕಿರಿಯ ಸಮಕಾಲೀನ ಎನ್ನುತ್ತಾರೆ (೧೯ನೇ ಶ.) ೧೦೦೦ಕ್ಕೂ ಅಧಿಕ

ಹಾಡುಗಳಿವೆ ಎಂಬ ಅಭಿಪ್ರಾಯವಿದೆ. ಆದರೆ ಲಭ್ಯವಿಲ್ಲ. ಹೊಸಕೆರೆ ಚಿದಂಬರಯ್ಯನವರೂ ಇನ್ನೊಬ್ಬ ಪ್ರಮುಖ ಅದ್ವೈತ ಹರಿದಾಸರು (೧೮೭೦–೧೯೩೮) ಮೂಲತಃ ಹರಿಕಥಾ ವಿದ್ವಾಂಸರು. 'ಭಕ್ತಬಂಧು' ಮಾಸಪತ್ರಿಕೆಯ ಮೂಲಕ ಆಧ್ಯಾತ್ಮಿಕ ಸೇವೆ ಮಾಡುತ್ತಾ ಹಲವು ಹಾಡುಗಳನ್ನು ರಚಿಸಿದ್ದಾರೆ. 'ಕೀರ್ತನ ಕಂಠಾಭರಣ'ದ ರಚನಕಾರರೂ ಆಗಿದ್ದಾರೆ. 'ಭಕ್ತಿಗೀತಾವಳಿ' ಎಂಬ ಕೀರ್ತನೆಗಳ ಸಂಕಲನವೇ ಪ್ರಕಟವಾಗಿದೆ. ಅನೇಕ ಹರಿದಾಸರ ಹಾಡುಗಳನ್ನು ಪ್ರಚಾರ ಮಾಡಿದ ಪ್ರಮುಖ ಹರಿದಾಸರಾಗಿದ್ದೂ ಸು.೮೦ಕ್ಕೂ ಹೆಚ್ಚಿನ ಗ್ರಂಥಗಳನ್ನು ರಚಿಸಿದ್ದಾರೆ. ಎಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮ (೧೮೮೧–೧೯೭೦) ಇವರು ಹೊಳೆನರಸೀಪುರದ ಆಧ್ಯಾತ್ಮಪ್ರಕಾಶ ಕಾರ್ಯಾಲಯದ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಯಾಗಿದ್ದು. ಇವರ ನೂರಾರು ಕೃತಿಗಳಿವೆ ಎಂದು ಹೇಳುತ್ತಾರೆ.

ಸರಿಸುಮಾರು ಇಪ್ಪತ್ತು ಜನ ಅದ್ವೈತ ಕೀರ್ತನಕಾರರು ಈವರೆಗೆ ದಾಖಲೆಯಾಗಿರುವವರು. ಇವರಲ್ಲಿ ಅನೇಕರ ಕೀರ್ತನೆಗಳು ಪ್ರಕಟವಾಗಿಲ್ಲ. ಕೆಲವರು ಈ ಯೋಜನೆಯ ವಿವಿಧ ಸಂಪುಟಗಳಲ್ಲಿ ಬೆಳಕಿಗೆ ಬಂದಿದ್ದಾರೆ. ದಾಖಲೆಗೆ ಬಾರದ ಇನ್ನೂ ಎಷ್ಟೋ ಅದ್ವೈತ ಕೀರ್ತನಕಾರರು ಇದ್ದಾರೆ. ಶೃಂಗೇರಿ ಪರಂಪರೆಯಲ್ಲಿ ಕೆಲವರು ಕೀರ್ತನೆಗಳನ್ನು ಬರೆದಿರುವ ಸಾಧ್ಯತೆಯಿದೆ. ಈವರೆಗಿನ ದಾಖಲೆಯ ಕೀರ್ತನೆಗಳೇ ೨೦೦೦ ದಾಟಿದ್ದು ದಾಖಲೆಯಾಗದ ಕೀರ್ತನ ಸಾಹಿತ್ಯ ಅಷ್ಟೇ ಸಂಖ್ಯೆಯಲ್ಲಿರುವ ಸಾಧ್ಯತೆಯಿದೆ. ತತ್ವಪದಗಳು ಇದರಲ್ಲಿ ಸೇರಿಸಿಲ್ಲ. ತತ್ವಪದಗಳೇ ಸು. ೩೦೦೦ ಇವೆ. ಇವನ್ನು ಪ್ರತ್ಯೇಕಗೊಳಿಸದೆ ಕೀರ್ತನ ಸಾಹಿತ್ಯ ಪ್ರಕಾರದಲ್ಲೇ ಸೇರಿಸಿ ಚರ್ಚಿಸಬೇಕಾಗಿದೆ. ಹೀಗೆ ಅದ್ವೈತ ಕೀರ್ತನ ಸಾಹಿತ್ಯ ೧೮ನೇ ಶತಮಾನದಿಂದೀಚೆಗೆ ನಿರಂತರವಾಗಿ ಮುಂದುವರಿಯುತ್ತ ಶಿಷ್ಯಪರಂಪರೆಯನ್ನು ಬೆಳೆಸುತ್ತ ೨೦–೨೧ನೇ ಶತಮಾನದಲ್ಲೂ ಮುಂದುವರಿಯುತ್ತಿರುವುದು ವಿಶೇಷವಾಗಿದೆ.

ದ್ವೈತ–ಅದ್ವೈತ–ವಿಶಿಷ್ಟಾದ್ವೈತ – ಈ ಮೂರೂ ತತ್ವಗಳು 'ಜೀವ', 'ಜಡ' ಮತ್ತು 'ದೇವ' – ಈ ಮೂರು ವಸ್ತುಗಳ ಮೇಲೆ ತಮ್ಮ ಚಿಂತನೆಯನ್ನು ಬೆಳೆಸಿವೆ. ಜೀವ, ಜಡಗಳು ಮತ್ತು ದೇವರು ಬೇರೆ ಬೇರೆ ಎಂದು ಹೇಳುವುದು ದ್ವೈತ. ಅವು

ಬೇರೆ ಬೇರೆಯಾದರೂ ಒಂದಕ್ಕೇ ಸಂಬಂಧಿಸಿದ್ದು, ದೇವರಿಂದ ಪ್ರೇರಿತವಾದವು ಎನ್ನುವುದು ವಿಶಿಷ್ಟಾದ್ವೈತ. ಇವು ಬೇರೆ ಬೇರೆಯಲ್ಲ ಒಂದೇ ಎನ್ನುವುದು ಅದ್ವೈತ. ಈ ಅದ್ವೈತಕ್ಕೆ ಹರಿ-ಹರ ಭಿನ್ನರಲ್ಲ. ಇಬ್ಬರಲ್ಲೂ ಸಮಾನಭಕ್ತಿ. ದ್ವೈತಕ್ಕೆ ಹರನಲ್ಲಿ ಭಕ್ತಿಯಿದ್ದರೂ ಹರಿಪಾರಮ್ಯ ಮತ್ತು ದೇವರುಗಳಲ್ಲಿ ತಾರತಮ್ಯವಿದೆ. ವಿಶಿಷ್ಟಾದ್ವೈತಕ್ಕೆ ಹರಿ ಏಕನಿಷ್ಠೆಯಿದ್ದು. ಹರನಿರಾಕರಣೆಯೊಂದಿಗೆ ಹರಿಯೊಬ್ಬನಲ್ಲೇ ಎಲ್ಲರನ್ನೂ ಕಾಣುವ ಏಕೋಭಾವವಿದೆ.

ಅದ್ವೈತವು 'ದೇವ'ನಾದ 'ಬ್ರಹ್ಮ' ಒಂದೇ ಸತ್ಯ. ಉಳಿದದ್ದು ಮಿಥ್ಯೆ, ಈ ಬ್ರಹ್ಮನು ಹರನೂ ಆಗಬಹುದು ಹರಿಯೂ ಆಗಬಹುದು, ಇವನು ನಿರ್ಗುಣ, ನಿರಾಕಾರ ಎಂದರೆ; ದ್ವೈತವು ಬ್ರಹ್ಮನೂ ಸತ್ಯ, ಜೀವನೂ ಸತ್ಯ. ಈ ಬ್ರಹ್ಮ 'ಹರಿ'ಯಾಗಿದ್ದಾನೆ. ಇವನಿಗೆ ಹಲವು ಗುಣಗಳು, ರೂಪಗಳಿವೆ. ಆದ್ದರಿಂದ ಇವನು ಸಗುಣ, ಇವನೇ ಸರ್ವೋತ್ತಮ ಎನ್ನುತ್ತದೆ. ವಿಶಿಷ್ಟಾದ್ವೈತವು ಈ ಮೂರೂ ಸತ್ಯ. ಹರಿಯೊಬ್ಬನೇ ಬ್ರಹ್ಮ, ಉಳಿದವರೆಲ್ಲ ಇವನ ನಿಯಾಮಕರು, ದೇವ-ಜೀವರ ನಡುವೆ ಶರೀರ-ಶರೀರಿ ಸಂಬಂಧವಿದೆ. ಜೀವನು ದೇವನಿಂದ ನಿಯಾಮಕವಾದವನು ಅವನಿಗೇ ಸೇರಿದವನು. ಅವನಲ್ಲಿರುವ ಆತ್ಮವೇ ದೇವ. ಈ ದೇವನು ಸಗುಣನೂ ಹೌದು ನಿರ್ಗುಣನೂ ಹೌದು. ಇವನು ಲಕ್ಷ್ಮೀಸಮೇತನಾಗಿರುತ್ತಾನೆ ಎಂದು ಹೇಳುತ್ತದೆ.

ಈ ಭಿನ್ನತೆಗಳ ನಡುವೆಯೂ ಈ ಮೂರೂ ಪಂಥಗಳು ಪರಮಾತ್ಮನನ್ನು ಕಾಣಲು ಭಕ್ತಿಮಾರ್ಗವನ್ನು ಕಂಡುಕೊಂಡು ಅದರ ಒಂದು ಮಾಧ್ಯಮವಾಗಿ ಕೀರ್ತನೆಗಳನ್ನು ರೂಪಿಸಿವೆ. ಈ ತತ್ವಗಳಾಚೆಗೆ ನಿಲ್ಲುವ ವೈದಿಕಧರ್ಮದ ಮಾನವಪ್ರೇಮ, ಜೀವಕಾರುಣ್ಯ, 'ವಸುಧೈವಕುಟುಂಬಕ' ಪ್ರಜ್ಞೆಗಳು ಇಲ್ಲಿಯ ಮುಖ್ಯ ದರ್ಶನಗಳಾಗಿವೆ. ಈ ಮೂರು ತತ್ವಗಳಲ್ಲಿ ಕೇವಲ ಈ ಮತಾನುಯಾಯಿಗಳಷ್ಟೇ ಅಲ್ಲದೆ ಅನ್ಯಮತೀಯರೂ ಸಮಾಜದ ಸಾಮಾನ್ಯಸ್ತರದ ಇತರ ಮತೀಯರೂ ಇದರಲ್ಲಿ ತೊಡಗಿಕೊಂಡು ಮಾನವಧರ್ಮವನ್ನು ಕೀರ್ತನೆಗಳ ಮೂಲಕ ಸಾರಿರುವುದೇ ಈ ಧರ್ಮಗಳು ಕೇವಲ 'ಧರ್ಮನಿಷ್ಠವಾಗಿರಲಿಲ್ಲ ಬದಲಿಗೆ ಸಮಾಜನಿಷ್ಠವಾಗಿದ್ದವು' ಎಂಬುದಕ್ಕೆ ಸಾಕ್ಷಿಯಾಗಿದೆ.

೨ : ಕೀರ್ತನಕಾರರ ಪರಿಚಯ

೧. ಗೋಪಾಲಾರ್ಯರು

ಎಂ.ವಿ.ಸೀತಾರಾಮಯ್ಯನವರು 'ಅರ್ಚನ'ದಲ್ಲಿ ರಚಿಸಿರುವ ವಂಶಾವಳಿಯಲ್ಲಿ ವೆಂಕಟದಾಸರ ಗುರುಗಳಾಗಿ ಉಲ್ಲೇಖಿತರಾಗಿರುವ ಇವರ ಜೀವನ ವಿವರ ಲಭ್ಯವಿಲ್ಲ. ಕನ್ನಡ, ತೆಲುಗು, ಸಂಸ್ಕೃತ ಮೂರೂ ಭಾಷೆಗಳಲ್ಲಿ ಇವರ ಕೀರ್ತನೆಗಳು ಲಭ್ಯವಿದೆ.

(ಅ) ಜೀವನ ವಿವರ :

ಆರ್.ನರಸಿಂಹಾಚಾರ್ಯರು ಗೋಪಾಲಾರ್ಯನ ಶಿಷ್ಯನೊಬ್ಬನ ಹೆಸರು 'ಸುಮತಿ' ಇರಬಹುದೇ ಎಂಬ ಆಧಾರದ ಮೇಲೆ (ಕವಿ ಚರಿತ್ರೆ ಸಂ.೩,೧೯೨೯, ಪು.೯೦) ದಾಸರು ಸ್ತುತಿಸಿರುವ 'ಮಂಗಳಂ ಗೋಪಾಲಯತಿವರ್ಯ' ಎಂಬ ಕೀರ್ತನೆಯಲ್ಲಿ ಬರುವ 'ಸುಮತನೋ' ಪದದ ಜಾಡು ಹಿಡಿದು ಇದೇ ಪದ್ಯದಲ್ಲಿ ಇವರ ನಂತರ ಕೃಷ್ಣಯೋಗೀಂದ್ರರನ್ನು ಸ್ತುತಿಸಿರುವುದರಿಂದ ಅವರನ್ನು ಈ 'ಸುಮತಿ' ವಿಶೇಷಣದಿಂದ ಸ್ತುತಿಸಿರುವಂತೆ ತೋರುತ್ತದೆಂದೂ ಕವಿಚರಿತ್ರೆಯ ಉಲ್ಲೇಖದ ಸುಮತಿಯೇ ಈ ಕೃಷ್ಣಯೋಗೀಂದ್ರರೆಂದೂ ನಿರ್ಧರಿಸುವ ಪ್ರಯತ್ನ ಮಾಡಲಾಗಿದೆ. ಕವಿಚರಿತ್ರೆಯಲ್ಲಿ ಇವರನ್ನು ಕುರಿತು 'ಇವನ ಗ್ರಂಥಗಳೆಲ್ಲ ಗುರುಶಿಷ್ಯ ಸಂವಾದ ರೂಪವಾಗಿ ಅದ್ವೈತ ವೇದಾಂತವನ್ನು ಬೋಧಿಸುತ್ತವೆ' ಎಂಬ ಮಾತಿನ ಹಿನ್ನೆಲೆಯಲ್ಲಿ ತಿಮ್ಮಪ್ಪದಾಸರ 'ಸದ್ಗುರು ಬೋಧಾನುವಾದ ಸಾರ' ಮತ್ತು 'ಜೀವ–ಕಾಯ ಸಂವಾದ' ಕೃತಿಗಳ ಮೇಲೆ ಇವರ ಕೃತಿಗಳ ಪ್ರಭಾವವಿರುವುದನ್ನು ಊಹಿಸಬಹುದಾಗಿದೆ ಎಂದು ಒಂದು ಅಧ್ಯಯನ ಹೇಳಿದರೂ ಈಚೆಗೆ ದೊರೆತ ಕೀರ್ತನೆಗಳ ಹಿನ್ನೆಲೆಯಲ್ಲಿ ಇದನ್ನು ಪುನರಾಲೋಚಿಸಬೇಕಾಗುತ್ತದೆ.

ಇವರು ವಾಸುದೇವಾರ್ಯರಿಗಿಂತ ಹಿಂದಿನವರಾಗಿರುವುದು ಈ ಗುರು–ಪರಂಪರೆಯಿಂದ ವ್ಯಕ್ತವಾಗುತ್ತಿದೆ. ಇವರಿಗೂ ವಾಸುದೇವಾರ್ಯರಿಗೂ ಮಧ್ಯೆ ನಾರಾಯಣಾರ್ಯರೊಬ್ಬರು ಇದ್ದಾರೆ. (ಇವರನ್ನು ತಿಮ್ಮಪ್ಪದಾಸರು ಧ್ರುವಚರಿತ್ರೆಯಲ್ಲಿ ವಾಸುದೇವಾರ್ಯರಿಗೆ ಮೊದಲಿಗರನ್ನಾಗಿ ಹೆಸರಿಸಿದ್ದಾರೆ.) ಈ ಕಾರಣದಿಂದ

ಗೋಪಾಲದಾಸರ ಕಾಲ ಕ್ರಿ.ಶ.೧೬೭೫ಕ್ಕೂ ಕೆಳಹೋಗುವಂತಿದೆ. (ವಾಸುದೇವಾ-ರ್ಯರ ಕಾಲವನ್ನು ಸೀತಾರಾಮಯ್ಯನವರು ೧೭೨೫ಕ್ಕೆ ನಿಗದಿಗೊಳಿಸಿದ್ದಾರೆ. ಇವರ ಗುರುಗಳಾಗಲಿರುವ ನಾರಾಯಣಾರ್ಯರ ಕಾಲ ಕನಿಷ್ಟ ೨೫ ವರ್ಷ ಹಿಂದಕ್ಕೆ ಎಂದರೂ ೧೭೦೦ ಆಗುತ್ತದೆ. ಇವರಿಂದ ಕನಿಷ್ಟ ೨೫ ವರ್ಷದ ಹಿಂದಕ್ಕೆ ಎಂದರೂ ೧೬೭೫ಕ್ಕೆ ಬಂದು ನಿಲ್ಲುತ್ತದೆ. ಇದು ಕಾಖಂಡಕಿ ಮಹಿಪತಿದಾಸರ ಕಾಲ (೧೬೧೧-೧೬೮೦), ಮಹಿಪತಿದಾಸರ ಸಮಕಾಲೀನರನ್ನಾಗಿಸಿ ಗೋಪಾಲದಾಸರನ್ನು ಪರಿಗಣಿಸುವಂತಾದರೆ ಗೋಪಾಲದಾಸರಿಂದಲೆ ಅದ್ವೈತ ಹರಿದಾಸ ಸಾಹಿತ್ಯದ ಆರಂಭವೂ ಆಗುತ್ತದೆ. ಹೀಗಾದಾಗ ಇವರ ಗುರುಗಳು ಯಾರು ಎಂಬುದನ್ನು ಪರಿಶೋಧಿಸಬೇಕಾಗುತ್ತದೆ. ಗೋಪಾಲದಾಸರ ಯಾವ ಕೃತಿಯಲ್ಲೂ ವಾಸುದೇವಾರ್ಯರ ಹೆಸರಾಗಲಿ, 'ಚಿಕನಾಗಪುರ'ದ ಮುದ್ರಿಕೆಯಾಗಲಿ ಕಂಡುಬರುತ್ತಿಲ್ಲವಾದ್ದರಿಂದ ಇವರ ವಾಸಸ್ಥಳವೂ ಚಿಕ್ಕನಾಯ್ಕನಹಳ್ಳಿಯಾಗಿರುವಂತೆ ತೋರುವುದಿಲ್ಲ. ವಾಸುದೇವಾರ್ಯರಿಗೂ ಮೂಲವಾದ ಈ ಅದ್ವೈತ ಗುರುಕೇಂದ್ರದ ಅಸ್ತಿತ್ವ ಇನ್ನು ಪ್ರಕಟವಾಗಬೇಕಾಗಿದೆ. ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಹೆಚ್ಚಿನ ಸಂಶೋಧನೆ ಆಗಬೇಕಾಗಿದೆ.

(ಆ) ಕೀರ್ತನೆಗಳು :

ಗೋಪಾಲಾರ್ಯರ ಕೀರ್ತನೆಗಳು ಬಿಗಿಬಂಧದಿಂದ ಕೂಡಿರುವ ಉತ್ತಮ ರಚನೆಗಳಾಗಿವೆ. "ಗೋಪಾಲಾರ್ಯ" ಎಂಬುದೇ ಅಂಕಿತವೂ ಆಗಿ ಮೂಡಿಬಂದಿದೆ. ಇದರಲ್ಲೇ ಗುರುವನ್ನೂ ದೇವರನ್ನೇ ಕಾಣುವ ಅದ್ವೈತಭಾವವಿದೆ. ೩೪ ಕನ್ನಡ ಕೀರ್ತನೆಗಳು ಈ ಸಂಪುಟದಲ್ಲಿವೆ. ತೆಲುಗು ಮತ್ತು ಸಂಸ್ಕೃತ ಕೃತಿಗಳೂ ಸು.೧೫ ಇದ್ದು ಅವನ್ನು ಇಲ್ಲಿ ಸೇರಿಸಿಲ್ಲ.

ಇವರ ಗುರುಸ್ತುತಿಯ ಕೀರ್ತನೆಗಳು ಎರಡು ಮಾತ್ರ ಇದ್ದು ಇವೆರಡರಲ್ಲೂ ಇವರಿಗೆ ಜ್ಞಾನತೃಷೆಯನ್ನು ನೀಗಿಸಿದ, ಅದ್ವೈತತತ್ವವನ್ನು ಬೋಧಿಸಿದ ದೈವಧ್ಯಾನದಲ್ಲಿ ಮನಸ್ಸನ್ನು ನಿಲ್ಲಿಸಲು ಉಪದೇಶಿಸಿದ ಯಾವುದೇ ಗುರುಗಳನ್ನಾಗಿ ಈ ಗುರುಸ್ತುತಿಗಳು ಕಂಡುಬರುತ್ತವೆಯೇ ವಿನಾ ನಿರ್ದಿಷ್ಟ ವ್ಯಕ್ತಿಸೂಚನೆಯಿಲ್ಲ. ಆತ್ಮನಿವೇದನೆಯ

ಕೃತಿಗಳೂ ದೈವಸ್ತುತಿಗಳೊ, ಗುರುಸ್ತುತಿಗಳೊ ಆಗಿ ವ್ಯಕ್ತವಾಗುತ್ತವೆ. ವಾಸುದೇವಾರ್ಯರನ್ನು ಇವರು ಸ್ತುತಿಸಿಲ್ಲದಿರುವುದು ವಂಶಾವಳಿಯಲ್ಲಿ ಗೋಪಾಲಾರ್ಯರು ವಾಸುದೇವಾರ್ಯರಿಗಿಂತ ಹಿಂದಿನವರು ಎಂದು ಸೂಚಿಸಿರುವುದನ್ನು ಸಮರ್ಥಿಸುತ್ತದೆ.

'ಬದುಕಿದೆನು ಬದುಕಿದೆನು ಭವ ಎನಗೆ ಹರಿಯಿತು' ಸಾಲು ಕನಕದಾಸರ ಕೀರ್ತನೆಯನ್ನು ನೆನಪಿಸಿದರೂ 'ಹರಿಯಿತು' ಪದದ ಮೂಲಕ ಇದು ಪ್ರತ್ಯೇಕತೆಯನ್ನು ಪಡೆದು ಇಡೀ ಕೀರ್ತನೆಯಲ್ಲಿ ಅದು ವ್ಯಕ್ತವಾಗುತ್ತದೆ. 'ಮತಿಯ ಪಾಲಿಸು ಸ್ವಾಮಿ ನರ್ತನ ಪ್ರೇಮಿ' ಎಂಬುದರಲ್ಲಿ ಗುರುವಿನಲ್ಲಿ ಆತ್ಮನಿವೇದನೆಯಿದೆ. ಗುರು–ದೈವ ಇಬ್ಬರಲ್ಲೂ ಸಮಾನತೆಯನ್ನು ಸಾಧಿಸಿರುವುದನ್ನು ಇಲ್ಲಿ ಕಾಣಬಹುದು.

ಹದಿನಾರು ಕೀರ್ತನೆಗಳಲ್ಲಿ ಸಾಮಾಜಿಕ ಸಂಗತಿಗಳನ್ನು ತಂದಿರುವ ಗೋಪಾಲಾರ್ಯರು ಅತ್ಯಂತ ಸಹವಾಗಿ ಸಮಾಜಕ್ಕೆ ಸ್ಪಂದಿಸಿದ್ದಾರೆ.

'ಬಿಟ್ಟ ಮನೆ ಜನ ಧನಂಗಳಲಿ ಮತ್ತೂ ಮನವ
ನಿಟ್ಟು ವಾಂತ್ಯಾಶನವನುಂಬ ನಾಯಂದದಲಿ
ಪಟ್ಟಣಂಗಳಲಿ ತಿರುಗುತ ಪರರಬಾಧಿಸುತ'

ಇದರಲ್ಲಿ ಕಪಟ ಸಾಧುಗಳನ್ನೂ ಲೋಭಿಗಳನ್ನು ಅತ್ಯಂತ ತೀಕ್ಷ್ಣವಾಗಿ ಕಟಕಿಯಾಡುವ ಇವರ ಜೀವನನಿಷ್ಠೆ ಬಹಳ ಮಹತ್ವದ್ದಾಗಿದೆ.

ಸಂಸಾರದ ಬಗ್ಗೆ, ಬದುಕಿನ ಅಗತ್ಯಗಳ ಬಗ್ಗೆ ಆಸೆ ಅಭಿಮಾನಗಳ ಬಗ್ಗೆ ನೀರಸವಾಗಿ ನುಡಿಯುವ ದಾಸರು ವಿರಕ್ತಿಯನ್ನು ಸಾರುತ್ತಾರೆ.

'ಆರು ಕೊಟ್ಟರು ಕೊಟ್ಟರಾರುಂಡರಾರಿಲ್ಲಿ
ಬೇರೆ ನಾ ನೀ ನಾನೆಂದು ಕೆಡುವುದೀ ಲೋಕ'

ಎಂಬ ಭಾವಜೀವನದ ಬಗ್ಗೆ ನಿಷ್ಠೆಯನ್ನು ಅಳವಡಿಸುವ ಅದ್ವೈತಗುಣ ಇಲ್ಲಿ ಪಡಿಮೂಡಿದೆ.

ಈ ಸಕಲ ತಾನಂತೆ ಇನ್ನು ವಿಧಿಯಂತೆ
ಜಾತಿಸೂತಕಗಳೆಂಬ ಜಂಜಡಗಳಿಲ್ಲವಂತೆ
ಮಾತಿನರಿಪು ಮತ್ಸರಗಳು ಬಿಡವಂತೆ

ಮುಂತಾದ ಮನುಷ್ಯನಲ್ಲಿರುವ ಗುಣವೈರುಧ್ಯಗಳನ್ನು 'ಕಾಣೆವಾವಿದನು ಶಾಸ್ತ್ರದಲಿ, ವಿದುಗಳ ಪ್ರಮಾಣವಚನದಲಿ ಮೂರನೆಯುಪಥವಾ' ಎಂಬ ಕೀರ್ತನೆಯಲ್ಲಿ ಸೊಗಸಾಗಿ ಚಿತ್ರಿಸಿದ್ದಾರೆ. ಮನುಷ್ಯನ ಸಂಧರ್ಭ ಸಾಧಕತೆ, ಸ್ವಾರ್ಥವನ್ನು 'ಮೂರನೆಯ ಪಥ'ವನ್ನಾಗಿ ಕಂಡಿರುವ ದಾಸರ ಸಮಾಜದರ್ಶನ ಬದಲಾಗುತ್ತಿರುವ ಸಮಾಜಕ್ಕೆ ಕನ್ನಡಿಯಾಗಿದೆ. ಆಧುನಿಕ ಪ್ರಜ್ಞೆಯಿಂದ ಕೂಡಿದೆ.

(ಇ) ಕೀರ್ತನೆಗಳ ಆಕರ :

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ ಪ್ರಕಟಿಸಿರುವ ತಿಮ್ಮಪ್ಪದಾಸರ ಕೀರ್ತನೆಗಳು (೨೦೦೩) ಸಂ: ನಾ.ಗೀತಾಚಾರ್ಯ, ಎನ್.ಎಸ್.ರಾಮಸ್ವಾಮಿ ಅಯ್ಯರ್ – ಈ ಪುಸ್ತಕವನ್ನು ಮುಖ್ಯ ಆಕರವಾಗಿ ಬಳಸಿಕೊಂಡಿದೆ. ಇದರೊಂದಿಗೆ ಪ್ರತಿಷ್ಠಾನದಲ್ಲಿರುವ ಹಸ್ತಪ್ರತಿಗಳು ಹಾಗೂ ಎಂ.ವಿ.ಸೀತಾರಾಮಯ್ಯನವರು ಸಂಪಾದಿಸಿರುವ 'ಅರ್ಚನ' ಪುಸ್ತಕಗಳ ಸಹಾಯವನ್ನು ಪಡೆಯಲಾಗಿದೆ.

೨. ವೆಂಕಟದಾಸರು

(ಅ) ಜೀವನ ವಿವರ :

ವೆಂಕಟದಾಸರು ವಾಸುದೇವಾರ್ಯರ ಶಿಷ್ಯಪರಂಪರೆಯಲ್ಲಿ ಬರುವ ಒಬ್ಬ ಕೀರ್ತನಕಾರರು. ತಿಮ್ಮಪ್ಪದಾಸರ ಸೋದರಮಾವ (ಮಾತುಳ–ತಾಯಿಯ ಸೋದರ) ಎಂದು ಸೀತಾರಾಮಯ್ಯನವರು ಗುರುತಿಸಿದ್ದಾರೆ. ವೆಂಕಟದಾಸರ ಹೆಸರಿನಲ್ಲಿ 'ಅಖಂಡಾನಂದ ಸ್ವರೂಪ' ಎಂಬ ಗದ್ಯಗ್ರಂಥವೂ ಇದ್ದು ಕನ್ನಡ ಕವಿಚರಿತೆ ಇದನ್ನು ಉಲ್ಲೇಖಿಸಿದೆ. (ಆರ್. ನರಸಿಂಹಾಚಾರ್, ಪು.೨೫೬) ಈ ಕೃತಿಯಲ್ಲಿ ಈ ದಾಸರು ಹೇಳಿಕೊಂಡಿರುವ ಶಿಷ್ಯಪರಂಪರೆಯನ್ನೂ ಈ ಗ್ರಂಥದ ಸ್ವರೂಪವನ್ನೂ ಉಲ್ಲೇಖಿಸಲಾಗಿದೆ. ಗೋಪಾಲಾರ್ಯಯತಿಗಳಿಂದ ಗುರುಪರಂಪರೆಯನ್ನು

ಆರಂಭಿಸಿದ್ದು ಇವರ ಶಿಷ್ಯ ನಾರಾಯಣಸ್ವಾಮಿ. ಇವರ ಶಿಷ್ಯ ವಾಸುದೇವಯತಿ, ಇವರ ಶಿಷ್ಯ ದಾಸಾರ್ಯ. ಈ ದಾಸಾರ್ಯರ ಶಿಷ್ಯ ಕವಿ ವೆಂಕಟದಾಸ ಎಂಬ ಈ ಶಿಷ್ಯ ಪರಂಪರೆಯ ಹಿನ್ನೆಲೆಯಲ್ಲಿ ಮತ್ತು ತಮಗೆ ಬಲ್ಲ ಮೂಲಗಳಿಂದ ದೊರಕಿದ ಮಾಹಿತಿಗಳ ಆಧಾರದ ಮೇಲೆ ಸೀತಾರಾಮಯ್ಯ ಅವರು ವಾಸುದೇವಾರ್ಯರನ್ನು ಮೂಲ ಪುರುಷರಾಗಿಟ್ಟುಕೊಂಡ; ವೆಂಕಟದಾಸರ ಒಂದು ವಂಶಾವಳಿಯನ್ನು ತಿಮ್ಮಪ್ಪದಾಸರ ಇನ್ನೊಂದು ವಂಶಾವಳಿಯನ್ನು ರಚಿಸಿದ್ದಾರೆ. (ಅರ್ಚನ ಪು.೨೯೦) ತಿಮ್ಮಪ್ಪದಾಸರ ತಾಯಿಯವರ ಸೋದರರಾಗಿರುವ ವೆಂಕಟದಾಸರ ತಂದೆ ದಾಸಾರ್ಯರು ವಾಸುದೇವಾರ್ಯರ ಶಿಷ್ಯರಾಗಿ ಈ ಕುಟುಂಬಕ್ಕೆ ಅಳಿಯನಾಗಿ ಬಂದವರು. ತಿಮ್ಮಪದಾಸರ ತಂದೆ ನಾರಾಯಣಾರ್ಯರು ವಾಸುದೇವಾರ್ಯರ ಪುತ್ರರು. ಇವರ ಪತ್ನಿ ಚೆನ್ನಾಂಬಾ ವೆಂಕಟದಾಸರ ಸೋದರಿ, ಹೀಗೆ ವಾಸುದೇವಾರ್ಯರ ವಂಶದಲ್ಲಿ ಹತ್ತಿರದ ಸಂಬಂಧದಲ್ಲಿರುವ ವೆಂಕಟದಾಸರು ಸಣ್ಣವಯಸ್ಸಿನಲ್ಲೆ ಸಾವನ್ನಪ್ಪಿದ ತಂಗಿ-ಭಾವನ ಮಕ್ಕಳನ್ನು -ತಿಮ್ಮಪ್ಪದಾಸರನ್ನು- ೩ನೇ ವರ್ಷದಿಂದಲೇ ಜೊತೆಯಲ್ಲಿ ಹಾಕಿಕೊಂಡು ಸಾಕಿಸಲಹಿದರೆಂದೂ ಹರಿದಾಸರನ್ನಾಗಿ ಮಾಡಿದರೆಂದೂ ತಿಮ್ಮಪ್ಪದಾಸರು ಒಂದು ಕೀರ್ತನೆಯಲ್ಲಿ ಹೇಳುತ್ತಾರೆ. ಹೀಗೆ ತಿಮ್ಮಪ್ಪದಾಸರ ಬದುಕಿನಲ್ಲಿ ತಂದೆಯ ಸ್ಥಾನದಲ್ಲೂ ಇರುವ- ಗುರುಸ್ಥಾನದಲ್ಲೂ ಇರುವ ವೆಂಕಟದಾಸರನ್ನು ೮-೧೦ ಕೀರ್ತನೆಗಳಲ್ಲಿ ತಿಮ್ಮಪ್ಪದಾಸರು ಭಕ್ತಿಭಾವದಿಂದ ಸ್ತುತಿಸಿದ್ದಾರೆ. ಆದರೂ ಯಾವ ಕೀರ್ತನೆಯಲ್ಲೂ ವೆಂಕಟದಾಸರು ವೈಯಕ್ತಿಕ ಜೀವನದ ಸಂಗತಿಗಳನ್ನು ಹೇಳಿಲ್ಲ. ವಂಶಾವಳಿಯಲ್ಲಿ ಸೀತಾರಾಮಯ್ಯನವರು ವೆಂಕಟದಾಸರ ತಂದೆ ದಾಸಾರ್ಯರೆಂದೂ ತಾಯಿ ಚೆನ್ನಾಂಬಾ ಎಂದೂ ವೆಂಕಟದಾಸರಿಗೆ ದಾಸಪ್ಪ, ತಿಮ್ಮೊಜ ಎಂಬ ಇಬ್ಬರು ಮಕ್ಕಳಿದ್ದರೆಂದೂ ದಾಖಲಿಸುತ್ತಾರೆ. ಆದರೆ ಇವರ ಪತ್ನಿಯ ಹೆಸರಿನ ಉಲ್ಲೇಖವಿಲ್ಲ. ಕ್ಷೇತ್ರಕಾರ್ಯದಲ್ಲಿ ಇವರ ವಂಶಸ್ಥರಾಗಿ ದೊರೆತ ದಾಸ ರಾಮಣ್ಣನವರ ಮಕ್ಕಳ ಮೂಲಕ ಪಡೆದ ಮಾಹಿತಿಗಳ ಹಿನ್ನೆಲೆಯಲ್ಲಿ ವೆಂಕಟದಾಸರ ಗೋತ್ರವನ್ನು ಗೌತಮಗೋತ್ರವೆಂದು ಗುರುತಿಸಿದ್ದಾರೆ. ಬಬ್ಬೂರುಕಮ್ಮೆ ಕುಲದ ಅದ್ವೈತ ಬ್ರಾಹ್ಮಣರಾದ ವೆಂಕಟದಾಸರು ಅನೇಕ ಕೀರ್ತನೆಗಳನ್ನೂ ಒಂದು ಅದ್ವೈತ ಕೃತಿಯನ್ನು ರಚಿಸಿದ್ದಾರೆ ಎಂದು ಸದ್ಯದ ಮಟ್ಟಿಗೆ ಹೇಳಬಹುದಾಗಿದೆ.

ವೆಂಕಟದಾಸರ ಜೀವನ ವಿವರಗಳು ಸ್ವತಃ ಅವರ ಕೀರ್ತನೆಗಳಲ್ಲೂ ಅಷ್ಟಾಗಿ ಕಂಡುಬಂದಿಲ್ಲ.

'ಮರುಗಿ ಬೆದರದಿರೆಂಬ ಮಾತೃ ಮೊದಲೆಯಿಲ್ಲ
ಕರೆದು ನಾ ಬೇಡಿದುದ ಕೊಡುವ ಪಿತೃವಿಲ್ಲ
ನೆರವಾಗಿಯನುಸರಿಸಿ ನಡೆವ ಭ್ರಾತೃಗಳಿಲ್ಲ
ಮೊರೆಬಿಡಲು ನಿನಗೆನೀಮುಖ ದೊರೆಯಲ್ಲ'
'ಕಡ ಹುಟ್ಟಿದರೆ ಬಡವ ಕೆಡುವನೆಂಬೀಗಾದೆ
ತೊಡರಿಕೊಂಡೆನ್ನೊಳಗೆ ತೋರಿದುದು ತಂದೆ'
'ತನುವಿನೊಳ್ ಜರೆಯಡಸಿತು ಮನದಿ ಮರವೆ ಮುಸುಕಿತು
ಋಣದ ಬಾಧೆ ಹತ್ತಿತು ರೋಗವಡಗಿತು'

ಮುಂತಾದ ಕೆಲವು ಸಾಲುಗಳಲ್ಲಿ ವೈಯಕ್ತಿಕ ಜೀವನ ಸಂಗತಿಗಳನ್ನು ಹೇಳಿಕೊಂಡಿರುವಂತೆ ತೋರುತ್ತದೆ. ಇದರ ಮೂಲಕ ವೆಂಕಟದಾಸರಿಗೂ ಬಹಳ ಬೇಗ ತಂದೆ-ತಾಯಿಗಳು ಇರಲಿಲ್ಲವೆಂದು ಹೇಳಬೇಕಾಗುತ್ತದೆ. ಅಣ್ಣತಮ್ಮಂದಿರು ಯಾರೂ ಇರಲಿಲ್ಲವೆಂದೂ ಹೇಳಬಹುದಾಗಿದ್ದು ವಂಶಾವಳಿಯೂ ಇದನ್ನು ಸಮರ್ಥಿಸುತ್ತದೆ.

ತಿಮ್ಮಪ್ಪದಾಸರು ಮತ್ತು ನಾರಾಯಣದಾಸರಲ್ಲಿ ಕಾಡುತ್ತಿದ್ದ ಋಣಬಾಧೆಯ ಮೂಲ ವೆಂಕಟದಾಸರಲ್ಲೇ ಕಂಡುಬರುತ್ತದೆ. ಇವರೂ ಕಡಕ್ಕೆ ಕೈಚಾಚಿ ತೀರಿಸಲಾಗದೆ ಬಳಲಿರುವಂತೆ ತೋರುತ್ತದೆ. ಇಳಿವಯಸ್ಸಿನವರೆಗೂ ಈ ಕೊರಗಿನಲ್ಲಿದ್ದರೆಂದೇ ಹೇಳಬೇಕಾಗುತ್ತದೆ. ಇನ್ನೊಂದು ಕೀರ್ತನೆಯಲ್ಲಿ ಕಂಡುಬರುವ

'ಸತಿಸುತಪೋಷಣೆಯು ಮುಖ್ಯವು ಮಾತಾ
ಪಿತೃಗಳಾರಾಧನೆಯು ಬಳಗ ಬಂಧು
ತತಿಗಳ ಮನ್ನಣೆಯ ಕುಲ-ಜಾತಿ ದೇ
ವತೆಯ ಪೂಜಿಪ ಹಬ್ಬವು ಬಿಡಕೂಡದು
ವ್ರತ ಉಪವಾಸವಾರತಿಯಕ್ಷತೆ ಮುಂಜಿಯು
ಸುತೆಗೆ ಮದುವೆಯೆಂದು ಮತಿಗೆಡಿಸಿದೆಯಲ್ಲ'

ಎಂಬ ಸಾಲುಗಳು ದಾಸರು ಸಂಸಾರಭಾರದಲ್ಲಿ ಮುಳುಗಿದ್ದರೆಂಬುದನ್ನು ದೃಢಪಡಿಸುತ್ತವೆ. ಇಲ್ಲಿ 'ಪಿತೃಗಳಾರಾಧನೆ'ಯೆಂಬುದು ಹಿಂದಿನ ಕೀರ್ತನೆಯ 'ಮಾತಾಪಿತೃಗಳಿಲ್ಲ' ಎಂಬ ಅಭಿಪ್ರಾಯವನ್ನು ಸಮರ್ಥಿಸುವಂತಿವೆ. 'ಸುತೆಗೆ ಮದುವೆ' ಎಂಬುದಕ್ಕೂ ವಂಶಾವಳಿಯಲ್ಲಿ ಇವರಿಗೊಬ್ಬ ಮಗಳಿದ್ದುದಕ್ಕೆ ಸಮರ್ಥನೆಯಿದೆ.

ಹೀಗೆ ರಾಗ-ಭಾವಗಳಿಗೆ ಒಳಗಾಗಿ ಬಂಧು-ಬಾಂಧವರ ಬಳಗದ ಹೊಣೆ ಹಿಡಿದು (ತಿಮ್ಮಪ್ಪದಾಸರು ಮತ್ತು ಅವರ ಸೋದರ-ಸೋದರಿಯರೂ ಇವರ ಆಶ್ರಯದಲ್ಲೆ ಬೆಳೆಯುವುದನ್ನು ಸೀತಾರಾಮಯ್ಯನವರು ಖಚಿತಪಡಿಸುತ್ತಾರೆ) ಜರ್ಜರಿತರಾಗಿದ್ದುದಲ್ಲದೆ 'ಪರರದೂಷಣೆಯಮಾಡಿ', 'ರಾಗದ್ವೇಷದ ಬಲವಿಡಿದು', 'ಪರನಾರಿಯರ ರೂಪಲಾವಣ್ಯ ನೋಡಿ', ಮರೆತು ನಡೆದ ತಪ್ಪಿ'ಗಾಗಿ ಪಶ್ಚಾತ್ತಾಪಪಟ್ಟು ಗುರುಕರುಣೆ ಪಡೆದು ಪ್ರಾಯಶ್ಚಿತ್ತಕ್ಕೊಳಗಾಗಿ ಹರಿದಾಸರಾಗಿರಲು ನಿರ್ಧರಿಸಿ 'ಇಂದ್ರಿಯ ವಶಕನ ಮಾಡದಿರೆನ್ನ' ಎಂದು ಪ್ರತಿಜ್ಞೆ ಮಾಡಿರುವುದು ಕಂಡುಬರುತ್ತದೆ.

ಇದು ಇವರ ಬದುಕಿನ ಯಾವ ಹಂತದಲ್ಲಾಯಿತು, ಅಲ್ಲಿಯವರೆಗೆ ಇವರ ಜೀವನ ಹೇಗಿತ್ತು ಎಂಬುದಕ್ಕೆ ಯಾವ ಖಚಿತ ಆಧಾರಗಳೂ ಇಲ್ಲದಿದ್ದರೂ ವೆಂಕಟದಾಸರು ಸಣ್ಣವಯಸ್ಸಿನಲ್ಲೇ ಸಂಸಾರಭಾರಕ್ಕೆ ಸಿಲುಕಿ ಬಂಧುಗಳನ್ನೆಲ್ಲ-ಆಶ್ರಿತರನ್ನೆಲ್ಲ-ದಡ ಸೇರಿಸಿದ ಮೇಲೆ ಪ್ರಾಯಶಃ ನಡುವಯಸ್ಸಿನಲ್ಲೆ ಗುರುಚರಣದಾಶ್ರಯಕ್ಕೆ ಬಂದು ಹರಿದಾಸರಾಗಿ ದೈವಧ್ಯಾನದಲ್ಲಿ ತಲ್ಲೀನರಾಗಿರುವರೆಂದು ಹೇಳಬಹುದಾಗಿದೆ. ತಿಮ್ಮಪ್ಪದಾಸರು ಇವರ ಆಶ್ರಯಕ್ಕೆ ಬಂದ ತರುಣದಲ್ಲೇ ಅವರನ್ನು ಹರಿದಾಸರನ್ನಾಗಿಸುವ ಸಂಕಲ್ಪ ತೊಡಬೇಕಾದರೆ ಆ ವೇಳೆಗೆ ಇವರು ಹರಿದಾಸರಾಗಿರಬೇಕಾಗುತ್ತದೆ. ಇವರ ಕಾಲವನ್ನು ಸೀತಾರಾಮಯ್ಯನವರು ೧೭೫೦-೧೮೨೫ ಎಂದು ನಿರ್ಧರಿಸಿದ್ದು ಖಚಿತ ಮಾಹಿತಿಗಳು ದೊರಕುವವರೆಗೆ ಇದನ್ನೇ ಸ್ವೀಕರಿಸಬಹುದಾಗಿದೆ. (ಕವಿಚರಿತಕಾರರೂ ಇದೇ ಕಾಲವನ್ನೇ ಸೂಚಿಸಿದ್ದಾರೆ.) ತಿಮ್ಮಪ್ಪದಾಸ ಮತ್ತು ಇವರ ಸಂಬಂಧಗಳ ಸಂಗತಿಗಳೂ ಇದೇ ಕಾಲಕ್ಕೇ ಸರಿಹೊಂದುತ್ತಿವೆ. ಆದ್ದರಿಂದ ವೆಂಕಟದಾಸರು ಕ್ರಿ.ಶ.೧೭೫೦ರ ಸುಮಾರಿನಲ್ಲಿದ್ದರೆಂಬುದೇ ಸದ್ಯದ ಮಟ್ಟಿಗೆ ಸರಿ ಎನಿಸುತ್ತದೆ.

(ಆ) ಕೀರ್ತನೆಗಳು :

ವೆಂಕಟದಾಸರನ್ನು ಕವಿಚರಿತೆಯ ಉಲ್ಲೇಖದ ಮೂಲಕ 'ಅಖಂಡಾನಂದ ಸ್ವರೂಪ' ಎಂಬ ಅದ್ವೈತ ತತ್ವವನ್ನು ವಿವರಿಸುವ ಗದ್ಯಕೃತಿಯ 'ಕವಿ'ಯಾಗಿ ಈವರೆಗಿನ ಉಲ್ಲೇಖಗಳು ಹೇಳುತ್ತವೆ. ಸೀತಾರಾಮಯ್ಯನವರೂ ಇವರನ್ನು ಕೀರ್ತನಕಾರರೆಂದು ಗುರುತಿಸಿಲ್ಲ. ತಿಮ್ಮಪ್ಪದಾಸರ ಅಂಕಿತಕ್ಕಿಂತ ಭಿನ್ನವಾದ 'ಚಿಕ್ಕನಾಗಪುರವಾಸ' ಅಂಕಿತದ ('ತಿರುಪತಿ ವೆಂಕಟ' ತಿಮ್ಮಪ್ಪದಾಸರ ಅಂಕಿತ) ಹಲವು ಹಾಡುಗಳು ಲಭ್ಯವಾಗಿದ್ದು ಅವುಗಳನ್ನೆಲ್ಲ ಸದ್ಯದ ಮಟ್ಟಿಗೆ ವೆಂಕಟದಾಸರವು ಎಂದು ಪರಿಗಣಿಸಿದೆ. ತಿಮ್ಮಪ್ಪದಾಸರೇ ವೆಂಕಟದಾಸರ ಸ್ತುತಿಯಲ್ಲಿ 'ಚಿಕ್ಕನಾಗಪುರವಾಸ' ಎಂಬ ವೆಂಕಟದಾಸರ ಮುದ್ರಿಕೆಯನ್ನು ಉಲ್ಲೇಖಿಸಿರುವುದರಿಂದ; ದಾಸರ ಜೀವನ ಸಂಗತಿಗಳೆಲ್ಲ ವೆಂಕಟದಾಸರು ಚಿಕ್ಕನಾಗಪುರದಲ್ಲೇ ಸ್ಥಿರವಾಸ್ತವ್ಯದವರಾಗಿದ್ದರೆಂದು ನಿಶ್ಚಿತವಾಗಿರುವುದರಿಂದ ಈ 'ಚಿಕ್ಕನಾಗಪುರವಾಸ' ಅಂಕಿತ ವೆಂಕಟದಾಸರದ್ದೇ ಎನ್ನಲಡ್ಡಿಯಿಲ್ಲ.

'ಚಿಕನಾಗಪುರನಿಲಯ ಮರೆದೆನ್ನದುರ್ನಡೆಯ ಮರುಗಿ ನೀ ಸಲಹಯ್ಯ ವರದ ವೆಂಕಟರಾಯ ವಾಸುದೇವಾರ್ಯ'ಎಂಬ ಒಂದು ಉಲ್ಲೇಖದಲ್ಲಿ ಮಾತ್ರ ಸ್ಪಷ್ಟವಾಗಿ 'ವರದ ವೆಂಕಟರಾಯ' ಎಂಬ ಸ್ವನಾಮ/ಮುದ್ರಿಕೆ(?) ಬಂದಿದ್ದು, ಉಳಿದೆಲ್ಲ ಕಡೆ 'ಚಿಕನಾಗಪುರವಾಸ' ಎಂಬುದೇ ಕಾಣಿಸಿಕೊಂಡಿದೆ. ತಿಮ್ಮಪ್ಪದಾಸರು ಇವರನ್ನು ವಾಸುದೇವಾರ್ಯರ ರೂಪ/ಮರುಜನ್ಮ ಎಂದೇ ಗ್ರಹಿಸಿದ್ದಾರೆ.

ಸದ್ಯಕ್ಕೆ ೧೬ ಕೀರ್ತನೆಗಳು ಇವರ ಅಂಕಿತದಲ್ಲಿವೆ. ಇವುಗಳನ್ನು ಅಂಕಿತದ ಪ್ರತ್ಯೇಕತೆಯ ದೃಷ್ಟಿಯಿಂದ ವೆಂಕಟದಾಸರವು ಎಂದು ವಿಭಾಗಿಸಿದೆಯೇ ವಿನಾ ಅನ್ಯ ನಿದರ್ಶನಗಳಿಲ್ಲ. ಈ ಅಂಕಿತವೂ ತಿಮ್ಮಪ್ಪದಾಸರದೇ ಎಂದು ನಿರ್ಧಾರವಾದಲ್ಲಿ ಈ ಕೀರ್ತನೆಗಳೂ ತಿಮ್ಮಪ್ಪದಾಸರವೇ ಆಗುತ್ತವೆ. ವೆಂಕಟದಾಸರ ವಂಶಸ್ಥರಾಗಿ ಪ್ರಸ್ತುತ ಇರುವ ಶ್ರೀಮತಿ ಗೌರಮ್ಮನವರು ವೆಂಕಟದಾಸರೂ ಕೀರ್ತನೆಗಳನ್ನು ರಚಿಸಿದ್ದಾರೆಂದು ಹೇಳಿದರೂ, ಗೋಪಾಲಾರ್ಯರನ್ನು ಮೊದಲುಗೊಂಡು ವಾಸುದೇವಾರ್ಯರು ನಾರಾಯಣಾರ್ಯರು, ರಾಮಕೃಷ್ಣಾರ್ಯರು,

ಕೃಷ್ಣಯೋಗೀಂದ್ರರು ದಾಸಾರ್ಯರು, ವೆಂಕಟದಾಸರು ಎಲ್ಲರೂ ಕೀರ್ತನೆಗಳನ್ನು ರಚಿಸಿದ್ದಾರೆಂದೂ ಹೇಳುತ್ತಾರೆ. (ಇದರಲ್ಲಿ ಕೆಲವರ ರಚನೆಗಳು ಈಗ ಲಭ್ಯವಾಗಿವೆ.) ಯಾವುದು ಯಾರದ್ದೆಂದು ಪ್ರತ್ಯೇಕಿಸುವುದಿಲ್ಲ. ಅಂಕಿತಗಳ ವ್ಯತ್ಯಾಸದ ಖಚಿತ ನೆನಪೂ ಅವರಿಗೆ ಇಲ್ಲ. 'ವೆಂಕಟರಮಣ' ವಾಸುದೇವಾರ್ಯರದ್ದು, 'ಚಿಕನಾಗಪುರವಾಸ' ವೆಂಕಟದಾಸಾರ್ಯರದ್ದು, 'ಗೋಪಾಲಾರ್ಯ' ಎಂಬುದೇ ಗೋಪಾಲಾರ್ಯರದ್ದು ಇರಬಹುದು ಎಂದು ಅನುಮಾನದಿಂದ ಹೇಳುತ್ತಾರೆ.

ಅಂಕಿತಗಳ ಕರ್ತೃತ್ವ ನಿರ್ಧಾರವಾಗುವವರೆಗೆ ಅಂಕಿತಗಳ ಆಂತರಿಕ ಆಧಾರದ ಮೇಲೆ ಕೀರ್ತನಕಾರರನ್ನು ನಿರ್ಧರಿಸಿರುವ ಪ್ರಸ್ತುತ ಅಭಿಪ್ರಾಯವನ್ನೇ ಮುಂದುವರಿಸಿಕೊಂಡು ಹೋಗುವುದು ಸೂಕ್ತವೆನಿಸುತ್ತದೆ.

ವೆಂಕಟದಾಸರ ಕೀರ್ತನೆಗಳೂ ಅದ್ವೈತ ಸಂಪ್ರದಾಯದಂತೆ ಗಣಪತಿ ಸ್ತುತಿಯಿಂದಲೇ ಆರಂಭವಾಗುತ್ತವೆ. ('ಶ್ರೀ ಗಣಪತಿಯೆ ಪಾಲಿಸೈ ಮತಿಯನು') ದೈವಸ್ತುತಿಗಳನ್ನು ಪ್ರತ್ಯೇಕವಾಗಿ ಮಾಡಿರುವ ಕೀರ್ತನೆಗಳು ಸದ್ಯಕ್ಕೆ ಲಭ್ಯವಾಗಿಲ್ಲದಿದ್ದರೂ ಆತ್ಮನಿವೇದನೆಯಲ್ಲಿ ದೈವಸ್ತುತಿಗಳಿವೆ. ಗುರುಸ್ತುತಿಗಳಲ್ಲಿ ವಾಸುದೇವಾರ್ಯರನ್ನು ಮಾತ್ರ ಸ್ತುತಿಸಿರುವ ಕೆಲವು ಕೃತಿಗಳು ಕಂಡುಬಂದಿವೆ. ಅಖಂಡಾನಂದ ಸ್ವರೂಪದಲ್ಲಿ ಹೇಳಿರುವ ಗೋಪಾಲಾರ್ಯ-ನಾರಾಯಣಾರ್ಯರನ್ನಾಗಲಿ ದಾಸಾರ್ಯರನ್ನಾಗಲಿ ಸ್ತುತಿಸಿರುವ ಕೃತಿಗಳಿಲ್ಲ. ತಿಮ್ಮಪ್ಪದಾಸರವೆಂದು ವರ್ಗೀಕರಿಸಿರುವ ಗುರುಸ್ತುತಿಗಳಲ್ಲಿ ಕೆಲವು ವೆಂಕಟದಾಸರವೂ ಇದ್ದಿರಲೂಬಹುದು.

ಆತ್ಮನಿವೇದನೆಯ ಕೃತಿಗಳಲ್ಲಿ ದೈವಕ್ಕಿಂತ ಗುರುಗಳಲ್ಲಿ ನಿವೇದನೆ ಮಾಡಿಕೊಂಡಿರುವುದೇ ಹೆಚ್ಚು. ಎಲ್ಲ ದೈವವನ್ನು ವಾಸುದೇವಾರ್ಯರಲ್ಲೇ ಕಂಡಿರುವ ದಾಸರು ಗುರುಗಳಲ್ಲೇ ಮೊರೆಹೋಗುವುದು ಅದ್ವೈತ ನಿಷ್ಠೆಗೆ ಅನುಗುಣವಾಗಿಯೇ ಇದೆ.

'ಎಂದಿಗೊ ದಾಸನಿಗೆಂದಿಗೊ ಸನ್ನಿಧಿಯೊಳಿಗೆ'
'ಮರೆಯೊಕ್ಕೆ ಗುರುವನು ಮರೆದು ಸಂಶಯವನು'
'ಮೊರೆಯ ಲಾಲಿಸಬೇಕು ಮರುಗಿ ದಮ್ಮಯ್ಯ'

ಮುಂತಾದ ಕೀರ್ತನೆಗಳಲ್ಲಿ ದೈವಕೃಪೆಗಾಗಿ ಹಂಬಲಿಸುವ ಪಕ್ವಗೊಂಡ ಭಕ್ತಿಯ ಮನಸ್ಸಿನ ವಿವಿಧ ಭಾವಗಳನ್ನು ಕಾಣಬಹುದು.

ದಾಸರು ಸಾಮಾಜಿಕ ಸಂಗತಿಗಳಿಗೂ ಸ್ಪಂದಿಸಿರುವ ಕೆಲವು ಕೀರ್ತನೆಗಳಿವೆ.

'ತೊಲಗು ನೀ ತೊಲಗಿನ್ನು ಅಭಿಮಾನವೆ'
'ಹಳೆಯ ವಾಸನೆ ನಿನ್ನ ಹೀರುವುದಣ್ಣ'

ಮುಂತಾದ ಕೀರ್ತನೆಗಳಲ್ಲಿ ವ್ಯಕ್ತಿಯ ಮನಸ್ಥಿತಿಯನ್ನು ಸಾಮಾಜಿಕ ಸಂಬಂಧದ ಸ್ವರೂಪವನ್ನು ಹಿಡಿದಿಟ್ಟಿದ್ದಾರೆ. ಭಕ್ತನೊಬ್ಬನ ಅರ್ಥಾತ್ ಸಾರ್ಥಕ ಮನುಷ್ಯನೊಬ್ಬನ ಮನಸ್ಸು ಹೇಗೆ ಸಮಾಜ ಸ್ಪಂದನೆಯಿಂದ ಕೂಡಿರಬೇಕೆಂಬುದನ್ನು ಬಹಳ ಸೊಗಸಾಗಿ ಸಮಾಜದ ನಡವಳಿಕೆಗಳ ಮೂಲಕ ಚಿತ್ರಿಸಿದ್ದಾರೆ.

ಒಟ್ಟಾರೆ ವೆಂಕಟದಾಸರ ಕೀರ್ತನೆಗಳು ಸರಳವಾದ ಕನ್ನಡದಲ್ಲಿ ಭಾವಬಂಧದಿಂದ ಕೂಡಿರುವ ಸುಂದರ ಕೀರ್ತನೆಗಳಾಗಿ ಮೂಡಿಬಂದಿವೆ. ಪ್ರಾಸಬದ್ಧವಾಗಿ ಸರಾಗವಾಗಿ ನುಡಿಗಳನ್ನು ಜೋಡಿಸಿರುವ ಕ್ರಮದಲ್ಲಿ ದಾಸರಿಗೆ ಕೀರ್ತನೆಯ ಶೈಲಿ ಒಗ್ಗಿರುವುದನ್ನು ಗುರುತಿಸಬಹುದಾಗಿದೆ. ದಾಸರ ಕೆಲವು ಸಂಸ್ಕೃತ ತೆಲುಗು ರಚನೆಗಳೂ ಕಂಡುಬಂದಿವೆ. ಇವರ ಬಗ್ಗೆ ಹೆಚ್ಚಿನ ಸಂಶೋಧನೆ ಆಗಬೇಕಾಗಿದೆ.

(ಇ) ಕೀರ್ತನೆಗಳ ಆಕರ :

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ ಪ್ರಕಟಿಸಿರುವ 'ತಿಮ್ಮಪ್ಪದಾಸರ ಕೀರ್ತನೆಗಳು' (೨೦೦೩) ಸಂ: ನಾ.ಗೀತಾಚಾರ್ಯ, ಎನ್.ಎಸ್.ರಾಮಸ್ವಾಮಿ ಅಯ್ಯರ್ – ಈ ಪುಸ್ತಕವನ್ನು ಮುಖ್ಯ ಆಕರವಾಗಿ ಬಳಸಿಕೊಂಡಿದೆ. ಇದರೊಂದಿಗೆ ಪ್ರತಿಷ್ಠಾನದಲ್ಲಿರುವ ಹಸ್ತಪ್ರತಿಗಳು ಹಾಗೂ ಎಂ.ವಿ.ಸೀತಾರಾಮಯ್ಯನವರು ಸಂಪಾದಿಸಿರುವ 'ಅರ್ಚನ' ಪುಸ್ತಕಗಳ ಸಹಾಯವನ್ನು ಪಡೆಯಲಾಗಿದೆ. ವೆಂಕಟದಾಸರ ವಂಶಾವಳಿಯಲ್ಲಿ ಬರುವ ಶ್ರೀಮತಿ ಗೌರಮ್ಮ ಮತ್ತು ಅವರ ಮಗಳು ಪದ್ಮಾವತಮ್ಮ ಅವರ ನೆನಪುಗಳನ್ನು ಬಳಸಿಕೊಳ್ಳಲಾಗಿದೆ.

೩. ತಿಮ್ಮಪ್ಪದಾಸರು

ಕರ್ನಾಟಕ ಕೀರ್ತನ ಸಾಹಿತ್ಯದಲ್ಲಿ ಅದ್ವೈತತತ್ವ ಪ್ರತಿಪಾದನೆಯ ಪ್ರಧಾನ ಹರಿದಾಸರೆನಿಸಿರುವ ತಿಮ್ಮಪ್ಪದಾಸರು ಕೀರ್ತನಸಾಹಿತ್ಯದಲ್ಲಿ ಅದ್ವೈತ ಪರಂಪರೆಯನ್ನಲ್ಲದೆ 'ಕೀರ್ತನಕಾವ್ಯ' ಪರಂಪರೆಗೂ ಅಗ್ರಗಣ್ಯರೆನಿಸಿದ್ದಾರೆ. ಇವರ ಪಿತಾಮಹರೂ ಗುರುಗಳೂ ಆಗಿದ್ದ ವಾಸುದೇವಯತಿಗಳು ತಪಗೈದ, ಸಮಾಧಿಸ್ಥರಾದ ಪುಣ್ಯಭೂಮಿಯಾದ ಚಿಕ್ಕನಾಯ್ಕನಹಳ್ಳಿಯಲ್ಲಿ ೧೭-೧೮ನೇ ಶತಮಾನದಲ್ಲಿ ಒಂದು ಪ್ರಭಾವಿ ಅದ್ವೈತಪೀಠ ಆಗಿಹೋಗಿದ್ದು, ಅನೇಕ ಯತಿಗಳು ಮತ್ತು ಅದ್ವೈತ ಕೀರ್ತನಕಾರರ ಪರಂಪರೆಯನ್ನೇ ಇಲ್ಲಿ ಕಾಣಬಹುದು. ತಿಮ್ಮಪ್ಪದಾಸರು ಈ ಪರಂಪರೆಯವರೆ ಆಗಿದ್ದು ಇವರ ಕೀರ್ತನೆಗಳನ್ನು ಎಂ.ವಿ.ಸೀತಾರಾಮಯ್ಯನವರು 'ಅರ್ಚನ' ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಅದರಲ್ಲಿ ಬಿಡಿಸಿಕೊಟ್ಟಿರುವ ತಿಮ್ಮಪ್ಪದಾಸರ ಜೀವನಚಿತ್ರವನ್ನು ಹೀಗೆ ಹೇಳಬಹುದು.

(ಅ) ಜೀವನ ವಿವರ :

ತಿಮ್ಮಪ್ಪದಾಸರ ಪೂರ್ವದ ಹೆಸರು 'ತಿಮ್ಮಪ್ಪಯ್ಯ', ತಂದೆ ನಾರಾಯಣಾರ್ಯ, ತಾಯಿ, ಚೆನ್ನಾಂಬೆ, ತಾತ ವಾಸುದೇವಾರ್ಯ, ಸೋದರಮಾವ ವೆಂಕಟದಾಸಾರ್ಯ, ಹೆಂಡತಿ ವೆಂಕಮ್ಮ, ಮಕ್ಕಳು ನಾರಾಯಣದಾಸ, ವೆಂಕಟರಮಣದಾಸ, ಸುಬ್ಬಯ್ಯ ಹಾಗೂ ಇಬ್ಬರು ಹೆಣ್ಣುಮಕ್ಕಳು ಎಂಬ ವಿಷಯವನ್ನು ದಾಸರೇ ತಮ್ಮ ಹಸ್ತಪ್ರತಿಗಳಲ್ಲಿ ಹೇಳಿರುವ ಹಲವು ಆಧಾರಗಳ ಮೂಲಕ ಖಚಿತಪಡಿಸಿದ್ದಾರೆ. ಸೀತಾರಾಮಯ್ಯನವರೂ ಈ ವಂಶೋದ್ಭವರೇ ಆಗಿರುವುದರಿಂದ (ತಿಮ್ಮಪ್ಪದಾಸರ ಎರಡನೇ ಮಗ ವೆಂಕಟರಮಣದಾಸರ ಮಗ ವೆಂಕಟದಾಸಪ್ಪನವರ ಮಕ್ಕಳು) ಇವರ ಬಳಿ ನಿರ್ದಿಷ್ಟವಾದ ದಾಖಲೆಗಳು ಇರುವುದರಿಂದ; ದಾಸರುಗಳ ಸ್ವಹಸ್ತಾಕ್ಷರ ಹಸ್ತಪ್ರತಿಗಳೇ ಇವರಿಗೆ ಲಭ್ಯವಿರುವುದರಿಂದ ಈ ವಿಚಾರದಲ್ಲಿ ಚರ್ಚೆಗೆ ಅವಕಾಶವಿಲ್ಲದೆ ಇದಮಿತ್ಥಂ ಎಂದು ಹೇಳಿದ್ದಾರೆ. ತಿಮ್ಮಪ್ಪದಾಸರು ಶಂಕರಾಚಾರ್ಯರಿಂದ ಪ್ರಣೀತವಾದ ಅದ್ವೈತ ಮತಾವಲಂಬಿಗಳಾಗಿದ್ದವರು ಎಂಬುದೂ ಇಷ್ಟೇ ಖಚಿತವಾದ ವಿಚಾರ. ತಿಮ್ಮಪ್ಪದಾಸರು ಹರಿತ್ಸಗೋತ್ರದ ಬಬ್ಬೂರುಕಮ್ಮೆ ಕುಲದವರು.

ದಾಸರು ತಮ್ಮ ಕಾಲವನ್ನು ಎಲ್ಲಿಯೂ ನಿರ್ದಿಷ್ಟವಾಗಿ ಸೂಚಿಸಿಲ್ಲದೇ ಇರುವುದರಿಂದ ಸೀತಾರಾಮಯ್ಯನವರು ಹಲವಾರು ಬಾಹ್ಯ ಮತ್ತು ಆಂತರಿಕ ಪ್ರಮಾಣಗಳಿಂದ ತಿಮ್ಮಪ್ಪದಾಸರ ಕಾಲವನ್ನು ಕ್ರಿ.ಶ.೧೭೭೦ ರಿಂದ ೧೮೬೦ ಎಂದು ನಿರ್ದಿಷ್ಟಪಡಿಸಿದ್ದಾರೆ. ತಿಮ್ಮಪ್ಪದಾಸರ ಮಗ ನಾರಾಯಣದಾಸರ ಜನ್ಮದಿನಾಂಕವಿರುವ ಜಾತಕವನ್ನು ತಿಮ್ಮಪ್ಪದಾಸರ ತಂದೆಯವರು ಬರೆದಿರುವ ದಾಖಲೆಯ ಆಧಾರದಿಂದ ನಾರಾಯಣದಾಸರ ಜನ್ಮದಿನ ಕ್ರಿ.ಶ.೧೧-೨-೧೮೨೩ ಆಗುತ್ತದೆ. ಇವರು ಜೇಷ್ಠಪುತ್ರ. ಅಂದರೆ ತಿಮ್ಮಪ್ಪದಾಸರಿಗೆ ತಮ್ಮ ೫೩ನೇ ವಯಸ್ಸಿನಲ್ಲಿ ಮೊದಲ ಮಗನ ಜನನ(!)ವೆಂದಾಗುತ್ತದೆ. ತಡವಾದ ಪುತ್ರಜನನಕ್ಕೆ ಎಲ್ಲಿಯೂ ಸುಳಿವುಗಳಿಲ್ಲದಿರುವುದನ್ನು ಗಮನಿಸಿದರೆ ತಿಮ್ಮಪ್ಪದಾಸರ ಕಾಲದ ವಿಚಾರದಲ್ಲಿ ಪುನರಾಲೋಚಿಸಬೇಕೆನಿಸುತ್ತದೆ. ಇದು ದೀರ್ಘವಾದ ಚರ್ಚೆಯನ್ನು ಅಪೇಕ್ಷಿಸುವುದರಿಂದ ಇಲ್ಲಿ ಈ ಅನುಮಾನವನ್ನು ಮಾತ್ರ ಸೂಚಿಸಲಾಗಿದೆ. ಆದರೂ ಸದ್ಯದ ಪರಿಸ್ಥಿತಿಯಲ್ಲಿ ಸೀತಾರಾಮಯ್ಯನವರು ನಿರ್ಧರಿಸಿರುವ ಕಾಲವನ್ನೇ ದಾಸರ ಕಾಲವೆಂದು ಸ್ವೀಕರಿಸಬಹುದಾಗಿದೆ.

ತಿಮ್ಮಪ್ಪದಾಸರು ತಮ್ಮ ಜೀವನದ ಅರ್ಧಭಾಗವನ್ನು ಜನ್ಮಸ್ಥಳವಾದ ಚಿಕ್ಕನಾಯ್ಕನಹಳ್ಳಿಯಲ್ಲೇ ಕಳೆದಿರುವಂತೆ ತೋರುತ್ತದೆ. "ತಿಮ್ಮಪ್ಪದಾಸರರ ಜೀವನ ವೃತ್ತಾಂತ ವಿವರವಾಗಿ ತಿಳಿದುಬಂದಿಲ್ಲ. ಅವರ ಕೀರ್ತನೆಗಳ ಮೂಲಕ ಅವರ ಅಂತರಂಗ ವ್ಯಕ್ತಿತ್ವವೇನೋ ಚೆನ್ನಾಗಿ ಮೂಡಿ ನಿಂತು, ಭಕ್ತಿಜ್ಞಾನ ವೈರಾಗ್ಯಗಳಲ್ಲಿ ಸಿದ್ಧಿಪಡೆಯಲು ನಿರಂತರವೂ ಹೋರಾಟ ನಡೆಸಿದ ಒಬ್ಬ ಮಹಾನ್ ಸಾಧಕರಾಗಿ ಕಂಡುಬರುತ್ತಾರೆ". ಎಂದು ಸೀತಾರಾಮಯ್ಯನವರು ಹೇಳಿದ್ದರೂ ಅವರ ಕೀರ್ತನೆಗಳ ಮೂಲಕ ಅಪ್ರಯತ್ನ ಪೂರ್ವಕವಾಗಿ ಕಂಡುಬಂದಿರುವ ಕೆಲವು ಸಂಗತಿಗಳು ಮತ್ತು ತಮ್ಮ ಮನೆತನದಲ್ಲಿ ಪ್ರಚಲಿತವಿದ್ದ ಐತಿಹ್ಯಗಳ ಆಧಾರದಿಂದ ಅವರ ಜೀವನದ ಬಗ್ಗೆ ಒಂದು ಚಿತ್ರವನ್ನು ಮೂಡಿಸಿದ್ದಾರೆ. ಅದರಂತೆ ದಾಸರು ಉದ್ಯೋಗಾರ್ಥಿಯಾಗಿ ಶ್ರೀರಂಗಪಟ್ಟಣಕ್ಕೆ ಹೋಗಿ, ಅಲ್ಲಿ ಅರಸರ ಬಳಿ ರಾಯಸದ ವೃತ್ತಿಯನ್ನು ನಡೆಸುತ್ತಿದ್ದರು. ಆ ಸಂದರ್ಭದಲ್ಲೇ ಗುರು ವಾಸುದೇವಾರ್ಯರನ್ನು ಸಂದರ್ಶಿಸಿ ಮಂತ್ರೋಪದೇಶ ಪಡೆದರು. ಶ್ರೀರಂಗಪಟ್ಟಣದ ಪತನಾನಂತರ ಮತ್ತೆ ಹುಟ್ಟೂರಿಗೆ ಹಿಂತಿರುಗಿದರು. ಈ ರಾಜಕೀಯ ಅಸ್ತಿರತೆಯ ಪರಿಸ್ಥಿತಿಯಲ್ಲಿ ಮೈಸೂರಿನ

ರಾಜಮನೆತನಕ್ಕೆ ಒಂದು ವಿಶೇಷವಾದ ಉಪಕಾರವನ್ನು ಮಾಡುವ ಅವಕಾಶ ದಾಸರಿಗೆ ಪ್ರಾಪ್ತವಾಗಿತ್ತು. ಮುಮ್ಮಡಿ ಕೃಷ್ಣರಾಜ ಒಡೆಯರು ಪಟ್ಟಕ್ಕೆ ಬಂದ ಮೇಲೆ ಅವರನ್ನು ಭೇಟಿಮಾಡಿದ ಒಂದು ಸಂದರ್ಭದಲ್ಲಿ ದಾಸರು ಆ ಉಪಕಾರದ ವಿಚಾರವನ್ನು ರಾಜರ ಸ್ಮರಣೆಗೆ ತರಲಾಗಿ, ಅರಸರು ಸಂಪ್ರೀತಗೊಂಡು ದಾಸರಿಗೆ ಅನುಕೂಲ ಕಲ್ಪಿಸುವುದಕ್ಕಾಗಿ ಅವರನ್ನು ಅರಮನೆಗೇ ಕರಿಸಿಕೊಂಡರಲ್ಲದೆ ಉಪಕಾರ ಸ್ಮರಣೆಗಾಗಿ ಹಾಸನಜಿಲ್ಲೆಯ ಅರಕಲಗೂಡು ಸಮೀಪ 'ಭಟಮಾನ್ಯ'ವನ್ನು ಕೊಟ್ಟಿದ್ದರು. ಬದುಕಿನ ಕೊನೆಯ ಕಾಲದಲ್ಲಿ ಮೈಸೂರಿನಲ್ಲಿದ್ದು ಅರಮನೆಯ ತ್ರಿನಯನೇಶ್ವರ ದೇವಾಲಯದ ಆವರಣದಲ್ಲೇ ತಮ್ಮ ಕುಲದೈವವಾದ ಶ್ರೀವೆಂಕಟರಮಣಸ್ವಾಮಿಯನ್ನು ಆರಾಧಿಸುತ್ತ, ಆಶ್ರಯದಾತರಾದ ಅರಸರ ಶ್ರೇಯಃ ಪ್ರಾರ್ಥನೆ ಮಾಡುತ್ತ, ದೇವತಾರಾಧನೆ, ಭಜನೆ ಮುಂತಾದ ಪಾರಮಾರ್ಥಿಕ ಕಾರ್ಯಗಳಲ್ಲಿ ನಿರತರಾಗಿದ್ದರು. ಆದರೆ ನೆಮ್ಮದಿಯಾಗಿ ಬದುಕುವುದು ದಾಸರ ಹಣೆಯಲ್ಲಿ ಬರೆದಿರಲಿಲ್ಲ. ಋಣಭಾರದಿಂದ ಕೊರಗಿ ಕೊರಗಿ ಸತ್ತರು. ದಾಸರು ಮಾಡಿದ್ದ ಋಣವನ್ನು ತೀರಿಸುವಷ್ಟು ತೀರಿಸಿ ತೀರಿಸಲಾರದೆ ಬಿಟ್ಟ ಋಣಶೇಷ "ದ್ವಿಸಹಸ್ರಶತಾಧಿಕ ಋಣ" (೨,೧೦೦ ರೂ.) ಪುತ್ರ ನಾರಾಯಣದಾಸರ ಪಾಲಿಗೆ ಉಳಿದಿತ್ತು ಎಂಬ ಮಾತುಗಳಲ್ಲಿ ದಾಸರಿಗೆ ರಾಜಾಶ್ರಯವಿದ್ದರೂ ಜೀವನ ದುರ್ಭರವಾಗಿತ್ತು ಎಂಬ ಅಂಶ ವ್ಯಕ್ತವಾಗುತ್ತದೆ. ಇದಕ್ಕೆ ಹಿನ್ನೆಲೆ ಸ್ಪಷ್ಟವಾಗುವುದಿಲ್ಲ, ಅಂತೂ ದಾಸರು ಪಾರಮಾರ್ಥಿಕವಾಗಿ ಸಂತೃಪ್ತರಾಗಿದ್ದರೂ ಲೌಕಿಕವಾಗಿ ಅತೃಪ್ತರೇ ಆಗಿದ್ದರು. ಈ ಲೌಕಿಕ ಅತೃಪ್ತಿಯೇ ಆಧ್ಯಾತ್ಮಿಕ ಹಸಿವಿನ ಪ್ರೇರಣೆಯೂ ಆಗಿರುತ್ತದೆ ಎಂಬ ಅಂಶವನ್ನು ಮನಗಂಡರೆ ದಾಸರ ಶ್ರೇಷ್ಠಸಾಹಿತ್ಯ ರಚನೆಗೆ ಬದುಕಿನ ಅನಿಶ್ಚತತೆಯೂ ಒಂದು ಕಾರಣವಾಗಿದೆ ಎನ್ನಬಹುದು. ಲೌಕಿಕದಲ್ಲಿ ಪಡೆಯಲಾಗದ್ದನ್ನು ಪರಮಾತ್ಮನಲ್ಲಿ ಕಾಣುವ ಧನ್ಯತೆ ದಾಸರ ಕೀರ್ತನೆಗಳ ಪ್ರಧಾನ ಆಶಯವೂ ಆಗಿದೆ.

ತಿಮ್ಮಪ್ಪದಾಸರು ಆ ಕಾಲದಲ್ಲಿ ಅದ್ವೈತ ಪ್ರಮಾಣ ಪುರುಷರೂ, ಸಾಧಕರೂ ಯತಿಗಳೂ ತಮ್ಮ ಪಿತಾಮಹರೂ ಆಗಿದ್ದ ವಾಸುದೇವಾರ್ಯರನ್ನೇ ತಮ್ಮ ಆದ್ಯಗುರುವೆಂದು ಸ್ವೀಕರಿಸಿದ್ದಾರೆ. ತಂದೆ ನಾರಾಯಣಾರ್ಯ ಮತ್ತು ಮಾತುಲ ವೆಂಕಟದಾಸಾರ್ಯರನ್ನು ಗುರುಪರಂಪರೆಯಲ್ಲಿ ಬಹಳ ಮುಖ್ಯವಾಗಿ ಸ್ತುತಿಸಿದ್ದಾರೆ.

ಕೃಷ್ಣಯೋಗೀಂದ್ರ, ರಾಮಕೃಷ್ಣಾರ್ಯ, ನೀಲಕಂಠಾರ್ಯ ಮುಂತಾದವರನ್ನೂ ಸ್ಮರಿಸಿದ್ದಾರೆ. ಇವರೆಲ್ಲರೂ ತಿಮ್ಮಪ್ಪದಾಸರ ಮೇಲೆ ಒಂದಿಲ್ಲೊಂದು ರೀತಿಯಲ್ಲಿ ಪ್ರಭಾವ ಬೀರಿ, ಜ್ಞಾನ ಬಿತ್ತಿ, ದಾರಿ ತೋರಿಸಿ ದಾಸವರ್ಯರನ್ನು ಬೆಳೆಸುವಲ್ಲಿ ನೆರವಾಗಿದ್ದಾರೆ. ಈ ಯತಿವರ್ಯರೊಂದಿಗೆ ತಂದೆ ನಾರಾಯಣಾರ್ಯರು ಇವರ ದಾಸದೀಕ್ಷೆಗೆ ಪ್ರೇರಕರಾಗಿದ್ದರೆ, ರಾಮಕೃಷ್ಣಾರ್ಯ, ನೀಲಕಂಠಾರ್ಯರೂ ವಿದ್ಯಾಗುರುಗಳಾಗಿರುವಂತೆ ತೋರುತ್ತದೆ. "ಇವರ ಬಳಿ ಶಿಷ್ಯವೃತ್ತಿ ಮಾಡಿ ತಿಮ್ಮಪ್ಪದಾಸರು ಅಪಾರ ಜ್ಞಾನ ಸಂಪಾದನೆ ಮಾಡಿರುವುದರಲ್ಲಿ ಸಂದೇಹವಿಲ್ಲ. ಆದರೂ ಇವರ ಕೃತಿಗಳಲ್ಲಿ ಗುರು ವಾಸುದೇವಾರ್ಯರ ಪ್ರಭಾವ ಮುದ್ರೆ ಮೂಡಿರುವಂತೆ ಉಳಿದಿಬ್ಬರ ಪ್ರಭಾವ ಮೂಡಿ ಎದ್ದು ಕಾಣುವುದಿಲ್ಲ. ಆದರೆ, ಕೀರ್ತನೆ ಕಾವ್ಯ ಮುಂತಾದ ಕೃತಿ ರಚನೆಗೆ ಅಗತ್ಯವಾದ ವ್ಯುತ್ಪತ್ತಿ ಈ ಇಬ್ಬರು ಮಹನೀಯರ ಬೋಧನೆಯಿಂದ ದಾಸರ ವಶವಾಗಿದೆ ಎಂಬಲ್ಲಿ ಸಂದೇಹವಿಲ್ಲ" ಎಂಬ ಮಾತು ಈ ಅಭಿಪ್ರಾಯವನ್ನು ಅಧಿಕೃತವಾಗಿಸುತ್ತದೆ.

ರಾಮಕೃಷ್ಣಾರ್ಯರು ತಿಮ್ಮಪ್ಪದಾಸರ ಸಮಕಾಲೀನರೂ ಪ್ರಖ್ಯಾತ ವಾಗ್ಗೇಯಕಾರರೂ ಆಗಿದ್ದ ತ್ಯಾಗರಾಜರಿಗೆ 'ಸ್ವರಾರ್ಣವ' ಎಂಬ ಸಂಗೀತಶಾಸ್ತ್ರ ಗ್ರಂಥವನ್ನು ಕೊಟ್ಟು ಆ ಮೂಲಕ ತ್ಯಾಗರಾಜರ ಕೃತಿಗಳಿಗೆ ಸಂಗೀತ ಜ್ಞಾನದ ತಳಹದಿ ದೊರಕುವಂತೆ ಮಾಡಿದ ಶ್ರೀ ರಾಮಕೃಷ್ಣಾನಂದ ಯತಿಗಳೇ ಇರಬೇಕು. ತಾಳ ನಿರ್ದೇಶನಗಳಿಲ್ಲದೆ ಹರಿದಾಸರ ಕೀರ್ತನೆಗಳ 'ವರ್ಣ'ದ ಧಾಟಿಯಲ್ಲಿ ಹಾಡುತ್ತಿದ್ದ ತಿಮ್ಮಪ್ಪದಾಸರ ಕೃತಿಗಳಲ್ಲಿ ಬರುಬರುತ್ತ ಸಂಗೀತಜ್ಞಾನದ ಸ್ಪಷ್ಟ ನಿರ್ದೇಶನವಿರುವುದನ್ನು ನೋಡಿದರೆ ಯತಿಗಳೇ ತಿಮ್ಮಪ್ಪದಾಸರಿಗೂ ಸಂಗೀತ ಶಾಸ್ತ್ರದ ಪರಿಚಯ ಮಾಡಿಸಿರಬೇಕೆಂದು ಊಹಿಸಲಾಗಿದೆ. ಇವರು 'ಶತಸಹಸ್ರ' ಶಿಷ್ಯರಿಗೆ ಕಾವ್ಯಪಾಠ ಬೋಧಿಸಿದವರೆಂದರೂ ಶಂಕರರ ಬ್ರಹ್ಮಸೂತ್ರ ಭಾಷ್ಯ ವ್ಯಾಖ್ಯಾನಗಳ ಸ್ವರಚಿತ (ಕಲ್ಲೂರು) ದಾಸರ ವಂಶಸ್ಥ ಗುರುಗಳನ್ನು ಬಿಟ್ಟರೆ ಉಳಿದವರೆಲ್ಲ ವಾಸುದೇವಾರ್ಯರ ಸಮಕಾಲೀನರೋ ಅಥವಾ ಹಿಂದಿನ ಗುರು ಪರಂಪರೆಗೆ ಸೇರಿದವರೋ ಆಗಿದ್ದಾರೆ. ಗೋಪಾಲದಾಸಾರ್ಯರನ್ನು ಸ್ತುತಿಸಿರುವ ಹಲವಾರು ತೆಲುಗು ಕೃತಿಗಳೂ ತಿಮ್ಮಪ್ಪದಾಸರವೆಂದು ಹೇಳಲಾಗುತ್ತಿದೆ. ಈ ಮಾತು ನಿಜವೇ ಆದಲ್ಲಿ ತಿಮ್ಮಪ್ಪದಾಸರು ಪಂಡಿತರೆನಿಸುತ್ತಾರೆ. ಈ ಬಗ್ಗೆ ವಿವರವಾದ

ಅಧ್ಯಯನದ ಅಗತ್ಯವಿದೆ. ನೀಲಕಂಠಾರ್ಯರು ದಾಸರಿಗೆ ವೇದಾಂತ ಶಾಸ್ತ್ರಗಳನ್ನು ಬೋಧಿಸಿದವರೆಂದು ಊಹಿಸಲಾಗಿದೆ. ಈ ಎಲ್ಲ ಆಚಾರ್ಯರ ಬಗ್ಗೆ ದಾಸರ ಕೀರ್ತನೆಗಳಲ್ಲಿ ಸಿಗುವ ಸುಳುಹುಗಳನ್ನು ಹಿಡಿದು ಇತರ ಆಧಾರಗಳನ್ನು ಹುಡುಕಿ ಸಂಶೋಧನೆಯನ್ನು ಮಾಡಲು ಅವಕಾಶವಿದೆ.

(ಆ) ಕೀರ್ತನೆಗಳು :

ಅರ್ಚನದಲ್ಲಿರುವ ೧೦೮ ಪೂಜಾವಿಧಾನದ ಕೀರ್ತನೆಗಳ ಜೊತೆಗೆ ಈ ಸಂಪುಟದಲ್ಲಿ ಸುಮಾರು ೫೮ ಹೊಸ ಕೀರ್ತನೆಗಳನ್ನು ಸೇರಿಸಿದೆ. ಇದರಲ್ಲಿ, 'ಅರ್ಚನ'ದಲ್ಲಿ ಸೀತಾರಾಮಯ್ಯನವರು ಪಟ್ಟಿಮಾಡಿರುವ (೧) ಗುರುಸ್ತುತಿಪರ ಕೀರ್ತನೆಗಳು (೨) ಸದ್ಗುರು ಬೋಧಾನುವಾದ ಸುಧೆ (೩) ಆತ್ಮನಿವೇದನೆ ಮುಂತಾದ ಸಂಕೀರ್ಣ ಕೀರ್ತನೆಗಳು (೪) 'ಕಾಯ–ಜೀವ ಸಂವಾದ' ವಿಷಯದ ಕೀರ್ತನೆಗಳಲ್ಲಿ ಕೆಲವು ಮಾತ್ರ ಸೇರಿವೆ. ಇವನ್ನೇ ಇನ್ನೊಂದೆಡೆ ಹೀಗೆ ವಿಭಾಗ ಮಾಡಲಾಗಿದೆ. (೧) ಗುರುಸ್ತುತಿಪರ ಕೀರ್ತನೆಗಳು, (೨) ಋಣ ಕೀರ್ತನೆಗಳು (೩) ಸಂಕೀರ್ಣ ಕೀರ್ತನೆಗಳು. ಈ ರೀತಿ ವಿಷಯವಾರು ವಿಭಾಗ ಮಾಡಿ ಬರೆದಿರುವ ಹಸ್ತಪ್ರತಿಗಳೇ ಲಭ್ಯವಿದೆ. ಸ್ವತಃ ಕೀರ್ತನಕಾರರೇ ಹೀಗೆ ವಿಂಗಡಿಸಿದ್ದಾರೆ ಎಂದು ನಂಬಲಾಗಿದೆ. ಈವರೆಗೆ ದೊರೆತಿರುವ ಎಲ್ಲ ಹಸ್ತಪ್ರತಿಗಳೂ ಸ್ವಹಸ್ತಾಕ್ಷರ ಪ್ರತಿಗಳೇ ಎಂದು ತೀರ್ಮಾನವಾಗಿದೆ. ತಿಮ್ಮಪ್ಪದಾಸರು ಕವಿಯ ವಂಶಸ್ಥರೇ ಆಗಿದ್ದು ಅವರ ತಂದೆ, ತಾತರ ಕಾಲದ ಹಸ್ತಪ್ರತಿಗಳೆಲ್ಲ ಈ ವಂಶದವರಲ್ಲೇ ಉಳಿದು ಬಂದಿರುವುದರಿಂದ ಇರುವ ಹಸ್ತಪ್ರತಿಗಳೆಲ್ಲ ಸಾಮಾನ್ಯವಾಗಿ ಆಯಾ ಕವಿಗಳ ಸ್ವಹಸ್ತಾಕ್ಷರ ಪ್ರತಿಗಳೇ ಆಗಿರುತ್ತವೆ. ಈ ಯಾವ ಕೃತಿಗಳೂ ಲಿಪಿಕಾರನಿಂದ ನಕಲಾಗಿರುವ ಬಗ್ಗೆ ಪ್ರತ್ಯೇಕ ಪುಷ್ಪಿಕೆಯಾಗಲಿ, ಲಿಪಿಕಾರರ ವಿವರಣೆಗಳಾಗಲಿ ಕಾಣಸಿಗದಿರುವುದರಿಂದ ಸಹಜವಾಗಿ ಇವು ಕವಿ ಪ್ರತಿಗಳೇ ಎನಿಸುತ್ತವೆ. (ಗೀತಾಚಾರ್ಯ ೧೯೯೭) ಆದರೂ ಹಸ್ತಪ್ರತಿಗಳೆಲ್ಲ ಬಿಡಿಬಿಡಿಯಾಗಿದ್ದು, ಯಾವ ಹಸ್ತಪ್ರತಿಯಲ್ಲೂ ಇದೇ ಶೀರ್ಷಿಕೆಗಳಲ್ಲಿ ಕೀರ್ತನೆಗಳು ಲಭ್ಯವಾಗಿಲ್ಲ. ಕಾಯ–ಜೀವ ಸಂವಾದದ ಕೀರ್ತನೆಗಳು ಮಾತ್ರ ಪ್ರತ್ಯೇಕವಾಗಿ ದೊರಕಿದ್ದರೂ ಅಸಮಗ್ರವಾಗಿದೆ. ಸದ್ಯಕ್ಕೆ ಲಭ್ಯವಿರುವ ಕೀರ್ತನೆಗಳನ್ನು ಇಲ್ಲಿ ವಿಭಾಗ ಮಾಡಲಾಗಿದೆ.

(೧) ದೇವತಾ ಸ್ತುತಿಗಳು : ಅದ್ವೈತ ತತ್ವಕ್ಕೆ ಅನುಸಾರವಾಗಿ ಹರಿ–ಹರ ಇಬ್ಬರನ್ನು ಸ್ತುತಿಸಿರುವ ದಾಸರು ವಿಶೇಷವಾಗಿ ಹರಿಯನ್ನು ಅದರಲ್ಲೂ ಕೃಷ್ಣ–ವೆಂಕಟೇಶ್ವರರನ್ನು ಅಧಿಕವಾಗಿ ಸ್ತುತಿಸಿದ್ದಾರೆ. ಮೊದಲಿಗೆ ಸಂಪ್ರದಾಯದಂತೆ ಗಣೇಶ ಮತ್ತು ಶಾರದಾಸ್ತುತಿಗಳನ್ನು ಅಳವಡಿಸಿದೆ.

'ಶರಣು ಶರಣು ಶರಣು ಶ್ರೀ ಗಣನಾಥ' ಎಂಬ ಕೀರ್ತನೆಯಲ್ಲಿ ಗುರುಸ್ತುತಿಯನ್ನು ಪರಂಪರೆಯಂತೆ ಗಣೇಶ–ಶಾರದೆ–ತಂದೆ–ತಾಯಿ–ಗುರುಗಳು ಹೀಗೆ ಎಲ್ಲರನ್ನು ಸ್ಮರಿಸಲಾಗಿದೆ.

'ಅಂಬಾ ಮೈದೋರು ಶಾರದಾಂಬ' ಎಂದು ಆರಂಭವಾಗುವ ಶಾರದಾ ಕೃತಿ ಸುಂದರವಾಗಿ ಮೂಡಿಬಂದಿದೆ.

'ತಾ ಕಾಯುತಿದ್ದ ಕೃಷ್ಣ ಗೋಪಾಲಕರನು' ಎಂಬ ಕೃಷ್ಣಸ್ತುತಿ ದಾಸರ ಶ್ರೀಕೃಷ್ಣ ಬಾಲಲೀಲೆಯ ಪ್ರಸಂಗದ ವಿವರಣೆಯಂತೆ ಕಂಡುಬಂದರೂ ಆ ಕೃತಿಯಲ್ಲಿ ಇಲ್ಲದಿರುವುದರಿಂದ ಕೀರ್ತನೆಯಾಗಿ ಸ್ವೀಕರಿಸಿದೆ.

ಸ್ತ್ರೀದೇವತಾಸ್ತುತಿಗಳಲ್ಲಿ 'ಗಂಗಾಸ್ತುತಿ' ವಿಶೇಷವಾಗಿದೆ. ೨೫ ನುಡಿಗಳ ದೀರ್ಘಕೃತಿಯಾಗಿರುವ ಇದರಲ್ಲಿ 'ಭಾಗವತ ಗಂಗೆ'ಯನ್ನಾಗಿ ಗಂಗಾನದಿಯನ್ನು ವಿಶೇಷೀಕರಿಸಿದೆ. ಗಂಗಾನದಿಯ ಚರಿತ್ರೆಯ ಜೊತೆಜೊತೆಗೇ ಗಂಗೆಯಿಂದ ಪುನೀತರಾದ ಭಾಗವತ ಭಕ್ತರ ಸಂಗತಿಗಳನ್ನೂ ವಿವರಿಸಿದ್ದಾರೆ.

(೨) ಗುರುಸ್ತುತಿಗಳು : ಇಲ್ಲಿ ೮ ಕೀರ್ತನೆಗಳಿದ್ದು ಮೊದಲೆರಡು ವಾಸುದೇವಾರ್ಯರನ್ನು ಕುರಿತವಾಗಿವೆ. 'ನೀನೊಲಿಯಬೇಕು ...' ಎಂಬ ಕೀರ್ತನೆಯಲ್ಲಿ 'ತಿರುಪತಿ ವೆಂಕಟ' ಅಂಕಿತವಿಲ್ಲ, ಬದಲಿಗೆ 'ಚಿಕನಾಗಪುರವಾಸ' ಎಂಬ ಅಂಕಿತ ಮಾತ್ರವಿದೆ. ಹೀಗೆ ಇದೊಂದೇ ಅಂಕಿತವಿರುವ ಕೀರ್ತನೆಗಳನ್ನು ವೆಂಕಟದಾಸಾರ್ಯರದ್ದೆಂದು ಸದ್ಯಕ್ಕೆ ಪರಿಗಣಿಸಿರುವ ಹಿನ್ನೆಲೆಯಲ್ಲಿ ಇದು ವೆಂಕಟದಾಸರದ್ದಿರಬಹುದು. ಆದರೆ ಹಸ್ತಪ್ರತಿಯಲ್ಲಿ 'ತಿರುಪತಿ ವೆಂಕಟ' ಅಂಕಿತದ ಕೀರ್ತನೆಗಳ ನಡುವೆ ಈ ಕೀರ್ತನೆ ಇದ್ದುದರಿಂದ ತಿಮ್ಮಪ್ಪದಾಸರದ್ದನ್ನಾಗಿ ಪರಿಗಣಿಸಿದೆ.

ಕೃಷ್ಣಯೋಗೀಂದ್ರನನ್ನು ಕುರಿತು ೨ ರಾಮಕೃಷ್ಣಾರ್ಯರನ್ನು ಕುರಿತು ೧ ಮತ್ತು ವೆಂಕಟದಾಸಾರ್ಯರನ್ನು ಕುರಿತು ೪ ಕೃತಿಗಳಿವೆ. ಈ ಎಲ್ಲವನ್ನು ತಿಮ್ಮಪ್ಪದಾಸರು 'ವಾಸುದೇವಾರ್ಯರ' ರೂಪದಲ್ಲೇ ಗ್ರಹಿಸಿರುವುದು ವಿಶೇಷವಾಗಿದೆ.

'ಏಗ್ಯೆವೆನೆಂತು ಜೀವಿಪೆನಗಲಿ ಶ್ರೀಕೃಷ್ಣಯೋಗೀಂದ್ರ ಮೂರುತಿಯ' ಎಂಬ ಕೃತಿ ಆತ್ಮನಿವೇದನೆಯ ರೂಪದಲ್ಲಿದ್ದು ಕೊನೆಯಲ್ಲಿ 'ಮರೆಯೊಕ್ಕೆ ನಾನು ತಿಮ್ಮದಾಸ ಜೀಯ ಪರಾಕು ಕರವಿಡಿಯಬೇಕೆನ್ನನು' ಎಂಬ ಕೋರಿಕೆಯಿದೆ. ಇವರಿಗೆ 'ರಾಮದಾಸ' 'ನರಸಾರ್ಯ' ಎಂಬ ಪರ್ಯಾಯನಾಮಗಳೂ ಇರುವುದನ್ನು ಈ ಕೀರ್ತನೆಗಳು ದಾಖಲಿಸುತ್ತಿದ್ದು, ಇವು 'ಅಂಕಿತ'ವಾಗಿರುವಂತೆ ತೋರುತ್ತದೆ. ಈ ಅಂಕಿತದಲ್ಲಿ ಹಲವು ಸಂಸ್ಕೃತ ಕೃತಿಗಳು ಲಭ್ಯವಿವೆ. ರಾಮಕೃಷ್ಣಾರ್ಯರ ಸ್ತುತಿಯಲ್ಲಿಯೂ 'ಮಂಗಳಗಿರಿನಿಲಯ ರೂಪ' ಎಂಬ ಉಲ್ಲೇಖ ಬಂದಿದ್ದು ಈ 'ಮಂಗಳಗಿರಿ' ಅಂಕಿತದಲ್ಲೂ ಹಲವು ಸಂಸ್ಕೃತ ಕೀರ್ತನೆಗಳು ಲಭ್ಯವಿದೆ. ಈ ಇಬ್ಬರು ಗುರುಗಳನ್ನು ತಿಮ್ಮಪ್ಪದಾಸರು ತಮಗೆ ಮಾರ್ಗದರ್ಶನ ಮಾಡಿರುವವರನ್ನಾಗಿ ಕಂಡಿದ್ದು, ಅತ್ಯಂತ ಭಕ್ತಿ–ಗೌರವಗಳಿಂದ ಸ್ಮರಿಸುತ್ತಾರೆ. ಆದರೆ ಇವರುಗಳ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಾಗುತ್ತಿಲ್ಲ. ಈ ಬಗ್ಗೆ ಪರಿಶೀಲನೆಯ – ಸಂಶೋಧನೆಯ ಅಗತ್ಯವಿದೆ. ಇದರಿಂದ ತಿಮ್ಮಪ್ಪದಾಸರು ಉಲ್ಲೇಖಿಸಿರುವ ಈ ಇಬ್ಬರು ಗುರುಗಳ ಅಂಕಿತಗಳಲ್ಲೇ ಅನೇಕ ರಚನೆಗಳು ಲಭ್ಯವಿದ್ದು ಅವುಗಳು ಕರ್ತೃತ್ವದ ಗೊಂದಲವೂ ಪರಿಹಾರವಾಗುತ್ತದೆ. ಪ್ರಸ್ತುತ 'ಜಯಜಯಾ ರಾಮಕೃಷ್ಣಾರ್ಯ' ಕೀರ್ತನೆಯಲ್ಲಿ 'ತಿರುಪತಿವೆಂಕಟ' ಆಗಲಿ 'ಚಿಕನಾಗಪುರವಾಸ' ಆಗಲಿ ಇಲ್ಲದಿದ್ದರೂ ಗುರುಸ್ತುತಿಯ ರೂಪದಲ್ಲಿರುವುದರಿಂದ ತಿಮ್ಮಪ್ಪದಾಸರದ್ದೆಂದು ಗ್ರಹಿಸಿದೆ. (ಇದು ರಾಮಕೃಷ್ಣಾರ್ಯರದ್ದೇ ಆಗಿರಲೂ ಸಾಧ್ಯವಿದೆ.)

ವೆಂಕಟದಾಸಾರ್ಯರನ್ನು ಕುರಿತ ನಾಲ್ಕು ಕೀರ್ತನೆಗಳಲ್ಲಿ
'ನೆರೆಧನ್ಯರಾದೆವಾವಿಲ್ಲ ಸಂದೇಹ ಗುರು
ವರ ವಾಸುದೇವಾರ್ಯ ಚಿಕನಾಗಪುರದಿ
ಪರತತ್ವವರುಪಿ ವೆಂಕಟದಾಸವೇಶದಿಂ
ಮರಳಿ ನಿಜದೊಳುನಿಂದೆ ಕರುಣಾಸಮುದ್ರ'

ಎಂಬ ಭಾವವನ್ನೇ ತಂದಿದ್ದಾರೆ. ಸೀತಾರಾಮಯ್ಯನವರು ಈಗಾಗಲೆ ನಿರ್ಧರಿಸಿರುವಂತೆ ವೆಂಕಟದಾಸರು ತಿಮ್ಮಪ್ಪದಾಸರ ಮಾತುಳ–ಸೋದರಮಾವ ಹಾಗೂ ಗುರುವಾಗಿದ್ದಾರೆ. ಇವರ ಆಶ್ರಯದಲ್ಲೇ ತಿಮ್ಮಪ್ಪದಾಸರು ಬೆಳೆದಿರುವುದೂ ಕೀರ್ತನೆಯಿಂದ ತಿಳಿದುಬರುತ್ತದೆ.

'ಜನಿಸಿದ ಮೂರು ವರುಷಕೇ ನಿನ್ನಯ ದಾಸ
ನೆನುತ ಮಾತುಳನಿಂದ ನುಡಿಸಿದೆ'

ಹಾಗಾಗಿ ತಿಮ್ಮಪ್ಪದಾಸರು ಅತ್ಯಂತ ಭಕ್ತಿ–ಭಾವ–ತನ್ಮಯತೆ–ಕೃತಜ್ಞತೆಯಿಂದ ಇವರನ್ನು ಸ್ತುತಿಸುತ್ತಾರೆ.

'ಶರಣು ಮಾತೆಯ ಸುತನೆ ಶರಣು ಹಿತಬೋಧಕನೆ
ಶರಣು ಬುದ್ಧಿಪ್ರದನೆ ಶರಣು ಸುಖಕರನೆ
ಶರಣು ವೇದಾಂತೋಪವೇಶನೆ ಪೋಷಕನೆ'

ಎಂದು ತಮ್ಮ ಸರ್ವತೋಮುಖ ಬೆಳವಣಿಗೆಯ ದಾತಾರರನ್ನಾಗಿಸಿ ಕೃತಕೃತ್ಯತೆಯನ್ನು ತೋರುತ್ತಾರೆ.

ಈ ಕೀರ್ತನೆಗಳಲ್ಲೂ 'ತಿರುಪತಿವೆಂಕಟ' ಅಂಕಿತವಿಲ್ಲದಿದ್ದರೂ ತಿಮ್ಮಪ್ಪದಾಸರ ಕೀರ್ತನೆಗಳ ನಡುವೆ ಇವು ಬರುವುದರಿಂದ, ಗುರುಸ್ತುತಿಯ ಭಾವದಲ್ಲಿರುವುದರಿಂದ ಮತ್ತು ಕೆಲವೆಡೆ ಸ್ವನಾಮವೇ ಇರುವುದರಿಂದ ತಿಮ್ಮಪ್ಪದಾಸರದ್ದೆಂದು ಪರಿಗಣಿಸಿದೆ.

ಆದರೆ ಗುರುಸ್ತುತಿಪರ ಕೀರ್ತನೆಗಳು ಇನ್ನು ಹಲವು ಇದ್ದು ಕೆಲವು ಅಸಮಗ್ರವಾಗಿವೆ. ಬಿಡಿಬಿಡಿ ಗರಿಗಳಲ್ಲಿ ಚೆದುರಿಹೋಗಿವೆ. ಒಟ್ಟಾಗಿ ಒಂದು ಹಸ್ತಪ್ರತಿಯಾಗಿ ದೊರಕುತ್ತಿಲ್ಲ. ಜೊತೆಗೆ ಅಂಕಿತಗಳ ಗೊಂದಲವೂ ಇದೆ. ಇವುಗಳನ್ನೆಲ್ಲ ಸರಿಪಡಿಸಿ ಒಂದು ಕ್ರಮಕ್ಕೆ ಅಳವಡಿಸಿ ಅಂಕಿತ ಸಮಸ್ಯೆ ಸರಿಪಡಿಸುವ ಕಾರ್ಯ ಆಗಬೇಕಾಗಿದೆ. ಅವುಗಳನ್ನೆಲ್ಲ ಸಂಗ್ರಹಿಸಿ ಅಧ್ಯಯನ ಮಾಡಿದ ಮೇಲಷ್ಟೆ 'ಗುರುವಿನ ವ್ಯಕ್ತಿತ್ವ ಈಗ ತಿಳಿದು ಬಂದಿರುವುದಕ್ಕಿಂತ ಹೆಚ್ಚು ಸ್ಪಷ್ಟರೇಖೆಗಳಿಂದ ಮೂಡಿನಿಲ್ಲುವ ಸಂಭವವಿದೆ" ಎಂಬ ಸೀತಾರಾಮಯ್ಯನವರ ಮಾತಿನಂತೆ ತಿಮ್ಮಪ್ಪದಾಸರ ಗುರುಪರಂಪರೆಯ ಮಹತ್ವದ ಅರಿವಾಗುತ್ತದೆ.

(೩) ಆತ್ಮನಿವೇದನೆ : ಈ ವಿಭಾಗದಲ್ಲಿ ಹೆಚ್ಚು ಕೀರ್ತನೆಗಳು ದೊರಕಿಲ್ಲ. ಇರುವವೆಲ್ಲ ಪ್ರಾಯಶಃ ಅರ್ಚನದಲ್ಲಿ ಅಳವಟ್ಟಿವೆ. ಇವರ ಬಹಳಷ್ಟು ಆತ್ಮನಿವೇದನೆಯ ಹಾಡುಗಳು ವಾಸುದೇವಾರ್ಯರು ಮತ್ತು ವೆಂಕಟದಾಸರಲ್ಲಿ ಮೊರೆಹೋಗಿರುವ ಗುರುಸ್ತುತಿಗಳಾಗಿಯೂ ನಿಲ್ಲುತ್ತವೆ. ಇರುವ ಕೆಲವೇ ಕೀರ್ತನೆಗಳಲ್ಲಿ ತಿಮ್ಮಪ್ಪದಾಸರು ಆರ್ತಭಾವವನ್ನು ಔಚಿತ್ಯಪೂರ್ಣವಾಗಿ ತಂದಿದ್ದಾರೆ.

'ಅಣುಮಾತ್ರವಿರಲಿಲ್ಲ ವಿಷಯಭೋಗಕೆ ಬೀಜ
ದಣಿಸಿದುದು ದಾರಿದ್ರ್ಯವು'
'ಹೇಮ ಭೂಮಿ ಹೆಣ್ಣಿಗಾಗಿ ಹೇಳದೇನೆ ನೊಂದೆನೈ
ತಾಮಸಗುಣಗಳಿಂದ ತಾಪ ಹೆಚ್ಚಿ ಬೆಂದೆನೈ'

ಮುಂತಾದ ಮಾತುಗಳಿಂದ ದಾಸರು ಸಂಸಾರದಲ್ಲಿ ತುಂಬ ಬಳಲಿದಂತೆ ಕಂಡುಬರುತ್ತಾರೆನ್ನಬಹುದು.

(೪) ಋಣ ಕೀರ್ತನೆಗಳು : ಆತ್ಮನಿವೇದನೆ ವಿಭಾಗದಲ್ಲೇ ಗುರುತಿಸಬಹುದಾದ "ಋಣ ಕೀರ್ತನೆಗಳು" ಎಂಬ ವಿಶೇಷ ಬಗೆಯ ಕೀರ್ತನೆಗಳನ್ನು ದಾಸರು ರಚಿಸಿದ್ದಾರೆ. 'ಋಣ'ದ ಬಗೆಗೆ ತೊಳಲಾಡಿರುವ ಭಾವ ಇಲ್ಲಿ ಮುಖ್ಯವಾಗಿ ಮೂಡಿಬಂದಿದೆ. ತಾವು ಮಾಡಿರುವ ಸಾಲ; ಅದನ್ನು ತೀರಿಸುವುದಕ್ಕೆ ಪಟ್ಟಿರುವ ಬವಣೆ; ತೀರಿಸಲಾಗದುದಕ್ಕೆ ಅನುಭವಿಸಿರುವ ಯಾತನೆ, ಪಾಪಭೀತಿ, ಪ್ರಾಯಶ್ಚಿತ್ತ, ಇತ್ಯಾದಿ, ಗಳನ್ನು ಮನಮುಟ್ಟುವಂತೆ ಹಿಡಿದಿಟ್ಟಿದ್ದಾರೆ. ಸಾಮಾನ್ಯವಾಗಿ ಹರಿದಾಸರು ವಿರಕ್ತರಾಗಿದ್ದು ಸಂಸಾರದಿಂದ ವಿಮುಖರಾಗಿರುತ್ತಾರೆ. ಅವರ ಬೇಡಿಕೆ ಏನಿದ್ದರೂ ಮೋಕ್ಷ–ಭಕ್ತಿ–ಭಗವದ್ದರ್ಶನ ಮಾತ್ರವಾಗಿರುತ್ತದೆ. ಆದರೆ ತಿಮ್ಮಪ್ಪದಾಸರಲ್ಲಿ ಅವುಗಳೊಂದಿಗೆ ಹಣದ ಬೇಡಿಕೆಯಿರುವುದು ವಿಶಿಷ್ಟವಾಗಿದೆ.

'ಹಣ ಹೊನ್ನು ಕೊಡು ಹೊನ್ನಾಂಬಾ'
'ಧನವಕೊಡಿಸಿ ಸಲಹೋ ಭಕ್ತರ ಪ್ರೇಮಾ' .

ಮುಂತಾದ ಸಾಲುಗಳನ್ನಷ್ಟೆ ಪರಿಗಣಿಸಿ ದಾಸರಲ್ಲಿ ಲೌಕಿಕ ಆಸಕ್ತಿಯಿತೆಂದು ಅಭಿಪ್ರಾಯಪಟ್ಟರೆ ತಪ್ಪಾಗುತ್ತದೆ. ದಾಸರ ಈ ಹಣದ ಬೇಡಿಕೆ ಏನಿದ್ದರೂ ತಾವು

ಮಾಡಿದ್ದ ಸಾಲದಿಂದ ಮುಕ್ತರಾಗುವುದಕ್ಕಷ್ಟೆ; ಋಣಬಾಧೆ ತೀರಿಸುವುದಕ್ಕೆ ಮಾತ್ರ ಎಂಬುದನ್ನು ಗ್ರಹಿಸಿದಾಗ ದಾಸರು ವಿರಕ್ತ ಜೀವನವನ್ನೇ ಹೊಂದಿದ್ದರೆಂಬುದು ಸ್ಪಷ್ಟವಾಗುತ್ತದೆ.

'ತಿಮ್ಮಪ್ಪದಾಸರು ಆರ್ತರಾಗಿ, ಜ್ಞಾನಿಯಾಗಿ, ಜಿಜ್ಞಾಸುವಾಗಿ 'ಅರ್ಥಾರ್ಥಿ' ಯಾಗಿ ಭಗವಂತನನ್ನು ಭಜಿಸಿದ್ದಾರೆ' ಎಂದಿರುವ ಸೀತಾರಾಮಯ್ಯನವರು ಈ 'ಅರ್ಥಾರ್ಥಿ'ಗೆ 'ಸಾಲಮಾಡಿ ಭಜನೆ ಗೋಷ್ಠಿ ಅನ್ನಸಂತರ್ಪಣೆ ಮುಂತಾದವನ್ನು ಮಾಡುವುದರಲ್ಲಿ ನಿರತರಾಗಿರಬೇಕು' ಎಂದು ಊಹಿಸುತ್ತಾರೆ. ದಾಸರ ಈ 'ಸಾಲ'ಕ್ಕೆ ಕೀರ್ತನೆಗಳಲ್ಲಿ ಸ್ಪಷ್ಟಕಾರಣ ದೊರೆಯುವುದಿಲ್ಲವಾದರೂ 'ಋಣಗೈದು ಸ್ವೋಪಕಾರಿಗೆ ಕೊಟ್ಟು ಹರಿಯಾರಾಧನೆಯನು' ಎಂಬ ಉಲ್ಲೇಖ ಮಾತ್ರ ಸ್ವಲ್ಪ ಬೆಂಬಲವಾಗಿ ತೋರುತ್ತದೆ. ಇನ್ನೊಂದೆಡೆ 'ದಾನಶುದ್ಧಿಯಿಲ್ಲದ ದಾನವ್ಯರ್ಥ ಎಂಬುದನು ಕೇಳಿ ಸ್ವಯಾರ್ಜಿತದಲಿ ಮಾಡಿದೆ' ಎಂಬ ಮಾತಿದ್ದು ಇವರು ಮಾಡುತ್ತಿದ್ದ 'ದಾನಶುದ್ಧಿ'ಯನ್ನು ಸ್ವಯಾರ್ಜಿತದ ಆಸ್ತಿಯನ್ನೇ 'ಹರಿಯಾರಾಧನೆ'ಗೆ ಬಳಸಿರುವುದನ್ನು ಗ್ರಹಿಸಬಹುದಾಗಿದೆ. ಈ 'ಹರಿಯಾರಾಧನೆಯ' ಜೊತೆಗೆ 'ಬಿಟ್ಟ ಬಾಯಿಗೆಲ್ಲ ತುತ್ತು ನೀಡಹೋಗಿರಬೇಕು ಜೊತೆಗೆ ಬಂಧು-ಬಳಗ ಮಕ್ಕಳು, ಮದುವೆ ಮುಂಜಿ ಔತಣ ಉಡುಗೊರೆ, ಅಂತೂ ತುಂಬ ಋಣಭಾರದಿಂದ ನಲುಗಿದಂತೆ ಕಾಣುತ್ತದೆ ದಾಸರು." (ಅರ್ಚನ, ಪೀಠಿಕೆ xxviii) ಎಂಬ ಅಭಿಪ್ರಾಯದಂತೆ ಸಂಸಾರಭಾರವನ್ನು ಊಹಿಸಬಹುದಾದರೂ 'ಹರಿಯಾರಾಧನೆ'ಗಳ ಖರ್ಚಿಗಾಗಿಯೇ ಸಾಲದ ಹೊರೆ ಅಧಿಕವಾಗಿರುವಂತೆ ತೋರುತ್ತದೆ.

ಈ ಋಣವನ್ನು ತೀರಿಸಲಾಗದುದಕ್ಕೆ. ಅದರಿಂದ ಮುಕ್ತನಾಗದೆ ಮೋಕ್ಷ ಪ್ರಾಪ್ತವಾಗದುದಕ್ಕೆ ದಾಸರಲ್ಲಿ ಅಪರಿಮಿತ ಪರಿತಾಪ ಉಂಟಾಗಿರುವುದು ಕೀರ್ತನೆಗಳಲ್ಲಿ ಪಡಿಮೂಡಿದೆ.

> 'ಋಣವ ಮಾಡಿದ ಪತಿತನು ನಾನು
> ಋಣವ ಮಾಡಿದ ಪಾಮರನಾಗಲೀಸದು
> ನರಳಿಪರ ಋಣಿಯ ಚಿಕನಾಗಪುರಿ ನಿಲಯ'

'ಋಣವ ಮಾಡ್ದಧಮಗುಸುರಲೆಯಿಲ್ಲ ನೀತಿಯ

ಮನು ಮುಖ್ಯ ಸ್ಮೃತಿಕರ್ತರು'

'ಋಣವ ಮಾಡಿದ ಪಾಪ ರುಜವಾಗಲೀಸದು

ಹಣ ಹೊನ್ನು ಕೊಡಿ ಪುಣ್ಯಹೃದಯರು ಒಲಿದು'

ಮುಂತಾಗಿ ಋಣಬಾಧೆ ನೀಗಿಕೊಳ್ಳಲು ಪರಿಪರಿಯಾಗಿ ಬಿನ್ನವಿಸಿರುವ ದಾಸರ 'ಋಣಕೀರ್ತನೆಗಳು' ಕನ್ನಡ ಹರಿದಾಸ ಸಾಹಿತ್ಯದಲ್ಲಿಯೇ ವಿಶಿಷ್ಟವಾಗಿ ನಿಲ್ಲುವವಾಗಿದೆ. ಇಂತಹ ಋಣಕೀರ್ತನೆಗಳು ಇನ್ನೂ ಕೆಲವು ಇದ್ದಿರಬಹುದಾಗಿದ್ದು ಅವುಗಳನ್ನೆಲ್ಲ ಪರಿಶೋಧಿಸಿ ಪ್ರಕಟಿಸುವ ಅಗತ್ಯವಿದೆ.

'ಅರಿಯದಜ್ಞತೆಯಿಂದಲಾಚರಿಸಿದ ಪಾಪ

ಹರಿಯದೆ ಸ್ಮರಿಸಲು ಹರಿಯೆಂದು ನಿನ್ನನು'

ಎಂಬ ಕೀರ್ತನೆ ಅಸಮಗ್ರವಾಗಿದ್ದು ಹಸ್ತಪ್ರತಿಯಲ್ಲಿ 'ಬರಲು ಕೃತಾರ್ಥನೆಂಬರು ಬುಧರು' ಎಂಬ ಸಾಲಿನಿಂದ ಆರಂಭವಾಗಿದೆ. ಇದು ೧೪ ನೇ ನುಡಿಯ ೨ನೇ ಸಾಲಾಗಿದ್ದೆ ೨೧ನೇ ನುಡಿಗೆ ಕೀರ್ತನೆ ಮುಗಿದಿದೆ. ಮೊದಲ ಹದಿಮೂರು ನುಡಿಗಳು ಮತ್ತು ಹದಿನಾಲ್ಕನೇ ನುಡಿಯ ಮೊದಲ ಸಾಲು ಲಭ್ಯವಿಲ್ಲ. ಇರುವಷ್ಟನ್ನಾದರೂ ಪ್ರಕಟಿಸಬೇಕೆಂಬ ಆಶಯದಿಂದ ಇದನ್ನು ಒಂದು ಸ್ವತಂತ್ರ ಕೀರ್ತನೆಯಾಗಿ ಮಾರ್ಪಡಿಸುವ ಸ್ವಾತಂತ್ರವಹಿಸಿದೆ. ೧೪ನೇ ನುಡಿಯ ೨ ನೇ ಸಾಲನ್ನು ಹೊರತುಪಡಿಸಿ ೩,೪ನೇ ಸಾಲನ್ನೇ ಪಲ್ಲವಿಯಾಗಿ ಸ್ವೀಕರಿಸಿ ಋಣಕೀರ್ತನೆಗಳ ವಿಭಾಗದಲ್ಲಿ ಅಳವಡಿಸಿದೆ. (ಇದರ ಪೂರ್ಣ ಪಾಠ ದೊರೆತ ಮೇಲೆ ಪುನಃ ಪರಿಷ್ಕರಿಸಲು ಅವಕಾಶವಿದೆ.)

ಇವರ ಕಾರಣದಿಂದ ಇವರ ಪುತ್ರರಾದ ನಾರಾಯಣದಾಸರೂ ಈ ಬಾಧೆಯಲ್ಲಿ ತೊಳಲಿರುವ ತಮ್ಮ ಮೇಲೆ ೨೧೦೦ ರೂ.ಗಳ ಸಾಲದ ಬಾಧೆ ತಂದೆಯವರಿಂದ ಬಂದಿರುವ ಸಂಗತಿಯನ್ನು ತಮ್ಮ ಕೀರ್ತನೆಯಲ್ಲಿ ಉಲ್ಲೇಖಿಸಿದ್ದಾರೆ. ಈ ಋಣ ಕೀರ್ತನೆಗಳನ್ನು ಹೆಚ್ಚಿನ ಅಧ್ಯಯನಕ್ಕೆ ಒಳಪಡಿಸಬೇಕಾದ ಅಗತ್ಯವಿದೆ.

(೫) ಒಬ್ಬಟ್ಟಿನ ಕೀರ್ತನೆಗಳು : ತಿಮ್ಮಪ್ಪದಾಸರು ಕನ್ನಡದ ಹರಿದಾಸ ಸಾಹಿತ್ಯದಲ್ಲೇ ಹೊಸ ಬಗೆಯದೆನ್ನುವಂತೆ ಒಬ್ಬಟ್ಟಿನ ಮೇಲೆ ಕೀರ್ತನೆ ರಚಿಸಿದ್ದಾರೆ. ಏಳು ನುಡಿಗಳಲ್ಲಿರುವ ಈ ಕೀರ್ತನೆಗೆ ಮೊದಲು ಮೂರು ಕಂದಪದ್ಯಗಳೂ ಕೊನೆಯಲ್ಲಿ ಒಂದು ಮಂಗಳವೂ ಇದೆ. ಈ ನುಡಿಗಳೂ ೧೮–೨೦ ಸಾಲುಗಳದ್ದಾಗಿದ್ದು ಒಂದೊಂದು ನುಡಿಗಳೇ ಒಂದೊಂದು ಕೀರ್ತನೆಯಷ್ಟು ದೀರ್ಘವಾಗಿವೆ. ಒಬ್ಬಟ್ಟಿನ ಮಿಶ್ರಣಗಳಾದ ಗೋಧಿಹಿಟ್ಟು, ತೊಗರಿಬೇಳೆ, ಬೆಲ್ಲ, ತುಪ್ಪ, ಎಣ್ಣೆಗಳು ತಮ್ಮ ತಮ್ಮ ಘನತೆಯನ್ನು ಹೇಳಿಕೊಂಡು ತಾವೇ ಹೆಚ್ಚೆನ್ನುವ ಹಮ್ಮಿನಿಂದ ಬೀಗಿದ್ದು, ಕೊನೆಗೆ 'ಚಿಕನಾಗಪುರವಾಸ'ನಲ್ಲಿ ಮೊರೆಯಿಟ್ಟು ಎಲ್ಲರೂ ಸಮನಾಗಿ ಒಂದಾಗಿ ಇದ್ದಾಗ ಮಾತ್ರ ಸೌಖ್ಯವೆಂಬ ತೀರ್ಪಿಗೆ ಬದ್ಧರಾಗುವ ಸಂಭಾಷಣೆಯ ಶೈಲಿಯಲ್ಲಿ ಈ ಕೀರ್ತನೆಯಿದೆ.

> 'ಬೆಲ್ಲವು ಗೋಧಿಯು ತೊಗರಿಯು
> ಒಳ್ಳೆಣ್ಣೆಯು ತುಪ್ಪವೆಂಬೀಯೈದ ನುತಿಯಲು
> ಎಲ್ಲಾ ಲೋಕವ ನಿರ್ಮಿಸಿ
> ಚಲ್ಲಿದ ಭೂತಗಳು ತತ್ವಾರ್ಥಕ್ಕಾಸ್ಪದವಿಲ್ಲ
> ಹರುಷದಲಿದರೊಳು ಬೆರೆದಿಹ
> ಪರಮನು ವಿಂಗಡಿಸಿ ದೂಷಿಸಿ ಮತ್ತೊಡಗೂಡಿಸಿ
> ಕರಗುತ ಪ್ರಮದರಿದರೊಳು
> ನೆರೆಪೊಂದುವನೀಗ ಜೀವನಿದು ತತ್ವಾರ್ಥವು

ಎಂಬ ಕಂದಪದ್ಯಗಳಲ್ಲಿ ಈ ಒಬ್ಬಟ್ಟಿನ ವಿಶೇಷವನ್ನು ಅದರ ಮೂಲಕ ಕಾಣಬಹುದಾದ ತತ್ವವನ್ನು ಸಂಗ್ರಹಿಸಿದ್ದಾರೆ.

> 'ಜಯಮಂಗಳಂ ಶುಭೋದಯ ಮಂಗಳಂ
> ನಯವಿದರಿಗೊಪ್ಪಾದ ಒಬ್ಬಟ್ಟಿಗೆ'

ಎಂಬ ಮಂಗಳದಿಂದ ಈ ಪ್ರಕರಣವನ್ನು ಸೊಗಸುಗೊಳಿಸಿದ್ದಾರೆ.

ಈ ಸಂಪುಟದಲ್ಲಿ ಒಂದು ದಂಡಕವೂ ಇದ್ದು 'ಏವಂ ನಿಶಾಸಾಬ್ರು-ವತೋದ್ರತೀತಾನಂದಸ್ಯ' ಎಂದು ಆರಂಭವಾಗುತ್ತದೆ. ಇದು ಸಂಪೂರ್ಣ ಸಂಸ್ಕೃತದಲ್ಲಿದ್ದು ಇದರಲ್ಲಿ ಯಾವ ಅಂಕಿತವೂ ಕಂಡುಬರುವುದಿಲ್ಲ. ಇದು ತಿಮ್ಮಪ್ಪದಾಸರ ಕೀರ್ತನೆಗಳ ಜೊತೆ ಹಸ್ತಪ್ರತಿಯಲ್ಲಿದ್ದುದರಿಂದ ಇಲ್ಲಿ ಸ್ವೀಕರಿಸಿದೆಯಾದರೂ ಇದರ ಕರ್ತೃತ್ವದ ಬಗ್ಗೆ ನಿಷ್ಕರ್ಷೆಯಾಗಬೇಕಾಗಿದೆ. ಇದೇ ರೀತಿ ಇನ್ನು ಹಲವು ಸಂಸ್ಕೃತ-ತೆಲುಗು ರಚನೆಗಳೂ ಹಸ್ತಪ್ರತಿಗಳಲ್ಲಿ ದೊರಕುತ್ತಿದ್ದು ಇವನ್ನೆಲ್ಲ ಪರಿಶೀಲಿಸುವ ಅಗತ್ಯವಿದೆ.

(೬) ಗುರುಕರುಣೆ ಕೀರ್ತನೆ : ಇದು ಒಂದು ವಿಶೇಷ ಸಂದರ್ಭದ ಕೀರ್ತನೆಯಾಗಿದ್ದು ಇದರಲ್ಲಿ ೫ ಹಾಡುಗಳಿವೆ. ಇದರಲ್ಲಿ 'ಬಂದೊದಗಿತು ಪುಣ್ಯಫಲವು' ಎಂಬುದು 'ಅರ್ಚನ'ದಲ್ಲಿ ಪೂಜಾವಿಧಾನದ ಕೀರ್ತನೆಯಾಗಿ ಸೇರಿದೆ. ಇಲ್ಲಿ ಅದನ್ನು ಹೊರತುಪಡಿಸಿ ಉಳಿದ ನಾಲ್ಕು ಹಾಡುಗಳನ್ನು ಕೊಟ್ಟಿದೆ. ಇವು ಒಂದಕ್ಕೊಂದು ಸಂಬಂಧವನ್ನು ಬೆಸೆದುಕೊಂಡು ಇಡೀ ಒಂದು ಪ್ರಸಂಗವನ್ನಾಗಿ ಚಿತ್ರಿಸುತ್ತವೆ. ದಾಸರಿಗೆ ಶ್ರೀರಂಗಪಟ್ಟಣದ ಸಮೀಪದಲ್ಲಿರುವ 'ಲಿಂಗಾಭಟ್ಟರಗ್ರಹಾರ' ದಲ್ಲಿ ವಾಸುದೇವಾರ್ಯರು ದರ್ಶನ ಕೊಟ್ಟು, ಪಾದುಕೆಗಳನ್ನು ಬಿಟ್ಟು, ಆಧ್ಯಾತ್ಮಬೋಧೆಯನ್ನು ಕರುಣಿಸಿದ ಸಂದರ್ಭದ ಘಟನೆಯಾಗಿ ಈ ಕೀರ್ತನೆ ಕಂಡುಬರುತ್ತದೆ. ಇದರಲ್ಲಿ ಎರಡು ಹಾಡುಗಳು ಭಾಮಿನಿಷಟ್ಪದಿಯ ಲಯದಲ್ಲಿವೆ. ಒಂದರಲ್ಲಿ ೨೧ ಷಟ್ಪದಿಗಳೂ ಇನ್ನೊಂದರಲ್ಲಿ ೭ ಷಟ್ಪದಿಗಳೂ ಇವೆ. ಇವುಗಳಿಗೆ ಪಲ್ಲವಿ, ರಾಗ ತಾಳಗಳ ಸೂಚನೆಯಿಲ್ಲ.

ತಿಮ್ಮಪ್ಪದಾಸರು 'ಅರ್ಚನ' ಸಂಪಾದಿಸುವ ಸಂದರ್ಭದಲ್ಲಿ ನಡೆಸಿದ ಕ್ಷೇತ್ರಕಾರ್ಯದ ಸಂದರ್ಭದಲ್ಲಾಗಲಿ ಪ್ರಸ್ತುತ ಕೀರ್ತನೆಗಳ ಸಂಕಲನದ ಸಂದರ್ಭದಲ್ಲಿ ಸ್ವತಃ ಸಂಪಾದಕನೂ ನಡೆಸಿದ ಸಂದರ್ಶನಗಳಲ್ಲಾಗಲಿ ಯಾವ ವ್ಯಕ್ತಿಗಳಿಂದಲೂ ಈ ಪ್ರಕರಣಕ್ಕೆ ಪೋಷಕವಾಗುವ ಅಂಶಗಳು ವ್ಯಕ್ತವಾಗಿಲ್ಲ. ಇದು ತಿಮ್ಮಪ್ಪದಾಸರನ್ನು ಹರಿದಾಸರನ್ನಾಗಿಸಿದ; ಅವರಲ್ಲಿ ಜ್ಞಾನೋದಯವನ್ನು ರೂಪಿಸಿದ ವಿಶೇಷ ಘಟನೆಯಂತೆ ಕೀರ್ತನೆಯಲ್ಲಿ ವ್ಯಕ್ತವಾಗಿದ್ದರೂ ಇವರ ಬಂಧುವಲಯದಲ್ಲಿ ಗುರುಪರಂಪರೆಯ ಸಂಪ್ರದಾಯಗಳು ಆಚರಣೆಯಲ್ಲಿದ್ದರೂ ಇಂತಹ ವಿಶೇಷ

ಘಟನೆಯು ದಾಸರ ಬದುಕಿನ ವಿಶೇಷ ಸಂಗತಿಯಾಗಿ ಉಳಿದ ಬಂದಿಲ್ಲದಿರುವುದು ಕುತೂಹಲಕರವಾಗಿದೆ. ಇದರಿಂದ ಈ ಘಟನೆ ತಿಮ್ಮಪ್ಪದಾಸರಿಗೆ ಸಂಬಂಧಿಸಿದ್ದೇ ಎಂಬ ಅನುಮಾನವನ್ನುಂಟು ಮಾಡುತ್ತದೆ. ಸ್ಥಳಪರಿಶೀಲನೆ ಮಾಡಿ ಉಲ್ಲೇಖಿತ ವ್ಯಕ್ತಿಗಳ ಜಾಡುಹಿಡಿದು ಕ್ಷೇತ್ರಕಾರ್ಯ ನಡೆಸಿದಲ್ಲಿ ದಾಸರ ಜೀವನದ ಮೇಲೆ ಹೆಚ್ಚಿನ ಬೆಳಕು ಚೆಲ್ಲಬಹುದಾಗಿದೆ.

(೭) ಪೂಜಾ ವಿಧಾನದ ಕೀರ್ತನೆಗಳು : ಇವುಗಳು ಈಗಾಗಲೇ ಅರ್ಚನ ಹೆಸರಿನಲ್ಲಿ ಸಂಪಾದಿತವಾಗಿರುವ ೧೦೮ ಕೀರ್ತನಗುಚ್ಛವಾಗಿದೆ. ಅರ್ಚನ ಹೆಸರೇ ತಿಳಿಸುವಂತೆ ಇವು ಪೂಜಾವಿಧಾನದ ವಿಧಿ–ವಿಧಾನಗಳನ್ನು ಅಳವಡಿಸಿಕೊಂಡು ಮಾಡುವ ಸ್ವಾಮಿಯ ಧ್ಯಾನ ಸೇವೆ. ಕೀರ್ತನ ಸಾಹಿತ್ಯದಲ್ಲಿ ಈ ಬಗೆಯ ಪ್ರಯತ್ನಗಳಿರುವ ಪುರಂದರದಾಸರ, ತ್ಯಾಗರಾಜರ ಮತ್ತು ಇನ್ನೂ ಕೆಲವು ದಾಸರ ಬಿಡಿ ಕೃತಿಗಳಿದ್ದರೂ ಅವುಗಳಿಗಿಂತ ಇವು ಭಿನ್ನವಾಗಿವೆ. ಕ್ರಮಬದ್ಧವಾದ 'ಇಷ್ಟದೇವತೆಗೆ ಅರ್ಪಿಸಲೆಂದು ಭಕ್ತಿಸೂತ್ರದಿಂದ ಕೋದ ಅಷ್ಟೋತ್ತರಶತನಾಮ ವಾಕ್‌ಪುಷ್ಪಮಾಲಿಕೆ' ಇದೊಂದೆ ಎಂಬ ಹೆಗ್ಗಳಿಕೆಗೆ ಈ ಕೀರ್ತನೆಗಳು ಪಾತ್ರವಾಗಿವೆ. 'ಜಡ ಪ್ರಕೃತಿಯೆ ಪಾದವೆಂಟರ ಪೀಠವು' 'ಪೂಜಿಸುವೆನನವರತ ಪರಮಪುರುಷನನು', 'ಮಾನಸ ಪೂಜೆಯ ವಿರಚಿಸಿ' ಮುಂತಾದ ಕೀರ್ತನೆಗಳೆಲ್ಲ ವಿಶಿಷ್ಟವಾದ ಅದ್ವೈತ ತತ್ವದ ಧ್ವನಿಗಳನ್ನು ಹೇಗೋ ಹಾಗೆಯೇ ಸಾಮಾನ್ಯ ಭಕ್ತನೊಬ್ಬನ ಅಂತರಂಗ ನಿವೇದನೆಯನ್ನೂ ಸಮರ್ಥವಾಗಿ ಹೊರಗೆಡಹುತ್ತವೆ. ಇಲ್ಲಿನ ನೂರಾ ಎಂಟು ಕೀರ್ತನೆಗಳು ದೇವರಿಗರ್ಪಿಸಿದ ಬಿಡಿ ಹೂಗಳಾಗಿದ್ದರೂ ಇವುಗಳನ್ನೇ ಸುಂದರವಾಗಿ ಕಟ್ಟಿ ಅಣಿಗೊಳಿಸಿದ ಒಂದು ಮಾಲೆಯಂತೆ ಕಂಗೊಳಿಸುತ್ತವೆ. ಇದನ್ನು 'ಒಂದು ಗೇಯ ಪ್ರಬಂಧ' ಎಂದು ಕರೆಯಲಾಗಿದೆ.

ಅರ್ಚನದಲ್ಲಿ ದೇವತಾಸ್ತುತಿಗಳು ಗುರುಸ್ತುತಿಗಳು ಮತ್ತು ಆತ್ಮನಿವೇದನೆಯ ಕೃತಿಗಳನ್ನು ಪೂಜಾವಿಧಾನದ ಕ್ರಮದಲ್ಲಿ ಜೋಡಿಸಲ್ಪಟ್ಟಿವೆ. ಗಣೇಶ–ಶಾರದಸ್ತುತಿಯಿಂದ ಆರಂಭ ಮಾಡಿ ಹರಿ–ಹರ ಇಬ್ಬರನ್ನು ಸಮಾನವಾಗಿ ಸ್ತುತಿ ಮಾಡಲಾಗಿದೆ.

(೮) ಕಾಯ-ಜೀವ ಸಂವಾದ ಕೀರ್ತನೆಗಳು : ಇದೊಂದು ಸ್ವತಂತ್ರ ಕೃತಿಯೆನಿಸುವಷ್ಟರ ಮಟ್ಟಿಗೆ ಪ್ರತ್ಯೇಕ ಕೀರ್ತನಗುಚ್ಛವಾಗಿದೆ. ಪ್ರಸ್ತುತ ೧೫ ಕೀರ್ತನೆಗಳಿದ್ದು, ಅಸಮಗ್ರವಾಗಿದೆ. ಇನ್ನೂ ಕೆಲವು ಇದ್ದಿರುವ ಸಾಧ್ಯತೆಯಿದೆ. ಇರುವ ಕೀರ್ತನೆಗಳಲ್ಲಿ ಕಾಯ-ಜೀವಗಳು ಪರಸ್ಪರ ಸಂಭಾಷಿಸುವ ಶೈಲಿಯಲ್ಲಿ ಜೋಡಣೆಯಿದೆ. ಪ್ರತಿಯೊಂದು ಕೀರ್ತನೆಯ ಕೊನೆಯಲ್ಲಿ ಒಂದು ಕಂದಪದ್ಯದ ರಚನೆಯಿದೆ. ಅದರಲ್ಲಿ ಎರಡೂ ಕೀರ್ತನೆಗಳ ಭಾವ-ಸಂಬಂಧಗಳ ಜೋಡಣೆಯಿದೆ.

ಕಾಯವಿದು ನಿತ್ಯವೆಂದು ನೆಚ್ಚಬೇಡ
ಮಾಯಾಕಾರನಾಗಿ ಮೆರೆವುದಿದ ತಿಳಿದುನೋಡ
ಕಾಯವಳಿವ ಮುನ್ನ ಹರಿಯ ಕೃಪೆಯ ಜೋಡ ತೊಡು
ನಾಯಬಾಯತುತ್ತ ನಂಬಿ ಬೆರೆಯಬೇಡ

ಎಂಬ ಧಾಟಿಯಲ್ಲಿ ನುಡಿಗಳೂ

ಕಂ|| ಜೀವನು ವಿರತಿಯ ಸಾಧಿಪ
ಭಾವದಿ ಮನದೊಡನೆ ಕಾಯವ ನೆಚ್ಚದಿರೆನ್ನುತ
ಕೈವಲ್ಯದ ಪಥವ ಪೇಳಲು
ಜೀವನೊಳಾಡಿದುದು ಕಾಯವಚ್ಚರಿಯೆನಲು

ಎಂಬಂತೆ ಕಂದಪದ್ಯಗಳೂ ಈ ಕೃತಿಯ ಕೀರ್ತನೆಗಳಲ್ಲಿ ಸಾಗುತ್ತವೆ. ಕಾಯವನ್ನು ದೇಹವನ್ನಾಗಿ ಜೀವವನ್ನು ಆತ್ಮ-ಪ್ರಾಣವನ್ನಾಗಿಯೂ ಕಲ್ಪಿಸಿದ್ದು ದೇಹ-ಆತ್ಮಗಳ ಸಂಬಂಧವನ್ನು ಆಧ್ಯಾತ್ಮಿಕವಾಗಿ ವಿಶ್ಲೇಷಿಸಿರುವುದು ಈ ಕೀರ್ತನೆಗಳ ವೈಶಿಷ್ಟ್ಯವಾಗಿದೆ. ಇದು ತಾತ್ವಿಕ ನೆಲೆಗಟ್ಟಿನ ಮೇಲೆ ನಿಲ್ಲುವಂತಿದ್ದು ಅದ್ವೈತ ತತ್ವಗಳ ಹಿನ್ನೆಲೆಯಲ್ಲಿ ಈ ಕಾಯ-ಜೀವಗಳ ಸಂಬಂಧವನ್ನು ದಾಸರು ತುಂಬ ಸೊಗಸಾಗಿ ನಿರೂಪಿಸಿದ್ದಾರೆ. ಇದರ ಉಳಿದ ಕೀರ್ತನೆಗಳೂ ಲಭ್ಯವಾದಲ್ಲಿ ಕನ್ನಡ ಸಾಹಿತ್ಯಕ್ಕೆ ಕೀರ್ತನ ಪ್ರಕಾರದಲ್ಲಿ ರಚನೆಯಾಗಿರುವ ಇನ್ನೊಂದು ಕೃತಿ ಲಭ್ಯವಾದಂತಾಗುತ್ತದೆ ಮತ್ತು ವಿಶಿಷ್ಟಕೃತಿಯೊಂದು ದಾಖಲೆಯೂ ಆಗುತ್ತದೆ. ಇದು ಏಕಕಾಲಕ್ಕೆ

ತಾತ್ವಿಕವಾಗಿಯೂ ಸಾಮಾಜಿಕವಾಗಿಯೂ ಮನುಷ್ಯನ ಮನಸ್ಸು ಮತ್ತು ದೇಹಗಳ ಸಂಬಂಧವನ್ನು ಮನವರಿಕೆ ಮಾಡಿಕೊಡುವ ಮುಖ್ಯ ಕೃತಿ ಎನಿಸುತ್ತದೆ.

"ವಿದ್ಯೆದಲ್ಲಿ ನಿಬಂಧವಾಯಿತು', 'ವಿದ್ಯವಿಸ್ತರವಾದರದ್ದುವುದು ಗರ್ವದಲಿ', ಪಂಡಿತತ್ವಭಿಮಾನ' ಮುಂತಾದ ಕೀರ್ತನೆಗಳು ತಿಮ್ಮಪ್ಪದಾಸರ ಪಾಂಡಿತ್ಯ ಜ್ಞಾನದತ್ತ ದೃಷ್ಟಿ ಹರಿಸುತ್ತವೆ. ಸಂಸ್ಕೃತ ಕೃತಿ ರಚನೆ ಸಾಮರ್ಥ್ಯ ಇವರಲ್ಲಿತ್ತು, ತೆಲುಗಿನಲ್ಲಿಯೂ ಕೃತಿ ರಚನೆಯ ಸುಳಿವು ಇದ್ದು, ಇದು ನಿಜವಾದಲ್ಲಿ ತೆಲುಗು ಭಾಷಾಜ್ಞಾನವನ್ನೂ ಹೇಳುತ್ತದೆ". ಎಂಬ ಅಭಿಪ್ರಾಯವಿದ್ದ ಈ ತಿಮ್ಮಪ್ಪದಾಸರ ಮತ್ತು ಇವರ ಪರಂಪರೆಯ ಇತರ ದಾಸರ ಕೀರ್ತನೆಗಳ ನಿಷ್ಕರ್ಷೆಯಾದ ಹೊರತು ಏನನ್ನು ಹೇಳಲಾಗುವುದಿಲ್ಲ. ನಾನಾ ಶಾಸ್ತ್ರ ಗ್ರಂಥಗಳನ್ನು ಅಪಾರವಾಗಿ ಅಧ್ಯಯನ ಮಾಡಿದವರಾಗಿದ್ದಾರೆ. ಕೆಲವು ಕೃತಿಗಳಲ್ಲಿನ ಭಾಷಾ ಪ್ರೌಢಿಮೆ, ತತ್ವವಿಚಾರಗಳ ನಿರ್ವಹಣೆ ನೋಡಿದರೆ ತಿಮ್ಮಪ್ಪದಾಸರು ಪಂಡಿತರೂ, ವಿದ್ವಾಂಸರೂ, ಪ್ರತಿಭಾನ್ವಿತ ಕವಿಗಳೂ, ಆಗಿದ್ದರೆಂದು ಹೇಳಬಹುದು. ಸ್ತುತಿಪರ ಕೀರ್ತನೆಗಳು, ಗುರುಸ್ತುತಿಯ ಕೀರ್ತನೆಗಳು, ಆತ್ಮವಿವೇಚನೆ, ಸಮಾಜದರ್ಶನದ ಕೀರ್ತನೆಗಳೊಂದಿಗೆ ಒಬ್ಬಟ್ಟಿನ ಕೀರ್ತನೆಗಳು, ಋಣ ಕೀರ್ತನೆ, ಕಾಯ–ಜೀವ ಸಂವಾದ ಕೀರ್ತನೆಗಳಂತಹ ವಿಶೇಷ ಕೀರ್ತನೆಗಳನ್ನು ಕನ್ನಡಕ್ಕೆ ಕೊಟ್ಟಿರುವ ತಿಮ್ಮಪ್ಪದಾಸರು ಕನ್ನಡ ಹರಿದಾಸ ಸಾಹಿತ್ಯದಲ್ಲಿ ವಿಶೇಷಸ್ಥಾನವನ್ನು ಪಡೆಯುತ್ತಾರೆ.

(ಇ) ಕೀರ್ತನೆಗಳ ಆಕರ :

ಈ ಕೀರ್ತನೆಗಳ ಸಂಕಲನಕ್ಕಾಗಿ ಎಂ.ವಿ.ಸೀತಾರಾಮಯ್ಯನವರು ಸಂಪಾದಿಸಿರುವ 'ಅರ್ಚನ' (೧೯೭೫) 'ಕೀರ್ತನ ಕುಸುಮಾಂಜಲಿ' (೧೯೮೦) ಮತ್ತು ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ ಪ್ರಕಟಿಸಿರುವ 'ತಿಮ್ಮಪ್ಪದಾಸರ ಕೀರ್ತನೆಗಳು' (೨೦೦೩) ಸಂ: ನಾ.ಗೀತಾಚಾರ್ಯ, ಎನ್.ಎಸ್.ರಾಮಸ್ವಾಮಿ ಅಯ್ಯರ್ – ಈ ಪುಸ್ತಕಗಳನ್ನು ಮುಖ್ಯ ಆಕರವಾಗಿ ಬಳಸಿಕೊಂಡಿದೆ. ಇದರೊಂದಿಗೆ ಪ್ರತಿಷ್ಠಾನದಲ್ಲಿರುವ ಹಸ್ತಪ್ರತಿಗಳು ಹಾಗೂ ವೆಂಕಟದಾಸರ ವಂಶಾವಳಿಯಲ್ಲಿ ಬರುವ ಶ್ರೀಮತಿ ಗೌರಮ್ಮ ಮತ್ತು ಅವರ ಮಗಳು ಪದ್ಮಾವತಿ ಅವರ ನೆನಪುಗಳ ಸಹಾಯವನ್ನು ಪಡೆಯಲಾಗಿದೆ.

೪. ನಾರಾಯಣದಾಸರು

(ಅ) ಜೀವನ ವಿವರ :

ನಾರಾಯಣದಾಸರು 'ಕೀರ್ತನ ಕುಸುಮಾಂಜಲಿ'ಯ ಮೂಲಕ ಕೀರ್ತನಕಾರರಾಗಿ ಕನ್ನಡ ಹರಿದಾಸ ಸಾಹಿತ್ಯದಲ್ಲಿ ತಿಮ್ಮಪ್ಪದಾಸರ ಶಿಷ್ಯ–ಪುತ್ರರಾಗಿ ದಾಖಲಾಗಿದ್ದಾರೆ. ನಾರಾಯಣದಾಸರ ಜನನ ದಿನಾಂಕ ನಿರ್ಧಾರವಾಗಿದ್ದರೂ ಮರಣ ಹೊಂದಿದ್ದು ಯಾವಾಗ ಎಂಬುದರ ಉಲ್ಲೇಖ ಲಭ್ಯವಿಲ್ಲ. ಆದರೂ ಸೀತಾರಾಮಯ್ಯನವರು ಚಾಮರಾಜ ಒಡೆಯರ ನಂತರ ೧೮೯೪ರಿಂದ ೧೯೦೨ರವರೆಗೆ ನಾಲ್ವಡಿ ಕೃಷ್ಣರಾಜ ಒಡೆಯರ ಮಾತೃಶ್ರೀ ವಾಣಿವಿಲಾಸ ಅಂಬಾ ರಿಜೆಂಟರಾಗಿದ್ದು ನಂತರ ನಾಲ್ವಡಿಯವರು ಪಟ್ಟಕ್ಕೆ ಬಂದಿರುವ ಇತಿಹಾಸದ ಜಾಡನ್ನು ಹಿಡಿದು ಇವರ ೩೭ ಕೀರ್ತನೆಗಳಿರುವ ಹಸ್ತಪ್ರತಿಯ ಕೊನೆಯ ಮಂಗಳದಲ್ಲಿ 'ಕೃಷ್ಣನೃಪತಿ'ಯಾದ ನಾಲ್ವಡಿ ಕೃಷ್ಣರಾಜ ಒಡೆಯರನ್ನು ಉಲ್ಲೇಖಿಸಿರುವುದರ ಹಿನ್ನೆಲೆಯಲ್ಲಿ ಕ್ರಿ.ಶ.೧೯೦೨ರವರೆಗೆ ಸು.೮೦ ವರ್ಷಗಳ ತುಂಬು ಜೀವನವನ್ನು ದಾಸರು ಅನುಭವಿಸಿರಬಹುದೆಂದು ಹೇಳಿದ್ದಾರೆ. ಇವರಿಗೆ ಇಬ್ಬರು ತಮ್ಮಂದಿರೂ ಇಬ್ಬರೂ ತಂಗಿಯರೂ ಇದ್ದರು. ಇವರು ಹರಿತಸಗೋತ್ರದ ಸ್ಮಾರ್ತ ಬ್ರಾಹ್ಮಣರ ಕಮ್ಮೆಕುಲದ ಬಬ್ಬೂರುಕಮ್ಮೆ ಗುಂಪಿನವರು ಎಂಬುದು ತಿಮ್ಮಪ್ಪದಾಸರ ಜೀವನ ವಿವರದಲ್ಲೇ ಕಂಡುಬರುತ್ತದೆ.

ತಮ್ಮಂದಿರಾದ ವೆಂಕಟರಮಣದಾಸರು ತಂದೆಯವರ ನಂತರ ಅವರು ಸೇವೆ ಸಲ್ಲಿಸುತ್ತಿದ್ದ ಮೈಸೂರಿನ ಅರಮನೆ ಆವರಣದ ತ್ರಿನಯನೇಶ್ವರ ದೇವಾಲಯದ ಭಾಗವಾದ ವೆಂಕಟರಮಣ ದೇವಾಲಯದ ಉಸ್ತುವಾರಿ ವಹಿಸಿಕೊಂಡರೆಂದೂ ನಾರಾಯಣದಾಸರೂ ಇವರ ಜೊತೆಯಲ್ಲೇ ಇದ್ದು ಭಗವದಾರಾಧನೆ, ಧ್ಯಾನ, ಭಜನೆ, ಕೀರ್ತನೆ ಮುಂತಾದ ದಾಸಕೈಂಕರ್ಯದಲ್ಲಿ ನಿರತರಾಗಿದ್ದರೆಂದೂ ತಂದೆಯವರು ಬಿಟ್ಟು ಹೋಗಿದ್ದ ದ್ವಿಸಹಸ್ರ ಶತಾಧಿಕ (೨೧೦೦ ರೂ) ಋಣಭಾರವನ್ನು ತೀರಿಸುವ ಜವಾಬ್ದಾರಿ ಹೊತ್ತು ಅದಕ್ಕಾಗಿ ತುಂಬ ಕಷ್ಟಪಟ್ಟರೆಂದೂ ಇವರಿಗೆ ಸಂತಾನಪ್ರಾಪ್ತಿ ಇರಲಿಲ್ಲವೆಂದೂ ಇವರ ವಂಶಸ್ಥರೂ (ಇವರ ಹೆಂಡತಿ, ಮಕ್ಕಳು ಅವರ ಸಂತತಿಯವರು) ಯಾರು ಇಲ್ಲವೆಂದು ಸೀತಾರಾಮಯ್ಯನವರೇ ಸ್ಪಷ್ಟಪಡಿಸಿದ್ದಾರೆ.

'ಸೂನು ಮನೆ ಮೊದಲಾದ ಮಮಕಾರವ ಬಿಟ್ಟು' ಕೀರ್ತನೆಯ ಹಿನ್ನೆಲೆಯಲ್ಲಿ ಅವರಿಗೆ ಪುತ್ರನೊಬ್ಬನಿದ್ದು ಅಕಾಲ ಮರಣಕ್ಕೆ ತುತ್ತಾಗಿರಬಹುದೆಂದೂ ಊಹಿಸಿದ್ದಾರೆ. (ಇದೇ ಕೀರ್ತನೆಯಿಂದ ಇವರು ಮದುವೆಯಾಗಿದ್ದರ ಬಗ್ಗೆಯೇ ಅನುಮಾನವನ್ನು ವ್ಯಕ್ತಪಡಿಸಬಹುದಾಗಿದೆ. ಈ ಬಗ್ಗೆ ವಿವರವಾಗಿ ಪರಿಶೀಲಿಸುವ ಅಗತ್ಯವಿದೆ.) ಕೀರ್ತನೆಗಳ ಮೂಲಕ ಇವರು ಋಣ ಪರಿಹಾರಕ್ಕಾಗಿ ಕಷ್ಟಪಟ್ಟುದರ, ಅದನ್ನು ನಿವಾರಿಸಿದ ದೈವ ಸಹಾಯಕ್ಕಾಗಿ ಧನ್ಯರಾದುದರ ಚಿತ್ರವನ್ನೂ ಬಿಡಿಸಿಕೊಟ್ಟಿದ್ದಾರೆ. ಇದರ ಹೊರತಾಗಿ ನಾರಾಯಣದಾಸರ ಜೀವನ ವೃತ್ತಾಂತವನ್ನು ಇನ್ನೇನನ್ನೂ ಹೇಳಲು ಸಾಧ್ಯವಿಲ್ಲ. ತಿಮ್ಮಪ್ಪದಾಸರ ಬಗ್ಗೆ ಹೆಚ್ಚಿನ ಸಂಶೋಧನೆ ನಡೆದಾಗ ಇವರ ಬಗೆಗಿನ ಹೆಚ್ಚಿನ ವಿವರಗಳೂ ಗೋಚರವಾಗಬಹುದು.

(ಆ) ಕೀರ್ತನೆಗಳು :

೩೭ ಕೀರ್ತನೆಗಳ ಸಂಕಲನವಾದ 'ನಾರಾಯಣದಾಸರ ಕೀರ್ತನೆಗಳು' ಒಂದೇ ಇವರ ಕೃತಿ ಎಂದು ಹೇಳಲಾಗಿದೆ. ಇವರ ಕೃತಿಗಳಲ್ಲಿ ವೈರಾಗ್ಯ ಜೀವನವೇ ವಿಶೇಷವಾಗಿ ಕಂಡುಬರುತ್ತದೆ. ಲೋಕನೀತಿ–ಆತ್ಮನಿವೇದನೆ ಕೃತಿಗಳಿಂತ ದೈವಸ್ತುತಿಯ ಕೀರ್ತನೆಗಳೆ ಅಧಿಕವಾಗಿವೆ.

ದೈವಸ್ತುತಿಗಳಲ್ಲಿ ರಾಮ, ವೆಂಕಟೇಶ್ವರ ಮತ್ತು ಚಾಮುಂಡೇಶ್ವರಿಯ ಸ್ತುತಿಗಳು ಅಧಿಕವಾಗಿವೆ. ಚಾಮುಂಡೇಶ್ವರಿಯನ್ನು ಕುರಿತು ೮ ಕೃತಿಗಳಿರುವುದು ವಿಶೇಷವಾಗಿದೆ. ಗುರುಸ್ತುತಿಯಲ್ಲಿ ಶೃಂಗೇರಿ ಗುರು ಪರಂಪರೆಯನ್ನು ಸ್ತುತಿಸಿರುವುದು ವಿಶೇಷವಾಗಿದೆ. ಇವರು ಹರಿದಾಸರಾಗಲು ಮೂಲಪ್ರೇರಕರಾದ ನಿಜವಾಗಿ ಗುರುಗಳೂ ಆಗಿರುವ ತಮ್ಮ ತಂದೆ ತಿಮ್ಮಪ್ಪದಾಸರನ್ನಾಗಲಿ ಅಥವ ತಿಮ್ಮಪ್ಪದಾಸರು ಅಷ್ಟು ತನ್ಮಯತೆಯಿಂದ ಸ್ತುತಿಸುವ ಅವರ ಗುರುಪರಂಪರೆಯನ್ನಾಗಲಿ ನಾರಾಯಣದಾಸರ ಗುರುಸ್ತುತಿಗಳಲ್ಲಿ ಕಾಣಿಸದಿರುವುದು ಸೋಜಿಗವೆನಿಸಿದೆ. (ಇದ್ದಿರಬಹುದಾದ ಅಪ್ರಕಟಿತ ಕೃತಿಗಳಲ್ಲಿ ಇರಲೂಬಹುದು)

'ನವರಾತ್ರಿಯು ಬಂತೆನ್ನುವ ಜನಗಳು....'
'ನಿನ್ನ ಸನ್ನಿಧಿಗೆ ನಾಬಂದು ಪ್ರಾರ್ಥಿಸೆ,'
'ಪ್ರಸನ್ನಳಾಗಿ ನೃಪನ ರನ್ನದ ಸಿಂಹಾಸನವೇರಿಸಿ'

ಮುಂತಾದ ಕೃತಿಗಳಲ್ಲಿ ಧನ್ಯತೆಯ ಭಾವ, ಭಗವಂತವಲ್ಲಿ ತನ್ಮಯತೆ ಕಾಣುವಂತೆಯೇ ಅರಸೊತ್ತಿಗೆಯನ್ನೂ ಆನಂದದಿಂದ ಸ್ತುತಿಸಿದ್ದಾರೆ. ಅರಮನೆಯಲ್ಲಿ ನಡೆಯುವ ವಿಶೇಷ ಸಂಗತಿಗಳನ್ನು (ದಸರಾ, ಪೂಜೆ ಮುಂತಾದ ಧಾರ್ಮಿಕ ಸಂಗತಿಗಳಾಗಲಿ, ಆಡಳಿತ ಬದಲಾವಣೆಯ ರಾಜಕೀಯ ಸಂಗತಿಗಳಾಗಲಿ) ನಾರಾಯಣದಾಸರು ತಾವು ಕಂಡಂತೆ, ಅನುಭವಿಸಿದಂತೆ ಸುಂದರವಾಗಿ ಚಿತ್ರಿಸಿದ್ದಾರೆ. ಈ ಮೂಲಕ ಇವರ ಕೀರ್ತನೆಗಳನ್ನು ಐತಿಹಾಸಿಕವಾಗಿಯೂ ಗುರುತಿಸುವಂತೆ ಮಾಡಿದ್ದಾರೆ. ತಂದೆಯ ಋಣಭಾರವನ್ನು ತೀರಿಸುವ ಕರ್ತವ್ಯಪ್ರಜ್ಞೆ, ಅದಕ್ಕಾಗಿ ದೈವಸಹಾಯದ ಯಾಚನೆ, ಹೇಗೋ ಒದಗಿಬಂದ ಸಹಾಯಕ್ಕಾಗಿ ದೇವರಿಗೆ ಕೃತಜ್ಞತೆಯ ಸಮರ್ಪಣೆ ಮುಂತಾದ ಜೀವನ ಸಂಗತಿಗಳನ್ನು ಇವರ ಕೀರ್ತನೆಗಳಲ್ಲಿ ವಿಶೇಷವಾಗಿ ಗುರುತಿಸಬಹುದಾಗಿದೆ.

'ದ್ವಿಸಹಸ್ರಾಧಿಕ ತಾಪದ ಋಣವಿದು
ಸಮುಗುತಲಿದೆ ಎನ್ನ ಹೃದಯದೊಳು ಬಲಿದು'

ಎಂಬಂತಹ ಋಣ ಕೀರ್ತನೆಗಳ ಮೂಲಕ ತಂದೆಯುವರ ಋಣವನ್ನು ಮಗನಾದರೂ ತೀರಿಸಿ ಮುಕ್ತರಾಗಬೇಕೆಂಬ ಭಾರತೀಯ ಜೀವನಮೌಲ್ಯದ ಪ್ರತೀಕದಂತಿರುವ ನಾರಾಯಣದಾಸರು ಕನ್ನಡ ಹರಿದಾಸ ಸಾಹಿತ್ಯದಲ್ಲಿಯೇ ವಿಶಿಷ್ಟ ಸೇರ್ಪಡೆಂಯಾದ 'ಋಣಕೀರ್ತನೆಕಾರ'ರಾಗಿ ತಿಮ್ಮಪ್ಪದಾಸರೊಂದಿಗೆ ದಾಖಲಾಗುತ್ತಾರೆ.

'ಈ ಸುಖವ ಬಿಟ್ಟಿನ್ನು ಬೇರೇನು ಸುಖವುಂಟು',
'ಒಂದೆ ಸಾಕೆನೆಗೆ ನಿನ್ನಯ ಸೇವೆಯೊಂದೇ ಸಾಕು'

ಮುಂತಾದ ಕೀರ್ತನೆಗಳಲ್ಲಿ ಭಗವದ್ಭಕ್ತಿಯ ಪರಮಾನಂದದ ಸ್ವರೂಪವನ್ನು ಸೊಗಸಾಗಿ ಚಿತ್ರಿಸಿದ್ದಾರೆ.

ನಾರಾಯಣದಾಸರ ಕೀರ್ತನೆಗಳಲ್ಲಿ ವಿಷಯ ವೈವಿಧ್ಯತೆಯಿದೆ. ಇವರ ಕೀರ್ತನೆಗಳು ಸಂಗೀತ ಪ್ರಜ್ಞೆಯ ತಳಹದಿಯಿಂದಲೇ ರಚನೆಯಾಗಿರುವಂತೆ ರಾಗತಾಳ ಬದ್ಧವಾಗಿವೆ. ಸಂಗೀತ ವಿದ್ವಾಂಸರಾದ ಎಲ್. ರಾಜಾರಾಯರ ಈ

ಮಾತುಗಳು ಅದಕ್ಕೆ ಅಧಿಕೃತತೆಯನ್ನು ಒತ್ತುತ್ತವೆ. "ಕೀರ್ತನೆಗಳು ಸಂಗೀತ ಶಾಸ್ತ್ರದ ರಾಗ – ತಾಳಗಳಿಗೆ ಮುದ್ದಾಗಿ ಹೊಂದಿಕೊಂಡಿವೆ. ಕೀರ್ತನೆಗಳ ಸಾಹಿತ್ಯ ಭಾಗವತ ಧರ್ಮದ ಭಕ್ತನೊಬ್ಬನ ಹೃದಯಾಂತರಾಳದಿಂದ ಉಕ್ಕಿ ಹರಿದ ಸರ್ವಸಮರ್ಪಣ ಭಾವದ ಹೊನಲಾಗಿದೆ".

ತಿಮ್ಮಪ್ಪದಾಸರ ಅದ್ವೈತ ದೃಷ್ಟಿಯ, ಭಾಗವತ ಧರ್ಮದ ಮುಂದುವರಿದ ರೂಪದಂತಿರುವ ನಾರಾಯಣದಾಸರ ಕೀರ್ತನೆಗಳು ಇನ್ನೂ ಹೆಚ್ಚಿನ ಸಂಶೋಧನೆಗೆ ಎಡೆಮಾಡಿ ಕೊಡುವಂತಿವೆ.

(ಇ) ಕೀರ್ತನೆಗಳ ಆಕರ :

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ ಪ್ರಕಟಿಸಿರುವ ನಾರಾಯಣದಾಸರ ಕೀರ್ತನೆಗಳ ಸಂಕಲನವಾದ 'ಕೀರ್ತನಕುಸುಮಾಂಜಲಿ' (೧೯೮೦, ಸಂ: ಎಂ.ವಿ.ಸೀತಾರಾಮಯ್ಯ. ಈ ಕೃತಿಯನ್ನು ಮುಖ್ಯ ಆಕರವಾಗಿ ಬಳಸಿಕೊಂಡಿದೆ.

೫. ಮಳಿಗೆ ರಂಗಸ್ವಾಮಿದಾಸರು

ಶ್ರೀವೈಷ್ಣವ ಹರಿದಾಸ ಪರಂಪರೆಯಲ್ಲಿ ಬರುವ ಮಳಿಗೆ ರಂಗಸ್ವಾಮಿದಾಸರು ಮುಳಬಾಗಿಲಿನ ಗಾಣಿಗಶೆಟ್ಟಿ ಮತಸ್ಥರು. ತುಳಸಿರಾಮದಾಸರ ಶಿಷ್ಯ ಪರಂಪರೆಯನ್ನು ಮುಂದುವರಿಸಿಕೊಂಡು ಬಂದ ಪ್ರಮುಖ ಹರಿದಾಸರು. ಗುರುಗಳನ್ನು ದೇವರನ್ನಾಗಿಸಿ ತುಳಸಿರಾಮಾಲಯ ದೇವಸ್ಥಾನವನ್ನು ನಿರ್ಮಿಸಿದವರು. 'ರಾಮಕೋಟಿ' ಎಂಬ ಭಜನಪದ್ಧತಿಯನ್ನು ರೂಢಿಗೆ ತಂದ ಆದ್ಯರು. (ಶ್ರೀವೈಷ್ಣವ ಕೀರ್ತನ ಸಾಹಿತ್ಯ ಮತ್ತು ಕೀರ್ತನಕಾರರ ಬಗ್ಗೆ ಹಾಗೂ ತುಳಸಿರಾಮದಾಸರ ಬಗ್ಗೆ ಹೆಚ್ಚಿನ ವಿವರಗಳಿಗೆ ಇದೇ ಯೋಜನೆಯ ಸಂಪುಟ ೩೫ ಅನ್ನು ನೋಡಿ.)

(ಅ) ಜೀವನ ವಿವರ :

ಮುಳಬಾಗಿಲಿನಲ್ಲಿ ತುಳಸಿರಾಮದಾಸರು ಬಂದಾಗೆಲ್ಲ ಅವರ ಸೇವೆಮಾಡುತ್ತ, ಭಗವತ್ಸೇವೆಗೆ ಸಹಾಯ ಮಾಡುತ್ತಿದ್ದ ಮಂಡಿವರ್ತಕರಾಗಿದ್ದ ಮಳಿಗೆ ಅಣ್ಣಯ್ಯಸೆಟ್ಟಿ

ಮತ್ತು ಗುರ್ರಮ್ಮ ದಂಪತಿಗಳು ಮೂಲತಃ ವ್ಯಾಪಾರಿಗಳಾಗಿದ್ದರು. ಅದರಲ್ಲೂ ಸಕ್ಕರೆ ವ್ಯಾಪಾರದಲ್ಲಿ ಗಣ್ಯರಾಗಿದ್ದ ಭಗವದ್ಭಕ್ತರಾಗಿದ್ದರು. ವಿಭವ ಸಂವತ್ಸರ ಧನುರ್ಮಾಸ ಕೃತ್ತಿಕಾ ನಕ್ಷತ್ರ ಪ್ರ.ಪಾದ, ದ್ವಾದಶಿ, ಶನಿವಾರ, ಜನವರಿ ೧೮೬೮ರಂದು ಈ ಭಕ್ತ ದಂಪತಿಗಳಿಗೆ ರಂಗಸ್ವಾಮಿದಾಸರು ಜನಿಸಿದರು. ಇವರ ಬಾಲ್ಯ ವಿದ್ಯಾಭ್ಯಾಸದ ವಿವರಗಳು ಲಭ್ಯವಿಲ್ಲದಿದ್ದರೂ ಮುಳಬಾಗಿಲಿನಲ್ಲೆ ಪ್ರಾಥಮಿಕ ಹಂತದ ವಿದ್ಯಾಭ್ಯಾಸ ಪೂರೈಸಿದ್ದಾರೆ. ಬಾಲ್ಯದಿಂದಲೇ ತಂದೆಯವರ ವ್ಯಾಪಾರದಲ್ಲಿ ತೊಡಗಿಸಿಕೊಂಡು ಮುಳಬಾಗಿಲಿನಲ್ಲೇ ಇವರು ದೊಡ್ಡ ಮಂಡಿ ವ್ಯಾಪಾರಿಯಾಗಿದ್ದರು. ಇವರ ಕುಟುಂಬಕ್ಕೇ ಬಂದಿದ್ದ 'ಮಳಿಗೆ' ಅನ್ವಥನಾಮ ಇವರಿಗೂ ಸೇರಿಕೊಂಡು 'ಮಳಿಗೆ ರಂಗಸ್ವಾಮಿ' ಎಂದೂ ಸಕ್ಕರೆ-ಬೆಲ್ಲದ ವ್ಯಾಪಾರದಲ್ಲಿ ಪ್ರಸಿದ್ಧರಾಗಿದ್ದರಿಂದ 'ಸವಿರಂಗಸ್ವಾಮಿ' ಎಂದೂ ರೂಢಿಯಾಗಿದ್ದರು. ತಂದೆ-ತಾಯಿಯರ ಗುರುಸೇವೆ-ಗುರುಭಕ್ತಿಯ ಪ್ರಭಾವಕ್ಕೆ ಒಳಗಾಗಿದ್ದರೂ ತುಳಸಿರಾಮದಾಸರ ಶಿಷ್ಯರಾಗಲು ಒತ್ತಾಯವಿದ್ದರೂ ವ್ಯಾಪಾರದಲ್ಲಿ ಮುಳುಗಿದ್ದರಿಂದ ಅತ್ತ ಗಮನ ಹರಿಸಿರಲಿಲ್ಲ. ಆದರೂ ಆಂತರ್ಯದಲ್ಲಿ ಭಕ್ತಿ ಪ್ರವಹಿಸುತ್ತಿತ್ತು.

ತುಳಸಿರಾಮದಾಸರ ಹರಿಕಥೆಗಳ ಪ್ರಭಾವ, ದಾಸರ ಜನಪ್ರಿಯತೆ, ಅವರಲ್ಲಿ ದೈವತ್ವವನ್ನು ಕಾಣುತ್ತಿದ್ದ ಜನರಲ್ಲಿನ ಅಪಾರ ಶ್ರದ್ಧೆ, ಭಕ್ತಿ, ಧನ್ಯತೆಗಳು ಮಳಿಗೆ ರಂಗಸ್ವಾಮಿದಾಸರನ್ನು ಆಕರ್ಷಿಸದೆ ಇರಲಿಲ್ಲ. ಕ್ರಮೇಣ ಮನೆಯವರೊಂದಿಗೆ ತಾವೂ ಗುರುಸೇವೆಯಲ್ಲಿ ಪಾಲ್ಗೊಳ್ಳುತ್ತ ಅವರ ಪ್ರವಚನ, ಉಪದೇಶಗಳಿಂದ ಪ್ರಭಾವಿತರಾಗುತ್ತ ದೈವಧ್ಯಾನ ಮಾಡುತ್ತಾ ರಾಮೋತ್ಸವ, ಕೃಷ್ಣೋತ್ಸವ, ತಿರುನಕ್ಷತ್ರೋತ್ಸವ ಚಟುವಟಿಕೆಗಳಲ್ಲಿ ಮಗ್ನರಾಗುತ್ತ ಪರಲೋಕ ಪ್ರಾಪ್ತಿಗೆ ವ್ಯಾಪಾರದ ಗಳಿಕೆಗಿಂತ ಭಕ್ತಿಯ ಗಳಿಕೆಯೇ ಮುಖ್ಯವೆಂದು ಗಣಿಸಿ ತಾವೂ ತುಳಸಿರಾಮದಾಸರಿಂದ ಶಿಷ್ಯವೃತ್ತಿಯನ್ನು ಸ್ವೀಕರಿಸಿದರು. ವ್ಯಾಪಾರದ ವ್ಯಾಮೋಹವನ್ನು ತೊರೆದು ಸಂಪೂರ್ಣವಾಗಿ ಹರಿದಾಸರಾಗಿ ಪರಿವರ್ತಿತರಾದರು. ತುಳಸಿರಾಮದಾಸರು ಕೊನೆದಿನಗಳಲ್ಲಿ ಬೆಂಗಳೂರಿನಲ್ಲಿದ್ದಾಗ ಶಿಷ್ಯರೊಬ್ಬರು ಪ್ರತಿವರ್ಷ ನಡೆಸುತ್ತಿದ್ದ – ಅಣ್ಣಮ್ಮನ ದೇವಸ್ಥಾನದ ಪಕ್ಕದಲ್ಲಿದ್ದ ಮಂಡಿಮೇಕಲ ಮಲ್ಲಯ್ಯ ಛತ್ರದಲ್ಲಿ- ತಿರುನಕ್ಷತ್ರಾಚರಣೆಗಾಗಿ ತಂಗಿದ್ದಾಗ ಮಳಿಗೆ ರಂಗಸ್ವಾಮಿದಾಸರು ಅಲ್ಲಿಗೇ ಹೋಗಿ ಗುರುಗಳಿಂದ ದೀಕ್ಷೆ ಪಡೆದರು. ಅಲ್ಲಿಂದ ಮುಂದೆ ವ್ಯಾಪಾರದ ಕಡೆಗೆ ತಿರುಗಿ ನೋಡದೆ, ಹರಿದಾಸವೃತ್ತಿಯನ್ನು

ಪೂರ್ಣಪ್ರಮಾಣದಲ್ಲಿ ಅನುಸರಿಸುತ್ತ ಬದುಕನ್ನು ಭಕ್ತಿಯೋಗಕ್ಕೆ ಒಗ್ಗಿಸಿಕೊಂಡ ಸಾಧಕರಾಗಿ ಕಂಡುಬರುತ್ತಾರೆ. ಗುರುಮಹಿಮೆಯನ್ನು ಕೊಂಡಾಡುತ್ತ, ಭಜನೆ, ಹರಿಕಥೆಗಳಲ್ಲಿ ಮುಳುಗುತ್ತ ಗುರುಕೀರ್ತನೆಗಳನ್ನು ಹಾಡುತ್ತ ತಾವೂ ಹಾಡುಗಳನ್ನು ರಚಿಸುವ ಸಾಮರ್ಥ್ಯ ಗಳಿಸಿರುವ ರಂಗಸ್ವಾಮಿದಾಸರು ಸುಮಾರು ೭೫ ಕೀರ್ತನೆಗಳನ್ನು ರಚಿಸಿದ್ದಾರೆ.

ಹರೆಯದ ಹುಮ್ಮಸ್ಸಿನಲ್ಲಿ ಭಕ್ತಿಯ ಕಡೆಗೆ ಮುಖಮಾಡಿದ್ದ ರಂಗಸ್ವಾಮಿ-ದಾಸರನ್ನು ಸುಬ್ಬಮ್ಮ ಎಂಬ ಸಾಧ್ವಿ ಕೈಹಿಡಿದು, ಇಬ್ಬರು- ಗಂಡು ಮತ್ತು ಒಬ್ಬ ಹೆಣ್ಣು-ಮಕ್ಕಳನ್ನು ಪಡೆಯುತ್ತಾರೆ. ಹದಿಹರೆಯದ ವೈವಾಹಿಕ ಜೀವನಪೂರ್ತಿ ಗುರುಪ್ರಭಾವದ ಅಲೆಯಲ್ಲೇ ಮುಳುಗಿಹೋಗಿದ್ದುದರ ಫಲವಾಗಿ ಮಕ್ಕಳ ಹೆಸರುಗಳಲ್ಲಿ ಗುರುಗಳು ಕಾಣಿಸಿಕೊಂಡಿದ್ದಾರೆ. 'ತುಳಸಿರಾಮ', 'ತುಳಸಿಗುರ್ರಮ್ಮ' ! (ತುಳಸಿ ರಾಮದಾಸರ ಸೇವೆಯಲ್ಲಿ ನಿರತರಾಗಿದ್ದ, ಶಿಷ್ಯರಾಗಿದ್ದ ಭಕ್ತರೆಲ್ಲರ ಮನೆಗಳಲ್ಲೂ ಮಕ್ಕಳ ಹೆಸರುಗಳೂ ಈ 'ತುಳಸಿರಾಮ' ವಿಶೇಷಣವನ್ನು ಪಡೆದಿವೆ. ಇದು ಅವರ ಮಕ್ಕಳಲ್ಲೂ ಮುಂದುವರಿದು ಪರಂಪರೆಯಾಗಿ ಬೆಳೆದುಬಂದಿರುವುದು ವಿಶೇಷವಾಗಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಈ ಅಂಶ ಗಮನಕ್ಕೆ ಬಂದಿದೆ.)

ದೈವಭಕ್ತೆ, ಸಾಧ್ವೀಮಣಿ ಸುಬ್ಬಮ್ಮನವರೂ ಪತಿಯನ್ನು ಅನುಸರಿಸಿರುವ ಪರಮ ಸತಿಯಾಗಿ ಕಾಣಿಸಿಕೊಂಡಿದ್ದು ಭಕ್ತರ ಸೇವೆಯಲ್ಲಿ ನಿರತರಾಗಿದ್ದುದನ್ನು ರಂಗಸ್ವಾಮಿದಾಸರ ಶಿಷ್ಯರು ಧನ್ಯತೆಯಿಂದ ಸ್ಮರಿಸಿರುವ ಕೀರ್ತನೆಗಳಿಂದ ತಿಳಿಯಬಹುದಾಗಿದೆ. ದಾಸರು ಪ್ರವಾಸದಲ್ಲಿರಲಿ, ಮನೆಯಲ್ಲಿರಲಿ ಸದಾ ಅವರೊಂದಿಗಿದ್ದು ಎಲ್ಲ ಚಟುವಟಿಕೆಗಳಲ್ಲೂ ಭಾಗಿಯಾಗಿ ಪತಿ-ಭಕ್ತ ಸೇವೆಯನ್ನೇ ದೈವಸೇವೆಯನ್ನಾಗಿ ಮಾಡಿ ಕೃತಕೃತ್ಯರಾಗಿದ್ದಾರೆ.

ರಂಗಸ್ವಾಮಿದಾಸರು, ತುಳಸಿರಾಮದಾಸರು ಸಂಚರಿಸಿದ ಸ್ಥಳಗಳಲ್ಲಿ ಸಂಚರಿಸುತ್ತ ಗುರುಗಳ ಭಕ್ತಿ ಚಳವಳಿಯನ್ನು ಜೀವಂತವಾಗಿಡುತ್ತ ಹರಿದಾಸ ಪರಂಪರೆಯನ್ನು ಮುಂದುವರಿಸಿದ ಪ್ರಮುಖ ಶಿಷ್ಯರಾಗಿ ಕಂಡುಬರುತ್ತಾರೆ. ಇವರಿಗೂ ಶಿಷ್ಯರುಗಳಿರುವುದು; ಗುರುಗಳಂತೆ ಇವರೂ ಅನೇಕ ಜನ ಶಿಷ್ಯರನ್ನು ರೂಪಿಸಿರುವುದು, ಆ ಶಿಷ್ಯರುಗಳ ಸ್ತುತಿಗಳಿಂದ ಬೆಳಕಿಗೆ ಬಂದಿದೆ. ಅನೇಕ ಶಿಷ್ಯರು

ರಂಗಸ್ವಾಮಿದಾಸರಲ್ಲಿ ತುಳಸಿ ರಾಮದಾಸರನ್ನು ಕಂಡಿದ್ದಾರೆ. ತುಳಸಿರಾಮದಾಸರು ರೂಢಿಗೆ ತಂದಿದ್ದ ಭಜನೆ, ಹರಿಕಥೆ, ತಿರುನಕ್ಷತ್ರ (ರಾಮಾನುಜರದ್ದು) ರಾಮೋತ್ಸವ, ಕೃಷ್ಣೋತ್ಸವಗಳ ಜೊತೆಗೆ ರಂಗಸ್ವಾಮಿದಾಸರು ತುಳಸಿರಾಮದಾಸರ ತಿರುನಕ್ಷತ್ರೋತ್ಸವವನ್ನೂ, 'ರಾಮಕೋಟಿ' ಹೆಸರಿನ ಅಖಂಡನಾಮಸ್ಮರಣೆಯ ವಿಶಿಷ್ಟಭಜನೆಯನ್ನೂ ರೂಢಿಗೆ ತಂದರು. ಇದು ಕನಿಷ್ಠ ೨೪ ಗಂಟೆಗಳ ಮತ್ತು ಗರಿಷ್ಠ ಏಳುದಿನಗಳ ನಿರಂತರ ಭಜನೆ. ಭಕ್ತರು ಹಲವು ತಂಡಗಳಲ್ಲಿ ಸಿದ್ಧರಾಗಿದ್ದು ಬಿಡುವಿಲ್ಲದಂತೆ ಹಗಲು-ರಾತ್ರಿ ಒಂದೇಸಮನೆ ಹರಿನಾಮಸ್ಮರಣೆಯನ್ನು ಭಜನೆ-ಕುಣಿತಗಳ ಮೂಲಕ ಮಾಡುವ ವಿಶಿಷ್ಟ ಕಾರ್ಯಕ್ರಮ. ಭಕ್ತಿಯ ಆವೇಶವನ್ನು, ಆವೇಶದ ತೀವ್ರತೆಯನ್ನು ತಂದುಕೊಡುವ ವಿಭಿನ್ನ ಪರಿಸರವನ್ನು ಇದು ಸೃಷ್ಟಿಸುತ್ತದೆ. ತಾಳ-ವಾದ್ಯಗಳೂ ಇದಕ್ಕೆ ಮೇಳವಿಸಿ ಒಂದು ವಿಶಿಷ್ಟ ವಾತಾವರಣವನ್ನೇ ನಿರ್ಮಿಸುತ್ತದೆ. ಭಕ್ತರ ಭಾವತೀವ್ರತೆ ಇಲ್ಲಿ ಮೇಲ್ನೋಟಕ್ಕೇ ಪ್ರಕಟಗೊಳ್ಳುತ್ತದೆ. ಪ್ರತಿಯೊಬ್ಬರೂ ಕುಣಿಯುವ, ಆವೇಶದಲ್ಲಿ ವೈಮರೆಯುವ ದೃಶ್ಯ ಮನಮೋಹಕವಾಗಿರುತ್ತದೆ. ಬಯಲುಗಳಲ್ಲಾದರೆ ದೇವರ ಫೋಟೊ-ದೀಪಸ್ಥಂಭಗಳನ್ನು ದೇವಾಲಯದಲ್ಲಾದರೆ ಕಂಬಗಳನ್ನು ಸುತ್ತುತ್ತ ಭಕ್ತರೆಲ್ಲ ತಾಳಹಾಕುತ್ತ ವಿಶೇಷವಾಗಿ ತುಳಸಿರಾಮದಾಸರ ಹಾಡುಗಳನ್ನು, ನಾಮಾವಳಿಗಳನ್ನು ಸಾಮೂಹಿಕವಾಗಿ ಹಾಡುತ್ತಾ ಕುಣಿಯುತ್ತ ಮಾಡುವ ಭಜನೆ ಭಕ್ತಿಯ ಭಾವವನ್ನು ಮಡುಗಟ್ಟಿಸುವಂತಹ ಶಕ್ತಿಯನ್ನು ಹೊಂದಿರುತ್ತದೆ. ಇಂತಹ ವಿಶೇಷ ಭಜನೆ ಪರಂಪರೆಯನ್ನು ಆಚರಣೆಗೆ ತಂದ ಕೀರ್ತಿ ರಂಗಸ್ವಾಮಿದಾಸರಿಗೆ ಸಲ್ಲುತ್ತದೆ. ಕೋಲಾರ, ಬೆಂಗಳೂರು ಜಿಲ್ಲೆಗಳಲ್ಲಿ ಇದು ಇಂದಿಗೂ ಆಚರಣೆಯಲ್ಲಿದೆ. ಇಂತಹ ಭಜನೆಗಳನ್ನು ನಡೆಸಿಕೊಡುವ ತಂಡಗಳೇ ರೂಪಗೊಂಡಿವೆ. (ಕೆಲವರು ಇದನ್ನು ಉದರ ಪೋಷಣೆಯ ವೃತ್ತಿಯನ್ನಾಗಿ ಮಾಡಿಕೊಂಡಿರುವುದೂ ಕಂಡು ಬಂದಿದೆ.)

ಗುರು ತುಳಸಿರಾಮದಾಸರು ೧೯೦೩ರಲ್ಲಿ ಪವಾಡಸದೃಶವಾಗಿ ದೇಹತ್ಯಾಗ ಮಾಡಿದ ಮೇಲೆ ರಂಗಸ್ವಾಮಿದಾಸರು ಅವರು ಸಂಚರಿಸಿದ ಕಡೆಗಳಲ್ಲೆಲ್ಲ ಸಂಚರಿಸಿ ಹರಿಭಕ್ತಿಯನ್ನು ಜಾಗೃತವಾಗಿಟ್ಟಿದ್ದಾರೆ. ಹೋದಲ್ಲೆಲ್ಲ ರಾಮಕೋಟಿಭಜನೆಗಳನ್ನು ನಡೆಸಿ ಜನರಲ್ಲಿ ದೂರವಾಗುತ್ತಿದ್ದ ದೈವಶ್ರದ್ಧೆಯನ್ನು ಗಟ್ಟಿಗೊಳಿಸಿದ್ದಾರೆ. ಅಸ್ಥಿರವಾಗಿದ್ದ ಜೀವನಪ್ರೀತಿಯನ್ನು ಭಕ್ತಿಯ ಮೂಲಕ ಸ್ಥಿರಗೊಳಿಸಿ ಸಮಾಜದಲ್ಲಿ ನೈತಿಕನಿಷ್ಠೆಯನ್ನು

ರೂಢಿಸುವಲ್ಲಿ ಇವರ ಪಾತ್ರ ಮುಖ್ಯವಾಗುತ್ತದೆ. ೧೯೨೫ರಿಂದ ಮುಳಬಾಗಿಲಲ್ಲೆ ವಾಸ್ತವ್ಯಮಾಡಿ ಗುರುಗಳ ಹೆಸರನ್ನು ಚಿರಸ್ಥಾಯಿಗೊಳಿಸುವಂತೆ 'ತುಳಸಿರಾಮಾಲಯ ದೇವಾಲಯು' ನಿರ್ಮಾಣದಲ್ಲಿ ತೊಡಗಿರುವುದು ತಿಳಿದುಬರುತ್ತದೆ. ತುಳಸಿರಾಮದಾಸರ ಕಾಲದಲ್ಲಿ ತಂದೆಯವರು ಕಟ್ಟಿಸಿದ್ದ ಭಜನಾ ಮಂದಿರವನ್ನೇ ದೇವಾಲಯುವಾಗಿ ಪರಿವರ್ತಿಸಿ ೧೯೩೯ರಲ್ಲಿ ದಾಸರ ವಿಗ್ರಹದೊಂದಿಗೆ ಶ್ರೀನಿವಾಸದೇವರ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಿಸಿದ್ದಾರೆಂದು ದೇವಾಲಯದ ದಾಖಲೆ ಹೇಳುತ್ತದೆ.

ಗುರುಗಳಿಂದಲೇ ತಮ್ಮ ಬದುಕು ಸಂಪನ್ನವಾಯಿತೆಂದೂ ತಮಗೆ ಮೋಕ್ಷಪ್ರಾಪ್ತಿಯ ಸುಲಭೋಪಾಯ ದೊರೆಯಿತೆಂದೂ ಧನ್ಯತೆಯನ್ನು ಪ್ರಕಟಿಸಿರುವ ರಂಗಸ್ವಾಮಿದಾಸರು ಗುರುಗಳ ಹಾಡುಗಳನ್ನು, ಗುರುಗಳನ್ನು ಕುರಿತ ಹರಿಕಥೆಯನ್ನು ಮುಖ್ಯವಾಗಿ ಪ್ರಚಾರ ಮಾಡುತ್ತ; ವಿಶಿಷ್ಟಾದ್ವೈತ ಭಕ್ತಿಮಾರ್ಗದಲ್ಲಿ ಶರಣಾಗತಿಧರ್ಮವನ್ನು ಅನುಸರಿಸಿದ್ದಾರೆ. ಪರಕಾಲಮಠದ ಸಂಪರ್ಕದಲ್ಲಿದ್ದ ದಾಸರಿಗೆ ಮಠದಲ್ಲೇ ಭಕ್ತಾದಿಗಳ-ಶಿಷ್ಯರ ಪ್ರೀತಿಪೂರ್ವಕ ಕಾಣಿಕೆಯಾದ ಬೆಳ್ಳಿಯ ಕಿರೀಟಧಾರಣೆಯಾಗಿರುವುದನ್ನೂ ಶ್ರೀಮುಖ ಸಮರ್ಪಣೆಯಾಗಿರುವುದನ್ನು ಶಿಷ್ಯ ಚೌಡಯ್ಯದಾಸರು ಸ್ಮರಿಸುತ್ತಾರೆ.

ಇವರು ನಡೆಸುವ ರಾಮಕೋಟಿಗಳಿಗೆ ದೂರದ ಊರುಗಳಿಂದ ನೂರಾರು ಜನ ಸೇರುತ್ತಿದ್ದರೆಂದೂ ಕೊನೆಯಲ್ಲಿ ಎಲ್ಲರಿಗೂ ದಾರಿಖರ್ಚಿಗೆ ಹಣ ಕೊಡುತ್ತಿದ್ದರೆಂದೂ ಯಾವಾಗಲೂ ಇವರ ಬಳಿ ಇರುತ್ತಿದ್ದ ಮರದ ಪೆಟ್ಟಿಗೆಯಲ್ಲಿ ಹಣ ಇರುತ್ತಿತೆಂದೂ ಅವರು ಹೇಳುತ್ತಾರೆ. ಚನ್ನಪಟ್ಟಣದಲ್ಲಿ ನಿರಂತರವಾಗಿ ಚಿಲ್ಲರೆ ೪ ವರ್ಷ ರಾಮಕೋಟಿ ಮಾಡಿರುವುದನ್ನು ಅಲ್ಲಿಯೆ ಶ್ರೀರಾಮದೇವಾಲಯ ಸ್ಥಾಪಿಸಿರುವುದನ್ನು ದಾಸರೇ ತಮ್ಮ ಕೀರ್ತನೆಗಳಲ್ಲಿ ಹಾಗೂ ಶಿಷ್ಯರಾದ ಚನ್ನಪಟ್ಟಣದ ರಾಮಕೃಷ್ಣದಾಸರೂ ಕೆಲವು ಕೀರ್ತನೆಗಳಲ್ಲಿ ದಾಖಲಿಸಿದ್ದಾರೆ. ೪-೮-೩೨, ೨೦-೮-೩೩ರಲ್ಲಿ ನಡೆದ ೨ ಮತ್ತು ೩ನೇ ಉತ್ಸವಗಳಲ್ಲಿ ದಾಸರೇ ರಚಿಸಿದ ಕೀರ್ತನೆಗಳಿವೆ.

ತುಳಸಿರಾಮದಾಸರು ದೇಹತ್ಯಾಗ ಮಾಡಿದ ಸ್ಥಳ ದರಿಶಕುಪ್ಪದ ಸಮೀಪದ ಶ್ರೀರಂಗಪಟ್ಟಣದಲ್ಲಿ ತುಳಸಿರಾಮದಾಸರ ಹರಿಕಥೆಯನ್ನು ಮಾಡಿದ ನಂತರ 'ಇನ್ನು ಹರಿಕಥೆ ಮಾಡುವುದು ಇಲ್ಲಿಗೆ ಮುಗಿಯಿತು. ಇದೇ ಕೊನೆ, ಇನ್ನು ನನಗೆ

ಅರ್ಪಣೆಯಾಗಿದೆ' ಎಂದು ಸೂಚ್ಯವಾಗಿ ಹೇಳಿದವರು ಮಾರನೆಯ ದಿನವೇ ಗುರುಗಳಂತೆಯೇ ಆಶ್ಚರ್ಯಕರ ರೀತಿಯಲ್ಲಿ ರಂಗಸ್ವಾಮಿದಾಸರೂ ದೇಹತ್ಯಾಗ ಮಾಡಿದರೆಂದು ಶಿಷ್ಯರು ಸ್ಮರಿಸಿಕೊಳ್ಳುತ್ತಾರೆ. ೧೯೪೧ರಲ್ಲಿ ಮುಳಬಾಗಲಿನಲ್ಲಿ ದೇಹತ್ಯಾಗ ಮಾಡಿರುವುದಾಗಿ ತಿಳಿದುಬರುತ್ತದೆ. ಇವರ ಶಿಷ್ಯರಾಗಿ ಮುಳಬಾಗಿಲಿನ ತುಳಸಿಮುನಿದಾಸರು, ದರಿಶಕುಪ್ಪದ ಕೃಷ್ಣದಾಸರು ಸೋಮೇಗೌಡನ ಕೊಪ್ಪದ ವೆಂಕಟದಾಸರು (ಭೈರವಗೌಡ) ಮೈಸೂರಿನ ವೈಕುಂಠದಾಸ, ಚನ್ನಪಟ್ಟಣದ ಆರ್.ರಾಮಕೃಷ್ಣದಾಸ ಮುಂತಾದವರನ್ನು ಕಾಣಬಹುದು. ಇವರೆಲ್ಲರೂ ಹರಿದಾಸರಾಗಿದ್ದು ಗುರುಗಳನ್ನು ಸ್ತುತಿಸಿರುವ ಇವರ ಒಂದೆರಡು ಕೀರ್ತನೆಗಳು ರಂಗಸ್ವಾಮಿದಾಸರ ಕೀರ್ತನೆಗಳ ಪುಸ್ತಕದಲ್ಲಿ ಅಚ್ಚಾಗಿವೆಯಾದರೂ ಈ ಶಿಷ್ಯರ ಇತಿವೃತ್ತವಾಗಲಿ ಇತರ ಕೀರ್ತನೆಗಳಾಗಲಿ ಲಭ್ಯವಾಗಿಲ್ಲ. ಈ ಕೀರ್ತನ ಪುಸ್ತಕದಲ್ಲಿ ಮತ್ತು ಮುಳಬಾಗಿಲು ದೇವಾಲಯದಲ್ಲಿ ದ್ವಾದಶನಾಮಧಾರಿಗಳಾಗಿರುವ ಹರಿಕಥಾವೇಶದಲ್ಲಿ ನಿಂತಿರುವ ಕಿರೀಟಧಾರಿಗಳಾಗಿರುವ ದಾಸರ ಭಾವಚಿತ್ರವಿದೆ.

(ಆ) ಕೀರ್ತನೆಗಳು :

ರಂಗಸ್ವಾಮಿದಾಸರ ಸುಮಾರು ೭೫ ಕೀರ್ತನೆಗಳು ಲಭ್ಯವಿವೆ. ೧೯೩೫ರಲ್ಲಿ ಬೆಂಗಳೂರಿನಲ್ಲಿ ಮುದ್ರಣವಾಗಿರುವ ಪೇಟೆ ಮುದ್ರಣದ ಪ್ರತಿಯಲ್ಲಿ ಈ ಎಲ್ಲ ಕೀರ್ತನೆಗಳಿದ್ದು ಇವುಗಳೊಂದಿಗೆ ರಂಗಸ್ವಾಮಿದಾಸರ ಬಗ್ಗೆ ಸ್ತುತಿಸಿರುವ ಶಿಷ್ಯ ದಾಸರ ೮-೧೦ ಕೃತಿಗಳೂ ತುಳಸಿರಾಮದಾಸರ ಶ್ರೀರಾಮಶತಕವೂ ಇವೆ. ರಂಗಸ್ವಾಮಿದಾಸರ ಕೀರ್ತನೆಗಳಲ್ಲಿ ಹನುಮದ್ವಿಲಾಸ (೧೦೧-ನುಡಿ) ರಾಮ-ಕೃಷ್ಣನಾಮಾವಳಿಗಳೂ, ತೆಲುಗು ಕೀರ್ತನೆಗಳೂ ಇವೆ. ಕನ್ನಡದ ಹದಿನಾರು ಕೀರ್ತನೆಗಳು ಮಾತ್ರ ಈ ಪುಸ್ತಕದಲ್ಲಿ ಕಂಡುಬರುತ್ತವೆ. ಇದರಲ್ಲಿ ಶ್ರೀಹರಿ ಸ್ತುತಿಗಳು ೬ ಇದ್ದು ಶ್ರೀರಾಮ ದಾಸರಿಗೆ ಪ್ರಿಯವಾದ ದೈವವಾಗಿದೆ.

'ರಾಮನಾಮವೆನ್ನುಮನವೆ'

'ರಾಮ ಬಾರೋ ಪರಂಧಾಮ ಬಾರೊ' ಮುಂತಾದ ಕೀರ್ತನೆಗಳಲ್ಲಿ ದೈವಸ್ತುತಿ ಸುಂದರವಾಗಿ ಮೂಡಿಬಂದಿದೆ.

ಗುರುಸ್ತುತಿಗಳೇ ಅಧಿಕವಾಗಿದ್ದು 'ನಮ್ಮಾಳ್ವರನ್ನು' ಸ್ತುತಿಸಿರುವ ಒಂದು ಕೃತಿಯನ್ನು ಬಿಟ್ಟರೆ ಉಳಿದವೆಲ್ಲ ಗುರು ತುಳಸಿರಾಮದಾಸರ ಸ್ತುತಿಗಳೇ ಆಗಿವೆ.

'ಜಯಜಯತುಳಸಿರಾಮ ಜಗದಭಿರಾಮ'

'ಗುರುವರ ತುಳಸಿರಾಮಯ್ಯ ಪೂರ್ವದ್ವಾರಪುರಾಲಯ'

ಎಂಬ ಹಲವು ಕೀರ್ತನೆಗಳಲ್ಲಿ ಗುರುಗಳನ್ನೆ ದೈವವಾಗಿ ಗ್ರಹಿಸಿದ್ದಾರೆ. 'ಗುರುವಿನ ಮೂಲಕ ದೈವದರ್ಶನ'ದ ವಿಶಿಷ್ಟಾದ್ವೈತ ತತ್ವ ಇಲ್ಲಿ ಸ್ಪಷ್ಟವಾಗಿದೆ. ದೇವರಿಗೆ ಲಾಲಿ ಹಾಡುವಂತೆ ಗುರುಗಳಿಗೂ ಲಾಲಿ ಹಾಡುವ ಜೋಜೋ ಹೇಳುವ ಸಮರ್ಪಣ ಭಾವ ಇಲ್ಲಿ ವಿಶಿಷ್ಟವಾಗಿದೆ. ಇದೊಂದು ದೀರ್ಘಕೃತಿಯಾಗಿದ್ದು ತುಳಸಿರಾಮದಾಸ ಜೀವನದ ಘಟನಾವಳಿಗಳನ್ನು ಜಟು ಅವರು ನಡೆಸಿದ ಚಾಮವಟಿಕೆಗಳನ್ನು ಹೇಳುತ್ತದೆ.

'ಎಷ್ಟು ಹೇಳಿದರು ಕೇಳಲಿಲ್ಲ, ಕೃತಿಯೊಂದರಲ್ಲಿ ಮಾತ್ರ ಸಾಮಾಜಿಕ ಕಾಳಜಿ ವ್ಯಕ್ತವಾಗುತ್ತಿದ್ದರೂ ಇವರ ಜೀವನ-ಹರಿದಾಸ ಚಟುವಟಿಕೆಯೇ ಸಾಮಾಜಿಕ ಕಾಳಜಿಯಿಂದ ಕೂಡಿರುವುದನ್ನು ನೋಡಬಹುದಾಗಿದೆ. ಸಮಾಜದಲ್ಲಿ ಆಧ್ಯಾತ್ಮಿಕ ಪ್ರಜ್ಞೆಯ ಮೂಲಕ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ರಂಗಸ್ವಾಮಿದಾಸರ ಪಾತ್ರ ಬಹಳ ಮುಖ್ಯವಾಗಿದೆ.

(೩) ಕೀರ್ತನೆಗಳ ಆಕರ :

ರಂಗಸ್ವಾಮಿದಾಸರ ಕೀರ್ತನೆಗಳಿಗೆ ೧೯೩೫ರಲ್ಲಿ ಮುದ್ರಣವಾಗಿರುವ 'ಶ್ರೀ ರಂಗಸ್ವಾಮಿದಾಸರ ಕೀರ್ತನೆಗಳು' ಪುಸ್ತಕವೇ ಮುಖ್ಯ ಆಕರವಾಗಿದೆ. 'ಚನ್ನಪಟ್ಟಣದ ಶ್ರೀಮಾನ್ ಮಂಡಿ ಆರ್. ಟಿ. ನರಸಿಂಹಯ್ಯನವರಿಂದಲೂ ಮತ್ತು ಜವುಳಿ ಅಂಗಡಿ ಡಿ. ನಾರಾಯಣಪ್ಪನವರಿಂದಲೂ ಪರೋಪಕಾರಾರ್ಥವಾಗಿ ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುನ ದಿ ಪವರ್ ಪ್ರಿಂಟಿಂಗ್ ವರ್ಕ್ಸ್‌ನಲ್ಲಿ ಮುದ್ರಿಸಿ ಪ್ರಕಾಶಿಸಲ್ಪಟ್ಟಿರುತ್ತೆ' ಎಂದು ಇದಕ್ಕೆ ವಿವರಣೆಯಿದೆ. ಈ ವಿವರಣೆಯ ಹಿನ್ನೆಲೆಯಲ್ಲಿ ಇವರ ಮತ್ತು ಇತರ ಗುರುಗಳ ಹಾಗೂ ಅಹೋಬಲದಾಸರ ಪುಸ್ತಕಗಳನ್ನೆಲ್ಲ ಚನ್ನಪಟ್ಟಣದ ಭಕ್ತರೇ ಪ್ರಕಾಶಿಸಿರುವುದು ಸ್ಪಷ್ಟವಾಗುತ್ತದೆ.

ಇದರೊಂದಿಗೆ ಇವರ ಶಿಷ್ಯರಾದ ಚೌಡಯ್ಯದಾಸರ ನೆನಪುಗಳು ಮತ್ತು ಹಾಡಿನ ಪರಂಪರೆಯನ್ನು ಬಳಸಿಕೊಳ್ಳಲಾಗಿದೆ. ಈ ಮೇಲಿನ ಗ್ರಂಥದ ಪ್ರತಿಯೂ ನನಗೆ ಈ ಚೌಡಯ್ಯದಾಸರಿಂದಲೇ ಲಭ್ಯವಾಗಿದೆ. ಚೌಡಯ್ಯದಾಸರು ರಂಗಸ್ವಾಮಿದಾಸರ ಶಿಷ್ಯರಾದ ಬೆಂಗಳೂರಿನ ಶಠಗೋಪದಾಸರ ಶಿಷ್ಯರು. ಇವರು ಸುಮಾರು ೬೫ ವರ್ಷದವರಾಗಿದ್ದು ನೇಯ್ಗೆ ಮತಸ್ಥರಾದರೂ ಪರಕಾಲ ಮಠದಿಂದ ಗುರುಗಳ ಮೂಲಕ ದೀಕ್ಷೆ ಸ್ವೀಕರಿಸಿದ್ದಾರೆ. ಸದಾ ಊರ್ಧ್ವಪುಂಡ್ರಧಾರಿಗಳಾಗಿ ದಾಸವೇಷದಲ್ಲಿರುತ್ತಾರೆ. ಗುರುಗಳಿಂದ ಪಡೆದ ಮಂತ್ರೋಪದೇಶವನ್ನು ಅನುಸಂಧಾನ ಮಾಡುತ್ತ ತುಳಸಿರಾಮದಾಸರ ಮತ್ತು ರಂಗಸ್ವಾಮಿದಾಸರ ಮಾರ್ಗದಲ್ಲಿ ಮುಂದುವರಿಯುತ್ತಿದ್ದಾರೆ.

೬. ಹೊಸಕೆರೆ ಚಿದಂಬರಯ್ಯನವರು

'ಕರ್ನಾಟಕ ಕವಿರತ್ನ' 'ಅದ್ವೈತ ವೇದಾಂತಿ' ಕೀರ್ತನ ರಚನಕಾರ, ಗೀತಾವಿದ್ವಾಂಸ, ಅನುವಾದಕ, ಸಂಪಾದಕ, ಕವಿ, ನಾಟಕಕಾರ, ಜೀವನಚರಿತ್ರಕಾರ, ಪತ್ರಕರ್ತ, ಶಿಕ್ಷಕ, ಧಾರ್ಮಿಕ ಶ್ರೇಷ್ಠ – ಹೀಗೆ ಹಲವು ವಿಶೇಷಣಗಳಿಂದ ಗುರುತಿಸುವ ಹೊಸಕೆರೆ ಚಿದಂಬರಯ್ಯನವರು ೬ ಜನವರಿ ೧೮೭೦ರಲ್ಲಿ (ಪ್ರಮೋದೂತ ಸಂ.ಪುಷ್ಯಮಾಸ ಶುಕ್ರವಾರ) ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಹೊಸಕೆರೆಯಲ್ಲಿ ಜನಿಸಿದರು. ೨೦ನೇ ಶತಮಾನದ ಸ್ವಾತಂತ್ರ್ಯಪೂರ್ವ ಕನ್ನಡದ ಗದ್ಯಶಿಲ್ಪಿಗಳಲ್ಲಿ ಒಬ್ಬರೆಂದು ಇವರನ್ನು ಹೆಸರಿಸಲಾಗುತ್ತಿದೆ. ೧೭-೪-೧೯೩೫ರಲ್ಲಿ ನಿಧನರಾದ ಇವರು ತಮ್ಮ ಜೀವನದಲ್ಲಿ ಮೊದಲು ಶಿಕ್ಷಕರಾಗಿದ್ದು, ಆಮೇಲೆ ವೇದಾಂತಿಗಳಾಗಿ ಅದ್ವೈತಧರ್ಮಪ್ರಚಾರ, ಗ್ರಂಥರಚನೆ, ಪ್ರವಚನ, ಲೇಖನ, ಗ್ರಂಥಸಂಪಾದನೆಗಳ ಮೂಲಕ ಬೆಂಗಳೂರು, ತುಮಕೂರು, ದಾವಣಗೆರೆ, ಧಾರವಾಡ, ಕಡೂರು, ಮೈಸೂರು ಮೊದಲಾದ ಕಡೆಗಳಲ್ಲಿ ಸಾಹಿತ್ಯ ಸೇವೆ, ಧರ್ಮಪ್ರಚಾರ, ಶಾಲಾವೃತ್ತಿ ನಡೆಸಿದರು. ಧಾರವಾಡದ ರಾಷ್ಟ್ರೀಯ ಶಿಕ್ಷಣ ಸಮಿತಿಶಾಲೆಯಲ್ಲಿ ಶಿಕ್ಷಕರಾಗಿ ದುಡಿದಿದ್ದಾರೆ. ಸ್ವಂತ ಪರಿಶ್ರಮದಿಂದ ಕನ್ನಡ, ಇಂಗ್ಲಿಷ್, ಮರಾಠಿ,ಸಂಸ್ಕೃತಗಳಲ್ಲಿ ಪ್ರಾವೀಣ್ಯ ಗಳಿಸಿದ ಇವರು, ಹೊಳೇನರಸೀಪುರದ ಶ್ರೀ ಸಚ್ಚಿದಾನಂದೇಂದ್ರ ಸರಸ್ವತಿಸ್ವಾಮಿಗಳ ಸಹಾಧ್ಯಾಯಿಗಳಾಗಿದ್ದರು. ಸಾಧುವರೇಣ್ಯ

ಗೋಂದಾವಳಿ ಮಹಾರಾಜರು ಮತ್ತು ಕುರ್ತುಕೋಟಿ ಭಾಗವತರಲ್ಲಿ ಸೇವಾನಿರತರಾಗಿದ್ದರು. ರಾಷ್ಟ್ರಪ್ರೇಮಿಗಳಾದ ಇವರು ತರುಣರಿಗೆ ಹಿಂದೂ-ಧರ್ಮಪರಿಚಯ ಮಾಡಲು 'ಆರ್ಯಧರ್ಮಪ್ರದೀಪ'ವೆಂಬ ಸೊಗಸಾದ ಅಮೂಲ್ಯಗ್ರಂಥರಚನೆ ಮಾಡಿದ್ದಾರೆ. ಪರಮಾರ್ಥ, ಭಕ್ತಬಂಧು, ಸುಧರ್ಮ ಪತ್ರಿಕೆಗಳ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ. ೮ ನಾಟಕಗಳನ್ನು ೭ ಜೀವನಚರಿತ್ರೆ, ೬ ಗೀತಾಗ್ರಂಥಗಳನ್ನು ೪ ಕಾದಂಬರಿ, ೨ ಕಥಾಸಂಕಲನ, ೪೮ ಹರಿಕಥೆಗಳನ್ನು, ೨೦ಕ್ಕೂ ಮಿಗಿಲಾಗಿ ಧಾರ್ಮಿಕಗ್ರಂಥಗಳನ್ನು ಶಾಂಕರ ಸಾಹಿತ್ಯವನ್ನು ಕನ್ನಡದಲ್ಲಿ ಪ್ರಕಟಿಸಿದ್ದಾರೆ. ಈ ಪೈಕಿ ಇವರು ಸಂಪಾದಿಸಿದ 'ಸರ್ವಾರ್ಥ ದರ್ಶಿನಿ' ಟೀಕೆಯ 'ಅನುಭವಾಮೃತ', ವೇದಾಂತಸಾರವಾದ 'ವೇದಾಂತದ ಜೀವಾಳ', 'ಭರತಖಂಡದ ಜೀವಜ್ಯೋತಿಗಳು', ಎಂಬ ಸಾಧು ಸಂತರ ಜೀವನಚರಿತ್ರೆ, ಇತ್ಯಾದಿ ಕೃತಿಗಳು ಜನಪ್ರಿಯವಾಗಿದ್ದು ಹಲವಾರು ಮುದ್ರಣ ಕಂಡಿವೆ.

ಹೊಸಕನ್ನಡ ಗದ್ಯದಲ್ಲಿ ಸರಳವಾಗಿ ಸರಸವಾಗಿ ಬರೆಯುತ್ತಿದ್ದ ಸಾಹಿತಿಯಾದ ಇವರು 'ಕೀರ್ತನಕಂಠಾಭರಣ' ಎಂಬ ಭಕ್ತರ ಕಥೆಗಳನ್ನೊಳಗೊಂಡ ಹರಿಕಥಾ ಗ್ರಂಥದಲ್ಲಿ ನೂರಾರು ಕನ್ನಡ ಕೀರ್ತನೆಗಳನ್ನು ರಚಿಸಿದ್ದಾರೆ ಮತ್ತು ಸಂಗ್ರಹಿಸಿದ್ದಾರೆ. 'ಭಕ್ತಿಗೀತಾವಳಿ' ಇವರ ಸ್ವತಂತ್ರ ಕೀರ್ತನೆಗಳ ಗ್ರಂಥವಾಗಿದೆ. 'ವಿದ್ಯಾರಣ್ಯ ಕಾವ್ಯ'ವೆಂಬ ಚಂಪೂಗ್ರಂಥ ಇವರ ಹಳಗನ್ನಡ ಪಾಂಡಿತ್ಯಕ್ಕೆ ಕನ್ನಡಿ ಆಗಿದೆ. ಮೊದಲ ಬಾರಿಗೆ ಅದ್ವೈತ ಸಿದ್ಧಾಂತವನ್ನು ಮತ್ತು ಶರಣರ ಕೃತಿಗಳನ್ನು ಕನ್ನಡಕ್ಕೆ ತಂದ ಕೀರ್ತಿ ಇವರದು. ಇವರ ಕೀರ್ತನೆಗಳು ವೈವಿಧ್ಯಮಯವಾಗಿದ್ದು, ನಾಟಕ, ಹರಿಕಥೆ, ಸ್ತೋತ್ರ, ಜೀವನಚರಿತ್ರೆಗಳಲ್ಲಿ ಬಳಕೆ ಆಗಿವೆ. ಕನ್ನಡದ ಕೀರ್ತನಸಾಹಿತ್ಯದಲ್ಲಿ ೧೯ನೇ ಶತಮಾನದ ಅದ್ವೈತ ಕೀರ್ತನಕಾರರಲ್ಲಿ ಗಣ್ಯರಾಗುವ ಇವರ ಕೀರ್ತನೆಗಳ ಅಧ್ಯಯನ ಆಗಬೇಕಾಗಿದೆ. ಸು.೩೦೦ಕ್ಕೂ ಹೆಚ್ಚು ಕೀರ್ತನೆಗಳನ್ನು 'ಚಿದಾದಿ' ಪ್ರತ್ಯಯಯುಕ್ತ ಅಂಕಿತದಲ್ಲಿ ರಚಿಸಿದ್ದಾರೆ. ಚಿನ್ಮಯ, ಚಿದ್ಘನ, ಚಿದ್ರಾಸ, ಚಿದ್ರೂಪ, ಚಿದ್ವಿಲಾಸ, ಚಿದಾಕಾರ ಇತ್ಯಾದಿ ರೂಪದಲ್ಲಿ ಅಂಕಿತ ಕಾಣಿಸಿಕೊಂಡಿದೆ.

ಕೀರ್ತನ ಕಂಠಾಭರಣದಲ್ಲಿ ದೊರೆತ ಕೆಲವು ಕೀರ್ತನೆಗಳನ್ನು ಮಾತ್ರ ಇಲ್ಲಿ ಕೊಡಲಾಗಿದೆ. ಇವರ ಎಲ್ಲ ಕೀರ್ತನೆಗಳನ್ನು ಒಂದೆಡೆ ಸಂಕಲಿಸಿದ ಹೊರತು

ಕೀರ್ತನೆಗಳ ಬಗ್ಗೆ ಏನನ್ನು ಹೇಳಬರುವುದಿಲ್ಲ. ಇಲ್ಲಿರುವ ಆರೂ ಕೀರ್ತನೆಗಳು ದೈವಸ್ತುತಿಗಳಾಗಿವೆ. ಅದ್ವೈತ ಪರವಾದ ಹರಿ ಹರ ಮತ್ತು ಸರ್ವ ದೈವಗಳಲ್ಲೂ ಸಮಭಾವ ಕಾಣುವ ಅಂಶ ಇಲ್ಲಿ ವ್ಯಕ್ತವಾಗಿದೆ. ಗಂಗಾ ಸ್ತುತಿ ವಿಶೇಷವಾಗಿದೆ. ಈ ಎಲ್ಲ ಕೀರ್ತನೆಗಳನ್ನೂ ಪ್ರೊ.ಜಿ.ಅಶ್ವತ್ಥನಾರಾಯಣ ಅವರು ಒದಗಿಸಿ ಕೊಟ್ಟಿದ್ದಾರೆ.

ಕೃತಜ್ಞತೆಗಳು

ಈ ಸಂಪುಟದ ಸಿದ್ಧತೆಗಾಗಿ ಹಲವರ ಸಹಕಾರವನ್ನು ಪಡೆಯಲಾಗಿದೆ. ಮುಖ್ಯವಾಗಿ ಬಿ.ಎಂ.ಶ್ರೀ. ಪ್ರತಿಷ್ಠಾನದ ಗ್ರಂಥಾಲಯ ಮತ್ತು ಕಛೇರಿ ಸಹಾಯಕರ ನೆರವನ್ನು ಸ್ಮರಿಸುತ್ತೇನೆ. ಹಿರಿಯರಾದ ಎನ್.ಎಸ್.ರಾಮಸ್ವಾಮಿ ಅಯ್ಯರ್ ಅವರು ಹಸ್ತಪ್ರತಿಗಳಿಂದ ಅಂದವಾದ ಪ್ರತಿಯನ್ನು ತಯಾರಿಸುವುದರಿಂದ ಹಿಡಿದು ಸಂಪಾದನೆಯ ಕಾರ್ಯ, ಕರಡಚ್ಚು ಪರಿಶೀಲನೆಯವರೆಗೆ ನೀಡಿರುವ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಈ ಸಂಪುಟವನ್ನು ಈ ಯೋಜನೆಯಲ್ಲಿ ಸೇರಿಸಲು ಸಮ್ಮತಿಸಿದ ವ್ಯವಸ್ಥಾಪಕ ಸಂಪಾದಕರಾದ ಡಾ। ಶ್ರೀನಿವಾಸ ಹಾವನೂರ, ಡಾ.ಟಿ.ಎನ್. ನಾಗರತ್ನ, ಪ್ರೊ. ವಸಂತಕುಷ್ಟಗಿ ಅವರಿಗೆ ಹಾಗೂ ಸಂಚಾಲನ ಸಮಿತಿಯ ಸದಸ್ಯರಾದ ಡಾ। ಅನಂತಪದ್ಮನಾಭ ರಾವ್, ಪ್ರೊ। ಜಿ.ಅಶ್ವತ್ಥನಾರಾಯಣ, ಮತ್ತು ಸಂಚಾಲಕರಾದ ಶ್ರೀ ರವಿಶಂಕರ್ ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಈ ಸಂಪುಟದ ಅಕ್ಷರ ಸಂಯೋಜನೆ ಮಾಡಿ ಸಹಕರಿಸಿದ ಶ್ರೀಮತಿ ನಿರ್ಮಲಾ ಗಣೇಶ್ ಅವರಿಗೆ ಹಾಗೂ ದಾಸರುಗಳ ಬಗ್ಗೆ ಮಾಹಿತಿಯನ್ನು ಒದಗಿಸಿದ ಶ್ರೀಮತಿ ಗೌರಮ್ಮ ಮತ್ತು ಮಗಳು ಪದ್ಮಾವತಿ ಅವರಿಗೆ, ಶ್ರೀಚೌಡಯ್ಯನವರಿಗೆ ; ಕರಡು ಪರಿಶೀಲನೆ ಕಾರ್ಯದಲ್ಲಿ ನೆರವಾದ ಶ್ರೀಮತಿ ಸಾವಿತ್ರಮ್ಮ ಅವರುಗಳಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ। ನಾ. ಗೀತಾಚಾರ್ಯ
ಕನ್ನಡ ಪ್ರಾಧ್ಯಾಪಕ
ಶೇಷಾದ್ರಿಪುರಂ ಕಾಲೇಜು
ಬೆಂಗಳೂರು – ೨೦

ಕೀರ್ತನೆಗಳ ವಿಷಯಸೂಚಿ

ಅ) ಶ್ರೀ ಶಾಮಸುಂದರವಿಠಲರು

ಕೀರ್ತನೆಗಳ ಕ್ರಮಸೂಚಿ

ಅ) ತಿಮ್ಮಪ್ಪದಾಸರು ಮತ್ತು ಇತರ ಹರಿದಾಸರು

ನಾರಾಯಣದಾಸರ ಕೀರ್ತನೆಗಳು

ರಂಗಸ್ವಾಮಿದಾಸರ ಕೀರ್ತನೆಗಳು

ಹೊಸಕೆರೆ ಚಿದಂಬರಯ್ಯನವರ ಕೀರ್ತನೆಗಳು

ಪರಿಶಿಷ್ಟ ಶಾಮಸುಂದರವಿಠಲರನ್ನು ಕುರಿತ ಹಾಡುಗಳು

ಶ್ರೀ ಶಾಮಸುಂದರವಿಠಲರ ಕೀರ್ತನೆಗಳು

(ಅ) ಗಣೇಶ ಸ್ತುತಿ

೧

ಶ್ರೀ ಗಿರಿಜಾತನಯಾ ಮಹೋದಯಾ
ಶ್ರೀ ಗಿರಿಜಾತನಯಾ ಪ

ಭಾಗವತಪ್ರಿಯ ಭೋಗಿಜನಾಶ್ರಯ
ಬಾಗಿನಮಿಸುವೆನಯ್ಯಾ ಅ.ಪ

ಸುರವರ ಪೂಜಿತ ವರಸಿದ್ಧಿಸಂಯುತ
ಶರಣಪಾಲಕನಿರತ ವಿಖ್ಯಾತಾ ೧

ಪಾಶಾಂಕುಶಧರ ದಾಸಸಂಕಟಹರ
ಈಶಕುವರ ಸುಂದರ ಸುಧೀರ ೨

ಮೋದಕಸಹಿತ ಬಾಧಕರಹಿತ
ವೇದವಚನವಿನುತ ಪುನೀತ ೩

ರಕ್ತಮಾಲ್ಯಾಂಬರಾ ಸಕ್ತದೇವಗುರು
ಭಕ್ತಿದಾನ ಚತುರದ್ವೈಮಾತುರ ೪

ಏಕವದನ ಗಣಾಧೀಶ ವಿಭೂಷಣ
ಭೀಕರ ರಿಪುಹರಣ ಚಿದ್ವನ ೫

೨

ನಂಬಿದೆನು ನಿನ್ನ ಪಾದ ಲಂಬೋದರ
ಅಂಬರಾಧಿಪ ಮನದ್ದಂಬಲವ ನೀಡೆಂದು ಪ

ನಾಕನಾಥನುತ ಪಿನಾಕಿಸುತ । ಕಾಕುಮತಿಯ ಕಳೆದು ಕಾಯೊ
ಆಖುವಾಹನೇಕದಂತ ೧

ಭದ್ರಮೂರುತಿಯೆ ಕರುಣಾಬ್ಧಿತ್ವರಿತ
ಉದ್ಧರಿಸು ಎಂದು ನಮಿಪೆ ಅದ್ರಿಜೆ ಕುಮಾರ ನಿರುತ ೨

ಸಿಂಧೂರ ವದನನೆ ಸುರವೃಂದ ವಂದಿತ
ವಂದಿಸಿ ಬೇಡುವೆ ಶಾಮಸುಂದರನ ಪ್ರೀತಿ ಪಾತ್ರ ೩

೩

ಲಂಬೋದರನೆ ನಿನ್ನ ನಂಬಿರುವೆನು ಎನ್ನ ।
ಬೆಂಬಿಡದಲೆ ಪೊರೆ । ಅಂಬಿಕಾತನಯನೆ ಪ

ಖೇಶನೆ ಎನ್ನನುದಾಸೀನ ಮಾಡದೆ
ಲೇಸಾಗಿ ಪೋಷಿಸು । ವಾಸುಕಿ ಭೂಷಣ ೧

ನಾಕೇಶವಂದಿತ । ಆಖುವಾಹನ ಎನ್ನ ।
ಕಾಕುಮತಿ ಕಳೆದು ನೀಕಾಯೊ ಕರುಣದಿ ೨

ಶ್ರೀ ಮನೋಹರ ಸ್ವಾಮಿ । ಶಾಮಸುಂದರ ಸಖ
ಕಾಮಹರಸುತ । ಸಾಮಜವದನನೆ ೩

೪

ದ್ವಿರದ ವದನಾಪಾಹಿ । ವಿಘ್ನವಿದೂರ । ನಭೇಶ ಕೃಪಾಬ್ಧಿ
ಗೌರಿ ಸುಕುಮಾರ ಪ

ಸಿದ್ಧಿವಿನಾಯಕ ವಿದ್ಯಾಪ್ರದಾಯಕ ।
ಉದ್ಧರಿಸೈ ಸುಜನೋಪಕಾರಿ ೧

ವುಂದರ ವಾಹನ ಬಂಧವಿಮೋಚನ ।
ಚಂದಿರ ಶಾಪದ ಮಾರವಿದೂರ ೨

ಶಾಮಸುಂದರ ಸ್ವಾಮಿಯ ।
ನಾಮಾ ಪ್ರೇಮದಿ ಜಿಂಹ್ವೆಗೆ ಕರುಣಿಸುದಾರಿ ೩

ಶ್ರೀ ಮಹಾದೇವರು

೫

ಅಂಬಿಕಾಪತಿ ಶಂಭು ರಕ್ಷಿಸೆನ್ನ
ಶಂಬರಾರಿ ಹರನೆ ನಂಬಿದೆನೊ ನಿನ್ನ ಪ

ಭವಕಮಲ ಭವ ಭ್ರಕುಟ ಭವಹರನೆ ನೀ ಎನ್ನ
ಅವಗುಣಗಳೆಣಿಸದಿರು ಕವಿಗೇಯನೆ ॥
ಅವನಿಯೊಳು ಎನಗೀಗ ಸುವಿವೇಕಿಗಳ ಸಂಗ
ಜವದಿ ಪಾಲಿಸು ಮುದದಿ ಜವನಾರಿ ಶಿವನೆ ೧

ಬಲವಿರೋಧಿ ವಿನುತ ಇಳೆವರೂಥನೆ ನಿರುತ
ತಲೆವಾಗಿ ಬೇಡುವೆನು ಸಲಹೆಂದು ನಾ
ಎಲರುಣಿ ಭೂಷಣೆನೆ ಒಲಿದು ಪಾಲಿಸುದಯದಿ
ಛಳಿಗಿರೀಶನ ಅಳಿಯ ನಳಿನಾರಿ ಧರನೆ ೨

ಸಿರಿರಮಣ ಶಾಮಸುಂದರವಿಠಲ ಸಖನೆ
ಮೊರೆಹೊಕ್ಕೆ ಮರೆಯದಿರು ಗರಗೊರಳನೆ
ಕರುಣದಿಂದಲಿ ನಿನ್ನ ಚರಣ ಸೇವೆಯನಿತ್ತು
ಕರವಿಡಿದು ಕಾಪಾಡೊ ಕರಿಚರ್ಮಧರನೆ ೩

೬

ಹರುಷದಿ ತಾರೆ ಆರುತಿ
ಪುರವೈರಿ ಗೌರೀಶಾ ಧವಳಾಂಗಗೆ ಪ

ಅಶುಭನೇತ್ರ ಶಶಿಧರಗೆ । ವೃಷಭೇಂದ್ರ ಶ್ಯಂದನಗೆ
ಕುಸುಮಬಾಣ ಮದಹರಗೆ ಬಿಸಜಾಕ್ಷಗೆ ೧

ಭುಜಗಮಾಲಾ ಖಳಕಾಲಾ । ವಿಜಿತ ಗೋ ಶಂಕರಗೆ
ರಜತ ಶೈಲ ಮಂದಿರಗೆ । ಕಮಲಾಂಬಿಕೆ ೨

ಅಮರರಾಜನುತ ಚರಣ ಸುಮಹಿಮ ಶೂಲಧರಾ
ಶಾಮಸುಂದರ ಪ್ರಿಯ ಸಖಿಗೆ ಪ್ರೇಮದಾ ಮಣಿ ೩

೭

ರಜತಾದ್ರಿ ನಿಲಯನ । ರಜನೀಶ ಧರನ
ತೋರೆ ಪಾರ್ವತಿಯೆ ಪ

ಪಂಚಾನನ ಶಂಕರನ । ಶ್ರೀ ಹರಿ
ಮಂಚಪದವ ಪಡೆದವನ
ಪಂಚಬಾಣ ಮದಹರನ ಗುರು ವಿ
ರಂಚಿ ಕುವರ ದೂರ್ವಾಸ ಶುಕನ ತೋರೆ ಪಾರ್ವತಿಯೆ ೧

ನಂದಿಸುಶ್ಯಂದನ ಶಿವನ ಗರಳ
ಕಂಧರ ತ್ರಿಪುರಾಂತಕನ
ಮಂದಾಕಿನಿಧರ ಭವನ ಸುರ
ವೃಂದ ವಿನುತ ನಗಚಾಪಭವನ ತೋರೆ ಪಾರ್ವತಿಯೆ ೨

ಸಾಮಜ ಚರ್ಮಾಂಬರನ । ಶುಭ
ಕಾಮಿತ ಫಲದಾಯಕನ
ವಾಮದೇವ ಮುನಿಸುತನ । ಶ್ರೀವರ
ಶಾಮಸುಂದರನ ಸುಖನ ತೋರೆ ಪಾರ್ವತಿಯೆ ೩

೮

ಶಿವನ ನಾಮಾಮೃತವ ಸವಿದು ಧನ್ಯರಾಗಿರೊ ಜಗದೊಳು ಪ

ಶಿವ ಶಿವ ಎಂಬೊ ಎರಡಕ್ಷರವು
ಭವರೋಗಕೆ ಇದು ಮೂಲೌಷಧವು
ಜವನಾಳ್ಗಳ ಭಯ ಲವಲೇಶವಿಲ್ಲವು ಇದು ಸತ್ಯವು ೧

ಶ್ವೇತನ ಪಾತಕ ಪಹರಿಸಿತು
ಪೋತ ಮಾರ್ಕಂಡೇಯಗಾಯುವ ನೀಡಿತು
ಭೂತೇಶನ ಪದವಾರಿಜ ಧ್ಯಾನದಿ ಧನ್ಯರಾಗಿರೋ ೨

ಹರನ ದಿವ್ಯಪದವಾರಿಜ ಧ್ಯಾನ
ಪರ ಚರ ಮುಕುತಿ ಪಥಕೆ ಸೋಪಾನ ೩

೯

ಉದ್ಧಾರ ಮಾಡೆಯ್ಯಾ ಸಿದ್ಧೇಶ್ವರ । ಸದ್ಧರ್ಮದಲಿ ಸತತ
ಶುದ್ಧಮನವನು ಕೊಟ್ಟು ।
ನೀಲ ಲೋಹಿತ ವಿಗತ ಚೈಲ ಭೂಷಿತ ಭಸಿತ
ಕಾಲಾರಿ ಶಿವ ದ್ರೌಣಿ ಶೂಲಪಾಣಿ
ಹಾಲವಿಪುರವಾಸ । ಹಾಲಾಹಲವ ಮೆದ್ದು
ತಾಳಲಾರದೆ ಕೊಂಡ ಮೇಲೌಷಧವನಿತ್ತು ೧

ವ್ಯಾಧ ರೂಪದಿ ರಣದಿ ಕಾದು ಪಾರ್ಥಗೆ ಸೋತು
ನೀ ದಯದಿ ದಿವ್ಯಾಸ್ತ್ರ ಪಾಲಿಸಿದೆಯೋ ।

ಸಾದರದಿ ನಾ ನಿನ್ನ ಪಾದಕೆರಗುವೆ । ಎನಗೆ
ಮೋದದಿಂದಲಿ ಪಂಚಭೇದ ಜ್ಞಾನವನರುಹಿ ೨

ಕಾಮಾರಿ ಸುಪವಿತ್ರ ಸೋಮಾರ್ಕ ಶಿಖಿನೇತ್ರ
ಶಾಮಸುಂದರವಿಠಲಸ್ವಾಮಿ ಮಿತ್ರ ।
ಪ್ರೇಮಾಬ್ಧಿ ಸುಚರಿತ್ರ । ಹೈಮವತಿ ಕಳತ್ರ ।
ತಾಮರಸ ಭವಪುತ್ರ ಧವಳಗಾತ್ರ ೩

೧೦

ರಾಮೇಶ್ವರನ ನೋಡೋ ಹೇ ಮಾನವ
ರಾಮೇಶ್ವರನ ನೋಡೋ । ನೇಮದಿ ಕೊಂಡಾಡೊ
ನೀ ಮಾಡಿದಂಥ ಪಾಪಸ್ತೋಮಗಳೀಡ್ಯಾಡೋ ಪ

ಘೋರಾಘದೂರವು ಭಯ ವಾರಿಧಿ ಮಧ್ಯದಲ್ಲಿ
ನಾರಶೂರ ರಘುವೀರನು ಸ್ಥಾಪಿಸಿದ ೧

ಚಿತ್ತಶುದ್ಧಿಲಿ ಬಂದ । ಭೃತ್ಯಜನರ ಬಹ್ಮ
ಹತ್ಯಾದಿ ದೋಷ ಕಳೆದು । ಉತ್ತಮಗತಿ ಕೊಡುವ ೨

ಶ್ರೀ ಶಾಮಸುಂದರ । ದಾಶರಥಿ ಮಹಿಮೆ
ಲೇಸಾಗಿ ಸತಿಗೆ ಪೇಳ್ದ । ಭೇಶ ಶೇಖರನಾದ ೩

೧೧

ಕರುಣದಿ ಕೊಡು ವರವಾ ಗುರು ಮಹಾದೇವ
ನಿರುತ ಸ್ಮರಿಸುವ ಶರಣ ಸಂಜೀವಾ ಪ

ಪರಿಪಾಲಿಸು ಅನುದಿನ । ಹರಿಕುಮಾರನ
ಗರ್ವವನದಾವಾನಲ ಮಹಾನುಭಾವ ಅ.ಪ

ಸ್ಫಟಿಕ ಸನ್ನಿಭ ಧವಳ ಶುಭಗಾತ್ರ
ಕುಟಿಲ ದಾನವ ಕಟಕ ವಂಚಕ ಯಕ್ಷಪತಿ ಮಿತ್ರ
ಚಟುಲ ವಿಕ್ರಮ ನಿಗಮ ಹಯ ಧೂ
ರ್ಜಟಿಯ ಸುಚರಿತ್ರ ಹೇ ನಿಟಲ ನೇತ್ರ ೧

ಅದ್ರಿವೈರಿಯತನಯನೊಡನೆ ಯುದ್ಧಗೈದಾತ
ಭದ್ರದಾಯಕ ರುದ್ರದೇವ ಪ್ರಸಿದ್ಧ
ಮುನಿ ನಮಿತ ಶ್ರೋದ್ರು ನೀಧರ ದದ್ದಲಾಪುರ
ಸದ್ಮಸುಖದಾತ ಹೇ ಸದ್ಯೋಜಾತ ೨

ಶಾಮಸುಂದರಸ್ವಾಮಿ ಪ್ರಿಯ ಸಖ
ಸೋಮಶೇಖರನೆ ಪ್ರೇಮದಿಂದಲಿ
ರಕ್ಷಿಸೆನ್ನನು ಭೂಮಿಶ್ಯಂದನನೆ ಕಾಮಿತ ಪ್ರದ
ವಾಮದೇವನೆ ಹೇಮವತಿಧವನೆ ನಿಸ್ಸೀಮ ಮಹಿಮನೆ ೩

೧೨

ಪಾಲಿಸೆನ್ನನು ಪಂಪಾಕ್ಷೇತ್ರವಾಸ
ಫಾಲಲೋಚನ ಶಂಭೋ ವ್ಯೋಮಕೇಶ ಪ

ನೀಲ ಲೋಹಿತ ವೀತ । ಚೈಲ ಭೂಷಿತ ಭಸಿತ
ಕಾಲಾರಿ ಶಿವ ದ್ರೌಣಿ । ಶೂಲ ಪಾಣಿ ॥
ವ್ಯಾಳಮಾಲನೆ ನೀನು । ಕಾಲ ಕೂಟವ ಮೆದ್ದು
ತಾಳಲಾರದೆ ಕೊಂಡ ಮೇಲೌಷಧವನಿತ್ತು ೧

ವ್ಯಾಧರೂಪದಿ ರಣದಿ ಕಾದು ಪಾರ್ಥಗೆ ಸೋತು
ನೀ ದಯದಿ ದಿವ್ಯಾಸ್ತ್ರ ಕರುಣಿಸಿದೆಯೋ
ಮೇದಿನೀಶಗೆ ಶಾಸ್ತ್ರ ಬೋಧಿಸಿದ ಮುನಿವರ್ಯ
ವೇದನಂದನ ನಿನ್ನ ಪಾದಕ್ಕೆ ನಮಿಸುವೆನು ೨

ಕಾಮಾರಿ ಸುಪವಿತ್ರ । ಸೋಮಾರ್ಕಶಿಖಿ ನೇತ್ರ
ಶಾಮಸುಂದರವಿಠಲ ಸ್ವಾಮಿ ಮಿತ್ರ
ಭೀಮ ಪಾವನಗಾತ್ರ ಪ್ರೇಮಾಬ್ಧಿ ಸುಚರಿತ್ರ
ಹೈಮಾವತಿ ಕಳತ್ರ । ಮಹಿಮ ಚಿತ್ರಾ ೩

೧೩

ಮೃಡದೇವ ಭವ್ಯ ಸ್ವರೂಪ ಜಡೇಂದ್ರ । ಗುರು ಜಿತಕೋಪ ಪ

ಭಸಿತ ವಿಭೂಷಿತ ಪರ ಉಪಕಾರಿ
ಅಸಮ ಸುಗುಣ ಗಂಭೀರ ಉದಾರಿ
ಎಸೆವ ರುದ್ರಾಕ್ಷಿ ಸುಮಾಲಾಧಾರಿ ೧

ದೀನ ಜನಾಭಿಮಾನ ಸಂಪ್ರೀತ
ಮಾನಿತ ನಿರ್ಮಲ ಹೃದಯ ದಯಾನ್ವಿತ
ಧ್ಯಾನಿತ ಹರಿಪದ ಮಾನಸ ನಿಜ ೨

ಗ್ರಾಮ ಬಲ್ಲಟಗಿ ಶಿವಮಠಾಧೀಶ
ಪಾಮರ ಜನರಘ ಗರ್ವವಿನಾಶ
ಶಾಮಸುಂದರ ಸಖ ಸ್ವಾಮಿ ಚಿನ್ಮಯ ಕೈಲಾಸವಾಸ ೩

೧೪

ಪಾಲಿಸೋ ಸದಾ ಪರಿಪಾಲಿಸೋ
ಪಾಲಿಸೋ ಪಾರ್ವತಿ ರಮಣ । ತ್ರಿದ
ಶಾಲಯ ಪತಿಸುತ ಚರಣ ಆಹಾ
ನಾಲಿಗೆಯಿಂದಲಿ । ಶ್ರೀ ಲಕುಮೀಶನ
ಲೀಲೆ ಪಾಡುವ ಸುಖ ಕಾಲ ಕಾಲಕ್ಕೆ ಕೊಟ್ಟು ಅ.ಪ

ಭೇಷಪಾವಕ ಪತಂಗ । ನಯನ
ಭಾಸುರ ಸ್ಫಟಿಕ ನಿಭಾಂಗ । ಹರಿ
ದಾಸ ಜನರ ಸುಸಂಗವಿತ್ತು
ದೋಷ ಕಳೆಯೊ ರಾಮಲಿಂಗ ಆಹಾ ೧

ಕೇರ ಕುಮಾರ ಕುಮಾರ । ಪಿತ
ಕೀರನಾಮಕನವತಾರ ।ಕೀರಾ
ದೇವನ ಗರ್ವಪರಿಹಾರ । ತಾಟ
ಕಾರಿನಾಮ ಸವಿಗಾರ । ಆಹಾ
ಕಾರುಣ್ಯ ಶರಧಿ ವೈಕಾರಿಕ । ತತ್ವಾಧಿ
ಕಾರಿ ವಿಕಾರಿ ಷಕಾರ ಪದಾರ್ಚಕ ೨

ನಂದಿವಾಹನ ನಾಗಶರನೆ । ನೀಲ
ಕಂಧರ ಸುರನದಿ ಧರನೆ । ಶಾಮ
ಸುಂದರವಿಠಲನ ಸಖನೆ ಮಹಿ
ಶ್ಯಂದನ ಶಿವಶಂಕರನೆ । ಆಹಾ
ಒಂದೂರಾರ್ಯರ ಕರದಿಂದ ಪೂಜಿತನಾಗಿ
ನಿಂದು ಭಜಿಪರಿಗಾನಂದವೀವ ದೇವ ೩

ಶ್ರೀ ಪಾರ್ವತೀದೇವಿ

೧೫

ಗೌರಿ ದೇವಿಗೆ ಸಖಿ ತಾರೆ ಆರುತಿ ಪ

ಮುನಿಜನ ವಂದಿತೆ ಮನದಭಿಮಾನಿಯೆ ।
ಗಣಪತಿ ಷಣ್ಮುಖ ಜನನಿ ದೇವಿಗೆ ೧

ಶಂಕರಿ ಭಕ್ತಸುಶಂಕರಿ ದೈತ್ಯ ಭ
ಯಂಕಾರಿಯಾದ ಶಶಾಂಕ ಮುಖಿಗೆ ೨

ಶಾಮಸುಂದರನಾಮ ಪತಿ ಸಹ
ನೇಮದಿ ಪಠಿಸುವ ಹೈಮಾವತಿಗೆ ೩

ಶ್ರೀಗರುಡದೇವರು

೧೬

ರಕ್ಷಿಸೆನ್ನನು ಪಕ್ಷೀಂದ್ರನೆ ನೀನು ಪ

ರಕ್ಷಿಸೆನ್ನನು । ಪಕ್ಷಿಪ ಕರುಣ ಕ
ಟಾಕ್ಷದಿಂದೀಕ್ಷಿಸು । ತೀಕ್ಷಣ ಬಿಡದೆ ಅ.ಪ

ತಂದೆಯನುಜ್ಞದಿ । ಸಿಂಧೂರ ಕೂರ್ಮ
ದ್ವಂದ್ವ ಪ್ರಾಣಿಗಳ । ತಿಂದ ಮಹಾತ್ಮ ॥
ಅಂದು ಪೀಯೂಷವ । ತಂದು ಮಾತೆಯ
ಬಂಧನ ಬಿಡಿಸಿದ ಬಂಧುರ ಮಹಿಮ
ಗಗನ ಗಮನ ಪನ್ನಪನೆ ಪ್ರಾರ್ಥಿಪೆ
ಮಿಗೆ ಕರುಣದಿ ಯನ್ನಘ ದೂರೋಡಿಸಿ ೧

ಧಾರಣಿಯೊಳವತಾರ ರಹಿತ ಶೃಂ
ಗಾರವಾದ ಬಂಗಾರ ಶರೀರ ೨

ವಂದಿಪೆ ವಿನುತ ನಂದನ ಶಾಮ
ಸುಂದರವಿಠಲನ । ಶ್ಯಂದನ ಶೂರ ೩

೧೭

ನಂಬಿ ನಮಿಸುವೆನೋ ನಿನ್ನ । ಕಂಬುಕಂಧರ ಕಮಲನಯನ ಪ

ವಾತಾಶನಗಿರಿ ನಿವಾಸ । ಯಾತುಧಾನಕುಲವಿನಾಶ ॥
ಶ್ವೇತವಾಹನ ಸೂತ ತ್ರಿದಶವ್ರಾತವಂದ್ಯ ಭಕುತ ಪೋಷ ೧

ತೋಂಡಮಾನವರಪ್ರದಾತ । ಪಾಂಡುರಂಗದ್ವಿಜ ವರೂಥ
ಅಂಡಜಾಧಿ ಜಾಂಡನಾಥ । ಪುಂಡರೀಕವರದ ಸತತ ೨

ಯಾಮಿನೀಶವರ್ನ ತ್ರಿಪಥಗಾಮಿನೀಪಿತ ಶಾಮಸುಂದರ
ವಾಮದೇವನಮಿತ ಚರಣ । ಸಾಮವೇದ್ಯ ಸಲಹೊ ಸತತ ೩

ಶ್ರೀ ಶೇಷದೇವರು

೧೮

ಪೋಷಿಸೆನ್ನನು ನಿರುತ ಶೇಷದೇವ
ದೋಷ ನಾಶನಗೊಳಿಸಿ ಲೇಸಾಗಿ ಪಿಡಿಕರವ ಪ

ವನಧಿ ಶಯನಗೆ ತಲ್ಪ । ಅನುಜ ಪೂರ್ವಜನಾ
ಘನಸೇವೆಯನು ಗೈದ । ಫಣಿರಾಜನೆ
ವಿನಯದಲಿ ಬಿನ್ನೈಪೆ । ನಿನಗಶನವಾದಾತ
ಎನಗೊಲಿದು ಪೊರೆವಂತೆ । ಅನುಗ್ರಹಿಸಿ ಅನುದಿನ ೧

ಭೂಗಗನ ಪಾತಾಳ । ಸಾಗರವ ವ್ಯಾಪಿಸಿದ
ಯೋಗ ಸಾಧನ ಶೂರ । ನಾಗನಾಥ
ಬಾಗಿಬೇಡುವೆ ಭವದ ರೋಗಕೌಷಧವಾದ
ಭಾಗವತ ಶ್ರವಣ ಸುಖರಾಗದಲಿ ನೀಕೊಟ್ಟು ೨

ಸಾಸಿರಾಂಬಕ ನಮಿತ । ಸಾಸಿರಾನನನಾದ
ವಾಸುಕೀವರ । ವಾರುಣೀಶ ನಿನ್ನ ॥
ಹಾಸಿಗೆಯಗೈದಂಥ ಶ್ರೀ ಶಾಮಸುಂದರನ
ದಾಸರಾದವರ ಸಹವಾಸ । ಪಾಲಿಸಿ ನಿತ್ಯ ೩

ಶ್ರೀ ಭಾರತೀದೇವಿ

೧೯

ಎಂತು ನೀ ವಶವಾದಿಯೇ ಭಾರತಿದೇವಿ
ಎಂತು ನೀ ಮರುಳಾದಿಯೆ ಪ

ಎಂತು ನೀ ವಶವಾದಿ । ಕಂತು ಹರನ ತಾಯಿ
ದಂತಿಗಮನೆ ದಮಯಂತಿ ಕಾಂತಸುತೆ ಅ.ಪ

ಧರೆಯೊಳು ಪುಟ್ಟುತಲಿ । ಆಕಾಶಕ್ಕೆ ಭರದಿಂದ ಜಿಗಿಯುತಲಿ
ಸರಸಿಜ ಸಖನಾದ । ತರಣಿಯ ಫಲವೆಂದು
ಅರಿತು ಭಕ್ಷಿಸಲ್ಹೋದ । ತರು ಚರ ರೂಪಿಗೆ ೧

ಪುಂಡರೀಕಾಕ್ಷ ಕೇಳಿ । ದ್ವಾಪರದಿ ಪ್ರಚಂಡಗೆ ಒಲಿಯುತಲಿ
ಭಂಡ ಬಕನ ಶಿರದಿಂಡುಗೆಡಹಿ ಅವನ
ಭಂಡಿ ಓದನವನ್ನು ಉಂಡ ಪುಂಡಗೆ ಮಾತೆ ೨

ಶ್ರೀ ಶಾಮಸುಂದರನೇ ತ್ರೈಲೋಕ್ಯಕ್ಕೆ ಈಶನೆಂಬುದು ತಾನು
ಲೇಸಾಗಿ ಪೇಳಲು । ಲೇಶವಾದರು ನಿನ್ನ
ಆಶೆ ಇಲ್ಲದೆ ಸನ್ಯಾಸಿ ಆದವನಿಗೆ ೩

ಶ್ರೀ ಸರಸ್ವತೀದೇವಿ

೨೦

ವಾಣಿಯೆ ವೀಣಾಪಾಣಿಯೆ ಪಾಲಿಸು ಸದಾ
ಸ್ಥಾಣು ಜನನಿ ಚತುರಾನನ ರಾಣಿ ಶ್ರೀ ಪ

ಯತಿ-ತತಿ ನುತೆ ಕೃತಿ । ಸುತೆ ಸರಸ್ವತಿ ದೇವಿ
ಹಿತದಿಂದಲೆನ್ನನು । ಸುತನೆಂದು ಭಾವಿಸೆ ೧

ಬುದ್ಧ್ಯಾಭಿಮಾನಿ ಸದ್ವಿದ್ಯಾ ಪ್ರದಾಯಿನಿ
ಶುದ್ಧ ಸುಮತಿ ಕೊಟ್ಟು । ಉದ್ಧರಿಸನುದಿನ ೨

ಶಾರದೆ ದಯವ್ಯಾಕೆ । ಬಾರದೆ ಎನ್ನೊಳು
ನಾರದ ಸೇವಿತೆ । ಸೇರಿದೆ ತ್ವತ್ಪಾದ ೩

ಪವನಾಂತರ್ಗತ ಮಾಧವನ ಸನ್ಮಹಿಮೆಯ
ಕವನದಿಂದಲಿ ಸುಸ್ತವನ ಮಾಡಿಸೆ ೪

ಸಾಮಗಾನವಿಲೋಲ । ಶಾಮಸುಂದರನ ಸೊಸೆ
ಪ್ರೇಮದಿ ಮನ್ಮುಖ ಧಾಮದಿ ವಾಸಿಸೆ ೫

ಶ್ರೀ ಪ್ರಾಣದೇವರು

೨೧

ಹನುಮಂತ ಹನುಮಂತ
ಮುನಿವ್ಯಾಸ ಕರಕಮಲಾರ್ಚಿತ ಜಯವಂತ ಪ

ಭೂಲೋಲ ಕೋಲಜ । ಕೂಲ ಸುಮಂದಿರ
ಫಾಲಾಕ್ಷಪಾಲೋಮಿ ಪತಿ ವಂದಿತ
ಕಾಲ ಕಾಲದಿ ನಿನ್ನ ವಾಲೈಸುವರ ಸಂಗ
ಪಾಲಿಸು ಕರುಣದಿ । ಕಾಳಿಮನೋಹರ ೧

ಬಾಣರೂಪನೆ ಪಂಚಬಾಣ ವಿವರ್ಜಿತನೆ । ಷ
ಟ್ಕೋಣ ಮಧ್ಯದಿ ಬಂದು ನೀ ನೆಲಸಿ
ಕ್ಷೋಣಿಗೀರ್ವಾಣ ಸುಶ್ರೇಣಿಯಿಂದರ್ಚನೆ
ಮಾಣದೆ ಕೈಗೊಂಬ । ವಾಣೀಶ ಸ್ಥಾನಾರ್ಹ ೨

ಸಿಂಧು ಬಂಧನ ಶಾಮಸುಂದರವಿಠಲನಾ
ದ್ವಂದ್ವಪಾದಾರವಿಂದಕ ಮಧುಪನೆಂದೆನಿಸಿದ ಗುರು

ಗಂಧವಾಹನ ನಿನಗೊಂದಿಸುವೆನು
ಭವಬಂಧನ ಬಿಡಿಸೋ ಕಾಯೋ ૩

೨೨

ಹನುಮಂತ ಪಾಹಿ ಗುರು ಹನುಮಂತ ಪ

ಹನುಮಂತ ಅನಿಮಿತ್ತ ಬಂಧು । ಶಿರ
ಮಣಿದು ನಮಿಪೆ ದಯಾಸಿಂಧು ಆಹಾ
ಅನುದಿನ ಎನ್ನವಗುಣ ಎಣಿಸದೆ ಕಾಯೊ
ಅನಿಮಿಷ ಪತಿ ಸುರಮುನಿಗಣ ಸೇವಿಪ ಅ.ಪ

ಸಂಜೀವನ ಗಿರಿಧಾರ । ಹೇ ಧ
ನಂಜಯನಾಗ್ರಜ ಧೀರ । ಖಳ
ಭಂಜನ ಕರುಣ ಸಾಗರ ಭಾವಿ
ಕಂಜಜ ಭಕ್ತ ಮಂದಾರ ಆಹಾ
ಅಂಜನೆಯಳ ತನು ಸಂಜಾತ ಸಲಹಯ್ಯ
ಸಂಜೆ ಚರಾರಿ ಪ್ರಭಂಜನ ಮೂರುತಿ ೧

ಕಾಳಿವಲ್ಲಭ ಕಪಿವರನೆ । ಕರು
ಣಾಳು ನಂಬಿದೆ ಯತಿವರನೆ । ಖಳ
ಕಾಲ ಪಾಲಿಸು ವೃಕೋದರನೆ । ಛಳಿ
ಶೈಲಜೆ ಕಾಂತ ವಂದಿತನೆ । ಆಹಾ
ಕೇಳಿ ಮಡದಿ ಮೊರೆ ತಾಳಿ ಸ್ತ್ರೀವೇಷರೂಪ
ಖೂಳ ಕೀಚಕನುದರ ಸೀಳಿದ ಗುರುವರ ೨

ಗಂಧವಾಹನ ಅಸುನಾಥ ನಿನ್ನ
ಪೊಂದಿದೆ ಪಾಲಿಸು ಸತತ । ಕುಂತಿ
ನಂದನ ದ್ವಿಜವೃಂದ ವಿನುತ । ಶಾಮ
ಸುಂದರವಿಠಲನ ದೂತ । ಆಹಾ

ಇಂದು ಕುಲಜವಿಲ್ಲ । ಒಂದೆಂಬವರ ಜೈಸಿ
ಇಂದಿರ ಪತಿ ಪರನೆಂದು ಸ್ಥಾಪಿಸಿದೆ ೩

೨೩

ಹನುಮ ಭೀಮ ಮುನಿಪ ಎನ್ನ
ಮನಕೆ ಬಾರೆಲೊ ।
ಮನಸಿಜ ಹರ ಜನಕ ಭಾವಿ ವನಜಾಸನ
ಘನ ಮಹಿಮನೆ ಪ

ಕುಲಿಶಕಾಯನಳಿನಸಖವ
ಕುಲಜನುಂಗರ ಜಲಧಿ ಧಾಂಟಿ
ಇಳಿಜಾತೆಗೆ ಸಲಿಸಿ ಮೋದ
ಗೊಳಿಸಿದೆ ಮಹ ಬಲಶಾಲಿಯೆ ೧

ಕಂತುಪಿತನೇಕಾಂತ ಭಕುತ
ಕುಂತಿ ಜಾತ ದಂತಿಪುರದ
ಕಾಂತೆಗೆ ಕೃತಾಂತನಾದ
ಶಾಂತನೆ ಮಹಂತರೊಡೆಯ ೨

ಶಾಮಸುಂದರವಿಠಲ ಜಗಕೆ
ಸ್ವಾಮಿ ಎನುತ ಸ್ಥಾಪಿಸಿದ
ಪ್ರೇಮ ಶರಧಿ ಭೂಮಿ ವಿಬುಧ
ಸ್ತೋಮನಮಿತ ಕಾಮಿತ ಪ್ರದ ೩

೨೪

ಸಲಹೊ ಪವನಜ ದೇವ ಸದಾ । ಜಿವೇಶ ಗುರು ಪ್ರೇಮಾಪಕ ಪ

ಅಮಿತ ಮಹಿಮ ತವ ಪಾದಕೆ ।
ನಮಿಪೆ ಸುಮತಿಯ ಪ್ರೇರಿಸು ಬೇಗ ೧

ಕೊರವಿ ಸದನ ಗುರು ಭಾರತೀಕಾಂತ ನೀ
ದೂರಗೈಯದಲೆ ದೇವ ೨

ನಿರುತದಿ ಶ್ರೀವರಶಾಮಸುಂದರ ।
ಧ್ಯಾನವ ನೀಡುವದ್ಯೆ ಈಗ ೩

೨೫

ಸಲಹೊ ಸಂತತ ಸಂತಿಕೆಲವೂರ ನಿಲಯ
ಸಲೆ ನಂಬಿದೆನು ನಿನ್ನ ಜಲಜಾಂಘ್ರಿ ಪಿಡಿ ಕೈಯ್ಯ ಪ

ವಾನರಾಗ್ರಣಿ ಕುಂತಿ ಸೂನು ವೃಕೋದರ ಮೋದ
ಮೌನಿ ನಾಮತ್ರಯದಿ ಅವತರಿಸುತಾ
ದಾನವರ ಗರ್ವಾಖ್ಯ ಕಾನನಕೆ ಶಿಖಿ ಎನಿಸಿ
ಜಾನಕಿ ಪತಿ ಕೃಷ್ಣ ವ್ಯಾಸರನುಗ್ರಹಪಾತ್ರ ೧

ವರದೇಶವಿಠಲನ ಚರಣ ಸೇವಕನಿಗೆ
ಸ್ಥಿರವಾದ ವೈರಾಗ್ಯ ಜ್ಞಾನ ಭಕುತಿ
ಗರೆದು ಪೊರೆಯುವದಕ್ಕೆ ಪುರದ ಹಿಂಭಾಗದಲಿ
ಇರುವ ಕಾರಣ ನಿನ್ನ ಮೊರೆಹೊಕ್ಕೆ ಮರೆಯದಲೆ ೨

ಗಂಧವಾಹನ ನಿನ್ನ ಸಂದರುಶನದಿ ಇಂದು
ಬೆಂದು ಪೋದವು ಎನ್ನ ಪಾಪವೆಲ್ಲ
ಸಿಂಧುಜಾವರ ಶಾಮಸುಂದರನ ದಾಸರೊಳು
ಪೊಂದಿಸೆಂದಡಿಗಡಿಗೆ ವಂದಿಸುವೆ ತ್ವತ್ಪದಕೆ ೩

೨೬

ಸಂಜೀವವರಾಯ ಪೊರೆವುದು । ಆಂಜನೇಯ ಭವ
ಭಂಜನ ಭಯಹರ ಪ

ಶ್ರೀರಘುವರನಾಜ್ಞೆಯಿಂ । ವಾರಧಿಯನು ಲಂಘಿಸಿ
ಸಾರಿ ಕುಶಲ ವೈದೇಹಿ ಹರುಷಿ । ಕ್ರೂರ ರಾವಣನ ಪುರವನುರವಿದತ ೧

ಗೋಪತಿ ಕುಲದೀಪಿಕಾ । ದ್ರೌಪದಿ ಮನೋನಾಯಕ
ಕೋಪದಿಂದ ಸಂಗ್ರಾಮ ಮಂಡಲದಿ ।
ಪಾಪಾತ್ಮಕ ಭೂಪಾಲರಳಿದ ಗುರು ೨

ಶ್ರೀ ಮಹಾಕಲಿಕಾಲದಿ । ನೀ ಮುದಮುನಿ ನಾಮದಿ
ಸ್ವಾಮಿ ಶಾಮಸುಂದರನೆ । ಎಂದು ಘನ ।
ಭೂಮಿಯಲ್ಲಿ ಡಂಗುರವ ಸಾರಿದ ೩

೨೭

ಆನಂದ ಆನಂದಪ್ರದವೋ ದಾಶರಥಿ ಧ್ಯಾನಾ ಪ

ಭಕ್ತಿಯುಕ್ತನಾಗಿ ಮನದಿ ನಿತ್ಯ ಪಾಡೋ ರಾಮಚರಣ ಅ.ಪ

ಕಾಲನಪುರ ಭಯವಿಲ್ಲವೋ । ವಾಲ್ಮೀಕಿಯು ಸಾಕ್ಷಿ ಇದಕೆ
ಬಾಲಧ್ರುವನು ವನದಿ ಭಜಿಸಿ
ಮೇಲುನಭದಿ ಮೆರೆವಾ ನೋಡೋ ೧

ಶ್ರೀ ರಾಮನಾಮದಿಂದ ಮಾರುತಿಯು ಬ್ರಹ್ಮನೆನಿಪ
ಮಾರಹರನು ತನ್ನ ಸತಿಯಾ ಸೇರಿ ಸತತ ಭಜಿಪ ಕೇಳೋ ೨

ಹಿಂದೆ ಮಾಡಿದ ನಿನ್ನ ದುರಿತವೃಂದವೆಲ್ಲ । ಛೇದಿಸುವದು
ಒಂದೆ ಭಾವದಿಂದ ಶಾಮಸುಂದರನ ನಾಮ ಪಾಡೋ ೩

೨೮

ಬಾರೈ ಬಾರೈ ಭಾರತಿ ಮನೋಹರ
ಮಾರುತಿ ಗುರುವರನೆ ದೇವ ಪ

ಪವನ ದೇವ ಬಾರೋ ಪವಿ ಸಮಗಾತ್ರ ಬಾರೋ
ರವಿಜನ ಭಯ ಹರ । ಪಾವನ್ನ ಮೂರುತಿ ೧

ಮಧ್ವಮುನಿಯೆ ಬಾರೋ । ಉದ್ಧರಿಸಲು ಬಾರೋ ।
ಶುದ್ಧ ಮುಕುತಿದಾತ ದದ್ದಲಪುರವಾಸ ೨

ಗಂಧವಾಹನ ಬಾರೋ । ಸಿಂಧು ಬಂಧನ ಬಾರೋ ।
ಮಂದರೋದ್ಧಾರ ಶಾಮಸುಂದರ ಪ್ರಿಯಸಖ ೩

೨೯

ಪೋತನ ಪಾಲಿಸೋ ಪವಮಾನಾ । ಈ
ಭೂತಳದೊಳು ನಿನ್ನ ಖ್ಯಾತಿ ಘನಾ ಪ

ಒದಗಿದ ವ್ಯಾಧಿಯ ಪರಿಹರಿಸೊ ನಿನ್ನ
ಪದರಿಗೆ ಬಿದ್ದವನೆಂದು ಗ್ರಹಿಸೋ ೧

ತಾಯಿಯು ಇಲ್ಲದ ಬಾಲಕನು । ಇವನ
ಕಾಯಲು ನೀ ದಯಾ ಸಾಗರನು ೨

ಶ್ವಾಸದೊಡಿಯ ನೀನೆಂತೆಂದು । ಶೃತಿ
ಘೋಷಿಸುವದು ಆನತ ಬಂಧು ೩

ಶಿಶುವಿಗೊಲಿದು ನೀ ಸಲಹಿದರೆ । ದೇವ
ಅಸುನಾಯಕನೆಂಬ ಬಿರುದು ಖರೆ ೪

ಗ್ರಾಮ ಬಲ್ಲಿಟಗಿ ಕೃತವಾಸ । ಶಿರಿ
ಶಾಮಸುಂದರನ ಪ್ರಿಯದಾಸ ೫

೩೦

ದೇವ ಹನುಮಶೆಟ್ಟಿ । ರಾಯ ಜಗಜಟ್ಟಿ
ಕಾವೋದು ಭಾವಿ ಪರಮೇಷ್ಟಿ ಪ

ಪಾವನಚರಿತ ಸಂಜೀವನ ಗಿರಿಧರ
ಪಾವಮಾನಿ ಕರುಣಾವಲೋಕನದಿ
ನೀ ನಲಿಯುತಲಿ ಸದಾವಕಾಲ ತವ
ತಾವರೆ ಪದಯುಗ ಸೇವೆಯ ಕರುಣಿಸೊ ಅ.ಪ

ವಾನರ ಕುಲನಾಯಕ । ಜಾನಕಿ ಶೋಕ ನಿವಾರಕ
ಕಾನನ ತೃಣಪಾವಕ । ಹೀನ ಕೌರವ ನಾಶಕ ।
ಸನ್ಮಾನಿ ತಿಲಕ ಆನಂದತೀರ್ಥನಾಮಕ ।
ಕ್ಷೋಣಿಯೊಳಗೆ ಎಣೆ । ಗಾಣೆ ಪಿಡಿದು ಪೊರೆ
ಸ್ಥಾಣು ಜನಕ ಗೀರ್ವಾಣ ವಿನುತ ಜಗತ್ಪ್ರಾಣ
ಕಲ್ಯಾಣ ಮೂರುತಿ ೧

ಮರುತನಂದನ ಹನುಮ । ಪುರಹರರೋಮ
ಪರಮಪುರುಷ ಶ್ರೀ ಭೀಮಾ
ಕರುಣಸಾಗರ ಜಿತಕಾಮ । ಸದ್ಗುಣ ಭೌಮ
ಪರವಾದಿ ಮತವ ನಿರ್ನಾಮ ಗರಿಸುತ ಪಾಲಕ
ಜರಿಜ ವಿನಾಶಕ ॥
ಹರಿಮತ ಸ್ಥಾಪಕ । ದುರಿತ ವಿಮೋಚಕ
ಶರಣು ಜನರ ಸುರತರು ಭಾರತಿವರ
ಮರಿಯದೆ ಪಾಲಿಸೊ ನಿರುತ ಮಮ ಚರಿತ ೨

ಧಿಟ್ಟ ಶಾಮಸುಂದರವಿಠಲ ಕುವರ
ದುಷ್ಟ ರಾವಣ ಮದಹರ

ಜಿಷ್ಣು ಪೂರ್ವಜ ವೃಕೋದರ । ರಣರಂಗ ಶೂರ
ಶಿಷ್ಟ ಜನರುದ್ಧಾರ । ನಿಷ್ಟೆಯಿಂದ ಮನಮುಟ್ಟಿ
ನಿನ್ನ ಪದ ಥಟ್ಟನೆ ಪಾಡುವ
ಶ್ರೇಷ್ಠ ಸುಜನರೋಳ್ । ಇಟ್ಟು ಸಲಹೊ ಸದಾ
ಸೃಷ್ಟಿ ಮಂಡಲದಿ । ಪುಟ್ಟ ಗ್ರಾಮ ಬಲ್ಲಟಗಿವಾಸ ೩

೩೧

ಪಾಲಿಸೆನ್ನನು ನಿರುತ ಪವನರಾಯ ।
ಫಾಲಲೋಚನ ನಮಿತ ಪಾವನ್ನಕಾಯ ಪ

ಅಭಿನಮಿಸಿ ಭಜಿಪರಿಗೆ ಉಭಯ ಕಷ್ಟವ ಕಳೆದಿ ।
ಶುಭವಿಭವನೆಗರಿದು ಪೊರಿಯುವಲ್ಲಿ ।
ಪ್ರಭುವನಧಿ ನಿನ್ನಂಥ ಪ್ರಬಲ ಪ್ರಭುಗಳ ಕಾಣೆ
ವಿಬುಧ ಸನ್ನುತ ಮಹಿಮ ಅಭಿಗಾರಪುರವಾಸ ೧

ನಿನ್ನನೆ ನೆರೆ ನಂಬಿ ನಿನ್ನನೆ ಧ್ಯಾನಿಸುತ ನಿನ್ನ
ಸನ್ನಿಧಿಯಲ್ಲಿ ನೆಲೆಸಿಪ್ಪೆ ನಾ । ಬಿನ್ನಪವ ಲಾಲಿಸಿ
ಬನ್ನಗಳ ಪರಿಹರಿಸಿ ನಿನ್ನೊಡೆಯನಂಘ್ರಿಯಲಿ
ಘನ್ನ ಭಕುತಿಯ ಕೊಟ್ಟು ೨

ಭೂಮಿಜಾತೆಯ ರಮಣ ಶಾಮಸುಂದರ । ಬದರಿ
ಧಾಮ ಮೂರುತಿತ್ರಯ ಪ್ರೇಮ ಪಾತ್ರ ।
ಕಾಮಿತಪ್ರದ ಹನುಮ ಭೀಮ ಗುರುಸುಖತೀರ್ಥ
ಯಾಮ ಯಾಮಕೆ ಹರಿಯ ನಾಮ ಜಿಂಹ್ವೆಯೊಳಿಟ್ಟು ೩

೩೨

ಪ್ರಥಮಾಂಗ । ಪ್ರಥಮಾಂಗ
ಪೃಥ್ವಿ ಸುರಾರ್ಚಿತ । ಅತುಳ ಮಹಿಮ ಗುರು ಪ

ದಶವರೂಧನ ಕುಶಲವ ತ್ವರಿತದಿ
ವಸುಧಿಜೆಗರುಹಿದ । ಅಸಮಚರಿತ ಗುರು ೧

ಕುಂಜರ ಪುರಪತಿ । ಭಂಜನ ಭಾವಿ
ಕಂಜಜ ಕಾಯೊ ಮೃತ್ಯುಂಜಯ ವಂದಿತ ೨

ಅಧಮಾದ್ವೈತರ । ಮದವಳಿಯಲು ನಡು
ಸದನನ ಸುದತಿಯ । ಉದರೊಳುದಿಸಿದ ೩

ಬಕ ಕೀಚಕ ಖಳ । ನಿಕರ ತರಿದ ಪಾ ।
ವಕ ಸಖ ವೃಕೋದರ । ಸುಖ ತೀರ್ಥರ ಗುರು ೪

ಹೇಮೋದರ ಪಿತ । ಶಾಮಸುಂದರನ ಪ್ರೀತ
ಪ್ರೇಮದ ಸುತ । ಸುತ್ರಾಮ ನಮಿತ ಗುರು ೫

೩೩

ಪವಮಾನಸದಾ ಸಲಹೈ । ಪ್ರೇಮಾಂಬುಧಿಯೆ
ತವ ಪಾದವ ನಂಬಿದೆನೈ । ನೀ ಪಾಲಿಸು ದಾತ ಪ

ಹರಿಕುಲೇಶ ಸಿರಿವರನ । ಚರಣಧ್ಯಾನಗೈಯದಲೆ
ಕರುಣಸಿಂಧು ಜ್ಞಾನಪದ ಪಥಕಾಣೆ ।
ಕೊನೆಗೆ ತೋರೋ ಎನಗೆ ೧

ನಾನೆಂಬೋ ಗರ್ವದಲಿ । ಶ್ರೀನಾಥನ ಪದ ಪೊಂದದೆ
ಹೀನತನದಿ ಕಾಲಕಳೆದೆ । ಮಾಣದೆ ನೋಡಿಂದಿನಾ ದಿನದಿ ೨

ಶ್ರೀ ಶಾಮಸುಂದರನ ದಾಸಾಗ್ರಣಿ । ಪವಿಸಮಾಂಗ
ಶ್ವಾಸದೊಡೆಯೆ ಕೊರವಿಯ । ಪೋಷಿಸು ಗುರು ನಾ ವಂದಿಪೆ ೩

३೪

ನಾನೇನಿನಗಂದೆನೋ ಬಿಡದೆ ಪವ
ಮಾನ ಪಾಲಿಸೋ ಎನ್ನನು ಪ

ದೀನರ ಪಾಲಿಪ ದಾನವಾಂತಕ ಎನ್ನ
ಜ್ಞಾನಾನಂದದ ನಾಮ ಧ್ಯಾನವಗೈದೆನೊ ಅ.ಪ

ಎರಡನೆ ಯುಗದಲ್ಲಿ ಶರಧಿ ಲಂಘಿಸಿ ರಘು
ವರನ ಕುಶಲವಾರ್ತೆ ಧರೆಜಾತೆಗೆ
ಅರುಹಿ ದಶಾಶ್ಯನ ಪುರವ ದಹಿಸಿದಂಥ
ಪರಮಸಮರ್ಥನೆಂದರಿತು ಕೊಂಡಾಡಿದೆನಲ್ಲದೆ ॥
ತರು ಚರುವರನೆಂದಿನೆ । ಶಿರದಿ ಕಲ್ಲು
ಧರಿಸಿ ತಂದವನೆಂದಿನೆ । ಬ್ರಹ್ಮಾಸ್ತ್ರಕೆ
ಭರದಿ ಸಿಲ್ಕಿದಿ ಎಂದೆನೆ ಭಕ್ತೀಲಿ ಭಾವಿ
ಸರಸಿಜಾಸನನೆಂದು ಸ್ಮರಿಸಿದೆನಲ್ಲದೆ ೧

ಕೃತಯುಗದಲಿ ಕುಂತಿಸುತನಾಗಿ ಜನಿಸುತ
ರತಿ ಪತಿ ಪಿತನಂಘ್ರಿ ಭಜಿಸುತಲಿ
ಕ್ಷಿತಿ ಭಾರಕೆ ಖಳ ತತಿಯ ಸಂಹರಿಸಿದಾ
ಪ್ರತಿಮಲ್ಲ ನೀನೆಂದು ಸ್ತುತಿಸಿದೆನಲ್ಲದೆ
ಖತಿವಂತ ನೀನೆಂದಿನೆ । ದನುಜಾತೆಗೆ
ಪತಿಯಾದವನೆಂದಿನೆ । ಅವಳ ಕೂಡಿ
ಸುತನ ಪೆತ್ತವನೆಂದನೆ । ಯಾಮಿನಿಯಲಿ
ಸತಿಯೆನಿಸಿದವನೆಂದೆನೇ । ನಿನ್ನನು ಬಿಟ್ಟು
ಗತಿ ನಮಗಿಲ್ಲೆಂದು । ನುತಿಸಿದೆನಲ್ಲದೆ ೨

ನಡುಮನಿಸುತನಾಗಿ ಪೊಡವಿಯೊಳಗೆ ಪುಟ್ಟ
ಉಡುಪಿ ಕ್ಷೇತ್ರದಿ ಶಾಮಸಂದರನ

ಧೃಡವಾಗಿ ಸ್ಥಾಪಿಸಿ । ಜಡ ಕುಮಾಯ್ಗಳ ಗೆದ್ದ
ಸಡಗರ ಮುನಿ ಎಂದು ನುಡಿದೆನಲ್ಲದೆ ಹರಳಿ ಮೆದ್ದ
ಬಡಂದ್ವಿಜ ಶಿಶುವೇದಿನೆ । ಎತ್ತಿನ ಬಾಲ
ಪಿಡಿದೋಡಿದವನೆಂದಿನೆ । ಬೇಸರದಿಂದ
ಮಡದಿ ಬಿಟ್ಟವನೆಂದಿನೆ । ಕಡಿಗೆ ಬೋರಿ
ಗಿಡವ ಸೇರಿದಿ ಎಂದಿನೆ ಒಲಿದು ನಿನ್ನ
ಒಡೆಯನ ತೋರೆಂದು ಅಡಿಗಳಿಗೆರಗಿದೆನಲ್ಲದೆ ೩

೩೫

ನಮಿಸುವೆ ಪಾಲಿಸೊ ಪ್ರಾಣಪತೆ ಪ್ರೇಮವಾರುಧಿ ।
ವಾನರ ನಾಥಾ ಪೊಂದಿದೆ ಚರಣಾ ಪ

ನೊಂದೆನು ಘೋರ ಭವದಿ ಪಾಶದಿ
ತಂದೆಯೆ ಪಿಡಿ ನೀ ಬಂದು
ಕರವ ಕುಂದಗಳೆಣಿಸದೆ ನೀ ಬೇಗನೆ ೧

ಕರಿವರ ಭೀಮಾ ಗುರು ಸುಖತೀರ್ಥಮರಿಯದೆ ಗರಿಯೊ
ನರಹರಿ ಧ್ಯಾನಾ । ಕೊರವಿ ನಿಲಯನೆ ಪ್ರಾರ್ಥಿಪೆ ೨

ಶ್ರೀವರ ಶಾಮಸುಂದರವಿಠಲನ ಸೇವಕನಾದ ಭಾವಿ
ಧಾತ ಪಾವನನೇ ಪವಿಗಾತ್ರ ಸದಾ ೩

೩೬

ದೇವ ಮಾರುತಿ ಜಯ ಮಂಗಲಂ
ಶುಭ ಮೂರುತಿ ದಯಾಬ್ಧಿ ಜಯ ಮಂಗಳಂ ೧

ರಘುರಾಮ ಶ್ರೀ ಪಾದ ಪ್ರಿಯ ಸೇವಕ
ವರದಾಯಕ ಹರಿನಾಯಕ ಕರುಣಿಸೊ
ವಜ್ರಾಂಗ ಜೀವೇಶ್ವರ ೨

ಶ್ರೀ ಶಾಮಸುಂದರ ಭಕ್ತಾಗ್ರಣಿ
ಘನ ಸದ್ಗುಣಿ ಚಿಂತಾಮಣಿ ಕೊರವೀಶ
ಭಯನಾಶ ನತಪೋಷ ೩

೩೭

ಬಾರೈಯ್ಯಾ ಬಾರೈಯ್ಯಾ
ಭಾರತಿ ಚಿತ್ತ ಚಕೋರ ಶಶಾಂಕಾ ಪ

ಹೇಸಿ ಸಂಸಾರದ ಕ್ಲೇಶ ಕಳೆದು ತವ
ದಾಸ ಜನರ ಸಹವಾಸವ ನೀಡಲು ೧

ಹನುಮ ಭೀಮ ಮುದ । ಮುನಿವರ ಹರಿಪದ
ನೆನೆಯುವ ಭಾಗ್ಯವ । ಅನುದಿನ ಗರೆಯಲು ೨

ವಾತಜ ನಿನ್ನಯ ದೂತರು ನಾವೈ
ಪಾತಕ ಭೀತಿಯ । ಪ್ರೀತಿಲಿ ಬಿಡಿಸಲು ೩

ಭಾವ ಭಕ್ತಿಯಲಿ । ಸೇವಿಪರಿಗೆ ಸುಖ ।
ವೀವ ದೇವಗುರು । ಭಾವಣಿ ನಿಲಯಾ ೪

ತಂದೆ ನೀನೊಲಿದರೆ । ನಂದಜ ಶಾಮ
ಸುಂದರ ಸಲಹುವನೆಂದು ಪ್ರಾರ್ಥಿಪೆವು ೫

೩೮

ಅಡವಿನಿಲಯ ನಿನ್ನಡಿಗೆರಗುವೆ ಕರ
ಪಿಡಿದು ಪಾಲಿಸಯ್ಯ ಪ

ಮೃಡನುತ ಭಾರತಿ ಒಡೆಯನೆ ಪ್ರಾರ್ಥಿಪೆ ।
ಬಿಡಿಸು ಭವದ ಮಾಯಾ ಅ.ಪ

ನಿನ್ನ ದರುಶನದಿ ಎನ್ನ ಜನ್ಮ ಪಾ ।
ವನ್ನವಾಯಿತಯ್ಯ ।
ನಿನ್ನನುಗ್ರಹ ಪಡೆದ ಸಂ ।
ಪನ್ನರೊಳಿಡು ಜೀಯಾ ೧

ತರು ಚರ ನರ ದ್ವಿಜ । ವರ ರೂಪತ್ರಯ ।
ಧರಿಸಿದಂಥ ದೇವ ॥
ದುರುಳ ದೈತ್ಯ ಪರಿವಾರ ಗರ್ವಹರ
ಶರಣರ ಸಂಜೀವಾ ೨

ಸೃಷ್ಟಿಯೊಳಗೆ ಅತಿ ಶ್ರೇಷ್ಟನೆಂದೆನಿಸಿದ ।
ಕುಷ್ಟಗಿ ಮೂರುತಿ ಪುರವಾಸ
ದಿಟ್ಟ ಮೂರುತಿ ಶಾಮಸುಂದರ
ವಿಠಲಪ್ರಿಯ ದಾಸ ೩

೩೯

ಜವದಿ ಪಾಲಿಸೊ ಪ್ಲವಗೋತ್ತುಮ ಮರುತಾ ನಂಬಿದೆ ನಿರುತಾ ಪ

ಅವನಿಶಾರ್ಚಿತ ಪವನಾತ್ಮಜ ಹನುಮಾ ಭವಸುರನುತ ಭೀಮಾ ಅ.ಪ

ಮಾರುತಿ ಅಂಜನ ಗರ್ಭದೊಳುದವಿಸಿ ವಾರಿಧಿಯುತ್ತರಿಸಿ
ಧಾರುಣಿ ಸುತೆಗತಿ ಹರುಷವಗೊಳಿಸಿದಿ । ನೀ ದ್ವಾಪರ ಯುಗದಿ
ನಾರಿಯ ಮೊರೆ ಕೇಳಿ ದುರುಳನ ಶಿರ ತರಿದಿ ಆ ನಾರಿ ವೇಷದಿ ೧

ಅದ್ವೈತರ ನೀನಳಿಸುವಲೋಸುಗದಿ । ಸದ್ಗುರುವರ ಜಗದಿ
ಮಧ್ಯಾಸದನ ಸತಿಯುದರದಿ ಜನಿಸಿದಿ । ಸದ್ವೈಷ್ಣವರ ಪೊರೆದಿ
ಸಿದ್ಧಾಂತವ ಸ್ಥಾಪಿಸಿ ಬದರಿಗೆ ನೀಪೋದೆ । ಮದ್ವಾಭಿದಾನದಿ ೨

ಅಸುಪತಿ ಕುಸುಮಜ ಪರಿವಾಳುವ ಧೀರಾ । ನಂಬಿದೆ ವೃಕೊಜಠರಾ
ಋಷಿ ನಿಕರಾಂಬುಜ ದಿನಮಣಿ ಮದ್ವೇಶಾದ್ವ । ದಶಶಿರ ಪುರನಾಥಾ
ವಸುಧಿಜೆ ಪತಿ ಶಾಮಸುಂದರ ಪ್ರಿಯ ದೂತಾ । ಶಶಿಕುಲಸಂಜಾತಾ ೩

೪೦

ಇಂದು ಪವಮಾನ ಪಿಡಿ ಎನ್ನ ಕೈಯಾ ನಿನ್ನ ನಾ
ಪೊಂದಿ ಪ್ರಾರ್ಥಪೆನಯ್ಯಾ ಪ.

ಬಂಧನದೊಳು ನೊಂದೆನಯ್ಯ
ಮುಂದೆ ಸನ್ಮಾರ್ಗ ತೋರಿಸು ಜೀಯಾ । ಎನ್ನ
ಕುಂದುಗಳೆಣಿಸದಿರಯ್ಯಾ ಗುರು
ಗಂಧವಾಹನ ವಜ್ರಕಾಯಾ ಅ.ಪ

ನಾನು ನನ್ನದು ಎಂಬ ಮದ ಬಿಡಿಸೊ
ಜ್ಞಾನ ಭಕ್ತಿ ವಿರಕ್ತಿ ಕೊಡಿಸೊ
ಜಾನಕಿಪತಿ ಪದದಿ ಮನ ನಿಲಿಸೊ
ಸಾನುರಾಗದಿ ಸತತ ಉದ್ಧರಿಸೊ ೧

ನಿನ್ನ ದಯದಿಂ ರವಿಜ ಭಯ ಕಳೆದಾ
ನಿನ್ನ ಒಲಿಮೆಲಿ ಪಾರ್ಥ ಜಯ ಪಡೆದಾ
ನಿನ್ನ ನಂಬದೆ ರಾವಣನು ತಾ ಮಡಿದಾ ೨

ಶ್ರೀಮದಾನಂದತೀರ್ಥ ಮಧ್ವೇಶಾ
ಶಾಮಸುಂದರ ಸ್ವಾಮಿ ನಿಜದಾಸಾ
ಕಾಮಿತಾರ್ಥಗಳಿತ್ತು ಪೊರೆ ಅನಿಶಾ ೩

೪೧

ಭಾರತಿ ಗುರುವರ ಗುರು ಮಾರುತಿ ಕರುಣಿಸೊ
ಸಾರಿದೆ ತವ ಪದ ಸಾರಸವ ಪ

ದಾಶರಧಿಗೆ ನಿಜ ದಾಸನೆನಿಸಿ । ಕಮಲಾ
ಸನ ಪದವಿಯ ಪೊಂದಿದ್ಯೋ ನೀ
ಭೂಸುತೆ ಚೋರನ ಭಾಸುರ ಪುರವ ಹು
ತಾಶನಿಗುಣಿಸಿದ ಕೀಶ ನಮೋ ೧

ಪುನಃ ದ್ವಾಪರದಲಿ ಜನಿಸಿ ಧ
ರ್ಮಾನುಜನೆನಿಸಿ । ಭೂಭಾರ
ದನುಜರ ರಣದಿ ಹೂಂಕಾರದಿ ಕುಣಿದು ಹರಿ
ಮನ ಘನ ಮೆಚ್ಚಿಸಿದ ಭೀಮ ನಮೋ ೨

ಶ್ರೀಮದಾನಂದ ಮುನಿ ನಾಮದಿ ಪರಾತ್ಪರ
ಶಾಮಸುಂದರನೆಂದು ಸ್ಥಾಪಿಸಿದಿ
ನೇಮದಿ ಭಜಿಪರ ಕಾಮಿತ ಗರಿಯುವ
ಗ್ರಾಮ ಬಲ್ಲಟಗಿ ಧಾಮ ನಮೋ ೩

೪೨

ಮಾಣದೆ ಅನುದಿನ ಸಾನುರಾಗದಿ ಸಲಹೋ
ವಾನರೋತ್ತಮ ಮಾರುತಿ ಪ

ವಾಣಿಯ ಮುದಕೆ ಕ್ಷೋಣಿ ಕುಮುದಕೆ
ಏಣ ಲಾಂಛನನೆನಿಸಿ ಗಾಣದಾಳದಿ ತಾಣಗೈದಿಹ ಪ್ರಾಣದೇವನೆ ಅ.ಪ

ಯುಗಯುಗದಲಿ ಜನಿಸಿ । ರಘುಕುಲೇಶನ ಸ್ತುತಿಸಿ
ಜಿಗಿದು ವಾರಿಧಿ ಲಂಘಿಸಿ ॥
ಜಗದ ಜನನಿಗೆ ಕ್ಷೇಮ ತಿಳುಹಿದ ಒದೆದು
ದಶಾನನನ ನಗರ ದಹಿಸಿದ । ಸುಗುಣ ನಾಲ್ಮೊಗ
ಪದಾರ್ಹನೆ ಮುಗಿವೆ ಕರವನು ಅಘವ ಓಡಿಸಿ ೧

ದ್ವಾಪರದಲ್ಲಿ ಬಹು ಪಾಪಾತ್ಮಕರಾದ
ಭೂಪಾಲರ ಧುರದಿ । ಕೋಪದಿ ಸಂಹರಿಸಿ
ಸತಿಮಣಿ ದ್ರೌಪದಿಗೆ ಮುದವಿತ್ತು ಸೇವೆಯನು
ಗೋಪತಿ ಶ್ರೀಕೃಷ್ಣ ಸಲಹಿದ ಭಾಪು ಭಾಪು ಪರಾಕ್ರಮಶಾಲಿ ೨

ಬಂದು ಈ ಯುಗದಿ ಮಧ್ವಮಂದೀರಾತ್ಮಜನಾಗಿ
ಮಂದರ ಮತವ ಮುರಿದು ॥
ನಂದಕಂದ ಮುಕುಂದ ಶಾಮಸುಂದರನೆ ಪರ ।
ನೆಂದು ವಿಜಯದಿ ದುಂದುಭಿ ಮೊಳಗಿಸಿದ
ಕಾರಣ ಗುರು ಗಂಧವಾಹನ ೩

೪೩

ಗಂಧವಾಹನ ಮತವ ಪೊಂದದವರು
ಹಂದಿ ನಾಯಿಗಳಾಗಿ ಬಹುಕಾಲ ಕಳೆದಂತೆ ಪ

ಇಳೆಯಾಣ್ಮನಿಲ್ಲದಾ ನಾಡು ಶೋಭಿಸದಂತೆ
ಜಲವಿಲ್ಲದಾ ವಾಪಿ ಕೂಪದಂತೆ
ನಳಿನ ಬಾಂಧವ ಮಿತ್ರನುದಯಿಸದ ದಿನದಂತೆ
ಕುಲ ಹೀನನಾದವರ ಸಂಗ ಮಾಡಿದಂತೆ ೧

ಕೋಣನಾ ಸಮ್ಮುಖದಿ ವೀಣೆ ಬಾರಿಸಿದಂತೆ
ಜಾಣತನವಿಲ್ಲದಾಮಾತ್ಯನಂತೆ
ವಾನರನ ಕೈಯಲ್ಲಿ ಮಾಣಿಕವ ಕೊಟ್ಟಂತೆ ೨

ಶಾಮಸುಂದರನಾಮ ವರ್ಣಿಸದ ಕವಿಯಂತೆ
ಪಾಮರಗೆ ಪೌರಾಣ ಪೇಳಿದಂತೆ
ಕಾಮಾದಿ ಗುಣ ಬಿಡದೆ ಸನ್ಯಾಸಿಯಾದಂತೆ
ಕೋಮಲಾಂಗದ ಸತಿಗೆ ಕ್ಲೀಬ ದೊರಕಿದಂತೆ ೩

೪೪

ಕರುಣಿಸೋ ಗುರು ಮಾರುತಿ
ಶ್ರೀಧರ ಪರನೆಂದು ಬೋಧಿಸುತಲಿ ಪರ
ವಾದಿಯ ಜಯಸಿದ ಮೋದತೀರ್ಥಮುನಿ ೧

ಅಬಲೆಯ ಪ್ರಾರ್ಥನೆ ಲಾಲಿಸಿ ನಿಶೆಯೊಳು
ಖೂಳನುದರವನ್ನು ಸೀಳಿ ಮೆರೆದ ಘನ ೨

ಸ್ಮರಿಸುವ ಜನರ ಕೋರಿಕೆ ನೀಡಲು
ಕೊರವಿ ಪುರದೊಳು ನೆಲೆ ನಿಂತ ಧೀರ ೩

ಸೋಮಧರಾರ್ಚಿತ ಶಾಮಸುಂದರನ
ನಾಮಾಮೃತವನು ಪ್ರೇಮದಿಂದ ಕೊಡು ೪

೪೫

ಕಾಯೋ ದಯಾಭರಿತ ಮಾರುತಿ ಪ

ಸುರಪಾ ಫಣಿಪಾ ದ್ವಿಜಪಾ ಸೇವಿತಾ
ಗೌರಿಕಾಂತ ವಿನುತ ಭರಿತ ೧

ಹೇಸಿ ವಿಷಯದಾಸೆಯ ಬಿಡಿಸಿ
ದಾಸನೆಂದುದಾಸೀನ ಮಾಡದೆ ೨

ಶಾಮಸುಂದರ ಪ್ರೇಮದ ತನಯ
ಭೀಮಾನಂದ ಮುನಿಯೆ ಧಣಿಯೇ ೩

೪೬

ಕಾಯೊ ಕಪಿವರ । ಕಾಯಜವೈರಿ ವಿನಮಿತ ಪ

ಅನಿಲಜ ಮಹಾಚಾರುಚರಿತ ।
ಅನಘನೆ ಕರುಣ ನಮಿಪೆ ಸದಾ ೧

ರಘುಜನ ದಿವ್ಯಪಾದ ಭಜಕಾ ।
ಅಗಣಿಕ ಸುಗಣ ಸ್ಮರಿಪೆ ಸದಾ ೨

ಶಾಮಸುಂದರಗೆ ಧಾಮಾನೆಂದೆನಿಪ
ಭೀಮವೃಕೋದರ ಸುಖತೀರಥನೆ ೩

೪೭

ಕರುಣಾವಾರುಧೀಶ ಭಾರತೀಶ
ಕರಪಿಡಿದು ಕಾಪಾಡೊ ಕೊರವಿಯ ವಾಸ ಪ

ಭಜಿಸುವವರಿಗೆ ಅಮರ ಕುಜವು ನೀನೆಂದೆನುತ
ಸುಜನರೆನಗೆ ಹಿಂದೆ ಸೂಚಿಸಿದ್ದರೊ ದ್ವಿಜ ಕುಲಾರ್ಚಿತ ಇಂದು
ನಿಜವಾಯ್ತು ಆ ಮಾತು ಅಜಪದಾರ್ಹನೆ
ನಿನ್ನ ಭಕುತರಲ್ಲಿಡು ಎನ್ನ ೧

ದಂತಿಪುರಪತಿಗೆ ಕೃತಾಂತನೆನಿಸಿದ ಧೀರ ।
ಎಂತು ಪೊಗಳಲಿ ನಿನ್ನ ಮಹಿಮೆಯನು
ಕುಂತಿಜನೆ ತವನಾಮ ಚಿಂತಿಯನು
ಸಂತತದಲಿ ಸಲಹೋ ಧೀಮಂತ ನಂಬಿದೆ ಪರಮಾ ೨

ಕಾಮಾರಿಸುತ ನಮೊ ಸೋಮಕುಲಭವ ಭೀಮ ।
ಶ್ರೀಮಧ್ವಮುನಿನಾಥ ವರ ಪ್ರದಾತ
ಭೂಮಿಜಾತೆಯ ಪ್ರವೀತ ಶಾಮಸುಂದರ ದೂತ
ಸ್ವಾಮಿಗುರು ತವನಾಮ ಸ್ಮರಿಪೆ ಘನ್ನ ೩

೪೮

ಪವಮಾನದೇವ ಪರಿಪಾಲಿಸೋ
ತವ ಪಾದವಾ ನೆರೆ ನಂಬಿದೆ ನಾ
ಮೂರು ಕೋಟಿ ರೂಪ ಮೂರು ನೇತ್ರ ನಮಿತ
ಮೂರುವತಾರಿ ಭಾರತಿ ಕಾಂತ ೧

ಕೃಷ್ಣಾಚಾರ್ಯರ ನಿಷ್ಠೆಗೊಲಿದು ಜ್ಞಾನವ
ಕೊಟ್ಟು ಸಲಹಿದ ಶ್ರೇಷ್ಠ ಮೂರುತಿಯೆ ೨

ಅಂಧಕೀವನ ಮಂದಿರಾಂಜನೇಯ
ನಂದ ಜಾತ ಶಾಮಸುಂದರಾಂಘ್ರಿ ಪ್ರಿಯ ೩

೪೯

ಕೋಲದೇವ ತನಯ ಕೂಲ ಸುನಿಲಯ
ಪಾಲಿಸು ಜೀಯಾ ನೀ ಪಾಲಿಸು ಜೀಯಾ ಪ

ದೇವಸ್ವಭಾವ ಮಹಿದೇವ ಸಂಸೇವಿತ
ಪಾವನ ಸುಚರಿತ ದೇವಮುನಿಗತಿ ಪ್ರೀತ ೧

ದೈಶಿಕ ಕುಲನಾಥ ಪೂಶರ ನಿರ್ಜಿತ ।
ಭಾಸುರ ಕಾಷಾಯ ವಾಸ ಭೂಷ ವ್ಯಾಸರಾಯಾ ೨

ಶಾಮಸುಂದರ ಮೂಲರಾಮಪದಾರ್ಚಕ
ಕಾಮ ಕಾರ್ಮುಕ ಗಜಸ್ತೋಮ ಸಿಂಗ ಮಂಗಳಾಂಗ ೩

೫೦

ಜಯದೇವಿ ತನಯಗೆ ಮಂಗಳಂ
ವಯನ ಪ್ರದಾತೆಗೆ ಶುಭ ಮಂಗಳಂ
ಯುಗ ಯುಗದಿ ಪುಟ್ಟಿ । ಜಿಗಿದು ಗಗನ ಮೆಟ್ಟಿ
ಹಗಲೊಡೆಯನ ಫಲ ಬಗೆಯ ಭಕ್ಷಿಸಿ
ಮಿಗೆ ಭಕುತಿಲಿಂದ ರಘುಪನೊಲಿಸಿ ನಾ
ಲ್ಮೊಗನ ಪದವಿ ಪಡೆದ ಸುಗುಣ ನಿಧಿಗೆ ೧

ಪುನಃ ದ್ವಾಪರದಲ್ಲಿ ಇನಜನ ತನುಜಗೆ
ಅನುಜನೆಂದೆನಿಸಿ ಹರಿಯಾಜ್ಞೆಯಿಂದಲಿ
ಮಣಿಮಂತ ಮೊದಲಾದ ದನುಜರ ಗಣವೆಲ್ಲ
ರಣದೊಳು ಹಣಿದಂಥ ಘನವೀರನೆ ೨

ಬಂದು ಭೂಮಿಯಲ್ಲಿ ಮಧ್ಯಮಂದಿರ ನಂದನನಾಗಿ
ಮಂದ ಮಾಯ್ಗಳ ಮತ ಖಂಡಿಸುತಲಿ
ಸಿಂಧುತೀರದಿ ಮೆರೆವ ಇಂದುಕ್ಷೇತ್ರದಿ ಶಾಮ
ಸುಂದರ ಸ್ಥಾಪಿಸಿದಾನಂದಮುನಿಗೆ ೩

೫೧

ಕೃಪಾಳೊ ಗುರುವರ ಶ್ರೀಪವಮಾನ
ಭಾರತಿ ಭವಹಾರಿ ಸ್ಮರಹರನುತ ದೀನಜನ ಮಂದಾರ ಅ.ಪ

ಕಾವಕರುಣಿ ಜೀವವರೇಣ್ಯ
ದಿವ್ಯವೃಂದ ವಿನುತ ಜಯಶೀಲಾ
ಪಾವನಾತ್ಮಕ ಪಾಹಿ ಪಾಹಿ
ಭಾವಿ ವಿಧಿ ದುರಿತೌಷ ಹಾರಿ ೧

ಆದಿಪುರದಿ ಮೆರೆವನಾಥಾ
ಸದಯ ಭಕ್ತ ಜನಕೆ ಶುಭದಾತ
ಬುಧರಾರಿ ಸಜಾತ ಭ್ರಾತಾ
ಸದಯ ಧರ್ಮಾನು ಜಾತಾ ೨

ಪ್ರೇಮಶರಧಿ ವಾನರೇಶಾ
ಅಮಿತ ಸತ್ವಯತಿ ಮಹಿಮ ಯತಿರಾಜಾ
ರೋರೋಮ ವ್ಯೋಮಕೇಶಾ
ಶಾಮಸುಂದರನ ಮೋಹದ ದಾಸಾ ೩

ಶ್ರೀಲಕ್ಷ್ಮೀದೇವಿ

೫೨

ಶರಧಿ ಸಂಭೂತೆ ಕಾಯೆ । ಶಿರಬಾಗಿ ಬೇಡುವೆ ತಾಯೆ ।
ಸುರಮುನಿಜನ ಸೇವಿತೆ । ಕರಪಿಡಿ ಸುಖದಾತೆ ಪ

ಸೀತೆ ಜಾನಕಿಯೆ । ಶೀತಾಂಶು ಬಿಂಬಾನಯೆ ।
ಮಾತೆ ನೀ ಬಂದು ಪಾಲಿಸೆ । ಎನ್ನವಗುಣ ಬಿಡಿಸೆ ೧

ಮಂದಜಾಸನ ಜನನಿ । ಕುಂದಕುಟ್ಮಲ ರದನಿ
ವಂದಿಪೆ ವನಜಮಂದಿರೆ । ಗೋವಿಂದನ ತೋರೆ ೨

ಶಾಮಸುಂದರನ ರಾಣಿ । ಭೂಮಿನಭ ಸಂಚರಿಸಿ ।
ಭಾಮೆ ನಂಬಿದೆ ಅಂಭ್ರಣಿ । ಘನ ಮಂಜಳವಾಣಿ ೩

೫೩

ಜನನಿ ಪಾಲಿಸೆ ಶುಭಾಂಗಿ ಸಲೆ ದಯದಿ ವಲಿಸುತಲಿ
ಪಾಲಾಬ್ಧಿ ಬಾಲೆ ಶೀಲೆ ಪ

ವಾರಿಜಾರಿ ಸಹೋದರಿಯೆ । ಮೂರು ಭುವನೋದ್ಧಾರಿ
ಚಾರುಗಾತ್ರಿ ಶ್ರೀ ರಮಣಿ । ದೂರ ನೋಡದಿ ಬಾರೆ ಮನೆಗೆ ೧

ದಾತೆ ಖ್ಯಾತೆ ಮಾತೆ । ಸುಜನೋಪಕಾರಿ
ಸೀತಾಮಾತೆ ಭೂತರುಣಿ ಜಾತೆ । ಪಾವನಿ ಪ್ರೀತೆ ಸದಯೆ ೨

ಶಾಮಸುಂದರ ರಾಣಿಯೆ ಸುರ ।
ಸ್ತೋಮವಂದಿತೆ ತ್ರಿಗುಣಮಾನಿ
ಭಾಮೆ ಭಾಗ್ಯದಾಯಕಿಯೆ ಪ್ರೇಮವಾರಧಿ ಬೀರು ದಯವ ೩

೫೪

ಬಾರೆ ಭಾಗ್ಯದ ನಿಧಿಯೆ । ಬಾರೆ ಜಾನಕಿಯೆ ಪ

ಬಾರೆ ಬಾರೆ ಚಕೋರ ಸುಖಾಗ್ರಣೆ
ಸೇರಿದೆ ತವಪದ ವಾರಿಜ ನಿಲಯೆ ಅ.ಪ

ಕೃತಿ ಶಾಂತಿ ಜಯ ಮಾಯೆ
ಕ್ಷಿತಿಜ ಕೋಮಲ ಕಾಯೆ
ಶಿತಕಳೆವರ ವಿಧಿಶತಕ್ರತು ಸುಮನಸ
ತತಿನುತೆ ಪಾವನೆ ರತಿಪತಿ ತಾಯೆ ೧

ಮಂಗಳೆ ಮುದ ಭರಿತೆ
ತಿಂಗಳ ಮುಖಿ ಸೀತೆ
ಇಂಗಡಲಜೆ ಕೃಪಾಂಗಿಯೆ ಎನ್ನಂತ
ರಂಗದಿ ಮಾನವ ಸಿಂಗನ ತೋರೆ ೨

ಶಾಮಸುಂದರ ರಾಣಿ ವಾಮಾಕ್ಷಿ
ಕಾಲ್ಯಾಣಿ ಕಾಮಿನಿ ಮಣಿ
ಸತ್ಯಭಾಮೆ ರುಕ್ಮಿಣಿ ಗೋಮಿನಿ
ರಮೆ ಶುಭನಾಮ ಲಲಾಮೆ ೩

೫೫

ಪೂಜೆಗೈಯಲು ಬಾ ಸಖಿ ಸುಮುಖಿ
ರಾಜಾಸಹೋದರಿಗೆ । ರಾಜೀವಾಂಬಕಿ
ಪೂಜೆಗೈಯಲು ಬಾ ಸಖಿ ಸುಮುಖಿ ಪ

ಕುಂಕುಮ ಅರಿಷಿಣ ಮೃಗ ಮುದದಿ
ಶಕ್ರಂದನವಂದಿತ ಶ್ರೀಪಂಕಜಾಕ್ಷಿಗೆ ೧

ಗಂಧಗರು ಕುಸುಮಾಕ್ಷತೆಯಿಂದಾ ।
ಛಂದ ಮಂದಗಾಮಿಗತಿ ಭಕ್ತಿಲೆ ಸಿಂಧು ಜಾತೆಗೆ ೨

ಶಾಮಸುಂದರನ ರಾಣಿಗೆ । ಹರಿಗೆ । ಭೂಮಿಜಾವರಗೆ ।
ಭೂಮಿಜಾತೆಗೆ ಜವದಲಿ ವಾಮಲೋಚನೆ ೩

೫೬

ಪಾಲಿಸೆನ್ನ ಮಾತೆ ಕರುಣದಿ
ಪಾಲಾಂಬುಧಿ ಜಾತೆ ಪ

ಕಾಲಕಾಲಕೆ ಕಮಲಾಲಯೆ ಗೋಪಿಯ
ಬಾಲನಾಳುಗಳ ಊಳಿಗವಿತ್ತು ಅ.ಪ

ಜಾನಕಿ ಶುಭಗಾತ್ರೆ ನಮಿಸುವೆ ।
ಮಾನಿತೆ ಚರಿತ್ರೆ
ಸಾನುರಾಗದಿ ತವ ಸೂನುವೆನಿಪ ಪವ
ಮಾನ ಸುಶಾಸ್ತ್ರದ ಜ್ಞಾನವಿತ್ತು ಸದಾ ೧

ಶಂಭು ದೃಹಿಣಿ ವಿನುತೆ ತ್ರೈಜಗ
ದಂಬೆ ಸುಗುಣ ಭರಿತೆ ।
ಕುಂಭಿಣಿ ಸುತೆ ದುರ್ಗಾಂಭ್ರಣಿ ಮಮ ಹೃದ
ಯಾಂಬುಜದೊಳಿಹ ಬಿಂಬನ ತೋರಿ ೨

ಪ್ರೇಮದಿಂದ ನೋಡೆ ಮನ್ಮನ ।
ಧಾಮದಿ ನಲಿದಾಡಿ ।
ಕಾಮಿನಿಮಣೀ ಗಜಗಾಮಿನಿ ಗೋಮಿನಿ
ಶಾಮಸುಂದರನ ವಾಮಾಂಗಿಯೆ ಸದಾ ೩

೫೭

ಇಂದಿರೆ ಮಜ್ಜನನಿಯೆ । ಇಂದಿರೆ ಪ

ಇಂದಿರೆ ಸಿಂಧು ಸಂಭೂತೆ । ಪೂರ್ಣ
ಚಂದಿರ ಮುಖಿ ಸುಖದಾತೆ ಅ.ಪ

ಇಂದೀವರಾಕ್ಷಿಯೆ । ಪೊಂದಿ ತ್ವತ್ಪಾದಕೆ
ವಂದಿಪೆ ಮನ್ಮನ ಮಂದಿರದೊಳು ಬಾರೆ ॥
ಕೃತಿ ಶಾಂತಿ ಜಯಮಾಯೆ ಸೀತೆ ದೇವಿ
ಪತಿತಪಾವನೆ ಕ್ಷಿತಿಜಾತೆ । ವಿಧಿ
ಶಿತ ಕಂಧರಾದಿ ನಮಿತೆ । ಮಹ ।
ಪತಿವ್ರತೆ ಪರಮ ವಿಖ್ಯಾತೆ ಆಹಾ
ಶೃತಿವಿನುತಳೆ ಸದಾ । ನುತಿಸಿ ಬೇಡಿಕೊಂಬೆ
ಅತಿಹಿತದಲಿ ತವ ಪತಿಯ ಪಾದವ ತೋರೋ ೧

ಹರಿಣಲೋಚನೆ । ಶ್ರೀರುಕ್ಮಿಣೀ । ಮದ
ಕರಿ ಮಂದಗಮನೆ ಕಲ್ಯಾಣಿ ದ್ವಿಜ
ಪರಿವಾರ ಸಂಸ್ತುತೆ ಜಾಣೆ । ಚಾರು
ಚರಿತೆ ಚಂಚರೀಕ ಸುವೇಣಿ ॥ ಆಹಾ ॥
ಸಿರಿ ಸತ್ಯಭಾಮೆಯೆ । ಮರೆಯದೆ ಎನ್ನಯ
ದುರಿತ ವಿಚ್ಛೇದಿಸಿ । ಹರಿಸ್ಮರಣೆ ನೀಡೆ ೨

ಕುಂದರದನೆ ಲಕುಮಿಯೆ । ಕಂಬು ಕಂಧರೆ
ಕಾಮನ ತಾಯೆ ಅರ
ವಿಂದ ಸದನೆ ಜಾನಕಿಯೆ । ಭವ
ಬಂಧನ ಬಿಡಿಸಿ ಕರಪಿಡಿಯೆ ಆಹಾ
ಚಂದನ ಗಂಧಿಯೆ । ನಂದ ನಂದನ ಶಾಮ
ಸುಂದರವಿಠಲನ್ನ ಸಂದರುಶನವೀಯೆ ೩

೫೮

ಕಾಯೆ ದುರ್ಗಾಂಭ್ರಣಿಯೆ । ಕಾಯೆ ಶ್ರೀ ರುಕ್ಮಿಣಿಯೆ
ಕಾಯೆ ಕಾಯೆ ಶುಭ ಕಾಯೆ ದಯದಿ ಹರಿ
ಕಾಯ ನಿಲಯೆ ವಿಧಿ ಕಾಯಜ ತಾಯೆ ಪ

ಮಾಕಮತಿ ಶ್ರೀಕರಳೆ । ಪೋತನ ನುಡಿ ಕೇಳೆ
ಭೀಕರಳೆನಿಸುತ । ವ್ಯಾಕುಲಗೊಳಿಸದೆ
ನೀ ಕರುಣಿಸು ರತ್ನಾಕರನ ಮಗಳೆ ೧

ಸೀತೆ ಸಾರಸನಯನೆ । ಶೀತಾಂಶುವಿನ ಭಗಿನಿ
ಮಾತೆ ನಮಿಪೆ ತವ । ಘಾತಕ ವ್ರಾತದ
ಭೀತೆಯ ತೋರದೆ । ಪ್ರೀತಿಯಿಂದೊಲಿದು ೨

ಲಕ್ಷ್ಮಿಕೃತಿ ಶಾಂತಿ ಅಕ್ಷರಳೆ ಜಯವಂತಿ
ಈಕ್ಷಣ ಕರುಣಕಟಾಕ್ಷದಿಂದೀಕ್ಷಿಸು
ಪೇಕ್ಷವ ಮಾಡದೆ ಮೋಕ್ಷದಾಯಕಳೆ ೩

ವಟದೆಲೆಯೊಳು ಮಲಗಿರುವ । ವಟುರೂಪಿ ಪತಿ ಪದವ
ಪಠಿಸುತಬ್ಜ ಸೀಕರ । ಪುಟದಿ ನಮಿಸುವಂಥ
ಕುಟಿಲರಹಿತೆ ಶತ । ತಟಿತ ಸನ್ನಿಭಳೆ ೪

ಭಾಮೆ ಶ್ರೀ ಭೂಸುತೆಯೆ । ಶಾಮಸುಂದರ ಸತಿಯೆ
ನಾ ಮೊರೆಹೊಕ್ಕೆನು । ಪ್ರೇಮದಿಂದಲಿ ।ಸು
ಕ್ಷೇಮಗರೆದು ಮಮಧಾಮದಿ ನೆಲಸೆ ೫

೫೯

ಕುಂದಣಾರುತಿ ತಾರೆ ಸಖಿ । ಸಿಂಧುನಂದನೆಗಿಂದುಮುಖಿ ಪ

ಕೃತಿ ಶಾಂತಿ ಜಯೆ ಮಾಯೆ । ಕ್ಷಿತಿಜಾತೆಗೆ । ವಿಧಿ ಮಾತೆಗೆ
ವರದಾತೆಗೆ । ಕೃತಿಲೀಲೆ ನುತಿನೀಲೆ ರುಕ್ಮಿಣಿಗೆ ೧

ಜಂಭಾರಿ ವಂದಿತೆ ಶ್ರೀರಂಬೆಗೆ ಜಗದಂಬೆಗೆ ।
ಸುನೀತಾಂಬೆಗೆ । ಅಂಬುಜ ಮಂದಿರ ಅಂಭ್ರಣಿಗೆ ೨

ಶ್ರೀ ಶಾಮಸುಂದರನರ್ಧಾಂಗಿಗೆ ಶುಭಾಂಗಿಗೆ ।
ದಯಾಪಾಂಗೆಗೆ । ಭೂಸುರ ಸುಚರಿತ ಭಾರ್ಗವಿಗೆ ೩

೬೦

ಆರುತಿ ಬೆಳಗೆ । ವಾರಿಧಿ ಸುತೆಗೆ
ಸಾರ ಸಂಗೀತದಿಂದಲಿ ಪ

ಸಕಲ ವಸ್ತುವೆನಿಸಿ ಮುಕುತಿದಾಯಕ ಹರಿಗೆ
ಭಕುತಿಯಿಂದಲಿ ಬಿಡದೆ । ಸದಾಪೂಜಿಪ ಸಿರಿಗೆ
ವಿಖಿನ ಸಾದ್ಯಮರ ಗಣಕೆ । ಸುಖ ಕೊಡುವಳಿಗೆ
ಮಕರಧ್ವಜನ ಮಾಲೆಯಾದ ರುಕುಮನನುಜಗೆ ೧

ಚಾರುಶ್ರಾವಣ ಭಾರ್ಗವ ಶುಭವಾರದ ದಿನದಿ
ಭೂರಿ ಭಕ್ತಿ ಭರಿತಳಾಗಿ ನಮಿಸುತ ಮನದಿ ನೀ
ಆರಾಧಿಸೆ ಷೋಡಶ ಉಪಚಾರದಿ ಮುದದಿ
ಕೋರಿಕೆಯನು ಗರೆಯುವ ವರಲಕ್ಷ್ಮಿಗೆ ಜಯದಿ ೨

ತಾಮರಸ ಸುಧಾಮಳಾದ ಸೋಮವದನಿಗೆ
ಗೋಮಿನಿ ಸೌದಾಮಿನಿ ಸಮ ಕೋಮಲಾಂಗಿಗೆ
ಶಾಮಸುಂದರ ಸ್ವಾಮಿಯ ಸುಪ್ರೇಮದ ಸತಿಗೆ
ಕಾಮಿತ ಫಲದಾಯಿನಿ ಶ್ರೀ ಭೂಮಿಜೆ ರಮೆಗೆ ೩

೬೧

ಕೊಡು ವರವಾ ಪಿಡಿ ಕರವಾ ಪ

ಜಡಜ ಸದನೆ ಪಾಲ್ಗಡಲ ನಂದನೆ
ಪೊಡವಿ ಜನನಿ ನಿಮ್ಮಡಿಗಳಾಂಬುಜವಾ
ಧೃಡ ಸುಜ್ಞಾನದಿ ಬಿಡದೆ ಪೂಜಿಸುವೆ ೧

ಇಕ್ಷುಶರನ ಪಿತ ವಕ್ಷನಿಲಯೆ । ಕಮ
ಲಾಕ್ಷಿ ಕೋಮಲೆ ಮೋಕ್ಷದಾತಳೆ
ಲಕ್ಷ್ಮಿಯ ಕರುಣ ಕಟಾಕ್ಷದಿಂದೀಕ್ಷಿಸಿ ೨

ದಿಟ್ಟ ಶಾಮಸುಂದರವಿಠಲನ
ನಿಷ್ಠೆಯಿಂದಲಿ ಮನಭಜಿಸೊ ಸುಖ ಕೊಟ್ಟು
ಕಠಿಣ ಭವ ಕಟ್ಟಿ ಓಡಿಸಿ ೩

ಶ್ರೀ ಹರಿ

೬೨

ಹರಿಯೇ ಬಾರೋ ತ್ವರಾ
ಘೋರಾರಣ್ಯದಿ ಸೇರಿ ದಾರಿ ತೋರದೀಗ ಸಾರಿ ಕರೆವೆ ಅ.ಪ

ಮಂದರಾರು ಮಂದಿ ಎನ್ನ ಬಂಧಿಸುತಲಿ
ಪಾಶದಿಂದ ಮುಂದಕ್ಕೆ
ಬಿಡದಲಿಹರು ನೊಂದು ಬೆಂದು ಬಾಯಿ ಬಿಡುವೆ ೧

ಹಿಂದೆ ವ್ಯಾಘ್ರ ಮುಂದೆ ಪಾವು ನಿಂದು ಕಾದು ನೋಡುತಿಹವು
ಬಂದು ನೀನು ಕಾಯದಿರಲು ತಂದೆ ಇನ್ನಾರು ಗತಿಯೋ ೨

ನಂದಸುತ ಗೋವಿಂದ ಶಾಮಸುಂದರನೆ ನಿನ್ನ ನಾಮ
ಒಂದು ನಿಮಿಷ ಧ್ಯಾನಿಸದೆ ನಾ ಮಂದಭಾಗ್ಯನಾದೆನಯ್ಯೋ ೩

೬೩

ಭಕ್ತಿಪಥ ಸಲ್ಲಿಸೈ ಸತತ ಸುಖಿ ಮುರವೈರಿ । ಸಂಸಾರ
ಘೋರ ಭಯದೂರೋಡಿಸಿ ಹರಿಯೆ । ತ್ವತ್ಪಾದ
ಸಂಸೇವಿಪ ಸೌಭಾಗ್ಯತ್ವರ ನೀಡೋ ಶ್ರೀಕಾಂತನ ಪ

ಅಪರಾಧ ನೋಡದಲೆ ಕೃಪೆಯಿಂದ ಕರಪಿಡಿಯೊ । ಪಾಪಾಂಧ
ಕೂಪದಲ್ಲಿ ತಪಿಸುತಲಿ ಬಲುಭವಣಿ ಪರಿಪರಿ ಅನುಭವಿಸುವೆ
ಗೋಪಾಲಾ ನೀ ಪಾರುಗೈಯುವದು ೧

ಮಡದಿ ಸುತರಾ ಮೋಹಕಡಲಲಿ ಮುಳುಗಿ । ನಾ
ದಡವ ಸೇರದೆ । ಕಡೆಗೆ ಅಡಿದಾವರೆ ನಂಬಿದೆನ್ನೈ ।
ಕಡೆಹಾಯಿಸೋ ದೇವನೆ ತಡಮಾಡದೆ ಜಡಜಾಂಬಕ ಶ್ರೀಹರೇ ೨

ಶ್ರೀ ಶಾಮಸುಂದರನೆ । ಶಿಶುನಿಂಗೆ ಪಡೆದವರು
ಮೋಸದಿಂದ ಘಾತಿಸುವರೆ । ದಾಶರಥ ಭವಘಸಣೆ
ತ್ವರಿತದಿ ಪರಿಹರಿಸುತ ಗೋವಿಂದನೆ ನೀ ನೋಡೊ ಸುಜ್ಞಾನವಾ ೩

೭೪

ರಕ್ಷಿಸೋ । ಬೇಗನೆ ಬಂದು ರಕ್ಷಿಸೊ । ಪ

ರಕ್ಷಿಸೊ ರವಿಕೋಟಿ ತೇಜ । ಜಗತ್
ಕುಕ್ಷಿ ನಂಬಿದೆ ಕಲ್ಪಭೂಜ । ಆಹಾ
ಪಕ್ಷೀಂದ್ರವಾಹನ । ಲಕ್ಷ್ಮೀಪತಿಯೆ ನೀನು
ಪೇಕ್ಷಿಸದೆನ್ನನು ಈಕ್ಷಿಸಿ ಕರುಣದಿ ಅ.ಪ

ಕೇಶವ ಖಳಕುಲ ನಿಧನ । ನರ
ಕೇಸರಿ ಶ್ರೀಹಯವದನ । ಗುರು
ಕೀಶ ನಮಿತ ಪಾದನಳಿನ । ಸಮೀ
ರಾಶನ ಪರ್ಯಂಕಶಯನ । ಆಹಾ
ದಾಶರಥಿಯೆ ಭವದಾಶೆ ಬಿಡಿಸಿ ತವ ।
ದಾಸ ಜನರ ಸಹವಾಸದೋಳಿಟ್ಟೆನ್ನ ೧

ಪಶುಪಾಲ ಮಿಸುನೀಯ ವಸನ । ಧ್ರುವ
ಪಶುಪತಿ ಸುತ ಗುಣಪೂರ್ಣ । ದುಷ್ಟ
ಶಿಶುಪಾಲ ಮದವಿಭಂಜನ । ಪಾಹಿ ।
ವಸುದೇವ ಸುತ ನಿರಂಜನ । ಆಹಾ ।
ವಸುಗರ್ಭನ ಪೆತ್ತ ಕುಸುಮದಳೇಕ್ಷಣ ।
ವಸುಮತಿಯೊಳು ಎನ್ನ ಪಿಸುಣನೆಂದೆನಿಸದೆ ೨

ನಾಶರಹಿತ ವನಮಾಲಧರ
ಶ್ರೀ ಶಾಮಸುಂದರವಿಠಲ । ಗುಡಾ
ಕೇಶ ವರದ ಸುಶೀಲ । ಪಾಕ ।
ಶಾಸನಾನುಜ ಗಾನಲೋಲ । ಆಹಾ ।
ಪೂಶರಪಿತ ಸ್ವಪ್ರಕಾಶ ಪರಮ । ವಿ
ಲಾಸವ್ಯಾಸ ಮಹಿದಾಸ ಲೋಕೇಶನೆ ೩

೬೫

ಕಂತು ಜನಕ ಶ್ರೀಕಾಂತನ ಸ್ತುತಿಸಲ
ನಂತನಿಗಸದಳವೈ ಪ

ದಂತಿ ಚರ್ಮಧರಾಧ್ಯರು ಈತನ
ಅಂತುಗಾಣದಲೆ ಚಿಂತಿಪರೈ ಅ.ಪ

ಮಾವನ ಮಥಿಸಿದ ಮಾವನಿಗೊಲಿದ
ಮಹರಾಯನವನು ।
ಮಾವನ ಮಗನ ಮೋಹದ ಮಗಳಿಗೆ
ಮಾವನೆನಿಸಿದವನು
ಮಾವನ ತಮ್ಮಗೆ ತನ್ನಯ ಭಕುತನ
ಮಹಿಮೆ ತೋರಿಸಿದನು ॥

ಮಾವನ ತನಯರ ಪರಿ ಪರಿ ಪೊರೆದನು ಉ
ಮಾವಲ್ಲಭನುತ ನಗಧರನಿವನು ೧

ಸತಿಯ ಪಿತನ ಪೆತ್ತನ ಮಾತೆಗೆ
ಪತಿಯಾದವನಿವನು ।
ಸತಿಯಳ ಪಿಡಿದೊಯ್ದಾತನ ಭ್ರಾತನ
ಸುತನ ಪಾಲಿಸಿದನು
ಸತಿಯ ಪಡೆದವಳ ಸುತನ ಮರ್ದಿಸಿ
ಸತಿಯರ ಕೂಡಿದನು ।
ಸತಿಗೆ ಕೊಟ್ಟ ವರ ಹಿತದಿ ನೀಡಲು
ಸತಿಯನ್ನಗಲಿದ ಶತಕ್ರತು ವಂದ್ಯನು ೨

ಕಾಲುರಹಿತ ಕೈಕಾಲು ಮುದುರುವ
ಕೋಲರೂಪಿ ಇವನು
ಕಾಲನಂತೆ ಘನ ಕೋಪಿಯಾಗಿ ನದಿ
ಕಾಲಲಿ ಪಡೆದವನು
ಕಾಲ ಕ್ಷತ್ರಿಯರ ತಾ
ಬಾಲೆಯ ಸಲಹಿದನು
ಕಾಳಿವೈರಿ ಶ್ರೀ ಶಾಮಸುಂದರ
ಕಾಲಕಾಲ ನಖ ಸಖ ಕಲಿ ಭಂಜನನು ೩

೬೬

ಶ್ರೀ ಮನೋಹರ ಸಲಹೋ ಎನ್ನ
ಕಾಮಿತ ಫಲವಿತ್ತು ಸಾಮಜಪತಿ
ಪರಿಪಾಲಕ ನಂಬಿದೆ ಪ

ಅಂಡಜಗಮನ ದಶರುಂಡ ವೈರಿ ರಾಜೀವಾಕ್ಷ
ಕುಂಡಲಿಶಯನ ಕೋದಂಡಪಾಣಿಯೆ

ತೋಂಡಮಾನಗೊಲಿದ ಮಾರ್ತಂಡ ತೇಜ
ನಿನ್ನ ಪಾದ ಪುಂಡರೀಕ ಸೇವಿಸುವ
ತೋಂಡರೊಳಿಡು ಪಾಂಡವ ಪಕ್ಷ ೧

ನಾಳಿತ ಸಂಭವಪಿತ ಶೈಲಜಾವಲ್ಲಭ ನುತ
ವಾಲಿಯ ಭಂಜನ ವನಮಾಲಿ ಭೂಲೋಲ
ಕಾಲಯವನನ ಕಾಲ ಕೋಲರೂಪಿ ಕೋಮಲಾಂಗ
ತಾಲ ಕೇತನನುಜ ಕೀಲಾಲಜ ಬಾಂಧವ ಬಾಲಕ ಪೋಷಕ ೨

ಇಂದು ಕೋಟಿ ನಿಭ ನರಸಿಂಧುರಾರಿ ಸಿಂಧುಶಾಯಿ
ನಂದನಂದಾನಂದ ದಾತ ನಂದಕ ಹಸ್ತ
ನಂದಮುನಿವಂದಿತ ಸಂಕ್ರಂದನ ನಂದನವರದ
ಬಂಧನ ಬಿಡಿಸೋ ಶಾಮಸುಂದರವಿಠಲ ಬಂಧುರ ಮಹಿಮ ೩

೬೭

ಸ್ಮರಿಸುವೆ ಮುರಹರನ । ಪರಮ ಪುರುಷನ
ಧುರದಿ ಸುರಪ ನರನ । ಪೊರೆದ ದೇವನ ಪ

ವನಜ ಸನ್ನಿಭ ಲೋಚನ । ಜನಕಜೆ ಮನ
ವನಜ ಭಾಸ್ಕರ ಕೇಶವನ । ದನುಜ ಕಾಲನ ೧

ಭಕುತ ಪಾಲಕ ಅಜಿತ ಮುಕುತಿ ಪ್ರದಾತ
ಲಕುಮಿ ಸುರವರ ಪೂಜಿತ । ವಿಖನಸ ಪಿತ ೨

ಶಾಮಸುಂದರವಿಠಲಾ । ಸಾಮಜ ಪಾಲಾ
ಶಾಮ ಸನ್ನುತ ಗೋಪಾಲಾ ಭೂಮಿಜೆ ಲೋಲಾ ೩

೬೮

ಕುಂದಣದಾರುತಿ ತಾರೆ ಕುಂದಣದಾರುತಿ ।
ಸುಂದರವದನ ಕಮಲನಾಭನಿಗೀಗ ಪ

ಶೌರಿ ಸುರವಂದ್ಯಗೆ ವಾರಿಧಿಶಯನಗೆ ।
ಮುರವೈರಿ ಮದನಪಿತನಿಗೀಗ ೧

ಮುಕ್ತಿ ಶುಭದಾತಗೆ । ಭಕ್ತರ ಪರಿಪಾಲಗೆ ।
ಲಕುಮೀಶಗೆ ಶುಭದಿ ಪೋಷಗೆ ೨

ಶಾಮಸುಂದರಾಂಗಗೆ ಸಾಮಜೇಂದ್ರ ಪಾಲಗೆ
ಸುಮನಯನ ಶೆಮಲದೂರಗೀಗ ೩

೬೯

ಬೆಳಗಿರೆ ಶ್ರೀಹರಿಗೆ ಆರುತಿಯಾ ನಾರಿಯರು ಪ

ಇಂದುಬಿಂಬ ಮುಖಿಯರು । ಮದನಾರಿ ಸಖಗೆ
ವೇದವೇದ್ಯ ಯದುಕುಲನಾಥಗೆ ೧

ಜಗದಾದಿ ಪತಿಗೆ ನಗಪಾಣಿಗೆ
ಜಗದಾದಿ ಗಜವರ ಪಾಲಿಗೆ ೨

ಶಾಮಸುಂದರವಿಠಲಗೆ ಬೇಗ
ಕೋಮಲಾಂಗ ರಘುರಾಮಚಂದ್ರಗೆ ೩

೭೦

ಕರುಣದಿ ಪಿಡಿ ಕೈಯ್ಯ । ಸಿರಿ ಮನುಜಕೇಸರಿ
ಧರಣಿ ಸುಮನಸಗೇಯ । ಮೊರೆಹೊಕ್ಕೆ ನಿನ್ನನು
ತರಣಿ ಸನ್ನಿಭಗಾತ್ರ । ಕ್ಷೀರಾಬ್ಧಿಶಯ್ಯ ಪ

ಸರಸಿಜಾಸನ ಜನಕ ತವಪದ
ಮರೆದ ಪಾಮರನಾಗಿ ನಾ ಭವ
ಶರಧಿಯೊಳು ಬಿದ್ದು ಪರಿದು ಪೋಗುವೆ
ಉರಗರಿಪುಧ್ವಜನಾಗಿ ನೀ ಬಂದು
ಅಜಿತ ದೇವಕಿ ಸೂನು । ಸರ್ವೇಶ ರಾಘವ
ಭಜಕಜನ ಸುರಧೇನು । ಸ್ವರತ ಸುಖಮಯ
ಸುಜನ ವಾರಿಜ ಭಾನು ಖಳವನ ಕೃಶಾನು
ತ್ರಿಜಗ ಪೋಷಕ ಪರಮ ಸುಲಭ ನೀ
ನಿಜದಯದಿ ಹರಿಮದವ ಖಂಡ್ರಿಸಿ
ವೃಜದ ತುರುಗಳ ಕಾಯ್ದ ಅಜನುತ
ದ್ವಿಜಪ ಸುತೆ ಪತಿಧ್ವಜನ ಸುತನೆ ೧

ಪತಿತ ಪಾವನ ರಂಗ । ಸಂತತದಿ ನಿನ್ನನು
ಸ್ತುತಿಪ ಸುಜನರ ಸಂಗ । ನೀನಿತ್ತು ಪಾಲಿಸು ದಿಜ
ತತಿ ಮಾತಂಕ ಮರಿಗಳಿಗೆ ಸಿಂಗ
ಸಿತ ತುರಂಗನ ರಥದಿ ಶೋಭಿಪ
ಅತುಳ ಮಹಿಮನ ಜನನಿ ಅನುಜನಿಗೆ
ಹಿತದಿ ಭ್ರಾತದಿ ಭೀತಿ ಬಿಡಿಸಿದ
ಶ್ರುತಿಗೆ ನಿಲುಕದ ಚ್ಯುತ ವಿದೂರನೆ ೨

ಸಾಮಗಾನ ವಿಲೋಲ ಸುರರಾಜ ಪೂಜಿತ
ಹೇಮಕಶ್ಯಪ ಕಾಲ । ಕರಿದನುಜ ಹರನುತ

ಸ್ವಾಮಿ ಶ್ರೀ ವನಮಾಲಧರ ಸುಗುಣಶೀಲ
ಕಾಮಪಿತ ಹಿಮಧಾಮ ವದನ ಸು
ಧಾಮಸಖ ಸುರಸ್ತೋಮ ವಂದಿತ
ಯಾಮಿನೀ ಚರವೈರಿ ವಾಮನ
ಶ್ರೀ ಮನೋಹರ ಶಾಮಸುಂದರ ೩

೭೧

ಬೆಳಗೋಣು ಹರಿಗೆ ಆರುತಿಯ । ಸಂಗೀತ ಹಾಡಿ ಪಾಡಿ
ನಲುವಿಂದ ಬೇಗ ಬಾರೆ ನಳಿನಾಕ್ಷಿ ಬಾ ಪ

ಬಾಲೆ ಶೀಲೆ ದ್ರೌಪದಿ ಭಕುತಿಲಿ ಧ್ಯಾನಿಸಿ ಧೇನಿಸಿ
ಕೇಳಿ ಅಕ್ಷಯ ಶಾಲಿಗರೆದ ದೇವ ದೇವಗೆ ॥
ಶೈಲವನೆತ್ತಿದಾತಗೆ । ಗೋಪಗೆ । ಬಹುರೂಪನಿಗೆ ।
ಶೃಂಗಾರ ಸುಗುಣಾಂಬುಧಿಗೆ ಜಯಶುಭ ಮಂಗಳೆಂದು ೧

ದೀನೋದ್ಧಾರಿ ಧೇನುಕ ಮಾತುವೈರಿಗೆ । ಶೌರಿಗೆ ।
ವೇಣುನೂದುತ ಗೋವ್ಗಳ ಸಲುಹಿದಾತಗೆ ನಾಥಗೆ ।
ಶ್ರೀನಿಧಿ ಚಕ್ರಪಾಣಿಗೆ ರಂಗಗೆ ಯದುಪುಂಗವಗೆ
ಮಂದರ ಕರುಣಾತರಗೆ ೨

ಭಾಸುರ ಶಾಮಸುಂದರವಿಠಲ ಸ್ವಾಮಿಗೆ । ಪ್ರೇಮಿಗೆ ।
ವಾಸವಾತ್ಮಜಗೆ ಒಲಿದು ಧುರದೊಳು ಕಾಯ್ದಗೆ ಶ್ರೀದಗೆ ॥
ವಾಸುಕಿತಲ್ಪಶಾಯಿಗೆ । ಗೋಪಗೆ । ಬಹುರೂಪನಿಗೆ ।
ದಾಸರ ಒಡನಾಡುವಗೆ । ಜಯ ಶುಭ ಮಂಗಳೆಂದು ೩

ಶ್ರೀ ನರಸಿಂಹ ದೇವರು

೭೨

ರಕ್ಷಿಸೆನ್ನನು ನಿರುತ ನರಮೃಗನಾಥ ಪ

ರಕ್ಷಿಸೆನ್ನ ಜಗತ್ಕುಕ್ಷಿಯೆ ಕರುಣಾ ಕ
ಟಾಕ್ಷದಿಂದೀಕ್ಷಿಸಿ ತ್ರ್ಯಕ್ಷಾಂತರ್ಗತ ದೇವ ಅ.ಪ

ಪತಿತಪಾವನ ಪರಶತ ಮೋದಗತ ಭೇದ
ಚತುರ್ವೇದ ಗಾಯಿತ್ರಿ ಚತುರಾನನ ಸೂತ್ರ
ಪ್ರತಿಪಾದ್ಯನತಪಾಲ ಶತಕ್ರತು ಕೃತದ್ವಂಸಿ ॥
ಪ್ರಥಮಾಂಗನುತ ಮನ್ಮಥಪಿತ ಕ್ಷಿತಿನಾಥ
ಯತಿ ತತಿ ಮಾನಸವೃತ ತೇಜ ಭಾಸ್ಕರ
ಸತತ ನಿನ್ನಯ ಪಾದವ । ಸದ್ಭಕುತಿಯಲಿ
ಸ್ತುತಿಪ ದಾಸರ ಸಂಗವಗರೆದು ಭವ
ವ್ಯಥೆಯ ಬಿಡಿಸಿ । ಮಾಧವ ನೀನೊಲಿದತಿ
ಹಿತದಿಂದುಣಿಸು ನಿನ್ನ ಕಥೆ ಸುಧಾರಸವ ೧

ಅರಿದರ ಗದಾಪದ್ಮಧರ ಚತುಷ್ಟಯಕರ
ಶರಚರಗಿರಿ ಧೃತ ಧರಣಿ ತಸ್ಕರ ಹರ
ನರಗಾತ್ರ ಹರಿವಕ್ತ್ರ ಸುರಪಾನುಜ ವಟು
ಪರಶುಪಾಣಿಯೆ ವಾನರ ನರಪಾಲಕವಿರಹಿತಾಂ
ಬರ ಕಲ್ಕಿ ಶರಣ ಜನರು ಭಕ್ತಿಪರವಶದಲಿ ಕೂಗಿ
ಕರೆಯಲಾಕ್ಷಣ ಓ ಎಂದು ಭರದಿ ಬಂದು
ಪೊರೆವ ಪ್ರಭು ನೀ ಎಂದು ಬುಧರು ಪೇಳ್ವ
ವರವಾಕ್ಯ ಮನಕೆ ತಂದು ಪ್ರಾರ್ಥಿಪೆ ನಿನ್ನ
ಚರಿತೆ ಪಾಡುವ ಸುಖಗರಿಯೊ ಬಂಧು ೨

ಸಿಂಧುರ ವರದಾತ ಸಿಂಧು ಶಯನ ಶಾಮ
ಸುಂದರವಿಠಲ ಇಂದಿರಾತ್ಮಕ ತ್ರಯ

ಮಂದಿರ ಕಾರ್ಪರ ಮಂದಿರ ತರುರಾಜ
ಮಂದಿರ ದ್ವಿಜ ಮಧ್ಯ ಮಂದಿರಾತ್ಮಜ ಹೃ
ನ್ಮಂದಿರ ಸದ್ಭಕ್ತ ಮಂದಾರ ಭೂರುಹ

೭೩

ರಂಗನ ಪಾಡಿರ್ರೈ । ಮಾನವ ಸಿಂಗನ ಪಾಡಿರ್ರೈ ಪ

ಇಂಗಡಲಜೆಪತಿ । ಮಂಗಳ ಚರಿತ ಭು
ಜಂಗಶಾಯಿ ಶುಭಾಂಗ ಅ.ಪ

ವಸುಗರ್ಭಾದಿಗಳ ಮೊರೆಯನು ।
ಲಾಲಿಸಿ ದೇವ । ಮಹಾನುಭಾವ ।
ವಸುದೇವನ ಸತಿಯುದರದೊಳು
ಅವತರಿಸಿದನು ಅಸುರಾಂತಕ ।
ಹಸುಗಳ ಸಲುಹಿದ ಕುಸುಮನಯನ
ಪ್ರೇಮದಲಿ ಗೋಕುಲದಲ್ಲಿ ।
ಶಿಶುಪಾಲಾದಿಗಳಸುನೀಗಿದ ಯದುನಾಥ । ವಿಧಿ ಕುಲ ಜಾತ ೧

ತಂದೆ ತಾಯ್ಗಳ ಬಂಧನ ಬಿಡಿಸಿದ ಧೀರ । ಭಕ್ತಮಂದಾರ ।
ಒಂದೆ ಬೆರಳಲಿ ಗೋವರ್ಧನ ಶೈಲವನು । ತಾ ಧರಿಸಿದನು
ವೃಂದಾರಕ ಪತಿಗೊದಗಿದ
ಮದವನು ಮುರಿದ । ಮೋದವಗರೆವ
ಸಿಂಧುಶಯನ ತನಗ್ವೊಂದಿದ
ಶರಣರ ಕರವ । ಕರುಣದಿ ಪಿಡಿವ ೨

ನಾಮವೇದ್ಯ ಬಲರಾಮನನುಜ ಹರಿ । ಶ್ವೇತ ವಾಹನ ಸೂತ
ಕಾಮಜನಕ ಸತ್ಯಭಾಮೆ ರಮಣ ಗೋಪಾಲ । ಸ್ವಾಮಿ ಕುಲಾಲ

ಭೀಮಗೊಲಿದ ನಿಸ್ಸೀಮ ಮಹಿಮಾ ಶ್ರೀ ಗೌರಿ । ಮಾತುಳವೈರಿ
ಹೇಮಾಂಬರಧರ ಶಾಮಸುಂದರವಿಠಲ । ಧೃತವನಮಾಲ ೩

೭೪

ದಾಸರ ನೋಡಿರೈ ಮನದಭಿಲಾಷೆಯ ಬೇಡಿರೈ ।
ಭಾಸುರ ಕಾರ್ಪರಾಧೀಶನಾ ಸನ್ನಿಧಿ
ವಾಸ ಕೃತನತ ಪೋಷಾ ॥
ಹಿಂದೆ ಪ್ರಲ್ಹಾದನು ಮಾತೆಯ ಗರ್ಭದೊಳಿರಲು
ಅತಿ ಹರುಷದೊಳು
ಮುಂದೆ ಈತ ಹರಿಭಕ್ತಾಗ್ರೇಸರನೆಂದು
ಮನಸ್ಸಿಗೆ ತಂದು ।
ಛಂದದಿ ಹರಿಪರನೆಂಬೊ ತತ್ವ ಬೋಧಿಸಿದ
ಜ್ಞಾನವ ಗರೆದ ॥
ವೃಂದಾರಕ ಮುನಿಯೆಂದಿವರನು ಭಾವಿಸುತ
ಅಭಿವಂದಿಸುತ ೧

ಅಲವ ಬೋಧ ಸಚ್ಛಾಸ್ತ್ರ ಧರ್ಮವ ಮುದದಿ
ತಿಳಿಗನ್ನಡದಿ
ಸಲೆ ಸುಳಾದಿ ರೂಪದಿ ವಿರಚಿಸಿ ದಯದಿ
ಸಾರುತ ಜಗದಿ ।
ಬಲುವಿಧ ಭವದೊಳು ಬಳಲುವ ಸಜ್ಜನಕೊಲಿದ
ಕಲುಷವ ಕಳೆದ ।
ಇಳೆಯೊಳು ಇವರು ಪೇಳಿದ ವಚನವು ವೇದ
ದೊಳಗಿನ ಸ್ವಾದ ೨

ಈ ಮಹಾಕ್ಷೇತ್ರದ ಸ್ವಾಮಿ ನರಸಿಂಹ ಪಾದ
ಅರ್ಚಕರಾದ ।

ಭೀಮಾರ್ಯರ ಸದ್ಭಕ್ತಿಗೆ ನೆಲಸಿಹರಿಲ್ಲಿ
ಅನುದಿನದಲ್ಲಿ ॥
ನೇಮದಿ ತನ್ನನು ಸೇವಿಪ ಭಕುತರ ಕರವ
ಕರುಣದಿ ಪಿಡಿವ ॥
ಶಾಮಸುಂದರನ ನಾಮ ಸುಧಾರಸವೆರದ
ಜಗದೊಳು ಮೆರೆದ ೩

೭೫

ನಮೊ ನಮೊ ನರಮೃಗರಾಜ ಸದಾ
ನಮಿಪ ಸುಜನರಿಗೆ ಅಪಾರ ಮಹಿಮ ಪ

ಕಮಲ ಸಂಭವ ಸುಮನಸೇಂದ್ರ ಪ್ರಮುಖ
ನಮಿತ ಸುಮಹಿಮ ಗಜರಿಪು
ದಮನ ದ್ವಿಜವರ ಗಮನ ಗುಣ ನಿಧಿ
ಮಲೆಯಳ ಮುಖ ಕುಮುದ ಹಿಮಕರ ಅ.ಪ

ಜಾತರಹಿತ ಜಗದೀಶ ದನು
ಜಾತ ವ್ರಾತಾರಸ್ಯ ಜಾತವೇದನ
ಶೀತಾಂಶು ಭಾನು ಸಂಕಾಶ ಭೂನಾಥ
ಭೂತೇಶ ಹೃತ್ವಾದೋದಕ ವಾಸ
ಶಾತಕುಂಭ ಕಶ್ಯಪನ ಗರ್ವಜೀ
ಮೂತ ವೃಂದಕೆ ವಾತನೆನಿಸುತ
ಪೋತ ಪ್ರಹ್ಲಾದನಿಗೆ ಒಲಿದು ಸು
ಪ್ರೀತಿಯಲಿ ಪೊರೆದಾತ ದಾತನೆ ೧

ಮಾತುಳವೈರಿ ಗೋಪಾಲ ವೇಣು
ಗೀತ ಸಂಪ್ರೀತ ಶ್ರೀ ರುಕ್ಮಿಣಿ ಲೋಲ

ಧಾತಾಂಡೋದರ ವನಮಾಲಾಧೃತ
ಪೂತನ ಬಕ ಶಕಟಾರಿ ಹೃತ್ ಶೂರ
ಪಾತರೌದ್ರಿ ಶತಧಾರ ಶುಭಕರ
ಶ್ವೇತ ದ್ವೀಪಾನಂತ ಪೀಠ ಪು
ನೀತ ವರವೈಕುಂಠ ಘನ ಸು
ಕೇತನ ತ್ರಯವೀತ ಭವ ಭಯಹರ ೨

ಮಾರಜನಕ ಶುಭಕಾಯ ಕೃಷ್ಣಾ
ತೀರ ಸುಶೋಭಿತ ಕಾರ್ಪರ ನಿಲಯ
ದೂರ ನೋಡದೆ ಪಿಡಿ ಕೈಯ್ಯ ಶ್ರೀ ಸ
ಮೀರ ಸನ್ನುತ ಶಾಮಸುಂದರರೇಯ
ವಾರಿಚರ ಗಿರಿ ಭಾರಧರ ಭೂ–
ಚೋರ ಹರ ಗಂಭೀರ ವಟು ಕು
ಠಾರಕರ ರಘುವೀರ ನಂದ
ಕುಮಾರ ವಸನವಿದೂರ ಹಯಧ್ವಜ ೩

೭೬

ಕರ್ಪೂರದಾರುತಿ ತಾರೆ ಕೊಪ್ಪರದಪ್ಪನಿಗೆ
ಸರ್ಪಸುತಲ್ಪಗೆ ಮುಪ್ಪಾದ ದೇವನಿಗೆ ಅಪ್ರತಿಮ ಮಹಿಮಗೆ ಪ

ನೀರೆ ನಲುವಿಂದಲಿ ನೀ ಮುದದಿಂದಲಿ । ಸಖಿ ನಿಜಮನದಲಿ ಅ.ಪ

ಫಾಲಾಕ್ಷ ವಂದಿತ ಪಾದ
ಪಾಲಾಬ್ಧಿವಾಸಗೆ । ಪಾಂಚಾಲಿ ವರದರಂಗಗೆ ।
ಶಿಶುಪಾಲ ಖರ ಮುರ ಹಾರಿಗೆ ।
ಕಾಳಿಂಗನ ಫಣೆಯಲ್ಲಿ ತಥೈಎಂದು ಕುಣಿದವಗೆ ।
ಬಾಲೆಯರಾಲಯ ಪೊಕ್ಕು ಪಾಲು ಬೆಣ್ಣೆ ಕದ್ದವಗೆ ।

ಗೋಪಾಲಕೃಷ್ಣನಿಗೆ ನೀರೆ ನಲುವಿಂದಲಿ ।
ನೀ ಮುದದಿಂದಲಿ । ಸಖಿ ನಿಜಮನದಲಿ ೧

ದೇವಾಧಿದೇವನಾದ ಭಾವಜನಯ್ಯನಿಗೆ ।
ವಸುದೇವದೇವಕಿ ಕಂದಗೆ ಭೂದೇವೌಕ್ಷ ವಂದ್ಯಗೆ ।
ಪಾವನ್ನ ಮೂರುತಿಯಾದ ಶ್ರೀದೇವಿ ಅರಸಗೆ ।
ಗೋವಳರಿಂದ ಕೂಡಿ ಗೋ ಹಿಂಡು ಕಾಯ್ದವಗೆ ।
ದೇವಾರಿ ವೈರಿಗೆ ಶ್ರೀ ವಾಸುದೇವಗೆ ೨

ಮಂಗಳಾಂಗ ಗಂಗಾಜನಕ ।
ತುಂಗ ವಿಕ್ರಮದೇವಗೆ । ಜಯ
ಸಂಗೀತ ಪ್ರಿಯಲೋಲಗೆ । ಪತಂಗಜವೈರಿ ದೇವಗೆ
ಶೃಂಗಾರದಿ ಶಾಮಸುಂದರ ಗಾಂಗೆಯಂಬರಧಾರಿಗೆ ೩

ದಶಾವತಾರಗಳು

೭೭

ಕರುಣದಿ ಪಾಲಿಸೆನ್ನ ಶ್ರೀ ಹಯವದನ ಪ

ಕರುಣದಿ ಪಾಲಿಸೊ ಕರಿವರದನೆ ನಿನ್ನ
ಚರಣ ಕಮಲಗಳಿಗೆರಗಿ ಬೇಡಿಕೊಂಬೆ ಅ.ಪ

ಅಗಣಿತ ಮಹಿಮನೆ ನಗಪಾಣಿ ಶ್ರೀಶನೆ
ಖಗವರ ವಾಹನ ನಿಗಮ ಗೋಚರ ನರ
ಮೃಗರೂಪ ಮೂರ್ಜಗದೊಡೆಯನೆ ನಿನ್ನ
ಮೀಗೆ ಹರುಷದಿಂದ ಪೊಗಳುವ ಸುಖವಿತ್ತು
ಹಗಲಿರುಳೆನ್ನದೆ ಅಘ ಕಳೆದು ಕಾಯೊ

ಗಗನಾಳಕ ವಂದಿತ ತ್ವರಿತದಿ ಕರ
ಮುಗಿದು ಬೇಡುವೆ ಸಂತತ ಮರಿಯದೆ ಪೊರೆ ಪ
ನ್ನಗಶಾಯಿ ಶ್ರೀ ಭೂನಾಥ ನಿನ್ನಯ ಪಾದ
ಯುಗ ಸೇವೆ ನೀಡಯ್ಯ ನಗವೈರಿ ಮಗ ಸೂತ ೧

ಕ್ಷಿತಿಜೆರಮಣ ದ್ರೌಪದಿ ರಕ್ಷಕನೆ ನಿನ್ನ ಸುರ
ಯತಿ ತತಿ ಸನ್ನುತ ಪತಿತೋದ್ಧಾರಕ ಮನ್
ಮಥ ಪಿತ ಮುರಹರ ಶ್ರುತಿ ಪ್ರತಿಪಾದ್ಯನೆ ಸಂ
ತತ ನಿನ್ನಯ ಪಾದ ಶತಪತ್ರ ನಂಬಿದೆ
ಹಿತದಿ ಎನ್ನಯ ದುರ್ಮತಿ ಕಳೆದು ಕಾಯೊ
ಶತ ಮಖಾನುಜ ಗೋವಿಂದ ಬಾಗುವೆ ಶಿರ
ದಿತಿಜಾರಿ ನಿತ್ಯಾನಂದ ಮಾತುಳ ವೈರಿ
ವಿತತ ಮಹಿಮ ಮುಕುಂದ ನಿನ್ನನುದಿನ
ಸ್ತುತಿಪ ಭಾಗ್ಯವ ಕೊಡು ಕೃತಿಪತಿ ಭರದಿಂದ ೨

ಇಂದಿರಾಧವ ಶಾಮಸುಂದರವಿಠಲನೆ
ಮಂದರಗಿರಿ ಪೊತ್ತು ಮಂದಜಾಸನಪಿತ
ವಂದಿತ ಭಕ್ತಮಂದಾರ ಮಾಧವ ಸುರ
ವೃಂದ ವಿನುತ ದಯಾಸಿಂಧು ದಿನ ಬಂಧು
ಇಂದು ನಿನ್ನಯ ಪಾದ ಪೊಂದಿದೆ ಸಂತತ
ಕಂದನೆಂದರಿದೆನ್ನ ಕುಂದು ಎಣಿಸದೆ ದಯ
ದಿಂದ ಪಾಲಿಸು ಹೇ ದೇವ ನಂಬಿದೆ ದಶ
ಕಂಧರಾಂತಕ ರಾಘವ ಬೇಡುವೆ ದಶ
ಶ್ಯಂದನ ಸುತ ವರವ ಪಾಲಿಸಿ ಕಾಯೊ
ಕಂದರ್ಪ ಪಿತ ಕುಂತಿನಂದನರ ಭಾವಾ ೩

೭೮

ಆರುತಿಯ ತಾರೆ ಸಖಿ ।
ನೀರಜಾಕ್ಷಿ ವಾರುಣೀಶನಿಗೆ ಪ

ವಾರಿಚರಗಿರಿಧಾರ ಹರಿ ಗೋಚರ ಹರಿ ।
ನರಸಿಂಹಗೆ ಮೂರಡಿ ಧಾರುಣಿ ದಾನವ ಬೇಡಿದವಗೆ ೧

ದಾಶರಥಿದಾಸ ಹರಿಕೃಷ್ಣಗೆ ವಸನವರ್ಜಿತ
ಕಲ್ಕಿಗೆ ಶ್ರೀಶನಿಗೆ ಸರ್ವೇಶನಿಗೆ ವಾಸುಕಿಗಿರಿ ವಾಸನಿಗೆ ೨

ಸಾಮಗಾನ ವಿಲೋಲಗೆ ಶಾಮಸುಂದರವಿಠಲಗೆ ।
ರಾಮಗೆ ನಿಸ್ಸೀಮಗೆ । ಕಾಮಿತಾರ್ಥಪ್ರದಾತಗೆ ೩

೭೯

ಕಂಬು ಕಂಧರ ಸತತ ಬಿಡದೆ ರಕ್ಷಿ
ಸಂಬುಜೋದ್ಭವನ ತಾತ ಪ

ಜಂಭಾರಿ ವೈರಿಕುಲಾಂಬುಧಿ ಕುಂಭಜ
ಕುಂಭಿಣಿಸುರ ನಿಕರುಂಬ ಪೋಷಕ ದೇವ ಅ.ಪ

ನಳಿನಾಕ್ಷ ನರಕೇಸರಿ ನಂಬಿದೆ ನಿನ್ನ ।
ಹಲಧರಾನುಜ ಶೌರಿ ॥
ಇಳಿಜದಾಯಕ ಸಿರಿನಿಲಯ ನಿತ್ಯಾನಂದ
ಎಲರುಣಿ ವರಶಾಯಿ ಕಲುಷಸಂಹಾರಕ
ಜಲದರಿಪುವಿನ ತನಯಾನನುಜನ
ಕಲಹದೊಳು ಜೈನಿದನ ತಾತನ

ಕುಲವಿರೋಧಿಯ ಧ್ವಜನ ಜನಕಗೆ
ಒಲಿದು ಬೆಂಬಲನಾದ ಕೇಶವ ೧

ನಿಗಮ ರಕ್ಷಕ ಕೂರ್ಮಕೀಟ ಮಾನವ
ಮೃಗವಟು ಪರಶುರಾಮ
ಅಗಜೇಶ ಶರಕಾಲ । ನಗಪತಿ ವರದನೆ
ಅ(ಗ)ಗಜರಾಜನ ಮಗಳಿಗೋಸುಗ
ನಗುತ ಮಡದಿಯನಗಲಿ ಬಂದು
ಜಗದಿ ಪೊತ್ತನ ನಗದಿ ನೆಲಸಿದ
ತ್ರಿಗುಣ ವರ್ಜಿತ ಖಗ ವರೂಥನೆ ೨

ಮಂದರೋದ್ಧರ ವಿಶಾಲಮಹಿಮನಾದ
ಸಿಂಧೂರ ಪರಿಪಾಲ ।
ಕಂದರ್ಪಪಿತ ಶಾಮಸುಂರವಿಠಲನೆ
ವಂದಿಸುವೆನು ಎನ್ನ । ಬಂಧನ ಬಿಡಿಸಯ್ಯ
ಗಂಧವಾಹನವೀಂದ್ರ ಫಣಿ ಪತಿ
ಸಿಂಧುಜೋದ್ಭವೆ ಪತಿ ವಿರೋಧಿ । ಪು
ರಂದರಾರ್ಯರ ವೃಂದ ವಂದಿತ
ನಂದ ಸುತ ಗೋವಿಂದ ಗೋಪತಿ ೩

೮೦

ಮಂಗಳೆಂದು ಬೆಳಗಿರಾರುತಿ ರಂಗಗೇ ನೀಲಾಂಗಗೆ ಪ

ತುಂಗವಿಕ್ರಮ ನಿಗಮ ಭೂವರದಗೆ ನರಮೃಗನಿಗೆ ಅ.ಪ

ಬಾಲ ಭಾರ್ಗವ ರಾಮ ಮಾತುಳ ಕಾಲ ವೀತಚೈಲಗೆ ।
ಶೀಲ ಮೂರುತಿಯಾದ ಕಲ್ಕಿರೂಪಗೆ । ರಮೆಯರಸಗೆ ೧

ಧುರದಿ ರವಿಸುತ । ಉರುಗಗಳವನು ಭರದಿ
ಬಿಡೆ ಕಡು ಕರುಣದಿ ನರನ ರಥ ಧರೆಗೊತ್ತಿ
ಸಲಹಿದ ಶೌರಿಗೆ ಮುರವೈರಿಗೆ ೨

ವಟದ ವೃಕ್ಷದಿ ವಟುರೂಪಿಯಲಿ ಪವಳಿಸಿದ ಪರಮಾತ್ಮಗೆ ।
ತಟತಸನ್ನಿಭ ಶಾಮಸುಂದರವಿಠಲಗೆ
ವಿಪಗಮನಗೆ ೩

೮೧

ತಾರೆ ಮುಕ್ತಕದಾರತಿ ಹರಿಗೆ
ನೀರೆ ತಾರೆ ಕಮಲಮುಖಿ ಗಿರಿಧರಗೆ ಪ

ಮೀನ ಕಮಟಗೆ । ಕ್ರೋಢ ನರಮೃಗಗೆ
ಮಾಣವಕನಿಗೆ ವೀರಭಾರ್ಗವಗೆ
ಧರಣಿಜಾಪತಿ ಪಾರ್ಥಸಾರಥಿಗೆ
ಸ್ಥಾಣು ಬಾಣವ ತುರಗವಾಹನಗೆ ೧

ಮಂದರೋದ್ಧರ ಮಾತುಳಾಂತಕಗೆ
ಶಿಂಧು ಮಂದಿರ ಸಾರಸಾಂಬಕಗೆ
ವಂದಿಸುತ ಗೋವೃಂದ ಗೋಪಾಲಗೆ ೨

ಸಾಮಗಾನವಿಲೋಲ ರಂಗನಿಗೆ
ಶ್ರೀಮಹಿ ರಮಣ ವೆಂಕಟಗೆ
ಕಾಮಿತಾರ್ಥವ ಕೊಡುವ ಕೋಮಲಾಂಗಗೆ
ಶ್ರೀ ಶಾಮಸುಂದರವಿಠಲ ಮೂರುತಿಗೆ ೩

೮೨

ಹಯವದನ ಈ ಭವ ತಾರಿಸೊ
ಸುಜ್ಞಾನ ಪ್ರೇರಿಸೊ ಪ

ಮಾಯದ ಮೃಗದ ಬಾಯಿಗೀಡಾದೆ
ಕಾಯುವ ದಾತರ ಕಾಣೆ ಹರಿಯೆ
ನಾಯಿಯ ತೆರದಲಿ ಮಬ್ಬಿಲಿ ಮೆರೆದೆ
ದೋಷ ನೋಡದೆ ಕಾಯೋ ೧

ಬಂದೆನು ಭೂಸುರನಾಗುತ ಜಗದಿ ।
ಪೊಂದಿದೆ ತವ ಪದ ಹರಿಯೆ
ನಂದನಸುತ ನೀ ಬಂಧನ ಬಿಡಿಸೋ
ಕಂದನ ಮರೆಯುವರೇನೋ ೨

ಮನ್ನಿಸೋ ಶಾಮಸುಂದರವಿಠಲ
ಎನ್ನಯ ಭಾರ ನಿನಗೊಪ್ಪಿಸಿದೆ । ಹರಿಯೆ
ಇನ್ನು ತೋರಿಸ್ಯೆ ನಿನ್ನಯ ಚರಣ
ಕರುಣಾಭರಣ ದೇವ ೩

ಶ್ರೀ ರಾಮಚಂದ್ರ

೮೩

ರಘುರಾಮಾ ರಘುರಾಮಾ
ಮುಗಿವೆ ಕರವ ಎನ್ನಘ ಓಡಿಸಿ ಪೊರೆ ಪ

ಕ್ಷಿತಿ ಭಾರಕೆ ಖಳ ತತಿ ಸಂಹರಿಸಲು
ದ್ವಿತಿಯ ಯುಗದಿ ದಶರಥಸುತನೆನಿಸಿದ ೧

ಶಿಲೆಯಾದ ಅಹಲ್ಯೆಯ ತುಳಿದ ಪಾದದಿಂ
ಕಲುಷಿತ ಕಳೆದುಸಿರದೆ ಸಲುಹಿದ ಕರುಣಿ ೨

ಧನು ಮುರಿದು ಕ್ಷೋಣಿ ಕುಮಾರಿಯ
ಪಾಣಿ ಪಿಡಿದ ಮೂರುತಿಯೇ ೩

ಪ್ರೀತಿಯಿಂದ ರವಿಜಾತನ ಭ್ರಾತಗೆ
ಭೀತಿಯ ಬಿಡಿಸಿದ ವಾತಜ ನಮಿತ ೪

ದುರುಳ ದುಶ್ಯಾಸನನ ಧುರದಿ ತರಿದು ಘನ
ಸುರರಿಗೆ ಸೌಖ್ಯವಗರೆದ ಮಹಾತ್ಮ ೫

ನಿನ್ನ ದರುಶನದಿಲೆನ್ನ ಜನ್ಮ ಪಾವನ್ನವಾಯಿತ್ಮೈ
ಸನ್ನುತ ಮಹಿಮಾ ೬

ಶಿಂಧಶತಪುರ ಮಂದಿರ ಶಾಮ
ಸುಂದರವಿಠಲ ಬಂಧುರ ಚರಿತ ೭

೮೪

ಜಯಮಂಗಳಂ ಶುಭ ಮಂಗಳಂ
ಸುಮಂಗಳಂ ರಘುವರಗೆ
ದಯಾವಾರಿನಿಧಿ ಮುರಹರಗೆ
ನರಸಾರಥಿ ಗಿರಿಧರ ಮಾಧವಗೆ । ಶೌರಿ
ರವಿನಿಭಾಂಗ ಕೃಪಾನಿಧಿಗೆ । ದುರಿತಾನಲ
ಘಣಿ ವನಮಾಲೆಯ ಶುಭದಾಯಕಗೆ
ದಯವಾರಿಧಿ ಮುರಹರಗೆ ೧

ನಿಗಮಾಗಮ ಸನ್ನುತ ಶ್ರೀಧರಗೆ
ದೂರೀಕೃತದೋಷ ನಿರಾಮಯಗೆ
ನಗಜಪತಿ ಪಾಲಕ ದೇವಕಿ ಸುತಗೆ
ದಯವಾರಿಧಿ ಮುರಹರಗೆ ೨

ಅಮರಾದಿಪವಿನಮಿತ ಮೂರುತಿಗೆ
ಭಾಮೆ ನವಮೋದ ಪ್ರದಾಯಕಗೆ
ಸ್ವಾಮಿ ಶ್ರೀನಿಧಿ ಶಾಮಸುಂದರ ದೊರೆಗೆ
ದಯವಾರಿಧಿ ಮುರಹರಗೆ ೩

೮೫

ಮಂಗಳಗಾನ ವಿಲೋಲಾ । ಮುನಿಪಾಲಾ ಫಣಿಮಾಲಾ
ಮುನಿಪಾಲಾ ಫಣಿಮಾಲಾನಂತ ಶೀಲಾನಂತ ಶೀಲಾ ಪ

ಬಲಿಮದ ಭಂಜನಾ । ಕುಲಿಶ ಧರಾರ್ಚಿತ
ಯಲರುಣಿ ತಲ್ಪ ಸುಶಯನ । ಸುಶಯನಾ
ಶಶಿವದನಾ ವಿಪಗಮನಾ ೧

ಘನ ಗುಣನಿಧಿ ವನಜಾಸನ ಜನಕಾ
ದಿವಕೋಟಿ ಪ್ರಕಾಶ ಅಘನಾಶ
ಜಗದೀಶಾ ಜಗದೀಶಾ ಶ್ರೀನಿವಾಸಾ ೨

ಸಾಮಜ ಭಯಹರ ರಾಮ ಶ್ರೀರಾಮಾ
ಶಾಮಸುಂದರ ರಘುವೀರಾ ಭವದೂರ
ಮುರಹರಾ ಮುರಹರಾ ಸುಕುಮಾರ ೩

೮೬

ಬೆಳಗೆ ಬೇಗ ಭ್ರಮರವೇಣಿ
ನಳಿನನಾಭನಿಗಾರುತಿಯ ಪ

ಬಾಲಧ್ರುವ ಪಾಂಚಾಲಿಯರ
ಪಾಲಿಸಿದ ಶ್ರೀಲೋಲನಾದ
ವಾಲಿ ಮದವ ಭಂಜಗೆ ೧

ಇಂದು ಮುಖದ ಸುರೇಂದ್ರವರದ
ಕಂದುಗೊರಳ ಸಖ ನವನೀತ ಚೋರ
ನಂದಸುತ ಗೋವಿಂದಗೆ ೨

ತಟಿತ ನಿಭ ವೆಂಕಟ ಗಿರೀಶ
ಚಟುಲ ಮೂರ್ತಿ ಶಾಮಸುಂದರವಿಠಲಗೆ ೩

೮೭

ಜಯಮಂಗಳೆನ್ನಿರೆ ದೇವಗೆ । ಸಂಗೀತದಿಂದಲಿ ಶ್ರೀಶಯನಿಗೆ ಪ

ನಾಗಭೂಷಣ ಸುತ ನಾಗಶಯನಗೆ ।
ನಾಗವೇಣಿಯರು ನಾರದವರದಗೆ ೧

ಪೂವಿನ ಶರಪಿತ ಪಾವನ ಮೂರ್ತಿಗೆ ।
ರಾವಣಾರಿ ರಘುವೀರನಿಗೆ ೨

ಶ್ರೀಮಹೀವಲ್ಲಭ ಶಾಮಸುಂದರಗೆ ।
ಸೀಮಂತಿನಿಯರು ಕೋಮಲಾಂಗಗೆ ೩

ಶ್ರೀಕೃಷ್ಣ

೮೮

ಮಾರ ಮೋಹನಾಂಗಗೀಗ । ಮಾರಮೋಹನಾಂಗಗೀಗ ।
ಮಾಡಿರಾರುತಿ ಸಖಿ ಗೋಪಾಲಕೃಷ್ಣಗೆ ಪ

ದಿವ್ಯಚಾರು ಚಂದ್ರವದನಾ । ದಿವ್ಯ ಚಾರುಚಂದ್ರವದನಾ ।
ಆನಂದದಿಂದಲಿ ಸಖಿ ಗೋಪಾಲಕೃಷ್ಣಗೆ ೧

ಶಾಂತಿ ಶುಭವು ಕಾಣೆ ಮನದಿ ।
ಮೋದ ಬೀರುವವಗೆ ಸಖಿ ಮೋದದಿಂದಲಿ ೨

ಶಾಮಸುಂದರಾಂಗೀಗ । ಶಾಮಸುಂದರರಾಂಗಗೀಗ ।
ಮಾಡಿರಾರುತಿ ಸಖಿ ಗೋಪಾಲಕೃಷ್ಣಗೆ ೩

೮೯

ಎಂದು ಕಾಂಬೆನು ನಂದ ಗೋಪನ । ಕಂದ ಶ್ರೀ ಗೋವಿಂದನ
ಮಂದರಾಚಲಧರ ಶ್ರೀಯದುಕುಲ । ಚಂದ್ರಗುಣಸಾಂದ್ರ
ವಿಜಯಸೂತನ ವಿಶ್ವಪಾಲನ । ಭುಜಗವರ ಪರಿಯಂಕನ
ರಜನಿಚರರಳಿದ ಜನ ಜನಕನ । ಶ್ರೀ ಜಗಪತಿ ದ್ವಿಜವರಗಮನನ ೧

ಪಾಲು ದಧಿ ನವನೀತ ಚೋರನ ಬಾಲಕೃಷ್ಣ ಗೋಪಾಲನ
ಶೈಲ ಬೆರಳಿಲಿ ತಾಳಿ ಗೋಕುಲ ಪಾಲಿಸಿದ ಪರಮಾತ್ಮನ ೨

ಭಾಮೆ ರುಕ್ಮಿಣಿ ರಮಣ ರಂಗನ ಸಾಮಗಾನ ವಿಲೋಲನ
ಶ್ರೀಮದಾನಂದ ಮುನಿಕರಾರ್ಚಿತ ಶಾಮಸುಂದರವಿಠಲನ ೩

೯೦

ಮಂಗಳೆಂದು ಬೆಳಗಿರೆ
ಭುಜಂಗಶಯನಗೆ ಶೃಂಗಾರದಿಂದಲಿ ಪ

ಶ್ರೀಧರಗೆ ಭೂಧವಗೆ ಯಾದವ
ಗೋ ಕಾಯ್ದವಗೆ । ಮೋದದಿ ಮಧುಸೂದಗೆ ।
ಜಗದಾದಿ ಮೂರ್ತಿಗೆ । ಅಗಾಧಮಹಿಮಗೆ ೧

ಧೀರಗೆ ಯದುವೀರಗೆ । ದಧಿ ಚೋರಗೆ ।
ಭವದೂರನಿಗೆ । ಶೌರಿಗೆ ಮುರವೈರಿಗೆ ।
ಗಿರಿಧಾರಿ ರಂಗಗೆ । ಅಪಾರ ಮಹಿಮಗೆ ೨

ರಾಮಗೆ ತ್ರಿಧಾಮಗೆ । ಸಖಪ್ರೇಮಗೆ ।
ಗುಣಧಾಮನಿಗೆ । ಶಾಮಸುಂದರ ಸ್ವಾಮಿಗೆ ।
ಸುತ್ರಾಮನನುಜಗೆ ಸುಧಾಮಸಖನಿಗೆ ೩

೯೧

ಆರುತಿ ಬೆಳಗುವೆವು ಕೃಷ್ಣಗೆ
ರಾಧಾಕೃಷ್ಣಗೆ ಬೆಳಗುವೆವು ಪ

ಗೋಕುದಲಿ ಹುಟ್ಟಿ । ಗೋವುಗಳನು ।
ಕಾಯ್ದವಗೆ ಗೋಪಾಲಕೃಷ್ಣಗೆ ಬೆಳಗುವೆವು ೧

ನಂದಕುಮಾರನಿಗೆ ಇಂದೀವರಾಕ್ಷ ಬಾಲನಿಗೆ ।
ರಾಧಾಕೃಷ್ಣಗೆ ಬೆಳಗುವೆವು ೨

ಶಾಮಸುಂದರನಿಗೆ ಕಾಮಿತಶೀಲ
ಕೃಷ್ಣನಿಗೆ ರಾಧಾಕೃಷ್ಣಗೆ ೩

೯೨

ಬೆಳಗಿರೆ ಗೋಪಾಲ ಬಾಲಗೆ ।
ಬೆಳಗಿರೆ ಗೋಪಾಲಕೃಷ್ಣಗೆ ಆರುತಿ ।
ಬೆಳಗಿರೆ ಗೋಪಿಯ ಕಂದಗೆ ಪ

ಗೋಪಿ ಮನೋಹರಗೆ
ಗೋಪಾಲಕನಿಗೆ ಆಕಳಕಾಯ್ವನಿಗೆ ೧

ನಂದಕುವರಗೆ ಶಿಂಧುಶಯನಗೆ
ಇಂದೀವರಾನನಗೆ ೨

ಶಾಮಸುಂದರಗೆ । ದಾಮೋದರಗೆ ।
ಪ್ರೇಮದಿಂದಲಿ ಕಮಲಾಕ್ಷಗೆ ಬೇಗ ೩

೯೩

ಬೆಳಗಿರೆ ಹರುಷದಿ ಆರುತಿ ಬೇಗ ।
ಸತಿ ಮುದದಿ ಶಿರಿ ನಿಲಯನಿಗೀಗ ಪ

ನಿರಂಜನ । ನಿರಾಮಯ । ನೀರೇರುಹದಳ ಲೋಚನ
ನರಪ್ರಿಯ । ಸುಮಹಿತ ಸುಚರಿತ ಮರುತ ವಿನುತಗೆ ೧

ದೀನಾಪ್ತಗೆ । ಶ್ರೀನಾಥಗೆ । ಆನಂದಾತಿಶಯದಲಿ ಸಭೆಯೊಳು
ಮಾನಿನಿಯಳ ಅಭಿಮಾನ ಕಾಯ್ದವಗೆ ೨

ಹೇಮಾಂಬರ । ಶ್ರೀಮಾವರ । ಪ್ರೇಮಾದರದಿ । ಸು
ಧಾಮನ ಸಲಹಿದ ಶಾಮಸುಂದರ
ಶುಭಮೂರುತಿಗೀಗ ಆರುತಿ ಬೇಗ ೩

೯೪

ಅರಿತವರನ ಕಾಣೆ ನಿನ್ನ । ಕಾಣೆ ನಿನ್ನ ದೇವ
ಅರವಿದೂರನೆ ತವ ಮಹಿಮೆಯು ಘನ್ನ ಪ

ಬಂಡಿಕಾಲನು ಪಿಡಿದೆಯಂತೆ । ಹತ್ತು
ಬಂಡಿರಾಯಗೆ ಸುತ ನೀನಾದಿಯಂತೆ
ಬಂಡಿ ಅಸುರನ ಕೊಂದಿಯಂತೆ । ಧುರದಿ
ಬಂಡಿ ನಡಸಿ ನರನ ಸಲಹಿದೆಯಣತೆ ೧

ತಂದೆ ತಂದೆಗೆ ತಂದೆಯಂತೆ । ಜಗದ
ತಂದೆ ನಿನಗೆ ತಂದೆ ತಾಯಿಗಳಂತೆ
ತಂದೆ ವಿಪ್ರಜರ ನೀನಂತೆ । ಸ್ವಾಮಿ
ತಂದೆ ನೃಪಾಲನ ಸುತೆಗೀಶನಂತೆ ೨

ಸಿಂಧೂರದ್ವಯ ವರದನಂತೆ । ಮಧ್ಯ
ಸಿಂಧೂರ ವದನವು ನಿನಗಿಹುದಂತೆ
ಸಿಂಧು ಮಂದಿರ ನಿನಗಂತೆ ಶಾಮ
ಸುಂದರ ನಿನಗೆ ಭಕ್ತರ ಚಿಂತೆಯಂತೆ ೩

೯೫

ಪೊಂದಿದ ಭಕುತರ ತ್ವರದಿ ಪೊರೆಯುವವನಿಗೆ ।
ನಂದಕಂದ ವಂದಿಸಿ ಕರುಣದಿ ॥
ಇಂದು ಮುಖಿಯರು ಶಿಂಧುಶಯನಾಗೆ ।
ಮಂದಿರದೊಳಗೆ ಆನಂದದಿಂದ ಶ್ರೀ ॥
ಶಾಮಸುಂದರಗೆ । ಘನ ಮೋದದಿಂದ ।
ಜಯ ಮಂಗಳವೆಂದು ಪಾಡಿರೆ ॥

೯೬

ಅಂಗನೇರು ಕೂಡಿ ಸ್ವರ ಸಂಗೀತದಿಂದಲೀಗ
ಗಂಗಜನಕ ಚಾರು ಚರಣಕೆ ಹರುಷದಿಂ ಬೇಗ
ಮಂಗಳಾತ್ಮಕನಾದ ಶ್ರೀ ನರಶಿಂಗ ರಾಯನಿಗೆ
ಶೃಂಗಾರದಿಂ ಜಯಮಂಗಳವೆಂದು ಪಾಡಿರೆ ೧

ದೀನ ಜನರುದ್ಧಾರಗೈಯುವ ದಾನವಾಂತಕಗೆ
ನೀನೆ ಗತಿಯೆಂದ ಮಾನಿನಿಯಳ ಮಾನ ಕಾಯ್ದವಗೆ
ಸಾನುರಾಗದಿ ಧ್ಯಾನಿಸುತಲಿ ಶ್ರೀನಿವಾಸನಿಗೆ
ಬಲು ಛಂದದಿ ಜಯ ಮಂಗಳವೆಂದು ಪಾಡಿರೆ ೨

ಪೊಂದಿದ ಜನರನು ತ್ವರದಿ ಪೊರೆಯುವ
ನಂದಕಂದನಿಗೆ । ವಂದಿಸಿ ಕರುಣದಿ
ಇಂದು ಮುಖಿಯರು ಸಿಂಧು ಶಯನಗೆ । ಆನಂದದಿಂದಲಿ
ಶ್ರೀ ಶಾಮಸುಂದರಗೆ ಘನ ಮೋದದಿಂ
ಜಯ ಮಂಗಳವೆಂದು ಪಾಡಿರೆ ೩

೯೭

ಆರುತಿ ಮಾಡೆವೆವು ನಾವು
ಆನಂದನಿಲಯಗೆ ಆನಂದದಿಂದಲಿ ಪ

ಗೋಕುಲದಲಿ ಪುಟ್ಟಿ ।
ಗೋವುಗಳನೆ ಕಾಯ್ದ ಗೋಪಾಲಕೃಷ್ಣನಿಗೆ ೧

ನಂದಕುವರಗೆ । ಸಿಂಧುಶಯನಗೆ ।
ಇಂದೀವರಾಕ್ಷನಿಗೆ ನಾವು ೨

ಶಾಮಸುಂದರಗೆ ದಾಮೋದರನಿಗೆ ।
ಪ್ರೇಮದಿಂದಲಿ ಶ್ರೀ ಕಮಲಾಕ್ಷಗೆ ೩

೯೮

ಏಕೆ ನೀ ಮರುಳಾದೆ ನಾಕೇಶ ವಿನುತೆ । ರ
ತ್ನಾಕರನ ತಾಯೆ ಪ

ಗೋಕುಲದೊಳಿದ್ದು । ಆಕಳ ಕಾಯ್ದಗೆ
ಲೋಕಪಾವನೆ ಸಿರಿಯೆ ಅ.ಪ

ನೀರೊಳಗೆ ಇದ್ದು ನಗಭಾರ ಬೆನ್ನಲಿಪೊತ್ತು
ಬೇರು ಮೆಲ್ಲುವನಿಗೆ ।
ಚೀರಿ ಕಂಭದಿ ಬಂದು । ಘೋರ ರೂಪದಿ ಬಲಿ
ದ್ವಾರ ಕಾಯ್ದವಗೆ ।
ವೀರನೆನಿಸಿ ಪೆತ್ತ । ನಾರಿಯ ಶಿರವ ಸಂ
ಹಾರಮಾಡಿದವಗೆ ।
ಭೂರುಹಚರ ಪರಿವಾರದೊಳಗಿದ್ದು ದಧಿ
ಚೋರನೆನಿಸಿದವಗೆ ೧

ಸಂದೇಹವಿಲ್ಲದೆ ವಸನ ತ್ಯಜಿಸುತ
ಬಂದು ನಿಂದವನಿಗೆ ।
ಇಂದಿರಾಧವ ನಿನ್ನ ಹಿಂದೆ ಬಂದವನ
ಅಂದು ಕೊಂಡವನಿಗೆ ।
ಕುಂದರದನೆ ನಿನ್ನ ಪೊಂದದೆ ಛಂದದಿ
ಕಂದರ ಪಡೆದವಗೆ ೨

ಜಾತಿಯನರಿಯದೆ ಶಬರಿಯ ಎಂಜಲ
ಪ್ರೀತಿಲಿ ಉಂಡವಗೆ
ಶ್ವೇತವಾಹನಜಗೆ ತಾ ಸೂತನೆಂದೆನಿಸುತ
ಖ್ಯಾತಿ ಪಡೆದವಗೆ

ನೀತಿ ಇಲ್ಲದೆಯೆ ಮಾತೆಯ ಅನುಜನ
ಘಾತಿಸಿದಾತನಿಗೆ ॥
ವಾತಾಶನವರ ತಲ್ಪದೊಳು ಮಲಗಿದ
ಶಾಮಸುಂದರ ದೊರೆಗೆ ೩

೯೯

ನಂಬಿದೆ ತವ ಚರಣ ಸಲಹೋ । ಅಂಬುಧಿಸುತೆ ರಮಣ
ಅಂಬುಜ ಸಂಭವ ಶಂಭು ವಿನುತ ಮನ ।
ದ್ಹಂಬಲವನು ಸಲಿಸೆಂದು ನಿರುತ ನೆರೆ ಪ

ತಾವರೆದಳ ನಯನಾ ಭವ ಹರಣ
ತವಕದಿ ಸುಜ್ಞಾನವಗರೆಯೋ ೧

ತಂದೆ ನಾ ಜನಿಸುತ ಭೂಸುರ ಜನ್ಮದಿ
ಹಿಂದಿನ ಸುಕೃತದಲಿ ಬಂದೆನೊ ಭುವಿಯೊಳ್
ಮಂದರ ಸಂಗದಿ ಕೊಂದಿದೆ ನಿನ್ನನು
ನೊಂದೆನೋ ಕರುಣಿಸು ೨

ಹೇಸಿ ಸಂಸಾರದ ಪಾಶವ ಬಿಡಿಸುತ
ಶ್ರೀ ಶಾಮಸುಂದರವಿಠಲನೆ
ದೋಷವ ನೋಡದೆ । ಪೋಷಿಸು ಮರೆಯದಲೆ
ವಾಸುಕಿಶಯನನೆ ೩

೧೦೦

ಇಂದು ನಿನ್ನ ಪಾದಕಮಲವಾ । ಪೊಂದಿದೆ ದೇವಾ ಪ

ನಂದಸುತ ಪುರಂದರಾನುಜ । ಸಿಂಧೂರ ವರಪೋಷಕ ಸುರ
ವೃಂದ ವಿನುತ ಇಂದಿರೇಶಾ ಅ.ಪ

ಪಿತನೆ ನಿನ್ನ ಒಮ್ಮೆ ನೆನೆಯದೆ । ಮತಿಹೀನನಾಗಿ
ಸ್ಮೃತಿ ಪುರಾಣ ಕಥೆಯ ಕೇಳದೆ ।
ವಿತತ ಮಹಿಮ ಪತಿತ ನಾನಾದೆ
ಅತಿವೇಗದಿ ಎನ್ನನು ನೀ ಹಿತದಿ ಪಾಲಿಸು ಕ್ಷಿತಿಜೇಶನೆ ೧

ವಿಧಿ ಸುರೇಂದ್ರವಂದ್ಯ ನಗಧರ ಬಿಡದೆ ಸಲಹೊ
ಮದನಪಿತ ನೀನಧಮ ದೈತ್ಯರ
ಮದವಳಿದು ಮುದದಿ ಒದಗಿದ
ಸುಧೆಯನು ಸುರರಿಗೆ ನೀ ದಯದಿಕ್ಕಿದ ಪದುಮನಯನಾ ೨

ಸಿಂಧುಶಯನ ಶಾಮಸುಂದರ ವಂದಿಸುವೆ
ಕಂದುಗೊರಳ ಸಖ ಶ್ರೀ ಮನೋಹರ
ಕಂದನೆಂದೀ ಮಂದಭಾಗ್ಯನ ತಂದೆಯೆ ಮರೆಯದೆ ನೀ
ಚಂದದೀ ಪೊರೆ ದಶಕಂಧರಾರಿ ೩

೧೦೧

ದೀನಮಂದಾರ ಶ್ರೀಧರಾ । ದಾನವಕುಲ ಹರಣಾ ಪ

ಕೃಪಾಳೋ ಮುನಿಜನ ಮನೋನಿಲಯ ಅ.ಪ
ವಿಮಲಾ ಸುಮಹಿಮ ಜಗದೊಡೆಯ ।
ಮಾನವ ದ್ವಿರದಾರಿಪುದೇವ ೧

ಧರಣೇಶ ರಾಘವ ।
ಗಿರಿಧರ ತ್ರಿಗುಣಭವದೂರ ೨

ಮಾವರ ರಾಧಾಮನೋಹರ
ಪ್ರೇಮಾಕರ ಮುರಲಿ ವಿನೋದ । ವಿಹಂಗಧ್ವಜ
ಶಾಮಸುಂದರ ಕುಜನ ಸಂಹಾರಾ ೩

೧೦೨

ತಂದು ಬೆಳಗಿರೆ ಚಂದದಿ ಕುಂದಣಾದಾರುತಿ ।
ನಂದಕುಮಾರ ಗೋವಿಂದಗೆ ಪ

ಪಂಚಾಶ್ಯನಮಿತಗೆ । ಪಾಂಚಾಲಿ ವರದಗೆ
ಪಂಚಬಾಣನಪಿತ ಶೌರಿಗೆ ೧

ಕುಂಡಲಿ ಶಯನಗೆ ಪುಂಡರೀಕಾಕ್ಷಗೆ ।
ತೋಂಡವತ್ಸಲ ಪಾಂಡುರಂಗಗೆ ತಂದು ಬೆಳಗಿರೆ ೨

ಯಾಮಿನಿಚರವೈರಿ ಶಾಮಸುಂದರನಿಗೆ ।
ಕಾಮಿನಿಯರು ರಘುರಾಮಗೆ ತಂದು ಬೆಳಗಿರೆ ೩

೧೦೩

ಕರುಣಾಕರ ದೇವಾಧಿ ದೇವಾ ತವ ಪಾದವ ಪ

ನೆರೆನಂಬಿದೆ ಜವನಂಜಿಕೆ ಜವದಿ ಓಡಿಸೋ ೧

ಮುರಭಂಜನಾ ನರಸಾರಥಿಯೇ
ಶಿರಬಾಗಿ ನಾ ಪ್ರಾರ್ಥಿಸುವೆ ೨

ಶ್ರೀಶಾಮಸುಂದರವಿಠಲಾ ಅಸುರಾಂತಕ
ಪಶುಪಾಲಕ ೩

೧೦೪

ಕಾಯೊ ಕಾಯೊ । ಕಾಯೊ ಕಾಯೋ ಕಂಸಾರಿ ನಿನ್ನ ಪದ
ತೋಯಜಕೆರಗುವೆ । ಕಾಯಜ ಜನಕ ಪ

ಪಾಥಜ ಭವ ವಿಧಾತ ಸುಮನಸ
ಪ್ರಾತವಿನುತ ಮಾನಾಥನೆ ನಿರುತ ೧

ಭದ್ರಮೂರುತಿ ಬಲಭದ್ರಾನುಜ ಮಂದ
ರಾದ್ರಿಪಾಣಿ ಸಮುದ್ರ ಶಯನ ೨

ಖೇಟವರೂಥ ಕಿರೀಟಿಸೂತ ಶತ ।
ಕೋಟಿದಿನಪ ನಿಭ ಘೋಟಕವದನ ೩

ಕಂತು ಜನಕ ಮಾವಾಂತಕ ಮಾನವ
ದಂತಿವೈರಿ ಜಗದಂತರಿಯಾಮಿ ೪

ಸಾಮಗಾನಪ್ರೀಯ ಶಾಮಸುಂದರ
ವ್ಯೊಮ ನೃಪನ ಜಾಮಾತನೆ ಜವದಿ ೫

೧೦೫

ಇಂದಿರೇಶ ಬಂದು ಕಾಯೋ ಸಿಂಧುಶಾಯಿ ವಾಸುದೇವ
ನೊಂದೆನಯ್ಯ ತಾಪತ್ರಯದಿ । ಪಾಲಿಸಯ್ಯ
ಹರಿಯೇ ಪಾಲಿಸಯ್ಯ ಪ

ಧ್ಯಾನ ವರಿಯೆ ಜ್ಞಾನವರಿಯೆ । ಮೌನವರಿಯೆ ನಾ
ದೀನ ಬಂಧು ನೀನೆ ಎಂದು ।
ನಾ ನಂಬಿದೆ ಹರಿಯೆ ನಾ ನಂಬಿದೆ ೧

ಸಾರವೆಂಬೊ ಸಂಸಾರ । ಶರಧಿಯಲ್ಲಿ ಮುಳುಗಿರುವೆ
ಪಾರುಗಾಣದೆ ಬಾಯಿ ಬಿಡುವೆ
ನಾರಾಯಣ ಶ್ರೀಮನ್ನಾರಾಯಣ ೨

ಆಸೆಯೆಂಬ ಪಾಶಕಡಿಯೊ । ದಾಸನೆಂದು ನೀ ಎನ್ನ ।
ದೋಷದೂರ ಶಾಮಸುಂದರ ।
ಘೋಷಿಸಯ್ಯ ಹರಿಯೆ ಪೋಷಿಸಯ್ಯ ೩

೧೦೬

ಆರುತಿಯ ತಾರೆ ಹರಿಗೆ ।
ರಾಧಾಕೃಷ್ಣಗೆ ಶ್ರೀಹರಿಗೆ ಪ

ಬೆಟ್ಟವ ಎತ್ತಿದವಗೆ ಪುಟ್ಟ ಸೀತೆಯ
ತಂದ ಹರಿಗೆ । ಶ್ರೇಷ್ಠ ರಾಮನಿಗೆ ಶ್ರೀಹರಿಗೆ ೧

ಅಮಿತ ಕರುಣಾಶಾಲಿಗೆ ವಿಮಲ
ಸುಜನ ಪಾಲನಿಗೆ ಕಮಲನಾಭನಿಗೆ ಶ್ರೀಹರಿಗೆ ೨

ಶಂಖಚಕ್ರಧಾರನಿಗೆ ಪಂಕಜಾಕ್ಷ
ಕೃಷ್ಣನಿಗೆ ಶಾಮಸುಂದರವಿಠಲನಿಗೆ ಶ್ರೀ ಹರಿಗೆ ೩

ಶ್ರೀರಂಗನಾಥ

೧೦೭

ಕಾಯೋ ಕಾವೇರಿರಂಗ । ಕಾರುಣ್ಯಪಾಂಗಾ ಪ

ಕಾಯೊ ಕಾಯೊ ಕಾವೇರಿ ನಿಲಯನೆ
ಕಾಯೊ ವಾಙ್ಮನ ಪೂರ್ವಕದಿ ತವ
ತೋಯಜಾಂಘ್ರಿಯ ನಂಬಿದೆನು ಭವ
ಮಾಯ ಗೆಲುವ ಉಪಾಯ ತೋರಿ ಅ.ಪ

ದೇವಾಧಿದೇವ ನೀನು । ಪ್ರಣತ ಜನರಿಗೆ
ದೇವತರು ಮಣಿಧೇನು । ಎಂದರಿತು ನಿಚ್ಚಲಿ
ಧಾವಿಸಿ ಬಂದೆ ನಾನು । ರಘುವಂಶ ಭಾನು
ಕಾವನಯ್ಯ ನೀನೊಲಿದು ಕರುಣದಿ
ಪಾವಮಾನಿಯ ಶಾಸ್ತ್ರವರಿತು
ಭಾವ ಭಕ್ತಿಲಿ ನಿನ್ನ ಪಾಡುವ
ಕೋವಿದರ ಸೇವಕನ ಮಾಡಿ ೧

ಪನ್ನಂಗಪತಿಶಯನ । ಶಿರಬಾಗಿ ಪ್ರಾರ್ಥಿಪೆ
ಪನ್ನಂಗರಿಪು ವಾಹನ । ಎನ್ನಪರಾಧವ
ಮನ್ನಿಸೊ ಹಯವದನ । ವೈಕುಂಠ ಸದನ
ನಿನ್ನನುಗ್ರಹ ಪೂರ್ಣಪಡೆದು ಜಗನ್ನಾಥದಾಸರ
ಸನ್ನಿಧಾನದಿಂ ಬಂದೆ ತಂದೆ ೨

ನೇಸರ ಕುಲಜಾತ । ವೇದೋಕ್ತ ಕ್ರಮದಿಂ
ಭೂಸುರ ಕರಪೂಜಿತ । ಕೌಶಿಕನ ಯಜ್ಞವ
ಪೋಷಕ ಪವನಪಿತ । ಪಾವನ್ನ ಚರಿತ
ವಾಸುದೇವಾನಂತ ಮಹಿಮೆ । ವಿಭೀಷಣಪ್ರಿಯ
ದೋಷ ಕಳೆಯುವ । ಭೇಷ ಪುಷ್ಕರಣೀಶ
ಕೇಶವ ದಾಶರಥಿ ಶ್ರೀ ಶಾಮಸುಂದರ ೩

೧೦೮

ಮಂಗಳೆಂದು ಪಾಡಿಕೆ ಶ್ರೀರಂಗನಿಗೀಗ
ಭೃಂಗಾಲಕಿಯರು ಕೂಡಿ ಶೃಂಗಾರದಿ ಬೇಗ ಪ

ದೇವಾಧಿದೇವ ಹರಿಗೆ ದೇವೌಘ ವಂದ್ಯಗೆ
ಗೋವರ್ಧನಾದ್ರಿಧರಗೆ ಗೋವೃಂದ ಪಾಲಗೆ

ಪಾವನಾಂಗ ಪಾವಿನ ಮೇಲೆ
ಪವಳಿಸಿದವಗೆ ಭೃಂಗಾಲಕಿಯರು ೧

ಮೀನಾಗ ಪಾಣಿ ಕಿಟಗೆ ಶ್ರೀನಾರಸಿಂಹಗೆ
ಕ್ಷೋಣಿಯ ತೊರೆದ ದಶಾನನಾರಿಗೆ
ಧೇನುಪಾಲ ಸ್ಥಾಣು ಬಾಣ ಘೋಟಕಧ್ವಜಗೆ ಭೃಂಗಾಲಕಿಯರು ೨

ಪ್ರೇಮಾಬ್ಧಿ ಪವನ ಪಿತಗೆ ಹೇಮಾಂಬಕಾರಿಗೆ ।
ಸಾಮಜೇಂದ್ರ ಪ್ರಿಯಗೆ ತ್ರಿಧಾಮ ದೇವಗೆ
ಶಾಮಸುಂದರವಿಠಲ ಸುಧಾಮ ಸಖಗೆ ಭೃಂಗಾಲಕಿಯರು ೩

೧೦೯

ಶ್ರೀ ರಂಗನಾಥನ ಸೇವೆಯ ಮಾಡಿರೈ ಸದಾ ಪ

ಅಡಿಗಳ ಭಜಿಪರ ಎಡರು ಕಳೆವುದಕೆ
ವಡವಾಟಲಿ ತಾ ಬಿಡದೆ ನೆಲೆಸಿಹನ ೧

ಶರಣುಪೊಕ್ಕವರ । ಕರುಣದಿಂದ ಲಘು ।
ಹರಣಗೈವ ರಥ । ಚರಣಧಾರಿ ಪದ ೨

ನಿಷ್ಠೆಯಿಂದಲಿ ಮನ ಮುಟ್ಟಿ ಭಜಿಸುವರ ।
ಕಷ್ಟ ಕಳೆದು ಸುಖಕೊಟ್ಟು ಪೊರೆವ ಹರಿ ೩

ಪ್ರಥಮ ಮಾಸದಲಿ । ಶಿತ ಸುಪಕ್ಷದಲಿ
ತಿಥಿ ದಶಮಿಯಲಿ । ರಥವೇರಿ ಬರುವಹರಿ ೪

ನೇಮದಿ ತನ್ನಯ । ನಾಮ ಧ್ಯಾನಿಪರ
ಕಾಮಿತಗರೆಯುವ । ಶಾಮಸುಂದರ ೫

೧೧೦

ಮಗಳೆಂದು ಬೆಳಗಿರೆ ಕುರಂಗಕೇತು ವದನೆಯರೆ ಪ

ಕುಂಡಲಿಶಯನ ಶ್ರೀಧವಗೆ । ಕೋದಂಡಪಾಣಿ ವಾವನಗೆ ।
ಪಾಂಡವ ಪಕ್ಷ ಪಿಡಿದವಗೆ । ಪಂಢರಿಪುರ ನಿವಾಸನಿಗೆ ೧

ಸುರೇಶ ಮದ ವಿಭಂಜನಗೆ । ಪುರಾರಿ ಹರನ ಪೊರೆದವಗೆ ।
ದರಾರಿ ಪದುಮಗದಾಧರಗೆ । ಧರಾಮರಾರ್ಚಿತಾಂಘ್ರಿಗೆ ೨

ಚಟುಲ ಶಾಮಸುಂದರಗೆ । ವಿಠಲವೀಶವಾಹನಗೆ ।
ಕುಟಿಲ ಚದುರೆಯರು ಬೇಗ । ಕುಠಾರಿಧರ ನರಮೃಗಗೆ ೩

೧೧೧

ಕಂಡೆ ನಾ ಕಣ್ಣಾರೆ ನಾ । ಕಂಡೆ ನಾ ಪ

ಕಂಡೆನು ಕರುಣಾಸಾಗರನ । ಕರ
ದಂಡ ನಾಮಕೊಲಿದವನ । ಆಹಾ
ಥಂಡ ಥಂಡದ ಲೀಲೆ ತೋಂಡರೊಡನಾಡುವ
ಫಂಢರಿಪುರವಾಸ । ಪಾಂಡುರಂಗನ ಮೂರ್ತಿ ೧

ತಟಿತಮತ್ಕೋಟಿ ಸನ್ನಿಭನ । ದೇವ ।
ತಟನಿಯ ಪದದಿ ಪೆತ್ತವನ । ಚಾರು
ಕಟಿಯಲ್ಲಿ ಕರವ ನಿಟ್ಟವನ । ನಿಜ
ಭಟ ಜನರಿಗೆ ಮುಕ್ತಿ ಪ್ರದನ ॥ಆಹಾ ॥
ಜಠರದಿ ಜಗವಿಟ್ಟು ವಟದೆಲೆಯೊಳು ಮಲಗಿ
ವಟುರೂಪದಲಿ ಪಾದಾಂಗುಟವನು ಮೆಲುವನ ೧

ಭುವನದೊಳು ಸಂಚರಿಸುವನ । ಕೂರ್ಮ
ಕುವರ ಮಾನವ ಪಂಚಮುಖನ । ಋಷಿ
ಕುಮಾರ ಕುವರರ ಕಡಿದವನ ಮಹಿ
ಕುವರಿಯ ಕರವ ಪಿಡಿದವನ । ಆಹಾ
ಕುವಲಯ ಸಖ ಕುಲೋದ್ಭವ ಭವಮಾರ್ಗಣ
ಬವರದಿ ಹಯವೇರಿ ಯವನರ ಬಡಿದನ ೨

ನಿಗಮಗಳಿಗೆ ಸಿಗದವನ । ನಾ
ಲ್ಮೊಗನ ನಾಭಿಲಿ ಪಡೆದವನ । ರವಿ
ಮಗನಿಗೆ ಮಗನಾದವನ ತನ್ನ
ಪೊಗಳುವಂಥರಘ ಕಳೆಯವವನ ಆಹಾ
ಜಗನ್ನಾಥದಾಸರಿಗೆ । ಸೊಗಸಾದ ಮೃಷ್ಟಾನ್ನ
ಬಗೆ ಬಗೆ ಉಣಿಸಿದ ಖಗಪತಿ ಗಮನನ ೩

ಸಾಸಿರನಯನನನುಜನ । ಮಹಿ
ದಾಸ ಕಪಿಲದತ್ತಾತ್ರೇಯನ ವೇದ
ವ್ಯಾಸ ವೃಷಭ ಹಯಮುಖನ ಭಾರ
ಶ್ರೀಶ ಮಾನಸಮಂದಿರ ॥ಆಹಾ ॥
ಶ್ರೀಶ ತಂದೆ ವೆಂಕಟೇಶ ವಿಠಲಂಘ್ರಿ
ದಾಸರ ಸತ್ಸಹವಾಸದಿಂದಲಿಯಿಂದು ೪

ತಂದೆ ತಾಯ್ಗಳ ಸುಕೃತವೊ । ನಮ್ಮ
ಒಂದೂರಾರ್ಯರ ಅನುಗ್ರಹವೋ । ಸ್ತಂಭ
ಮಂದಿರ ರಾಯರ ದಯವೊ । ದಾಸ
ವೃಂದ ಕೃತಾಶೇಷ ಫಲವೊ । ಆಹಾ
ಇಂದು ಭಾಗದಿ ಭಕ್ತಾವೃಂದಕೆ ದರುಶನಾ
ನಂದಗರೆವ ಶಾಮಸುಂದರವಿಠಲನ ೫

ಯತಿವೃಂದ

೧೧೨

ಜಯತೀರ್ಥ ಜಯತೀರ್ಥ ಪ

ದಯವಾರಿಧಿ ಭವ । ಭಯ ಹರ ಗುರುವರ ಅ.ಪ

ಕಾಗಿಣಿ ತಟ ಸ್ಥಿತ । ಮೇಘನಾಥಪುರ
ಆಗರವೆನಿಸಿದ ಯೋಗಿವರೇಣ್ಯ ೧

ತತ್ವಗಳರ್ಥವ । ಪುಸ್ತಕ ಭಾರವ
ಎತ್ತಿನ ರೂಪದಿ । ಪೊತ್ತ ಮಹಾತ್ಮ ೨

ಮರುತ ಸುಶಾಸ್ತ್ರಕೆ । ವಿರಚಿಸಿ ಟೀಕೆಯ
ಮುರಿದು ಕುಭಾಷ್ಯವ । ಮೆರೆದ ಮಹಂತ ೩

ನೆರೆ ನಂಬಿದೆ ಶ್ರೀ । ಹರಿ ನಾಮವ
ನಿರುತಗರಿದು ಪೊರಿ । ನರನವತಾರಿ ೪

ಭೀಮ ಭವಾಟವಿ । ಧೂಮ ಶ್ರೀ
ಶಾಮಸುಂದರ ಪ್ರೇಮದ ದಾಸ ೫

೧೧೩

ದಯದಿ ಸಲಹೋ । ಜಯರಾಯ ಪ

ಕಾಗಿಣಿ ನಿಲಯ । ಕವಿಜನಗೇಯ
ಯೋಗಿವರಿಯ ಕೃಪಾಸಾಗರ ಸತತ ೧

ಮರುತ ಸುಶಾಸ್ತ್ರಕೆ । ವಿರಚಿಸಿ ಟೀಕೆಯ
ಮುರಿದು ಕುಭಾಷ್ಯವ । ಮೆರೆದ ಮಹಾತ್ಮ ೨

ಭೀಮ ಭವಾಟಲಿ । ಧೂಮಧ್ವಜ ಸಂ
ತ್ರಾಮಜ ಸಖ ಸಿರಿ । ಶಾಮಸುಂದರಪ್ರಿಯ ೩

೧೧೪

ಶ್ರೀಪಾದರಾಜ ಗುರುವೆ । ನತಸುರ ತರುವೆ ಪ

ಶ್ರೀಪಾದರಾಜ ನಿನ್ನ ನಾ ಪೊಂದಿದೆನು ತ್ರಯ
ತಾಪಗಳೋಡಿಸಿ । ನೀ ಪಾಲಿಸು ಅನುದಿನ ಅ.ಪ

ಪಂಡಿತಾಗ್ರಣಿ ಕರ್ಣ । ಕುಂಡಲ ಮುಕುಟಾಭರಣ
ಮಂಡಿತವಾಗಿ ಮಾರ್ತಂಡನಂತೆ ಪೊಳೆವ ೧

ಪವನ ದೇವನೆ ಶಾಸ್ತ್ರ । ಸುವಿಚಾರ ಭರಿತ ವಾಕ್
ಪವಿಯಾಖ್ಯ ಗ್ರಂಥ ಕೃತ । ಕವಿಕುಲೋತ್ತಂಸ ಹಂಸ ೨

ಮೃಷ್ಟಾನ್ನ ನಾನಾ ವಿಧ ಷಷ್ಟಿ ಶಾಕಂಗಳ
ನಿಷ್ಠೀಲಿ ಸದಾ ರಂಗವಿಠಲಗರ್ಪಿಸಿದ ೩

ಇಳೆಯ ಸುರಗೆ ಹತ್ಯ । ಸತಿ ಕರುಣದಿ ಕಂಡು
ಜಲವ ಪ್ರೋಕ್ಷಿಸಿ ಕಳೆದು । ಸಲಹಿದ ಸನ್ಮಹಿಮ ೪

ತಂದೆ ಜರಿಯೆ ವನದಿ । ನಿಂತು ಭಜಿಸಿ ಶಾಮ
ಸುಂದರನೊಲಿಸಿ ಸ್ಥಿರಾನಂದ ಪದವಿ ಪಡೆದ ೫

೧೧೫

ಗುರು ವ್ಯಾಸರಾಯ ಪಾಲಿಸೊ । ಮೊರೆಹೊಕ್ಕೆ ನಿನ್ನ
ಶರಣನ್ನ ಮಾತು ಲಾಲಿಸೊ ಪ

ಕರುಣಾಕರ ಭವ ಕರಕರಿಗಾರದೆ ಕರವ ಪಿಡಿದು
ಪೊರೆ ಎಂದು ನಿನ್ನ ನಾ ಕರೆವೆ ಬಾಯ್ದೆರೆವೆ
ಆಲ್ಪರಿವೆ ನತಜನ ಸುರತರುವೆ ಅ.ಪ

ಮಧ್ವಮುನಿ ಸುಮತೋದ್ಧಾರಕ ಯತಿಕುಲ ತಿಲಕ
ಅದ್ವೈತಾರಣ್ಯ ಪಾವಕ । ವಿದ್ವತ್ ಜನತತಿ
ಸದ್ವಿನುತನೆ ಪಾದ ಪದ್ಮಕೆ ನಮಿಸುವೆ
ಶುದ್ಧ ಸುಜ್ಞಾನವ ನೀಡೊ ಅಘದೂಡೋ
ಕೃಪೆ ಮಾಡೋ । ಸುತನೆಂದು ನೋಡೋ ೧

ವಿರಚಿಸಿ ಗ್ರಂಥತ್ರಯವ । ಬೋಧಿಸಿ ಭೇದ
ಪೊರೆದಿ ದ್ವಿಜ ಪರಿವಾರವ ।
ನೆರೆನಂಬಿದ ಭೂಪಗೆ ಧಾವಿಸುತ
ಭರದಿ ಬರುವ ಕುಹಯೋಗ ಕಂಟಕವ ದಯದಿ
ನೀ ತರಿದಿ । ಸುಖಗರೆದಿ ಧಾರುಣಿಯೊಳು ಮೆರಿದಿ ೨

ವಂದಿಪೆ ಸುಸುಗತಿದಾಯಕ ಶ್ರೀವರ ಶಾಮ
ಸುಂದರ ಕೃಷ್ಣೋಪಾಸಕ
ತಂದೆ ಎಂದು ನಿನ್ನ ಪೊಂದಿ ಪ್ರಾರ್ಥಿಸುವೆ
ಬಂದು ಜವದಿ ಪುರಂದರದಾಸರ ಪ್ರಿಯಾ ೩

೧೧೬

ದಾಸಗುರೂ । ದಾಸಗುರೂ ।
ವಾಸವ ನಾಮಕ ಪ

ಭೂಸುರರಿಗೆ ಧನರಾಶಿ ಸಮರ್ಪಿಸಿ
ವ್ಯಾಸರಾಯರುಪದೇಶಗೊಂಡ ಹರಿ ಅ.ಪ

ಜಲಜಭವನ ಪಿತನಾಜ್ಞೆಯಲಿ
ಕಲಿಯುಗದಲಿ ಜನ್ಮ ತಾಳುತಲಿ
ಅಲವ ಬೋಧಾಮೃತ ನೆಲೆಯನು ಸುಲಭದಿ
ತಿಳಿಗನ್ನಡದಲ್ಲಿ ತಿಳಿಸಿ ಸಲುಹಿದ ೧

ಪವನದೇವನ ಒಲಿಸುತಲಿ । ಮಾ
ಧವನ ಸ್ತುತಿಸಿ ಸಲೆ ಕುಣಿಯುತಲಿ
ಕವನದಿ ಭಕುತಿಯ ನವವಿಧ ಮಾರ್ಗವ
ಅವನಿಗೆ ಬೀರಿದ ದಿವಜ ಮೌನಿವರ ೨

ಕಾಮಿತ ಫಲಗಳಗರಿಯುತಲಿ ಬಲು
ಪಾಮರ ಜನರನು ಸಲಹುತಲಿ
ಶ್ರೀ ಮನೋವಲ್ಲಭ ಶಾಮಸುಂದರ
ನಾಮಾಮೃತವನು ಪ್ರೇಮದಿಂದುಣಿಸಿದ ३

೧೧೭

ವಂದಿಪೆ ಚರಣಾರವಿಂದಕೆ ಸದ್ಗುರು ವಾದಿರಾಜ
ಮಂದ ಮತಿಯ ಬಿಡಿಸಿಂದಿರೇಶನ ತೋರೋ ಪ

ದುರುಳ ಬುದ್ಧಿಲಿಂದ ಮರೆದು ಬಿಟ್ಟೆ ನಿನ್ನ ವಾದಿರಾಜ
ಧರಣಿಮಂಡಲದೊಳು ಪಾಪಿಷ್ಟ ನಾನಾದೆ ವಾದಿರಾಜ
ಪರಮ ಪುರುಷ ಭಾವಿ ಮರುತ ನೀನೆಂದು ವಾದಿರಾಜ
ಹಿರಿಯರ ಮುಖದಿಂದ ನಿಶ್ಚೈಸಿದೆ ವಾದಿರಾಜ ೧

ಶಿರದೊಳು ಹೂರಣದ್ಧರಿವಾಣ ಧರಿಸುತ ವಾದಿರಾಜ
ವರ ಭಕ್ತಿಯಿಂದಲಿ ತುರಗಾಸ್ಯಗುಣಿಸಿದ ವಾದಿರಾಜ
ಗುರು ಜಗನ್ನಾಥ ದಾಸರ ಸ್ವಪ್ನದೊಳು ಬಂದು ವಾದಿರಾಜ
ಹರಿಕಥಾಮೃತಸಾರ ವಿರಚಿಸೆಂದರು ವಾದಿರಾಜ ೨

ಶ್ರೀಮಧ್ವಾರ್ಯಮತ ಸಾಮ್ರಾಜ್ಯ ಧ್ವಜವೆತ್ತಿ ವಾದಿರಾಜ
ಶಾಮಸುಂದರ ಕೃಷ್ಣ ನಾಮದ ಮಹಿಮೆಯ ವಾದಿರಾಜ
ಪಾಮರಂಗೆ ಪೇಳಿ ಪ್ರೇಮದಿ ಸಲುಹಿದ ವಾದಿರಾಜ ೩

ಶ್ರೀ ರಾಘವೇಂದ್ರರು

೧೧೮

ಇಂಥಾ ಗುರುಗಳ ಕಾಣೆನಾ । ಭೂತಳದೊಳು
ಇಂಥಾ ಯತಿಗಳ ಕಾಣೆನಾ ಪ

ಇಂಥ ಗುರುಗಳ ಕಾಣೆ । ಮಂತ್ರ ಮಂದಿರದಲ್ಲಿ
ನಿಂತು ಭಜಕರಿಗೆ । ಚಿಂತೆ ಕಳೆವ ಕರುಣಿ ಅ.ಪ

ದೇವಸ್ವಭಾವನೀತನು । ಸತತ ಪವನ
ದೇವನಾವೇಶಯುಕ್ತನು ॥
ಆವ ಸಂಶಯವ್ಯಾಕೆ । ದೇವಾಧಿದೇವ ನರಮೃಗ
ದೇವನೀತನ ಭಕ್ತಿಗೆ । ಧಾವಿಸಿ ಬಂದ ಸ್ತಂಭದಿ

ಭಾವ ಭಕ್ತಿಯಲಿ । ಸೇವಿಪರಿಗೆ ಭವ
ನೋವು ಕಳೆದು ಸುರ । ಗೋವಿನ ತೆರ ವರ
ವೀವನು ಕರುಣದಿ । ಕಾಮನು ಪರಮ
ಪಾವನ ಚರಿತನು । ಕೋವಿದರೊಡೆಯನು ೧

ವರಹಜ ತಟದಲ್ಲಿರುವ ಭಕ್ತರು ಕೂಗಿ
ಕರೆದಲ್ಲಿಗೋಡಿ ಬರುವ ।
ಮರುತ ಶಾಸ್ತ್ರದ ಮರ್ಮ ಭರಿತವಾದಂಥ ದಿವ್ಯ
ಪರಿಮಳ ಗ್ರಂಥವ ವಿರಚಿಸಿ ಬುಧರಿಗೆ
ಗರೆದನು ಕರುಣದಿ ಪೊರೆದನು ಪರಮತ
ಮುರಿದನು ಜಗದೋಳ್ ಮೆರೆದನು ಹೊಸ ಹೊಸ
ಪರಿ ಸುಮಹೋತ್ಸವ ಹರುಷದಿ ಪ್ರತಿದಿನ
ಗುರು ಸುಯಮೀಂದ್ರರ । ಕರದಿಂಗೊಂಬರು ೨

ಮಂದಹಾಸನ ಶ್ರೀ ಶಾಮಸುಂದರ
ರಂಘ್ರಿ ಸೇವಕ ।
ಕಂದರ್ಪ ಶರ ಕರಿವೃಂದ ಕೇಸರಿ ಎನಿಸಿ
ಗಂಧವಾಹನ ಮತ । ಸಿಂಧುವಿಗೆ ಶಶಿ
ಯಂದದಿ ರಾಜಿಸಿ ವೃಂದಾವನವನು
ಒಂದೆ ಮನದಲಿ ವಂದಿಸಿ ನಮಿಸುವ
ವಂದ್ಯಾಂಧಕರಿಗೆ । ಕಂದರಕ್ಷಿಗಳ
ಕುಂದದಿ ಕೊಡುವ । ಕರ್ಮಂದಿ ಕುಲಾಗ್ರಣಿ ೩

೧೧೯

ಸ್ಮರಿಸುವೆನು ಗುರುರಾಯ ವರಮಂತ್ರ ಪುರಾಧಿಪ
ಪೊರೆಯೊ ಎನ್ನನು ಜೀಯಾ ತವ ಮಹಿಮ ವರ್ಣಿಸ
ಲರಿಯ ಮುರಹರ ಪ್ರೀಯಾ ಅಧಮಾಧಮನ ಮಮ

ಪರಿಯ ನೀ ಬಲ್ಲೆಯ್ಯಾ ತೋರಯ್ಯಾ ದಯ ವರದ
ಚರಿತೆಯ ಅರುಹುವದಕೆ ಪರವಾಕ್ಯರಣಿಯನು ಪಾಲಿಸಿ ನಿರುತ
ಹರಿಗುರು ಚರಣದಲಿ ರತಿ ತ್ವರಿತ ಕರುಣಿಸು ರಾಘವೇಂದ್ರನೆ ಪ

ಹಿಂದೆ ಕೃತಯುಗದಲಿ ಪ್ರಹ್ಲಾದ ನಾಮದಿ
ತಂದೆ ಹಿರಣ್ಯಾಕ್ಷನಲಿ ಸರ್ವೋತ್ತಮನು ಹರಿ
ದ್ವಂದ್ವ ಕರ್ಮವನಲ್ಲಿ ಅರ್ಪಿಸಲು ಮಹದಾ
ನಂದ ಪೊಂದುವರಲ್ಲಿ ಎಂದು ಪೇಳುತಿರೆ
ಮಂದ ದೈತ್ಯವನಂದ ಮಾತಿಗೆ ಬಂಧನಾದಿಗ
ಳಿಂದ ಶಿಕ್ಷಿಸೆ ಬಂದ ದುರಿತವನಂದು ಕಳೆದಾ
ಕಂದನನು ಹರಿ ಪೊರೆಯೆ ದಿತಿಜನು
ಒಂದೂ ತಿಳಿಯದೆ ಮಂದಿರ ಗೋವಿಂದನೆಲ್ಲಿಹ
ನೆಂದು ಕೇಳುತ ಮಂದರೋದ್ಧಾರ ನಿಲ್ಲದಿಹ ಸ್ಥಳ
ವಂದೂ ಇಲ್ಲವೂ ಎಂದು ಸಾರಿದೆ
ತಂದು ತೋರಿಸು ಸ್ತಂಭದಲಿ ತವ
ಇಂದಿರಾಪತಿಯೆಂದು ಗರ್ಜಿಸೆ
ಕಂದನಾಡಿದ ಮಾತುಗಳನು ನಿಜ
ವೆಂದು ನರಹರಿ ಪೊರೆದೆ ೧

ಶ್ರೀಶನಾಜ್ಞೆಯ ವಹಿಸಿ ದ್ವಿತೀಯಾವತಾರದಿ
ವ್ಯಾಸರಾಯನು ಎನಿಸಿ ಬ್ರಹ್ಮಣ್ಯರಲಿ ಸ
ನ್ಯಾಸವನು ಸ್ವೀಕರಿಸಿ ಸರ್ವಜ್ಞ ಶಾಸ್ತ್ರಾಭ್ಯಾಸವನು ಪೂರೈಸಿ
ವ್ಯಾಸತ್ರಯ ರಚಿಸಿ ದೇಶದೇಶಗಳನ್ನು ಚರಿಸುತ
ಆ ಸಮಸ್ತ ಕುವಾದಿಗಳ ಮತ ನಾಶಗೊಳಿಸಿ ರ
ಮೇಶ ಶ್ರೀ ವೆಂಕಟೇಶನನು ಬಹುದಿನವು ಪೂಜಿಸಿ
ವಾಸಿಸುತ ಗಜರಾಮ ಪುರಧಾಧೀಶರಾಯನ ಕುಹಯೋಗವ
ನಾಶಗೊಳಿಸುತ ಕನಕ ಪುರಂದರ ದಾಸರಿಂದೊಡಗೂಡಿ

ಕೃಷ್ಣನುಪಾಸನೆಯ ಭಕ್ತಿಯಲಿ ಗೈಯುತ
ವಾಸುದೇವನ ಶಿಲ್ಪ ಶಾಸ್ತ್ರದ
ಶಾಸನಕೆ ಪ್ರತಿಯಾಗಿ ನಿಲ್ಲಿಸಿ
ತೋಷಿಸಿದ ಸೌಭಾಗ್ಯ ವೈಭವ ೨

ಮದನಜನಕನ ದೂತ ವಿಜಯೀಂದ್ರ ಯತಿಕರ
ಪದುವ ಸಂಭವ ಜಾತ ಶ್ರೀ ರಾಘವೇಂದ್ರ ಸು
ಪದವ ಪಡೆದ ಪ್ರಖ್ಯಾತ ಜಯತೀರ್ಥ ಮುನಿಕೃತ
ಸುಧೆಗೆ ಪರಿಮಳ ಗ್ರಂಥ ರಚಿಸಿ ಮೆರೆದಾತ
ಬಧಿರ ಮೂಕಾಂಧ ವ್ಯಂಗ್ಯರು ವಿಧ ವಿಧಿದ ಘನ ರೋಗಗ್ರಸ್ತರು
ಸದಯ ನೀ ಗತಿಯೆಂದು ಸೇವಿಸೆ
ತ್ರಿದಶ ಭೂರುಹದಂತೆ ಸಲಹುವಿ
ಕುಧರ ತೀರದಿ ಮೂಲ ರಘುಪತಿ
ಪದವ ಪೂಜಿಸುತಲಿ ಸಜೀವದಿ
ಮುದದಿ ವೃಂದಾವನ ಪ್ರವೇಶಿಸಿ
ಪದುಮನಾಭ ಶ್ರೀ ಶಾಮಸುಂದರ
ಮಧು ವಿರೋಧಿಯನು ಧ್ಯಾನಿಸುತ ಶಿರಿ
ಸದನನು ಒಲಿಸುತ್ತ ಕರುಣಾ
ನಿಧಿಯು ಭಜಕರ ಪೊರೆವ ಮಹಿಮೆಯ ೩

೧೨೦

ವರದಾ ತೀರದಿ ನೆಲಸಿಹ ಗುರುವರನ್ಯಾರೆ ಪೇಳಮ್ಮಯ್ಯ ಪ

ವರದಾಯ ಶ್ರೀ ರಾಘವೇಂದ್ರರ
ಕರುಣ ಪಡೆದ ಸುಶೀಲೇಂದ್ರ ಮುನಿಪನೆ ಅ.ಪ

ದರ ಪೋಲುವ ಕಂಧರದಿ ತುಲಸಿ ಮಣಿಹಾರ । ಪೇಳಮ್ಮಯ್ಯ
ಅರಶಶಿಸಮ ಸುವಿಶಾಲ ಫಾಲದಲಿ ತಿಲಕ ಪೇಳಮ್ಮಯ್ಯ

ಧರಿಸಿ ಧರಣಿಯೋಳ್ ಪರಿ ಪರಿ ವಿಭವದಿ
ಮೆರೆದ ಕರುಣವರ ಪುಣ್ಯ ಪುರುಷನ ೧

ತನು ಮನ ಧನ ವನಿತಾದಿ ವಿಷಯ ವಿರಹಿತನು ಪೇಳಮ್ಮಯ್ಯ ।
ತನುರಹಿತ ಮಾರ್ಗಣ ತೃಣ ಸಮವೆಣಿಸಿಹನು ಪೇಳಮ್ಮಯ್ಯ ।
ಅನಿಮಿಷಲೋಚನೆ ಅನುಮಾನಿಸದಿರು
ಅನಿಮಿಷಾಂಶರಿವರನನುದಿನ ಸೇವಿಸು ೨

ಯತಿ ಶಿರೋಮಣಿ ಧೀರೇಂದ್ರರ ಹಿತಕತಿ ಪಾತ್ರ ಪೇಳಮ್ಮಯ್ಯ
ಅತುಳ ಮಹಿಮೆ ಸುಕೃತೀಂದ್ರ ಹೃದಯಶತಪ್ರ ಪೇಳಮ್ಮಯ್ಯ
ಸತತ ರವಿ ಎನಿಸಿ ಶಾಮಸುಂದರನ
ಅತಿ ಭಕುತಿಲಿ ತುತಿಪ ಗುಣನಿಧಿ ೩

೧೨೧

ಸ್ಮರಿಸಿ ಸುಖಿಸೊ ನರನೆ – ಗುರುರಾಯರನನುದಿನ ಪ

ಸ್ಮರಿಸಿ ಸುಖಿಸೆಲೊ ನರನೆ ನಂಬಿದೆ
ಶರಣು ಜನರಘ ತರಿದು ಕರುಣದಿ
ಪೊರೆವ ಗುರು ಸಹ್ಲಾದ ರಾಜರ
ಚರಣ ಸರಸಿಜ ಹರುಷದಿಂದಲಿ ಅ.ಪ

ನಳಿನ ಬಾಂಧವ ಕುಲದಿ ಅವತಾರ ಮಾಡಿದೆ
ಇಳಿಜರಮಣನಾಜ್ಞದಿ ಕಲಿಯುಗದಿ ದ್ವಿಜರನು
ಸಲಹಲೋಸುಗ ಜಗದಿ ಜನಿಸಿ ಗುರುಗಳ ॥
ಒಲಿಮೆಯನು ತಾ ಪಡೆದು ಕೊರಳಲಿ
ತುಲಸಿಮಾಲೆಯ ಧರಿಸಿ ಹರಿಯನು
ಒಲಿಸಿ ಥಳ ಥಳ ಪೊಳೆವವ ಸ್ತಂಭದಿ
ಕುಳಿತ ಶ್ರೀರಂಗವಲಿದ ದಾಸರ ೧

ಮಾನಿನಿಯಳ ಮಾನರಕ್ಷಿಸಿದೆ ಶ್ರೀ ಪವ
ಮಾನನಯ್ಯನ ಕರುಣವನು ಪಡೆದು ಸ್ತುತಿಸಿದಿ
ದೀನರಿಗನುದಿನ ಮಾಣದಲೆ ಸುಜ್ಞಾನ
ವನು ಪಾಲಿಸಿ ಗುರು ಭವ
ಕಾನನಕೆ ಕೃಶಾನುವೆನಿಸಿದ
ಮಾನವಿ ಪುರ ನಿಲಯರನು
ಅನುಮಾನವಿಲ್ಲದೆ ಮಾನಸದಿನೀ ೨

ಶ್ರೀಮಧ್ವಾಚಾರ್ಯ ಸುಮತ ಶರಧಿಗೆ ಹಿಮ
ಧಾಮನೆನಿಸಿ ನಿರುತ ಸೇವಿಪರಿಗೆ
ಕಾಮಿತಾರ್ಥಗಳಿಗೆ ತ್ವರಿತ ನೀಡಿ ಶಿರಿವರ
ಶಾಮಸುಂದರ ಸ್ವಾಮಿ ಪರನೆಂಬೊ ।
ಪ್ರೇಮದಿಂದಲಿ ಹರಿಕಥಾಮೃತ
ಈ ಮಹಾ ಸುಗ್ರಂಥ ರಚಿಸಿದ
ಹೇಮ ಕಶ್ಯಪ ತನಯರನುಜರ ೩

೧೨೨

ಸಲಹೋ ಸಲಹೋ ಕರುಣಾಂಬುಧಿಯೇ
ಕೋಲಜಾತಾ ತೀರ ನಿವಾಸಾ ಪ

ವೃಂದಾವನದಿ ನಿಂದ ಮುನೀಂದ್ರ
ಮಂದಜನನೌಘಕೆ ಕಲ್ಪ ಸಂಭೂಷಣ ೧

ದೇವಸ್ವಭಾವ ಭೂದೇವವರೇಣ್ಯಾ
ಕೋವಿದ ವಂದಿತ ಪಾವನ ಕಾಯ ೨

ಶ್ರೀಮಹಿವಲ್ಲಭ ಶಾಮಸುಂದರ
ಪ್ರೇಮ ಪಡೆದ ನಿಷ್ಕಾಮಿ ಪ್ರಹ್ಲಾದನೆ ೩

೧೨೩

ಸತತ ಪಾಲಿಸೋ ಎನ್ನ । ಯತಿ ರಾಘವೇಂದ್ರ ।
ಪತಿತ ಪಾವನ ಪವನಸುತ ಮತಾಂಬುಧಿ ಚಂದ್ರ ಪ

ನಂಬಿದೆನು ನಿನ್ನ ಚರಣಾಂಬುಜವ ಮನ್ಮನದ
ಹಂಬಲವ ಪೂರೈಸೊ ಬೆಂಬಿಡದಲೆ ॥
ಕುಂಭಿಣೀಸುರ ನಿಕುರುಂಭ ವಂದಿತ ಜಿತ
ಶಂಬರಾಂತಕ ಶಾತಕುಂಭ ಕಶ್ಯಪ ತನಯ ೧

ಕ್ಷೋಣಿಯೊಳು ನೀ ಕುಂಭಕೋಣ ಕ್ಷೇತ್ರದಿ ಜನಿಸಿ
ವೀಣ ವೆಂಕಟ ಅಭಿದಾನದಿಂದ
ಸಾನುರಾಗದಿ ದ್ವಿಜನ ಪ್ರಾಣ ಉಳುಹಿದ ಮಹಿಮೆ ।
ಏನೆಂದು ಬಣ್ಣಿಸಲಿ ಜ್ಞಾನಿ ಕುಲತಿಲಕ ೨

ಮಂದಮತಿಗಳ ಸಂಗದಿಂದ ನಿನ್ನಯ ಚರಣ
ಇಂದಿನ ತನಕ ನಾ ಪೊಂದಲಿಲ್ಲ
ಕುಂದು ಎಣಿಸದೆ ಕಾಯೊ ಕಂದರ್ಪಪಿತ ಶಾಮ
ಸುಂದರನ ದಾಸಕರ್ಮಂದಿ ಕುಲವರ್ಯ ೩

೧೨೪

ಶ್ರೀ ರಾಘವೇಂದ್ರ ಗುರುರಾಜ ಶ್ರೀ ಗುರುರಾಜ ।
ಶ್ರೀ ಗುರುರಾಜ ಬಾರೈ । ಭಕ್ತರಾಮರ ಭೋಜ ಶ್ರೀ ಗುರುರಾಜ ಪ

ಮಂಗಳಮಹಿಮನೆ ಸಂಗೀತ ಪ್ರಿಯನೆ ।
ಅಂಗಜದೂರನೆ ಯತಿವರನೆ ೧

ಶೃಂಗಾರ ವೃಂದಾವನ ನಿಲಯ । ಡಿಂಗರ ಪಾಲ
ಕವಿಗೇಯ । ಶ್ರೀ ರಾಘವೇಂದ್ರ ಶ್ರೀ ಗುರುರಾಜ ೨

ಶ್ರೀ ಶಾಮಸುಂದರ ಪ್ರಿಯದಾಸ । ಕ್ಲೇಶನಾಶನ ।
ವ್ಯಾಸಾರ್ಯನತಪೋಷ । ದೈಶಿಕನಾಥ ।
ಭಾಸುರಚರಿತ । ವರಕಾಷಾಯ ಭೂಷಿತ ಮಾಂ ಪಾಹಿ ೩

೧೨೫

ಏನು ಧನ್ಯರೋ ಜಗದಿ ಎಂಥ ಮಾನ್ಯರೋ ।
ಕ್ಷೋಣಿ ವಿಬುಧ ಶ್ರೇಣಿ ನಮಿಪ
ಮೌನಿ ಶ್ರೀ ರಘುಪ್ರೇಮತೀರ್ಥರು ಪ

ಕಲಿಯುಗದಿ ಕ್ರತುಗೈದ ಇಳಿಯ ಜನಕಸಾಧ್ಯವೆಂದು
ತಿಳಿದು ನಾಕದಿಂದಿಳಿದು ಬಂದು
ಕುಲಿಶಪಾಣಿಯಂತೆ ತೋರ್ಪರು ೧

ಧೂರ್ತರಿಂದ ದೂರವಿದ್ದು । ಸ್ವಾರ್ಥರಹಿತರಾಗಿ । ಸಕಲ
ತೀರ್ಥಕ್ಷೇತ್ರ ಚರಿಸಿ ಜನ್ಮ ಸಾರ್ಥಕೆನಿಸಿದ ಯತಿಯು ೨

ಧನ ಧಾನ್ಯ ಭರಿತ ಸದನ ತೃಣಸಮಾನವೆನಿಸಿ ಮುದದಿ ।
ವಿನಯಶೀಲ ದ್ವಿಜರಿಗಿತ್ತು ಮುನಿಯೆನಿಸಿ ವಿರುಕ್ತರು ೩

ಚತುರಾಶ್ರಮ ವ್ರತದಿ ನೇಮ ಸತತಾ ಚರಿಸುತಲಿ ।
ಶಿಷ್ಯರಾದಿಗೆ ವ್ರತಬೋಧವೃಷ್ಟಿ ಹಿತದಿಗರೆದು
ಪೊರೆವ ಯತಿಯು ೪

ಶ್ರೀಮಧ್ವಸುಮತವಾರಿಧಿ ಸೋಮನೆಂದೆನಿಸಿ ।
ಜಿತ ಕಾಮರಾಗಿ ಕಠಿಣ ತಪದಿ । ಶ್ರೀ ।
ಶಾಮಸುಂದರನ ಒಲಿಸಿದವರು ೫

೧೨೬

ರಾಘವೇಂದ್ರ ಗುರುರಾಯ ಬಾಗಿ ನಮಿಸುವೆ ಬೇಗ
ಕೈಯ್ಯ ಪಿಡಿದು ಪಾಲಿಸಯ್ಯ । ಭಾಗವತ ಜನಪ್ರಿಯ ಪ

ಮಧ್ವಮತ ಪಾರಾವಾರ । ಶುದ್ಧಪೂರ್ಣ ಸುಧಾಕರ
ಅದ್ವೈತಾದ್ರಿ ಶತಧರ । ಉದ್ಧರಿಸೈ ಯೋಗೀಶ್ವರ ೧

ಭಾಸುರ ಶ್ರೀಮಂತ್ರಾಗಾರವಾಸ ಸುಕಾರಷಾಂಬರ
ಭೂಷ ಭೂಸುರ ಪರಿವಾರ ಪೋಷ ಪ್ರಹ್ಲಾದವತಾರ ೨

ತುಂಗಾಭದ್ರಾ ಸುತೀರದಿ ।ಶೃಂಗಾರ ಸದ್ವೃಂದಾವನದಿ
ಪಿಂಗಳ ಸನ್ನಿಭಾಂಗದಿ । ಕಂಗೊಳಿಸಿದ ದಯಾಂಬುಧಿ ೩

ಮರುಥಾವೇಶ ಯಮಿವರಿಯಾ । ದುರಿತಾಹಿ ವೈನತೇಯ ।
ಪರಮೋದಾರ ಪರಿಮಳಾರ್ಯ । ತರಳನೆಂದು ಕರುಣಿಸಯ್ಯ ೪

ಶಾಮಸುಂದರ ಭಕ್ತಾಗ್ರಣಿ । ಭೂಮಿಯೊಳು ನಿನಗಾರೆಣೆ ।
ಕಾಮಿತಾರ್ಥ ಚಿಂತಾಮಣಿ । ಸ್ವಾಮಿ ಶ್ರೀ ವ್ಯಾಸ ಸನ್ಮೌನಿ ೫

೧೨೭

ಯತಿರಾಜ ಯತಿರಾಜ
ಕ್ಷಿತಿದೇವ ತತಿನುತ ರಾಘವೇಂದ್ರ

ಆದಿಯುಗದಿ ಪ್ರಹ್ಲಾದ ಸುನಾಮದಿ
ಮೋಹದಿ ಭಜಿಸುತ ಮಾಧವನೊಲಿಸಿದ ೧

ಘನ ವಿರಾಗ್ರಣಿ ಜನಪತಿ ಬಾಹ್ಲೀಕ
ನೆನಿಸಿ ದ್ವಾಪರದಿ ಜನಿಸಿದ ಗುಣನಿಧಿ ೨

ವಾಸವನಾಯಕ ದಾಸಾರ್ಯರಿಗುಪ
ದೇಶಗೈದ ಗುರುವ್ಯಾಸ ಪೋಷಿಸೈ ೩

ಕ್ಷೋಣಿಯೊಳಗೆ ಕುಂಭಕೋಣ ಸುಕ್ಷೇತ್ರದಿ
ವೀಣೆ ವೆಂಕಟಾಭಿಧಾನದಿ ಜನಿಸಿದ ೪

ದೀನ ಜನಾಮರಧೇನು ಸುಧೀಂದ್ರರ
ಪಾಣಿಪದ್ಮಭವ ಮಾಣದೆ ಕಾಯೋ ೫

ತುಂಗಭದ್ರ ಸುತರಂಗಿಣಿ ತೀರದಿ
ಕಂಗೊಳಿಸುವ ಶತ ಪಿಂಗಳ ತೇಜ ೬

ಕಲುಷ ಕುಲಾದ್ರಿಗೆ ಕುಲಿಶನೆಂದೆನಿಸಿದ
ಅಲವ ಬೋಧಮತ ಜಲಧಿ ಶಶಾಂಕ ೭

ಬಾಲನ ಬಿನ್ನಪ ಲಾಲಿಸಿ ಪ್ರೇಮದಿ
ಪಾಲಿಪುದೈ ಮಂತ್ರಾಲಯ ನಿಲಯ ೮

ಪರಿಮಳ ಗ್ರಂಥವ ವಿರಚಿಸಿ ದುರ್ಮತ
ಮುರಿದು ಸಜ್ಜನರಿಗೊರೆದ ಮಹಾತ್ಮ ೯

ಪರಿ ಪರಿ ಭವದೊಳು ಪರಿತಪಿಸುವೆನ್ನೈ
ಪರಮ ಕರುಣದಲಿ ಪರಿಕಿಸಿ ಪೊರೆಯೊ ೧೦

ಕಾಮಿತದಾಯಕ ಭೂಮಿಜೆನಾಯಕ
ಶಾಮಸುಂದರನ ಪ್ರೇಮದ ಸೇವಕ ೧೧

೧೨೮

ರಾಘವೇಂದ್ರ ಗುರುರಾಯ ಶುಭಕಾಯ
ಕವಿಗೇಯಾ ಪಿಡಿಕೈಯಾ । ಶ್ರೀ ಸಮೀರ
ಸುಮತಾಂಬುಧಿಗೆ ಪೂರ್ಣಶಶಿ ಮಂತ್ರಾಲಯ
ವಾಸ । ನತಪೋಷ । ಮುನಿವ್ಯಾಸ ಭಯನಾಶ ೧

ಪ್ರಥಮ ಯುಗದಿ ಶ್ರೀ ಪತಿಯ ಸ್ತಂಭದಲಿ
ಪಿತನಿಗೆ ತ್ವರಾ ತೋರಿಸಿದಾ
ಶ್ರೀಪಾದ ಪ್ರಹ್ಲಾದ ಕೊಡು ಮೋದ ೨

ಕಾಮಧೇನು ಸಮ ಕಾಮಿತಗರೆಯುವಂಥ
ಶಾಮಸುಂದರ ನಿಜದೂತ ವರದಾತ
ದ್ವಿಜನಾಥ ಪ್ರಖ್ಯಾತ ೩

೧೨೯

ರಾಯರೆ ಗತಿಯು ನಮಗೆ ।
ವಾಯುಮತೋದ್ಧಾರ ಶ್ರೀ ರಾಘವೇಂದ್ರ ಗುರು ಪ

ಶುಕವಿತ ಮೊದಲಾದ ವಿಕುಲಕ್ಕೆ ಮಧುರಫಲ
ಯುಕುತ ಮಾಗಿಹ ಚೂತ ಸುಕುಜ ಗತಿಯು ।
ಮುಕುತಿಗೆ ಸುಜ್ಞಾನ ಭಕುತಿ ವಿರಕುತಿ ಗತಿಯ
ಅಕಳಂಕ ಶ್ರೀಮಂತ್ರ ಮಂದಿರದಿ ನೆಲೆಸಿಪ್ಪ ೧

ಋಷಿಗಳಿಗೆ ಪ್ರಣವೆ ಗತಿ ಝುಷಗಳಿಗೆ ಜಲವೆ ಗತಿ
ಸಸಿಗಳಭಿವೃದ್ಧಿಗೆ ಶಶಿರವಿ ಗತಿಯೊ

ಶಿಶುಗಳಿಗೆ ಜನನಿ ಗತಿ ಪಶುಗಳಿಗೆ ತೃಣವೆ ಗತಿ
ಅಸಮ ಮಹಿಮೆಯಲಿ ಮೆರೆವ ಮಿಸುನಿ ಶಯ್ಯಜರಾದ ೨

ಕಾಮಿನಿ ಮಣಿಯರಿಗೆ ಕೈಪಿಡಿದ ಕಾಂತ ಗತಿ
ಭೂಮಿ ಬುಧರಿಗೆ ಮಧ್ವಶಾಸ್ತ್ರ ಗತಿಯೊ
ತಾಮರಸ ಸಖ ಸುತನ ಧಾಮ ಭಯ ಪೋಪುದಕೆ
ಶಾಮಸುಂದರವಿಠಲ ಸ್ವಾಮಿ ನಾಮವೆ ಗತಿಯೊ ೩

೧೩೦

ಬಾರೋ ಬಾರೋ ಶ್ರೀ ಗುರುರಾಯ
ಬಾರೋ ಬಾರೋ ಭೂಸುರವರ್ಯ
ಬಾರೋ ಬಾರೋ ಭಕ್ತಪ್ರೀಯ
ಭಾಸುರ ಕಾಯ ಪ

ಘೋರಾರಣ್ಯದೊಳು ಬಂದು ಸೇರಿದೆನೊ ದುಷ್ಕರ್ಮದಿ]
ಕ್ರೂರ ಮೃಗಗಳೆನ್ನತಿ ಬಾಧಿಸುತಿಹವು
ಚೋರರುಪದ್ರವವನ್ನು ನಾ ಸಹಿಸಲಾರೆ ಇಷ್ಟೆನುತ
ದೂರ ನೋಳ್ಪರೆ ವ್ಯಾಳ್ಯಕೆ ಸೂರಿವರೇಣ್ಯ ೧

ಮಂದಜನ ಸಂಗದಿಂದ ತಂದೆ ತ್ವತ್ಪಾದಾರ
ವಿಂದ ಪೊಂದದಿರೆ ಸಂಧಿಸಿತೆನ್ನಗೆ ಬಂಧ
ನಿಂದೆಗೈದ ದೋಷದಿಂದ ಬಂದ ಬನ್ನ ಪರಿಹಾರಕ್ಕೆ
ಹಿಂದೆ ನೀ ನಾಲ್ವರಿಯಲಿಲ್ಲೆ ಸಂದೇಹವ್ಯಾಕೆ ೨

ಇಂದ್ರ ಸಮವಿರಾಜಿತ ಇಂದ್ರ ವಿರೋಧಿ ಸಂಭೂತ
ಇಂದ್ರ ದೇವಾಧಿ ಮಾನಿತ ಆನಂದ ಪ್ರದಾತ
ಇಂದ್ರ ಜಾರಿ ಸೂತ ಶಾಮಸುಂದರವಿಠಲ ದೂತ
ಇಂದ್ರ ಜಾತಾಖ್ಯರ ಪ್ರೀತ ಇಂದ್ರಾರ್ಯಪೋತ ೩

೧೫೧

ಪಾಲಿಸು ರವಿತೇಜಾ । ಮಂತ್ರಾಲಯ ಗುರುರಾಜಾ ಪ

ಶ್ರೀ ಸುಖತೀರ್ಥ ಮತಾಂಬುಧಿಗೆ ಭೇಶಾ
ಭಾಸುರ ವರ ವೃಂದಾವನ ನಿವಾಸ
ಭೂಸುರ ಸಂಸೇವಿತ ನತಜನ ಪೋಷಕ ಮುನಿವ್ಯಾಸ ೧

ತುಂಗಭದ್ರ ಸುತರಂಗಿಣಿ । ತೀರ ನಿಲಯ
ಸಂಗೀತ ಪ್ರಿಯ ಸತ್ಕವಿಜನ ಗೇಯ
ತುಂಗ ಮಹಿಮ ಕುಮತ ದ್ವಿರದ ಸಿಂಗನೆ ಪಿಡಿ ಕೈಯ್ಯ ೨

ಶಾಮಸುಂದರ ಮೂಲ ಶ್ರೀರಾಮಚಂದ್ರನ ಚರಣಾ
ತಾಮರಸ ಯುಗ್ಮಂಗಳಿಗೆ ಷಟ್ ಚರಣ
ಕಾಮಿತ ಶುಭದಾಯಕ ನಿಸ್ಸೀಮ ಕರುಣ ಭರಣ ೩

೧೫೨

ತೂಗೋಣ ಬನ್ನಿ ರಾಯರ । ರಾಯರ ತೂಗೋಣ ಬನ್ನಿ ಪ

ಪ್ರಥಮದಿ ಪ್ರಹ್ಲಾದನಾಗಿ । ಭಕುತಿಯಿಂದ ಹರಿಯ ಕೂಗಿ ।
ಪಿತಗೆ ಮುಕುತಿ ಪಥವಾ ತೋರಿದಾ ರಾಯರ ೧

ಚಂದ್ರಿಕಾರ್ಯ ಭೂಮಿಯೊಳು
ಪೂರ್ಣಚಂದ್ರನಂತೆ ಮೆರೆಯುತಿರುವಾ ।
ಆನಂಧತೀರ್ಥ ಮತೋದ್ಧಾರರ । ರಾಯರ ತೂಗೋಣ ಬನ್ನಿ ೨

ಭೋಗ ಭಾಗ್ಯವೆಲ್ಲ ತೊರೆದು ಯೋಗಿವರ್ಯರಾಗಿ ಮೆರೆದ ।
ರಾಘವೇಂದ್ರ ಯತೇಂದ್ರರ । ರಾಯರ ತೂಗೋಣ ಬನ್ನಿ ೩

ಮಂತ್ರಪುರದಿ ನಿಂತು ಭಜಿಪರಂತರಂಗವನ್ನೆ ತಿಳಿದು
ಸಂತಸದಿ ಪೂರ್ಣಗೊಳಿಪ ರಾಯರ ತೂಗೋಣ ಬನ್ನಿ ೪

ನಾಮಸ್ಮರಣೆ ಮಾತ್ರದಿಂದ ಕಾಮಿತಾರ್ಥವನ್ನೆ ಕೊಡುವ ।
ಶಾಮಸುಂದರ ಹರಿಗೆ ಪ್ರಿಯರ । ರಾಯರ ತೂಗೋಣ ಬನ್ನಿ ೫

೧೩೩

ಗುರುರಾಯರ ತೂಗೋ ಬಾಗೋ
ಪರಿ ಪರಿಯ ರತ್ನಗಳ ಪಚ್ಚೇ ಮುತ್ತುಗಳ ಹಚ್ಚೆ
ತೊಟ್ಟಿಲು ಕಟ್ಟೇವ । ಮೆಟ್ಟಲು ಮಾಡೇದ
ಮೆಟ್ಟಲು ಮಾಡೇದ
ತರತರದ ಹೂಗಳು ಸುತ್ತ । ತರ ತರದ ಹೂಗಳು ಸುತ್ತ
ಸುವಾಸನೆ ಮತ್ತ । ತುಂಬ ಇಡಗಿತ್ತ
ಪರಿಮಳಾರ್ಯರ ಬಳಿ ಸಾಗೇದ ೧

ವರ ಮಧ್ವಶಾಸ್ತ್ರ ವಿಸ್ತರಿಸಿ । ವರ ಮಧ್ವಶಾಸ್ತ್ರ ವಿಸ್ತರಿಸಿ
ಜರಿದ ಮಾಯ್ಗಳಾಗ ಮೆರೆದ ಭೂಮಿಯೊಳಗ
ಮೆರದ ಭೂಮಿಯೊಳಗ ।
ತರತಮ ಸ್ಥಾಪಿಸುತ್ತ । ತರತಮ ಸ್ಥಾಪಿಸುತ್ತ
ಮರುತ ನಿದ್ಧಾಂತ ತ್ವರಿತ ಗುಣವಂತ
ಭರದಿ ಗುರು ಚರಣಕೆ ಬಾಗೋ ೨

ನಮಿಸುತಲಿ ಸಾಗೋ ನೀ ಬೇಗ । ನಮಿಸುತಲಿ
ಸಾಗೋ ನೀ ಬೇಗ ।
ಕರವ ಮುಗಿ ಹೋಗಿ । ವರವ ಬೇಡೀಗ
ವರವ ಬೇಡೀಗ ವರವ ಬೇಡೀಗ
ನಾಮಾಮೃತವ ಸವಿಯುತ್ತ । ನಾಮಾಮೃತವ ಸವಿಯುತ್ತ
ಕುಣಿಯೋ ಮತ್ತೆ । ಮಣಿಯ ಬಾಗುತ್ತ

ಬಾಗುತ್ತ । ಮಣಿಯೆ ಬಾಗುತ್ತ
ಶಾಮಸುಂದರನ ಪ್ರಿಯಗೀಗ ೩

೧೩೪

ಗುರುರಾಯ ಕಾಯೋ ಪ್ರೇಮಾಂಗ ಶುಭಾಂಗ ಪ

ಅನುದಿನದಿ ಪಾದ ನಂಬಿದೆ
ದೀನಪಾಲಾ ಕರುಣಿಸಿ ೧

ಹರಿಪಾದ ಕಮಲವಾ ತೋರೋ ಚಿತ್ತದಿ
ಧೀರ ಅಪಾರ ಮಹಿಮನೆ ೨

ಸಿರಿ ಮನೋರಮಣ ಶಾಮಸುಂದರ
ವಾರಿಜಾಂಘ್ರಿ ಸುಮಧುಪ ೩

೧೩೫

ಎಂಥ ದಯವಂತನೋ । ಮಂತ್ರ ಮುನಿನಾಥನೊ
ಸಂತಸದಿ ತನ್ನನು । ಚಿಂತಿಪರಿಗೆ ಸುರಧೇನು ಪ

ವರ ಪ್ರಹ್ಲಾದನು । ಮರಳಿ ಬಾಹ್ಲೀಕನು ।
ಶ್ರೀ ಗುರುವ್ಯಾಸರಾಯನೊ । ಪರಿಮಳಾಚಾರ್ಯನೊ ೧

ಇರುವ ತುಂಗಾತಟದಲ್ಲಿ । ಬರುವ ತಾನು ಕರೆದಲ್ಲಿ
ಕರಪಿಡಿದು ಪೊರೆವಲ್ಲಿ ಸರಿಗಾಣೆ ಧರೆಯಲ್ಲಿ ೨

ಮರುತಾವೇಶಯುಕ್ತನು । ದುರಿತ ಕಳೆವ ಶಕ್ತನು
ತರಣಿ ನಿಭಗಾತ್ರನು । ಪರಮ ಸುಚರಿತ್ರನು ೩

ಶಿಶುವಿಗವ್ರುಗರೆದನು । ವಸುಧಿ ಸುರರ ಪೊರೆವನು
ಅಸಮ ಮಹಿಮನೊ । ಸುಶೀಲೇಂದ್ರ ವರದನೊ ೪

ಭೂಮಿಯೊಳು ಖ್ಯಾತನು । ಶಾಮಸುಂದರ ಪ್ರೀತನು
ಕಾಮಿತಾರ್ಥದಾತನು । ಸ್ವಾಮಿ ನಮಗೆ ಈತನು ೫

೧೩೬

ಕರುಣಿಸು ಗುರುವರ ಪರಿಮಳಾರ್ಯ ।
ಕರುಣಾಬ್ಧಿಯ ಜಿತಕಾಯ ಜಾತ ।
ವರಶುಭ ಚರಿತನೆ ನೀ । ಕನಕಶಯನ ಜಾತ ।
ನಮಿಪೆ । ಅನುದಿನ ಪೊರೆವುದು ನೀ ೧

ವರಹಸುತೆಯ ತೀರ ನಿಲಯ ।
ಶರಣರ ಸುರತರು ನೀ ೨

ಶಾಮಸುಂದರನನಾಮಸುಧೆಯಾ ।
ಮಮತೆಯಲಿ ಗರೆವುದು ನೀ ೩

೧೩೭

ಯೋಗಿ ಕುಲಪುಂಗವ ಕಾಯೋ
ಕೋಲ ತನಯ ತಟಿ ಸದನಾ ವಿಬುಧವೃಂದ
ನುತ ಪ್ರೇಮಸಾಗರ ಪ

ದೈಶಿಕಾಗ್ರಣಿ ಸುಜನ ಪಾಲಾ ವಿಜಿತಾನಂಗನ
ಭಾಸುರ ಮಹಿಮ ೧

ಪಾವನಾತ್ಮಕ ಪಾಪ ವಿದೂರ
ಕಾವುದೈ ಸದಾ ಕೋವಿದರೊಡೆಯ ೨

ಶಾಮಸುಂದರ ಪ್ರೇಮ ಸುಪಾತ್ರ ಸ್ವಾಮಿ
ಶ್ರೀ ಗುರು ರಾಘವೇಂದ್ರಾರ್ಯ ೩

೧೩೮

ತುಂಗಾತೀರದಿ ಕಂಗೊಳಿಸುವ ಮುನಿ
ಪುಂಗವರಾಯರ ನಯನದಿ ನೋಡೆ । ಮನದಿ
ಕೊಂಡಾಡೆ ವರಗಳ ಬೇಡೆ ಪ

ಆದಿ ಯುಗದಿ ಪ್ರಹ್ಲಾದನೆನಿಸಿ ಕ
ಯಾದವಿನುದರದಿ ಜನಿಸುತಲಿ । ಸಖಿ ಜನಿಸುತಲಿ
ವಾದಿಸಿ ಪಿತನೊಳು । ಮಾಧವ ಪರನೆಂದು ಮೋದದಿ
ಸ್ತಂಭದಿ ತೋರಿದ ಧೀರನೆ ೧

ಅದ್ವೈತಾಟವಿ ದಗ್ಧಕೃತಾನಲ
ಮಧ್ವಮತಾಬ್ಧಿಗೆ ಭೇಶನೆಂದೆನಿಸಿ
ಸದ್ವೈಷ್ಣ ವರುದ್ಧಾರಕನಾದ ಪ್ರ
ಸಿದ್ಧನಾದ ವ್ಯಾಸಕರ್ಮಂದ ಕುಲೇಂದ್ರನೆ ೨

ಧರಣಿ ತಳದಿ ರಾಘವೇಂದ್ರ ಸುನಾಮದಿ
ಮರಳಿ ಜನಿಸಿ ದಿವ್ಯ ಪರಿಮಳ ರಚಿಸಿ । ಪರಿಮಳ ರಚಿಸಿ
ಕರುಣದಿ ದ್ವಿಜರಿಗೆ ಎರದು ಪೊರೆವ ಗುರು
ಮರುತಾವೇಶದ ದೇವಸ್ವಭಾವನೆ ೩

ಸ್ವಾಂತದಿ ಭಜಿಪರ ಚಿಂತೆಯ ಕಳೆಯಲು
ಚಿಂತಾಮಣಿಯಂತೆ ಸತತ ಸಖಿಯೇ । ಸಂತತ ಸಖಿಯೇ
ಮಂತ್ರನಿಕೇತನ ಕ್ಷೇತ್ರದಿ ಸ್ಥಿರವಾಗಿ
ನಿಂತ ಪರಮ ಸುಶಾಂತ ಮೂರುತಿಯೆ ೪

ವಂದಿಸಿ ಸ್ತವಿಸುವ ವಂದ್ಯಾಂಧಕರಿಗೆ
ಕಂದ ರಕ್ಷಿಗಳ ಕರುಣಿಸಿಹರೇ । ಕರುಣಿಸಿಹರೇ
ಇಂದು ಧರಾಮರ ವಂದಿತ ಶಾಮ
ಸುಂದರವಿಠಲನ ದಾಸೋತ್ತಮನೆ ೫

೧೩೮ (ಅ)

ಸಾಗಿ ಬಾರೋ ಗುರುರಾಘವೇಂದ್ರರಾಯ ।
ವರ ಸತ್ಕವಿ ಗೇಯ ಪ

ಕೂಗುತ ಕರೆಯುವ ಭಾಗವತರ
ಮೊರೆಯ ಲಾಲಿಸೋ ಮುನಿವರ್ಯ ಅ.ಪ

ಪಾವನ ಘನ ವೃಂದಾವನ ಮಂದಿರನೆ
ಸದ್ಗುಣ ಬಂಧುರನೇ
ಪಾವಮಾನಿಮತಶರಧಿ ಚಂದಿರನೇ
ಧರಸಮ ಕಂದರನೇ
ಭಾವಣಿಪುರ ಸುಜನಾವಳಿ ಕೋರಿಕೆಯ
ಗರೆಯಲು ಶುಭಕಾಯ ೧

ಶರಣಜನರು ಮೈಮರೆದು ಕರೆಯಲಾಗಿ
ನಿಲ್ಲದೆ ವರಯೋಗಿ ।
ಭರದಿ ಬಂದು ಕರಪಿಡಿಯುವ
ದೊರೆ ನೀನು ಎಂದರಿತೆವು ಸುರಧೇನು
ಕರುಣಾಕರ ಗತಿದಾಯಕ ನೀನೆಂದು
ಭಜಿಪೆವು ದಯಾಸಿಂಧು ೨

ಶಾಮಸುಂದರನ ಪ್ರೇಮವ ಪಡೆದಾತ
ಜಗದೊಳು ಪ್ರಖ್ಯಾತ

ನೇಮದಿ ಭಜಿಪರ ಕಾಮಿತ ಕೊಡುವಾತ
ದೈಶಿಕ ಕುಲನಾಥ
ಹೇಮಶಯ್ಯ ಸುಕುಮಾರ ಮಮತೆಯಿಂದ ಮಂತ್ರಾಲಯದಿಂದ ೩

೧೩೯

ಸತ್ಯಪ್ರಮೋದ ತೀರ್ಥರ ಪಾದ
ಪದುಮವ ನಿತ್ಯದಿ । ಭಜಿಸುವರ
ಸತ್ಯಲೋಕೇಶನ ಪೆತ್ತ ಪರಮಾತ್ಮನು ।
ನಿತ್ಯದಿ ಕರಪಿಡಿವ ತಿಳಿ ಮಾನವಾ ಪ

ರವಿ ಸನ್ನಿಭಾಂಗರು । ಭುವಿ ದಿವಿಜೇಂದ್ರರು ।
ಕವಿಗಣ ಸನ್ನುತರು । ಭವದೂರರು ।
ಭುವನದೋಳ್ ಧೃಡಚಿತ್ತದವರಾಗಿ । ತಪದಲ್ಲಿ
ಧ್ರುವನಂತೆ ತೋರುವರು ಮಹಾತ್ಮರು ೧

ಭುಜಗಾಧಿಪನಂತೆ ಯೋಗ ಸುಸಾಧಕರು
ಭುಜಗಾರಿಯಂದದಿ ದ್ವಿಜನಾಥರು । ಭುಜಗ ಭೂಷಣನಂತೆ
ನಿಜ ವೈಷ್ಣವೋತ್ತಮರು
ವಿಜಯಾನಂದದಿ । ದಿಗ್ವಿಜಯಶಾಲಿಗಳಿವರು ೨

ಸೋಮನಂದದಿ ಸುಸಾಧಕರೆನಿಸುತ ।
ನೇಮಪೂರ್ವಕವಾಗಿ । ನಿತ್ಯದಲ್ಲಿ
ಶಾಮಸುಂದರ ಸೀತಾ ರಾಮನರ್ಚಿಸುತಲಿ ।
ಭೂಮಿಯೋಳು ಮೆರೆದಿಹರು ಸುಧೀರರು ೩

೧೪೦

ವರದೇಂದ್ರ ವರದೇಂದ್ರ
ವರದಾಯಕ ಗುರು । ವರ ಗುಣಸಾಂದ್ರ ಪ

ಪಾವನ ಚರಿತ ವೃಂದಾವನ ಮಂದಿರ
ಕೋವಿದ ಜನ ಸುಸೇವಿತ ಸದಯ ೧

ಕಾಷಾಯಾಂಬರ । ಭೂಷಿತ ಎನ್ನಯ
ದೋಷಗಳೆಣಿಸದೆ ಪೋಷಿಸು ಸತತ ೨

ಕಠಿಣ ಭವಾಂಬುಧಿ ಘಟಜ ಕುಟಿಲ ಮತ
ವಿಟಪಿ ಕುಠಾರಿ ಉತ್ಕಟ ಸನ್ಮಹಿಮ ೩

ನತ ಸುರಕ್ಷಿತಿರುಹ । ಜಿತ ರತಿಪತಿ ಶರ
ಮತಿವರ ದಶಮತಿ ದುರಿತವಾರಿಧಿ ವಿಭು ೪

ಹೇಮೋದರ ಪಿತ ಶಾಮಸುಂದರನ
ಪ್ರೇಮಪಾತ್ರ ಪುಣ್ಯಧಾಮ ಮಹಾತ್ಮ ೫

೧೪೧

ವರ್ಣಿಸಲು ಸಾಧ್ಯವೇ ಧರೆಯೊಳಿನ್ನ
ವರದೇಂದ್ರಗುರು ನಿನ್ನವರ ಮಹಿಮೆಯ ಪ

ದಶಪ್ರಮತಿ ಸುಮತಾಖ್ಯ । ಬಿಸಜನಿಧಿಗೆ ಉಡುನಾಥ
ವಸುಧಿ ಸುಮನಸವ್ರಾತ । ನಮಿತ ಖ್ಯಾತ ।
ವಸುಧೀಂದ್ರ ಕರಜಾತ । ಸುಶರಣರ ಸುಖದಾತ ।
ವಸುಧೀಶ ಪಸರಿಸಿದ । ಅಸಮ ತವ ಚರಿತೆಯನು ೧

ಸಾರ ಕನ್ನಡದಲಿ ನೀ ರಚಿಸುತಲಿ ತಂತ್ರ ।
ಸಾರ ಮಂತ್ರವ ಪರಮ ಕಾರುಣ್ಯದಿ ॥
ಶ್ರೀರಂಗನೊಲಿಸಿದ ಧಾರುಣಿಪ ದಾಸರಿಗೆ
ಸಾರಿ ಪೇಳಿದ ಪರಮೋಧಾರ ಜಿತಮಾರ ೨

ಪುಣೆ ಎಂಬೊ ಪಟ್ಟದಿ ತನುಬಿಟ್ಟು ಮುದದಿಂದ
ಗುಣನಿಧಿ ಪ್ರಾಣೇಶದಾಸಾರ್ಯರ
ಮನೆಯ ಹಿತ್ತಲದೊಳಗೆ ಬಣವಿ ಬುಡದಲಿ ಬಂದು
ಘನ ತುಲಸಿ ರೂಪದಲಿ ಜನಕೆ ತೋರಿಸಿ ಚಿತ್ರ ೩

ವಾದದಲಿ ರಾಮಾಖ್ಯ ವಾದಿಯಪಜಯ ಪೊಂದಿ
ಸಾದರದಿ ಗಜ ಭೂಷಣಾದಿಗಳನು ॥
ಪಾದಕರ್ಪಿಸಲಾಗ ಭೂದೇವ ಜನಕಿತ್ತ
ಮೋದ ಬಡಿಸಿ ನಿನ್ನ ಔದಾರ್ಯ ಗುಣವ ೪

ಶಾಮಸುಂದರ ಮೂಲ ರಾಮಚಂದ್ರನ ಚರಣ
ತಾಮರಸ ಷಡ್ಜ ಪರಮ ಸುಗಣ
ಧೀಮಂತ ಶ್ರೀಮಂತ್ರಧಾಮ ನಿಲಯರ ಪೂರ್ಣ
ಪ್ರೇಮ ಸತ್ಪಾತ್ರ ಮಮ ಸ್ವಾಮಿ ಸುಚರಿತ್ರ ೫

೧೪೨

ಗುರು ಸುಶೀಲೇಂದ್ರ । ಚರಣವಾರಿಜ ಯುಗ್ಮ
ಸ್ಮರಿಸುವ ನರರು ಶ್ರೀ ಹರಿದಾಸರು ಪ

ಹರಿವರ ಸುಮತಾಬ್ಧಿ । ಹರಿಣಾಂಕರೆನಿಸಿದ
ವರ ಸುವೃತೀಂದ್ರತೀರ್ಥರ ಕರ ಕಮಲಜ ಅ.ಪ

ಕಡೆಯ ಆಶ್ರಮವ ಕೈಕೊಂಡು ಮಾಸ ತ್ರಯದಿ
ಸಡಗರದಲಿ ಮಹ ಸಭೆ ನಿರ್ಮಿಸಿ
ಪೊಡವಿಯೊಳಿದ್ದ ಭೂಸರರಾಜ್ಞ ಪತ್ರ ಬರಮಾಡಿ
ವಿದ್ವಾಂಸರ ಒಡಗೂಡಿ । ಮಧ್ವಾಗಮನವನು ನೋಡಿ
ಬೆಲೆಯುಳ್ಳವೆಗ್ಗಳ ಒಡವೆ ಉಡುಪಗಳನು ಕರುಣಿಸಿ
ಮೃಷ್ಟಾನ್ನ ದ್ವಿಜರಿಗೆ ಕಡು ಸುಪ್ರೇಮದಿ ಸಲಿಸಿ । ಮುದ
ಒಡಿಸಿ ಜಡಕುಮಾಯ್ಗಳ । ಗಡಣ ಜಡಧಿಗೆ ವಡೆಯ ತಾನೆನಿಸಿ
ಕ್ರೋಢಜಾಸ್ಥಿತ । ಒಡೆಯ ಶ್ರೀ ಗುರು
ರಾಘವೇಂದ್ರರ ಅಡಿಗಳಾಬ್ಜಕಾ
ರಡಿಯಂತೊಪ್ಪುತ । ಬಿಡದೆ ಸಂತತ
ಧೃಢದಿ ಸೇವಿಸಿ ಜಡಜಜಾಂಡದಿ ಮೆರೆದ ಅಸ್ಮದ್ ೧

ಮರುತಾಂತರ್ಗತ ಮೂಲ ತರಣಿ ಕುಲೇಂದ್ರನ
ಕರುಣವೆಷ್ಟಿವರೊಳು ಅರುಹಲಾರೆ
ವರ ಕಾಪ್ಯಾಸನ ಪುರಕೆ
ಎರಡಾರು ಯತಿಗಳ ವತಿಯಿಂದ
ತಮ್ಮಯ ಶಿಷ್ಯ ತತಿಯಿಂದ
ಬಹುವಿಧ ಬಿರುದಾವಳಿಯಿಂದ
ತೆರಳಿ ಶಶಿ ರವಿವರ ಸುವಾದ್ಯಧ್ವಾನ ಮೊಳಗಿಸುತ
ಘನ ಭಕ್ತಿ ಪರವಶರಾಗಿ ಸುರಚಿರ
ಕನಕಮಣಿ ಧನ ತನುಮನ ತ್ವರಿತ
ತೃಣ ಬಗೆಯ ದೇವಕಿ ತರಳ ರುಕ್ಮಿಣಿ
ವರ ಮುರಾಂತಕ ಚರಣಗರ್ಪಿಸುತ । ಆನಂದಪಡುತ
ಸರ್ವಮುನಿ ಜನಗಳಿಗೆ ಬಲು ಉಪಚರಿಸಿ । ಮನ್ನಣೆ ಧರಿಸಿ
ಹರುಷದಿ ವರ ಸುಧೀಂದ್ರರ ಕರಜರನು ನೆರೆ ಸ್ಥಾಪಿಸಿ
ಆಶ್ಚರ್ಯ ಚರಿತ ೨

ಕ್ಷಿತಿಯೊಳು ಭಾರತಿ ಪತಿ ಶ್ರುತಿ
ಶಾಸ್ತ್ರಾರ್ಥ ಚತುರತನದಿ ಪಡೆದು
ವಿತತ ಮಹಿಮನಾದ ಪತಿತ ಪಾವನ ಶಾಮಸುಂದರನ
ಸ್ತುತಿಸುತ ಲಯ ಚಿಂತನೆ ಗೈಯುತ ಶ್ರೀಯುತ
ಸಂಸ್ಥಾನಮತಿ ವಿಶಾರದರಾದವರ ಸುವೃತೀಂದ್ರ
ತೀರ್ಥರಿಗೆ ಹಿತದಿಂದ ಒಪ್ಪಿಸಿ । ಯತಿ ಧೀರೇಂದ್ರರ
ಚಾರುಸ್ಥಳದೊಳಗೆ ತನುವಿತ್ತು । ಹರಿಪುರಪಥವ
ಪಿಡಿದೈದಿದರು ಚನ್ನಾಗಿ । ಸೇವಿಪ ಜನರಿಗೆ
ಅತಿದಯದಿ ಮನೋರಥವ ನೀಡುತ
ಸತತ ಮಾಣದೆ ಪರಮ ಭಕುತಿಲಿ
ಪೃಥ್ವಿ ಸುರಕರ ಶತಪತ್ರಗಳಿಂದ
ನುತಿಸಿಕೊಳುತಲರ್ಚನೆಗೊಂಬ ೩

೧೪೩

ಚಂದ್ರನ ನೋಡಿರೈ ಸುಶೀಲೇಂದ್ರರ ಪಾಡಿರೈ
ವಂದಿಪ ಸುಜನ ಮಂದಾರ । ಮಾಘ ವಿರೋಧಿ
ಸುಮ ತಪಯೋಗಿ ಪ

ಯತಿ ಕುಲವರ್ಯ ಸುವೃತೀಂದ್ರ ಕರಾಂಬುಜ ।
ಜಾತ ಜಿತ ಮನೋಜಾತ ॥
ಪೃಥ್ವಿ ಸುರಾರ್ಚಿತ ಪತಿತ ಮತಾರಣ್ಯಜಾತ ವೇದಸನೀತ
ಕ್ಷಿತಿಪತಿ ಸುತೆ ತಟಸ್ಥಿತ ಶ್ರೀ ರಾಯರಚರಣ । ನಳಿನ ಷಟ್ಚರಣ
ಅತಿಶಯ ವಿಭವದಿ ಜಗದಿ ಮೆರೆದ ರವಿತೇಜ ಕುಜನ ಸರೋಜ ೧

ವರ ದುಕೂಲದಿ ಪರಿಶೋಭಿಪ ರಿತ್ತಿ ಗ್ರಾಮ ಕೃತ ನಿಜಧಾಮ
ಗುರುವರೇಣ್ಯ ಧೀರೇಂದ್ರರ
ಪೂರ್ಣ ಸುಪ್ರೇಮ ಪಡೆದ ಸನ್ಮಹಿಮ ॥

ಪರಿಮಳ ಸುಧಾ ನ್ಯಾಯಾಮೃತ ತತ್ವದ ಸಾರವರೀತ ಗಂಭೀರ
ಧರಣಿ ಸುರಾಗ್ರಣಿ ಸುವೃತೀಂದ್ರ ಹೃತ್ಕುಮುದ ಸುಮನ ಶರತದ ೨

ಅಕ್ಷಯ ವತ್ಸರಾಷಾಢ ಸುನೀತ ತಿಥಿ ತ್ರಯದಲಿ ।
ಲಕ್ಷ್ಯವಿಟ್ಟು ಲಯ ಚಿಂತನೆ ಗೈದ್ಗುರುಷದಲಿ ಸುಸ್ವಾಂತದಲಿ ॥
ತ್ರ್ಯಕ್ಷವಿನುತ ಶಾಮಸುಂದರನಂಘ್ರಿ ಧ್ಯಾನಿಸುತಕ್ಷೋಣಿ ತ್ಯಜಿಸುತ
ಸಾಕ್ಷ್ಯಾನ್ಮೋಕ್ಷ ಸಂಸ್ಥಾನಕೆ ತೆರಳಿದ ಧೀರ ಭಕ್ತ ಚಕೋರ ೩

೧೪೪

ಸುಶೀಲೇಂದ್ರ ಸುಶೀಲೇಂದ್ರ
ಅಸುನಾಯಕ ಮತ । ಬಿಸರುಹ ಭಾಸ್ಕರ ಪ

ಕುಂಭಿಣಿದೇವ ಕದಂಬ ವಿನುತ । ಜಿತ
ಶಂಬರಾರಿ ಕರುಣಾಂಬುಧಿ ಗುರುವರ ೧

ತುಂಗ ಮಹಿಮ ಯತಿಪುಂಗ ವರದ । ತ
ರಂಗಿಣಿ ನಿಲಯ ಸುಮಂಗಳ ಚರಿತ ೨

ಭಾಗವತ ಪ್ರಿಯ ರಾಘವೇಂದ್ರರರನು
ರಾಗ ಪಾತ್ರ ಮಧ್ವಾಗಮಜ್ಞ ಗುರು ೩

ಸಾರಿದೆ ಸಂತತ ಸೂರಿವರ್ಯ । ಗುರು
ಧೀರೇಂದ್ರ ಪದ ಸಾರಸ ಮಧಕರ ೪

ಶ್ರೀಮನೋವಲ್ಲಭ । ಶಾಮಸುಂದರನ
ಪ್ರೇಮಾನ್ವಿತ ನಿಸ್ಸೀಮ ಮಹಿಮ ೫

೧೪೫

ಸುಶರಣ ಸುರಪಾದಪ
ಸುಶೀಲೇಂದ್ರ ಸನ್ಮುನಿಪ ಪ

ಚಾರು ತುಳಸಿ ಸಾರಸಾಕ್ಷಮಣಿ
ಹಾರ ಶೋಭಿತ ಜಿತ ವಾರಿಜ ಚಾಪ ೧

ಸಲೆ ಮಂತ್ರಾಲಯ ನಿಲಯರ ಒಲಿಸಿದ
ಅಲವ ಬೋಧಮತ ಜಲಧಿಗೆ ಉಡುಪ ೨

ಕ್ಷಿತಿದೇವತತಿ ನುತ ವರದಾತಟ
ಸ್ಥಿತಯತಿ ಪತಿ ಪದ ವೃತತಿಜ ಮಧುಪ ೩

ಕೋವಿದ ಜನ ಸಂಸೇವಿತ ವರ ವೃಂ
ದಾವನ ಮಂದಿರ ಪಾವನ ರೂಪ ೪

ವರದ ಶಾಮಸುಂದರ ರಘುರಾಮನ
ಚರಣಾರಾಧಕ ದುರಿತ ನಿರ್ಭೀತ ೫

೧೪೬

ವಶವಲ್ಲ ವರ್ಣಿಸಲು ಸುಶೀಲೇಂದ್ರತೀರ್ಥರ
ಅಸದೃಶ ಮಹಿಮೆಯನು ಪ

ಬಿಸಜಸಖ ಕಿರಣ ತರಂಗ ವಸುಧೀತಳದೊಳು ಇವರ
ಸುಶಿತ ಸತ್ಕೀರ್ತಿಯು ಪಸರಿಸಿರುವುದು ಘನ್ನ ಅ.ಪ

ಭಕುತಿಪೂರ್ವಕವಾಗಿ ಸಕಲಕ್ಷೇತ್ರವ ಸಂಚರಿಸಿ ।
ನಿಖಿಲ ಭೂದೇವಗಣಕೆ । ವಿಖಿನಾರ್ಚಿನ ಮೂಲ ಲಕುಮೀಶ
ದರುಶನದಿ । ಸುಖವಿತ್ತು ಪಾಲಿಸಿದ ಅಕಳಂಕ ಮಹಿಮ ೧

ಭಯ ಭಕುತಿಯಲಿವರ ಸೇವಿಸುವ ನರರಿಗೆ ಆವಾವ
ಭಯವಿಲ್ಲವೋ । ಗೋವತ್ಸನ್ಯಾಯದಲಿ ತಾವು
ಬೆಂಬಲರಾಗಿ । ಭೂವರಜ ನದಿ ವಾಸರಿವರಿಗೆ ಜಯವ ೨

ಈ ಯತಿಯೊಲುಮೆಯೇ ರಾಯರೋಲಿಮೆಯೋ ಕೇಳೋ
ರಾಯರೊಲಿಯಲು ಗುರುವಾಯು ಒಲಿವಾ । ವಾಯು
ಒಲಿದಾ ಮಾತ್ರದಿ । ಕಾಯಜ ಜನಕ
ಯಮರಾಯನಂಜಿಕಿ ಬಿಡಿಸಿ ಕಾಯುವನು ೩

'ಸು' ಎನಲು ಸುಜ್ಞಾನ । 'ಶೀ' ಎನಲು ಶೀಲತ್ವ ।
'ಲ' ಯೆನಲು ಲಯದೂರವೋ । ಕಾಯ ಶುದ್ಧಿಯಲಿ
ಇಂದ್ರಾ ಎಂದುಚ್ಚರಿಸಲಾ ಇಂದ್ರಲೋಕ ಸುಖವೊ ನಿಜವೋ ೪

ವೃಂದಾರಕಾಂಶಜರು । ಸಂದೇಹವಿಲ್ಲಿವರ ವೃಂದಾವನ ದರುಶನದಿ
ಮಂದಾಕಿನಿಯೊಳಗೆ ಮಿಂದ ಫಲ ಸಂಪ್ರಾಪ್ತಿ
ಇಂದಿರಾಪತಿ ಶಾಮಸುಂದರನು ಕರ ಪಿಡಿವ ೫

೧೪೭

ನಮೋ ನಮೋ ಸುಶೀಲೇಂದ್ರ । ಗುರುವರಿಯ ವೈಷ್ಣವ
ಸುಮತವಾರಿಧಿ ಚಂದ್ರ । ಸಕುವಿ ಸಂಸ್ತುತ ।
ಅಮಿತ ಸದ್ಗುಣ ಸಾಂದ್ರ ॥ ಸುಮತಾಹಿವೀಂದ್ರ ಪ

ನಮಿಪ ಜನರಿಗೆ ಅಮರ ಭೂರುಹ
ಸಮಸುಖಪ್ರದ ವಿಮಲ ಚರಿತನೆ

ಯಮಿವರ್ಯ ಸುವೃತೀಂದ್ರ ಮಾನಸ
ಕಮಲರವಿ ಮಹಿ ಸುಮನಸಾಗ್ರಣಿ ಅ.ಪ

ಅಸಮ ಮಹಿಮೋದರ । ತವಸುಪ್ರಭಾವವ
ವಶವೆ ಪೊಗಳಲು ಧೀರಾ । ಸುಜನ ವಂದಿತ
ಸ್ವಶನ ಸುಮತೋದ್ಧಾರ ॥ ದಯ ಪಾರವಾರ ॥
ವಸುಧೆಯೊಳು ಮೊರೆಹೊಕ್ಕ ಜನರಿಗೆ
ಕುಶಲಪ್ರದ ನೀನೆಂದು ಬುಧ ಜನ
ಉಸುರುವದು ನಾ ಕೇಳಿ ನಿನ್ನ ಪದ
ಬಿಸಜ ನಂಬಿದೆ ಪೋಷಿಸನುದಿನ ೧

ದೀನಜನ ಸುಖದಾತ । ಸುಕೃತೀಂದ್ರ ಕೋಮಲ
ಪಾಣಿ ಪದ್ಮ ಸುಜಾತ । ಜಯವಂತ ಜಿತಸ್ಮರ
ಬಾಣಲೋಕ ವಿಖ್ಯಾತ ॥ ದ್ವಿಜಕುಲಕೆ ನಾಥ ॥
ಕ್ಷೋಣಿಯೊಳು ನೀ ಒಲಿದ ಮಾತ್ರದಿ
ಮೌನಿವರ್ಯ ಶ್ರೀ ರಾಘವೇಂದ್ರರು
ಸಾನುರಾಗದಿ ಸಲಹುವರು ಪವ
ಮಾನ ಶಾಸ್ತ್ರ ಪ್ರವೀಣ ಜಾಣ ೨

ಪಿಂಗಲೇಂದ್ರ ಪ್ರಕಾಶ । ಸುಪವಿತ್ರ ವರದ ತ
ರಂಗಿಣಿ ತಟವಾಸ । ಸದ್ಧರ್ಮ ಸ್ಥಾಪಕ
ಮಂಗಳಾಂಗ ಯತೀಶ । ಪಾಪೌಘನಾಶ ॥
ತುಂಗವಿಕ್ರಮ ಶಾಮಸುಂದರನಂಘ್ರಿ ಕಮಲಕೆ
ಭೃಂಗ ಭವಗಜಸಿಂಗ ಕರುಣಾ
ಪಾಂಗದೀಕ್ಷಿಸೆ ಇಂಗಿತಜ್ಞರ ಸಂಗಪಾಲಿಸು ೩

೧೪೮

ದೈಶಿಕನಾಥ । ಶ್ರೀ ಸುಶೀಲೇಂದ್ರ ಗುರು ಪ

ಚಿತ್ತಜ ಮಾರ್ಗಣ । ಮತ್ತಗಜಾಂಕುಶ
ರಿತ್ತ ಸನ್ಮಂದಿರ ಭೋ ೧

ಸದ್ಧರ್ಮಶೀಲ । ಶುದ್ಧ ಸ್ವಭಾವ
ಮಧ್ವಮತಾಬ್ಧಿ ವಿಭೋ ೨

ಶ್ರೀ ಮನೋವಲ್ಲಭ । ಶಾಮಸುಂದರ ಸು
ಪ್ರೇಮ ಸತ್ಪಾತ್ರ ಪ್ರಭೋ ೩

೧೪೯

ಸೂರ್ಯ ಯತಿವರ್ಯ । ಮ
ಧ್ವಾರ್ಯರ ಸುಮತ ಸರೋಜಕೆ ಸುಶೀಲೇಂದ್ರ ಪ

ಬುಧ ಜನ ವಂದಿತ ಸುಧಿ ಸುವ್ರತೀಂದ್ರರ
ಸದಮಲ ಘನ ಸದ್ ಹೃದಯಾಕಾಶಕೆ ೧

ಧರಣಿ ಸುರಾಗ್ರಣಿ ಗುರು ಸುವ್ರತೀಂದ್ರರ
ಸುರಚಿರ ಸರಸಿಜ ಕರ ಪೂರ್ವಾದ್ರಿಗೆ ೨

ಭೂಸುರ ಸೇವಿತ ಪೂಶರ ನಿರ್ಜಿತ
ಭಾಸುರ ವರ ಸನ್ಯಾಸ ಸುಚ್ಛಾಯಕೆ ೩

ಬಗೆ ಬಗೆಯಿಂದಲಿ ನಿಗಮೋಕ್ತಿಯಲಿ
ರಘುವರನರ್ಚಿಪ ಸುಗುಣವೆಂಬ್ಬಗಲಿಗೆ ೪

ಶಾಮಸುಂದರನ ನಾಮ ಪೊಗಳಿದ
ಪಾಮರ ಮತಿ ಜನಸ್ತೊಮ ಯಾಮಿನಿಗೆ ೫

೧೫೦

ಪೊಂದಿ ಭಜಿಸು ಸುಶೀಲೇಂದ್ರರ ಪದ ನಿರುತ
ಮಂದ ಮಾನವ ತ್ವರಿತ ॥
ವೃಂದಾರಕ ಸದ್ವಂಶಜರಿವರೆನುತ
ಮನದೊಳು ಭಾವಿಸುತ ಪ

ಗುರುಸುವ್ರತೀಂದ್ರರ ಕರಕಮಲದಿ ತಾನು
ತುರಿಯಾಶ್ರಮವನು ।
ಧರಿಸುತ ಹರುಷದಿ ರಘುಕುಲಜನ ಚರಣ
ಆರಾಧಿಸಿ ಘನ್ನ ॥
ಮರುತಾಗಮ ಮರ್ಮಜ್ಞನು ತಾನಾಗಿ
ಮೆರೆದನು ಚೆನ್ನಾಗಿ ೧

ವರಹಜನದಿ ವಾಸರ ಒಲಿಮೆಯಲಿ
ಧರೆಯಲಿ ಚರಿಸುತಲಿ
ಪರವಾದಿಯ ಮತ–
ಜರಿಯುತ ವೈಷ್ಣವರ ಉದ್ಧರಿಸಿದ ಧೀರ
ನರನೆಂದಿವರನು ನಿಂದಿಸುವನೆ ದೈತ್ಯ
ನಾ ಪೇಳುವೆ ಸತ್ಯ ೨

ಶ್ರೀಮನೋವಲ್ಲಭ ಶಾಮಸುಂದರ
ನಾಮವ ಪ್ರತಿದಿನ ।
ನೇಮದಿ ಪಠಿಸುತ ಪ್ರೇಮದಿ ಶಿಷ್ಯರನ
ಸಲಹಿದ ಸಂಪನ್ನ ।
ಧೀಮಜ್ಜನ ಸಂಸೇವಿತ ಸುವ್ರತೀಂದ್ರ
ಹೃತ್ಕುಮುದಕೆ ಚಂದ್ರ ೩

೧೫೧

ಸ್ಮರಿಸು ಮಾನವ ನಿರುತ ಶ್ರೀ ಸುಶೀಲೇಂದ್ರತೀರ್ಥರ
ವರಹಜ ತಟವಾಸ ರಾಯರ ಕರುಣ ಪಾತ್ರರ ಪ

ಭಾನುಜ ಸಮಾನ ದಾನಿ ದೀನ ಪಾಲರ ।
ಮಾನಿತ ಸನ್ಮೌನಿ ವರಿಯ ಜ್ಞಾನ ಶೀಲರ ೧

ಪ್ರಾಣಪತಿಯ ಮತಾಬ್ಧಿಗೆ ಪಠೀಣರೆನಿಪರ
ಕ್ಷೋಣಿ ತಳದಿ ಇವರಿಗೆ ಸರಿಗಾಣೆ ಜಾಣರ ೨

ಶಾಮಸುಂದರವಿಠಲನ ನಿಸ್ಸೀಮ ಭಕುತರ
ಸ್ವಾಮಿ ಸುವ್ರತೀಂದ್ರ ಕೋಮಲ ಕರಸಂಜಾತರ ೩

೧೫೨

ದಾನಿಗಳೊಳು ಪ್ರತಿಗಾಣೆನೊ ನಿನಗೆ ಸ
ನ್ಮೌವಿ ಶ್ರೀ ಸುಶೀಲೇಂದ್ರ ।
ನೀನೇವೆ ಗತಿ ಎಂದ ದೀನರ ಮನೋಭೀಷ್ಟ
ಸಾನುರಾಗದಿ ಕೊಡುವಿ । ಕೈಪಿಡಿಯುವಿ ಪ

ಶ್ರೀಸುವ್ರತೀಂದ್ರ ಸುಯಮೀಂದ್ರಗಳಿಂದಲಿ ಸ ।
ನ್ಯಾಸತ್ವ ಸ್ವೀಕರಿಸಿ
ಭೂಸುತೆ ಪತಿ ಮೂಲ । ದಾಶರಥಿಯ ಪಾದ
ಲೇಸಾಗಿ ಒಲಿಸಿದೆ ನೀ । ಸುಜ್ಞಾನಿ ೧

ಕರಿವರದನ ಪೂರ್ವ ಕರುಣ ಪಡೆದು ದಿವಾ
ಕರನಂತೆ ರಾಜಿಸುತ ।

ಗುರುರಾಘವೇಣದ್ರಾಖ್ಯ । ಸುರಧೇನುವಿಗೆ ಪುಟ್ಟ
ಕರುವೆನಿಸುತ ಮೆರದಿ ಭೂವಲಯದಿ ೨

ಮೋದತೀರ್ಥಾಗಮ ಸಾಧು ಸಜ್ಜನರಿಂದ
ಶೋಧಿಸಿ ಬಹುವಿಧಧಿ
ಮೇದಿನಿಯೊಳು ಪಂಚಭೇದ । ಶಿಷ್ಯರಿಗೆಲ್ಲ
ಬೋಧಿಸುತಲಿ ಪೊರೆದಿ ದಯಾಂಬುಧಿ ೩

ಸಿಂಧುತೀರದಿ ನೆಲಸಿ
ಮಂದಾರ ಕುಜದಂತೆ । ಮಂದ ಜನರಿಗೆ । ಕ
ರ್ಮದಿ ಪವರಗಳನು । ನೀಡುವಿ ನೀನು ೪

ಶ್ರೀ ಶಾಮಸುಂದರವಿಠಲ ವಾಸಿಸುವ । ಕಾ
ಪ್ಯಾಸನ ವರಕ್ಷೇತ್ರದಿ ।
ದೇಶ ದೇಶದಿ ಬಂದ । ಭೂಸುರರಿಗೆ ಧನ
ರಾಶಿ ಸೂರೆ ಮಾಡಿದಿ । ಸನ್ಮೋಹದದಿ ೫

೧೫೩

ಮಂಗಳಂ ಮಂಗಳಂ ಜಯ
ಮಂಗಳಂ ಶ್ರೀ ಸುಶೀಲೇಂದ್ರ ಸನ್ಮುನಿಪ ಪ

ದಾತ ಧರಾಮರ । ವ್ರಾತ ವಿನುತ ಯತಿ
ನಾಥ ಶ್ರೀ ರಾಯರ ಪ್ರೀತ ಪ್ರಖ್ಯಾತ ೧

ಯತಿವರ ನತಸುರ ಕ್ಷಿತಿರುಹ ಜಿತ ರತಿ
ಪತಿ ಶರ ಸುಕೃತೀಂದ್ರ ಸುತ ಸೂರಿವರಿಯ ೨

ಸೋಮಧರಾರ್ಚಿತ । ಶಾಮಸುಂದರ ಮೂಲ
ರಾಮಪದಾರ್ಚಕ ಕೋಮಲಕಾಯ ೩

೧೫೪

ವರ್ಣಿಸಲು ಸಾಧ್ಯವೆ ಧರೆಯೊಳಿನ್ನು
ಗುರುವರ್ಯ ಸುಶೀಲೇಂದ್ರತೀರ್ಥರ ಮಹಿಮೆಯನ್ನು ಪ

ಭಾನುನಂದನನಂತೆ ದೀನ ಮಾನವರಿಗೆ
ಸಾನುರಾಗದಿ ಕೊಡುವ ದಾನ ನೋಡಿ ॥
ಏನು ಹೇಳಲಿ ದಿವಿಜಧೇನು ಭೂರುಹಮಣಿ
ಕ್ಷೋಣಿಯೊಳು ಜಡಪಶು ರೂಪ ತಾಳಿದವು ೧

ಪರ ಮಠಾಧೀಶರು ಪರಿಪರಿಯಲಿಂದವರ
ಪರಮ ಔದಾರ್ಯಗುಣ ಪರೀಕ್ಷಿಸುತಲಿ
ಬೆರಳು ಕಚ್ಚುತಲಿ ಬೆರಗಾಗಿ ಜಗದೊಳಗೆ
ಸರಿ ಇವರಿಗಿಲ್ಲೆಂದು ಶಿರದೂಗಿ ಹೊಗಳಿದರು ೨

ಧೀಮಂತ ಜನರೊಡೆಯ ಶ್ರೀಮಂತ ಮಂದಿರದ
ಸ್ವಾಮಿಗಳ ಪೂರ್ಣ ಪ್ರೇಮ ಪಡೆದು ।
ತಾಮರಸ ಭಾವ ಪೂಜ್ಯ ಶಾಮಸುಂದರ ಮೂಲ
ರಾಮ ಮೂರ್ತಿಯನು ಭೂಮಿಯೊಳು ಮೆರೆಸಿದರು ೩

೧೫೫

ಪಾಲಯಮಾಂ ಸುಶೀಲೇಂದ್ರ ಸನ್ಮಹಿಮ
ಶಾಲಿ ಶ್ರೀವರದ ಕೂಲ ನಿವಾಸ ಪ

ಅನಿಲಮತಾಂಬುಧಿ । ಅನಿಮಿಷ ಧೀರ
ಅನುಪಮ ಚರಿತ ಸದ್ಗುಣ ಗಂಭೀರ
ಮುನಿ ಸುವೃತೀಂದ್ರ ಸನ್ಮಾನಸ ನಿಲಯ ೧

ಕರುಣ ಭರಿತ ಶರಣು ಸುಪ್ರೀತ
ಪರಮ ಪುರುಷ ಸುವೃತೀಂದ್ರ ಕುಮಾರ
ಪರಮತ ಪರ್ವತ ಕುಲಿಶ ಸುಧೀರ ೨

ಕೋವಿದರೊಡೆಯ ಪಾವನಕಾಯ
ಭೂ ವಿಭುದಾವಳಿ ಸೇವಿತ ಸದಯ
ಶ್ರೀವರ ಶಾಮಸುಂದರಗತಿ ಪ್ರೀಯ ೩

೧೫೬

ನಮೋ ನಮೋ ಗುರು ಸುಶೀಲೇಂದ್ರ । ಶ್ರೀ ಸಂ
ಯಮಿ ಕುಲೋತ್ತಮ ಮಧ್ವಮತ ಸುಮತಾಬ್ಧಿ ಚಂದ್ರ ಪ

ಶ್ರೀ ಸುವೃತೀಂದ್ರ ಕುಮಾರ । ಜಿತ ಪೂತರ
ಭಾಸುರ ಚರಿತ ಉದಾರ
ಭೂಸುರ ಸೇವಿತ ಧೀರ । ಮೂಲ
ದಾಶರಥಿಯ ಪಾದಾಂಭೋಜ ಭಾರ ೧

ಶ್ರೀರಾಘವೇಂದ್ರ ಪ್ರಿಯ ಗುರುವರದ
ತೀರ ಶೋಭಿಪ ರಿತ್ತಿ ಸುಕ್ಷೇತ್ರ ನಿಲಯ
ವಾರಿಜ ಸಖ ನಿಭಕಾಯ । ಭವ ।
ದೂರ ದಯಾಂಬುಧಿ ದ್ವಿಜಕುಲ ಪರಿಯ ೨

ಶಾಮಸುಂದರ ದಾಸಾಗ್ರಣಿಯೆ । ಬುಧ
ಸ್ತೋಮವಂದಿತ ಪದನತ ಸುರಮಣಿಯೆ
ಈ ಮಹಿಯೊಳು ನಿನಗೆಣೆಯೆ । ಮಮ
ಸ್ವಾಮಿ ಕುಮತ ಕುಲತಮಕೆ ದ್ಯುಮಣಿಯೆ ೩

೧೫೭

ಗುರುರಾಯನೆ ಪಾಹಿ ಪಾಹಿ ।
ಕರುಣದಲಿ ಬಾರೋ ನೀ ಬೇಗನೆ ಪ

ದಯಾಸಾಗರ ಭಯ ದೂರ ಧೀರ
ಸುಯಮೀಂದ್ರ ಪ್ರಿಯ ೧

ಮಂತ್ರಾಲಯಾ ಆಲಯಾಧ್ವಾಂತಾರಿ ತೇಜ
ಶಾಂತದಿ ಶೀಲಾ ೨

ವರ ಶಾಮಸುಂದರನಂಘ್ರಿಯ
ನೆರೆ ಪೂಜಿಸುವ ಶ್ರೀ ರಾಘವೇಂದ್ರ ೩

೧೫೮

ಕಾಯೋ ಜಿತಾಮಿತ್ರ । ಯಮಿಕುಲ ನಾಯಕ ಸುಚರಿತ್ರ ಪ

ಕಾಯೊ ಕಾಯೊ ಜಿತಕಾಯಜಾತ ಶಿತ
ಕಾಯೊ ನಿನ್ನ ಪದ ತೋಯಜಕೆರಗುವೆ ಅ.ಪ

ಅಭಯದಾತನೆಂದು ತ್ವತ್ಪದಕಭಿನಮಿಸುವೆ ಬಂದು
ಕುಭವ ಕುಧರ ಪವಿ ಶುಭ ಗುಣನಿಧಿ ಗುರು ।
ವಿಭುದೇಂದ್ರ ಕರ ಅಬುಜ ಸಂಭೂತ ೧

ಮೌನಿ ಕುಲಾಧೀಶ । ಪ್ರಾರ್ಥಿಪೆ ಭಾನಪ್ರಕಾಶ
ದೀನಜ ನಾಮಕರ ಧೇನು ಪುರಾತನ
ಗೋನದ ತರು ನಿಜ ತಾಣಗೈದ ಗುರು ೨

ತುಂಗಮಹಿಮ ಭರತ । ಕುಮತ ದ್ವಿಜಂಗಮ ದ್ವಿಜನಾಥ
ಮಂಗಳ ಕೃಷ್ಣ ತರಂಗಿಣಿ ಭೀಮಾ
ಸಂಗಮದಲಿ ಸಲೆ । ಕಂಗೊಳಿಸುವ ಗುರು ૩

ಮರುತ ಸುಮತ ಶರಧಿ । ಸುಧಾರಕ । ದುರಿತ ಕದಳಿದ್ವಿರದಿ
ಧರಣಿ ದಿವಿಜ ಪರಿವಾರ ನಮಿತ ನಿಜ
ಕರುಣಿ ನಂಬಿದೆನು ಮರಿಯದೆ ನಿರುತ ೪

ಕಂದುಕೊರಳ ವಿನುತ । ಶಾಮಸುಂದರಾಂಘ್ರಿ ದೂತ
ಪೊಂದಿದ ಜನರಘ ವೃಂದ ಕಳಿವ ರಘು
ನಂದನ ಮುನಿಮನ ಮಂದಿರವಾಸ ೫

೧೫೯

ನಿತ್ಯ ವ್ಯಾಸತತ್ವಜ್ಞರಂಘ್ರಿ ಭಜಿಸೊ । ಕೃತಕೃತ್ಯನೆಂದೆನಿಸೊ ।
ಎತ್ತಿದ ಮಾನವ ಜನ್ಮ ಸಾರ್ಥಕೆನಿಸೊ । ಪುರುಷಾರ್ಥವ ಗಳಿಸೊ ಪ

ಮೂರವತಾರನ ಮತದೊಳು ಜನಿಸಿದರು
ಮೂರನು ತ್ಯಜಿಸಿದರು
ಮೂರು ಮಠದಿ ಯತ್ಯಾಶ್ರಮ ಧರಿಸಿದರು
ಹರಿಯನು ಒಲಿಸಿದರು
ಮೂರು ಹತ್ತರಿಗೆ ಮುಖವಾಗಿರುತಿಹರು
ಇವರಿಗೆ ಸಮರ್‍ಯಾರೊ ೧

ಮಾನವ ಸ್ಮೃತಿ ಮೊದಲಾದ ಗ್ರಂಥ ಗೈದ
ದ್ವಿಜರಿಗೆ ಬೋಧಿಸಿದ ॥
ಸಾನುರಾಗದಲಿ ಜ್ಞಾನಾಮೃತವೆರೆದ
ದಶ ದಿಕ್ಕಿಲಿ ಮೆರೆದ ।
ಏನು ಪೇಳಲಿ । ಇವರ ದಿವ್ಯಪಾದ ।
ಸೇವಿಪರಿಗೆ ಮೋದ ೨

ಶಾಮಸುಂದರನ ಕವನದಿ ಕೊಂಡಾಡಿ
ಬಹಿರಂತರ ನೋಡಿ ॥
ಸೋಮಪುರದಿ ದ್ವಿಜ ಸ್ತೋಮದಿಂದ ಕೂಡಿ
ಇರುವರು ಮನೆ ಮಾಡಿ
ಈ ಮಹಾತ್ಮರನು ನರನೆಂದವ ಖೋಡಿ
ಸಂದೇಹ ಬ್ಯಾಡಿ ೩

೧೬೦

ಕಾಯೊ ಕಾಯೊ ಜಿತಕಾಯ ಗುರು ಬಾದ-
ರಾಯಣ ತತ್ವಜ್ಞರಾಯ ಪ

ನಾ ಯಾರಿಗೆ ಬಿನ್ನೈಪೆ । ಹೇಯ ಸಂಸಾರದ
ಮಾಯವ ಬಿಡಿಸಿ ವಿಧೇಯನೆಂದರಿದೆನ್ನ ಅ.ಪ

ಎರಡೊಂದು ಮಠದಲಿ ಧರಿಸಿ ತೂರ್ಯಾಶ್ರಮ
ಸಿರಿಯರಸನ ದಿವ್ಯ ಮೂರ್ತಿಗಳ
ಕರದಿಂದ ಪೂಜಿಸಿ । ಮರುತ ದೇವನ ಮತ
ಪರಮಾನಂದವೆಂದು ಧರೆಗೆ ಬೀರಿದ ಕರುಣಿ ೧

ಜ್ಞಾನಿಗಳರಹುವ । ವಾಣಿಯಿಂದಲಿ ದೇ
ವಾನನ ನೀನೆಂದು ನಾ ನಂಬಿದೆ
ಮೌನಿವರಿಯ ಎನ್ನ । ಹೀನಪಾತಕವೆಂಬ
ಕಾನನ ದಹಿಸೆಂದು । ಸಾನುರಾಗದಿ ನೋಡಿ ೨

ಭೂಸುರ ಪರಿಪಾಲ । ಶ್ರೀ ಶಾಮಸುಂದರನ
ಲೇಸಾಗಿ ಒಲಿಸುತಲಿ ಕಿಟಜದಲಿ
ಭಾಸುರ ಘನವೇಣಿ । ಭೇಶಪುರದಿ ನೆಲಸಿ
ದಾಸರ ಮನದಭಿಲಾಷೆ ನೀಡುವ ದಾನಿ ೩

೧೬೧

ಪುರಂದರ ಗುರುರಾಯಾ ಪಿಡಿಯೊ ಕೈಯಾ ಪ

ಧಾರುಣಿಯೊಳು ಚಿನಿವಾರನಾಗಿ ಅವ
ತಾರ ಮಾಡಿದ ಸದಯಾ ೧

ಕಡು ಲೋಭದಿ ನೀ ನಡೆಯಲು ಮಡದಿಯಿಂ
ಪಡೆದೆಯೋ ಹರಿಕೃಪೆಯಾ ೨

ಧನ ಕನಕಾದಿಗಳ ತೃಣಕೆ ಬಗೆದು ದ್ವಿಜ
ಗಣಕೆ ನೀಡಿದಯ್ಯ ಪಿಡಿ ಕೈಯ್ಯ ೩

ವ್ಯಾಸರಾಯರುಪದೇಶವ ಪೊಂದಿದ
ನೀ ಸುರನಿಭ ಕಾಯಾ ೪

ದೃಹಿಣಿಕುಮಾರ ಮಹಿತ ದೃತಕರ
ಮಹಿ ಸುಮನಸರೊಡೆಯಾ ೫

ನರಕದಿ ನರಳುವ ನರರುದ್ಧರಿಸಿದ
ಹರಿಶರಣ ಶಿರಿಯಾ ೬

ಸರಳ ಕನ್ನಡದಿ ಮರುತ ಸುಶಾಸ್ತ್ರದಿ
ತಿರುಳು ತಿಳುಹಿದಾರ್ಯ ೭

ಸೂರಿವರೇಣ್ಯನೆ ಶೌರಿಯ ಕೂಡಿ
ತೋರಿದ ಶುಭ ಚರಿಯಾ ೮

ಗೋಮಿನಿ ನಾಯಕ ಕಾಮಿತದಾಯಕ
ಶಾಮಸುಂದರ ಪ್ರೀಯಾ ೯

೧೬೨

ಪರಿಪಾಲಿಸು ದಯದಿ ನಿರುತ ದಾಸ ಪುರಂದರ ಗುರುವೆ
ಧರ್ಮಪಥವನು ತೋರಿ ಉದಾರಿ ಪ

ಸುರ ಮೌನಿಯೆ ಮುದದಿ ಹರಿನಾಮವಾ ಘನ ಬೀರುತಾ
ನಿರಯಾ ಪಾತ್ರರ ಸಲಹಿದಿ ನೀ ೧

ಬಾಣಾಲಕ್ಷಕೆ ಪಾದನ್ಯೂನ ಕವನ ನೀ ವಿರಚಿಸುತಾ
ವನಜನಾಭನ ಸ್ತವಿಸಿದಿ ನೀ ೨

ಸಿರಿ ಶಾಮಸುಂದರನಾ ಚರಣಾಬ್ಜಕಾರಡಿಯಂದದಿ
ಚರಿಪ ಜ್ಞಾನಿಯೆ ನಮಿಸುವೆನು ೩

೧೬೩

ಜೋ ಜೋ ಜೋ ಜೋ ಪುರಂದರರಾಯಾ
ಜೋ ಜೋ ಜೋ ಜೋ ಪರಮೇಷ್ಟಿ ತನಯಾ
ಜೋ ಜೋ ಜೋ ಜೋ ಪಾವನ್ನ ಕಾಯಾ
ಜೋ ಜೋ ಜೋ ಜೋ ಸುರಮುನಿವರ್ಯಾ ಪ

ಜನಿಸುತ ಜಗದೊಳು ಚಿನಿವಾರನೆನಿಸುತ
ಘನ ಲೋಭಿಯಾಗಿರೆ ವನಜನಾಭನು ಬಂದು
ಧನವನು ಯಾಚಿಸೆ ಕೊಡದೆ ನೂಕಿಸಿ ನಿಜ
ವನಿತೆಯಿಂದಲಿ ಜ್ಞಾನವ ಪಿಡಿದಾತಾ ೧

ದೈಶಿಕಾಗ್ರಣಿಯಾದ ವ್ಯಾಸರಾಯರುಪ
ದೇಶವ ಕೈಕೊಂಡು ಭಾಸುರ ಕನ್ನಡ

ಭಾಷೆಯಲಿ ವಿಧ ವಿಧ ವಾಸುದೇವನ ಮಹಿಮೆ
ಲೇಸಾಗಿ ಸ್ತವಿಸಿದ ದಾಸ ಕುಲೇಂದ್ರಾ ೨

ತಾಮರಸಾಪ್ತಜ ಧಾಮದಿ ಬಳಲುವ
ಪಾಮರ ಜನರಿಗೆ ಶ್ರೀ ಮನೋಹರನಾದ
ಶಾಮಸುಂದರ ಹಿರಿನಾಮ ಬೀರುತ
ಪ್ರೇಮದಿ ಸಲಹಿದ ಹೇ ಮಹಾ ಮಹಿಮಾ ೩

೧೬೪

ವಿಜಯರಾಯರ ಪಾದವ ನೀ
ಭಜಿಸಿ ಬದುಕೆಲೊ ಮಾನವ ಪ

ವೃಜಿನವೆಲ್ಲವ ಕಳೆದು ಕರುಣದಿ ।
ಅಜನನಯ್ಯನ ತೋರುವ ಅ.ಪ

ಜಗಕೆ ಹರಿ ಪರನೆಂದು ತಾ ಭುಜ
ಯುಗಗಳೆತ್ತಿ ಸಾರಿದಾ ॥
ಭೃಗು ಮುನಿ ಇವರೆಂದು ಭಾವಿಸಿ
ಮಿಗೆ ಸುಭಕ್ತಿಲಿ ಸರ್ವದಾ ೧

ವರಹಜಾ ತಟದಲ್ಲಿ ಚೀಕಲ ।
ಪರವಿ ಗ್ರಾಮದಿ ಜನಿಸಿದ ॥
ಪರಿ ಪರಿಯಲನುಭವಿಸಿ ಬಡತನ
ಜರಿದು ಭವ ವೈರಾಗ್ಯ ಧರಿಸಿದ ೨

ಭಕುತಿ ಪೂರ್ವಕವಾಗಿ ಬಿಡದಲೆ ।
ಸಕಲ ಕ್ಷೇತ್ರವ ಚಲಿಸಿದಾ ॥

ಮುಕುತಿ ಸುಖದಾತಾರನಾದ ।
ಲಕುಮಿ ರಮಣನ ತುತಿಸಿದಾ ೩

ತಾ ಸುಸ್ವಪ್ನದೊಳೊಂದು ದಿನ ಶ್ರೀ
ವ್ಯಾಸ ಕಾಶಿಗೆ ತೆರಳಿದಾ ॥
ವಾಸುದೇವನ ಕಂಡು ನಮಿಸಿ
ಲೇಸು ವರ ಸ್ವೀಕರಿಸಿದಾ ೪

ಪುರಂದರಾರ್ಯರ ಕವನಗಳು
ಮೂರೆರಡು ಲಕ್ಷಕೆ ತ್ರಯಪದ
ಕೊರತೆ ಇರಲವರಾಜ್ಞೆಯಿಂದಲಿ
ಬರೆದು ತಾ ಪೂರೈಸಿದ ೫

ಬಾಲೆಯೋರ್ವಳು ಬಂದು ಪ್ರಾರ್ಥಿಸೆ
ಕೇಳುತಾಕೆಯ ಪತಿಯನು
ಕಾಲ ಪಾಶವ ಬಿಡಿಸಿ ಕರುಣದಿ
ಪಾಲಿಸಿದ ಸುಮಹಾತ್ಮರ ೬

ಶ್ರೀ ಮನೋಹರ ಶಾಮಸುಂದರ
ನಾಮ ಮಹಿಮೆಯ ವಿಧ ವಿಧ
ಭೂಮಿ ಸುಮನಸ ಸ್ತೋಮಕನುದಿನ
ಪ್ರೇಮದಿಂದಲಿ ಬೀರಿದ ೭

೧೬೫

ಧ್ಯಾನಿಸೋ ಮಾನವಾ ದೀನೋದ್ಧಾರಿ ವಿಜಯದಾಸರನಾ ।
ದೇವಮಾನಿತರು ಧೇನು ಸಮ ಪ.

ಭೃಗುಮುನಿಯೆ ಈ ಜಗದಿ । ಸಂಜನಿಸಿ ಮದಡರ ಪಾಲಿಸಿ
ಘೋರ ಭವಕ್ಲೇಶ ಪರಿಹರಿಸಿ ಸುಖವಾ ಬೀರಿದಾ ೧

ಗುರು ಪವನ ಶಾಸ್ತ್ರವ ಕನ್ನಡದಿ ವಿರಚಿಸಿ ।
ಜ್ಞಾನಪಥ ತೋರಿ ಶಿರಿವದನ ಮಹಿಮೆ ಸಾರಿದಾ ೨

ಶ್ರೀವರ ಶಾಮಸುಂದರನ ಸ್ತವಿಸಿ ಸಂಸೇವಿಸಿ ।
ಭಾವದಲಿ ನೋಡಿ ನಲಿದವರು ಕರುಣಾಶಾಲಿ ೩

೧೬೬

ದಾಸರಾಯ ವಿಜಯದಾಸರಾಯ ।
ದೋಷವೆಣಿಸದೆ ಸದಾ ಪೋಷಿಸು ಕರುಣದಿ ಪ

ಸಕಲ ಜಗತ್ತಿಗೆ ಲಕುಮೀಶ ಪರನೆಂದು
ಮುಖವಾಚರಿಪ ಮುನಿ ನಿಕರಕೆ ಸಾರಿದ ೧

ಜ್ಞಾನಿ ಶಿರೋಮಣಿ ಧೇನುಪಾಲಾರ್ಯರ ।
ಮಾನಸ ಕುಮುದಕೆ ಏಣಾಂಕನೆನಿಸಿದ ೨

ಮುದ ತೀರ್ಥಾಗಮ ಮರ್ಮ ಮಧುರ ಕನ್ನಡದಲಿ
ವಿಧ ವಿಧ ರಚಿಸಿದ ಸದಮಲ ಸುಚರಿತ್ರ ೩

ಬೇಸಿಗೆ ಬಿಸಲೊಳು ರಾಸಭ ತೃಷೆಯಿಂದ ।
ಘಾಸಿಯಾಗಿರೆ ಜಲಪ್ರಾಶನಗೈಸಿದ ದಾಸರಾಯ ೪

ನಿಷ್ಠೆಯಿಂದಲಿ ಮನ ಮುಟ್ಟಿ ಭಜಿಪರಿಗೆ
ಇಷ್ಟಾರ್ಥಗರೆಯುವ ಪುಟ್ಟ ಬದರಿವಾಸ ೫

ತಪ್ಪದೆ ಭಕ್ತಿಲಿ ಬರುವ ಭಕ್ತರಿಗೆಲ್ಲ
ತಪ್ಪು ಮನ್ನಿಸಿ ಭಜಿಪ ಭಕ್ತರಿಗೊಲಿದು
ಪೊರೆವ ಚಿಪ್ಪ ಶಿಖರನಿಲಯ ೬

ಪಾಮರನಾದೆನಗೆ ಶಾಮಸುಂದರ ಸ್ವಾಮಿ
ನಾಮಾಮೃತಪಾನ ಪ್ರೇಮದಿ ನೀಡಯ್ಯ ದಾಸರಾಯಾ ೭

೧೬೭

ಪಾಲಿಸೈ ಗೋಪಾಲರಾಯಾ ಶೀಲ ಭಕುತಿ ಜ್ಞಾನವ
ನಿತ್ಯ ಸಲಿಸುತ ಪ್ರಸನ್ನನಾಗಿ ಪ

ಓಡಿಸಿ ವಿಘ್ನವ ನೀಡು ವೈರಾಗ್ಯವ
ಬೇಡುವೆ ನಾ ಕೃಪೆ ಮಾಡಿ ಗತಿ ೧

ಆರ್ತರಭೀಷ್ಟೆಯ ಪೂರ್ತಿಪ ದಾನಿ
ಪ್ರಾರ್ಥಿಸುವೆ ಶುಭ ಮೂರ್ತಿ ಸದಾ ೨

ಶಾಮಸುಂದರ ಸ್ವಾಮಿಯ ನಿಜ ದಾಸ
ಮೌನಿಯ ಘನ ಪ್ರೇಮಾನ್ವಿತಾ ೩

೧೬೮

ಬಾಗಿ ಬೇಡುವೆ ಪಿಡಿಯೊ ಬೇಗ ಕೈಯಾ
ಭಾಗವತ ಜನಪ್ರೀಯ ಭಾಗಣ್ಣದಾಸಾರ್ಯ ಪ

ದ್ವಿಜ ಕುಲಾಬ್ಧಿಗೆ ಪೂರ್ಣ । ದ್ವಿಜರಾಜನೆಂದೆನಿಪ
ವಿಜಯವಿಠಲದಾಸರೊಲುಮೆ ಪಾತ್ರ ॥
ನಿಜ ಮನದಿ ನಿತ್ಯದಲಿ । ಭುಜಗಶಯನನ ಪಾದ
ಭಜಿಪ ಭಾಗ್ಯದಿ ನಲಿವ । ಸುಜನರೊಳಿಡು ಎಂದು ೧

ನೀನೇವೆ ಗತಿಯೆಂದ । ದೀನರಿಗೆ ನಾನೆಂಬ
ಹೀನಮತಿ ಕಳೆದು ಪವಮಾನ ಪಿತನ ।

ಧ್ಯಾನಗೈಯ್ಯುವ ದಿವ್ಯ ಜ್ಞಾನ ಮಾರ್ಗವ ತೋರಿ ।
ಸಾನುರಾಗದಿ ಪೊರೆವ । ದಾನಿ ದಯಾ ವಾರಿಧಿಯೆ ೨

ಮಂದಜನ ಸಂದೋಹ । ಮಂದಾರ ತರುವಿಜೇತ ॥
ಕಂದರ್ಪ ಕಾರುಣ್ಯಸಿಂಧು ಬಂಧೋ ॥
ಕಂದನಂದರಿದೆನ್ನ । ಕುಂದು ಎಣಿಸದೆ ಹೃದಯ
ಮಂದಿರದಿ ಶ್ರೀ ಶಾಮಸುಂದರನ ತೋರೆಂದು ೩

೧೬೯

ರಂಗವಲಿದ ಗುರುರಾಯರ ನೀ ನೋಡೋ ।
ಅಂತರಂಗದಿ ಪಾಡೋ
ಭಂಗ ಬಡಿಪ ದುರಿತಂಗಳ ಈಡ್ಯಾಡೋ
ಸತ್ ಸಂಗವ ಬೇಡೋ ಅ.ಪ

ಹಿಂದೆ ಮೂರೊಂದವತಾರ ಧರಿಸಿದಾತ
ಇದು ಹಿರಿಯರ ಮಾತ ।
ಬಂದ ಮರಳಿ ಮಹೀತಳದಿ ಜಗನ್ನಾಥ
ದಾಸಾರ್ಯ ಪ್ರಖ್ಯಾತ ॥
ತಂದೆ ನಮಗೆ ತಿಳಿ ಎಂದೆಂದಿಗು ಎಂದೆಂದಿಗು
ಈತ ಆನಂದ ಪ್ರದಾತ ೧

ಬಣ್ಣಿಸಲೆನಗಿನ್ನೊಶವೆ ಇವರ ಚರಿಯ
ಕಣ್ಣುಗಳಿಂದಲಿ ಕಾಣುತ ಪೂರ್ಣಯ್ಯ ತಾನಾಗಿ ವಿಧೇಯ
ಧನ್ಯನೆನಿಸಿ ಸತ್ಪುಣ್ಯ ಪಡೆದುದರಿಯ
ಪುಸಿಯಲ್ಲವೊ ಖರಿಯ ೨

ದಾಸವರ್ಯರಾ ವಾಸಗೈದ ಸ್ಥಾನ
ಗಯ ಕಾಶಿ ಸಮಾನ

ಲೇಸು ಭಕ್ತಿಯಲಿ ಸೇವಿಸಲನುದಿನ ಕೊಡುವುದು ಸುಜ್ಞಾನ
ಈ ಸನ್ಮಹಿಮರ ದೂಷಿಸುವನೆ ಶ್ವಾನ । ಯಾತಕೆ ಅನುಮಾನ ೩

ನಿಗಮವಾಣಿಯ ಸಾರ ನಿರ್ಮಿಸಿರುವ ದೇಹಾಖ್ಯ ರಥವ
ಸೊಗಸಿಲಿಂದ ತಾನೇರಿ ನಗುತ ಬರುವ ಚತುರ್ದಿಕ್ಕಿಲಿ ಮೆರೆವ
ಮಿಗೆ ವಿರೋಧಿಸುವ ಪಾಪಿಗೆ ಪಲ್ಮುರಿವ ಪೊಗಳುವರಘ ತರಿವ ೪

ಶಾಮಸುಂದರನ ಸುಕಥಾಮೃತಸಾರ । ರಚಿಸಿದ ಬಹು ಚತುರ
ಪಾಮರ ಜನರ ಪ್ರೇಮದಿ ಉದ್ಧಾರ ಮಾಡಲು ಗಂಭೀರ
ಶ್ರೀಮಾನ್ ಮಾನವಿಕ್ಷೇತ್ರನೆ । ನಿಜಾಗಾರವೆಂದೆನಿಸಿದ ಧೀರ ೫

೧೭೦

ಗುರುಗಳ ಭಜಿಸೋ । ದುರಿತ ತ್ಯಜಿಸೋ ।
ವರ ಮಾನವಿ ಪುರದಿ ಮೆರೆವ ಪ

ಆದಿಯಲ್ಲಿ ಪ್ರಹ್ಲಾದನ ಸಹೋದರನೀತ ।
ಯೋಧ ಶಲ್ಯ ದ್ವಾಪರದಿ ರಾಧೇಯಗೆ ಸೂತ ।
ವಾದಿರಾಜ ಪುರಂದರ ದಾಸಾರ್ಯರ ಪ್ರೀತ ।
ಸಾಧು ರಂಗವೊಲಿದ ಭಾಗವತರತಿ ಖ್ಯಾತ ೧

ತ್ವರವಾಟದಿ ಕರುಣಿಕ ನರಸಾರ್ಯರ ಪುತ್ರ ।
ಧರೆಸುರ ಪರಿಪಾಲಕ ವರದೇಂದ್ರ ಛಾತ್ರ
ತುರ ರಕ್ಷಕ ದಾಸರಾಯರ ಕರುಣಕೆ ಪಾತ್ರ
ದುರಿತಾಟವಿ ವೀತಿ ಹೋತ್ರ ಘನ ಸುಚರಿತ್ರ ೨

ನೇಮದಿಂದ ಭಜಿಸುವರ ಕಾಮಿತ ಫಲವಾ ।
ಪ್ರೇಮದಿಂದ ಗರೆಯಲು ಸ್ತಂಭ ದೊಳಿರುವಾ ॥

ಶಾಮಸುಂದರ ಸ್ವಾಮಿಯ ಕಥೆ ಪೀಯೂಷ ರಸವ ।
ಭೂಮಿ ವಿಬುಧ ಸ್ತೋಮಕೆರೆದ ಮಹಾನುಭಾವ ೩

೧೭೧

ಗುರುರಾಯ ಗುರುರಾಯ
ಮರಿಯದೆ ಪ್ರತಿದಿನ ಪರಿಪಾಲಿಸು ಮದ್ ಪ

ಸೃಷ್ಟಿಯೊಳಗೆ ಬ್ಯಾಗವಾಟ ಗ್ರಾಮದಲಿ
ವಿಠಲನಾಜ್ಞದಿ ಪುಟ್ಟಿ ಮೆರೆದ ಮದ್ ೧

ಕಂತು ಜನಕ ಶ್ರೀಕಾಂತ ಕಥಾಮೃತ
ಗ್ರಂಥ ವಿರಚಿಸಿದ ಶಾಂತ ಮಹಾಂತ ೨

ಕ್ಷೋಣಿಗಧಿಕ ಶ್ರೀ ಮಾನವಿ ಪುರ ನಿಜ
ಸ್ಥಾನವಗೈದ ಮಹಾನುಭಾವ ಮದ್ ೩

ನಿರುತದಿ ಸೇವಿಪ ಚರಣಜನಕೆ ಸುರ
ತರುವಿನ ತೆರ ಘನವರಿವ ಗರಿವ ಮದ್ ೪

ತಂದೆ ನಿನ್ನ ಪಾದ ಪೊಂದಿ ಭಜಿಸದಲೆ
ಮಂದನಾದೆ ವಸುಂಧರೆಯೋಳ್ ಮದ್ ೫

ನಿನ್ನವ ನಾನೆಂದೆನ್ನುತ ಮನ್ನಿಸು
ಘನ್ನ ಮಹಿಮೆ ಕಾರುಣ್ಯಶರಧಿ ಮದ್ ೬

ನಂಬಿದೆ ತವ ಪಾದಾಂಬುಜ ಮನ್ಮನ
ದ್ಹಂಬಲ ಪೂರ್ತಿಸು ಸ್ತಂಭ ನಿಲಯ ಸದ್ ೭

ಭಾರತಿಪತಿ ಮತ ವಾರಿಧಿ ಚಂದ್ರಮ
ತೋರುತವಾಂಘ್ರಿ ಸರೋರುಹ ಮದ್ ೮

ಪೋಷಿಸು ಎನ್ನಯ ಕ್ಲೇಶ ತರಿದು ಹರಿ
ದಾಸರ ದಾಸರ ದಾಸನೆನಿಸೊ ಮದ್ ೯

ಒಡೆಯನೆ ನೀ ಕೈಯ ಪಿಡಿಯದಿರಲು ತವ
ಪೊಡವಿಪ ನಾಮಕೆ ಗಡ ಕುಂದಿಡುವೆನು ಮದ್ ೧೦

ಭೂಮಿ ಸುರೋತ್ತುಮ ಸ್ವಾಮಿ ನಿಗಮ ನುತ
ಶಾಮಸುಂದರನ ಪ್ರೇಮ ಸುಪಾತ್ರಾ ಮದ್ ೧೧

೧೭೨

ಜಗನ್ನಾಯಕ ಗುರು ಪಾಹಿಮಾಂ । ಅಘನಾಶಕ
ವರದಾಯಕಾ । ಪ

ವರ ಮಾನವಿ ಪುರ ಮಂದಿರ
ಕರುಣ ಭರಣ ಶಾಂತ ಮೂರುತಿ ೧

ನಿರುತ ನಿನ್ನಯ ಚರಣ ನಂಬಿದೆ
ದುರಿತ ತರಿದು ತೋರೋ ಸತ್ಪಥ ೨

ಭೂಮಿಜಾ ವರ ಶಾಮಸುಂದರ
ನಾಮಗರಿಯೋ ಪ್ರೇಮ ಸಾಗರ ೩

೧೭೩

ರಂಗವಲಿದ ರಾಯರ ಪಾಡಿರೆ ಪ

ಸಲೆ ನಂಬಿದವರ ಕಲುಷಗಳೋಡಿಸಿ
ಸಲುಹಲು ಸ್ತಂಭದಿ ನೆಲೆಸಿದಂಥ ರಾಯರ ೧

ಬಾಗಿ ನಮಿಸಿ ಮುಂಭಾಗದಿ ಭಜಿಸುವ
ಭಾಗವತರ ಭವರೋಗ ಕಳೆವ ರಾಯರ ೨

ಚಾರುದೇಷ್ಣನವತಾರರಾದವರ
ಚಾರು ಪದಾಂಬುಜಕಾರಡಿ ಎನಿಸಿದ ರಾಯರ ೩

ನೂತನವಾಗಿಹ ಈ ತನುವೆಂಬುವ ವ
ರೂಥದಿ ಬಹ ಜಗನ್ನಾಥ ದಾಸರಾಯರ ೪

ಗೋಮಿನಿ ಮನೋಹರ ಶಾಮಸುಂದರನ
ನಾಮಾಮೃತ ದ್ವಿಜ ಸ್ತೋಮಕೆರೆದ ರಾಯರ ೫

೧೭೪

ಕಾಯೋ ಸರ್ವದ ನಂಬಿದೆ ತ್ವತ್ಪದ ಪ

ಕಾಯೊ ಕಾಯೊ ಜಗನ್ನಾಯಕ ಗುರುವರ
ಹೇಯ ಭವದಿ ಕಡೆ ಹಾಯಿಸಿ ಕರುಣದಿ ಅ.ಪ

ಜ್ಞಾನದಾಯಕ ನೀನೆಂದು ಪ್ರಾರ್ಥಿಪೆ । ದೀನ ರಕ್ಷಕ
ಮಾನಿತ ನಿನಗನುಮಾನವ್ಯಾತಕೆ ತವ
ಸೂನು ನಾನಲ್ಲವೆ । ಮಾನವಿ ನಿಲಯ ೧

ದಾಸವರ್ಯನೆ । ಭಾಸುರಸ್ತಂಭ ನಿವಾಸ ಧೀರನೆ
ಈ ಸಮಯದಿ ಷಡ್ದ್ವೇಷಿಗಳೆನ್ನತಿ
ಘಾಸಿಗೊಳಿಸುವರುದಾಸೀನ ಮಾಡದೆ ೨

ಸಾಧು ಶೀಲನೆ ಪ್ರಹ್ಲಾದನನುಜ ಸಹ್ಲಾದ ಶಲ್ಯನೆ
ವಾದಿರಾಜ ಶತಮೇಧ ನಾಮಾರ್ಯರ
ಪಾದಾರಾಧಕ ಭೇದ । ಬೋಧಕ ೩

ಭಾರತಿವರ ಕೃತ ಶಾಸ್ತ್ರ ಮರ್ಮವಿಚಾರ ಬಂಧೂರ
ಸಾರಸಭವ ಪಿತ । ಶ್ರೀ ರಮಾಪತಿ
ಶೌರಿ ಹರಿಕಥಾಮೃತಸಾರ ವಕ್ತಾರ ೪

ಶಾಮಸುಂದರವಿಠಲನ ಒಲಿಸಿದ
ಪ್ರೇಮಸಾಗರ ನೀ ಮರೆದರೆ
ಈ ಪಾಮರನಿಗೆ ಯಮ
ಧಾಮವೆ ಗತಿ ನಿಜ ಹೇ ಮಮ ಸ್ವಾಮಿ ೫

೧೭೫

ರಥವೇರಿ ಬರುತಿಹ ಗುರುರಾಯನಾ ನೋಡಮ್ಮಯ್ಯ ಪ

ಅತಿ ಸದ್ಭಕುತಿಲಿ ಸ್ತುತಿಸುವರಿಗೆ ಸತ್ಪಥವನೆ ತೋರುವ
ಕ್ಷಿತಿಪತಿದಾಸರೆ ಅ.ಪ

ತಿದ್ದಿ ಹಚ್ಚಿದ ನಾಮ ಮುದ್ರೆಗಳಿಂದಲೊಪ್ಪುತಿಹರೇ ನೋಡಮ್ಮಯ್ಯ ।
ಅರ್ಧಚಂದ್ರಸಮ ಫಣೆಯೊಳು
ತಿಲಕ ಶೋಭಿಪರೇ ನೋಡಮ್ಮಯ್ಯ ।
ಕ್ಷುದ್ರರ ಮುಖಕೆ ಬೀಗ ಮುದ್ರೆಯನೊತ್ತುತ ಸದ್ವೈಷ್ಣವರ
ನುದ್ಧರಿಸಿದ ಕರುಣೀ ೧

ವರಶ್ರುತಿ ಸಮ್ಮತರಥ ನಿರ್ಮಿತವಾಗಿಹುದೇ ನೋಡಮ್ಮಯ್ಯ ॥
ಸ್ಮರ ಪುರಹರ ಸಾರಥಿಯಾಗಿಹರೆಂದರಿತವರಿಗೆ
ಶುಭಗರೆವ ದಯಾನಿಧೇ ೨

ಶಾಮಸುಂದರನ ನಾಮ ಸುಧಾರಸವ ನೋಡಮ್ಮಯ್ಯ
ಶ್ರೀಮಾನ್ ಮಾನವಿ ಕ್ಷೇತ್ರವೆ ತವ ನಿಜ
ಧಾಮವೆಂದೆನಿಸಿ ಸುಸ್ತಂಭದೊಳಿಹರೇ ೩

೧೭೬

ಕರುಣಿಸಿ ಪಿಡಿಯೊ ಕೈಯ್ಯಾ । ಗುರು ರಂಗವೊಲಿದರಾಯ ಪ

ನಂಬಿದೆ ನಿನ್ನ ಚರಣ । ಬೆಂಬಿಡದೆ ಕಾಯೋ ಸತತ
ಸ್ತಂಭದಲಿ ನೆಲಸಿದಂಥ । ಕುಂಭಿಣಿಪ । ದಾಸವರ್ಯ ೧

ದೀನರ್ಗೆ ದಿವಿಜಧೇನು । ನೀನೆಂದು ಕ್ಷೋಣಿ ತಳದಿ
ಜ್ಞಾನಿಗಳು ಪೇಳಿದಂಥ ವಾಣಿಯನು ಸತ್ಯಮಾಡೊ ೨

ನಿನ್ನ ಸ್ಥಳವು ಪುಣ್ಯಕ್ಷೇತ್ರ । ನಿನ್ನಲ್ಲಿ ಸಕಲ ತೀರ್ಥ
ನಿನ್ನ ಕವನ ಮಧ್ವಶಾಸ್ತ್ರ । ನಿನ್ನವನು ನಿಜಕೃತಾರ್ಥ ೩

ಹರಿದಾಡುವಂಥ ಮನಸು । ಹರಿಯಲ್ಲಿ ಸ್ಥಿರವಗೊಳಿಸೊ
ಹರಿನಾಮ ಸುಧೆಯ ಕುಡಿಸೊ । ಹರಿವರನ ಮತವ ಪಿಡಿಸೊ ೪

ಮತಿಭ್ರಷ್ಟನಾಗಿ ನಿನ್ನ ಕೃತಿಗಳನು ಪಾಡದ್ಹೋಗಿ
ಕ್ಷಿತಿ ಭಾರನಾದೆ ಮುಂದೆ ಗತಿ ತೋರಿ ಸಲಹೊ ತಂದೆ ೫

ಹೆತ್ತವರು ಸುತನ ದೋಷ । ಕೃತ್ಯಗಳ ಕ್ಷಮಿಸದಿಹರೆ
ಚಿತ್ತೈಸು ಎನ್ನ ಮಾತ । ಉತ್ತಮರ ಸಂಗವಿತ್ತು ೬

ತಳೆದೇಳು ಜನುಮಗಳಲಿ । ಇಳೆಯೊಳಗೆ ಚರಿಪ ಸಮಯ
ಸುಳಿದಾಡು ಮತ್ತೊಮ್ಮೆ ಘೋರ ಕಲಿಬಾಧೆ ತಪ್ಪಿಸಯ್ಯ ೭

ಮಾನವಿಯ ಸ್ಥಾನದಲ್ಲಿ । ನೀನಿರಲು ನಿನ್ನ ಮರೆದು
ತಾನೆಲ್ಲಿ ಪೋದರೇನು । ಆ ನರಗೆ ಉಂಟೆ ಮೋದ ೮

ಕಂದರ್ಪಜನಕ ಶಾಮಸುಂದರ ಮೂರ್ತಿ ಹೃದಯ
ಮಂದಿರದಿ ತೋರೋ ದಾತ ವಂದಿಸುವೆ ನಿನ್ನ ಪದಕೆ ೯

೧೭೭

ಹರಿಕಥಾಮೃತಸಾರ ಸುರಸ ಗ್ರಂಥವ । ಧರಣಿ ಸುರರಲ್ಲದೆ
ದುರುಳ ಪಾಷಂಡಿಗಳರಿತು ಇದರ ಮರ್ಮ
ಹರುಷಿತರಾಗುವರೇ ಪ

ಹಿಮ ಮಯೂಖನ ನೋಡಿ ಕುಮುದ ಪುಷ್ಪದವೊಲು
ಕಮಲವರಳುವದೇ ॥
ಯಾಮಿ ಜನರಂದದಿ ದಿನಮಣಿಯುದದಿ
ತಿಮಿರರ್ಘ್ಯ ಕೊಡಬಲ್ಲದೇ ೧

ಚಿನ್ನದಾಭರಣಗಳಿಡಲು ದಾಸಿಯು ದೇವ
ಕನ್ನಿಕೆಯಾಗುವಳೇ
ಮನ್ನಣೆಯರಿಯದ ಮನುಜನ ಶಿರ
ಪುಣ್ಯ ಪುರುಷರಿಗೆರಗದೇ ೨

ಗಂಧವಾಹನ ಮತ ಪೊಂದದವರಿಗೆ
ಬಂಧ ತಪ್ಪುವದೇ ।
ಮಂದಮತಿಗೆ ಶಾಮಸುಂದರನ
ಮಂದಿರ ದೊರಕುವದೇ ೩

೧೭೮

ರಂಗವಲಿದ ರಾಯಾ ನೀ ಸತ್ಸಂಗ ಪಾಲಿಸಯ್ಯಾ ಪ

ಮಂಗಳಪ್ರದ ಪ್ರಥಮಾಂಗಾ ಪ್ರಥಮಾಂಗ ಮತಾಂಬುಧಿ
ತಿಂಗಳ ವರ ಕವಿ ಜಂಗುಳಿಗೆ ಅ.ಪ

ಬುಧಜನನುತ ಮನುಜಾ ಪಂಚವದಾನಾರ್ಯರ ತನುಜಾ
ಸದಯ ನಿನ್ನಯ ಪಾದ ಪದುಮವ ಭಜಿಸದೆ
ಅಧಮನಾದೆ ನಾ ಸದಮಲ ಕಾಯಾ ೧

ನುತಿಸುವೆ ಜಗದೊಡೆಯಾ ನಾಮಕ ಸತತ ಪಿಡಿಯೊ ಕೈಯ್ಯಾ
ಕ್ಷಿತಿಯೊಳು ಪೂರ್ವದಿ ಪತಿತರ ಸಲಹಲು
ಶತಕ್ರತುರಾಯರ ಸುತನೆನಿಸಿದ ಗುರು ೨

ವೃಂದಾರಕ ಸ್ತೋಮಾ ವಂದಿತ ನಂದನಂದನ ಶಾಮ
ಸುಂದರನೊಲುಮೆಲಿ ಛಂದದಿ ಸ್ತಂಬ ಸು
ಮಂದಿರದೊಳು ಘನ ನಿಂದು ಮೆರೆವ ಗುರು ೩

೧೭೯

ರಂಗವಲಿದ ದಾಸರಾಯ । ಸಾಧು
ಸಂಗವಿಡಿಸಿ ಕರುಣದಿ ಪಿಡಿ ಕೈಯ್ಯ ಪ

ಕುಂಭಿಣಿ ಸುರನಾಥ । ನಂಬಿದೆ ನಿನ್ನ ಪಾದ
ಬೆಂಬಿಡದಲೆ ಕಾಯೊ ॥
ಸ್ತಂಭ ಮಂದಿರ । ಕಂಬು ಕಂಧರ
ಭಕ್ತಮಂದಾರ ೧

ಹರಿಕಥೆ ಸುಧಾಸಾರ । ಸುರಸಗ್ರಂಥವ ಜಗದಿ ।
ವಿರಚಿಸಿರುವ ನಿನ್ನ ॥
ವರ ಉಪಕಾರ । ವರ್ಣಿಸಲಪಾರ ।
ಪರಮೋದಾರ ೨

ಸಾಮಗಾನ ವಿಲೋಲ । ಶಾಮಸುಂದರವಿಠಲ
ಸ್ವಾಮಿಯ ಭಕುತ । ನಿ ।
ಸ್ಸೀಮ ಪ್ರಹ್ಲಾದ । ಅನುಜ ಸಲ್ಹಾದ
ನೀಡೆನಗಲ್ಹಾದ ೩

೧೮೦

ಕರವ ಪಿಡಿ ಗುರುರಾಯ । ಶಿರಬಾಗಿ ಬೇಡುವೆ
ಪೊರೆಯೊ ಸತ್ಕವಿಗೇಯ । ನೆರೆ ನಂಬಿದೆನು ನೀ
ಮರೆಯದಿರು ಶುಭಕಾಯ । ಹೇ ಸೂರಿವರ್ಯ ಪ

ಉರಗಕೇತನ ಮೊರೆಯ ಲಾಲಿಸಿ
ತರಣಿಜನಿಗೆರಡೊಂದು ಯುಗದಲಿ
ಧುರದಿ ಸಾರಥಿಯಾಗಿ ಸ್ಯಂದನ
ಭರದಿ ನಡೆಸಿದ ಪರಮ ಪುರುಷನೆ ಅ.ಪ

ಶರಣು ಜನ ಸುರಧೇನು । ಹೇ ತಾತ ನೀ
ಮೂರೆರಡು ಜನುಮಗಳನ್ನು । ಕಳೆದು ಮ
ತ್ತುರುವ ಅವತಾರವನು ಭಕ್ತಿಪೂರ್ವಕ
ಪಿರಿಯರಾಜ್ಞದಿ ನೀನು ಪೂರೈಸಲಿನ್ನು
ಧರಣಿಯೊಳಗವತರಿಸಿ ನರರಿಗೆ
ಅರಿಯದಂದದಿ ಹರಿಯ ದಿಸೆಯೋಳ್
ಹರಿಯ ಸ್ಮರಿಸುತ ಚರಿಪ ದೊರೆ ತವ
ಚರಣ ದರುಶನಗರೆದು ಕರುಣದಿ ೧

ಬಿಡಿಸೊ ಎನ್ನ ಕ್ಲೇಶ ತಡಮಾಡದಲೆ ನೀ
ಕಡಿಯೊ ಈ ಭವ ಪಾಶ । ದೃಢಮನವ ಕೊಡು ನಿ
ನ್ನಡಿಗಳಲಿ ನಿರ್ದೋಷ । ನುಡಿಯ ಲಾಲಿಸಿ
ಬಿಡದೆ ಮಾಡುಪದೇಶ ಪೊಡವೀಶ ದಾಸ
ಒಡೆಯನೇ ನೀನಡಗಿ ಎನ್ನನು
ಕಡೆಗೆ ನೋಡಲು ಪಡೆದ ಜನನಿಯು
ಪಿಡಿದು ಬಾಲನ ಮಡುವಿನೋಳ್ ತಾ
ಬಿಡುವ ತೆರ ತವ ನಡತೆ ಎನಿಪುದು ೨

ಮಂದ ನಾ ನಿಜವಯ್ಯ । ಸಂದೇಹವಿಲ್ಲದೆ
ಕುಂದು ಎಣಿಸದೆ ಜೀಯ ಬಂದೆನ್ನ ಮನದಲಿ

ನಿಂದು ನೀ ಸಲಹಯ್ಯ ವಂದಿಪೆನು ಶ್ರೀ ಪು
ರಂದರಾರ್ಯರ ಪ್ರೀಯ ಆನಂದ ನಿಲಯ ೩

೧೮೧

ನಂಬಿ ಭಜಿಸೊ ನಿರಂತರ । ನೆರೆ ನಂಬಿ ಭಜಿಸು ಮನವೆ ಪ

ಕುಂಭಿಣಿನಾಥ ದಾಸಾರ್ಯ । ಸಹ್ಲಾದರಾ । ಶಲ್ಯಾಖ್ಯರಾ ಅ.ಪ

ಆದಿಯುಗದಿ ಪ್ರಹ್ಲಾದನನುಜ । ಸಹ್ಲಾದನೆಂದೆನಿಸಿದ ರಾಯರ ೧

ದ್ವಾಪರದಲ್ಲಿ ಶರಚಾಪಧಾರಿ । ಶಲ್ಯಭೂಪರೆನಿಸಿದ ರಾಯರು ೨

ಪುರಂದರರಾರ್ಯರ ಪುಟ್ಟ ತರಳರೆನಿಸಿ
ಭಾವಿ ಮರುತ ರಾಜರ ಪ್ರೀಯ ದೂತರ ೩

ಶೀಲ ಸುಜ್ಞಾನ ಮಹಿಮಶಾಲಿ ವಿಜಯಧೇನು
ಪಾಲದಾಸರ ದಯಪಾತ್ರರ ೪

ಡಿಂಗರೀತಗಮರಾಂಘ್ರಿಪರೆನಿಸಿದ
ರಂಗವಲಿದ ಗುರುರಾಯರ ೫

ದೀನ ಜನ ರಾಮರ ಧೇನುವೆಂದೆನಿಸಿದ ಮಾನವಿಕ್ಷೇತ್ರ ನಿವಾಸರ ೬

ಶ್ರೀ ಶಾಮಸುಂದರನ ಭಾಸುರಕಥೆ । ಪೀಯೂಷ
ಬುಧರಿಗೆರೆದ ರಾಯರ ೭

೧೮೨

ರಂಗವಲಿದ ರಾಯಾ ಸಜ್ಜನ ಸಂಗ ಪಾಲಿಸಯ್ಯಾ
ಮಂಗಳ ಚರಿತ ಕೃಪಾಂಗನೆ ಎನ್ನಂತ
ರಂಗದಿ ನಿಲಿಸುತ ತವಾಂಘ್ರಿ ಸೇವಕನೆಂದು ಅ.ಪ

ನತಜನ ಸುರಧೇನು ನೀನೆಂದು
ನುತಿಸಿ ವಂದಿಸುವೆನೋ
ರತಿಪತಿ ಪಿತ ನುತ ಕಥಾಮೃತ ಗ್ರಂಥದಿ
ಸತತ ಎನಗೆ ಮತಿ ಹಿತದಲಿ ಪ್ರೇರಿಸು ೧

ಧನ್ಯನ ನೀ ಮಾಡೋ ಕರುಣದಿ
ಮನ್ನಿಸಿ ಕಾಪಾಡೋ
ಘನ್ನ ಮಹಿಮಕಿನ್ನು ನಿನ್ನ ಹೊರತು
ಇನ್ನಾರು ಕಾವರರಿಯೆ ಕಾಣೆ ಗುರೋ ೨

ಮಂದಮತಿ ಬಿಡಿಸೋ ಈ
ಭವ ಬಂಧನ ಪರಿಹರಿಸೊ
ಇಂದಿರೆ ಪತಿ ಶಾಮಸುಂದರವಿಠಲ
ದ್ವಂದ್ವ ಪದದಿ ಮನ ಹೊಂದಿಸೊ ಪೋಷಿಸೊ ೩

೧೮೩

ರಂಗವೊಲಿದ ದಾಸರಾಯ । ಸತ್ಕವಿಜನ ಗೇಯ ಪ

ಮಂಗಳಕರ ಕುಲಿಶಾಂಗ ಮತಾಂಬುಧಿ
ತಿಂಗಳ ಮಾನವ ಸಿಂಗಾರ್ಯರ ಸುತ ಅ.ಪ

ಶರಣು ಮಂದಾರ ಪರಮೋದಾರ ಪರಿಪಾಲಿಸು ಧೀರ
ಸರಸಿಜ ತುಳಸಿ ಮಣಿ ಸುಹಾರ ಶೋಭಿತ ಕಂಧರ
ಸಿರಿವರ ಹರಿಕಥಾಮೃತಸಾರ ಸು
ರಸ ಗ್ರಂಥ ಕೃತ ಕರುಣಾನಿಧೆ ಗುರು ೧

ಜ್ಞಾನಿಕುಲನಾಥ ಭಾನುಜಸೂತ ಭವವಾರಿಧಿ ಪೋತ
ಕ್ಷೋಣಿ ಸುರವ್ರಾತ ನಮಿತ ಸುಖ್ಯಾತ ವರದಾನಿ
ಪುನೀತ । ಧೇನುಪಾಲ ದಾಸಾರ್ಯರ ಪದಯುಗ
ಧ್ಯಾನಿತ ಮಾನಿತ ಮಾನವಿ ನಿಲಯ ೨

ಕಾಮಿತ ದಾತ ದುರಿತ ವಿದೂರ ಸನ್ಮಹಿಮಾಪಾರ
ಪಾಮರ ಹೇಮಶಯ್ಯ ಕುಮಾರ ಕುಮತಾಬ್ಧಿ ಸಮೀರ
ಕೋಮಲಾಂಗ ಮಮ ಸ್ವಾಮಿ ಸೋಮನುತ
ಶಾಮಸುಂದರ ಸುಧಾಮ ಪ್ರೇಮ ಸಖ ೩

೧೮೪

ಕಳೆಯ ಬ್ಯಾಡವೋ ಕಾಲವ । ತಿಳಿ ನೀ ಮಾನವಾ । ವೃಥಾ । ಪ

ಹರಿಚರಿತಾಮೃತ ವರ ಸುಗ್ರಂಥವನು
ಪರಮತತ್ವವೆಂದರಿಯದೆ ಜಗದೊಳು ೧

ಶುದ್ಧ ಮನದಿ ಗುರು ಮಧ್ವಮುನಿಯ ಚರಣದ್ವಯಕೆರಗದೆ
ಹದ್ದುಗಳಂದದಿ ಕಳೆಯಬ್ಯಾಡವೋ ಕಾಲವ ೨

ವಾಸುಕಿಶಯನನ ವಾಸರದಲಿ ಉಪವಾಸವ ಮಾಡದೆ
ದೋಷಿಗಳಂದದಿ ಕಳೆಯಬ್ಯಾಡವೋ ಕಾಲವ ೩

ತನು ಮನ ಧನ ಸತಿಯರನು ವಿಧಿ ಜನಕಗರ್ಪಿಸದೆ
ಶುನಕನಂದದಿ ಕಳೆಯಬ್ಯಾಡವೋ ಕಾಲವ ೪

ಪ್ರೇಮದಿಂದಲಿ ಶಾಮಸುಂದರನ ನಾಮವು ಪಾಡದೆ
ಪಾಮರನಂದದಿ ಕಳೆಯಬ್ಯಾಡವೋ ಕಾಲವ ೫

೧೮೫

ಮಂಗಳಂ ಮಂಗಳಂ ದಯಾಬ್ಧೆ ಜಯ
ಮಂಗಳಂ ಶ್ರೀರಂಗವೊಲಿದ ದಾಸಾರ್ಯ ಪ

ಪ್ರಹ್ಲಾದನನುಜ ತಾ । ಸಹ್ಲಾದ ವಿಖ್ಯಾತ
ಬಲ್ಲಿದ ಬಲ್ಲಾಳು ಶಲ್ಯ ನೃಪಾಲ ೧

ನಾರದ ಗುರು ಭಾವಿ । ಮಾರುತ ಭೃಗು ವಿಘ್ನ
ದೂರಗೈಸುವ ರತಿ । ಕಾರುಣ್ಯಪಾತ್ರ ೨

ಇಂದಿರಾಧವ ಶಾಮಸುಂದರ ಪ್ರಿಯ ಭಕ್ತ
ಮಂದಾರ ಮಾನವಿ ಮಂದಿರ ಧೀರ ೩

೧೮೬

ಯಾತರಂಜಿಕೆ ಜಗದೊಳಗೆ ಜಗ
ನ್ನಾಥ ದಾಸರ ದಯಪಡೆದ ಸುಜನರಿಗೆ ಪ

ಪದುಮಜಾಂಡದಿ ವಿಧಿ ಮದನಾರಿ ವಂದಿತ ಒ
ಲಿದು ಪತಿ ಮಧುರಿಪು ಹರಿಕೃತಾ
ಸುಧೆ ಸಾರ ಸುಗ್ರಂಥ ರಚಿಸಿದ ಗುರುಗಳ
ಪದ ಸರಸಿಜ ಪೊಂದಿದ ಸುಗುಣರಿಗೆ ೧

ನಳಿನ ಜನಕನ ಒಲಿಸಿ ಹರುಷದಿಂದಲಿ
ಥಳ ಥಳ ಪೊಳೆಯುವ ಸ್ತಂಭದಲಿ
ಕುಳಿತು ಸೇವಿಸುವರ ಸಲಹುವ ಶ್ರೀ ರಂಗ
ಒಲಿದ ದಾಸಾರ್ಯರ ಒಲಿಮೆ ಉಳ್ಳವರಿಗೆ ೨

ಸಿರಿ ವರ ಶಾಮಸುಂದರ ಸರ್ವೋತ್ತುಮ
ಮರುತಾತ್ಮಜ ಗುರುವರ್ಯಕಿಂದು
ಧರಿಯೊಳು ಸಾರಿದ ಸಲ್ಹಾದ ದಾಸರ
ಚರಣ ಸರೋರುಹ ನೆರೆ ನಂಬಿದವರಿಗೆ ೩

೧೮೭

ಗುರುಗಳ ಶ್ರೀಪಾದವ ನಿತ್ಯ ಭಜಿಸು
ದುರಿತಗಳಲ್ಲವು ತ್ಯಜಿಸು ಪ

ಯದುಪತಿ ಕಥಾ ಬುಧರಿಗೆ ಎರೆದು ಸಾಧುವರೇಣ್ಯರ
ಮಮತೆಯ ಗಳಿಸು ೧

ಕವಿವರರೆನಿಸಿದ ಇವರ ಸುವಚನವಾ
ಸವಿಯನು ಸಂತತ ಭಾವದಿ ಗ್ರಹಿಸು ೨

ಸ್ತಂಭ ನಿವಾಸರ ನಂಬಿಸುತ
ಕುಂಬಿಣಿ ತಳದೊಳು ಧನ್ಯನೆಂದೆನಿಸಲು ೩

ಮಾನವಿ ನಿಲಯರ ನೀನೊಲಿಸುತ ಘನ
ಮಾನವ ಜನ್ಮ ಸಾರ್ಥಕಗೊಳಿಸು ೪

ಶಾಮಸುಂದರನ ಪ್ರೇಮವ ಪಡೆದಾ
ಈ ಮಹಾ ಮಹಿಮರ ಸೇವಕನೆನಿಸೋ ೫

೧೮೮

ಬಾರೈ ಪ್ರಭುವೆ ಬಾರೈ ಪ್ರಭುವೆ ಪ

ತೋರೈ ಹರಿಪಾದವ ಗುರುವೆ
ತವಾಂಘ್ರಿ ಕಮಲ ನಂಬಿದೆ
ಭವ ಬಂಧನ ಹರಿಸಿ ಕರುಣದಿ
ಜವನ ಭವನ ಬಿಡಿಸೋ ದೀನ
ದಿವಿಜ ತರುವೆ ೧

ಹರಿಕಥಾ ಸುಧಾ ಸಾರ
ವರ ರಹಸ್ಯವ ಪೊರೆ
ಕರುಣದಿಂದಲರುಹಿ ಸದಾ
ಪೊರೆಯೋ ವಿಭುವೆ ೨

ಮಂದರ ಗಿರಿಧಾರಿ ಶಾಮ
ಸುಂದರ ಸುಪ್ರೇಮ ಪಾತ್ರ
ಕಂದನನುದಾಸಿಸುವದು
ತಂದೆಗೆ ಥರವೆ ೩

೧೮೯

ಶ್ರೀ ಗುರು ಜಗನ್ನಾಥಾರ್ಯ ಕರುಣಿಸಯ್ಯ
ಮೊರೆಹೊಕ್ಕೆ ತ್ವತ್ಪದಕೆ ಮರಿಯದಲೆ ಪಿಡಿ ಕೈಯ್ಯ ಪ

ಪ್ರಹ್ಲಾದನನುಗ್ರಹವು ಎಲ್ಲ ಕಾಲದಲಿ ನಿ
ನ್ನಲ್ಲಿ ಸಂಪೂರ್ಣವಾಗಿರುವದೆಂಬ
ಸೊಲ್ಲು ಲಾಲಿಸಿ ನಿನ್ನ ಪಲ್ಲಾವಾಂಘ್ರಿಗೆ ನಮಿಪೆ
ಬಲ್ಲಿದನೆ ಹರಿಧ್ಯಾನದಲ್ಲಿ ನಿಲ್ಲಿಸು ಮನವ ೧

ಜನಕಾಗ್ರಜಾತಾರ್ಯ । ನೆನಿಸಿ ಜನಿಸುತ
ಮಂತ್ರ ಮುನಿ ನಿಲಯ ಮುನಿವರ್ಯ ಶ್ರೀ ರಾಯರ
ಗುಣಸ್ತವನ ವಿರಚಿಸುತ ಪ್ರಣತರಿಗೆ ಪಠಿಸುತ್ತ
ಮನದಿಚ್ಛೆ ಪಡೆವುದಕೆ ಅನುಕೂಲಿಸಿದ ಜ್ಞಾನಿ ೨

ಶ್ರೀ ಶಾಮಸುಂದರನ ದಾಸವರ್ಯರ ಉಪ
ದೇಶವನು ಕೊಂಡು ಉಪಾಸನೆಯನು
ಲೇಸಾಗಿ ಬಿಡದೆ ಪ್ರತಿವಾಸರದಿ ಗೈದಂಥ
ಭೂಸುರಾಗ್ರಣಿಯಾ ಕೋಸಿಗೆಯ ವಾಸ ೩

೧೯೦

ಸಾಗಿ ಬಾರೋ ಲೇಸಾಗಿ ಬಾರೋ ಘನತ್ಯಾಗಿ ಬಾರೋ
ಬಾಗಿ ನಮಿಪೆ ಜಗನ್ನಾಥಾರ್ಯ ರಥವೇರಿ ಪ

ನಂಬಿ ಭಜಿಪರಿಗೆ ಜಂಭಾರಿ ಕುಜದಂತೆ
ಹಂಬಲವನ್ನು ತುಂಬಿಕೊಂಡಿರುವಂಥ । ಗುರು ಕರು
ಣಾಂಬುಧಿ ಸ್ತಂಭದಿ ಪೊರಮಟ್ಟು ಸಂಭ್ರಮದಿ ೧

ಭಾಗವತರು ಮುಂಭಾಗದಲಿ । ಕುಣಿಯುತಲಿ
ರಾಗಾಲಾಪಗಳಿಂದ ಹರಿನಾಮ ಪಾಡುತಲಿ
ಕೂಗಿ ಮುಗಿದು ಕೈ ಕರೆಯುವರು । ಪಥ ಕಾಯುವರು ೨

ಪೊಡವಿ ಸುರರ ಕೂಡಿ ಎಡಬಲದಿ ಸಡಗರದಿ
ಬಿಡದೆ ವೇದಂಗಳ ಪಠಿಸುತ ಭಕ್ತಿಯಲಿ
ಒಡೆಯ ನಿನ್ನಾಗಮನ ನೋಡುವರು । ಗತಿ ಬೇಡುವರು ೩

ಪಾಡಿ ಪೊಗಳುವರ ಕಾಯುವ । ಮೂಢರನು
ಓಡಿಸುವಲ್ಲಿ ನಿನಗೀಡ್ಯಾರೋ ರೂಢಿಯೊಳು
ನೋಡಿ ದಯದಿಂದ ನೀ ನೋಡಿ ಗುರು ರಾಯ ೪

ಭೂಮಿ ವಿಬುಧರಿಗೆ ನೀ ಮಾಡಿದುಪಕಾರ
ನಾ ಮರೆಯಲಾರೆನು ಎಂದೆಂದು । ಗುರು ರಾಯ
ನಾ ಮರೆಯ ಲಾರೆನು ಎಂದೆಂದು ಜಗದೊಳಗೆ
ಶಾಮಸುಂದರನ ಪ್ರಿಯದಾಸ । ರಥವೇರಿ ೫

೧೯೧

ಭೋ ದಾತಾ ಬಾರೋ ಗುರುವರಿಯಾ ॥ ನಂಬಿದೆ ನಾ ನಿನ್ನ
ಪಾದ ಭೂನಾಥ ದಾಸಾಗ್ರಣಿ ಪ

ದೀನ ಜನರ ಧೇನು ಚಿಂತಾಮಣಿ ಮಾನಿತ ನಿನ್ನ
ನೆರೆ ಪೊಂದಿದೆನ್ನೈ ಅನುದಿನ ಪಾಲಿಸು ಘನ
ಹರಿನಾಮವ । ಸ್ತಂಭ ನಿವಾಸನೆ ದಯ ತೋರೋ ೧

ಪೋತನೊಳೀಪರಿ ಯಾತಕೆ ನಿರ್ದಯ ತಾತನೆ
ನಿನಗೆ ರೀತಿಯ ನೋಡ್ಕೈ । ಸುತನಪರಾಧವ
ಹಿತದಲಿ ಮನ್ನಿಸು ಪಾತಕ ಬಿಡಿಸೊ ಮತಿ ಬೀರೋ ೨

ಕರುಣಿಸು ಶಾಮಸುಂದರವಿಠಲ । ವರ ಚರಿ
ತಾಮೃತ ಸವಿಯನು ಎನಗೆ । ಸೂರಿವರೇಣ್ಯನೆ
ಮೂಕಗೊಲಿದಂತ । ತ್ವರಿತದಿ ನೋಡ್ಕೈ ತಡವ್ಯಾತಕೆ ೩

೧೯೨

ಪೊಗಳು ಮನವೆ ನೀ ಯುಗಯುಗದಲಿ ಘನ
ಸೊಗಸಿಲಿಂದ ಗುರು ಜಗನ್ನಾಥರಾಯರ ಪ

ಪುಲ್ಲಜಾಂಡದಿ ಸಿರಿವಲ್ಲಭನ ಪದ
ಪಲ್ಲವ ಪೂಜಿಸಿದ ಸಹ್ಲಾದರಾಯರ ೧

ಮಾನವಿ ಕ್ಷೇತ್ರದಿ ಧೇನಿಪ ಸುಜನರ
ಮಾಣದೆ ಕಾಯುವ ಮಹಾನುಭಾವರ ಸದಾ ೨

ಧರಿವರ ಶಾಮಸುಂದರ ಚರಿತಾಮೃತ
ಸರಸ ಸುಗ್ರಂಥವ ವಿರಚಿಸಿದೊಡೆಯರ ೩

೧೯೩

ನೋಡಿ ಭಕ್ತಿ ಮಾಡಿ ಪಾಡಿರಿ ರೂಢಿಗೊಡೆಯ ದಾಸರಾ
ಕಾಡುವಾ ದುರಿತಂಗಳ ಓಡಿಸಿ ಸಲುಹುವರಾ ಪ

ನಂಬಿದ ಶರಣರ ಹಂಬಲ ನೀಡಲು ಸಂಭ್ರಮದಲಿ । ಇದೆ
ಸ್ತಂಭದಿ ನೆಲೆಸಿಹರಾ ೧

ಇವರ ಕವನ ಶ್ರವಣ ಮನನಗಳಿಂದ ।
ಲವಲೇಶವಾಗದು ಜವನ ಭವನ ಬಂಧು ೨

ಶ್ರೀ ಮಹೀವಲ್ಲಭ ಶಾಮಸುಂದರನ
ಪ್ರೇಮಕೆ ಪಾತ್ರಧರಾಮರ ದಾಸರಾ ೩

೧೯೪

ತೂಗಿರೆ ಶ್ರೀ ರಂಗವಲಿದ ದಾಸಾರ್ಯರ
ತೂಗಿರೆ ಜಗನ್ನಾಥರಾಯರ ಪ

ತೂಗಿರೆ ಭಾಗಣ್ಣ ಗುರುವರನುಗ್ರಹ ಪಾತ್ರ
ಭಾಗವತ್ತೋತ್ತಮರ ತೂಗಿರೆ ಅ.ಪ

ಘನ ಸುಜ್ಞಾನ ಸದ್ಭಕುತಿ । ಗುಣದಿ ಬಂಧಿತವಾದ
ಅನಿಲಮತವೆಂಬ ತೊಟ್ಟಿಲದಿ
ವನಜನಾಭನ ಧ್ಯಾನ ಯೋಗ ನಿದ್ರೆಯ ಮಾಳ್ಪ
ಕನಕ ಶಯ್ಯಾತ್ಮಜರ ತೂಗಿರೆ ೧

ಯುದ್ಧದಿ ಸಾರಥಿ ಪದ್ಮಮಿತ್ರಜಗಾದ
ಮದ್ರದೇಶಾಧಿಪರ ತೂಗಿರೆ
ವೃದ್ಧಾಶ್ರವಾರ್ಯರ ಸದ್ಮನದಿ ಶಿಶುವಾಗಿ
ಉದ್ಭವಿಸುವರ ತೂಗಿರೆ ೨

ಶಾಮಸುಂದರ ಸ್ವಾಮಿ ಧಾಮ ಪದಾರ್ಹರ
ಪ್ರೇಮವ ಪಡೆದವರ ತೂಗಿರೆ
ಶ್ರೀಮನ್ ಮಾನವಿಯಲ್ಲಿ ನೇಮದಿ ಭಜಿಪರ
ಕಾಮಿತ ಕೊಡುವವರ ತೂಗಿರೆ ೩

೧೯೫

ಜೋ ಜೋ ಜೋ ಜೋ ಸಹ್ಲಾದರಾಜ
ಜೋ ಜೋ ಜೋ ಜೋ ಪ್ರಹ್ಲಾದನನುಜ
ಜೋ ಜೋ ಜೋ ಜೋ ಜಾತರೂಪ ಶಯ್ಯಜ
ಜೋ ಜೋ ಜೋ ಜೋ ಭಕ್ತಸುರ ಕಲ್ಪಭೂಜ ಪ

ಮನುಜ ಮೃಗಾರ್ಯರ ಸುತನೆನಿಸಿಸುತ
ಅಣುಗ್ರಾಮ ಬ್ಯಾಗವಾಟದಿ ಜನಿಸುತ
ಮುನಿ ವರದೇಂದ್ರತೀರ್ಥರ ಸೇವಿಸುತ
ಅನಿಲ ಸುಶಾಸ್ತ್ರವನರಿತ ಸುದಾತ ೧

ಗುರುಧೇನುಪಾಲ ದಾಸಾರ್ಯರ ಮಮತ
ಪರಿಪೂರ್ಣದಿಂದ ನೀ ಪರಮ ಪುನೀತ
ಸಿರಿ ಜಗನ್ನಾಥವಿಠಲಾಂಕಿತ
ಶರಧಿಜ ಭಾಗದಿ ಪಡೆದ ಪ್ರಖ್ಯಾತ ೨

ಗುಣನಿಧಿ ದ್ವಾಪರದಲ್ಲಿ ಪುಟ್ಟುತ
ಫಣಿವರ ಕೇತನ ಮೊರೆ ಲಾಲಿಸುತ
ದಿನಮಣಿ ಜಾತನ ದಿವ್ಯ ವರೂಥ
ಮಾನಿತ ಮಾನವಿ ಕ್ಷೇತ್ರ ನಿವಾಸ ೩

ಸರಸಿಜ ತುಲಸಿ ಸುಮಾಲೆ ಶೋಭಿತ
ವರದಿ ಸ್ವಾದಿ ರಾಜೇಂದ್ರಾರ್ಯರ ಪ್ರೀತ
ಹರಿಕಥಾಮೃತ ಗ್ರಂಥ ವಿರಚಿತ
ಪುರುಹೂತರಾರ್ಯರ ಪ್ರೇಮದ ಪೋತ ೪

ಶ್ರೀ ನಿಧಿ ಶಾಮಸುಂದರ ದಾಸ
ಕ್ಷೋಣಿ ಸುರಾರ್ಚಿತ ದುರಿತ ವಿನಾಶ
ಹೀನ ಮತಾಖ್ಯ ಪನ್ನಗಕುಲವೀಶ ೫

೧೯೬

ಪೋಷಿಸೆನ್ನ ದಾಸಶ್ರೇಷ್ಠನೆ ವಸುಧಿದೇವ ನಿಕರಪಾಲ
ವ್ಯಾಸರಾಯನ ಪ್ರೇಮಪಾತ್ರನೆ ಪ

ವೇದಸಾರವಾದ ಕವನಗೈದು ಪ್ರಾಕೃತದಿ ಜಗದಿ
ಭೇದಜ್ಞಾನ ತಾರತಮ್ಯ ಬೋಧಿಸಿದ ಸಾಧುಶೀಲ ೧

ಜ್ಞಾನಿ ವೀಣಾಪಾಣಿ ದೇವ ಮೌನಿ ದಾನಿ । ಸ
ನ್ಮಾನಿ ಗಾನಲೋಲ ದೀನಪಾಲನ ೨

ನಂದಗೋಪಕಂದ ಶಾಮಸುಂದರವಿಠಲಗೆ ಪರಮ
ಯೆಂದು ಸಾರಿ ಸುಪಥ ತೋರಿ ಮಂದರನ್ನು ಪೊರೆದ ೩

೧೯೭

ಗುರು ಜಗನ್ನಾಥಾರ್ಯ ಕರುಣಿಸಯ್ಯ
ಮೊರೆಹೊಕ್ಕೆ ತ್ವತ್ಪದಕೆ ಮರೆಯದಲೆ ಪಿಡಿ ಕೈಯ್ಯ ॥

ಪ್ರಹ್ಲಾದನನುಗ್ರಹವು ಎಲ್ಲ ಕಾಲದಲಿ ನಿ
ನ್ನಲ್ಲಿ ಸುಂಪೂರ್ಣವಾಗಿರುವದೆಂಬಾ
ಸೊಲ್ಲು ಲಾಲಿಸಿ ನಿನ್ನ ಪಲ್ಲವಾಂಘ್ರಿಗೆ ನಮಿಪೆ
ಬಲ್ಲಿದನೆ ಹರಿಧ್ಯಾನದಲ್ಲಿ ನಿಲ್ಲಿಸು ಮನವ ೧

ಕನಕಾಗ್ರ ಜಾತಾರ್ಯನೆನಿಸಿ ಜನಿಸುತ ಮಂತ್ರ
ಮುನಿ ನಿಲಯ ಮುನಿವರ್ಯ ಶ್ರೀ ರಾಯಾರಾ
ಗುಣಸ್ತವನ ವಿರಚಿಸುತ ಪ್ರಣತರಿಗೆ ಪಠಿಸುತ್ತ
ಮನದಿಚ್ಛೆ ಪಡೆವದಕ್ಕೆ ಅನುಕೂಲಿಸಿದ ಜ್ಞಾನಿ ೨

ಶ್ರೀ ಶಾಮಸುಂದರ ದಾಸವರ್ಯರ ಉಪ
ದೇಶವನು ಕೊಂಡ ಉಪವಾಸನೆಯನು
ಲೇಸಾಗಿ ಬಿಡದೆ ಪ್ರತಿವಾಸರದಿ ಗೈವಂಥ
ಭೂಸುರಾಗ್ರಣಿಯಾದ ಕೋಸಿಗೆಯ ದಾಸಾ ೩

೧೯೮

ರಂಗವಲಿದ ದಾಸಾಗ್ರಣಿ ಮಾನವ
ಶಿಂಗಾರ್ಯರ ಸುತ ನಮೋ ನಮೋ ಪ

ಮಂಗಳಕರ ಕುಲಿಶಾಂಗ ಮತಾಂಬುಧಿ
ತಿಂಗಳ ಸುಗುಣಿತ ನಮೊ ನಮೊ ಅ.ಪ

ತುಂಗ ಮಹಿಮ ದ್ವಿಜ ಪುಂಗವ ವಿಜಿತಾ
ನಂಗ ಶರ ದಯಾಪಾಂಗ ನಮೋ ॥
ಡಿಂಗರೀಕ ಜನ ಪಾಲ ನಮೊ ಭವ
ಭಂಗ ವಿದಾರಣ ನಮೊ ನಮೊ ೧

ಜಾತರೂಪ ಶಯ್ಯಾತ್ಮಜ್ಯಾತ ಹರಿ ।
ದೂತ ಪ್ರಹ್ಲಾದರನುಜ ನಮೊ ॥
ಪೂತುರೆ ಘನ ಸತ್ವಾತಿಶಯದ ಪ್ರ
ಖ್ಯಾತ ದಿನಪ ಪ್ರಸೂತ ನಮೊ ೨

ಪಾತಕಾದ್ರಿ ಜೀಮೂತ ಭ್ರಾತ ಪಣಿ
ನಾತ ಪುರಂದರ ಪೋತ ನಮೊ
ಪೂತಗಾತ್ರ ಶುಭದಾತ್ರ ಭರಿಕ್ಷ
ಣ್ಮಾತಿರಿಶ್ವ ಸುಪ್ರೀತ ನಮೊ ೩

ಮೌನಿವರ್ಯ ವರದೇಂದ್ರ ಪಾದಾಂಬುಜ
ರೇಣು ವಿಭೂಷಿತ ಪಾಲಯಮಾಂ
ಧೇನು ಪಾಲ ವಿಜಯಾರ್ಯ ಕೃಪಾನ್ವಿತ
ಧೀನೋದ್ಧರಣ ಪಾಲಯಮಾಂ ೪

ಮಾನವಿ ಕ್ಷೇತ್ರ ನಿಕೇತನ ಸನ್ನುತ
ಮಾನಿತ ಗುರುವರ ಪಾಲಯಮಾಂ
ಜ್ಞಾನ ನಿಧೆ ದೇವಾಂಶಜ ಪರಮತ
ಕಾನನ ಪಾವಕ ಪಾಲಯಮಾಂ ೫

ಶೌರಿ ಕಥಾಮೃತ ಸಾರಗ್ರಂಥ ಕೃತ
ಸೂರಿ ಕುಲೋತ್ತುಮ ಜಯ ಜಯ ಭೋ
ಧಾರುಣಿ ಸುರ ಪರಿವಾರ ನಮಿತ ಪದ
ಚಾರುಸ್ತಂಭಾಲಯ ಜಯ ಜಯ ಭೋ ೬

ಮಂದವೃಂದ ಮಂದಾರ ಭೂಜನತ
ಬಂಧೋ ಭಯಾಪಹ ಜಯ ಜಯ ಭೋ
ನಂದಜ ಶಾಮಸುಂದರಾಂಘ್ರಿ ಅರ
ವಿಂದ ಮರಂದುಣಿ ಜಯ ಜಯ ಭೋ ೭

೧೯೯

ಶ್ರೀಮತ್ ಕವಿಕುಲ ನಾಯಕ ಜಯ ಜಯ
ಪ್ರೇಮಾಂಬುಧಿ ಶುಭದಾಯಕ ಜಯ ಜಯ ೧

ಪ್ರಹ್ಲಾದಾ ವರಜಾತನೆ ಜಯ ಜಯ
ಶಲ್ಯ ನೃಪಾಲಕ ಯೋಧನೆ ಜಯ ಜಯ ೨

ಪುರುಹೂತಾರ್ಯ ಪೋತನೆ ಜಯ ಜಯ
ಮರುತ ಪದಾರ್ಹರ ಪ್ರೀತನೆ ಜಯ ಜಯ ೩

ನರಸಿಂಹಾರ್ಯರ ಪುತ್ರನೆ ಜಯ ಜಯ
ಗುರು ವರದೇಂದ್ರರ ಛಾತ್ರನೆ ಜಯ ಜಯ ೪

ತುರು ರಕ್ಷಕ ವಿಜಯಾರ್ಯರ ಜಯ ಜಯ
ಕರುಣ ಪೂರ್ಣ ಪಡೆದಾತನೆ ಜಯ ಜಯ ೫

ಪಂಕಜ ವೈರಿಯ ಭಾಗದಿ ಜಯ ಜಯ
ಅಂಕಿತ ಪಡೆದ ಅಕಳಂಕನೆ ಜಯ ಜಯ ೬

ಪಂಢರಿನಾಥನ ಮೂರುತಿ ಜಯ ಜಯ
ಕಂಡು ಕೊಂಡಾಡಿದ ಧೀರನೆ ಜಯ ಜಯ ೭

ರಂಗವಲಿದ ದಾಸ್ಯೋತಮ ಜಯ ಜಯ
ತುಂಗ ಮಹಿಮ ಶುಭಾಂಗನೆ ಜಯ ಜಯ ೮

ನತಜನ ತತಿ ಮಂದಾರನೆ ಜಯ ಜಯ
ಕೃತ ಹರಿಕಥಾ ಸುಧೆ ಸಾರವ ಜಯ ಜಯ ೯

ಮೂಕರ ಮುಖದಿಂ ಕರುಣದಿ ಜಯ ಜಯ
ವಾಕು ಪೇಳಿಸಿದ ಗುಣನಿಧಿ ಜಯ ಜಯ ೧೦

ಮಾನವಿ ಮಂದಿರ ಮಾನಿತ ಜಯ ಜಯ
ಕ್ಷೋಣಿ ವಿಬುಧ ಗಣ ಸೇವಿತ ಜಯ ಜಯ ೧೧

ಕುಂಭಿಣಿನಾಥ ದಾಸಾಗ್ರಣಿ ಜಯ ಜಯ
ನಂಬಿದೆ ನಿನ್ನ ಪದಾಂಬುಜ ಜಯ ಜಯ ೧೨

ಸಾಧು ವರಿಯ ಪ್ರಹ್ಲಾದನೆ ಜಯ ಜಯ
ಭೇದಜ್ಞಾನ ಸುಬೋಧಕ ಜಯ ಜಯ ೧೩

ಭೂಸುರ ಕುಮುದಕೆ ಭೇಶನೆ ಜಯ ಜಯ
ಭಾಸುರ ಸ್ತಂಭ ನಿವಾಸನೆ ಜಯ ಜಯ ೧೪

ಪವನಾಗಮ ಪ್ರವೀಣನೆ ಜಯ ಜಯ
ಕವಿ ಜನ ಸನ್ನುತ ಮಹಿಮನೆ ಜಯ ಜಯ ೧೫

ತಂದೆ ನಮಗೆ ನೀನೆಂದಿಗು ಜಯ ಜಯ
ಕುಂದು ಕ್ಷಮಿಸಿ ದ್ವಿಜ ವಂದ್ಯನೆ ಜಯ ಜಯ ೧೬

ಕಂಸಾರಿಯ ಪ್ರೀಯ ಸಾಂಶನೆ ಜಯ ಜಯ
ಧ್ವಂಸಗೊಳಿಸು ಭವ ಹಿಂಸೆಯ ಜಯ ಜಯ ೧೭

ನಿನ್ನ ತಾಣ ಸುಕ್ಷೇತ್ರವು ಜಯ ಜಯ
ನಿನ್ನ ಕವನ ಶೃತ್ಯರ್ಥವು ಜಯ ಜಯ ೧೮

ಕಲುಷ ಕುಲಾದ್ರಿಗೆ ಕುಲಿಶನೆ ಜಯ ಜಯ
ಒಲಿದು ಕರಪಿಡಿದು ಸಲಹೈ ಜಯ ಜಯ ೧೯

ಆರ್ತರಿಷ್ಟಾರ್ಥವ ಸಲಿಸಲು ಜಯ ಜಯ
ಸ್ವಾರ್ಥರಹಿತರಿಗೆ ಕೀರ್ತಿಯು ಜಯ ಜಯ ೨೦

ಎನ್ನ ವಚನವಿದಲ್ಲವು ಜಯ ಜಯ
ನಿನ್ನನು ಭವಕಿದು ಬಂದದು ಜಯ ಜಯ ೨೧

ಮಂದ ಬುದ್ಧಿಯಲಿ ನಿಮ್ಮನು ಜಯ ಜಯ
ನಿಂದಿಪ ಮನುಜ ದಿವಾಂಧನು ಜಯ ಜಯ ೨೨

ಧರ್ಮದ ಮಾರ್ಗವ ತೋರಿಸು ಜಯ ಜಯ
ಕರ್ಮಜ ದೇವನೆ ಕೈಪಿಡಿ ಜಯ ಜಯ ೨೩

ಅನಿಲ ಮತಾಂಬುಧಿ ಮೀನನೆ ಜಯ ಜಯ
ಪ್ರಣತಾಮರ ಮಣಿಧೇನುವೆ ಜಯ ಜಯ ೨೪

೨೦೦

ಸ್ಮರಿಸು ಜೀವಿಸು ಮಾನವ ಪ

ಸ್ಮರಿಸಿ ಜೀವಿಸು ರಂಗವಲಿದ ದಾಸರ ಪಾದ
ಹರುಷ ತೀರ್ಥರ ಸುಮತ ಶರಧಿ ಚಂದಿರನಾದ
ಮೊರೆಹೊಕ್ಕ ಶರಣರಘಕರಿಗೆ ಕೇಸರಿಯಾದ
ಪರಮ ಸಾಧು ಸಹ್ಲಾದ ಅ.ಪ

ಎರಡೊಂದು ಯುಗದಲ್ಲಿ ತರಣಿ ತನಯನ ಸೂತ
ಪುರಂದರಾರ್ಯರ ಗೃಹದಿ ತರಳನೆಂದೆನಿಸಿದಾತ
ಮರುತ ದೇವನ ಪದಕೆ ಬರುವ ಯತಿಗಳ ದೂತ
ವರದೇಂದ್ರತೀರ್ಥರಿಗೆ ಪ್ರೀತ ॥
ಗುರುಧೇನು ಪಾಲ ವಿಜಯ ದಾಸವರ್ಯರ ಮಮತ
ಭರಿತನಾಗುತ ಪೋಗಿ ಹರಿಣಾಂಕ ಭಾಗದಲಿ ತ್ವರಿತ
ಸಿರಿ ಜಗನ್ನಾಥವಿಠಲಾಂಕಿತ ಪಡೆದಾತ
ನಮಗೀತ ಗತಿ ಪ್ರದಾತ ೧

ಭಾರತೀಶನು ಗೈದ ಘೋರ ದುರಿತ ವಿದೂರ
ಮೂರ್ಧತ್ತು ಶರಯುಗ್ಮ ಗ್ರಂಥಗಳ ಸುವಿಚಾರ
ತೋರಿ ಬರುತಿಹ ದಿವ್ಯ ಹರಿಕಥಾಮೃತಸಾರ
ಸಾರಿದಂಥ ಸುಧೀರ ॥
ಕಾರುಣ್ಯದಲಿ ಪೊರೆವ ಧರಣಿಸುರ ಪರಿವಾರ

ಸೇರಿ ಸೇವಿಪ ಸುಜನ ಕೋರಿಕೆಯ ಮಂದಾರ
ಭೂರುಹದ ತೆರದಿ ಘನ ಸೂರೆ ಕೊಡುವನುದಾರ
ದುರಿತ ವಿಪಿನ ಕುಠಾರ ೨

ಇವರ ಕವನ ಪಠಣ ಶ್ರವಣ ಮನನಗಳಿಂದ
ಲವಕೇಶವಾಗದು ಜವನ ಭವನದ ಬಂಧ
ಅವಿವೇಕತನದಿ ವರ ಚರಿತೆ ತಿಳಿಯದೆ ನಿಂದೆ
ಗೈದ ಮನುಜ ದಿವಾಂಧ ।
ಭುವನದೊಳು ಬೆಳಗುತಿಹ ಇವರ ಮಹಿಮಾನಂದ
ವಿವರಿಸಲು ಎನಗೊಶವೆ ಅವನಿಯೊಳು ನಾ ಮಂದ
ಇವರ ಸನ್ನಿಧಿಯಲ್ಲಿ ಸಕಲ ನದಿಗಳ ವೃಂದ
ನೆಲಸಿಹವು ನಲವಿಂದ ೩

ಮೆರೆವ ಮಾನವಿ ಪುರದಿ ಇರುವ ಸ್ತಂಭದಿ ಜಾಣ
ಎರಡೆರಡು ಸಚ್ಛಾಸ್ತ್ರವರಿತ ಘನ್ನ ಪ್ರವೀಣ
ಪರವಾದಿಗಳ ವಾಗ್ಧರದಿ ಗೆದ್ದ ಧುರೀಣ
ಹರಿಗೆ ಪಂಚಪ್ರಾಣ ॥
ಅರುಹಲೇನಿವರ ಚರಣ ನಂಬಿದ ಸುಜನ
ಪರಮಭಾಗವತರೆನಿಸಿ ನಿರುತ ಹರಿಪದ ಧ್ಯಾನ
ಪರರಾಗಿ ಮೆಟ್ಟುತಲಿ ಮುಕುತಿಪಥ ಸೋಪಾನ
ಸೇರಿದರು ನಿಜ ಸ್ಥಾನ ೪

ಶಾಮಸುಂದರವಿಠಲ ಸ್ವಾಮಿಗತಿ ಪ್ರಿಯದಾಸ
ಶ್ರೀಮದಕ್ಷತೆ ಗಂಧ ನಾಮದ್ವಾದಶ ಭೂಷ
ಕಾಮಾದಿ ಷಡ್ವೈರಿ ಸ್ತೋಮ ತಿಮಿರ ದಿನೇಶ
ಭೂಮಿ ವಿಬುಧರ ಪೋಷ ॥
ಈ ಮಹಾತ್ಮರ ಚಾರು ಧವಲ ಕೀರ್ತಿಪ್ರಕಾಶ
ಸೋಮ ಸುಪ್ರಭೆಯಂತೆ ಪಸರಿಸುತ ಸಕಲದೇಶ

ಪ್ರೇಮದಿಂದಲಿ ಸತತ ಸುಜನ ಕುಮುದ ವಿಕಾಸ
ಗೊಳಿಸಿಗರೆದುದುಲ್ಲಾಸ ೫

೨೦೧

ಪೊಂದಿ ಭಜಿಸೊ ನಿರುತ
ಮಾನವ ಮಹಿವೃಂದಾರಕ ವ್ರಾತ ಪ

ವಂದಿತ ಶ್ರೀ ಸುಯಮೀಂದ್ರರ ಹೃದಯಾರ
ವಿಂದ ಭಾಸ್ಕರ ಸುವೃತೀಂದ್ರ ಪದಯುಗ ಅ.ಪ

ಧರೆಯೊಳು ದ್ವಿಜ ನಿಕರ ಉದ್ಧರಿಸಲು
ಗುರುವರ ಸುಶೀಲೇಂದ್ರರ
ಕರದಿ ತುರಿಯಾಶ್ರಮ ಧರಿಸುತ ಶ್ರೀಮೂಲ
ತರಣಿ ಕುಲೇಂದ್ರನ ಚರಣವ ಪೂಜಿಸಿ
ಮರುತ ಶಾಸ್ತ್ರವ ಭಕ್ತಿ ಪೂರ್ವಕ
ನಿರುತ ಪ್ರವಚನ ಗೈದು ಶಿಷ್ಯರಿ
ಗೊರೆದು ಕರುಣದಿ ಪೊರೆದ ಪಾವನ
ಚರಿತರಡಿದಾವರೆಗಳ್ಹರುಷದಿ ೧

ಸತಿಭಕ್ತಿ ಸುವಿರಕತಿ ಶಾಂತಾದಿ
ಹಲವು ಸದ್ಗುಣ ಪ್ರತತಿ
ಕಲಿಯಾಳಿಕೆಯೊಳು ಸ್ಥಳವ ಕಾಣದೆ ವಿಧಿ
ಬಳಿಗೆ ಬಿನ್ನೈಸಲು ನಳಿನಜ ಯೋಚಿಸಿ
ಇಳೆಯೊಳಗೆ ಸುವೃತೀಂದ್ರತೀರ್ಥರ
ಚಲುವ ಹೃದಯ ಸ್ಥಾನ ತೋರಲು
ಬಳಿಕ ಸುಗುಣಾವಳಿಗಳಿವರೊಳು
ನೆಲಸಿದವು ಇಂಥ ಅಲಘು ಮಹಿಮರ ೨

ಸಿರಿಯಾಸ್ಯ ಸಂವತ್ಸರದಿ ಸುವೈಶಾಖ
ವರಮಾನ ಶಿತಪಕ್ಷದಿ
ಹರಿದಿನದಲಿ ದಿವ್ಯ ಮೂರನೆ ಯಾಮದಿ
ವರ ಮಂತ್ರ ಮಂದಿರ ಪರಮ ಸುಕ್ಷೇತ್ರದಿ
ಸಿರಿ ಮನೋಹರ ಶಾಮಸುಂದರ ೩

೨೦೨

ಉಗಾಭೋಗ

ಗುರು ಜಗನ್ನಾಥಾರ್ಯ ವಿರಚಿತ
ಹರಿಕಥಾಮೃತಸಾರ ಗ್ರಂಥದೊ
ಳಿರುವ ಮೂವತ್ತೆರಡು ಸಂಧಿಗಳಾದ್ಯಂತ ಪದ್ಯಗಳ ॥
ಅರಿತು ಭಕುತಿಲಿ ನಿರುತ ಪಠಿಸಲು
ದುರಿತ ಸಂಕುಲ ಕಳೆದು ಸಲಹುವ
ಮರುತ ವಂದಿತ ಶಾಮಸುಂದರವಿಠಲ ಕರವಿಡಿವಾ ॥

೨೦೩

ಉಗಾಭೋಗ

ಬಸವನೆಂದರೆ ಪಾಪ ಬಾಹುದೇನಯ್ಯ ಅಯ್ಯ
ಬಸವ ಎನ್ನದೆ ಪುಣ್ಯ ಎಲ್ಲಹುದಯ್ಯ ಅಯ್ಯ ।
ಬಸವನೆ ನಮ್ಮ ಟೀಕಾರಾಯನಯ್ಯ ಅಯ್ಯ
ಪಾರ್ಥನೇ ನಮ್ಮ ಶಂಕರನ ಒಲಿಸಿದನಯ್ಯ ಅಯ್ಯ ।
ಶಂಕರನೇ ನಮ್ಮ ಶಾಮಸುಂದರವಿಠಲನ ದೂತಯ್ಯ ಅಯ್ಯ ॥

೨೦೪

ಶ್ರೀ ಹರಿದಾಸವೃಂದ ಸ್ತೋತ್ರ
(ಕೋಲು ಪದ)

ಶ್ರೀ ಪುರಂದರದಾಸರು

ಪರಮೇಷ್ಠಿ ಪಿತನಾಜ್ಞೆ ಧರಿಸಿ ಬಂದ
ವರ ಸುರ ಮೌನಿಯವತಾರಿ ಕೋಲೆ ।
ವರ ಸುರ ಮೌನಿಯವತಾರಿಯಾದ
ಪುರಂದರದಾಸರ ಬಲಗೊಂಬೆ ಕೋಲೆ ೧

ಶ್ರೀ ವಿಜಯದಾಸರು

ಪುಟ್ಟ ಬದರಿಯಲ್ಲಿ ಪುಟ್ಟಿ ಪುರಂದರ
ಶ್ರೇಷ್ಠದಾಸರ ದಯಾಪಾತ್ರ ಕೋಲೆ ।
ಶ್ರೇಷ್ಠದಾಸರ ದಯಪಾತ್ರರಾದ ವಿಜಯ
ವಿಠಲದಾಸರ ಬಲಗೊಂಬೆ ಕೋಲೆ ೨

ಶ್ರೀ ಗೋಪಾಲದಾಸರು

ನಾಗಭೂಷಣಸುತ ನಾಗಾಶ್ಯವಂಶಜ
ಭಾಗವತಾಗ್ರಣಿ ಭಾಗಣ್ಣ ಕೋಲೆ ।
ಭಾಗವತಾಗ್ರಣಿ ಭಾಗಣ್ಣದಾಸರಿಗೆ
ಬಾಗಿ ನಮಿಸಿ ಪ್ರಾರ್ಥಿಪೆ ಕೋಲೆ ೩

ಶ್ರೀ ಜಗನ್ನಾಥದಾಸರು

ಹಿಂದೆ ಪ್ರಹ್ಲಾದನ ಹಿಂದೆ ಸಂಜಾತನಾಗಿ
ಬಂದ ಸಹ್ಲಾದನಂಶಜ ಕೋಲೆ ।

ಬಂದ ಸಹ್ಲಾದನಂಶದ ಮಾನವಿ
ಮಂದಿರ ದಾಸರಿಗೆ ವಂದಿಪೆ ಕೋಲೆ ೪

ಶ್ರೀ ಪ್ರಾಣೇಶದಾಸರು

ಶ್ರೀ ಗುರು ರಂಗವೊಲಿದ ಭಾಗವತರ ಛಾತ್ರ
ರಾಗಿ ಶ್ರೀ ಹರಿಯ ಬಣ್ಣಿಸಿ ಕೋಲೆ ।
ಛಾತ್ರರಾಗಿ ಶ್ರೀಹರಿಯ ಬಣ್ಣಿಸಿದಂಥ ಲಿಂಗ
ಸೂಗೂರ ದಾಸರಿಗೆ ವಂದಿಪೆ ಕೋಲೆ ೫

ಶ್ರೀ ಗುರುಪ್ರಾಣೇಶದಾಸರು

ಪ್ರಾಣೇದಾಸರ ಸೂನುವೆನಿಸಿದ
ಮಾನವಿ ರಾಯರ ಸೇವಿಸಿ ಕೋಲೆ ।
ಮಾನವಿ ರಾಯರ ಸೇವಿಸಿದಂಥ ಗುರು
ಪ್ರಾಣೇಶದಾಸರ ಬಲಗೊಂಬೆ ಕೋಲೆ ೬

ಶ್ರೀ ಶ್ರೀಶಪ್ರಾಣೇಶದಾಸರು

ಗಂಧದ ಕೊರಡು ಪೆಟ್ಟು ತಿಂದು ಮಾವಂದಿರಿಂದ
ಛಂದಾಗಿ ತತ್ವವರಿದಂಥ ಶ್ರೀ ರಘು ।
ನಂದನ ದಾಸರಿಗೆ ವಂದಿಪೆ ಕೋಲೆ ೭

ಶ್ರೀ ಶೇಷದಾಸರು

ಇಳೆಯೊಳು ಚಿಂತರವೇಲಿ ವಾನರೇಂದ್ರನ
ಸಲೆ ಸೇವಿಸುತ ಒಲಿಸಿದ ಕೋಲೆ ।
ಸಲೆ ಸೇವಿಸುತ ಒಲಿಸಿದ ಗುರು ಪ್ರಥಮ
ಶಿಲೆ ಶೇಷದಾಸರ ಬಲಗೊಂಬೆ ಕೋಲೆ ೮

ಪಾರ್ಥಿವ ವರ್ಷದಿ ಪಾರ್ಥಸಾರಥಿ ಭವ್ಯ
ಮೂರ್ತಿಯ ಮುದದಿ ಸ್ಥಾಪಿಸಿ ಕೋಲೆ ।
ಮೂರ್ತಿಯ ಮುದದಿ ಸ್ಥಾಪಿಸಿದಂಥ
ಪೂರ್ವ ಪಾರ್ಥಾಹಿಪಾರ್ಯರ ಪ್ರಾರ್ಥಿಪೆ ಕೋಲೆ ೯

ಪರಿವಾರ ಸಹಿತ ಚರಿಸುತ ಕೋಲೆ ।
ಪರಿವಾರ ಸಹಿತ ಚರಿಸುತ ಅಸಿಘ್ಯಾಳು
ಪುರವಾಸ ದಾಸರಿಗೆ ಶರಣೆಂಬೆ ಕೋಲೆ ೧೦

ಶ್ರೀ ಗುರು ಜಗನ್ನಾಥದಾಸರು

ಸ್ವಾಮಿರಾಯರ ವಲಿಸಿ ಸ್ವಾಮಿರಾಯನಿಗೊಲಿದು
ಸ್ವಾಮಿ ಶ್ರೀಹರಿಯ ಮಹಿಮೆಯ ಕೋಲೆ
ಸ್ವಾಮಿ ಹರಿಯ ಮಹಿಮೆ ಪೇಳಿದ ಕೋಸಿಗಿ
ಸ್ವಾಮಿರಾಯಾರ್ಯರ ಬಲಗೊಂಬೆ ಕೋಲೆ ೧೧

ಶ್ರೀ ಇಂದಿರೇಶದಾಸರು
(ತಿರುಪತಿ ಶ್ರೀ ಹುಚ್ಚಾಚಾರ್ಯರು)

ಅಚ್ಛ ಸದ್ಭಕ್ತಿಯಲಿ ಅಚ್ಯುತಕೃಷ್ಣನ
ಅರ್ಚಿಸಿ ವಿಧ ವಿಧ ಮೆಚ್ಚಿಸಿ ಕೋಲೆ ।
ಅರ್ಚಿಸಿ ವಿಧ ವಿಧ ಮೆಚ್ಚಿಸಿದಂಥ ಜ್ಞಾನಿ
ಹುಚ್ಚಾಚಾರ್ಯರನ ಬಲಗೊಂಬೆ ಕೋಲೆ ೧೨

ಶ್ರೀ ಭೀಮಸೇನಾಚಾರ್ಯರು ಕೊಪ್ಪರ

ಶ್ರೀಮತ್ ಕಾರ್ಪರ ಕ್ಷೇತ್ರಧಾಮ ನರಸಿಂಹನ
ನೇಮ ಪೂರ್ವಕದಿ ಪೂಜಿಸಿ ಕೋಲೆ ।
ನೇಮ ಪೂರ್ವಕದಿ ಪೂಜಿಸಿದಂಥ ಪೂಜ್ಯ
ಭೀಮಸೇನಾರ್ಯರ ಬಲಗೊಂಬೆ ಕೋಲೆ ೧೩

ಶ್ರೀ ರಾಘಪ್ಪದಾಸರು

ಮರುತನ ಪ್ರತ್ಯಕ್ಷಗೈದು ತನ್ನ
ಗುರುತು ತೋರದೆ ಚರಿಸಿದ ಕೋಲೆ ।
ಗುರುತು ತೋರದೆ ಚರಿಸಿದ ರಘುಪತಿ
ಚರಣ ಕಿಂಕರಗೆ ಶರಣೆಂಬೆ ಕೋಲೆ ೧೪

ನೂರಾರು ಶಿಷ್ಯಪರಿವಾರ ಸಹಿತರಾಗಿ
ಶೌರಿಕಥಾಮೃತ ಸವಿಯುತ ಕೋಲೆ ।
ಶೌರಿಕಥಾಮೃತ ಸವಿದಂಥ ಶ್ರೀ ರಘುವೀರನ
ದಾಸರಿಗೆ ನಮಿಸುವೆ ಕೋಲೆ ೧೫

ಗೋವಿಂದದಾಸರ ಭಾವಕ್ಕೆ ಮೆಚ್ಚಿ
ದೇವನ ಮಹಿಮೆ ತೋರಿದ ರಾಘವಾಖ್ಯ
ಕೋವಿದರಾಗ್ರಣಿಯ ಬಲಗೊಂಬೆ ಕೋಲೆ ೧೬

ಶ್ರೀ ಗೋವಿಂದದಾಸರು

ಎಳೆಯತನದಿ ವಿದ್ಯ ಕಲಿಯದೆ ಹರಿನಾಮ
ಬಲದಿಂದ ಜ್ಞಾನ ಗಳಿಸಿದ ಕೋಲೆ ।
ಬಲದಿಂದ ಜ್ಞಾನ ಗಳಿಸಿದ ಅಸಿಘ್ಯಾಳು
ನಿಲಯ ದಾಸರಿಗೆ ವಂದಿಪೆ ಕೋಲೆ ೧೭

ಮಾವನ ವೈರಿಯಾದ ಮಾವರನ ಮನದಿ
ಮಾವನನಂತೆಂದು ಭಾವಿಸಿ ಕೋಲೆ ।
ಮಾವನಂತೆಂದು ಭಾವಿಸಿ ಸ್ತವಿಸಿದ
ಗೋವಿಂದದಾಸರ ಬಲಗೊಂಬೆ ಕೋಲೆ ೧೮

ಬಂದ ವಿಪ್ರರಿಗೆ ಸಂದರುಶನದಿಂದ
ವಂದಿಸಿ ಪರಮಾನಂದವ ಕೋಲೆ

ವಂದಿಸಿ ಪರಮಾನಂದವ ಬಡುವ ಗೋ
ವಿಂದ ದಾಸರಿಗೆ ವಂದಿಪೆ ಕೋಲೆ ೧೯

ಲೇಸು ಭಕ್ತಿಯಿಂದ ದಾಸರ ಕವನ ಸುಧೆ
ಪ್ರಾಶನಗೈದು ಸಂತತ ಕೋಲೆ ।
ಪ್ರಾಶನಗೈದು ಸಂತತ ಅಶಿಷ್ಯಾಳು
ವಾಸದಾಸರಿಗೆ ಶರಣೆಂಬೆ ಕೋಲೆ ೨೦

ಶ್ರೀ ಐಕೂರಾಚಾರ್ಯರು

ಏಕಾಂತದಲಿ ಕುಳಿತು ಶ್ರೀಕಾಂತನ್ನ ಒಲಿಸಿ
ಲೋಕಾಂತರದಲಿ ಚರಿಸಿದ ಕೋಲೆ ।
ಲೋಕಾಂತರದಲಿ ಚರಿಸಿದ ನಮ್ಮ ಗುರು
ಐಕೂರಾಚಾರ್ಯರಿಗೆ ಶರಣೆಂಬೆ ಕೋಲೆ ೨೧

ಹುಟ್ಟಿದು ಒಂದೂರು ಮೆಟ್ಟಿದ್ದು ಬಹು ಊರು
ಕಟ್ಟ ಕಡೆಯಲಿ ಹರಿಯೂರು ಕೋಲೆ ।
ಕಟ್ಟ ಕಡೆಯಲ್ಲಿ ಹರಿ ಊರು ಸೇರಿದಂಥ
ಶ್ರೇಷ್ಠ ಸದ್ಗುರುಗಳ ಬಲಗೊಂಬೆ ಕೋಲೆ ೨೨

ಶ್ರೀ ಮಾಧವೇಶಾಚಾರ್ಯರು
ಸಾಧಕರನ ಕರೆದು ಸಾದರದಲಿ ಮುಕ್ತಿ
ಹಾದಿ ಇದೆಂದು ಬೋಧಿಸಿದಂಥ ನಮ್ಮ
ಮಾಧವೇಶಾಚಾರ್ಯರ ಬಲಗೊಂಬೆ ಕೋಲೆ ೨೩

ಚತುರ ವಿಂಶತಿ ವರನುಡಿಗಳಿಂದೆಸೆಯುವ
ರತುನ ಹಾರದ ಕೋಲುಪದ ಕೋಲೆ ।

ರತುನ ಹಾರದ ಕೋಲುತದ ನಿತ್ಯಪಠಿಸುವರಿಗೆ
ಶಾಮಸುಂದರವಿಠಲ ಮುದವೀವ ಕೋಲೆ ೨೪

ಆತ್ಮನಿವೇದನೆ ಮತ್ತು ಲೋಕನೀತಿ

೨೦೫

ಎನಗ್ಯಾಕೆ ಕವಿಯೆಂಬ ಶ್ರೇಷ್ಠ ನಾಮಾ
ಜನರೊಳಗೆ ನಾನೋರ್ವ ಮನುಜಾಧಮ ಪ

ಸ್ನಾನ ಜಪ ತಪ ಮೌನ ಧ್ಯಾನ ವರ ಮಂತ್ರಗಳ
ಖೂನವಿಲ್ಲದೆ ಜ್ಞಾನ ಹೀನನಾಗಿ
ಏನು ಹೇಳಲಿ ದುಷ್ಟ ಮಾನಿನಿಗೆ ಮನಸೋತು
ಶ್ವಾನನಂದದಿ ದಿನವ ನಾ ನೂಕಿದವನಯ್ಯ ೧

ಹತ್ತೆರಡು ಮತ್ತೈದು ಗಾತ್ರದೊಳು ಧರಿಸದಲೆ
ಸೋತ್ತುಮರ ಸತ್ಸಂಗವನು ಮಾಡದೆ
ಚಿತ್ತ ಚಂಚಲನಾಗಿ ಲೆತ್ತ ಪಗಡಿಗಳಾಡಿ
ಕತ್ತೆಯಂದದಿ ವ್ಯರ್ಥ ಹೊತ್ತು ಕಳೆದವ ನಾನು ೨

ನೇಮಪೂರ್ವಕ ಒಂದು ಯಾಮವಾದರು ಮನದಿ
ಶಾಮಸುಂದರ ಧ್ಯಾನ ಮಾಡದೆ
ಕಾಮಾರಿ ಷಡ್ವೈರಿ ಸ್ತೋಮಕ್ಕೆ
ಭೂಮಿಯೊಳು ಜಡವಾದ ನಾಮದಲಿ ಚರಿಸುವೆನು ೩

೨೦೬

ಶ್ರೀನಾಥ ಸಲಹೊ ಸತತ ನಿನ್ನ ಪದ
ಧ್ಯಾನಾನಂದವಿತ್ತು ಪ

ತಂದೆ ನಿನ್ನನುಗ್ರಹದಿ । ಜಗದೊಳಗೆ
ಬಂದೆ ಭೂಸುರ ಜನ್ಮದಿ
ಪೊಂದಿ ತ್ವತ್ವದ ಭಜಿಸದೆ ಭವದೊಳಗೆ
ಬೆಂದು ಬೆಂಡಾದೆನು ನಾ ೧

ಪಗೆ ಯಾರು ಖಳರು ಎನ್ನ । ಪಾಶದಲಿ
ಬಿಗಿದು ಬಂಧಿನಿ ಎಳೆಯುತ ॥
ಬಗೆ ಬಗೆಯ ಮಂಗನಂತೆ ಕುಣಿಸ್ಯಾಡಿ
ಹಗರಣವ ಮಾಡುತಿಹರೋ ೨

ಪರಸ್ವತಿಯರ ರೂಪ ನೋಡಿ । ಮರುಳಾಗಿ
ಬೆರೆತವಳ ಕ್ರೀಡಿಸುತಲಿ
ಪರಗತಿಯ ಚಿಂತೆ ಬಿಟ್ಟು । ಪರಮಾತ್ಮ
ನರಕಕ್ಕೆ ಗುರಿಯಾದೆನೋ ೩

ಧನದಾಪೇಕ್ಷೆಯಿಂದ । ಧನಿಕರ
ಮನೆಗ್ಹೋಗಿ ಲಜ್ಜೆ ತ್ಯಜಿಸಿ
ಘನದಾತರೆಂದವರನು । ಬಲು ತುತಿಸಿ
ದಿನಗಳೆದೆ ಶುನಕನಂತೆ ೪

ಹರಿ ನಿನ್ನ ವಾಸರದಿ । ಉಪವಾಸ
ಇರುಳು ಜಾಗರವ ಜರಿದು
ಬರಿದೆ ಕಾಲವ ಕಳೆದೆನೋ ರವಿಸುತಗೆ ।
ಅರುಹಲು ಬಾಯಿಲ್ಲವೋ ೫

ಪವಮಾನ ಕೃತ ಸುಶಾಸ್ತ್ರ । ಪ್ರವಚನವ
ಕಿವಿಗೊಟ್ಟು ಕೇಳಲಿಲ್ಲ
ಅವನಿ ದ್ವಿಜರ ಪಾದವ ಸೇವಿಸದೆ
ಭುವಿ ಭಾರ ನಾನಾದೆನೊ ೬

ಬಾಯೆಂದು ಕೂಗಿ ಕರೆವೆ । ಸರ್ವೇಶ
ಓಯೆಂದು ಬೇಗ ಬಾರೋ ॥
ಮಾಯಾ ಮೋಹವನೆ ಬಿಡಿಸೋ । ನಿನ್ನಂಘ್ರಿ
ತೋಯಜ ಧ್ಯಾನವನಿತ್ತು ೭

ಶಿಲೆಯಾದ ಸತಿಯ ಶಾಪ ಪಾದದಿಂದ
ತುಳಿದು ಸಲಹಿದ ತೆರದಲಿ
ಇಳಿಸುರನ ಮಹತ್ಪಾಪ ಕಳೆದವಗೆ
ಸಲೆ ಮುಕ್ತಿ ಸಲಿಸಿದಂತೆ ೮

ಇಂದಿನಾರಭ್ಯವಾಗಿ । ಎನ್ನಿಂದ
ನಿಂದ್ಯಕರ್ಮವ ನಡೆಸದೆ
ಮಂದರೋದ್ಧರನೆ ನಿನ್ನ ।ಸದ್ಭಕ್ತ
ವೃಂದದೊಳು ಕೂಡಿಸಯ್ಯ ೯

ಅಪರಾಧ ಕ್ಷಮಿಸುವಲ್ಲಿ । ನಿನ್ನಂಥ
ಕೃಪಣ ವತ್ಸಲ ಕಾಣೆ
ಕೃಪೆಯಿಂದ ಕರಪಿಡಿಯೊ ಕರಿವರದ
ಕಪಿಲ ಕೌಸ್ತುಭ ಕೃಷ್ಣ ೧೦

ನಿನ್ನ ನಾಮದ ಭೂಸುರ ಕುಲಹೀನ
ಕನ್ಯೆಯಳ ಸಂಗ ಮಾಡಿ
ನಿನ್ನ ಪರ್ವತ ಮೆಟ್ಟಲು ಅವಗೊಲಿದು
ನಿನ್ನಾಪ್ತನೆನಿಸಿದಂತೆ ೧೧

ನಿನ್ನೊಲುಮೆ ಪಾತ್ರರಾದ ಗುರು
ಜಗನ್ನಾಥಾಖ್ಯ ದಾಸಾರ್ಯರ
ಸನ್ನಿಧಾನದಲಿ ಇಪ್ಪ । ಇವನೆಂದು
ಮನ್ನಿಸೊ ಮಹಮಹಿನೆ ೧೨

ನಾ ಮಾಡ್ದ ದುರಿತ ರಾಶಿ । ಪೇಳಲ್ಕೆ
ಭೂಮಿಧರಗಳವಲ್ಲವೋ
ಪ್ರೇಮದಿಂದಲಿ ಪಾಲಿಸೋ ಮಮ ಸ್ವಾಮಿ
ಶಾಮಸುಂದರ ದಯಾಳು ೧३

೨೦೭

ನೆಚ್ಚದಿರು ಸಂಸಾರ ಕಾಡಗಿಚ್ಚಿನಂದದಿ
ದಹಿಸುವದತಿ ಘೋರ ಪ

ಕ್ಷುದ್ರ ಜನರ ಸಂಗ ತ್ಯಜಿಸೊ । ಸದಾ
ಮಧ್ವ ಸುಶಾಸ್ತ್ರ ಕೇಳಿ ನೀ ಗ್ರಹಿಸೊ
ಸದ್ಗುರುಗಳ ಪಾದಾಶ್ರೈಸೊ । ನೀನೆ
ಉದ್ಧಾರಕನೆಂದು ಹರಿಯನ್ನೆ ಬಯಸೊ ೧

ನಾನೆಂಬೊ ಅಹಂಕಾರ ಸಲ್ಲ । ನಿನ್ನ
ಮಾನಿನಿ ಸುತರು ಸಂಗಡ ಬಾಹೋರಿಲ್ಲ
ಈ ನುಡಿ ದಿಟ ಸಟೆಯಲ್ಲ । ಹೀಗೆ ।
ನೀನಾಚರಿಸಲು ಒಲಿವ ಶ್ರೀನಲ್ಲ ೨

ಆಶಾಕ್ರೋಧಂಗಳ ಕೀಳೊ । ಹರಿ ।
ದಾಸರ ದಾಸರ ದಾಸನೆಂದ್ಹೇಳೊ ॥
ದೋಷಕ್ಕೆ ಅಂಜಿ ನೀ ಬಾಳೊ । ಎಲ್ಲ ।
ಈಶನಾಧೀಶವೆಂಬುದೆ ಮುಕ್ತಿ । ಕೇಳೋ ३

ಹರಿವಾಸರುಪವಾಸ ಮಾಡೊ । ಇರುಳು
ಹರುಷದಿಂದಲಿ ಜಾಗರ ಮರಿಬ್ಯಾಡೊ
ಮರುದಿನ ನಿದ್ರೆಯ ದೂಡೊ । ಇಂತು
ಪರಿಯಲ್ಲಿ ನಡೆದರೆ ನಿನಗಿಲ್ಲ । ಕೇಡು ೪

ಇಂದ್ರಿಯಗಳ ನಿಗ್ರಹಿಸೊ । ಮನಿಗೆ ।
ಬಂದ ಭೂಸುರರಿಗೆ ವಂದಿಸಿ । ಉಣಿಸೊ
ಕುಂದು ನಿಂದೆಗಳೆಲ್ಲ ಸಹಿಸೊ । ಶಾಮ
ಸುಂದರವಿಠಲನ್ನ ನೀ ಪೊಂದಿ ಸುಖಿಸೊ ೫

೨೦೮

ನೋಡಿದೆ ವೆಂಕಟರಮಣನ । ದ್ವಾರ
ವಾಡ ಗ್ರಾಮದಿ ನಿಂತ ದೇವನ ಪ

ರೂಢಿಪ ದಾಸರಿಗೆ ನೀಡಲು ದರುಶನ
ಗೂಢ ಪಾದಾದ್ರಿಯಿಂ ಬಂದ ಮಹಾತ್ಮನ ಅ.ಪ

ಈತನೆ ವೈಕುಂಟನಾಥನು ನಿಜ ।
ಶಾತಕುಂಭೋದರ ತಾತನು
ಮಾತಂಗ ವರದಾತ ಶ್ವೇತವಾಹನ ಸೂತ
ಜಾತರಹಿತ ದನುಜಾತ ಕುಲಾಂತಕ ೧

ತೋಂಡಮಾನಗೊಲಿದಾತ । ತನ್ನ
ತೋಂಡ ಜನಕೆ ಸುಖದಾತನ ।
ಅಂಡಜಾತ ಪ್ರಕಾಂಡ ವರೂಥ ಬ್ರ
ಹ್ಮಾಂಡನಾಯಕನಾದ ಪಾಂಡವ ಪಾಲನ ೨

ಇಂದು ಧರಾಮರ ವಂದ್ಯನ ಶಾಮ
ಸುಂದರವಿಠಲನ ಮುಕುಂದನ
ಸಂದರುಶನ ಮಾತ್ರದಿ ಹಿಂದೆ ಮಾಡಿದ ದೋಷ
ವೃಂದವೆಲ್ಲವು ಇಂದು ಬೆಂದು ಪೋದವು ಘನ ೩

೨೦೮ ಅ

ಕೇಳ್ ಕೇಳೆಲೊ ತತ್ವಜ್ಞಾನ
ನಿನಗೆ ಬೋಧಿಸುವೆ ನಾ ಪ

ಮೋಟರು ವಾಹನ ನಾಟಕ ದರುಶನ
ಹೋಟಲೊಳಗೆ ಸುಭೋಜನ ಇದೇ ಪೀಯೂಷ ಪಾನ ೧

ವೇಶ್ಯಾಲಯ ಪ್ರವೇಶಿಸುವದೆ ಘನ
ಕಾಶಿ ಪ್ರಯಾಗ ಸಮಾನ ಭವಕ್ಲೇಶ ಭಂಜನ ೨

ಹರಿ ದಿನ ಮರು ದಿನ ಇರುಳು ಹಗಲು ಉಂಬನ
ನರನ ಜನ್ಮವೆ ಬಲು ಪಾವನ ಮಹಾ ಪಾಪನಾಶನ ೩

ಸೋಪುಲೇಪನ ಕ್ರಾಫು ಬಿಡೋಣ
ನಾಪಿತ ಕಾರ್ಯ ಕೈಗೊಳ್ಳೋಣ । ಇದೆ ವೇದಾಧ್ಯಯನ ೪

ಸೋಡಾ ಪಾನ ಬೀಡಿ ಸೇದೋಣ
ಕೂಡಿ ಇಸ್ಪೇಟ ಆಡೋಣ ಭವ ಕ್ಲೇಶ ಭಂಜನ ೫

ಕುಲದಭಿಮಾನ ಕಳೆದನುದಿನ
ನಳದೊಳಗಿನ ಜಲಸ್ನಾನ ಮಹ ಕಲುಷ ನಾಶನ ೬

ಈ ಕಲಿ ಬೋಧೆ ನಿರಾಕರಿಸುವವರಿಗೆ
ಶ್ರೀಕರ ಶ್ಯಾಮಸುಂದರನ ದಿವ್ಯಾನಂದ ಭವನ ೭

೨೦೯

ಶ್ರೀಧವನ ದೂತರಿಗೆ ಭೇದವುಂಟೆ
ಕ್ರೋಧ ಜಯಿಸಿದ ನರಗೆ ಕಲಹಗಳುಂಟೆ ಪ

ಗರುಡನಾಲಯದಿ ಉರಗಗಳ ಭಯವುಂಟೆ
ಕರಿಯ ಬೆದರಿಕೆಗೆ ಮೃಗವರಗೆ ಉಂಟೆ
ಹರಿದಿನದಲುಂಬುವಗೆ ದುರಿತ ತಪ್ಪುವದುಂಟೆ
ಗುರು ಕರುಣ ಪಡೆಯದವಗೆ ಪರಗತಿ ಉಂಟೆ ೧

ಅದ್ರಿಗಳ ಭಯವುಂಟೆ ಸುರಪನ ವಜ್ರಕೆ
ಯುದ್ಧದ ಭಯವುಂಟೆ ವೀರನಿಗೆ
ಶುದ್ಧ ಮನದಲಿ ನಮ್ಮ ಮಧ್ವಮತ ಸೇರಿದವ
ಗುದ್ಧಾರವಲ್ಲದೆ ನರಕುಪದ್ರಗಳುಂಟೆ ೨

ಕಂದರ್ಪ ನಂಜಿಕೆಯು ಶಿಂಧುರಾನನ ಕುಂಟೆ
ನಿಂದಿಸುವ ಜನಕೆ ಸುಜ್ಞಾನವುಂಟೆ
ಮಂದರೋದ್ಧಾರ ಶಾಮಸುಂದರನ ಪದಯುಗವ
ಪೊಂದಿರ್ಪ ಸುಗುಣರಿಗೆ ಆವ ಕುಂದುಗಳಯ್ಯ ೩

೨೧೦

ಶಾಂತಿಯೆಂಬುದು ಸಕಲ ಸದ್ಗುಣಂಗಳ ಮುಕುಟ
ಶಾಂತಿಯೊಂದಿರಲು ಕೃತಾಂತನಂಜಿಕೆಯಿಲ್ಲ ಪ

ಶಾಂತಿಯೆ ಪ್ರದ್ವೇಷ ಕಾಂತಾರ ಪಾವಕವು ।
ಶಾಂತಿ ಕಾಂತಿಯು ದುರಿತಧ್ವಾಂತ ಓಡಿಸುವದು
ಕುಂತ ಪರಿಘಾ ಪರಶು ಶರ । ಚಾಪ । ಮೊದಲಾದ ದು ।
ರಂತ ಶಸ್ತ್ರಾಯುಧಗಳು
ಶಾಂತಿ ಖಡ್ಗಕೆ ಶರಣು ಹೊಡೆಯುತಿಹವು ೧

ಶಾಂತಿಗೊಪ್ಪದ ಕುರುಪ ಭ್ರಾಂತಿಯಲಿ ತನ್ನ
ಸಂತತ ಸಹಿತವಾಗಿ ಸಂಗರದಿ ಹತನಾದ

ಶಾಂತಿಯಿಂದಲಿ ಧರ್ಮ ಚಿಂತೆಯನು ನೀಗಿದನು
ಶಾಂತಿಯಿಂದಲಿ ಸತ್ಯ ಹರಿಶ್ಚಂದ್ರಗಾಧಿಪ ಜನ
ಪೌರುಷವೆಲ್ಲ ನಿಸ್ತೇಜಗೊಳಿಸಿದನು ೨

ಶಾಂತಿಯಲಿ ಭಕ್ತಿ ಮುಕ್ತಿ ಇಂತೆಂದು ವೇದಗಳು
ಅಂತ್ಯದಲಿ ತ್ರೈವಾರ ಘೋಷಿಸುತಲಿಹವು
ಶಾಂತಮೂರುತಿಯಾದ ಶ್ರೀ ಶಾಮಸುಂದರನು
ಶಾಂತಿಗೆ ಮೆಚ್ಚಿ ಅಚ್ಯುತಪದವೀವಾ ३

೨೧೧

ಬಲುಕಷ್ಟ ಬರಗಾಲ ಬಂದಿತಯ್ಯ
ಕೊಲುವ ವೈರಿ ಜನಕೆ ಬರಬಾರದಯ್ಯ ಪ

ಶಿಶುಗಳಿಗೆ ಹಾಲಿಲ್ಲ ಪಶುಗಳಿಗೆ ಮೇವಿಲ್ಲ
ಉಸರಲು ಬಾಯಿಲ್ಲ ವೃದ್ಧ ಜನಕೇ
ಅಶನ ವಸನಕ್ಕಾಗಿ ವ್ಯಸನ ಪೂರಿತರಾಗಿ
ನಿಶಿ ಹಗಲು ಜನರೆಲ್ಲ ಉಸುರು ಹಾಕುತಲಿಹರು ೧

ಧವಸ ಧ್ಯಾನ್ಯದ ಬೆಲೆಯು ದಿವಸ ದಿವಸಕೆ ಮಹಾ
ಪ್ರವಾಹದಂದದಿ ವೃದ್ಧಿಯಾಗುತಲಿಹುದು
ಅವಸರಕೆ ಬೇಡಿದರೆ ಲವಣ ದೊರೆಯದು ಮೇಲೆ
ಶಿವಶಿವಾಯೆಂದು ಭವಣಿಯನನುಭವಿಸುವರು ೨

ಶಾರೆ ಕಾಳು ಭಿಕ್ಷೆಕೆರೆಯುವದಕೆ ಗತಿಯಿಲ್ಲಾ
ಶರಗೊಡ್ಡಿ ಕರೆದರೂ ಕೊಡರೊಬ್ಬರುಯಿಲ್ಲಾ
ಅರೆಹೊಟ್ಟೆಯುಂಡು ಹರಕು ಬಟ್ಟೆಯನುಟ್ಟ
ಮರಮರನೆ ಮನದೊಳಗೆ ಮರುಗುವರು ಬಡ ಜನರೂ ३

ಜೋಳ ನವಣೆ ಸಜ್ಜೆ ಕಾಳಿಗೇರಿದ ಬೆಲೆಗೆ
ತಾಳಿ ಮನದಲಿ ವ್ಯಥಿಯ ಕೂಲಿ ಜನರು
ಕೂಳಿಗಾಗದು ಎಂದು ಬಾಳುವೆಯ ಗೈಯುವಂಥ
ಕೂಲಿ ಒಲ್ಲೆವು ಎನುತ ಗೋಳಿಡುತಲಿಹರು ೪

ಕಡಲೆ ಕಾಣದ ಹರಿಯು । ಕಡಲೊಳಡಗಿದ
ಮೃಡನು ಸೊಡರೆಣ್ಣೆ ಸಿಗದೆಂದು ಸುಡುಗಾಡು ಸೇರಿದಾ
ಅಡಕಿ ಸಕ್ಕರೆ ಗೋಧಿ ಕೊಡುವ ಬೆಲೆಯನು ಕೇಳಿ
ಮಿಡುಕಿ ಮನದೊಳು ಕಣ್ಣ ಬಿಡುತಿಹರು ಸುಮನಸರು ೫

ಮಳೆರಾಯ ಮುನಿದುದಕೆ ಹೊಲ ಬೆಳೆಯದಿದ್ದುದಕೆ
ಬಳುತಿಹವು ಬಡ ಜನರ ಕಣ್ಣಿಂದ ನೀರು
ಜಲಹರಿಸುವದು ನೋಡಿ ನಲಿದಾಡಿ ನಗುತಿಹಳು ಕ್ಷಾಮದೇವಿ ೬

ಕ್ಷಾಮದೇವಿಗೆ ತನ್ನ । ಧಾಮ ಸೇರುವಂತೆ ನೀಡಿ ಮಾಡಿ ಸಾಕು
ನಮ್ಮ ಸಕಲ ಜನಕೇ ।
ಕ್ಷೇಮ ಸೌಖ್ಯವಗರೆದು । ಪ್ರೇಮದಲಿ ಪೊರೆ
ಕರವ ನಾ । ಮುಗಿದು ಪ್ರಾರ್ಥಿಸುವೆ ಶಾಮಸುಂದರ ಸ್ವಾಮಿ ೭

೨೧೨

ಕೇಳಮ್ಮ ತಂಗಿ ಕೇಳಮ್ಮ ಪ

ಕೇಳಿ ಪುರಾಣದಿ ಪೇಳಿದ ಕೃಷ್ಣನ
ಲೀಲೆಯ ಪಾಡುತ "ಬಾಳಮ್ಮ" ಅ.ಪ

ನಿಷ್ಟೆಯಿಂದಲಿ ಬಲು ಶಿಷ್ಟಳಾಗುತ
ದುಷ್ಟರಿಂದ ದೂ"ರಾಗಮ್ಮ" ೧

ಹರಿದಾಸರ ಪದ ಹರುಷದಿ ಹಾಡುತ
ಗುರು ಹಿರಿಯರ ಮನ "ಕೊಪ್ಪಮ್ಮ" ೨

ಹಾಳು ಹರಟೆಯಲಿ ಕಾಲ ಕಳೆಯದೆ
ಶೀಲಮತಿ ನೀ "ನಾಗಮ್ಮ" ೩

ವಿದ್ಯೆಯ ಕಲಿತು ಬದ್ಧಿವಂತಳಾ ।
ಗಿದ್ದರೆ ಸುಖ ಶತ "ಸಿದ್ಧಮ್ಮ" ೪

ವಂದಿಸಿ ತುಲಸಿ ವೃಂದಾವನ ಪೂಜಿಸು
ಮುಂದೆ ನಿನಗೆ "ಆನಂದಮ್ಮ" ೫

ಹೀನರ ಬೆರೆಯದೆ ಮೌನವ್ರತದಲಿ ।
ಜ್ಞಾನಿ ಜನರ ನೀ "ನರಸಮ್ಮ" ೬

ಮೂಢ ಜನರ ಒಡನಾಡದೆ ಭಕ್ತಿಲಿ
ಮಾಡುವ ಸಜ್ಜನರ "ಸಂಗಮ್ಮ" ೭

ಧರ್ಮದಿಂದ ಸತ್ಕರ್ಮ ಮಾಡುತ
ನಿರ್ಮಲಗೊಳಿಸಿ ಸಂತ "ರಂಗಮ್ಮ" ೮

ಪವನ ಪಿತನ ಕಥಾಶ್ರವಣವೆ ಪುಣ್ಯವು
ಭವ ವಿದು ಕತ್ತಲು "ಕಾಳಮ್ಮಾ" ೯

ಸದನಕೆ ಬಂದಿಹ ಬುಧರಾವರಿಸಲು
ಮಂದ ಬಲು ನಿನಗದ "ರಿಂದಮ್ಮ" ೧೦

ಎಂದೆಂದಿಗು ಪರನಿಂದೆಯ ಮಾಡದೆ
ಮಂದಿರದಿರುವದೆ "ಚಂದಮ್ಮ" ೧೧

ಸಾರಿದ ಜನರಘದೂರಗೈದು ಹರಿ
ತೋರುವ ನಿಜ ಗುರು "ಈರಮ್ಮ" ೧೨

ಅತ್ತಿಯ ಮನಿಗೆ ಹೆತ್ತವರಿಗೆ
ಉತ್ತಮ ಕೀರ್ತಿ "ತಾರಮ್ಮ" ೧೩

ಗೋವಿಪ್ರಾಳಿ ಸೇವಿಸುತಿರುವದೆ
ಕೋವಿದರಿಗೆ ಬಲು "ಜೀವಮ್ಮ" ೧೪

ಭಾವದೊಳಗೆ ಪರದೇವನೆ ಪತಿಯೆಂದು
ಭಾವಿಸುತಲಿ ಪಡಿ "ಭೋಗಮ್ಮ" ೧೫

ಭೇದಜ್ಞಾನ ಸಂಪಾದಿಸು ಕ್ಷಮಿಸುವ
ಶ್ರೀಧರ ನಿನ್ನಾಪ "ರಾಧಮ್ಮ" ೧೬

ಕೋಪದಿ ಪರರಿಗೆ ತಾಪವ ಬಡಿಸಲು
ಲೇಪವಾಗುವದು "ಪಾಪಮ್ಮ" ೧೭

ಇಂಗಡಲಾತ್ಮಜನಂಘ್ರಿ ಸರೋಜಕೆ
ಭೃಂಗಳೆನಿಸು ಸತಿ "ತುಂಗಮ್ಮ" ೧೮

ದಾಸ ಜನರ ಸಹವಾಸದೊಳಿರುವದೆ
ಕಾಶಿಗಿಂತ ವಿ"ಶೇಷಮ್ಮ" ೧೯

ಕಲಿಯುಗದಲಿ ಸಿರಿನಿಲಯನ ನೆನೆದರೆ
ಸುಲಭ ಮುಕ್ತಿ ತಿಳಿ "ಕಂದಮ್ಮ" ೨೦

ಪತಿಯು ಸದ್ಗತಿಗೆ ಗತಿ ಎಂದರಿತಿಹ
ಮತಿಯುತ ಸತಿಯೆ "ಯವನಮ್ಮ" ೨೧

ಮಧ್ವಸಿದ್ಧಾಂತದ ಪದ್ಧತಿ ತಪ್ಪದೆ
ಇದ್ದರೆ ಹರಿಗತಿ "ಮುದ್ದಮ್ಮ" ೨೨

ಸೋಗಿಗೆ ನೀ ಮರುಳಾಗಿ ನಡೆದರೆ
ಯೋಗಿ ಜನರ ಮನ "ಕಲ್ಲಮ್ಮ" ೨೩

ಶೀಲೆ ಗುಣದಿ ಪಾಂಚಾಲೆಯು ಎಲ್ಲ
ಬಾಲೆಯರೊಳು "ಮೇಲಮ್ಮ" ೨೪

ನೇಮದಿ ನಡೆದರೆ ಪ್ರೇಮದಿ ಸಲಹುವ
ಶಾಮಸುಂದರನು "ಸತ್ಯಮ್ಮ" ೨೫

೨೧೩

ಸುಖದಿಂದ ಬಾಳೆ ಬಾಲೆ । ಸುಮಂಗಲೇ । ಪ

ಸುಖದಿ ಬಾಳೆ ಸಾವಿತ್ರಿಯಂತೆ
ಸುತರ ಪಡೆದಿಳೆಯೊಳ್ ನಿರಂತರ
ಪತಿಯ ವಾಕ್ಯದಿ ನಿರತಳಾಗಿ ಅ.ಪ

ಅತಿಶಯದಿ ನಿರುತ ಪತಿಯ ಸೇವಿಸುತ್ತ
ಆತನೇ ಪರದೈವವೆಂದೆನುತ
ಹಿತವಚನವಾಡುತ ಅತ್ತಿ ಮಾವನ ಸ್ಮರಿಸುತ್ತ
ಅತಿಥಿಗಳು ಬಂದರೆ ಆದರಿಸುತ
ರತಿಪತಿ ಪಿತನಂಘ್ರಿ ಭಜಿಸುತ
ಪೃಥ್ವಿಯೋಳ್ ಅನಸೂಯಳಂತೆ ೧

ಸುಂದರಾಂಗಿಯೆ ಸತತ ಗೃಹ ಕಾರ್ಯ ಮಾಡುತ
ಇಂದಿರೇಶನ ಪಾಡುತ್ತ । ಬಂದಂಥ ವಿಪ್ರರ

ದ್ವಂದ್ವ ಪಾದಕೆರಗುತ । ಹಿಂಗಿರುವದುಚಿತ
ಮಂದ ಮತಿಗಳ ಮಾತು ಕೇಳದೆ
ತಂದೆ ತಾಯಿಗೆ ಕುಂದು ತಾರದೆ
ಇಂದು ಮುಖಿ ನೀ ಹಿಂಗಿದ್ದರನುದಿನ
ಬಂದು ಕಾಯ್ವ ಶ್ರೀ ರಾಮಚಂದಿರ ೨

ಉಡುರಾಜವದನೆ ಸದಾ ನಿನ್ನೊಡೆಯ
ನಡಿದಾವರೆ ಪೂಜಿಸು ಸರ್ವದಾ ಬಿಡಿ
ನುಡಿಗಳಾಡದೆ ಕಡು ಕರುಣದಿ ದ್ರೌಪದಾ
ಪಡೆವಳತಿ ಮೋದ । ಪಡಿ ಸುಪುತ್ರರ ಪರ
ರೊಡನೆ ಕಾಲ್ಕೆದರಿ ಕಲಹವ ತೆಗೆಯದಿರು ಸಖಿ
ಒಡೆಯ ಶ್ರೀ ಶಾಮಸುಂದರನು
ತಡೆಯದೆ ಸಂಪದವನೀಯುವ ೩

೨೧೪

ಸುಖದಿ ಜೀವಿಸು ಬಾಲೆ ಸುಗುಣ ಶೀಲೆ
ಸುಖದಿ ಜೀವಿಸು ಬಾಲೆ ಪ

ಸುಖದಿ ಜೀವಿಸು ಬಾಲೆ । ಸುಕುಮಾರಿ ಗುಣಲೀಲೆ
ರುಕುಮಿಣೀಶನ ಭಕುತಳೆನಿಸಿದ
ಸಖಿದೇವಿಯಂತೆ ಸಕಲ ಭಾಗ್ಯದಿ ಅ.ಪ

ಭೂಸುರೋತ್ತಮರಿಂದಲಿ । ಗುರು ಮಂತ್ರೋಪ
ದೇಶವಗೊಳ್ಳುತಲಿ । ಪ್ರತಿದಿವಸ ತಪ್ಪದೆ
ಬ್ಯಾಸರಿಯದೆ ಹರುಷದಲಿ । ಸದ್ಭಕ್ತಿ ಪೂರ್ವಕ
ದಾಸರ ಪದ ನಿತ್ಯದಲಿ । ನೀ ಪಾಡುತಲಿ
ಲೇಶವಾದರು ಸುಜನ ವೃಂದಕೆ

ದೂಷಿತ ಬಹು ದೋಷಕಂಜುತ
ವಾಸುದೇವನ ವಾಸರದಿ ಉಪ
ವಾಸವನು ಲೇಸಾಗಿ ಮಾಡುತ ೧

ಭಾವ ಭಕುತಿಲಿರುತ । ಗೋ ತುಳಸಿ
ವೃಂದಾವನ ಪೂಜಿಸುತ । ವಿನಯದಿ ಅತ್ತಿ
ಮಾವರ ನುಡಿ ಕೇಳುತ । ಕೈಪಿಡಿದ ಪತಿ ಪರ
ದೇವನು ಎಂದೆನುತ । ಸಲೆ ಸೇವಿಸುತ್ತ
ಆವ ಕಾಲ ಕಪಟ ಮತಿಗಳ
ಠಾವಿಗ್ಹೋಗದೆ ಪರರ ಒಡವೆಯ
ಬೇವಿನಂದದಿ ಭಾವಿಸುತ ಸಂ
ಭಾವಿತಳು ನೀನಾಗಿ ಜಗದೊಳು ೨

ಮಂದ ಮತಿಯರ ಕೂಡದೆ । ಎಂದೆಂದಿಗು ಪರ
ನಿಂದೆ ಮಾತುಗಳಾಡದೆ ಅವರೊಲುಮೆಯಿಂದಲಿ
ಕಂದನ ಪಡಿ ಪ್ರೇಮದಿ । ಸಂದೇಹಪಡದೆ
ತಂದೆ ತಾಯಿಗೆ ಕುಂದು ತಾರದೆ
ನಂದ ಕಂದ ಮುಕುಂದ ಶಾಮ
ಸುಂದರನ ಶುಭ ನಾಮ ಬಿಡದಲೆ
ಒಂದೆ ಮನದಲಿ ಧ್ಯಾನಿಸುತ ಚಿರ ೩

೨೧೫

ವಧು ವರರ ಉದ್ಧರಿಸೊ ಉದಧಿ ಶಯನ
ಒದಗಿಸುತಲಾಯುರಾರೋಗ್ಯ ಸುಜ್ಞಾನ ಪ

ಯತಿಪೂಜೆ ಕ್ಷಿತಿ ದೇವತತಿ ಸೇವೆ
ತಿಥಿ ತ್ರಯದ ವ್ರತ ನೇಮ ಮೊದಲಾದ ಸತ್ಕರ್ಮವ

ಮತಿಯಿಂದ ಗೈಯುತಲಿ ಪತಿತಪಾವನ ನಿನ್ನ
ಕಥೆಗಳನು ಕೇಳ್ವದಕೆ ರತಿಯಿತ್ತು ಪ್ರತಿದಿನದಿ ೧

ಹಿರಿಯರಲಿ ವಿಶ್ವಾಸ ಗುರು ಮುಖದಿ ಉಪದೇಶ
ಮರುತ ಸಚ್ಛಾಸ್ತ್ರದಭ್ಯಾಸವ
ಪರಮ ಸದ್ಭಕ್ತಿಯಲಿ ನಿರುತದಲ್ಲಿ ಗೈಯುದಕೆ
ಸ್ಥಿರವಾದ ಮನವಿತ್ತು ಮರಿಯದಲೆ ಮಾರಮಣ ೨

ಸಾಮಗಾನ ವಿಲೋಲ ಶಾಮಸುಂದರವಿಠಲ
ಸ್ವಾಮಿ ಮನ್ನಿಸಿ ಎನ್ನ ವಿಜ್ಞಾಪನೆ
ಯಾಮ ಯಾಮಕೆ ನಿನ್ನ ನಾಮಸುಧೆಯನು ಸವಿಪ
ಈ ಮಹಾಸುಖಗರೆದು ಪ್ರೇಮದಿಲಿ ಕೈಪಿಡಿದು ೩

೨೧೬

ಉರುಟಣಿಯಾ ಸರಸಿಜನಾಭಾಗ್ಗರುಷದಲಿ ಮಾಡುವೆನಾ ಪ

ಶಂಖ ಚಕ್ರಧರಾ ವೆಂಕಟೇಶ ನಿಮಗೆ ।
ಕುಂಕುಮ ಹಚ್ಚುವೆ ಪಂಕಜಾಕ್ಷಿ ನಾ ೧

ನಂದಗೋಪಿ ಕಂದ ಹಚ್ಚುವೆ ಗಂಧ
ಹಚ್ಚುವೆ ಸುಗಂಧ । ಮುಕುಂದಗೆ ೨

ಯಶೋದೆಯ ಬಾಲಾ ಕಾಮಿತ ಶೀಲಾ
ಹಾಕುವೆನು ಮಾಲಾ ಗೋಪಾಲಗೆ ೩

ಪೊಡವಿ ಪಾಲಿಪಾ । ಕಡಲಶಯನಾ ।
ಕೊಡುವೆನು ವಿಡಾ ಪಿಡಿ ಬೇಗನೆ ೪

ಪೊಡವಿ ಪಾಲಿಪಾ ಕಡಲಶಯನಾ ।
ಶಾಮಸುಂದರವಿಠಲಾಗೆ ಬೇಗ ।
ವಂದಿಸಿ ಪ್ರಾರ್ಥನೆಗೈಯುವೆ ನಾ ೫

೨೧೭

ಬಾಲನೆ ಬಹು ವಿಭವದಲಿ ಬಾಳೆಲೊ ಚಿರಕಾಲದಲಿ ಪ

ಶುದ್ಧ ಸದ್ಭಕುತಿ ಭಾವದಲಿ ಮದ್ವಶಾಸ್ತ್ರವ ಪಠಿಸುತಲಿ ।
ಸದ್ವೈಷ್ಣವನೆಂದೆನಿಸುತಲಿ ಬಾಳೆಲೋ ನೀ ಚಿರಕಾಲದಲಿ ೧

ತಾಯಿನುಡಿಯ ಸೇವೆಗೈದು ನ್ಯಾಯಮಾರ್ಗದಲಿ ನಡೆದು ।
ಬೇಗ ಆಯಿತ ಜಯ ಯಶ ಪಡೆದು ಬಾಳೆಲೊ ೨

ದಾಸವೃತ್ತಿಯನು ಅನುಸರಿಸಿ ಶ್ರೀ ಶಾಮಸುಂದರನೊಲಿಸಿ
ಸತಿ ಸುತರಿಂದಲಿ ಹಿತದಿಂದಲಿ ಬಾಳೋ ೩

೨೧೮

ಬಾರೆ ಬೇಗನೆ ವಾರಿಜಾಮುಖಿ
ಚಾರುವೇದಕೆ ನೀ ಬಾ ಬೇಗನೆ ಪ

ಕನಕಾಂಬರವನುಟ್ಟು ಘನಕಂಚುಕವ ತೊಟ್ಟು
ಹಣೆಗೆ ತಿಲಕವಿಟ್ಟು ವನಜಾಜಿ ಮಲ್ಲಿಗೆಯಾ
ಮುಡಿಯುತ ನೀ ಬೇಗನೆ ಬಾ ೧

ಉಲ್ಲ ಪೈಜಣದಿ ಘಿಲ್ಲು ಘಿಲುರೆನುತಲಿ
ನಿಲ್ಲದೆ ಉಲ್ಲಾಸದೀಗ ।
ಬೇಗ ಪುಲ್ಲನಯನೆ ಬಾ ೨

ಕಾಮನ ಶಿರೋಮಣಿ ಕಾಮನ ಕರುಣಿ
ಶಾಮಸುಂದರನ ರಾಣಿ ನೀ ಬೇಗನೆ
ಪ್ರೇಮದಿಂದಲಿ ಬಾ ೩

೨೧೯

ತ್ವರಿತದಿ ಬಾರೆ ಸಖಿ ಸುನೇತ್ರೆ ।
ಹರುಷದಿ ಪೀಠಕೆ ಮಂಗಳಗೀತೆ ಪ

ಮಿನುಗುವ ನಯನಾ ಕನಕಾಭರಣಾ ।
ಮಣಿಮುತ್ತಿನ ವನಮಾಲೆಯು ಧರಿಸುತ ೧

ರತ್ನದಹಾರ ದಿವ್ಯಾಂಬರದಿ । ಮಿತ್ರಿ
ನೀ ಶೋಭಿಸುತ ಪೀಠಕೆ ಮುದದಿ ೨

ಕೋಮಲೆ ಬಾಲೆ ಸುಶೀಲೆ
ಶಾಮಸುಂದರನ ನಾಮವ ಪಾಡುತ ೩

೨೨೦

ಜೀವಿಸು ಜಗದಿ ಬಾಲಕನೆ । ಚಿರಂಜೀವಿಯಾಗುತ ಪ

ಚಿತ್ತ ಸುಶಿದ್ಧಿಯಿಂದಲಿ । ನಿತ್ಯಾನುಷ್ಠಾನ ಗೈಯುತಲಿ ॥
ಸತ್ಯಸುಶೀಲನಾಗುತ । ಅತ್ಯಾನಂದವನನುಭವಿಸು ೧

ಕ್ರೋಧಾದಿ ಗುಣವ ನಿಗ್ರಹಿಸಿ । ಸಾಧು ಸತ್ಪಥವವಲಂಬಿಸಿ
ಭೂದೈವರಾರಾಧಿಸುತ ನೀ । ಸಂಪದಿಸು ಪರಮ ಸತ್ಕೀರ್ತಿ ೨

ಶ್ರೀ ಮಧ್ವಮತವಲಂಬಿಸಿ । ಪಾಮರ ಮತವ ಧಿಕ್ಕರಿಸಿ ।
ಶಾಮಸುಂದರನ ನೀ ಒಲಿಸಿ ।
ಈ ಮಹೀಮಂಡಲದಿ ಸುಖಿಸು ಜೀವಿಸು ೩

೨೨೧

ಜೀವಿಸು ನೀ ಸುಖಿಯಾಗು ಜಗದಿ ಪ

ಬಾಲೆ ನೀ ಗುಣವಂತೆ ಸುಶೀಲಳೆಂದೆನಿಸಿ ॥
ಬಾಲರ ಪಡೆದು ಬಾಲೆ ಸನ್ಮುದದಿ ೧

ಪತಿಯ ಆರಾಧಿಸುತ ಬಲು
ಹಿತ ತೋರುತಲಿ ೨

ಶಾಮಸುಂದರನ ನಾಮ ಸಂಕೀರ್ತನ ।
ಪ್ರೇಮದಿ ಪಾಡುತ ಕಾಮಿನಿ ಮಣಿ ನೀ ೩

೨೨೨

ಕುಂದಣದ ಹಸೆಗೆ ಚಂದದಿಂದ ಬಾರೆ ।
ಸಿಂಧು ಕುಮಾರೆ ಬಾ ಸಿಂಧು ಕುಮಾರೆ ।
ಶೃಂಗಾರಮಯವಾದ ಕಂಗೊಳಿಸುವ ಬಹು
ರಂಗಮಂಟಪದಲ್ಲಿ ತಿಂಗಳ ಸಹೋದರಿ ೧

ಸಿಂಧುರ ಮಂದಗಮನೆ ಕುಂದಕುಟ್ಮಲರದನೆ
ಇಂದು ಧರೆಯಲಿ ಸುರವೃಂದವಂದಿತ ಜನನಿ ೨

ಕಾಮನ ಜನನಿ ಕಾಮಿತದಾಯಿನಿ
ಗೋಮಿನಿ ರುಕ್ಮಿಣಿ ಶಾಮಸುಂದರನ ರಾಣಿ ೩

೨೨೩

ಕಾಮಿನಿ ಮಣಿ ಗರಿಗಾಮಿನಿ ಸುಖವಾಣಿ ಪ

ವರಮೌಕ್ತಿಕ ಮಣಿಮಯ ಪೀಠಿಕೆ ಬಾ ಗುಣಶ್ರೇಣಿ
ಮರುಗು ನಾಗ ಸುರಗೆ ಜಾಜಿ
ಸರಸ ಸೂಮಾಲೆ ಧರಿಸಿ
ವರ ಶೃಂಗಾರಳಾಗುತಲಿ ೧

ಅಗರು ಗಂಧ ಚಂದನವನು
ಮೃಗ ಮದ ಗಜ ಜೌವ್ವನವನು
ಮಿಗೆ ಶ್ರೀ ಲೇಪಳಾಗುತಲಿ ೨

ಶಾಮಸುಂದರನಂಘ್ರಿ ಕಮಲ
ಭಾಮಿನಿ ನೀನು ಮನದಿ ಸ್ಮರಿಸೆ
ಕೋಮಲಾಂಗಿ ಶಶಿವದನೆ ೩

೨೨೪

ಹಾಕುವೆ ಸುಮಾಲಾ ಸುಶೀಲಾ
ಸ್ವೀಕರಿಸ್ಯೆ ಕರುಣಾಕರ ಕಂಠದಿ ಪ

ಅರಳಿದ ಮಲ್ಲಿಗೆ ಸುರಸು ಶಾವಂತಿಗೆ
ಪರಿಮಳ ಪುಷ್ಪದ ಸರವನು ಶಾವಂತಿಗೆ
ಪರಿಮಳ ಪುಷ್ಪದ ಸರವನು ವಿರಚಿಸಿ ೧

ಜೀವದೊಡೆಯ ಪರದೇವತೆ ನೀನೆಂಬೊ
ಭಾವಕುಸುಮ ಭಕ್ತಿ ಸೂತ್ರದಿ ಬಂಧಿಸಿ ೨

ಶಾಮಸುಂದರ ನಿನ್ನ ನೇಮದಿ ನೆನೆವೆನು
ಭಾಮೆಯನಗಲದೆ ಪ್ರೇಮದಿ ಪೊರೆ ಎಂದು ೩

೨೨೫

ಹಾಕುವೆ ಸುಮಾಲಾ ಸುಶೀಲಾ
ಜೀವದೊಡೆಯ ಪರದೇವತೆ ನೀನೆಂಬೊ
ಭಾವಕುಸುಮ ಭಕ್ತಿ ಸೂತ್ರದಿ ಬಂಧಿಸಿ ೧

ಸರಸಿಜನಾಭನೆ ಸುರದೊಡೆಯನೆ ನೀ
ವಿರಚಿಸಿದಂಥ ಪರಿಮಳ ಹಾರವ
ಸರುವ ಹಾರವ ತಂದು ಕೊರಳಿಗೆ ಹಾಕುವೆ ೨

ಶಾಮಸುಂದರ ನಿಮ್ಮ ನೇಮದಿ ನಡೆವೆ ನಾ
ಭಾಮೆಯನಗಲದೆ ಪ್ರೇಮದಿ ಪೊರೆಯೆಂದು ೩

೨೨೬

ಹಸೆಗೀಗ ಬಾರೆ ಸಖಿಯೆ ಶಶಿಬಿಂಬ ಪೋಲ್ವ ಮುಖಿಯೆ ಪ

ಝುಗ ಝುಗಿಪ ವಸನ ಉಟ್ಟು ।
ಸೊಗಸಾದ ಕಂಚುಕವ ತೊಟ್ಟು ।
ಮೃಗಮದದ ಕಸ್ತೂರಿ ಬಿಟ್ಟು ಮೃಗನಯನೆ ಫಣೆಯೊಳಿಟ್ಟು ೧

ರಮಣೇರು ಕೂಡಿ ನಿನ್ನ ಘಮಘಮಿಸು ಕರೆಯುತಿಹರೇ ।
ಪ್ರಮದಾಮಣಿಯೆ ಶಿರದಿ ಸುಮಗಳ ಮುಡಿದು ಮುದದೀ ೨

ಸಿರಿಯರಸ ಕಮಲನಯನ ವರಶಾಮಸುಂದರನಾ ।
ಸ್ಮರಿಸುತ್ತ ಮನದಿ ಲಲನೆ ತಿರಸ್ಕರಿಸದೆ ಹಂಸಗಮನೆ ೩

೨೨೭

ಜಾಣೆ ನಂಬಿದೆ ಇಷ್ಟೇಟ ರಾಣೀ ನೀನೊಲಿದೆನ್ನ
ಪಾಣಿಯೊಳಗೆ ಬಂದು ಕಾಣಿಸಮ್ಮ ಪ

ವಾಣಿ ಶ್ರೀಲಕುಮೀಶ ರುದ್ರಾಯಣಿಯರಿಗಿಂತ
ಕ್ಷೋಣಿಯೊಳಗೆ ಬಹುಮಾನಿತೆ । ನೀನಮ್ಮ ಅ.ಪ

ಜನಕನು ಗಳಿಸಿದ ಧನವೆಲ್ಲಾ ಕಳಕೊಂಡೆ
ದನಕರ ಹೊಲಮನೆಯನು ಮಾರಿದೆ
ಜನರೊಳಗಪಹಾಸ್ಯಗೊಳಗಾದೆ ಕೇಳಮ್ಮ
ವನಿತೆ ಮಕ್ಕಳ ಕೈಲಿ ಕೊನೆಗೆ ಪರಟೆ ಕೊಟ್ಟೆ ೧

ಉಣಲು ಅನ್ನವು ಕಾಣೆ । ಉಡಲು ವಸ್ತ್ರವು ಕಾಣೆ
ಕಡುಕಷ್ಟ ಕಡಲೊಳು ಮುಳುಗಿದೆ ನೋಡಮ್ಮ
ಪೊಡವಿಯೋಳ್ ನಿನ್ಹೊರತು ಕಡೆ ಹಾಯಿಸುವಂಥ
ಒಡೆಯರ ಕಾಣೆ ಕೈಪಿಡಿದು ರಕ್ಷಿಸೊ ರಕ್ಷಿಸೋ ನೀನಮ್ಮ ೨

ಎಷ್ಟೆಂತ ಹೇಳಲಿ ಮಡದಿಯ ಗೋಳಾಟ ತಾಳಿ ಹೊರೆತು
ಎಲ್ಲಾ ಹಾಳಾಯಿತು । ಸಾಲ ಬಹಳಾಯಿತು ಜೋಳಿಗೆ ಬಂದಿತು
ಕೂಳಿಗೆ ಮನೆ ಮನೆ ಚಾಲುವರಿದೆನಮ್ಮಾ ೩

ಚಾರರುಭಯರಲ್ಲಿ ಸೇರಿ ಬಂದಾಕ್ಷಣ
ಹಾರಿ ಹೋಗುವದಮ್ಮಾ ಪಕ್ಕಾ ರಂಗು
ಧಾರುಣೀಶರ ಮಧ್ಯ ತೋರೀದ ಸಮಯದಿ
ಆ ರಾಣಿ ವರ್ಗವ ಥರ ಥರ ನಡುಗಿಸುವಿ ೪

ಅಕ್ಕರದಲಿ ಎರಡೆಕ್ಕದೊಳು ಬಂದು
ಪಕ್ಕನೆ ನೀ ಎನ್ನ ಕೈಯೊಳು ಬಾರೆ
ಮುಕ್ಕಣ ಸಖ ತನ್ನ ಬೊಕ್ಕಸದೊಳಗಿನ
ರೊಕ್ಕ ಹಾಕಲು ಅವನ ಲೆಕ್ಕಿಸೆನಮ್ಮ ೫

ಕಾಮಿತ ದಾಯಿನಿ ಕಾಮಿನಿ ಶಿರೋಮಣಿ
ಶಾಮಸುಂದರ ಸಾರ್ವಭೌಮನ ರಾಣಿ
ಶ್ರೀಮಂತ ಜೋಕರನ ಪ್ರೇಮದ ಭಗಿನಿಯೆ
ನಾ ಮೊರೆಹೊಕ್ಕೆನು ನೀ ದಯಮಾಡು ತಾಯೆ ೬

೨೨೮

ಓ ಎನ್ನ ಬಂಧುಗಳೆ । ನಾನಿಂದು ಜಗದಿಂದ ಮಾಯ ।
ವಾಗಿಹೆನೆಂದು ಮನದೊಳಗೆ ಮರುಗದಿರಿ ॥
ಕಂಬನಿಯ ಸುರಿಯದಿರಿ । ಎನಗೆ ಮರಣವು ಇಲ್ಲ ।
ನಿಮ್ಮನಗಲಿ ಪೋಗಿಲ್ಲ । ಜಡದೇಹ ಸ್ಥಿರವಲ್ಲ ।
ಇದು ತಿಳಿಯದೆ ಮನದಿ ಮಿಡುಕುವುದು ಸರಿಯಲ್ಲ
ಎನ್ನಿರವು ಭಾರತದಿ ನೀವೇನು ಅರಿತಿಲ್ಲ । ನ್ಯಾಯದಲಿ
ನಿಷ್ಠೆಯಲಿ ಸತ್ಯದಲಿ ಶಾಂತಿಯಲಿ । ಉತ್ತಮೋತ್ತಮವಾದ
ಅಹಿಂಸೆ ತತ್ವದಲಿ । ಹರಿ ಪೇಳ್ದ ಗೀತೆಯಲಿ ।
ಹರಿಜನರ ಮಧ್ಯದಲಿ
ಬಡಜನರ ದುಃಖದಲಿ । ಸೆರೆಮನೆಯ ವಾಸದಲಿ । ಉಪವಾಸ
ವ್ರತದಲ್ಲಿ । ಭೇದ ಭಾವವ ಬಿಟ್ಟ ಸಾಧು ಸಜ್ಜನರಲ್ಲಿ ।
ಖಾದಿ ವಸ್ತ್ರವನುಟ್ಟು । ಮೋದ ಬಡುತಿಹರಲ್ಲಿ ।
ರಾಟೆನೂಲುವವರಲ್ಲಿ ।
ರಾಷ್ಟ್ರಪ್ರೇಮಿಯಲ್ಲಿ । ಹಿಂದುಮುಸ್ಲಿಮರುಭಯರೊಂದಾಗಿ ।
ನಡೆವಲ್ಲಿ ಕುಂದದೆ ನಾನಿಪ್ಪೆ । ಸಂದೇಹ ವಿಲ್ಲದಕೆ । ಈ

ಗುಣಂಗಳೆನಗೆ ಆನಂದದ ನಿವಾಸ । ಇದನಾಚರಿಸುವದೆ
ಮನಕೆ ಉಲ್ಲಾಸ । ಶ್ರೀ ಶಾಮಸುಂದರಗೆ ನಾಂ ಮೋಹನದಾಸ ॥

೨೨೯

ಸತ್ಕವೀಂದ್ರ ಬಾ ಬೇಂದ್ರೆ ಸುಗುಣ ಸಾಂದ್ರ ಪ.

ನಮ್ಮ ಮಾನವಿ ಸ್ಥಳದಿ ಅಚ್ಚಗನ್ನಡ ನುಡಿಯ
ಸಮ್ಮಿಲನ ಸಾಗಿಸಲು ನಿಶ್ಚಯಿಸಿದೆ
ನಿಮ್ಮ ಬರುವಿಗೆ ಬಯಕೆ ಇಮ್ಮಡಿಸಿದೆಮಗೆ
ಸಮ್ಮತಿಸಿ ಬಾರಯ್ಯ ಸತ್ಕವೀಂದ್ರ ಶ್ರೀ ಬೇಂದ್ರೆ ಸುಗುಣೇಂದ್ರ ೧

ಅಚ್ಚಗನ್ನಡ ತಾಯಿಗಚ್ಚದ ಮನೆಂದು
ಹೆಚ್ಚಾಗಿ ನಿಮ್ಮನ್ನು ಮೆಚ್ಚುವೆವೋ
ಮುಚ್ಚುಮರಿಯಾಕೆ ಈ ಉತ್ಸವಕೆ ಬರದಿರೆ
ಮೆಚ್ಚುವಳೆ ವಾಗ್ದೇವಿ ಸತ್ಕವೀಂದ್ರ ೨

ದಾತರಾದವರಾರ್ತರಾತುರದಿ ತ್ವರದಿಂದ
ಪ್ರೀತಿಯಲಿ ಪೂರ್ತಿಸಲು ಒಪ್ಪಿರೆಂಬಾ
ನೀತಿ ಮಾತನು ನೀ ತಿಳಿಯದಾತನೆ
ಹಾತೊರೆಯುತಿದೆ ಮನವು ಸತ್ಕವೀಂದ್ರ ೩

ಕನ್ನಡದ ನುಡಿ ಸುಧೆಯ ಕನ್ನಡಿಗರಿಗೆ ಬೀರಿ
ಕನ್ನಡನಾಡೆಂಬ ಪಾಲ್ಗಡಲಕೆ
ಜೇನ್ನೊಡಲನೆಂದೆನಿಸಿ ಕನ್ನಡಿಗರಿಂ
ಮನ್ನಣೆಯ ಪಡೆದಂಥ ಸತ್ಕವೀಂದ್ರ ೪

ಉಸಿರಲೆನ್ನಯ ಮತಿಗೆ ವಶವಲ್ಲವೈ ನಿನ್ನ
ರಸವತ್ಕವಿತಾ ಪ್ರತಿಭಾ ಚಾತುರ್ಯವಾ

ಹೊಸಗನ್ನಡ ನುಡಿ ರಸದ ಮಾಧುರ್ಯಮಂ
ರಸಿಕರಿಗೆ ನೀ ನೀಡು ಸತ್ಕವೀಂದ್ರಾ ೫

ಕನ್ನಡ ನುಡಿ ಸಾರಿ ಕನ್ನಡಕುಪಕಾರಿ
ಕನ್ನಡದ ಜಯಭೇರಿ ಹೊಡೆದ ನಗಾರಿ
ಕನ್ನಡದ ಹೊಸ ಸಿರಿಯು ಕನ್ನಡ ರಸ ಝರಿಯು
ನಿನ್ನಿಂದ ಲಭಿಸಿತ್ತೈ ಸತ್ಕವೀಂದ್ರಾ ೬

ನಿನ್ನಿಂದ ಕನ್ನಡದ ಮ್ಲಾನತೆಯು ದೂರಾಯಿತು
ನಿನ್ನಿಂದ ನವ ಕವನ ಕವಲೊಡೆದು ಸರ್ವತ್ರ
ಉನ್ನತೆಯ ನೈದಿತ್ತೈ ಸತ್ಕವೀಂದ್ರಾ ೭

ವೃತ್ತಪತ್ರಿಕೆಗಳಲಿ ಮತ್ತೆ ಸಮ್ಮೇಳನದಿ
ನಿತ್ಯ ಓದುವ ಮನೆ ಶಾಲೆಯಲ್ಲಿ
ಚಿತ್ತಪೂರ್ವಕ ನಿನ್ನ ಉತ್ತಮೋತ್ತಮ ಕವನ
ಮತ್ತೆ ಪೇಳುವರು ಸತ್ಕವೀಂದ್ರಾ ೮

ನುಡಿಯಣ್ಣನೊಲುಮೆಯೋ । ನುಡಿಯೊಡೆಯನನುಗ್ರಹವೋ
ಪಡೆದ ಮಾತೆಯ ಜೀತನೋಪಿ ಫಲವೋ
ಕಡು ಸರಳ ಬಿಡಿವೃತ್ತ ಸಡಗರದಿ ರಚಿಸುತ್ತ
ಪೊಡೆವಿಯೊಳು ಪಸರಿಸಿದ ಸತ್ಕವೀಂದ್ರಾ ೯

ಪ್ರೇಮದಿಂದಲಿ ನಿನ್ನ ಪ್ರೇಮಿತಾರ್ಥವಗರೆದು
ಶಾಮಸುಂದರವಿಠಲ ಸಲಹೋ ಎಂದು
ನಾ ಮುದದಿ ಪ್ರಾರ್ಥಿಸುವೆ ನೀಮಾಡ್ವ ಉಪಕಾರ ೧೦

೨೩೦

ಖಾದಿ ಧರಿಸುವ ಜನಕೆ ಕ್ರೋಧವುಂಟೇ ಪ

ಕ್ರೋಧ ಜೈಸಿದ ನರಗೆ ಕಲಹಗಳುಂಟೇ
ಪಥ್ಯದಿಂದಿರುವವಗೆ ವ್ಯಾಧಿ ಭಯವೇ
ನಿತ್ಯ ಉಪವಾಸಿಗೆ ಭತ್ತದಾ ವ್ಯಥೆಯುಂಟೇ
ಚಿತ್ತ ಶುದ್ಧಿದ್ದವಗೆ ಮೈಲಿಗೆಯ ಪರವೇ ೧

ಆಶೆ ಬಿಟ್ಟವನಿಗೆ ಅರಸರಾಭಯವುಂಟೆ
ದಾಸನಾದವನಿಗೆ ದೋಷವುಂಟೆ ।
ದೇಶ ಉದ್ಧಾರಕಗೆ ಸೆರೆಮನೆಯ ಭಯವುಂಡೆ
ಪೂಶರನ ಗೆದ್ದವಗೆ ಕಾಮಿನಿಯ ಭಯವೇ ೨

ಗೀತಾರ್ಥ ತಿಳಿದವಗೆ ಪಾತಕದ ಭಯವುಂಟೆ
ಶೀತೋಷ್ಣ ಸಹಿಸುವವಗೆ ಛಳಿ ಬಿಸಿಲು ಭಯವೆ ।
ನೀತಿ ಕೋವಿದರಿಗೆ ಜಾತಿ ಪಕ್ಷಗಳುಂಟೆ
ದಾತನಿಗೆ ದುರ್ಭಿಕ್ಷು ಭೀತಿ ತಾವುಂಟೆ ೩

ವಿದ್ಯಾಭಿಲಾಷೆಗೆ ತೇರ್ಗಡೆಯ ಭಯವುಂಟೆ
ಉದ್ಯೋಗವಿದ್ದವಗೆ ಉದರ ಭಯವೇ
ಯುದ್ಧ ಶೂರರಿಗೆಲ್ಲ ಮದ್ದುಗುಂಡಿನ ಭಯವೇ
ಬುದ್ಧಿವಂತರಿಗೆಂದಿಗಪಮಾನ ಭಯವೇ ೪

ನೇಮದಿಂದಲಿ ನಡೆವವಗೆ ಸೋಮಾರಿತನವುಂಟೆ
ಭೂಮಾತೆ ಮಕ್ಕಳಿಗೆ ಕ್ಷಾಮವುಂಟೆ
ಸಾಮಗಾನ ವಿಲೋಲ ಶಾಮಸುಂದರವಿಠಲ
ನಾಮ ನೆನವವಗೆ ಯಮಧಾಮದಂಜಿಕೆಯೇ ೫

೨೩೧

ಸ್ವಾಗತ ಸುಗುಣಗೆ ಸ್ವಾಗತ ಕರುಣಿಗೆ
ಸ್ವಾಗತವು ನವಸಚಿವರಿಗೆ । ಸ್ವಾಗತ ಸ್ವಾರ್ಥ
ವಿದೂರರಾದ ಜಗನ್ನಾಯಕ ನಾಮ ರಾಯರಿಗೆ ॥
ತರಳತನದಿ ಇವರು ಸರಳ ಮನಸ್ಸಿನಲ್ಲಿ
ಸರಸ್ವತಿದೇವಿಯನೊಲಿಸಿದರು ।
ಪರಮಪೂಜ್ಯ ಮಹತ್ವರ ತತ್ವ
ತಿರುಳು ತಿಳಿದು ಆಚರಿಸಿದರು ೧

ಪ್ರಾಂತದ ಬಡವರ ಚಿಂತೆ ಕಡಿಯಲು
ಸ್ವಾಂತದಿ ಪಂಥವ ಗೈದವರೋ ॥
ಕ್ರಾಂತಿಯ ಹೂಡುತ ಶಾಂತಿ ಸಂಗರದಿ
ನಿಂತು ಹೋರಾಡಿದ ಯೋಧರು ೨

ದುರುಳರಾಳಿಕೆಯಲಿ ಜರಿದು ಧಿಕ್ಕರಿಸಿ
ಸೆರೆಮನೆ ಕಷ್ಟವ ಸಹಿಸಿದರು ।
ದೊರೆಯ ಸ್ವತಂತ್ರವು ಬಹುಮತದಲಿ ಸ್ವೀ
ಕರಿಸಿದರು ಮಂತ್ರಿಪದವಿಯನು ೩

ಉಚ್ಚ ನೀಚವೆಂಬ ಕುತ್ಸಿತ ಭಾವವ ।
ಕೊಚ್ಚಿ ಬೀಸಾಡಿದ ಜಾಣರು ।
ಅಚ್ಚಗನ್ನಡದ ವೀರ ಜನನಿಗೆ
ಅಚ್ಚದ ಪ್ರೀಯ ಸುಕುಮಾರರು ೪

ಈ ಮಹಾಚತುರನ ಪಡೆದ ಚಂದ್ರಿಕಿ
ಗ್ರಾಮದೇವಿ ಬಹುಪುಣ್ಯವತಿ ।
ಪ್ರೇಮದಿಂದಿವರ ನೇಮವ ನಡೆಸುವ
ಶಾಮಸುಂದರನು ದಿನಂಪ್ರತಿ ೫

ದಾಸವೃಂದ

೨೩೨

ಪೋಷಿಸೆನ್ನ ಜೀಯ ಶ್ರೀ ಪ್ರಾಣೇಶದಾಸರಾಯ ಪ

ಭೂಸುರ ಸೇವಿತ । ಭಾಸುರ ಮಹಿಮ ಉ
ದಾಸೀನ ಮಾಡದೆ । ದೋಷಗಳೆಣಿಸದೆ ಅ.ಪ

ಪದುಮಸಂಭವ ಕುಲದಿ ಜನಿಸುತ
ವಿದುರಾಗ್ರಜ ಜಗದಿ । ಯದುಪತಿ ಸುಕಥೆಯ
ವಿಧ ವಿಧದಿ ಬೋಧಿಸಿ
ಮದಡರುದ್ಧರಿಸಿದ । ಸದಮಲ ಹೃದಯ ೧

ನತಜನ ಸುರತರುವೆನಿನ್ನನು
ತುತಿಸಿಲೆನಗೊಶವೆ ।
ಸತತದಿ ಸೇವಿಸಿ । ಯತಿ ವರದೇಂದ್ರರ
ಹಿತದಲಿ ಪಡೆದ ಪ್ರತಿ ಪ್ರಭಾಕರ ೨

ತರತಮ ಭೇದವನು । ಶ್ರೀವರ
ಹರಿದಿನ ಮಹಿಮೆಯನು
ಸರಳ ಕನ್ನಡದಿ ವಿರಚಿಸಿ ಕವನವ
ನೊರೆದು ಸಜ್ಜನರ ಪೊರೆವ ಮಹಾತ್ಮಾ ೩

ವಾತಜಾತ ಸುಮತ ಸಾಗರ
ಶೀತಕಿರಣ ನಿರುತ
ಪೋತನೊಳೀ ತೆರ । ಯಾತಕೆ ನಿರ್ದಯ
ನೀ ತವಕದಿ ಸಂಪ್ರೀತಿಯಿಂದೊಲಿದು ೪

ಪ್ರೇಮದಿ ಪಿಡಿಕೈಯ । ಮಾನವಿ
ಧಾಮರ ಸುವಿಧೇನು
ಶಾಮಸುಂದರೆನ । ನಾಮ ನೆನೆವ ಸುಖ
ಯಾಮ ಯಾಮಕೀ ಪಾಮರಗೀಯುತ ೫

೨೩೩

ಪ್ರಭುರಾಯ ಪ್ರಭುರಾಯ
ಅಭಿನಂದಿಸುವೆನು । ಶುಭಮತಿ ಪಾಲಿಸು ಪ

ಶ್ರೀಶ ಗುರುಪ್ರಾಣೇಶದಾಸರಿಂದ
ಪೋಷಿತನಾದ ಭೂಸುರ ಪ್ರೀಯ ೧

ಭಾವ ಭಕ್ತಿಲಿ ಸೇವಿಸಿ ಸಂತಸ
ಶ್ರೀವರದೇಂದ್ರರ । ನೀಮೊಲಿದಘನ ೨

ಕೋಶಿಗಿ ಗುರು ಉಪದೇಶದಿಂದ ವರ
ದೇಶವಿಠಲನ ದಾಸನೆಂದೆನಿಸಿದ ೩

ಕಪ್ಪುಗೊರಳ ನುತ । ಕುಪ್ಪಿಯ ಭೀಮನ
ತಪ್ಪು ಕ್ಷಮಿಸೆಂದು । ತಪ್ಪದೆ ಸ್ತುವಿಸಿದ ೪

ಅನ್ಯನಲ್ಲನಾ ನಿನ್ನಾಪ್ತನು ನಿಜ
ವೆನ್ನುತ ಬಿನ್ನಪ ಮನ್ನಿಸಿ ನೋಡೋ ೫

ರಾಮಸ್ತವನವನು ನೇಮದಿ ಗೈಯುವ
ಕೋಮಲಾಂಗದ ಹೇ ಮಮ ಬಂಧು ೬

ನಂದಜ ಶಾಮಸುಂದರವಿಠಲನ
ಪೊಂದಿದವರ ಪದ ಮಂದಜ ಮಧುಪ ೭

೨೩೪

ಪಾಂಡುನಂದನರಂತೆ ತೋರುತಿಹರು
ಪಂಡಿತೋತ್ತುಮ ಸತ್ಯಧ್ಯಾನತೀರ್ಥರು ಪ

ನಿಜಜ್ಞಾನ ಚಿಹ್ನದಿ ವಿಜಯಾದಿ ಸುದ್ಗುಣದಿ
ದ್ವಿಜರಾಜ ಸತ್ಕುಲದಿ ಸುಜನ ಗಣದಿ ।
ಕುಜನ ಗರ್ವವ ನೀಗಿ ವೃಜಿನ ವರ್ಜಿತರಾಗಿ
ಗಜವರದನಂಘ್ರಿಯುಗ ಭಜನ ತತ್ಪರರಾಗಿ ೧

ಧರಮ ಬಲ್ಲವರಾಗಿ ಗುರುಭಕ್ತಿಯುತರಾಗಿ
ವರ ಸುಗೀತಾರ್ಥ ತತ್ವಜ್ಞರಾಗಿ
ಧರಣಿ ಮೇಲುಳ್ಳ ಸುಕ್ಷೇತ್ರ ತತ್ತೀರ್ಥ
ಚರಿಸುತಲಿ ಕರಿತುರಗ ಪರಿಪಾಲಿಸುವರಾಗಿ ೨

ಋಷಿ ವ್ಯಾಸರುಕ್ತಿಯಲಿ ನಿಶೆ ಹಗಲು ಮನವಿರಿಸಿ
ವಸುಧಿ ಸುರರಿಗೆ ಸನ್ಮೋದಗೊಳಿಸಿ
ವಸುದೇವಸುತ ಶಾಮಸುಂದರನ ವಶಗೊಳಿಸಿ
ದಶ ದಿಶದಿ ಜಯಭೇರಿ ಅಸಮರೆಂಡೊಡೆಸುತಲಿ ೩

೨೩೫

ಪೋಷಿಸು ಎನ್ನಯ ದೋಷಗಳೆಣಿಸದೆ ದಾಸರಾಯ
ಶೇಷನಾಮಕನೆ ವಿಶೇಷ ಜ್ಞಾನವ ನೀಡೋ ದಾಸರಾಯ ಪ

ಸಂತತ ಕರಪಿಡಿ ಸಂತರೊಡೆಯ ಗುರು ದಾಸರಾಯ
ಸಂತೋಷ ತೀರ್ಥರಂತಃ ಕರಣ ಪಾತ್ರ ದಾಸರಾಯ ೧

ಚಿಂತಿಪ ಜನರಿಗೆ ಚಿಂತಾಮಣಿಯ ನೀನೆ ದಾಸರಾಯ
ಚಿಂತಿರಹಿತ ವರ ಚಿಂತಾಮಣಿಯು ನೀನೆ ದಾಸರಾಯ ೨

ಚಿಂತ ರಹಿತ ವರ ಚಿಂತರ ವೇಲಿವಾಸ ದಾಸರಾಯ
ಕುಂಭಿಣಿ ದೇವ ಕದಂಬ ಸಂಕೇಶ ವಿನುತ ದಾಸರಾಯ ೩

ಬೆಂಬಿಡದಲೆ ಮನದ್ದಂಬಲ ಪೂರೈಸು ದಾಸರಾಯ
ನಂಬಿದ ದ್ವಿಜರಿಗೆ । ಶಂಭುಗಿರಿಯಲ್ಲಿ ದಾಸರಾಯ ೪

ಬಾಂಬೊಳೆ ತೋರಿಸಿ ಸಂಭ್ರಮಗೊಳಿಸಿದ ದಾಸರಾಯ
ಹರಿಕೇತು ಹರಿಸುತ ಹರಿಣಾಂಕ ಕುಲಜಾತ ದಾಸರಾಯ ೫

ಹರಿಕೇತು ಹರಿಸುತಾದ್ಯರನ ಸಂಹರಿಸಿದ ದಾಸರಾಯ
ಹರಿದಾಡುತಿಹ ಮನ । ಹರಿಯಲ್ಲಿ ನಿಲಿಸಯ್ಯ ದಾಸರಾಯ ೬

ಹರಿ ವೈರಿ ಮತಕರಿ । ಪರಿಪರಿ ಹರಿ ಸಘ ದಾಸರಾಯ
ಪೂರ್ತಿಸುವ ನಿನ್ನ ವಾರ್ತೆ ಕೇಳಿ ಬಂದೆ ದಾಸರಾಯ ೭

ಪಾರ್ಥಿವ ವರುಷದಿ ಪಾರ್ಥಸಾರಥಿ ಭವ್ಯದಾಸರಾಯ
ಮೂರ್ತಿಯ ಸ್ಥಾಪಿಸಿ ಕೀರ್ತಿಯ ಪಡೆದ ದಾಸರಾಯ ೮

ನೇಮನಿಷ್ಠೆಯ ಬಿಟ್ಟು ಪಾಮರನಾದೆನಗೆ ದಾಸರಾಯ
ಶ್ರೀ ಮಧ್ವ ನಿಗಮಾರ್ಥ । ಪ್ರೇಮದಿ ತಿಳಿಸಯ್ಯ ದಾಸರಾಯ ೯

ಕಾಮಾದಿ ಷಡ್ವೈರಿ । ಸ್ತೋಮಾದಿ ಕುಲಿಶನೆ ದಾಸರಾಯ
ಕಾಮಿತ ಫಲದಾಯಕ ಶಾಮಸುಂದರ ದೂತ ದಾಸರಾಯ ೧೦

೨೩೬

ನಿತ್ಯ ಬಿಡದೆ ಭಜಿಸೋ । ಕೋಸಿಗಿ
ಮುತ್ಯನ ಕೃಪೆ ಗಳಿಸೋ
ಸತ್ಯವಾಗಿ ಭವ ಕತ್ತಲೆ ಓಡಿಸಿ
ಉತ್ತಮಗತಿಯನು । ಇತ್ತು ಪಾಲಿಸುವ ಪ

ಯಾತಕೆ ಅನುಮಾನ । ಈತನೆ
ಜಾತರೂಪಶಯನ ।
ಜಾತ ದಾತ ಯತಿ । ನಾಥ ಶ್ರೀ ರಾಯರ
ಪ್ರೀತಿಪಡೆದ ಪಿತ । ಭ್ರಾತಾರ್ಯರು ನಿಜ ೧

ಪುನಃ ಜಗದಿ ಜನಿಸಿ । ಗಣಪತಿ
ಅನುಚರ ನಾಮವ ಧರಿಸಿ
ಅಖಿಲ ನಿಗಮದೋಳ್ । ಮಿನುಗುವ ಹರಿಗುಣ
ಮಣಿ ಬೆಳಕನು ಗುಣ ಜನಕೆ ತೋರಿದನು ೨

ಮಂದಾಜಾತಶಯನ । ಶಾಮಸುಂದರವಿಠಲನ
ಪೊಂದಿದ ಮಾನವಿ ಮಂದಿರನೊಲಿಸುತ
ಮಂದ ಜನರ ದಯದಿಂದ ಸಲಹುವರು ೩

೨೩೭

ನಿರುತ ಭಜಿಸಿರೋ ಘೋರ । ದುರಿತ ತ್ಯಜಿಸಿರೋ
ಪರಮ ಸಾಧು ಐಕೂರು ನರಸಿಂಹಾರ್ಯರ ಪ

ಕೃಷ್ಣ ತೀರದಿ ಮಿಂದು । ಕೃಷ್ಣವರನೊಳು
ಜಿಷ್ಣು ಸೂತನ ನೋಳ್ಪ । ವಿಷ್ಣು ದಾಸರ ೧

ತರುಳತನದಲಿ । ಸದ್ಗುರುವರೇಣ್ಯರ
ಚರಣ ಸೇವಿಸಿ ಶಾಸ್ತ್ರವರಿತ ಧೀರರ ೨

ಸತತ ನಂಬಿದ ಶಿಷ್ಯತತಿಗೆ ಹರಿಗುಣ
ಹಿತದಿ ಸುರಿದ । ಅಪ್ರತಿಮ ಮಹಿಮರ ೩

ಪವನಶಾಸ್ತ್ರ ವೇದ । ಕವನವೆನ್ನುತ
ವಿವರಿಸುತ್ತಲಿ ತನ್ನವರ ಪೊರೆದರ ೪

ಏನು ಬಂದರು ಮನದಿ ಶ್ರೀನಿವಾಸನ
ಧ್ಯಾನ ಬಿಡದಿಹ । ಮಹಾನುಭಾವರ ೫

ಭಕುತಿ ಜ್ಞಾನವ ತಮ್ಮ ಭಕುತ ವರ್ಗಕೆ
ಪ್ರಕಟಗೊಳಿಸಿದ ಇಂಥ । ಮುಕುತಿ ಯೋಗ್ಯರ ೬

ಭುವನ ಮೇಲಿಹ ಇವರು ದಿವಿ ಭವಾಂಶರು
ರವಿ ನಿಭಾಂಗರು । ಜವನ ಭವಣೆ । ತರಿದರು ೭

ಇವರು ಪೇಳುವ ವಚನ ಶ್ರವಣ ಗೈಯಲು
ಭವದಿ ಬಳಲದೆ ಶೌರಿ ಭುವನ ಪಡೆವರು ೮

ಕಂತುಪಿತ ಕಥಾ ಸುಧಾ । ಗ್ರಂಥ ಮರ್ಮವ ಆ
ದ್ಯಂತ ಬಲ್ಲರು ಪರಮ ಶಾಂತಿ ಶೀಲರು ೯

ಮೌನ ಧ್ಯಾನದ ಜ್ಞಾನ ಖೂನ ತೋರದೆ
ಹೀನರಂದದಿ ಹೊರಗೆ ಕಾಣಿಸುವರು ೧೦

ಬಾಲಕೃಷ್ಣನ ದಿವ್ಯಲೀಲೆ ಚರಿತೆಯ
ಕೇಳಿ ಹೇಳದೆ ನಿಮಿಷ ಕಾಲ ಕಳೆಯರು ೧೧

ನಿಂದ್ಯ ವಂದನೆ ಬಂದ ಕುಂದು ಶ್ಲಾಘನೆ
ಇಂದಿರೇಶನೆ ತಾನೆ ತಂದನೆಂಬರು ೧೨

ಪಾದ ಪೊಂದಿದ ಜನಕೆ । ಮೋದಗರೆವರು
ವ್ಯಾಧಿ ಕಳೆದರು ವೇದ ಬೋಧಿಸಿದರು ೧೩

ವಿವಿಧ ವೈಭವ ಮೇಣ್ । ಕುವರ ಭಾಗ್ಯವ
ವಿವಿಧ ಭೋಗವ ಶಿಷ್ಯ ನಿವಹಕಿತ್ತರು ೧೪

ಸತ್ಯದೇವನ ಮಹಿಮೆ ನಿತ್ಯ ಪೇಳುತ
ಭೃತ್ಯನಿಕರಕೆ ಸಧೃಡ ಚಿತ್ತವಿತ್ತರು ೧೫

ಕಾಮವಾಸನೆ ಸುಟ್ಟು । ನೇಮ ಪೂರ್ವಕ
ರಾಮನೊಲಿಮೆಯ । ವಿಶ್ವಪ್ರೇಮವೆಂಬರು ೧೬

ಈ ಸುಮಹಿಮರ । ಸದುಪದೇಶ ಕೊಳ್ಳಲು
ಕ್ಲೇಶಬಾರದು । ಯಮನು ಘಾಸೆಗೊಳಿಸನು ೧೭

ಧರಣಿವಲಯದಿ ಇವರ ಚರಿತೆ ತಿಳಿಯದೆ
ಜರಿವ ಮನುಜರು ಘೋರ ನಿರಯ ಪಾತ್ರರು ೧೮

ಇನಿತುಪಾಸನೆಗೈವ ಘನ ಮಹಾತ್ಮರ
ಗುಣಗಣಂಗಳ । ತುತಿಸಲೆನಗೆ ಸಾಧ್ಯವೆ ೧೯

ಅರುಣನುದಿಯದಿ । ಇವರ ಚರಣ ಕಮಲವ
ಸ್ಮರಣೆ ಮಾಡಲು । ಹರಿಯ ಕರುಣವಾಹದು ೨೦

ಸಾಮಜ ವರ ವರದ ಶಾಮಸುಂದರನ
ಪ್ರೇಮಪಾತ್ರ ನಿಷ್ಕಾಮ ಪೂರ್ಣರು ೨೧

೨೩೮

ನೀ ಸುಮಂಗಲಿ ವರಗುಣಶೀಲೆ ನೀ ಸುಮಂಗಲಿ ಪ

ಸತತ ಮಾತಾ ಪಿತರ ವಚನ ಹಿತದಿ
ನೀನು ಆಲಿಸುತ । ಪತಿಯು ಪರದೈವವೆಂದು
ನೇಮದಿ ತಿಳಿದು ನೀ ಮಾಡುವುದು ವ್ರತ ೧

ನಿರುತ ಗೋವು ಭೂಸುರರ ಸೇವಾ ಹರುಷದಲಿ
ಶ್ರೀ ಗೌರಿ ಪೂಜಾ ತರುಣಿ ಗೈದು ಜಗದಿ ನೀನು
ಮಾರಪಿತನ ಪಾದ ನೀ ಭಜಿಸೆ ।
ಸುಕುಮಾರ ಪಿತನಪಾದ ಭಜಿಸೆ ೨

ಕೋಮಲಾಂಗಿ ಸೋಮವದನೆ ಆ ಮಹಾತ್ಮ
ಶೀಲೆ ರಾಧಾ ಭಾಮೆ ತಾರಾ ಸೀತೆಯಂತೆ
ಶಾಮಸುಂದರನ ದಯ ಪಡೆಯೆ
ಶಿರಿ ಶಾಮಸುಂದರ ದಯ ಪಡೆಯೆ ನೀ ೩

೨೩೯

ಎಂಥ ಕರುಣಿಯೋ । ಐಕೂರು ಗುರುಗಳೆಂಥ ಸುಗುಣಿಯೋ
ಎಂಥ ಪರಮ ಕರುಣಿಯೋ ಇವ
ರೆಂಥ ಸುಗುಣ ಶಾಲಿಯೋ ಸು
ಸ್ವಾಂತದಿ ಏಕಾಂತದಿ ಶ್ರೀಕಾಂತನ ಪದಕ್ರಾಂತ
ಶಾಂತರಂತಃಕರುಣಿಯೋ ಅ.ಪ

ವಸುಧಿ ತಳದಲಿ ಶ್ರೀಶನಾಜ್ಞೆಯಿಂದ
ಶಶಿಯ ಮತದಲಿ ಬಂದು । ಸುನಿತ ಮನದಲಿ
ವಸುಮತಿ ಸುಶಾಸ್ತ್ರಧರ್ಮ । ನಿಶಿ ಹಗಲಾಚರಿಸಿ ಶಿಷ್ಯ
ನಿಕರುಪದೇಶಿಸಿ ಭವ । ಘಸಣೆ ಕರೆದು ಕುಶಲಗರೆದ ೧

ಎಷ್ಟು ಹೇಳಲಿ ಇವರು ನಿತ್ಯ । ಕೃಷ್ಣತಟದಲಿ ಮಿಂದು
ಉತ್ಕೃಷ್ಟ ಭಕುತಿಲಿ
ದೃಷ್ಟಿ ನಾಶಿಕಾಗ್ರದಲ್ಲಿ ಇಟ್ಟು ಬಿಂಬ ಮೂರ್ತಿಯ ಮನ
ಮುಟ್ಟಿ ಪಾಡಿ ನೋಡಿ ಕುಭವ ದಟ್ಟುಳಿಯನಿಟ್ಟವರು ೨

ಜ್ಞಾನ ಶೀಲರು ದಾಸಕವನ । ಗಾನಲೋಲರು
ನೆರೆ ನಂಬಿದಂಥ ದೀನಪಾಲರು
ಶ್ರೀನಿಧಿ ವರ ಶಾಮಸುಂದರ । ಧ್ಯಾನಾಮೃತಪಾನಗೈದು
ಕ್ಷೋಣಿ ಮಂಡಲದಿ । ಮದಿಸಿದಾನೆಯೆಂತೆ ಚರಿಸಿದವರು ೩

೨೪೦

ಪೋದರಯ್ಯ ತೆರಳಿ ಪೋದರು । ಸಾಧು ನರಸಿಂಹಾರ್ಯರು
ಮಾಧವನ ಮಂದಿರಕೆ ಪ

ಶ್ರೀಕರ ಕೃಷ್ಣಾತಟದಿ
ಐಕೂರು ಗ್ರಾಮದಿ ನೆಲೆಸಿ । ಏಕೋ ಭಾವದಿಂ
ಸದಾ ಶ್ರೀಕಾಂತನ್ನ ಧ್ಯಾನಂಗತರು ೧

ಭಾರತ ಭಾಗವತ ಸಾರೋದ್ಧಾರ ಸತ್‌ಶಿಷ್ಯರಿಗೆ
ಸಾರುತ ಸದ್ಭಕ್ತಿ ಜ್ಞಾನ । ವೈರಾಗ್ಯ ಮಾರ್ಗವ ತೋರಿ ೨

ಮಧ್ವಮತದ ಸಿದ್ಧಾಂತ ಪದ್ಧತಿಯನುಸರಿಸಿ ।
ಸದ್ಧರ್ಮದಿ ನಡೆಸುವ ಪ್ರಸಿದ್ಧ ವಿದ್ವಾಂಸರು ೩

ವ್ಯಾಸ ದಾಸಕೂಟ ಮರ್ಮ ಲೇಸಾಗಿ ಸಜ್ಜನ ತತಿಗೆ
ಬ್ಯಾಸರಿಲ್ಲದಲೆ ಪ್ರತಿವಾಸರುಪದೇಶಿಸುವರು ೪

ನಿತ್ಯಗೈವ ಕೃತ್ಯಂಗಳು । ತತ್ವೇಶ್ವರ ದ್ವಾರಾ ಹರಿಗೆ
ಚಿತ್ತಪೂರ್ವಕರ್ಪಿಸುವ ಸೋತ್ತುಮರೋತ್ತುಮರು ಲೋಕಕೆ ೫

ಅಂತರಂಗದಲ್ಲಿ ಲಯದ ಚಿಂತನೆಯ ಗೈದು ಮುಕ್ತಿ
ಪಂಥವನ್ನೆ ಪಿಡಿದು । ಜ್ಞಾನ ಸಂತತಿಯ ಜಗದಿ ನೆಲೆಸಿ ೬

ಯಾವ ಸಂಶಯವ್ಯಾಕೆ ಕೋವಿದವರ್ಯರಾದ ।
ಭಾವಜ್ಞರ ಮುಖದಿಂದ ದೇವಾಂಶರೆನಿಸಿಕೊಂಡವರು ೭

ವ್ಯಯ ಸಂವತ್ಸರಂತ್ಯಮಾಸ । ದ್ವಯತಿಥಿ ಸಿತ ವರ್ಷ
ಹಯ ಸಪ್ತಸುತನ ವಾರದಿ ತ್ರಯ ಝಾವ ರಜನಿಯಲ್ಲಿ ೮

ಆಸನಸ್ಥರಾಗಿ ನಾಸಿಕಾಗ್ರದಲಿಟ್ಟು ಶ್ವಾಸ ಮಂತ್ರ ಜ
ಪಿಸಿ ಬಿಂಬೋಪಾಸನಗೈವ ಬುಧರು ೯

ಸಾಗರಶಯನನ ಧ್ಯಾನ ಯೋಗ ಬಲದಿ ತಿಳಿದು ಭುವಿ
ಭೋಗ ತೀರಿತೆಂದು ಕೊಯಿಲು ತಾಗಿದ್ದೊಂದೆ ನೆವನದಿಂದ ೧೦

ಆಶೆಕ್ರೋಧಂಗಳನಳಿದು । ಕ್ಲೇಶಮೋದ ಸಮ ತಿಳಿದು ।
ಭೂಸುರ ವೃಂದಕೆ ಸುಗ್ರಾಸವಿತ್ತು ತೋಷಿಸುವರು ೧೧

ಹರಿಯಪುರಕೆ ಪೋಪ ಸಮಯ ಹರಿಸು ಬಂದು ಕೃಷ್ಣೆ ಇವರ
ಹರುಷದಿಂದ ಸೋಂಕಿದಂಥ ಚರಿಯ ನೆರೆದ ಜನಕೆ ತೋರಿ ೧೨

ಸ್ವಾಮಿ ಶಾಮಸುಂದರನ । ನಾಮದ ಸನ್ಮಹಿಮ ಸತತ ।
ಪಾಮರ ಜನಕೆ ಪೇಳಿ ಪ್ರೇಮದಿಂ ಸಲಹಿದವರು ೧೩

೨೪೧

ಯಾಕೆಮ್ಮನಗಲಿ ಪರಲೋಕ ಸೇರಿದೆ ಗುರು
ಐಕೂರು ನರಸಿಂಹಾರ್ಯ ಪ

ಲೌಕಿಕವ ಬಿಟ್ಟು ಸುವಿವೇಕ ನಡೆವ
ವಾಕು ಪೇಳ್ವರ ಕಾಣೆ ಲೋಕದೊಳು ನಿನ್ನೊರತು ಅ.ಪ

ಅತಿ ಮಂದರಾದೆಮಗೆ । ಶ್ರುತಿ ಶಾಸ್ತ್ರ ಪುರಾಣ
ಕಥೆ ದಾಸ ಕವಿತೆ ಸತತ ಪೇಳಿ
ಮತಿವಂತರೆನಿಸಿ ಸತ್ಪಥ ಪಡಿಸಿ ಮುಂದೆ ಸ
ದ್ಗತಿ ಕಾಣಿಸದೆ ಜಗದಿ ಹತಭಾಗ್ಯರನು ಮಾಡಿ ೧

ಸಾಧುವರ್ಯನೆ ನಿಮ್ಮ ಪಾದವೇ ಗತಿ ಎಂದು
ಸಾದರದಿ ನಿರುತ ನೆರೆ ನಂಬಿದಂಥ
ಸೋದರಿಯರು ಪಂಚ ಭೇದ । ತರತಮ ಜ್ಞಾನ
ಬೋಧಿಸುವರಿಲ್ಲೆಂದು ಖೇದದಿಂದಿರುತಿಹರು ೨

ಸೂರಿವರ ನಿನ್ನಗಲಿದಾರಭ್ಯ ಧರೆಯೊಳಗೆ
ನೀರಿಂದ ದೂರಾದ ಮೀನಿನಂತೆ
ಘೋರ ದುಃಖದಿ ಮುಳುಗಿ ಪಾರುಗಾಣದೆ ದಿಕ್ಕು
ತೋರದಾಗಿಹುದೀಗ ಬಾರೋ ಮನ ಮಂದಿರದಿ ೩

ತನುವು ತ್ಯಜಿಸಿದರೇನು । ಅನಿಮಿಷಾಂಶನೆ ನಮ್ಮ
ಕನಸು ಮನಸಿನೊಳಗೆ ಸುಳಿದಾಡುತ
ಕೊನೆಯಲ್ಲಿ ಹರಿನಾಮ । ಅನುಗ್ರಹಿಸುವೆವು ಎಂಬ
ಘನ ಅಭಯ ನೀಡೆಂದು ಮಣಿದು ಪ್ರಾರ್ಥಿಪೆನಯ್ಯ ೪

ಪುಣ್ಯಪುರುಷನೆ ನಮಗೆ ಇನ್ನಾವ ಬಯಕಿಲ್ಲ
ಜನ್ಮ ಜನ್ಮಕೆ ನಿನ್ನ ಚರಣಾಬ್ಜವ
ಚನ್ನಾಗಿ ಸೇವಿಸುವ ಘನ್ನ ಸುಖಗರಿಯೆಂದು
ಸನ್ನುತಿಸಿ ವಿನಯದಲಿ ಬಿನ್ನೈಸುವೆವು ನಿತ್ಯ ೫

ನಿನ್ನಿಂದ ಸತ್‌ಶ್ರವಣ । ನಿನ್ನಿಂದ ಅಘಹರಣ
ನಿನ್ನಿಂದ ಶ್ರೀವಾಯು ಹರಿಯ ಕರುಣ
ನಿನ್ನಿಂದ ಉಪದೇಶ ನಿನ್ನಿಂದ ಭವನಾಶ
ನಿನ್ನಿಂದ ಬಿಂಬ ದರ್ಶನವು ನಮಗಿನ್ನು ೬

ಪಾಮರರ ಅಪರಾಧ ನೀ ಮನಕೆ ತಾರದಲೆ
ಹೇಮ ಕಾಮಿನಿ ಭೂಮಿ ಈ ಮೂರರ
ವ್ಯಾಮೋಹವನೆ ಬಿಡಿಸಿ । ಶಾಮಸುಂದರ ಭಕ್ತ
ಸ್ತೋಮ ಸಂಗದೊಳಿಟ್ಟು ಪ್ರೇಮದಲಿ ಪಿಡಿ ಕೈಯ್ಯ ೭

೨೪೨

ಯಾಕೆ ವ್ಯರ್ಥ ಕಾಲ ಕಳೆಯುವಿ ನಮ್ಮ
ಐಕೂರಾರ್ಯರ ಸುವಾಕು ಕೇಳದೆ ಜೀವಿ ಪ

ಮರುತಾಗಮ ಮರ್ಮವರಿಯದವರಿಗೆಲ್ಲಾ । ವರ ಭಾಗವತ
ಗೀತಾ ಹರಿಕಥಾ ಮೃತ ತತ್ವಯರಡೊಂದು ಕಾಲ
ಬ್ಯಾಸರಿಯದೆ ಬೋಧಿಪ । ನರಸಿಂಹಾರ್ಯರ
ಕೃಪೆ ನೆಳಲಾಶ್ರಯಿಸದೆ ೧

ಹರಿಮೂರ್ತಿ ಹರಿವ್ಯಾಪ್ತಿ ಹರಿಸತ್ಯ ಸುಚರಿತ್ರೆ ।
ಹರಿದಾಸರುಕ್ತಿ । ಹಿರಿದು ಕಿರಿದು ಭೇದ ನೆರೆ ।
ಸುರಹಸ್ಯವನರುಹಿ ಕಗ್ಗತ್ತಲೆ ಹರಿಸುವರಿವರೆ ನರ ನೀ ನಂಬದೆ ೨

ಮದಡ ಜನರಿಗೆಲ್ಲ ಪದ ಸುಳಾದಿಗಳನು ।
ಚತುರತನದಲಿಂದ । ವಿಧ ವಿಧ ವಿವರಿಸಿ । ಸದಮಲ
ಸುಜ್ಞಾನ । ವದಗಿಸುವಂಥ ಈ ಬುಧರುಪದೇಶ
ಮುದದಿ ಪಡೆಯದೆ ೩

ಆಶೆ ಕ್ರೋಧಂಗಳ ಜಯಿಸುತ ಮನದಿಂದ ಕ್ಲೇಶ ಮೋದ
ಸಮ ತಿಳಿದಿಹರೋ । ಯೇಸೇಸು ಕಾಲಕ್ಕೆ ಭೂಸುರೋತ್ತಮ
ರಾದ । ಈ ಸುಗುಣರ ಸಹವಾಸ ದೊರೆವುದೆ ೪

ಈ ಮಹಾಮಹಿಮರ ಶ್ರೀ ಮುಖವಾಣಿಯು ಸಾಮಾನ್ಯವಲ್ಲವೋ
ನೇಮದಿಂ ಕೇಳ್ವರ । ಶಾಮಸುಂದರ ಸುಧಾಮನಿಗೊಲಿದಂತೆ ।
ಪ್ರೇಮದಿಂ ಸಲಹುವ ನೀ ಮನದಲಿ ತಿಳಿ ೫

೨೪೩

ಬಾರೈಯ ಬಾರೈಯ
ಸೂರಿವರಿಯ ಐಕೂರು ನಿಲಯ ಪ

ನೀನ್ಹಾಕಿದ ಸುಜ್ಞಾನದ ಸಸಿಗಳು
ಮ್ಲಾನವಾಗುತಿವೆ ಸಾನುರಾಗದಲಿ ೧

ಸಲೆ ತವ ಕರುಣ ಸಲಿಲವ ಎರೆದು
ಫಳಿಲನೆ ವೃದ್ಧಿಯ ಗಳಿಸಿ ಸಲಹಲು ೨

ನಾಟಿಸಿದ ಸಸಿಗಳು ನೀಟಾಗುವ ಪರಿ
ತೋಟಿಗ ನೀ ಕೃಪೆ ನೋಟದಿ ನೋಡಲು ೩

ಕೋವಿದರ ನೀ ಕಾವಲಿ ಇರಲು । ಕು
ಜೀವಿಗಳಿಂದಲಿ ಹಾವಳಿಯಾಗದು ೪

ನೀ ಮರೆದರೆ ಸುಕ್ಷೇಮವಾಗದು
ಶಾಮಸುಂದರನ ಪ್ರೇಮದ ಪೋತ ೫

೨೪೪

ಏಳಯ್ಯ ಸದ್ಗುರುರಾಯ । ಈಗ
ಏಳು ತುರಗ ಸೂತನುದಯಿಸುವ ಸಮಯ ಪ

ಎದ್ದು ಶಿಷ್ಯರ ಕರೆಯಬೇಕು । ಗುರು
ಮಧ್ವಮತದ ತತ್ವ ಭೋಧಿಸ ಬೇಕು
ಇದ್ದ ದೋಷವ ಕಳೆಯ ಬೇಕು ಪರಿ
ಶುದ್ಧರ ಮಾಡಿ ನೀನುದ್ಧರಿಸ ಬೇಕು ೧

ಶೌರಿಕಥಾಮೃತ ಸಾರೋದ್ಧಾರ । ಭಾಗವತ ಶಾಸ್ತ್ರವಿಚಾರ
ಮೂರೆರಡು ವಿಧ ಭೇದ ತಾರತಮ್ಯ
ಸಾರುತ ಸಲಹೋ ಶಿಷ್ಯ ಪರಿವಾರ ೨

ಪದ ಸುಳಾದಿಗಳ ಕೇಳಬೇಕು । ಕೇಳಿ
ಅದರೊಳಿರುವ ತತ್ವ ವಿವರಿಸಬೇಕು
ಮದಡತನವ ಕಳೆಯಬೇಕು ನಿನ್ನ
ಪದ ನಂಬಿದವರಿಗೆ ಮುದಗರಿಯ ಬೇಕು ೩

ಸತ್ಯನಾರಾಯಣ ಕಥೆಯ । ಬಹು ವಿಸ್ತಾರವಾಗಿ
ನೀ ಬಿತ್ತರಿಸಯ್ಯ । ಭೃತ್ಯರಾ ಮಾಯೆ
ಓಡಿಸಯ್ಯ ಅಜ್ಞಾನ
ಜ್ಞಾನ ಭಕ್ತಿ ವೈರಾಗ್ಯ ಸಂಪತ್ತು ನೀಡಯ್ಯ ೪

ಒಂದೂರು ನಿಲಯನೆ ಏಳೊ ಶಾಮ
ಸುಂದರವಿಠಲನ ಮಂದಿರವಾಳೋ
ಒಂದ ನಿಂದೆಗಳೆಲ್ಲ ಹೂಳೋ ನಿನ್ನ
ಪೊಂದಿದ ನಮ್ಮನ್ನು ಅಗಲಿದೆ ಆಳೊ ೫

೨೪೫

ಜಯಮಂಗಳಂ ನಿತ್ಯ ಶುಭ ಮಂಗಳಂ
ದಯಪಯೋನಿಧಿ ಭಕ್ತ ಭಯ ಹಾರಿಗೆ ಪ

ಒಂದೂರು ಮಂದಿರಗೆ । ಒಂದೊಂದು ಭವ ಹರಗೆ
ಒಂದೆಂದು ನುಡಿವರನ ನಿಂದಿಪರಿಗೆ
ಒಂದೆರಡು ರಹಿತರಿಗೆ । ಒಂದೆರಡು ಭರಿತರಿಗೆ
ಒಂದೆರಡು ರೂಪನಿಗೆ ವಂದನೆಯ ಗೈವರಿಗೆ ೧

ಒಂದ್ಯೆದು ಒಂದಾರು । ಒಂದೇಳು ಕಳೆಯುತಲಿ
ಒಂದೆಂಟು ಸದ್ಭಕ್ತಿಯುಕ್ತರಾಗಿ
ಒಂದಧಿಕ ಒಂಬತ್ತು ನಾಮಗಳ ನೆನೆಯುತಲಿ
ಒಂದ್ಹತ್ತು ಮ್ಯಾಲೊಂದು ವಪುತೇಜಗೆ ೨

ಒಂದೊಂದು ಸಮವೆನಿಸಿ ಒಂದೊಂದುಮತಜ್ಞಾನ
ಒಂದೊಂದು ವಿಧವಾಗಿ ಬೋಧಿಪರಿಗೆ
ಒಂದು ಕ್ಷಣವನು ಬಿಡದೆ ಒಂದು ದೈವ ಶಾಮ
ಸುಂದರನ ವಶಗೈದು ವಂದನಾರ್ಹರಿಗೆ ೩

೨೪೬

ಶ್ರೀಮತ್ ಕೃಷ್ಣತರಂಗ ತೀರ
ನಿಲಯ ಐಕೂರು ಗ್ರಾಮಾಲಯ ।

ಸ್ತಂಭೋದ್ಭವ ದೇವ ನಾಮಧೇಯ
ಧ್ವಯ ಭಾರ್ಯ ಸುಮನಸ ಪ್ರಿಯ
ಸದ್ಭಕ್ತಾರ್ತಿ ವಿದೂರ ವಿಮಲ ಹೃದಯ
ಅತ್ಯಂತ ಕರುಣಾಮಯ । ಅಸ್ಮದ್ ಸದ್ಗುರುವರ್ಯ
ಈಯೋ ನಮಗೆ ನೀ ನಿತ್ಯ ಸನ್ಮಂಗಳ ೧

ಸಾರೋದ್ಧಾರ ಸಂಗೀತ ಭಾರತಿಯುತ ವೇದಾರ್ಥ
ಸಂಪೂರಿತ । ಸಹ್ಲಾವಂಶಜ ದಾಸವರ್ಯ ವಿರಚಿತ
ಶ್ರೀ ಶೌರಿ ಸುಕಥಾಮೃತ ಸಾರಜ್ಞಂ ಸುಶೀಲೇಂದ್ರತೀರ್ಥರ
ಮಮತ ಸಂಪೂರ್ಣ ಸಂಪಾದಿತ ಅಸ್ಮದ್ ಸದ್ಗುರುವರ್ಯ
ಈಯೋ ನಮಗೆ ನೀ ನಿತ್ಯ ಸನ್ಮಂಗಳ ೨

ಅಷ್ಟಪದಲೋಷ್ಟ ಭಾವಸಮತ । ಕೃತಧೀರ
ಸನ್ಮಾನಿತ ಅಷ್ಟೈಕಾಮಲ ಭಕ್ತಿ ಜ್ಞಾನ ಭರಿತ
ವೈರಾಗ್ಯ ಸಂಶೋಭಿತ । ಸೃಷ್ಟ್ಯಂತರ್ಗತ
ಬಿಂಬ ಮೂರ್ತಿ ಸತತ । ಸಂದರ್ಶನಾನಂದಿತ
ಅಸ್ಮದ್ ಸದ್ಗುರುವರ್ಯ ಈಯೋ ನಮಗೆ ನೀ ನಿತ್ಯ ಸನ್ಮಂಗಳ ೩

ಶೃಂಗಾರಾಂಗ ಸುನಾಮದ್ವಾದಶ ಧೃತ ಮುದ್ರಾಕ್ಷತಾಲಾಂಕೃತ
ಗಂಗಾನಂಗಪಿತಾಂಘ್ರಿ ಕಮಲ ಜಪಿತ ಪದ್ಮಾಕ್ಷಮಾಲಾಂಛಿತ
ಇಂಗಿತಜ್ಞ ಸುಸಾಧು ಸಂಗ ಸಹಿತ ಮುಕ್ತ್ಯಾಂಗನಾಲಿಂಗಿತ
ಅಸ್ಮದ್ ಸದ್ಗುರುವರ್ಯ ಈಯೋ ನಮಗೆ ನೀ ನಿತ್ಯ ಸನ್ಮಂಗಳ ೪

ತಾಪತ್ರಯ ದೂರ ಪಾಪರಹಿತ । ಕೋಪಾದಿ ಗುಣವರ್ಜಿತ ।
ಶಾಪಾನುಗ್ರಹಶಕ್ತ ಸುಜನ ಪ್ರೀತ ಸಂಸಾರಘನ ಮಾರುತ
ಗೋಪಾಲಾಖ್ಯ ದಾಸವರ್ಯ ಕವಿತ ।
ಗೂಡಾರ್ಥ ಸಂಬೋಧಿತ
ಅಸ್ಮದ್ ಸದ್ಗುರುವರ್ಯ ಈಯೋ ನೀ ನಿತ್ಯ ಸನ್ಮಂಗಳ ೫

ಆಧ್ಯಾತ್ಮ ಸುವಿಚಾರ ಸತತ ಶೃತ್ಯರ್ಥ ಬಹು
ಗರ್ಭಿತ । ಸತ್ಯವಲ್ಲಭ ಸತ್ಯದೇವ ಚರಿತ
ವಕ್ತಾರ ಬುಧ ಸಮ್ಮತ । ನಾಡ್ಯಾಂತರ್ಗತ
ಸರ್ವತೀರ್ಥ ಸ್ನಾತ । ತನ್ಮೂರ್ತಿ ಪ್ರತ್ಯಕ್ಷತ
ಅಸ್ಮದ್ ಸದ್ಗುರುವರ್ಯ ಈಯೋ ನಮಗೆ ನೀ ನಿತ್ಯ ಸನ್ಮಂಗಳ ೬

ಧರ್ಮಾಚಾರ ವಿಚಾರಶೀಲ ನಿರತ । ಷಟ್ಕರ್ಮ
ಸಂಭೂಷಿತ । ನಿರ್ಮತ್ಸರ ಮೋಹ ದೇಹ ಮಮತ
ಸುಶರ್ಮಕುಲರಾಜಿತ । ಧರ್ಮೋದರವಾತಜಾತ ಪೋತ
ಜಾತಾರಿ ಖತಿ ವರ್ಜಿತ । ಅಸ್ಮಾದ್ ಸದ್ಗುರುವರ್ಯ
ಈಯೋ ನಮಗೆ ಸತತ ನೀ ಸನ್ಮಂಗಳ ೭

೨೪೭

ನಿಂದೆ ಮಾಡುವಿ ಯಾತಕೋ । ಮಂದಮಾನವ.ಶ್ರೀ ಗೋವಿಂದ
ದಾಸಾರ್ಯರನ್ನ ಎಂದೆಂದಿಗೀ ಮಾತು । ಇಂದಿರೇಶನ ಭಕುತ
ವೃಂದ ಮೆಚ್ಚುವದಿಲ್ಲವೋ ಮೂಢ ಪ

ಬಾಲತನದಾರಭ್ಯ ಶೀಲ ಸದ್ಭಕುತಿಯಲಿ ತಾಳ ತಂಬೂರಿ
ಪಿಡಿದು । ಶ್ರೀಲೋಲ ಹರಿನಾಮ ಹೇಳುತಲಿ
ಸತತ । ಗೋಪಾಳ ವೃತ್ತಿಯ ಮಾಡಿ ಕಾಲವನು ಕಳೆದವರು ೧

ಕುಸುಮಶರನಟ್ಟುಳಿಗೆ ವಶವಾಗದಿರಿ ಎಂದು
ಉಸುರುತಲಿ ಶಿಷ್ಯಗಣಕೆ । ಅಸುರಾರಿ ಮಹಿಮೆಯನು
ರಸವತ್ ಕವಿತೆಯಲಿಂದ ನಿಶಿ ಹಗಲು
ವರ್ಣಿಸಿದ ಅಸಿಘ್ಯಾಳು ನಿಲಯರನು ೨

ಆಶ ಕ್ರೋಧವ ತೊರೆದು ಕ್ಲೇಶ ಸುಖ ಸಮ ತಿಳಿದು
ಲೇಸಾಗಿ ಗುರು ಸೇವೆಗೈದು ವಾಸವಾರ್ಚಿತನಾದ
ಶ್ರೀ ಶಾಮಸುಂದರನ ವಾಸಸ್ಥಾನಕೆ ತೆರಳಿದೀ
ಸುಗುಣರನು ವ್ಯರ್ಥ ನಿಂದೆ ಮಾಡುವಿ ಯಾಕೋ ೩

೨೪೮

ಭೀಮಸೇನಾರ್ಯರು । ಭೂಮಿತ್ಯಜಿಸಿ ಪರಂ
ಧಾಮವ ಸೇರಿದರು ॥
ಶ್ರೀಮತ್ ಕಾರ್ಪರ ಕ್ಷೇತ್ರ । ಸ್ವಾಮಿಯ ಸಂಪೂರ್ಣ
ಪ್ರೇಮ ಪಡೆದವರು । ಕೇಳಿದವರು ಪ

ಪರಿಮಳ ಗಾತ್ರರ ಕರುಣ ಪ್ರಸಾದದಿ
ಧರೆ ಸುರಾಗ್ರಣಿ ಎನಿಪ
ವರ ಜಯಾರ್ಯರ ಪತ್ನಿ । ನರಸಾಂಬೆಯ ಗರ್ಭ
ಶರಧಿಗೆ ಹರಿಣಾಂಕರು ಸುಶಾಂತರು ೧

ಎಡರೇಸು ಬಂದರೂ ಬಿಡದೆ ಸ್ವಧರ್ಮವ
ಕಡು ಭಕ್ತಿಪೂರ್ವಕದಿ
ಹುಡುಗನ ಮಾತಿಗೆ । ಒಡೆದು ಸ್ತಂಭದಿ ಬಂದ
ಒಡೆಯನರ್ಚಿಸಿದವರು । ಕೋವಿದರು ೨

ಪಂಚಬಾಣನ ಗೆದ್ದು । ಪಂಚ ಭೇದವನರಿತು
ಪಂಚಾಸ್ಯನುತ ಮಾನವ
ಪಂಚಾಶ್ಯದಯದಿ ಪ್ರಪಂಚ ಸಾಗಿಸುವಂಥ
ಪಾಂಚಾಲಿ ಪತಿ ಪ್ರಿಯರು । ನಿಷ್ಕಿಂಚನರು ೩

ಅರವತ್ತು ವತ್ಸರ ಪರಿಯಂತ ನಿಷ್ಠೆಯಲಿ
ನಿರುತ ತಪ ಚಳಿ ಮಳೆ ಸಹಿಸಿ
ತರುವರ ಮೂಲಸ್ಥ ಪರಮೇಷ್ಟಿ ಜನಕನ
ನಿರುತ ಸೇವಿಸಿದವರು । ನಿರ್ಮಮರು ೪

ವಿನಯ ಸುಶೀಲ ಸದ್ಗುಣದಿ ಭೂಷಿತರಾದ
ತನಯರೀರ್ವರ ಕರೆದು ರಿಣವಿನು ತೀರಿತು ಎನುತ
ಪೇಳುತ ದ್ವಿಜಗಣಿಕೆ ದಕ್ಷಿಣೆ ನೀಡಿ ನಮನ ಮಾಡಿ ೫

ಹರುಷ ಭರಿತರಾಗಿ ಸರ್ವಜಿತು ನಾಮದ ವರುಷದೊಳ್
ಯುಗ ಮಾಸದಿ । ಶರದಪಕ್ಷ ಪ್ರತಿಪದ ಪ್ರಥಮ
ಯಾಮದಿ । ಸ್ಮರಿಸಿ ಲಯ ಚಿಂತನೆಯ ತೊರೆದು ಕಾಯ ೬

ವರುಷಂ ಪ್ರತಿ ತಪ್ಪದೆ । ಚರಿಸುತ ದೇಶದೋ
ಳಿರುವ ಸದ್ಭಕ್ತರಿಗೆ । ವರಶಾಮ ಸುಂದರ
ನರಹರಿ ದರುಶನ । ಗರೆದು ಪಾಲಿಸಿದವರು ಪಾವನ್ನರು ೭

೨೪೯

ಮರೆಯುವರೆ ಮರೆಯುವರೆ ರಾಮರಾಯಾ ।
ಗುರುಗಳಾರಾಧನೆಗೆ । ಶಿರಿವಾರದೊಡೆಯಾ ॥
ಪರಿವಾರ ಸಹಿತಾಗಿ ತೆರಳುವದು ನಿಶ್ಚಯಿಸಿ
ಬರೆವದಕೆ ಕಾಗದವು ಸಿಗದ್ಹೋಯಿತೆ । ಭರದಿ
ಬರಬೇಕೆಂದು । ಕರೆ ಕಳುಹದಕೆನ್ನ । ಚರನೋರ್ವ
ನಾದರು ದೊರೆಯದಾದನೆ ಅಕಟ ೧

ಕ್ರೋಧ ವಿರಹಿತರಾದ ಸಾಧುವರ್ಯರ ಸಮಾರಾಧ ।
ನೆಗೆ ನಾ ಭಾರವಾದೆನೇನೈ । ಆದರವು ತಗ್ಗಿತೇ ।
ಅಭಿಮಾನ ಕುಗ್ಗಿತೇ । ಭೇದವರಿಯದ
ಯುಗ್ಮಪಾದ ಪಶುವಾದಿನೇ ೨

ಗುರುಕರುಣ ವೆಗ್ಗಳದ ಗರುವಿಕೆಯೋ
ಕಾರ್ಪರ ನರಸಿಂಹರರ್ಚಕರ ಮೋಕ್ಷ ಬಲವೋ
ಪರಮ ಸತ್ಪುರುಷರುಪದೇಶ ಶ್ರವಣದ
ಮದವೋ । ಹರಿಕಥಾ ಪಾನದಹಂಕಾರವೋ ೩

ಇರಬೇಕು ಸರ್ವದಾ ಸಕಲರಲಿ ಸಮದೃಷ್ಟಿ
ಹಿರಿಯರಾದವರಲ್ಲಿ ಏಕನಿಷ್ಟಿ । ನಿರುತದಲ್ಲಿ ಸದ್ಗೋಷ್ಟಿ
ಪರನಾಗಿ ಮನಮುಟ್ಟಿ ಹರಿಪಾದಸ್ಮರಿಪರಿಗೆ ಕೈವಲ್ಯಪಟ್ಟಿ ೪

ಶ್ರೀ ಶಾಮಸುಂದರನ ದಾಸಕೂಟಸ್ಥರೊಳು ನಾ
ಸಲ್ಲದವನೆಂದು ಧೃಡವಾಯಿತೇ । ಭೂಸುರ ವೇಷದಲಿ
ಬೇಸರಿಕೆ ಕೊಡುವಂಥ ಆಶೆ ಬುರುಕನು
ಎಂದು ಉದಾಸೀನ ಮಾಡಿನ್ನು ೫

೨೫೦

ವಂದಿಸೋ ಎಲೆ ಮಾನವಾ ಮಾಣದೆ ಸದಾ
ಒಂದೆ ಮನದಿ ಶ್ರೀವಿದ್ಯಾಮಾನ್ಯ ಮುನೀಂದ್ರರ ಪ

ಧರಣಿಯಂದದಿ ಕ್ಷಮಾಭರಿತ ಮಂಗಲದಾತ ।
ಶರಧಿಯಂದದಿ ದಯಾಗುಣಶೀಲರೋ । ಸುರ
ನದಿಯಂದದಿ ದುರಿತ ಪರಿಹಾರಕರು । ತರಣಿ
ಯಂದದಿ ಭಾರ ತಿಮಿರ ನೋಡಿಸುವರೋ ೧

ಈಶನಂದದಿ ಜಿತಪೂಶರವರ ।
ಕಮ । ಲಾಸನನಂತೆ ಭೂಸುರ ಶ್ರೇಷ್ಠರು ।
ಸಾಸಿರ ಮುಖನಂತೆ ಯೋಗ ಸುಸಾಧಕರು
ಭೇಶನಂದದಿ ಸುಧಾಕರರಾಗಿ ತೋರ್ಪರೋ ೨

ಶಾಮಸುಂದರವಿಠಲ ಸ್ವಾಮಿ ಉಪಾಸನೆ ।
ನೇಮದಿಂದಲಿ ಸತತಗೈಯುತಲಿ
ಶ್ರೀ ಮಧ್ವಾರ್ಯರ ಶಾಸ್ತ್ರ ಸೋಮಪಾನದ
ಸುಖ । ಪ್ರೇಮದಿಂದಲಿ ದ್ವಿಜಸ್ತೋಮಕೆಗರೆವರು ೩

೨೫೧

ಶ್ರೀ ಸತ್ಯನಾರಾಯಣ ಕಥೆ

ಪ್ರಥಮೋಧ್ಯಾಯ

ವಾರಣಾಶ್ಯನ ಪಾದ ವಾರಿಜಕೆರಗುತ
ನೀರಜ ಮುಖಿ ಸರಸ್ವತಿಯಾ ॥
ಸಾರ ಭಕ್ತಿಲಿ ಸ್ತುತಿಸಿ ಪೇಳುವೆ ಸತ್ಯ
ನಾರಾಯಣ ಚಾರು ಕಥೆಯಾ ಪ

ಸುರಮುಖಿವಂದಿತ ಸರಸಿಜ ಭವಪಿತ
ಕರುಣ ಶರಧಿ ಕರಿವರದಾ ।
ಹರುಷದಿಂದಲಿ ನಿನ್ನ ಚರಿತೆ ಕೊಂಡಾಡಲು
ವರವ ಪಾಲಿಸು ದಯದಿಂದ ೧

ಶರನಿಧಿ ಸಂಭೂತೆ ಸುರಜೇಷ್ಟ ಸ್ಮರಮಾತೆ
ಪುರಹರ ವಂದಿತೆ ಖ್ಯಾತೆ ॥
ಸ್ಮರಿಸಿ ಬೇಡುವೆ ನಿನ್ನ ದೊರಿಯ ವರ್ಣಿಸಲೀ
ಗರಿಯೆ ವರವ ಸುಖದಾತೆ ೨

ಹರಿಕುಲೋತ್ತುಮ ನಿನ್ನ ಸರಸಿಜ ಪದಯುಗ
ನೆರೆ ನಂಬಿದೆನು ಮುದಿಂದ ॥
ಹರಿ ಸುಚರಿತ್ರವು ಅರುಹಲು ಎನ್ನಗೆ
ಸ್ಥಿರ ಬುದ್ಧಿ ಕೊಡು ವಾಯುಕಂದ ೩

ಗಿರಿಜೇಶ ಶಚಿಪತಿ ಸುರತತಿಗೆರಗುವೆ
ಪರಮ ಸುಭಕ್ತಿಪೂರ್ವಕದಿ ॥

ಹರಿದಾಸ ವರ್ಗಕೆ ಶುಭನೀಡಲೆನಗೆಂದು
ಶಿರಬಾಗಿ ಬೇಡುವೆ ಮನದಿ ೪

ಘನತರ ನೈಮಿಷವನದೊಳು ವಾಸಿಪ
ಮುನಿ ಸೂತನಲ್ಲಿಗೆ ಬಂದು ।
ವಿನಯದಲಿ ವಿಜ್ಞಾಪನ ಮಾಡಿಕೊಂಡರು
ಶೌನಕಾದಿಗಳೆಲ್ಲ ನಿಂದು ೫

ಕ್ಷಿತಿಯೊಳು ಮನದಾಸೆ ಹಿತದಿಂದ ನೀಡುವ ।
ವ್ರತದಾವದ್ಹೇಳಿರೆನುತ ॥
ಅತಿ ಭಕ್ತಿಯಿಂದ ಕೇಳುವ ಮುನಿಗಳ ಕಂಡು
ಕಥಿಸಿದನಾಗೆತಿ ಸೂತಾ ೬

ಛಂದದಿ ಕೇಳಿರಿ ಒಂದೆ ಮನದಿ ಈಗಾ ।
ನಂದದಿ ನಾರದ ತಾನೂ ॥
ಹಿಂದಕ್ಕೆ ಈ ತೆರ ನಂದನ ಗೋ
ವಿಂದನ ಪ್ರಶ್ನೆ ಮಾಡಿದನೂ ೭

ಕಾರುಣ್ಯದಿಂದಲಿ ಸಾರಸೋದ್ಭವ ಕು ।
ಮಾರ ನಾರದ ಮುನಿವರಗೆ ॥
ವಾರಿಜಾಂಬಕನಾದ ಶೌರಿ ಪೇಳಿದ ಕಥೆ
ಸಾಧುವೆ ಮೋದದಿ ನಿಮಗೆ ೮

ವರಸುರ ಲೋಕಾದಿ ಚರಿಸುತ್ತ ನಾರದ ।
ಹರುಷದಿ ಭೂಮಿಗೆ ಬರಲು ॥
ನರರತಿ ಕಷ್ಟದಿ ಮರುಗುವದಂ ನೋಡಿ ।
ಪೊರೆಟರು ಹರಿಗ್ಹೇಳಿಕೊಳಲು ೯

ಪದುಮಜ ಸುತ ನಾರದ ಮುನಿ ವೇಗದಿ ।
ವಿದುಧರ ವಂದಿತನಾದ ॥
ಯದುಪನಲ್ಲಿಗೆ ಬಂದು ಮುದ ಮನದಿಂದಲಿ ।
ವಿಧ ವಿಧದಲಿ ಸ್ತುತಿಗೈದಾ ೧೦

ನಿಗಮಕೆ ನಿಲುಕದ ಅಗಣಿತ ಮಹಿಮನೆ
ತ್ರಿಗುಣ ವರ್ಜಿತ ತ್ರಿವಿಕ್ರಮನೆ ॥
ಪೊಗಳುವೆ ತವ ಪದಯುಗಕೆರಗುತ ನಾನು
ಜಗದುತ್ಪತ್ತಿ ಕಾರಣನೆ ೧೧

ಮಗಳಲ್ಲಿ ಪುಟ್ಟದಿ ಮಗನನ್ನು ಕುಟ್ಟದಿ ।
ಮಗನ ಮಗಳ ಮದುವ್ಯಾದಿ ॥
ಮಗನ ಮಗನ ವರ ಪಡೆದಾತನ ಜೈಸಿ
ಮಗನ ಮಗನ ನೀನು ತಂದಿ ೧೨

ಸಿಂಧುಜ ರಿಪು ಸಖ ನಂದನ ಕೊಂದನ ।
ತಂದೆಯ ತಂದೆಯಾ ಸುತೆಯಾ ॥
ನಂದಿನಿಯಳಿಗಾಗಿ ನೊಂದಿದಿ ನೀ ನರ
ರಂದದಿ ಕವಿಗಣ ಗೇಯಾ ೧೩

ಘನ್ನ ಮಹಿಮ ನಿನ್ನ ಅನಂತ ಚರಿಯವ
ಬಣ್ಣಿಸ ಬಲ್ಲೆನೆ ದೇವಾ ॥
ಪನ್ನಗರಾಜಗಾಗಣ್ಯವಾಗಿಪ್ಪುದು
ಮನ್ನಿಸು ಎನ್ನ ಬಿನ್ನಪವಾ ೧೪

ಬಾ ಮುದ್ದು ನಾರದನೆ ಬಾ ಮುನಿವರ್ಯನೆ
ಬಾ ಮೂರು ಭುವನ ಸಂಚಾರಿ
ನೇಮದಿಂದಲಿ ನಿನ್ನ ಕಾಮಿತ ಪೇಳೀಗ
ಪ್ರೇಮದಿಂದಲಿ ವೀಣಾಧಾರಿ ೧೫

ಮುರಹರ ನಿನ್ನಗೆ ಅರಿಯದ ವಾರ್ತೆಯು ।
ಧರಣಿ ತ್ರಯದಿ ಉಂಟೇನೋ ॥
ನರರತಿ ಕಷ್ಟದಿ ಮರುಗುತಲಿಪ್ಪರು
ಹರಿ ಪೇಳಿದಕುಪಾಯವನು ೧೬

ಸತ್ಯ ಲೋಕೇಶನ ಪುತ್ರನೆ ನಿನ್ನಯ ।
ಉತ್ತಮ ಪ್ರಶ್ನೆಗೆ ನಾನು ॥
ಅತ್ಯಾನಂದದಿ ಉತ್ತರ ಪೇಳುವೆ
ಚಿತ್ತೈಸು ಮುನಿವರ ನೀನು ೧೭

ನಾರದ ಶ್ರೀ ಸತ್ಯನಾರಾಯಣ ವ್ರತ
ಧಾರುಣಿಯೊಳಗಿನ ಜನರು
ಆರು ತಮ್ಮ ಪರಿವಾರದಿಂದಲಿ ಗೈಯ್ಯೆ
ಭೂರಿ ಸೌಖ್ಯದಿ ಮೆರೆವರೋ ೧೮

ದೇವನೆ ಈ ನಿನ್ನ ಸೇವಕನಿಗೆ ಸತ್ಯ ॥
ದೇವನೆ ವ್ರತದ ವಿಧಾನ ॥
ಸಾವಧಾನದಿ ಪೇಳು ಭಾವಜಪಿತ ಏಕೋ
ಭಾವದಿ ಕೇಳುವೆ ಮುನ್ನ ೧೯

ಬುಧನುತ ನಾರದ ಘೃತಕ್ಷೀರ ಶರ್ಕರ ।
ಕದಳಿ ಗೋ ಧೂಮಾದಿಗಳನು ॥
ಪದುಳದಿಂದಲಿ ಸುಪಾಕಗೈದು ಮೇಣ್
ವಿಧ ವಿಧ ಪಕ್ವಾದಿಗಳನು ೨೦

ಪರಮ ಭಕ್ತಿಯಲಿಂದ ಪರಿವಾರ ಸಹಿತದಿ
ಧರುಣಿಸುರನ ಪರಿಮುಖದಿ
ತುರಧೂಳಿ ಕಾಲದಿ ಪರಿಪರಿ ಪೂಜಿಸಿ
ಹರಿಗರ್ಪಿಸಲಿ ಬೇಕು ಮುದದಿ ೨೧

ಈ ರೀತಿಗೈವರ ಕೋರಿಕೆಯನು ದಯ ।
ವಾರಿಧಿ ಶಾಮಸುಂದರನೂ ॥
ಪೂರೈಸಿ ಪ್ರತಿ ನಿತ್ಯ ವಾರಿಜ ಸಹಿತದಿ
ಸೇರಿ ತಾ ನಲಿದಾಡುತಿಹನೂ ೨೨

ಪ್ರಥಮೋಧ್ಯಾಯ ಸಂಪೂರ್ಣಂ

ದ್ವಿತೀಯೋಧ್ಯಾಯಃ

ಅತಿ ಮೋದದಿಂದಲಿ ಮತಿಯುತರೆ ಈಗ
ಪೃಥವಿಯೊಳಗೆ । ಪೂರ್ವದಲಿ ॥
ವ್ರತಗೈದ ಸುಗುಣರ ಇತಿಹಾಸ ನಿಮ್ಮಗೆ
ಕಥಿಸುವೆ ಹಿತದಿಂದ ಕೇಳಿ ೧

ಕಾಶಿಯೊಳಗೆ ಒಬ್ಬ ಭೂಸುರ ಬಡತನ
ಕ್ಲೇಶದಿ ವಾಸಿಸುವದನು ॥
ಶ್ರೀಶ ಅವನ ನೋಡಿ ಪೋಷಿಸಲು
ವೃದ್ಧ ವೇಷದಿ ಮಾತನಾಡಿಸಿದನು ೨

ಭೂತವಕದಿ ವಿಪ್ರನಾಥನೆ ತವ
ಮುಖ ಪಾಥೋಜ ಬಾಡಿದ ಬಗೆಯಾ
ಈ ತೆರ ದುಃಖದಿ ನೀ ತಿರಗುವಂಥ
ಮಾತು ಪ್ರೀತಿಲಿ ಪೇಳಯ್ಯಾ ೩

ಕಥಿಸುವೆ ಹೇವಿಪ್ರ ಹಿತದಿಂದ ನೀಯನ್ನ ।
ಸ್ಥಿತಿಯಾ ಲಾಲಿಸು ಮನದಿಂದಾ ॥
ಗತಿಗೆಟ್ಟು ಚರಿಸುವೆ ಪೃಥಿವಿಯೊಳಗೆ ಈಗ
ಅತಿ ಬಡತನ ದೆಶೆಯಿಂದಾ ೪

ಶ್ರೇಷ್ಠನೆ ದಾರಿದ್ರ್ಯ ಕಷ್ಟ ತೊಲಗುವಂಥ ।
ಥಟ್ಟನೆ ನೀ ಪೇಳುಪಾಯಾ ॥
ಘಟ್ಟ್ಯಾಗಿ ನಿನ್ನ ಉತ್ಕೃಷ್ಟ ಪಾದಾಂಬುಜ
ಮುಟ್ಟಿ ಸೇವಿಪೆ ಮಹರಾಯಾ ೫

ಮಿಡುಕುತ್ತ ವಿಪ್ರನು ನುಡಿದ ಮಾತನು ಕೇಳಿ ।
ಕಡಲಜಪತಿ ಕವಿಗೇಯಾ ॥
ಕಡುದಯದಲಿ ಪೇಳ್ದ ಬಡತನ ಕಳೆಯುವ
ಪೊಡೆವಿಯೊಳಿದ್ದ ಉಪಾಯಾ ೬

ಸಾರುವೆ ಕೇಳಯ್ಯ ಮಾರಜನಕ ನಿಜ ।
ನಾರಾಯಣನ ಸುವ್ರತವಾ
ಆರು ಜಗದಿ ಭಕ್ತಿ ಪೂರ್ವಕ ಮಾಳ್ಪರು
ದಾರಿದ್ರ್ಯ ಹರಿ ದೂರಗೈವಾ ೭

ಮುದುಕನ ನುಡಿ ಕೇಳಿ ಮುದ ಮನದಿಂದಲಿ
ಸದನಕ್ಕೆ ದ್ವಿಜ ಬಂದು ತಾನೂ
ಸುದತಿ ಸಹಿತನಾಗಿ ಸತ್ಯನಾಥಾನ ಪೂಜೆ
ವಿಧ ವಿಧದಲಿ ಮಾಡಿದನೂ ೮

ಹರುಷದಿ ಈ ರೀತಿ ಧರಣಿ ದೇವನು ಮಾಡೆ ।
ಶಿರಿ ಸತಿ ಸುತರಿಂದ ತಾನೂ ॥
ಧರೆಯೊಳು ಸುಖ ಬಿಟ್ಟು ಪರಮ ದುರ್ಲಭವಾದ
ಹರಿಪುರ ಪಥ ಹಿಡಿದನೂ ೯

ಸೂತರೆ ಅತ್ಯಂತ ಕೌತುಕವಾಗಿಹ
ಧಾತ ಪಿತನ ಈ ವ್ರತವು
ಭೂತಳದೊಳಗೆಂತು ಖ್ಯಾತಿಯ ಪೊಂದಿತು
ಪ್ರೀತಿಲಿ ಪೇಳಿರಿ ನೀವು ೧೦

ಪ್ರತಿ ಮಾಸದಲ್ಲಿ ಆ ಪೃಥಿವಿ ದೇವನು ತನ್ನ
ಸತಿ ಸುತ ಪರಿವಾರ ಸಹಿತಾ
ಅತಿ ಹಿತದಲಿ ಮನೋರಥ ಪೂರೈಸುವ
ಈ ವ್ರತ ಮಾಡುತಿರಲಾಗ ತ್ವರಿತಾ ೧೧

ಚರಣನೋರ್ವನು ಶಿರದಿ ಕಾಷ್ಟ ಭಾರವ
ಧರಿಸಿ ಮಾರಲು ಬೀದಿಗಳಲಿ
ಬರುತಿರೆ ಮಾರ್ಗದಿ ಧರಣಿದೇವನ ಮಂ
ದಿರ ಕಂಡ ಪರಮ ಮೋದದಲಿ ೧೨

ಶ್ರೀನಿವಾಸನ ಘನ ಧ್ಯಾನದಿಂದರ್ಚಿಪ
ಕ್ಷೋಣಿ ಸುರನ ನೋಡಿ ಜವದಿ
ಆನಂದದಲಿ ಶೂದ್ರ ಮಾನವ ಕೇಳಿದ
ಏನಿದೆಂದೆನುತಲಾ ಕ್ಷಣದಿ ೧೩

ಶೂದ್ರನ ನುಡಿ ಕೇಳಿ ಆ ದ್ವಿಜ ಪೇಳ್ದನು
ಭದ್ರದ ವ್ರತದ ವಿವರವಾ
ಶುದ್ಧ ಮನದಿ ಚರಣೋದ್ಭವ ಗೈದನಿ
ರುದ್ಧನ ಪಾದಾರ್ಚನವಾ ೧೪

ಹರುಷದಿಂದಲಿ ಸತ್ಯ ಹರಿ ಪೂಜಿಸಿದ ಶೂದ್ರ
ಪರಮ ಸೌಜನ್ಯದಿ ಇದ್ದು ಕೊನೆಗೆ
ಪರಿವಾರಯುತನಾಗಿ ತೆರಳಿದ ಸ್ಥಿರ ಉಳ್ಳ
ಶಿರಿ ಶಾಮಸುಂದರನ ಪುರಿಗೆ ೧೫

ದ್ವಿತೀಯೋಧ್ಯಾಯ ಸಂಪೂರ್ಣಂ

ತೃತೀಯೋಧ್ಯಾಯ

ಋಷಿ ಜನಗಳೆ ಕೇಳಿ ವಸುಧಿ ತ್ರಯದಿ ಘನ
ಪೆಸರಾದ ಇನ್ನೊಂದು ಕಥೆಯಾ
ಉಸುರುವೆ ಕೇಳ್ವರ ವ್ಯಸನವು ಪರಿಹಾರ
ಪುಸಿಯಲ್ಲಿ ಈ ನುಡಿ ಖರಿಯಾ ೧

ವರ ಉಲ್ಕಮುಖನೆಂಬ ಧರಣೀಶನೋರ್ವನು
ಹರುಷದಿಂದಲಿ ತನ್ನ ಹಿತದಾ
ತರುಣಿಯಿಂದೊಡಗೂಡಿ ಶರಧಿ ತೀರದಿ ನಿಜ
ಹರಿಯನ್ನು ಪೂಜಿಸುತಿರ್ದ ೨

ಕ್ಷೋಣಿಪಾಲಕನಿದ್ದ ಆ ನದಿ ತೀರದಿ ।
ವಾಣಿಜ್ಯ ಮಧುನಾಯಕನೂ ॥
ಸಾನುರಾಗದಿ ಬಂದು ಶ್ರೀನಿಧಿ ವ್ರತದ ವಿ
ಧಾನವೇನೆಂದು ಕೇಳಿದ ೩

ಭೂಮಿಪಾಲಕ ಮಧುನಾಮಕ ವೈಶ್ಯನ
ಆ ಮೃದು ನುಡಿ ಕೇಳಿ ಜವದಿ
ಕಾಮಿತದ ಸತ್ಯ ಸ್ವಾಮಿಯ ವ್ರತದಾ
ನೇಮವ ಪೇಳ್ದ ಸಮ್ಮುದದಿ ೪

ರಕ್ಕಸಾರಿಯ ಕಥಾ ಭಕ್ತಿಲಿ ಕೇಳುತ
ಲಕ್ಕುಮಿಯುತ ಮುದದಿಂದ
ಮಕ್ಕಳೆನಗಾಗಲು ಚಕ್ರಿಯ ಸುವ್ರತ
ಅಕ್ಕರದಲಿ ಮಾಳ್ಪೆನೆಂದ ೫

ಈ ರೀತಿ ಧೃಡ ವ್ಯಾಪಾರಿಯು ತಾ ಗೈದು
ಶೌರಿ ಪ್ರಸಾದ ಸ್ವೀಕರಿಸಿ ॥

ಸಾರಿ ಪೇಳಿದ ತನ್ನಾಗಾರಕ್ಕೆ ಬಂದು ತಾ
ನಾರಿಯ ಮುಂದೆ ವಿಸ್ತರಿಸಿ ೬

ಪತಿಯ ವಚನ ಕೇಳಿ ಸತಿ ಶಿರೋಮಣಿ ಲೀಲಾ
ವತಿಯು ತನ್ನ ಮಂದಿರದಿ ॥
ಹಿತದಿರುತಿರೆ ಶಿರಿ ಪತಿ ಕರುಣದಿ ಗರ್ಭ
ವತಿ ತಾನಾದಳಾ ಕ್ಷಣದಿ ೭

ಹತ್ತನೆ ಮಾಸದ ಉತ್ತಮ ಪುತ್ರಿಯ
ಪೆತ್ತಳು ಆ ನಾರಿ ತಾನೂ ॥
ಅತ್ಯಂತ ಸನ್ಮುದ ಚಿತ್ತನಾಗಿ ಸಾಧು
ಮರ್ತನು ಹರಿ ವ್ರತವನ್ನು ೮

ಸುತೆಯು ಪುಟ್ಟಿದ ಮೇಲೆ ಸತಿ ಲೀಲಾವತಿ ತನ್ನ
ಪತಿಗಭಿವಂದಿಸಿ ನಿಂದು ॥
ಅತಿ ಭಕ್ತಿಯಿಂದಲಿ ಕಥಿಸಿಕೊಂಡಳು ಯದು
ಪತಿ ವ್ರತ ಮಾಡಬೇಕೆಂದು ೯

ಸುದತಿಯ ನುಡಿ ಕೇಳಿ ಮಧುನಾಮಕ ಸಾಧು
ವಿಧಿಸಿದ ಸುತೆ ಕಲಾವತಿಯಾ ॥
ಮದುವೆಯ ಕಾಲದಿ ಯದುಪನರ್ಚಿಪೆನೆಂದು
ಮುದದಿಂದ ಪೇಳ್ದನುಪಾಯಾ ೧೦

ಪರಿ ಪರಿ ಸೌಖ್ಯದಿಂದಿರುತಿರೆ ವೈಶನ
ತರುಳೆಗೆ ಪೂರ್ಣಯೌವನವು ।
ಬರಲು ಮಾಡಿದ ತಕ್ಕವರ ತಂದು ಲಗ್ನವ
ಮರೆತು ಬಿಟ್ಟನು ಹರಿ ವ್ರತವಾ ೧೧

ಶ್ರೀಮಂತ ವೈಶ್ಯನು ಪ್ರೇಮದಿಂದಲಿ ತನ್ನ
ಜಾಮಾತನೊಡನೆ ವ್ಯಾಪಾರಾ
ನೇಮದಿ ಗೈಯಲು ಗ್ರಾಮ ತ್ಯಜಿಸಿ ಪೋದಾ
ಆ ಮಹಾಪುರ ರತ್ನಸಾರಾ ೧೨

ಈ ನಗರಕೆ ಬಂದು ವ್ಯಾಪಾರ ವಾಣಿಜ್ಯ
ಮಾಣಿದೆ ತಾ ಮಾಡುತಿರಲು ॥
ಶ್ರೀನಿವಾಸನು ಕೋಪ ಮಾನಸದಲಿ ಸುಖ
ಹೀನನಾಗೆಂದು ಶಪಿಸಲು ೧೩

ಕುಪಿತದಿಂದಲಿ ಶ್ರೀಪತಿ ಶಪಿಸಲು ಆ ಪುರ
ನೃಪನ ಮಂದಿರದಿ ತಸ್ಕರರು ॥
ಗುಪಿತದಿಂದಲಿ ಪೋಗಿ ವಿಪುಲ ದ್ರವ್ಯಗಳೆಲ್ಲ
ಕಪಟದಿಂದ ಅಪಹರಿಸಿದರು ೧೪

ವಿತ್ತಾಪಹರಿಸಿದ ಮತ್ತ ಚೋರರು ತಾವು
ಜತ್ತಾಗಿ ಓಡುತ್ತಿಲಿರಲು ॥
ಮತ್ತೆ ಮರಳಿ ನೋಡೆ ಅತ್ಯವಸರದಿಂದ
ಭೃತ್ಯ ಜನರು ಬರುತಿರಲು ೧೫

ವಸುಧಿ ಪಾಲಕನ ಕೈವಶವಾದೆವೆಂಬಂಥಾ
ವ್ಯಸನದಿಂದಲಿ ಆ ಖಳರು ।
ನಿಶೆಯಲ್ಲಿ ತಂಗಿದ್ದ । ವಸು ವೈಶ್ಯ ಜನರಲ್ಲಿ
ಬಿಸುಡಿ ನಿಂದಿರದೆ ಓಡಿದರು ೧೬

ಅರಸನ ದೂತರು ಅರಸುತ್ತ ಚೋರರು
ಬರಲು ಉಭಯ ವೈಶ್ಯರಲ್ಲಿ
ಇರುವ ದ್ರವ್ಯವ ಕಂಡು ದುರುಳರು ಇವರೆಂದು
ಅರಿತು ತಮ್ಮ ಚಿತ್ತದಲ್ಲಿ ೧೭

ಬಿಡದೆ ಆ ವೈಶ್ಯನ ಹಿಡಿದೆಳೆ ತಂದರು ।
ಉಡುಪ ಧ್ವಜಾಧಿಪನಲ್ಲಿ ॥
ನುಡಿದರು ತಮ್ಮ ವಡವೆಯ ಕದ್ದಂಥಾ
ಕಡು ದುಷ್ಟರಿವರೆನ್ನುತ ೧೮

ದೂತರ ಹೇಳಿದ ಮಾತು ಕೇಳುತ್ತ ಭೂ
ನಾಥನು ನುಡಿದನು ಜವದಿ
ಯಾತಕ್ಕೆ ತಡವು ನಿರ್ಭೀತಿಲಿ ಹಾಕಿರಿ
ಪಾತಕಗಳ ಸೆರೆ ಗೃಹದಿ ೧೯

ಅಂದ ವಚನ ಕೇಳಿ ಛಂದದಿ ದೂತರು
ಬಂಧಿಸಿ ಸಂಕೋಲೆಯಿಂದ ।
ತಂದು ಹಾಕಲು ಸೆರೆಮಂದಿರದಲ್ಲಿದ್ದರು
ಮಂದ ಭಾಗ್ಯರು ಶ್ರಮದಿಂದ ೨೦

ಇತ್ತ ವೈಶ್ಯನ ಪುತ್ರಿ ಪತ್ನಿಯಳಿ
ಗತ್ಯಂತ ಬಡತನ ಬರಲು
ತುತ್ತನ್ನ ಕಾಣದೆ ನಿತ್ಯ ನಿತ್ಯದಿ ತಿರು
ಗುತ್ತ ಭಿಕ್ಷವ ಬೇಡುತಿರಲು ೨೧

ಒಂದು ದಿನದಿ ಸಾಧು ನಂದಿನಿ ಭಿಕ್ಷಕೆ ॥
ಬಂದಳು ವಿಪ್ರನ ಮನೆಗೆ ॥
ಛಂದದಿ ಆ ದ್ವಿಜ ಮಂದಿರದೊಳು ನಿಜ
ಇಂದಿರೇಶನ ಚನ್ನಾಗಿ ೨೨

ವಿಧದಿ ಪೂಜಿಸಿ ಭೂ ಬುಧನಿಂದ ಕಥೆಯನ್ನು
ಮುದದಿಂದ ಕೇಳುತ್ತಲಿರಲು ।
ಸುದತಿ ನಂದಿನಿ ಅದನು ಲಾಲಿಸಿ ತನ್ನ
ಸದನಕ್ಕೆ ಮರಳಿ ಬಂದಳು ೨೩

ಬಂದು ತನ್ನಯ ತಾಯೆ ಮುಂದೆ ಪೇಳ್ದಳು ಸತ್ಯ
ನಂದ ನಂದನ ಚರಿತ್ರೆಯನ್ನೂ
ನಂದಿನಿಯಳ ಮಾತು ಛಂದದಿ ಕೇಳುತ್ತ
ಅಂದು ಗೈದಳು ಧೃಡವನ್ನು ೨೪

ಪತಿಯು ಜಾಮಾತಯುತನಾಗಿ ಬರಲೆಂದು
ಅತಿ ಭಕ್ತಿಲಿ ಶೌರಿ ವ್ರತವಾ ॥
ಸುತೆ ಸಹಿತ ಗೈದು ಕ್ಷಿತಿಸುರ ಪರಿಮುಖ
ಹಿತದಿ ಕೇಳ್ದಳು ಹರಿಕಥೆಯಾ ೨೫

ಸತ್ಯದೇವಗೆ ಅತ್ಯಂತ ದಯಪುಟ್ಟಿ ।
ಪೃಥ್ವಿಪಾಲನ ಸ್ವಪ್ನದಲಿ ॥
ವಿತ್ತಪಹರಿಸಿದ ಮತ್ತರಲ್ಲವು ಇವ
ರುತ್ತಮರೆಂದು ಪೇಳುತ ೨೬

ಪೊಡೆವಿಪ ಅವರನ್ನು ಬಿಡದಿರೆ ನಾ ನಿನ್ನ
ಕಡು ಸಂಪದ ಸಾಮ್ರಾಜ್ಯ
ಒಡವೆ ವಸ್ತುಗಳೆಲ್ಲ ಬಿಡದೀಗ ಕಳೆಯುವೆ
ಧೃಡವೆಂದು ಭಾವಿಸು ರಾಜಾ ೨೭

ಪರಮ ಚಿತ್ತದಿಂದ ಧರಣಿಪ ತಾನೆದ್ದು ।
ಕರೆಸುತ ಸೆರೆಯೊಳಿದ್ದವರಾ ॥
ಅರುಹಿದಾ ಅವರಿಗೆ ತೆರಳಿರಿ ನಿಮಗಿನ್ನು
ಹರಿ ದಯವಾಯಿತು ಪೂರಾ ೨೮

ತೆಗೆದಿದ್ದ ದ್ರವ್ಯಕ್ಕೆ ದ್ವಿಗುಣ ಕೊಟ್ಟವರಿಗೆ ।
ಮಿಗೆ ಮಾಡುತ ಬಹುಮಾನಾ ॥
ಸುಗುಣ ಭೂಪಾಲನು ಪೊಗಳಿದ ಮನದೊಳು
ಖಗ ಧ್ವಜ ಶಾಮಸುಂದರನಾ ೨೯

ತೃತೀಯೋಧ್ಯಾಯಃ ಸಂಪೂರ್ಣಂ

ಚತುರ್ಥೋಽಧ್ಯಾಯಃ

ಕಥಿಸುವೆ ಕೇಳಿರಿ ಹಿತದಿ ಮುಂದಾಗುವ
ರತಿಪತಿ ಜನಕನ ಚರಿತಾ ॥
ಕ್ಷಿತಿಪನಾಜ್ಞದಿ ಸಾಧು ಅತಿ ಜವ ತವಪುರ
ಪಥ ಹಿಡಿದನು ಸಜಾಮಾತಾ ೧

ಬರುವ ವೈಶ್ಯನ ಗುಣ ಪರಿಕಿಸಲೋಸುಗ
ಹರುಷದಿಂದಲಿ ಯತಿರೂ ಪಾ ॥
ಧರಿಸಿ ಬಂದನು ಆರು ಅರಿಯದಂದದಿ ಖರ
ಮುರವೈರಿ ದುರಿತ ನಿರ್ಲೇಪಾ ೨

ಕಡು ಜವದಿಂದಲಿ ಜಡಧಿ ತೀರಕೆ ಬಂದು
ಮೃಡ ವಂದಿತ ಮಹರಾಯಾ ॥
ಹಡಗದೊಳಗಿರುವಂಥ ಒಡವೆ ಕೇಳಲು ಸಾಧು
ಹುಡುಕಿದ ಪೇಳಲುಪಾಯಾ ೩

ಚೀರ ವಲ್ಕಲ ಉಟ್ಟ ಚಾರು ಮೂರ್ತಿಯವಿ
ಚಾರ ಮಾಡದೆ ಆ ಕೃಪಣಾ ॥
ಚೋರನು ಇವನೆಂದು ಸಾರಿದ ಇದರೊಳು
ಸೇರಿಸಿರುವೆ ಲತಾಪರ್ಣ ೪

ಗೂಢ ಕಪಟದಿ ಸಾಧು ನುಡಿದ ಭಾಷೆಯ ಕೇಳಿ
ಪೊಡವೀಶ ಪನ್ನಂಗಶಯನಾ ॥
ತಡೆಯದೆ ಮನದೊಳು ಕಡು ಕೋಪದಿ ಪೇಳ್ದ
ಧೃಡವಾಗಲಿ ನಿನ್ನ ವಚನ ೫

ಸಿಟ್ಟಿನಿಂದಲಿ ಪರಮೇಷ್ಠಿ ಪಿತನು ಶಾಪ
ಕೊಟ್ಟು ತಾ ಪೋಗಲು ಇತ್ತ

ಭ್ರಷ್ಟ ವೈಶ್ಯನು ತಾ ಥಟ್ಟನೆ ನೋಡಿದ
ಪೆಟ್ಟಿಗೆಯೊಳಗಿದ್ದ ವಿತ್ತ ೬

ವ್ರತತಿ ಪರ್ಣಗಳಿಂದ ಯುತವಾದದು ಕಂಡು
ಪತಿತ ವಿಶ್ವಾಸ ಘಾತುಕನು
ವ್ಯಥೆ ಪೂರಿತನಾಗಿ ಸ್ಮೃತಿ ತಪ್ಪಿ ದೇಹದೋಳ್
ಪೃಥಿವಿಗೆ ತಾನುರುಳಿದನು ೭

ವಸು ವ್ಯಾಕುಲದಿಂದ ವಸುಧೆಯೊಳ್ ಮಲಗಿದ
ಶ್ವಶುರಗೆ ನುಡಿದ ಜಾಮಾತಾ ॥
ಋಷಿವರನಿಗೆ ನೀನು ಪುಸಿಯಾಡಿದುದರಿಂದ
ವ್ಯಸನವಾಯಿತು ತಿಳಿ ತ್ವರಿತಾ ೮

ಸುಗುಣ ರಹಿತ ಸಾಧು ಮಗಳ ಗಂಡನ ಮಾತು
ಸೊಗಸಿಲಿಂದಲಿ ಕೇಳುತ್ತಾ ॥
ಮುಗಿದ ಕರಯುಗದಿ ಯತಿಗೆ ತನ್ನಪರಾ
ಧಗಳ ಕ್ಷಮಿಸಬೇಕೆನುತಾ ೯

ಪರಿ ಪರಿ ಪ್ರಾರ್ಥಿಸಿ ಮೊರೆಯಿಡಲಾಕ್ಷಣ
ಶರಣವತ್ಸಲ ಜಿತ ಕೋಪಾ ॥
ಕರುಣದಿಂದಲಿ ಶಾಪ ಪರಿಹರಿಸಿ ತಾನು
ತೆರಳಿದ ಸುರನುತ ಶ್ರೀಪಾ ೧೦

ಮದನಪಿತನ ದಯ ಒಗಲು ಘನತರ
ಮಧು ನಾಮಕ ವ್ಯಾಪಾರಿ
ಉದಧಿ ತೀರದಿ ನಿಜ ಪದುಮೇಶನ ಪೂಜೆ
ಮುದದಿ ಗೈದನು ಪರಿ ಪರಿ ೧೧

ಶಿರಿವರನರ್ಚಿಸಿ ತರುವಾಯದಲಿ ಸಾಧು
ಭರದಿ ನಾವೀ ರೂಢನಾಗಿ
ತೆರಳಿ ಬಂದನು ರತ್ನಪುರ ನಿಕಟಕೆ ತನ್ನ
ತರಳೇಶನ ಸಹಿತಾಗಿ ೧೨

ಭೂರಿ ಮುದದಿ ಅಬ್ಧಿ ತೀರಕ್ಕೆ ಬಂದಂಥಾ
ವಾರುತಿಯನು ಅತಿ ಬೇಗಾ
ಗಾರದಿರುವ ತನ್ನ ನಾರಿಗೆ ಪೇಳಲು
ಚಾರನ್ನ ಕಳುಹಿದನಾಗಾ ೧೩

ಸತಿ ಲೀಲಾವತಿ ತಾನೂ ಪತಿ ಬಂದ ಸಂಗತಿ
ಅತಿ ಜವದಲಿ ಕೇಳುತ್ತಾ
ಮಿತಿ ಮೀರಿದ ಸುಖಪೂರಿತಳಾಗಿ ಹರಿವ್ರತ
ಸುತೆಗರುಹಿದಳು ಮಾಡೆಂದು ೧೪

ಹರುಷದಿಂದಲಿ ಪೇಳಿ ಭರದಿ ಬಂದಳು ಪತಿ
ದರುಶನ ಮಾಡಿಕೊಳ್ಳಲು
ತರಳೆ ಕಲಾವತಿ ಶೌರಿ ಪ್ರಸಾದ ಸ್ವೀ
ಕರಿಸದೆ ಶರಧಿಗೆ ಬರಲು ೧೫

ಮಲಹಾರಿ ಪ್ರಸಾದ ಲಲನೆಯು ಮರೆಯಲು
ಜಲಜಾಕ್ಷ ತಾಳುತ್ತ ಕೋಪ
ಘಳಿಲನೆ ಘನ ನಾವಿಯೊಳಗಿರುವಾಕಿಯ
ಚೆಲುವ ಪತಿಯ ಮುಳುಗಿಸಿದಾ ೧೬

ಶರಧಿಯೊಳ್ಮುಳುಗಿಹ ಹರಣ ಪತಿಯ ನೋಡಿ
ತರುಣಿ ಕಲಾವತಿ ಧರೆಗೆ
ಮರುಗಿ ಒರಗಿ ಮೈಮರೆದು ಬೀಳಲು ಸ
ರ್ವರು ಸೋಜಿಗರೆಂದಾಗ ೧೭

ತನುಜೆಯ ಶೋಕವ ಜನನಿ ಪಿತರು ನೋಡಿ
ಮನದೊಳು ಬಹು ದುಃಖಿಸಿದರು
ಘನತರ ಭಕ್ತಿಲಿ ಮನಸಿಜ ರಿಪುನುತ
ವನಧಿಶಾಹಿಯ ಭಜಿಸಿದರು ೧೮

ವನಚರ ಕೂರ್ಮನ ವನಧಿ ವಸನೆ ಪತಿ
ಮನುಜ ಕಂಠೀರವ ಬಾಲಾ
ಜನನಿಯ ಕೊಂದಂಥ ಜನಕಜೆಪತಿ ರಂಗ
ಅನಲಾಕ್ಷ ಸಖ ಖಲ ಕಾಲಾ ೧೯

ಚಿತ್ತದಿಂದಲಿ ಸಾಧು ಸತ್ಯ ದೇವೇಶನ
ಹತ್ತು ನಾಮವ ಭಜಿಸಲು
ಪೃಥ್ವಿಜ ಪತಿ ಪುರುಷತ್ತಮಗೆ ಆಗ
ಅತ್ಯಂತ ಕರುಣ ಪುಟ್ಟಲು ೨೦

ಹರಿಪದದಲಿ ನಿಂದು ಹರಿವಂದಿತನಾದ
ಹರಿ ನುಡಿದನು ಪ್ರಸಾದಾ
ಹರಿಣಾಕ್ಷಿ ಪೋಗಿ ಸ್ವೀಕರಿಸಿ ಬಂದರೆ ಪರಿ
ಹರಿಸುವದು ಈ ಭೇದಾ ೨೧

ತಕ್ಷಣದಲಿ ಅಂತರಿಕ್ಷ ವಾಣಿಯ ಕೇಳಿ
ಲಕ್ಷಣವಂತ ಪ್ರಸಾದಾ
ಭಕ್ಷಿಸಿ ಬರಲಾಗ ಲಕ್ಷ್ಮೀಶನ ದಯ ಕ
ಟಾಕ್ಷದಿ ಆಯಿತು ಮೋದಾ ೨೨

ಚಂದದಿಂದೆಲ್ಲಾರೂ ಬಂದು ಪ್ರತಿ ಮಾಸದಿ
ಮಂದಿರದೊಳು ಗೈದು ವ್ರತವಾ
ನಂದ ಈ ಜಗದೊಳು ಪೊಂದಿ ಸೇರ್ದರು ಶಾಮ
ಸುಂದರವಿಠಲನ ಪುರವಾ ೨೩

ಚತುರ್ಥೋಧ್ಯಾಯ ಸಂಪೂರ್ಣಂ

ಪಂಚಮೋಧ್ಯಾಯಃ

ಸಾಧು ಜನರೆ ಕೇಳಿ ವೇದ ಪಿತನ ಪ್ರ
ಸಾದ ಮಹಿಮೆ ಘನವಾದಾ
ಗಾಧಾ ಚರಿತೆಯನು ಬೋಧಿಪೆ ನಿಮಗೀಗ
ಶ್ರೀಧರಗರೆವ ಸನ್ಮೋದಾ ೧

ಭೂತಳದೋಳ್ತುಂಗ ಕೇತು ನಾಮಕ ನೃಪ
ಖ್ಯಾತಿ ಪೊಂದಿರಲೊಂದು ದಿನದಿ ॥
ಪ್ರೀತಿಯಿಂದಲಿ ಮೃಗವ್ರಾತ ತರಿಯಲು ಪೋದ
ಭೀತಿಯಿಲ್ಲದೆ ಕಾನನದಿ ೨

ಶರ ಧನುವಿಗೆ ಪೂಡಿ ಹರಿ ಪುಲಿಗಳ ಸಂ
ಹರಿಸಿ ಚರಿಸಿ ಬ್ಯಾಸರದಿ ॥
ಪುರದ ಸಾಮೀಪ್ಯದಿ ಇರುವ ಪರ್ಬದ ವಟ
ತರು ನೆರಳಿಗೆ ಬಂದ ಜವದಿ ೩

ದೊರಿಯು ವಿಶ್ರಮಿಸಿದ ತರು ಸನ್ನಿಧಿಯಲ್ಲಿ
ತುರುಪಾಲಕರೆಲ್ಲಾ ನೆರೆದು ॥
ಹರಿಪೂಜೆಯನು ಗೈದು ವರ ಸುಪ್ರಸಾದವ
ಧರಣಿಪನಲ್ಲಿಗೆ ಒಯ್ದು ೪

ವಂದಿಸಿ ಮುಂದಿಡೆ ನಿಂದಿಸಿ ತನ್ನಯ
ಮಂದಿರಕೆ ಬರಲವನಾ ॥
ನಂದವು ಕುಂದಿತು ಇಂದಿರೆ ಪೋದಳು
ನಂದನರಳಿದರು ಮುನ್ನಾ ೫

ಹರಿಯ ಪ್ರಸಾದ ಧಿಕ್ಕರಿಸಿದ ಕಾರಣ
ಸರಿಯಿತೆನ್ನಗೆ ಸಾಮ್ರಾಜ್ಯಾ
ತ್ವರಿತದಿ ಮನದೊಳು ಅರಿತು ತಾ ಮರುಗಿದಾ
ಪರಮ ಭಕ್ತಿಲಿ ಆ ರಾಜಾ ೬

ಗೋಪಾಲರಿರುವಲ್ಲಿ ತಾ ಪೋಗಿ ಶ್ರೀ ಸತ್ಯ
ಶ್ರೀಪನ್ನ ಪೂಜಿಸಲಾಗಾ ॥
ತಾಪ ರಹಿತನಾಗಿ ತಾ ಪಡೆದನು ಶಿರಿ
ಸೂಪುತ್ರ ಧರೆಯ ವೈಭೋಗ ೭

ಯತಿಗಳೆ ನಿಮಗೀಗ ರತಿಪತಿ ಜನಕನ ।
ವ್ರತದ ಮಹಿಮೆ ಕಥಿಸಿದೆನು ॥
ಕ್ಷಿತಿಯೊಳು ಇದನಾರು ಪ್ರತಿಮಾಸ ಮಾಳ್ಪರು
ಪತಿತಪಾವನರಾಗುವರು ೮

ಕಡು ಕುರುಡಗೆ ಕಣ್ಣು ಜಡಬಧಿರಗೆ ಕರ್ಣ
ಧೃಡ ಬಂಜೆಗೆ ಸಂತಾನಾ
ಬಡವಗೆ ಭಾಗ್ಯವು ಸಡಗರದಲಿ ಕೊಟ್ಟು
ಬಿಟದೆ ರಕ್ಷಿಪನನುದಿನಾ ೯

ಈ ಮಹಾ ಚರಿತೆಯ ಯಾಮ ಯಾಮಕೆ
ನಿತ್ಯ ನೇಮದಿ ಪಠಿಸುವವರನ್ನು ॥
ಕಾಮಿತ ಫಲವಿತ್ತು ಪ್ರೇಮದಿ ಸಲಹುವ
ಶಾಮಸುಂದರ ತಾನೂ ಬಿಡದೆ ೧೦

ಜಯ ಸತ್ಯದೇವಗೆ ಜಯ ಸತ್ಯಶೀಲಗೆ
ಜಯ ಸತ್ಯ ಲೋಕೇಶ ಪಿತಗೆ ॥
ಜಯ ಶೃತಿ ವೇದ್ಯಗೆ ಜಯ ಶ್ರೀನಿವಾಸಗೆ
ಜಯ ಶಾಮಸುಂದರ ದೊರೆಗೆ ೧೧

ಇತಿಶ್ರೀ ಶಾಮಸುಂದಾರ್ಯಕೃತ
ಶ್ರೀ ಸತ್ಯನಾರಾಯಣ ಕಥಾ ಪದ್ಯ ಸಂಪೂರ್ಣಂ ॥

ಸುಳಾದಿಗಳು

೨೫೨

ಧ್ರುವತಾಳ

ನಿಷ್ಠೆಯಿಂದಲಿ ಮನ । ಮುಟ್ಟಿ ಭಜಿಸೊ ವಿಜಯ ॥
ವಿಠಲದಾಸರ ಮನವೆ ನಿತ್ಯ ॥
ಎಷ್ಟು ಹೇಳಲಿ ಇವರ ಉತ್ಕೃಷ್ಟ ಮಹಿಮೆ ಕೃಪಾ ।
ದೃಷ್ಟಿಯಿಂದಲಿ ನೋಡಿದಾಕ್ಷಣದಿ ॥
ಭ್ರಷ್ಟ ಮನಸಿಲಿಂದ । ಬಿಟ್ಟು ಧರ್ಮಾಚರಣೆ
ಧೃಷ್ಟ ಕೃತ್ಯವಗೈದು ದೋಷದಿಂದ ।\
ತಪ್ಪಿದ ದುರಿತೌಘ । ಮೊಟ್ಟೆಗಳೆಲ್ಲವು ।
ಸುಟ್ಟು ಭಸ್ಮೀ ಭೂತವಾದ ಬಳಿಕ
ಪುಟ್ಟಿ ಸುಜ್ಞಾನ ಭಕ್ತಿ ವೈರಾಗ್ಯ ಭರಿತರಾಗಿ
ಮೆಟ್ಟುವರೋ ಕೈವಲ್ಯ ಪಥವಾ ॥
ಸೃಷ್ಟಿ ಸಂಹಾರಕರ್ತರಿದ್ದಲ್ಲಿ ಪೋಗಿ ।
ಸಿಟ್ಟಿನಿಂದಲಿ ಕೊಟ್ಟು ಶಾಪವನ್ನು
ಥಟ್ಟನೆ ವೈಕುಂಠ ಪಟ್ಟಣಕ್ಕೆ ತೆರಳಿ
ಪಟ್ಟದರಸಿಯಾದ ಲಕುಮಿ ಸಹಿತಾ
ಸೃಷ್ಟ್ಯಾಂಡ ಭಾರ ಶಿರದಿ ಇಟ್ಟಂಥಾ ಫಣಿ ಪತಿಯಾ
ಪಟ್ಟಿ ಪರ್ಯಂಕದಲ್ಲಿ ಪವಡಿಸಿಪ್ಪಾ
ಧಿಟ್ಟ ಮೂರುತಿ ಶಾಮಸುಂದರವಿಠಲಗೆ
ಪೆಟ್ಟು ಹಾಕಿದ ಪರಮ ಘಟ್ಟಿಗರಿವರು ೧

ಮಟ್ಟತಾಳ

ಎರಡನೆ ಯುಗದಲ್ಲಿ ಸುರಲೀಲನು ಎಂಬ
ತರುಚರ ರೂಪದಲಿ ತರು । ಣಿಕುಲೋದ್ಭವನಾ

ಚರಣವ ಸೇವಿಸಿ ಕರುಣ ಸಂಪಾದಿಸಿದಾ
ಮರಳಿ ನಿಕಂಪಾ ನಾಮದಲಿ । ದ್ವಾ
ಪರದಲಿ ಪುಟ್ಟ ಯಾದವನೆನಿಸಿದಾ
ಅರುಹಲೇನು ಮತ್ತೆ ಚರಣಜ ಕುಲದಲ್ಲಿ
ಧರಿಸುತ ಜನ್ಮವನು ಕರುಣಾಕರ
ಶಾಮಸುಂದರನಂಘ್ರಿಗೆ ಶರಧನುವಿಗೆ ಹೂಡಿ
ಗುರಿ ನೋಡಿ ಎಸೆದಾ ೨

ತ್ರಿವಿಡತಾಳ

ಪುನಃ ಕಲಿಯುಗದಲ್ಲಿ ಅನುಪಮ ಸನ್ಮಹಿಮ
ಅನಿಮಿಷನಾಥಾಖ್ಯ ದಾಸಾರ್ಯರಾ
ಮನೆಯಲ್ಲಿ ಗೋವತ್ಸನೆನಿಸಿ ವಾಸಿಸಿ ಹರಿಯಾ
ಗುಣನಾಮ ಕೀರ್ತನೆ ಶ್ರವಣಗೈದಾ
ಘನ ಪುಣ್ಯದಿಂ ಪಶುತನವು ಪೋಗಾಡುತ್ತ
ತನಯರಾಗಿ ಅವರ ಬಳಿಯಲಿದ್ದು
ಮುನಿ ಮಧ್ವಪತಿ ಎಂಬೊ ಪೆಸರಿನಿಂದಲಿ ಸದಾ
ಮಿನುಗುವರೊಡಗೂಡಿ ಕವನದಿಂದಾ
ಅನನುತ ಶ್ರೀ ಶಾಮಸುಂದರವಿಠಲನ್ನ
ಮನದಿ ಕೊಂಡಾಡುತ್ತ ಅನುಗ್ರಹ ಪಡೆದರೂ ೩

ಅಟ್ಟತಾಳ

ಕ್ಷಿತಿಯೊಳು ಮಾನವಿ ಸೀಮಗೆ ಸೇರಿದ
ಕ್ಷಿತಿಧರ ದೇವನ ಸುತೆಯ ಸುತೀರದಿ
ಕ್ಷಿತಿರುಹವರ ನರಹರಿ ಸಾನ್ನಿಧ್ಯದಿ
ಅತಿ ಪುಣ್ಯಕರ ಪುಟ್ಟ ಬದರಿ ಸುಕ್ಷೇತ್ರದಿ
ಸತಿ ಶಿರೋಮಣಿಯಾದ ಕೂಸಮ್ಮನುದರದಿ

ಸುತನಾಗಿ ಪ್ರತಿದಿನ ಶಶಿಯಂತೆ ಬೆಳೆಯುತ್ತ
ಅತಿಶಯ ದಾರಿದ್ರ್ಯ ವ್ಯಥೆಯು ಆವರಿಸಲು
ಖತಿ ಲೇಶವಾಗದೆ ಸಹಿಸುತ್ತ ಶಾಂತದಿ
ಮತಿಯಿಂದ ಮನದೊಳು ಯೋಚಿಸಿ ಮುಂದಣ
ಗತಿಗಾಗಿ ತಾ ಪೋಗಿ ವಾರಣಾಸಿಯಲ್ಲಿ
ಪತಿತರುದ್ಧರಿಸುವ ಸುರನದಿಯಲಿ ಮಿಂದು
ಶಿತಮನದವರಾಗಿ ಇರುತಿರಲೊಂದಿನ
ಸ್ತುತಿಸುತ್ತ ಹರಿಪಾದ ಮಲಗಿರೆ ಸ್ವಪ್ನದಿ
ಶತಧೃತಿನಂದನ ಕರೆದೊಯ್ದಾಚೆಗೆ ಇಪ್ಪ
ಕ್ರತುಭುಜ ತತಿಯಿಂದ ಸುತನಾದ ಶ್ರೀ ಶುಕ
ಪಿತನಂಘ್ರಿ ಕಮಲಕ್ಕೆ ನುತಿಸಿ ಬಿನ್ನೈಸಿದಾ
ಹಿತದಿ ಸಹೋದರ ಇವನ ರಕ್ಷಿಸೆನೆ
ಶೃತಿಗೆ ಸಮ್ಮತ ಮಧ್ವಮತದ ರಹಸ್ಯದ
ಕೃತಿಗಳ ರಚಿಸಿ ಪ್ರಾಕೃತ ಸುಭಾಷೆಯಲ್ಲಿ
ಸತತ ಶ್ರವಣದಿಂದಾ ಮತಿಮಂದ ಜನರು ಉ
ಧೃತರಾಗುವಂದದಿ ಕಥಿಸುತಗರೆದ ಸಂ
ಕೀರ್ತನವನು ಕೃಪೆಯಿಂದಾ ಯತಿಗಳ ಮನೋಹರ
ಕೃತಿದೇವಿ ಪತಿ ಶಾಮಸುಂದರವಿಠಲಾ ೪

ಆದಿತಾಳ

ಮೌನಿ ಸನ್ಮೌನಿ ಸುಜ್ಞಾನಿವರ್ಯರಾದ ಇವರ ಅ
ಮಾನುಷ ಕೃತಿಗಳು ಭಾನುವಿನ ಕಿರಣದಂತೆ
ಕ್ಷೋಣಿಯೊಳು ತುಂಬಿರಲು ಹೀನಮತಿ
ಮನುಜನಾದ ನಾನೆಂತು ಪೇಳ್ವೆನಯ್ಯಾ
ನೀನೇವೆ ಗತಿಯೆಂದು ಮೊರೆಹೊಕ್ಕ ದೀನರಿಗೆ
ಸಾನುರಾಗದಿ ಒಲಿದು ಪ್ರಾಣವನ್ನು

ಜ್ಞಾನವನ್ನು ದಾನವನ್ನು ಮಾಡಿದರು
ವೇಣುಧೇನುಪಾಲ ತುರಗಾನನ ಮೋಹನ
ಜಾಣ ಜಗನ್ನಾಥದಾಸ ಶ್ರೇಣಿಯ ಸಾಕ್ಷಿ ಕೇಳು
ಈ ನುಡಿ ನಿಜವೆಂದು ಮಾನಸದೊಳಗನುಮಾನವಿಲ್ಲದೆ ಸದಾ
ಮಾಣದೆ ಇವರ ಪದ ಧ್ಯಾನಿಪರಿಗೆ ಪವ
ಮಾನ ಜನಕ ಶಾಮಸುಂದರವಿಠಲನು
ಪಾಣಿ ಪಿಡಿದು ಪರಿಪಾಲಿಸುವ ಸತತಾ

ಜೊತೆ

ಚಿಪ್ಪಶೈಲದೊಳಿಪ್ಪಾ ಅಪ್ಪನ್ನ ಭಜಿಪರಾ
ತಪ್ಪು ಮನ್ನಿಸಿ ಕಾಯ್ವ ಶಾಮಸುಂದರವಿಠಲಾ

೨೫೩

ಧ್ರುವತಾಳ

ಪೊಂದಿ ಭಜಿಸು ಸತತ । ಒಂದೇ ಮನದಿ ಸ್ತಂಭ
ಮಂದಿರ ಮಾನವಿ ದಾಸಾರ್ಯರ ಪ

ಮಂದ ಮಾನವ ಕೇಳೋ । ವಂದಿಸಿ ಸೇವಿಪರ
ಬಂಧನ ಪರಿಹರಿಸಿ ಮನದಾಭೀಷ್ಟ
ತಂದು ಕೊಡುವದಕ್ಕೆ । ಮಂದಾರ ಕುಜದಂತೆ
ಬಂದಿಲ್ಲಿ ನಿಂದಿಹ್ಯರೆಂದು ತಿಳಿಯೊ
ಛಂದಾಗಿ ಇವರು ದಯದಿ । ಕಣ್ದೆರದು ನೋಡಿದರೆ
ಬೆಂದು ಪೋಪವು ದೋಷ ವೃಂದವೆಲ್ಲ
ಕಂದನು ಮಾಡಿದ ಕುಂದು ಕ್ಷಮಿಸಿ ತಾಯಿ
ತಂದೆ ಸಲಹುವಂತೆ ರಕ್ಷಿಸುವರೊ
ಹಿಂದೆ ಸಹ್ಲಾದ ಶಲ್ಯನೆಂದೆನಿಸುತ ಪು ।

ರಂದರಗುರು ಸ್ವಾದಿರಾಜರ ಪ್ರೀತ
ಸಿಂಧುವರದ ಶಾಮಸುಂದರನಾಜ್ಞದಿ
ಇಂದುವಿನಂತೆ ಮೂಡಿ ಪುನಃ ಜಗದಿ ೧

ಮಟ್ಟತಾಳ

ತ್ವರವಾಟದಿ ಜನಿಸಿ । ವರದೇಂದ್ರನೊಲಿಸಿ
ಮರುತಾಗಮ ಗಳಿಸಿ । ತುರುಕ್ಷಕ ದಾಸ
ವರಿಯರ ಕರುಣದಲಿ । ಶರಧಿಜ ಭಾಗದಲಿ ಧರಣಿಪ ವಿಠಲೆಂಬ
ಸುರಚಿರದಂಕಿತವ । ದೊರಕಿಸಿ ಪ್ರಾಕೃತದಿ
ಕರುಣಾಕರ ಶಾಮಸುಂದರನೊರಣಿಸಿದ
ಪರಮಭಾಗವತರ ನೆರೆ ನಂಬೊ ನಿರುತ ೨

ತ್ರಿವಿಡತಾಳ

ಇವರ ಸಂದರುಶನ ಭವಬಂಧ ಮೋಚನ
ಇವರ ಚರಣ ಧ್ಯಾನ ಗಂಗಾಸ್ನಾನ
ಇವರನ ಸಾರಿದರೆ ಜವನ ಅಂಜಿಕೆಯಿಲ್ಲ
ಇವರ ಕವನ ಸ್ತವನ ಶ್ರವಣದಿಂದ
ಪವನ ಸಚ್ಛಾಸ್ತ್ರ ಪ್ರವಚನ ಫಲವಕ್ಕು
ಇವರಿದ್ದ ಸ್ಥಳ ಕಾಶಿ ರಾಮೇಶ್ವರ
ಇವರಲ್ಲಿ ಸಮಸ್ತ ದಿವಿಜರು ನೆಲೆಸಿದ್ದು
ಇವರಂದ ವಚನವ ನಡೆಸುವರು
ಇವರಲ್ಲಿರಲು ಬಿಟ್ಟು ಅವನಿಸುತ್ತಿದರವಗೆ
ಲವಲೇಶವಾದರು ಪುಣ್ಯವಿಲ್ಲ
ಇವರನುಗ್ರಹವಾಗೆ ಶ್ರೀ ಶಾಮಸುಂದರನು
ತವಕದಿ ಕೈಪಿಡಿದು ಸಲಹುವ ಸರ್ವದ ೩

ಅಟ್ಟತಾಳ

ಧಾರುಣಿ ಸುರರ । ಉದ್ಧಾರಗೋಸುಗವಾಗಿ ।
ಮೂರೆಂಟು ಈರಾರು ಚಾರುಲಕ್ಷಣವುಳ್ಳ ।
ಭಾರತಿಪತಿಯಂತೆ ತೋರುವ ಕಾಯುವ
ಶೌರಿ ಕಥಾಮೃತ ಸಾರ ಸುಗ್ರಂಥವಾ
ತಾ ರಚಿಸಿದ ಉಪಕಾರವು ವರ್ಣಿಸ
ಲಾರಿಂದ ಸಾಧ್ಯವು । ಪಾರಾಯಣ ಪ್ರತಿ
ವಾರ ಬಿಡದೆ ಮಾಡೆ ಸಾರಲೇನು । ಸಂ
ಸಾರ ಶರಧಿಯಿಂದ ಪಾರಾಗಿ ಸದ್ಭಕುತಿ
ಪಾರಮಾರ್ಥಜ್ಞಾನ ವೈರಾಗ್ಯ ಪಡೆವುತ
ನಾರದ ನಮಿತ ಶ್ರೀ ಶಾಮಸುಂದರನ ಹೃ
ದ್ವಾರಿಜದೊಳು ಕಂಡು ಸೂರೆಗೊಂಬ ಸುಖ ೪

ಆದಿತಾಳ

ಈತನ ಭಜಿಸಲು । ಯಾತನೆಗಳು ಇಲ್ಲ
ಈತನ ಸೇರಲು । ಯಾತರ ಭೀತಿಯು
ಈತನ ಹೊರತಿನ್ನು । ದಾತರೆ ನಮಗಿಲ್ಲ
ಈತನೆ ರಕ್ಷಕ । ಈತನೆ ತಂದೆ ತಾಯಿ
ಈತನೆ ಸದ್ಗುರು । ಈತನೆ ಗತಿಪ್ರದ
ಈತನು ಮೂಕಗೆ । ಮಾತು ನುಡಿಸಿದಾತ
ಈತನ ಭಕುತಿಗೆ । ಸೋತು ಎರಡು ವ್ಯಾಳ್ಯ
ವಾತಾಂತರ್ಗತ ನಮ್ಮ ಶಾಮಸುಂದರವಿಠಲ
ಪ್ರೀತಿಯಿಂದಿವರಿಗೆ ಮೃಷ್ಟಾನ್ನ ಉಣಿಸಿದ ೫

ಜತೆ

ಈ ಮಹಾಮಹಿಮರ ಪ್ರೇಮ ಪಡೆದವರನ್ನು
ಶಾಮಸುಂದರಸ್ವಾಮಿ ಸತತ ಪೊರೆವ ।

೨೫೪

ಧ್ರುವತಾಳ

ಬಂದೆನ್ನ ಕಾಯೊ ಕರುಣದಿಂದ ಕೈಪಿಡಿದು
ದೀನ ಬಂಧುವೆ । ಒಂದೂರು ಮಂದಿರಾರ್ಯ । ಸಂದೇಹವ್ಯಾಕೆ
ನಿನ್ನ ಪೊಂದಿದ ಸತ್ಯ ಶಿಷ್ಯವೃಂದದೊಳಗೆ ನಾ ಕಡೆಯವನೋ
ತಂದೆ ನೀನಗಲಿದಕೆ ನೊಂದೆನೊ ನಾ ಭವ
ಬಂಧದೊಳಗೆ ಬಿದ್ದು ಬಹುವಿಧದಿ
ಬಂಧುರ ಮಹಿಮನೆ । ನಿನ್ಹೊರತು
ನಮಗಿನ್ನು ಹಿಂದು ಮುಂದು
ಯಾರು ಗತಿಯಿಲ್ಲವೋ । ಕಂದನ ಕುಂದುಗಳ
ಮನಕೆ ನೀ ತಾರದಲೆ
ಕಣ್ತೆರೆದು ಈಕ್ಷಿಸಿ ಎನ್ನೊಳಿದ್ದ । ಮಂದ ಮತಿಯ ಬಿಡಿಸಿ
ಮಧ್ವಶಾಸ್ತ್ರವ ತಿಳಿಸೋ । ಮಂದರಕುಜ ಭಕ್ತ ಸಂದೋಹಕೆ ।
ಹಿಂದೆ ವರದಾತನೆಂದೆನಿಸಿದ ಕರ್ಮಂದಿಗಳರಸರ ಕ್ಷೇತ್ರದಲ್ಲಿ ।
ಬಂದ ಸಮಯವೆನ್ನ ಬಿನ್ನಪ ಚಿತ್ತಕೆ । ತಂದು ತವಕದಿಂದ
ಭೂಸುರರ ಸಂದಣಿಯಲ್ಲಿ ನಿನ್ನ ಮಹಿಮೆ ಪ್ರಕಟಿಸಿ
ಇಂದುವಿನಂತೆ ಪೊಳೆದು ಮೆರೆದ ಕರುಣೀ
ಅಂದಿನಾರಭ್ಯ ನೀನೆ ಸ್ವರೂಪೋದ್ಧಾರಕರ್ತನೆಂದು
ದೃಢನಾಗಿ ನಂಬಿ ತ್ವತ್ಪಾದಕೆ ವಂದಿಸಿ ಮೊರೆ ಇಡೆ
ಸಂಶಯ ಬಿಡು ಇನ್ನು ಇಂದು ನೀನು ನಮ್ಮ ಛಾತ್ರಮಾಲೆಯಲ್ಲಿ
ಸಂದವನೆಂದು ಮನದಿ ಭಾವಿಸಿದೆವು । ಎನುತ ಛಂದದಿ
ನೀನಭಯವಚನವಿತ್ತೆ ಸಿಂಧು ಪೋಲುವ ಕರುಣಿ
ಸುಜ್ಞಾನ ಸದ್ಭಕ್ತಿ ಕುಂದದ ವೈರಾಗ್ಯ ಭಾಗ್ಯವ ಕೊಟ್ಟು
ದ್ವಂದ್ವೈಕ ಧಾಮ ಶಾಮಸುಂದರವಿಠಲನ ಒಂದೇ ಮನದಿ
ಭಜಿಪಾನಂದ ಭಾಗ್ಯವ ನೀಡೋ ೧

ಮಟ್ಟತಾಳ

ಅನುಪಮಸುಚರಿತ್ರ । ಅನುದಿನದಲಿ ಎನ್ನ
ಅಣುಗನೆಂದರಿತೊಂದು ಕ್ಷಣವಗಲದೆ ಇದ್ದು
ಬಿನುಗು ಬುದ್ಧಿಯ ಕಳದು । ಧನದಾಶೆಯ ಕಡಿದು
ಮನದ ಚಂಚಲ ಬಿಡಿಸಿ । ಹನುಮ ಭೀಮಾನಂದ
ಮುನಿಕೃತ ಪಾದವನಜ ಸೇವಿಪುದಕೆ
ತನುವಿಗೆ ಬಲವಿತ್ತು ದಿನ ದಿನದಲಿ
ನೆನೆಯುವ ಸಂಪದ ಗುಣನಿಧಿಯನುಗ್ರಹಿಸೋ ೨

ತ್ರಿವಿಡತಾಳ

ವಿಧಿ ಭವ ಮೊದಲಾದ ಬುಧರು ಹರಿಯಾಜ್ಞೆಯಲಿ
ಮದಡಾರುದ್ಧರಿಸಲು ಜಗದಿ ಬಂದು । ಸುಧೆಯಂತೆ ಸವಿಯಾದ
ಮಧುರ ಕನ್ನಡದಲ್ಲಿ । ಮುದದಿ ರಚಿಸಿದಂಥ । ಪದಸುಳಾದಿಗಳಲ್ಲಿ
ಹುದುಗಿದ ವೇದಾರ್ಥ ತ್ವತ್ವಾದಾಶ್ರಿತರಿಗೆ । ವಿಧ ವಿಧದಿಂದಲಿ
ಬೋಧಿಸುತಾ । ಒದಗಿದ ಅಜ್ಞಾನ ಸದೆದು ಸುಮತಿ ಕೊಟ್ಟು
ಸದಾಚಾರ ಸಂಪನ್ನನೆನಿಸಿ । ಅವರ ಬದಿಗನು ನೀನಾಗಿ
ಸುಕ್ಷೇಮ ಚಿಂತಿಸಿ । ಅಧಮರಿಂದಲಿ ಬಾಧೆ ಬಾರದಂತೆ
ಸದಯನೆ ಸಲಹಿದ ಕಾರಣದಿಂದಲಿ । ವಿದಿತವಾಯಿತು
ನಿನ್ನ ಮಹಿಮೆ ಮನಕೆ ಪದೆ ಪದೆ ಪ್ರಾರ್ಥಿಪೆ ಸದಮಲಗಾತ್ರನೆ
ಅಧೋಗತಿ ತಪ್ಪಿಸಿ ಬಿಡದೆ ಒಲಿದು । ಯದುಕುಲೋದ್ಭವ
ಶಾಮಸುಂದರವಿಠಲನ್ನ । ಹೃದಯಸದನದಲ್ಲಿ
ಪೊಳೆವಂತೆ ಕೃಪೆಮಾಡು ೩

ಅಟ್ಟತಾಳ

ಗುರುವರ ಶ್ರೀ ನರದ್ವಿರದಾರಿ ನಾಮಕ । ವರ್ಣಿಸಲಳವಲ್ಲ
ನಿನ್ನುಪಕಾರವು । ಜ್ವರ ಬಹುಜನರಿಗೆ ಪರಿಹಾರ ಮಾಡಿದಿ

ತುರಗ ಕಚ್ಚಿದ ಘಾಯ ತಕ್ಷಣ ಮಾಯಿಸಿದಿ । ಶರಣಗೆ
ಬಂದಪಮೃತ್ಯು ಓಡಿಸಿದಿ । ಅರಿಯದರ್ಭಕಿ ಹೋಮಕುಂಡದಿ ಬೀಳೆ ।
ತ್ವರಿತಭಿಮಂತ್ರಿಸಿ । ಭಿಸ್ಮವಲೇಪಿಸಿ ಉರಿ ತಂಪುಗೈಸಿದಿ ॥
ಪುರದವರ ಮೊರೆ ಕೇಳಿ ಮಾರಿಯ ಭಯ ಕಳೆದಿ ।
ತರಳರು ದಕ್ಕದ ದೀನಕುಟುಂಬಕ್ಕೆ ಚಿರಕಾಲ ಬಾಳುವ
ಸಂತಾನ ನೀಡಿದಿ । ಸ್ಮರದೂರ ನಿಮ್ಮಾಜ್ಞೆ ಮೀರದ ಕಿಂಕರನ
ತರುಣಿಗೆ ಸೋಂಕಿದ ಭೂತವ ಬಿಡಿಸಿದಿ । ನೆರೆ ನಿನ್ನ
ಪದವನುಸರಿಸೀದ ಸುಜನಕ್ಕೆ ವರ ಭಾಗವತಶಾಸ್ತ್ರ ಅರುಹೀದಿ
ಸಲುಹೀದಿ । ಹರಿಕಥಾಮೃತಸಾರವ ಸಾರೀದಿ । ತರತಮದ
ಭೇದಜ್ಞಾನವ ಬೀರಿದಿ । ವರದಾಯಕ ಸತ್ಯದೇವನ ಪಾವನ
ಚರಿತೆ ವಿಚಿತ್ರವಾಗಿ ಪರಿಪರಿ ಪೇಳುತ್ತ ಪೊರೆದೆ ನಿನ್ನವರನ್ನು
ಧರೆ ಋಣ ತೀರಿದ ಕುರುಹು ಅರಿತು ಒಬ್ಬರಿಗೆ ಸೂಚಿಸದೆ
ಪರಲೋಕಯಾತ್ರೆಗೆ ತೆರಳಿದದಕೆ ನಿನ್ನ ಪರಿವಾರದ
ನಾವೆಲ್ಲರೂ ನಿತ್ಯ ಸಿರಿಯ ಕಳೆದುಕೊಂಡ ಲೋಭಿಗಳಂದದಿ
ಪರಿತಪಿಸುವೆವು । ಕರುಣ ಶರಧಿ ಕಾಯ ತೊರೆದರೇನಾಯಿತು
ಮರೆಯಾದೆ ಗೋವತ್ಸನ್ಯಾಯದಂತೆ ನೀ ದರುಶನ
ಸ್ವಪ್ನದಿಗರೆದು ಸಂತೈಸುತ ನಿರಯಕೆ
ನಮ್ಮನು ಗುರಿಮಾಡದೆ ಪೊರೆ ತರಳಗೊಲಿದ
ಶಾಮಸುಂದರವಿಠಲ ಸರಸಿಜಾಂಘ್ರಿಯುಗ್ಮ ಮಧುಪನೆಂದೆನಿಸಿ ೪

ಆದಿತಾಳ

ಭೂಮಿ ವಿಬುಧವರ ರಾಮವಿಠಲಾರ್ಯರ ಶ್ರೀ ಮುಖದಿಂದ
ಸಕಲ ಶಾಸ್ತ್ರ ಮನನಮಾಡಿ । ಶ್ರೀಮತ್ಸು ಶೀಲೇಂದ್ರ ಸ್ವಾಮಿಗಳಿಂದಲಿ
ನೀ ಮಾನಿತನಾಗಿ ಕಾಮಿತಫಲಪ್ರದ ರಾಯರ ದಯಪಡೆದು
ಕಾಮಾದಿ ಷಡ್ರಿಪುವರ್ಗ ಜಯಿಸುತಲಿ । ನೇಮನಿಷ್ಠೆಯಲಿ
ಜಪತಪಾಚರಿಸುತ ಹೇಮ ರಜತ ಧನ ತೃಣಸಮಾನೆನಿಸುತ

ಆ ಮಹಾ ಹರಿದಾಸ ಸ್ತೋಮದೊಳಗೆ ಬೆರದು ।
ಸಾಮಜವರದನ
ನಾಮವಿಲ್ಲದೆ ಒಂದು ಯಾಮವ
ಕಳೆಯದೆ ಪಾಮರ ಜನರನು
ಪ್ರೇಮದಿಂದದ್ಧರಿಸಿ । ಸಾಮಗಾನ ಪ್ರೇಮ ಶಾಮಸುಂದರನ
ಧಾಮವ ಸೇರಿದ ಹೇ ಮಹಾಮಹಿಮನೆ ೫

ಜತೆ

ನಿನ್ನೊಡೆಯನ ದ್ವಾರಾ ಶ್ರೀ ಶಾಮಸುಂದರನ
ಎನ್ನಂತರಂಗದಿ ನೋಳ್ಪಂತೆ ಕರುಣಿಸೋ ॥

೨೫೫

ಧ್ರುವತಾಳ

ಪೂರ್ವಜನ್ಮ ಸುಕೃತ ಪುಣ್ಯ ಸಾಧನದಿಂದ
ಕಾರ್ಪರಾಧೀಶ ನರಹರಿಯ ದಯದಿ
ಸರುವ ಜೀವೋತ್ತುಮ ಮರುತನ ಕರುಣದಿ
ಶ್ರೀ ರಾಘವೇಂದ್ರರ ದಯದಿ
ಧಾರುಣಿನಾಥ ಶ್ರೀ ಮಾನವಿ ಪ್ರಭುಗಳ
ಪಾರ ವಾತ್ಸಲ್ಯ ಕರುಣ ಕೃಪದಲಿ
ನಾರಸಿಂಹಭಿನವ ಪ್ರಾಣೇಶವಿಠಲನ
ಚಾರುದಾಸ್ಯವ ಪಡೆದ ಶಾಮಸುಂದರ ಗುರುವೆ ೧

ಮಟ್ಟತಾಳ

ನರಸಂಬಂಧಿಕ ಪ್ರಾಂತ (ಬಲ್ಲಟಗಿ) ಕುರ್ಡಿ ಗ್ರಾಮ
ಧರೆಸುರ ಮನೆತನದಿ ದೈವಜ್ಞಕುಲದಿ

ಧರೆಯೊಳುದಿಸಿ ಬೆಳೆದ ವರ ಶುಕ್ಲನ ತೆರದಿ
ಹರಿ ಗುರು ಕೃಪೆಯಿಂದ ಪ್ರಾಂತದಿ ರಾಜಿಸಿದ
ಮುರಹರ ಅಭಿನವ ಪ್ರಾಣೇಶವಿಠಲನ
ಚರಣ ವಾಙ್ಮಯ ಸೇವೆಗೈದು ಗುರುದೇವ ೭

ತ್ರಿವಿಡಿತಾಳ

ಹರಿದಾಸ ಸಾಹಿತ್ಯ ವಾಙ್ಮಯ ಬೆಳಸಿದ
ಕರ್ನಾಟಕ ಮಾತೆಯ ಅಚ್ಚುಮೆಚ್ಚಿನ ಪುತ್ರ
ದರಹಸಿತಾನಂದ ಭರಿತ ವೃತ್ತ ಸರಸ ಕವನಗಳ
ಸರಸ ಕವನಗಳ ಪದ್ಯ ಸುಳಾದಿಗಳ
ಸರಸು ಯಮಕ ಪ್ರಾಸ ಬಂಧುರ ಪದಗಳ
ತ್ವರಿತ ಉಗಾಭೋಗ ಕನ್ನಡ ಸಾಂಗತ್ಯ
ಹರಿ ಸತ್ಯದೇವರ ಚರಿತೆ ಕಥಾಮೃತ
ವಿರಚಿಸಿ ಸುಜನಕೆ ಹರುಷಗೈದು ಗುರುವರ ನಿಮ್ಮಯ ಉಪ
ಕಾರ ಸುಜನರು ಮರೆಯರು ಕರುಣಾರ್ಣವ
ಶಿರಿವರ ಅಭಿನವ ಪ್ರಾಣೇಶವಿಠಲರ
ಚರಣ ಸರಸಿಜಭೃಂಗ ದೀನ ದಯಾಪಾಂಗ ೩

ಅಟ್ಟತಾಳ

ಮೂಕ ಬಧಿರರಂತೆ ಲೋಕಕ್ಕೆ ತೋರುತ್ತ
ಶ್ರೀಕರ ರೂಪವ ಹೃದಯದಿ ನಿಲಿಸುತ
ಮಾಕಳತ್ರನ ನಾಮ ವದನದಿ ಪಾಡುತ್ತ
ಕೋಕನದಾಕ್ಷನ ನೈವೇದ್ಯ ಭುಜಿಸುತ
ಶ್ರೀಕರ ನಿರ್ಮಾಲ್ಯ ಶಿರದೊಳು ಧರಿಸುತ್ತ
ಶ್ರೀಕಥಾಸಾರವಗರೆವ ಜಗನ್ನಾಥ
ಆಕೆವಾಳರ ಹೆಗ್ಗದವೆ ಕಾಯುತ್ತಲಿಹ

ಲೋಕೇಶದಾಸನೆ ಕಪಿಕುಲ ತಿಲಕನೆ
ಮಾಕರ ಅಭಿನವ ಪ್ರಾಣೇಶವಿಠಲನ್ನ
ಏಕಾಂತದಲಿ ಭಜಿಪ ಭಾಗ್ಯ ಕೊಡು ಪ್ರಭುವೆ ೪

ಆದಿತಾಳ

ಶ್ರೀಶ ದಾಸವಾಙ್ಮಯ ಕುಸುಮಗಳನು
ದೇಶದಿ ಸುರಿಸುತ ಸೌರಭ ಬೀರುತ
ಅಸುಪತಿಯ ಸಿದ್ಧಾಂತ ಪಸರಿಸುತು
ಮೇಶ ಭಾಗವತ ಧರ್ಮವ ಹರಹುತ
ದೇಶದಲ್ಲಿ ಜನಜಾಗ್ರತೆಗೊಳಿಸಿದ
ದಾಸರೆ ಶ್ರೀ ಗುರು ಶಾಮಸುಂದರೆ
ಹೇಸಿ ವಿಷಮ ಜಲರಾಶಿಯೊಳಗೆ ಬಿದ್ದು
ಕ್ಲೇಶದಿ ಬಳಲುತ ತೊಳಲುತಲಿರುವೆನು
ದಾಸನ ಪಿಡಿ ಕರ ಉದ್ಧರಿಸುದು ಜೀಯ
ವಾಸುದೇವಭಿನವ ಪ್ರಾಣೇಶವಿಠಲನ
ದಾಸ್ಯಪಥ ತೋರದುಪಕಾರ ಮರೆಯೆನು ಜೀಯ ೫

ಜೊತೆ

ಮಾ ಮನೋಹರದಾಸ ಶಾಮಸುಂದರಧೀಶ
ರಾಮಾಭಿನವ ಪ್ರಾಣೇಶವಿಠಲದಾಸ ೬

ಗೋಪಾಲಾರ್ಯರ ಕೀರ್ತನೆಗಳು

(ಅ) ದೈವಸ್ತುತಿಗಳು

೧

(೧) ಶಾರದ ಸ್ತುತಿ

ಅಂಬಾ ಮೈದೋರು ಶಾರದಾಂಬಾ
ನಂಬಿದೆ ನಿನ್ನ ಅಂಬಾ ಮೈದೋರು ಶಾರದಾಂಬಾ ಪ

ತಾಯೆ ಕಮಲಾಸನಜಾಯೆ ನಮಿಸಿದೆ ನಿನ್ನ
ತಾಯೆ ಬಿಡದೆನ್ನನಸೂಯೆ ರಾಗಾದಿಗಳಿಂ
ನೋಯೆ ನೋಡದಿಹರೆ ಮಾಯೆ ಬೇಡಿದವರ
ವೀಯೆ ಪಾಪಕರ್ಮಗಳು ಬೇಯೆ ದಾರಿದ್ರವು
ಸೀಯೆ ಸರ್ವಲೋಕಪ್ರಿಯೆ ಕೃಪಾಲಯೆ ೧

ಮರತು ನಿನ್ನ ಧ್ಯಾನವ ಬೆರತು ಸತಿಸುತರೊಳು ಕ
ರ್ಮಕಾಮ್ಯವ ಮಾಡಿ ಮರೆತು ಪೋಗಿ ಸುಖವು
ನರತು ಮೈಯೆಲ್ಲ ಮೋಹತೊರದ ನೊಂದೆನಿದಕೆ
ಹೊರತು ನಾನಿನಿಸು ಪಾಪ ಬರತು ಪೋಗಲಿ
ದರಿತು ಭಕ್ತಿಯ ಭಕ್ತ ಸರಿತೂಕದವನೆ ನೀನು ೨

ಬಂದು ಚಿಕನಾಗಪುರದಿ ನಿಂದು ವರವೆಂಕಟಗಿರಿ
ಬಂಧು ವಾಸುದೇವಾರ್ಯನೆಂದು ಜನರ ದುರಿತ
ದಂದುಗವಳಿದು ಬಾರೆಂದು ಕರೆದು ಜ್ಞಾನ
ಸಿಂಧುವಿನೊಳು ಗೀತಾರ್ಥವಿದೊಂದು ನಿನಗೆ ಸಾ
ಕೆಂದು ಧನ್ಯತೆಯನು ಹೊಂದುಯೆನಿಸಲೆಂದೆಂದೂ ೩

೨

ಬದುಕಿದೆನು ಬದುಕಿದೆನು ಭವ ಎನಗೆ ಹರಿಯಿತು
ಸದಯ ಗೋಪಾಲಾರ್ಯನ ಪದ ಕರುಣವಾಯ್ತೆನಗೆ ಪ

ಮೊದಲು ಬಹು ಜನ್ಮಂಗಳಲ್ಲಿ ಮಾಡಿದ ಪುಣ್ಯ
ಒದಗಿತೀ ಸಮಯದಲಿ ಧನ್ಯನಾದೆ
ಸದಸದ್ವಿವೇಕ ಸಂಪತ್ತಿ ಮುಂತಾದ ಸ
ತ್ವದ ಸಾಧನಂಗಳೊದಗಿದವೀಗಲೆನಗೆ ೧

ದೇವ ಋಷಿ ಪಿತೃ ಋಣಂಗಳು ತಿದ್ದಿದವು ಶುದ್ಧ
ಭಾವನಾದೆನು ಕುಲ ಪವಿತ್ರವಾಯಿತೆನ್ನಾ
ಪಾವನತೆಯಾಗಿ ಜನನೀ ಜನಕರಿಗೆ ದೇವ
ದೇವ ಪದವಾಯಿತು ಕೃತಕತ್ಯ ನಾನಾದೆ ೨

ಸಕಲ ಸಂದೇಹಗಳಳಿದು ದೇಹಾತ್ಮ ಮತಿ
ವಿಕಲವಾದುದು ನಿತ್ಯ ತೃಪ್ತಿಯಾಯಿತು
ಪ್ರಕಟ ಗೋಪಾಲಾರ್ಯ ಪದವ ಸಾಕ್ಷಾತ್ಕರಿಸಿ
ಸುಕರ ಸತ್ಯಾನಂದ ರೂಪ ನಾನಾದೆ ೩

(ಆ) ಗುರುಸ್ತುತಿಗಳು

೩

ವೃತ್ತ॥ ಏಳಾ ಯತೀಂದ್ರ ಯೋಗಶಯನ ಸ್ಥಿತಿಯಿಂ ಭಜಕಾಳಿಯಮ್ಮಹಾ
ಶೀಲದಿ ಪಾಲಿಸಲ್ ಪರಿಕರಾರುಣ ತೋರಿದನಿಲ್ಲಿ ಚಿತ್ತದೊಳ್
ಮೇಳದಿ ಬೋಧ ಭಾನು ಬರುತೈದನೆ ನಾದ ವಿನೋದವೆಂಬ ಈ
ಕೋಳಿಯು ಕೂಗುತೈತವರನೀಕ್ಷಿಸೆ ಸತ್ಕರುಣಾ ಕಟಾಕ್ಷದಿಂ

ಏಳಯ್ಯ ಗುರುವರ್ಯ ಏಳಯ್ಯ ಗುರುವರ್ಯ
ಯತಿಜನಾಲಂಕಾರ ಪ

ಏಳು ಭಕ್ತಾಧಾರ ಯಮನಿಯಮ ಸಂಚಾರ
ಏಳು ವಿದ್ವದ್ವರ್ಯ ಪರಮಹಂಸಾಚಾರ್ಯ
ಏಳು ಗೋಪಾಲ ಯತಿವರ್ಯಾ ಸ್ವಾಮಿ ಅ.ಪ

ಆಧಾರ ಮಣಿಪೂರ ಹೃದಯ ಕಮಲಗಳಲ್ಲಿ
ನಾದ ಬಿಂದು ಕಲೆಗಳೆಂಬರುಣನುದಯಿಸಿದ
ಬೋಧೆಯೆಂಬರ್ಕನಾವಿರ್ಭವಿಸಿದನು ಸಹಸ್ರಾರ ಕಮಲದ ತುದಿಯಲಿ
ವೇದವೇದ್ಯಾನಂತಮಹಿಮ ಚಿನ್ಮಯರೂಪ
ನಾದಸೌಖ್ಯಾಕಾರ ಕಲಿ ಕಲ್ಮಷವಿದೂರ
ಆದಿಮಧ್ಯಾಂತರಹಿತಾನಂದ ನಿತ್ಯನಿಜಬೋಧ
ನೊಲಿದುಪ್ಪವಡಿಸಾ ಸ್ವಾಮೀ ೧

ನಿತ್ಯವೆ ನಿಮ್ಮ ಪದವೆಂದಜಾಂಡವನಿದನ
ನಿತ್ಯವೆಂದಖಿಳ ವಿಷಯಗಳಲಿ ವಿರತರಾಗಿ
ಅತ್ಯಂತ ಶಮ ದಮಾದಿಗಳೆಂಬ ಸಾಧನದಿ ಮುಕ್ತಿ ಸುಖವನು ಬಯಸುತಾ
ಪ್ರತ್ಯಕ್ಷರ ಬ್ರಹ್ಮೈಕ್ಯವರಿಯದೆ ವಿದುಗ
ಅತ್ಯಂತ ತ್ವರೆಯಿಂದ ನಿಮ್ಮ ಮುಖಕಮಲದಿಂ
ತತ್ವಮಸಿ ವಾಕ್ಯದರ್ಥವ ತಿಳಿಯಬೇಕೆಂದು ನೃತ್ಯವನು
ಮಾಡುತಿಹರೂ ಸ್ವಾಮಿ ೨

ದೇಹೇಂದ್ರಿಯಾಂತರಂಗವನೇತಿಗಳಿದು ಸಂ
ದೇಹದಲಿ ಕೂಟಸ್ಥ ನೀನೆಂಬುದರಿಯದೆ
ಮಹಾ ವಿಚಾರಿಸಿ ಭಕ್ತ ಸುಲಭನೆ ದಾಟಿಸೈ ಮೋಹಸಾಗರವನೆನುತಾ
ಪಾಹಿ ನೊಂದೆವು ಸಂಸ್ಕೃತಿಯ ಬಂಧದಲಿ ನಮ್ಮ
ಬೇಹುದೈಪಾಲಿಸಲು ಯೋಗನಿದ್ರೆಯ ಬಿಟ್ಟು
ಾಹರಿಸು ವೇದಾಂತಗೋಪ್ಯವನೆನುತ ನತಸಮೂಹ ಕಾದಿದೆ
ಕೃಪಾಳು ಸ್ವಾಮಿ ೩

ಕೇಳಿ ಭಕುತರ ದೈನ್ಯ ಸಲ್ಲಾಪಗಳನಿಂತು
ಲೀಲಾವತಾರ ಗುರುರಾಯನೊಲಿದೆದ್ದವರ
ಲಾಲಿಸುತ ಧನ್ಯರಾದಿರಿ ಸನ್ಮತಿಯೊಳಿಂತು ಮೇಳಾಪವಾಯಿತೆನುತಾ
ಬಾಲರಿರ ನಿಮ್ಮನಂತಃಕರಣದ ಧ್ಯಾನ
ಜಾಲಸುತ್ತಿರಲಾಗಿ ನಿಮ್ಮ ನಿಜವನು ಮರೆದು
ಕಾಲಕರ್ಮಾಧೀನವಾಗಿ ನೊಂದಿರಸತ್ಯವೀ ಲೋಕವೆಂದರಿಯದೆ
ಎನಲು ಗುರುವೇ ೪

ಜೀವೇಶ್ವರರ ವಾಚ್ಯ ಲಕ್ಷಾರ್ಥವನು ನಿಚ್ಚ
ಭಾವಿಸುತ ಬ್ರಹ್ಮ ಕೂಟಸ್ಥರೆಂದವರಿಗೆ ಸ್ವ
ಭಾವದಿಂ ಭೇದವಿಲ್ಲೌಪಾಧಿಕವಿದೆಂದು ಸಾವಧಾನದಲಿ ತಿಳಿದೂ
ನಾವೆ ಪರಿಪೂರ್ಣಾತ್ಮರೆಂದು ಬೋಧಾಮೃತವ
ಸೇವಿಸಿದಡನುದಿನಂ ಕೃತಕೃತ್ಯರಹಿರೆನಲ್
ದೇವ ಕೃತಕೃತ್ಯರಾದೆವು ನಮೋ ಎನುತ ಸ್ವಭಾವ
ಪದದಲಿನಿಂದರೂ ಸ್ವಾಮೀ ೫

೪

ಸುರತರು ರೂಪಗೆ ಸುರಭಿಯಂತಿರುವಗೆ
ಸಲ್ಲಲಿತ ಸರಸಾ ಮುನಿವಿನುತ
ಸಲ್ಲಲಿತ ಸರಸ ಗೋಪಾಲಾರ್ಯ ಪ

ಚಿಲ್ಲಕ್ಷಣಾತ್ಮಚರ್ಯಾ ಚಿತ್ರಮಹಿ
ಮೋಲ್ಲಾಸ ಯೋಗಿವರ್ಯಾ ಪಾಹಿಯತಿ
ವಲ್ಲಭಾನಂತ ಧೈರ್ಯಾ ಸ್ವಾಮಿ ಅ.ಪ

ಸಾರತರ ಸಾಧನಾ ಪೂರ ಸೌಖ್ಯ ವಿಹಾರ
ನೀರಜೋಪಮ ಪಾದ ನಿರ್ಜಿತಾಖಿಲವಾದ

ಚಾರು ನಿಜ ಸಲ್ಲಾಪ ವೇದ ಸನ್ನುತ ರೂಪ
ಕಾರಣಾನಂತ ಪುಣ್ಯಾ ಸತ್ವಥಾ
ಚಾರ ಸಜ್ಜನ ಶರಣ್ಯಾ ಕೀರ್ತಿವಿ
ಸ್ತಾರ ಶೋಭಿತವರೇಣ್ಯಾ ನನ್ಯಾ ೧

ಸಂತತಾನಂದ ಘನ ಸಮಸ್ತನಿದಾನ
ಚಿಂತಿತಾರ್ಥದ ಶೀಲ ಚಿತ್ತಶುದ್ಧಿಯ ಲೀಲ
ಶಾಂತ ಸದ್ಗುಣ ಭೂಪ ಸುಲಲಿತಾಮೃತ ಭಾಷ
ಕಂತುಮದ ಪರಿಹಾರಕಾ ಆದಿಮ
ಧ್ವಾಂತ ರಹಿತಾಕಾರಕಾ ಆಶ್ರಿತ
ಸ್ವಾಂತ ಸಂಸ್ಕೃತಿ ತಾರಕಾಲೋಕಾ ೨

ತಾಪಸ ಜನೋತ್ತುಂಗ ತಾರತಮ್ಯ ವಿಭಂಗ
ತಾಪತ್ರಯಾಳಿ ಹರ ದಳಿತ ಲಿಂಗ ಶರೀರ
ಸ್ವಾಪಾದಿ ಕುಲದೂರಸ್ವಾಶ್ರಿತ ಜನೋದ್ಧಾರ
ಧೀಪದಸ್ಫುರಣ ದೀಪ ಗೋಪಾಲ
ತಾಪ ಸಮುದಯವಿಲಾಪ ದೇಶಿಕ ಪ
ರೋಪಕೃತಿ ಕೃತ್ವತಾಪಾಲೇಪ ೩

(ಇ) ಆತ್ಮನಿವೇದನಾ ಸ್ತುತಿಗಳು

೫

ಮತಿಯ ಪಾಲಿಸು ಸ್ವಾಮಿ ನತಜನ ಪ್ರೇಮಿ
ಸತತ ಗೋಪಾಲಾರ್ಯ ಸನ್ನುತ ಚರ್ಯ ಪ

ಕೃತಕವಾಗಿಹ ಕರ್ಮಗತಿಯ ಕಡೆಗೊತ್ತಿ
ಹಿತರಿಲ್ಲದಿಹ ಭೋಗ ತತಿಯಕಳೆದೆತ್ತಿ

ಸತಿಸುತರ್ಗತಿಯೆಂಬ ಮತವ ನೆಗ್ಗೊತ್ತಿ
ಪ್ರತಿಯಿಲ್ಲದಿಹ ಪಾದ ಭಕುತಿಯ ಬಿತ್ತಿ ೧

ದೇಹವೆ ನಾನೆಂಬ ದೈನ್ಯವ ಬಿಡಿಸಿ
ಸಾಹಸದಲಿ ಸಕಲ ಸಾಧನವ ತೊಡಿಸಿ
ಮೋಹ ಮತ್ಸರವೆಂಬ ಮೋಸವ ಕೆಡಿಸಿ
ಸೋಹಮೆಂಬರಿವಿನಲ್ಲಿ ಸೊಗಸಾಗಿ ನಡೆಸಿ ೨

ಕಾಲಕರ್ಮಂಗಳ ಮೂಲವ ಕಿತ್ತು ಗೋ
ಪಾಲಾರ್ಯ ನಿಜಸುಖ ಶೀಲವನಿತ್ತು
ಮೇಲಾದ ಮುಕುತಿಯ ಕೀಲಕಳೆದೆತ್ತು
ಶ್ರೀಲಕ್ಷ್ಮಿಯರಸನೆ ಚಿತ್ತವನಿತ್ತು ೩

೬

ಸೇರಿದೆ ನಾ ನಿಮ್ಮ ಪಾದ ಪದ್ಮಂಗಳ
ಧೀರ ಗೋಪಾಲಾರ್ಯ ದಿವ್ಯ ಚಾತುರ್ಯಾ ಪ

ಸಾರವಿಲ್ಲದ ಸಂಸಾರದೊಳಗೆ ನೊಂದು
ಘೋರ ಕಾಮಾನಲನಿಂದಲಿ ಬೆಂದು
ನೀರಸವಾದ ವಿಷಯಗಳ ಬಳಿಸಂದು
ಚಾರು ವಿವೇಕವೆನಗೆ ಬೇಕೆಂದು ೧

ಚಿಂತೆಗಳಿಂದ ಬಳಲಿ ಕಷ್ಟಬಟ್ಟೊ
ಸಂತತ ಪರಸೇವೆಯಲಿ ಕಂಗೆಟ್ಟೊ
ಅಂತವಿಲ್ಲದ ಮೋಹದೊಳಳವಟ್ಟೊ
ಭ್ರಾಂತಿಯಳಿಯಬೇಕೆಂದು ಮನದಲಿಟ್ಟು ೨

ತಾಪತ್ರಯಂಗಳ ತರಿದು ನೀವಿಂದು

ಪಾಪರಾಶಿಗಳೆಂಬ ಪಗೆಗಳ ಕೊಂದು
ಈ ಪರಿ ಜ್ಞಾನವನಿತ್ತು ರಕ್ಷಿಪರೆಂದು
ಗೋಪಾಲಾರ್ಯ ನೀನೇ ಗತಿಯೆಂದು ೩

೭

ಸೇರಿದೆನು ಸೇರಿದೆನು ಗುರುವರನ ಪದವಾ
ಮೀರಿದೆನು ಘೋರತರ ನರಕದತಿಭಯವಾ ಪ

ದೂರ್ವೆ ಮೊದಲಾದ ತೃಣಧಾನ್ಯ ಗರ್ಭವ ಮೆಟ್ಟಿ
ಸರ್ವ ಸ್ಥಾವರ ಜಾತಿಗಳಲಿ ಪುಟ್ಟಿ
ಪಾರ್ವಪಕ್ಷಿಗಳ ಬಸುರೊಳು ಪುಟ್ಟಿ ಬಹಳ ಪಶೂ
ದರ್ವೀಕರಂಗಳಲಿ ಪುಟ್ಟಿ ಕಂಗೆಟ್ಟೂ ೧

ಮನುಜರೊಳು ಪದಿನೆಂಟು ಜಾತಿಗಳೊಳಗೆ ಬಂದು
ಬಿನುಗುತನದಿಂದಖಿಳ ವಿಷಯಗಳ ತಿಂದೂ
ಅನುವರಿಯದಜ್ಞಾನದೊಳಗೆ ಬಳಿಸಂದು ಪಾ
ರ್ವನ ಜನ್ಮದಲಿ ವಿಹಿತಕರ್ಮದಲಿ ಮನನಿಂದು ೨

ಮೆಲ್ಲ ಮೆಲ್ಲನೆ ಕಾಮ್ಯ ನಿಷ್ಕಾಮ ಕರ್ಮಗಳ
ಬಲ್ಲ ಬಲ್ಲಂತೆ ಮಾಡುತ ಪೂರ್ವದಾ
ಸಲ್ಲಲಿತ ಪುಣ್ಯದೊಳು ಭಕ್ತಿಯೊಳ್ಮನ ಮುಟ್ಟಿ
ಅಲ್ಲಲ್ಲಿ ಹರಿನಾಮ ಕಥೆಯೊಳಳವಟ್ಟೂ ೩

ಭಾಗವತ ಜನ ಸಂಗದಿಂದ ಹರಿಕಥೆಗಳನು
ರಾಗದಿಂ ಕೇಳಿ ಗುರುವಿನ ಮಹಿಮೆಯಾ
ಶ್ರೀಗುರುಗಳಿಂದಲೆ ಧನ್ಯತ್ವವಹುದೆಂದು
ಯೋಗ ಸಂಪದವೆ ತನಗಾಗಬೇಕೆಂದೂ ೪

ಸದಸದ್ವಿವೇಕ ಶಮೆ ದಮೆ ತಿತಿಕ್ಷೆಗಳಿಂದ
ಲಧಿಕ ಮೋಕ್ಷೇಚ್ಛೆ ಮುಂತಾದ ಸಾಧನವೂ
ಒದವಿರಲು ಬೇಕು ಗೋಪಾಲಾರ್ಯ ಗುರುವರನ
ಪದವೆ ಸತ್ಯಾನಂದ ರೂಪವೆಂತೆಂದೂ ೫

(ಈ) ಸಾಮಾಜಿಕ ಕೃತಿಗಳು

೮

ನಗಬಹುದು ನೀ ಮುಗುಳು ನಗೆಯಾ ಗುರುರಾಯ
ಮಿಗೆ ಕಂಡು ದೇಹಾಭಿಮಾನಿಗಳ ಬಗೆಯಾ ಪ

ತನ್ನ ತಾನರಿಯಲೀಸದ ಮಾಯೆಗೊಳಗಾಗಿ
ಅನ್ಯರೇತೋಜಾತಮಾದ ದೇಹವ ನೋಡಿ
ತನ್ನಿಂದ ತಾ ಕಾಣಪಡುತಿಹುದಿದಲ್ಲವೆಂ
ದೆನ್ನಲಾರದೆ ದೋಷದಿಂದಾ
ಉನ್ನತದ ಮಾಂಸ ರಕ್ತಾಸ್ತಿಮಲ ಮೂತ್ರಂಗ
ಳಿನ್ನೆದುನಾರುವ ನವದ್ವಾರ ಮಾರ್ಗದಿಂ
ತನ್ನ ಮರಸುವದೇಹವೆ
ತನ್ನದೆಂದು ಮರೆದುಣ್ಣುರಿವಾತಗಳ ಕಂಡೂ ಮಾಯೆ ಭಾ
ಪೆನ್ನುತ್ತ ಬೆರಳೊಲದು ಕೊಂಡು ಬಗೆಗಂಡೂ ೧

ಬಿಟ್ಟ ಮನೆ ಜನ ಧನಂಗಳಲಿ ಮತ್ತೂ ಮನವ
ನಿಟ್ಟು ವಾಂತ್ಯಾಶನವನುಂಬ ನಾಯಂದದಲಿ
ಪಟ್ಟಣಂಗಳಲಿ ತಿರುಗುತ ಪರರ ಬಾಧಿಸುತ
ಕೆಟ್ಟ ಬುದ್ಧಿಯಿಂದ ಧೃತಿಗುಂದಿ
ಕೊಟ್ಟಪುದು ಕರ್ಮವೆಂಬುದ ಮರೆತು ಗೇಣುದ್ದ
ಹೊಟ್ಟೆ ಬಟ್ಟೆಗೆ ದೈನ್ಯ ಬಟ್ಟು ಮೂಢತೆಯಿಂದ
ಕೆಟ್ಟೆನಿನ್ನಾರು ರಕ್ಷಿಪರೆಂದು ಚಿಂತಿಸುವ

ಹೊಟ್ಟೆಹೊರಕರನು ನೋಡುತ್ತಾ ಕಟಕಟಾ
ಕೆಟ್ಟರಿವರೆಂದು ಹಾಸ್ಯವನು ಮಾಡುತ್ತಾ ೨

ತಾನಾತ್ಮನೆಂಬುದನು ಕೇಳಿದ್ದುದೃಷ್ಟಾನು
ಮಾನಂಗಳಿಂ ನಂಬಿಗೆಯೆಯಿಲ್ಲದದರಲ್ಲಿ
ಮಾನಾವಮಾನಂಗಳಿಂ ಹರುಷ ಶೋಕಾದಿ
ಹೀನಬುದ್ಧಿಗಳ ಮಾಡುತ್ತಾ
ಜ್ಞಾನಮಾರ್ಗದಲಿ ವಿಶ್ವಾಸವಿಲ್ಲದೆ ತನ್ನ
ಕಾಣಲಾರದೆ ಭೇದ ಬುದ್ಧಿಯಿಂ ವ್ರತತೀರ್ಥ
ಸ್ನಾನಾದಿಯಿಂದ ಮುಕುತಿಯ ಪಡೆಯಬೇಕೆಂಬ
ಮಾನವರ ಭ್ರಾಂತಿಯನು ತಿಳಿದೂ ಇವರ್ಗಳಿಗೆ
ಸ್ವಾನುಭವವಿಲ್ಲೆಂದು ಸಮತೆಯಲಿ ನಿಂದೂ ೩

ರಾಗವನು ಬಿಡಲಾರದಾಶಾಪಿಶಾಚಕೊಳ
ಗಾಗಿ ಸತ್ಸಂಗ ಸತ್ಕಥೆಯ ಕೇಳಿಕೆಗಳನು
ನೀಗಿ ಧನಿಕರೊಳಿಚ್ಚಿತವನಾಡಿ ಸದ್ಧರ್ಮ
ತ್ಯಾಗಿಯಾಗ್ಯನೃತಕ್ಕೆ ಪೊಕ್ಕೂ
ಹೀಗೆ ತಿರುಗುತ ಪರಾನ್ನಾದಿ ಭೋಗಕ್ಕಾಗಿ
ಕಾಗೆಯಂದದಲಲ್ಲಿಗಲ್ಲಿಗೆ ಸದ್ಗತಿಯೀವ
ಯೋಗ ಮಾರ್ಗವ ಬಿಟ್ಟುಭ್ರಾಂತರಾದಿರಿ ಮಹ
ದ್ರೋಗಿಗಳ ಕಂಡು ಬೆಸಗೊಂಡು ಇವರ್ಗೆ ಭವ
ರೋಗ ಬಿಡದೆಂದು ನಿಜಪದದಲ್ಲಿ ನಿಂದೂ ೪

ಇಂತರಿವ ಜನರಲ್ಲಿ ನಿಂತು ಸನ್ಮತಿಯಿತ್ತು
ಚಿಂತೆಗಳ ಬಿಡಿಸುತ್ತಲಂತರಾತ್ಮಕನಾಗಿ
ಸಂತಗೋಪಾಲಾರ್ಯ ಗುರುವರ್ಯನಾಗಿ ವೇ
ದಾಂತದರ್ಥವನು ಬೋಧಿಸುತಾ
ಅಂತವಿಲ್ಲದ ನಿಜವ ತೋರಿ ಪಾಲಿಸಿ ಮುದ

ವಂತಾಳ್ದು ಸಕಲ ಸಂಶಯಗಳನು ಪರಿಹರಿಸಿ
ಶಾಂತರಾದಿರಿ ಮೋಹಹೋಯಿತ್ತು ನಿತ್ಯ ಸ್ವಾ
ತಂತ್ರವಾಯಿತು ಗೆದ್ದಿರೆನುತಾ
ಸಂತತಾನಂದಕನುಗ್ಗೈದು ಕೈ ಹೊಯಿದೂ ೫

೬

ಶ್ಲೋ॥ ಮಣಿ ಮಂತ್ರೌಷಧವೆಂಬ ಭ್ರಾಂತಿಯಲಿ ಮಾಯಾ
ಮೋಹದೊಳ್ ಸಿಕ್ಕಿ ತಾ
ಮಣಿಮಾದ್ಯಷ್ಟ ವಿಭೂತಿಯೆಂಬಯ ಸುಜ್ಞಾನಾಂಧರಾಗೆಲ್ಲಿಯುಂ
ಎಣೆಯಾರಿಲ್ಲೆಮಗೆಂದು ಮೋಹಿಸುವ ಈ ಮೂಢಾತ್ಮರಂ ಬೇಗದಿಂ
ಗುಣಮೂರೊಂದಕೊಯಿದು ಪಾಲಿಸುಗೆ ಗೋಪಾಲ ಸಚ್ಚಿದಾನಂದಮಂ

ಮತಿಹೀನನಾಗದಿರೊ ಓ ಜೀವಾ
ಮತಿಹೀನನಾಗದಿರೊ ಪ

ಸುತರ ತನುಧನಗಳ ಹಿತವೆಂದು ನಂಬಿ ನೀ ಅ.ಪ

ಶ್ರುತಿ ಮತಗಳ ಬಿಟ್ಟು ಪ್ರತಿದಿನ ವಿಷಯವೆ
ಗತಿಯೆಂದು ನೆಚ್ಚದಿರೊ ರಾಗದ್ವೇಷ
ಯುತರ ನೀ ಮೆಚ್ಚದಿರೊ ನಿನ್ನ ತೋರದ
ವ್ರತದಿಂದ ಹೆಚ್ಚದಿರೊ ಓ ಜೀವಾ ೧

ಪರಿಭವವ ಮಾಡುವ ಪರಸೇವೆಗೆಳಸುವ
ಸಿರಿಯ ನೀ ಬೇಡದಿರೊ ಕಾಮುಕನಾಗಿ
ಪರಸತಿಯ ನೋಡದಿರೊ ಮುಂದುಗೆಡಿಪ
ಪರಧರ್ಮವ ಕೂಡದಿರೊ ಓ ಜೀವಾ ೨

ಧೈರ್ಯವಿಲ್ಲದೆ ನಿನ್ನೊಳಾರ್ಯ ಸಂಗವ ಬಿಟ್ಟು
ಕಾರ್ಯದೊಳ್ಬೆರೆಯದಿರೊ ಮನದಿ ಮಾ
ತ್ಸರ್ಯದೊಳ್ ಕೊರೆಯದಿರೊ ಶ್ರೀ ಗೋಪಾ
ಲಾರ್ಯನ ಮರೆಯದಿರೊ ಓ ಜೀವಾ ೩

೧೦

ಸತ್ತವರಿಗೆ ನೀನಳುತಲಿರುವೆಯಿನ್ನೂ
ಮತ್ತನಾಗಿ ಮಂದಜೀವಾ ಪ

ಮೃತ್ಯುವೆಂಬರಿಪು ಕುತ್ತಿಕೆಡಹಿದಾಗ
ಮತ್ತಾರಿಗಳುವೆಯೊ ಜೀವಾ ಅ.ಪ

ನೆತ್ತಿಯ ಬಡುಕೊಂಬೆ ಜೀವಾ
ಕತ್ತೆಯಂತೊದರದೆ ಬಿಡದೆ ಕಾಂತೆಯ ಬೆನ್ನ
ಹತ್ತಿ ಹೋಗುತ್ತಿಹೆ ಜೀವಾ ೧

ಕತ್ತಲೆಯಂತಿಹ ನಿನ್ನ ವಿದ್ಯೆಯನು
ತೊತ್ತಳದುಳಿವರೆ ಜೀವಾ
ಉತ್ತಮ ಜನ ಸಂಗವ ಮಾಡು ನಿನ್ನನೀ
ನೆತ್ತಿಕೊ ಭವಕೂಪದಿಂದಾ ೨

ಏಳು ಶ್ರವಣ ಮನನವ ಮಾಡು ನೀನಿಂತು
ಘೋಳಿಟ್ಟರೆ ಫಲವೇನೂ
ಬೀಳು ಗುರುವಿನ ಚರಣ ಕಮಲಗಳಲ್ಲಿ
ನಾಳೆ ಮುಕ್ತಿ ಸುಖವುಂಟೂ ೩

ತಾಳು ಶೀತೋಷ್ಣಾದಿ ದೇಹಧರ್ಮಗಳನು
ಮೂಳ ಸುಮ್ಮನೆ ಕೆಡಬೇಡಾ
ನಾಳೆ ನಾಡಿದ್ದು ಸಾಧಿಸುವೆನೆಂದೆನುತಲೆ
ಹಾಳಾಗಬೇಡೆಲೊ ಜೀವಾ ೪

ಇತ್ತಲತ್ತ ಹಿಂದೆಮುಂದೆ ಕೆಳಗೆ ಮೇಲೆ
ಉತ್ತಮ ಬೊಮ್ಮವೆಂದೆನುತಾ

ಸತ್ಯವೆಂದು ಶೃತಿಬ್ರಹ್ಮಪುರಸ್ಸಾದೆ
ನುತ್ತ ಸಾರುತ್ತಿದೆ ಜೀವಾ ೫

ಮನೆಮಾರು ಧನ ನಿನ್ನತನು ಮೊದಲಾದವು
ಇನಿತು ನಿತ್ಯವಲ್ಲ ಜೀವಾ
ಘನ ವಿರತಿಯ ಮಾಡು ಮನದಲ್ಲಿ ಧ್ಯಾನಿಸು
ವಿನುತ ಚೈತನ್ಯವ ಜೀವಾ ೬

ಅನುದಿನ ನಿನ್ನ ನಿಜವ ನೀತಿಳಿದರೆಳ್ಳನಿತು
ಶೋಕಮೋಹವಿಲ್ಲ ಜೀವಾ
ಸನುಮತಿಯಿಂದ ಗೋಪಾಲಾರ್ಯನ ಸೇರಿ
ಚಿನುಮಯನಾಗೆಲೊ ಜೀವಾ ೭

೧೧

ಸಾರವೇನೊ ಸಂಸಾರದೊಳೂ
ಬಾರಿಗು ಬಾರಿಗು ವಿಚಾರಿಸಿ ನೋಡಿದಡತಿ
ಘೋರ ದುಃಖದಾಗರ ನಿಸ್ಸಾರವಲ್ಲದಿದರೊಳೂ ಪ

ಜನನಿಯ ಉದರದಲಿ ಕಿಸುಕುಳದ
ಕುಣಿತೆಯಂದದಲಿ ನವೆದಲ್ಲಿಂದ
ಜನಿಸಿಯಾಯಾಸದಲಿ ಪೇಳಲು ಕೂಡ
ಲನಿತುಬ್ಬಸ ಬಾಲ್ಯದಲಿ ಕೌಮಾರ ಯೌ
ವನದಿ ಗೃಹಕ್ಷೇತ್ರ ವಿತ್ತ ವನಿತಾದಿ ವಿಷಯವೆಂಬ
ಕನಸಿನ ಸಿರಿಯ ನೆಚ್ಚಿ ತೊನೆದುಕೊಂಬರಲ್ಲದೆ ೧

ಪೊಲೆಯ ಬೊಂಬೆಯೊಳು ತುಂಬಿದ ಕೀವು
ಮಲಮೂತ್ರಸಂದೋಹ ತೊಗಲು ರೋಮ
ಎಲು ಮಜ್ಜೆ ಮಾಂಸದವ್ಯೂಹ ಎಷ್ಟು ತೊಳೆದರೂ

ಹೊಲಸು ನಾರುವ ಜೋಹ ಮತ್ತಿದಕೊಂದು
ಕುಲಗೋತ್ರ ನಾಮರೂಪು ಚಲುವ ಚೆನ್ನಿಗನಿವ
ಸಲೆ ಜಾಣನೆಂದು ಮೂಢರುಗಳಹಿಕೊಂಬರಲ್ಲದೆ ೨

ಮಡದಿಯಾದರಿಲ್ಲ ಮಕ್ಕಳು ಮಕ್ಕಳಾದರೆ
ಒಡವೆಯಿಲ್ಲವದು ಬರಲು ಸತಿಸುತರು
ಮಡಿದು ಹೋಗುವ ದುಃಖಂಗಳು ಗಳಿಸಿದರ್ಥ
ಕೆಡುವಾ ಸಂಕ್ಲೇಶಂಗಳು ತನಗೆ ಮುಂಚಿ
ಅಡಸಿ ಬರುವದೊ ಮೃತಿ ಜಡರು ಈ ಬದುಕನೆಚ್ಚಿ
ಸಡಗರ ಬಡುತ ಹಿಗ್ಗಿ ಕೊಡಹಿಕೊಂಬರಲ್ಲದೆ ೩

ಬಾಲಕನಾಗ್ಯೊಂದು ಕ್ಷಣವು ಪ್ರಾಯದಿ ಕಾಮ
ಲೋಲುಪನಾಗ್ಯೊಂದು ಕ್ಷಣವು ಧನಾಢ್ಯನೆಂಬ
ಮೂಳ ಹೆಮ್ಮೆ ಒಂದು ಕ್ಷಣವು ದಾರಿದ್ರ್ಯ ಮುಪ್ಪು
ಜೋಲುವ ತನುವೊಂದು ಕ್ಷಣವು ನಾನಾವೇಷ
ದಾಳಿದ ನಟನಂತಾಡಿ ಕಾಲನ ಬಾಯಿಗೈದುವ
ಬಾಳುವೆಗೆ ಖೂಳಜನರು ವೋಲಾಡಿಕೊಂಬರಲ್ಲದೆ ೪

ನೆರೆ ಭೋಗಕೆ ರೋಗಭಯ ಸುತ ಸಂಬಂಧಿ
ನೆರವಿಗೆ ವಿಯೋಗ ಭಯ ದ್ರವ್ಯಕ್ಕೆ ಭೂ
ಪರ ಭಯವು ಚೋರ ಭಯ ಕಾಯಕೆ ಭಯಂ
ಕರನಾದ ಕೃತಾಂತ ಭಯ ತಾಪತ್ರಯವೀ
ಪರಿಯನೇಕ ಚಿಂತೆಯಲ್ಲಿ ಕೊರಗುತುರಿವ ಮನೆಯೊಳ
ಗಿರುವೆ ಸುಖದಲೆಂಬರು ಮೂಕೊರೆಯಮೊಂಡರಲ್ಲದೆ * ೫

* 'ಹುಟ್ಟಿ ಸಾವವರ ಕಾಣುತಾ ತನಗು ಯೀ
ಬಟ್ಟೆಯೆಂಬರಿವ ಮಾಣುತಾ ಜಿ ...' ಎಂಬ ಸಾಲುಗಳು ಮಾತ್ರ ೬ನೇ ನುಡಿಯಲ್ಲಿದ್ದು ಅಸಮಗ್ರವಾಗಿದೆ.

೧೨

ಸಾವಧಾನೊ ಜೀವ ಭವಸಂತತಂ
ಜೀವನ್ಮುಕ್ತಿ ಸಾಧನ ಸಂತತೋದ್ಧರಂ ಪ

ಆಶಾ ಪಿಶಾಚಿ ಕಾಮ ವಧೂಯ ಕಷ್ಟತರ
ಪಾಶಾಷ್ಟಿಕಾವೃತಿಂ ಪರಿಭೂಯಚ
ಈಶಣತ್ರಯ ಮೂಲ ಮುತ್ಪಾಟ್ಯಚೌಥನಿಷ್ಕೋ
ಶಾಸಿವಜ್ವಲಣ ಸರ್ವ ವಿಷಯೋಝ್ಝಿತಃ ೧

ಏಕಾಗ್ರತಾಮಾಕಲಯ್ಯ ಕೂಟಸ್ಥಾತ್ಮ
ನಾಕಲಿತ ಚಿಂತಯಾನ್ಯದ್ವಿಲಾಪ್ಯ
ಶೋಕ ಮೋಹಾದಿ ಪರಿಹೃತ್ಯಸುಪ ಬ್ರ
ಹ್ಮಾಕಾರ ತಾಮನುಭವನ್ನಿತ್ಯ ಮುಕ್ತಯೋ ೨

ತಾಪತ್ರಯಂತ್ಯಜನ್ ತದಹಮಿತ್ಯಾನಂದ
ರೂಪಿಣ ನಿತ್ಯತೃಪ್ತಿಂ ಪ್ರಪದ್ಯೆ
ವ್ಯಾಪಕಾತ್ಮ ಭವ ನಿಜಾದ್ವೈತ ಬೋಧತೋ
ಗೋಪಾಲಾರ್ಯ ದಯಯಾತೀವ ಧನ್ಯಃ ೩

೧೩

ಆರು ಕೊಟ್ಟರು ಕೊಟ್ಟರಾರುಂಡರಾರಿಲ್ಲಿ
ಬೇರೆ ನಾ ನೀ ನಾನೆಂದು ಕೆಡುವುದೀ ಲೋಕ ಪ

ಕಾಲ ಚೇಷ್ಟಿಸಿತು ಕರ್ಮವು ಕೊಟ್ಟಿತೀ ಕಿವಿಗ
ಳಾಲಿಸಿತು ಕಂಡಿತಕ್ಷಿಗಳೆಂದಿತಂಘ್ರಿ
ಲೀಲೆಯಲಿ ಕೈಪಿಡಿಯುತಾ ಘ್ರಾಣಿ ಘ್ರಾಣ
ವೀ ಲೋಲ ಚಿತ್ತವನುಸಂಧಾನಗೆಯ್ತು ೧

ಪ್ರಾಣ ಒಳಕೊಂಡಿತನ್ನವನು ಸಂಕಲ್ಪಿಸಿತು
ದೀನ ಮನಮತಿಗೆ ನಿಶ್ಚಯವಾಯಿತೂ
ತಾನಿದರೊಳಾರು ಕೊಂಬವನೊ ಕೊಡುವನೊ ದುರಭಿ
ಮಾನದಿಂ ಕೆಡುತಿಹರು ನೀನು ನಾನೆಂದು ೨

ಭಾನು ಜಲದಲಿ ಪೊಳೆಯಲದರ ಕಂಪಾದಿಗಳು
ಭಾನುವಿನದೆಂದು ಭ್ರಮಿತರು ಬಗೆವ ತೆರದಿ
ಜ್ಞಾನಮಯ ನಾದಾತ್ಮ ಹಮ್ಮಿನೊಳ್ಪೊಳೆಯಲ
ಜ್ಞಾನದಿಂದೀ ರಾಸಿ ನಾನೆನ್ನುತಿಹರೊ ೩

ಈಯನಿರ್ವಚನೀಯ ಜೀವತ್ವವೆಂದರಿದು
ಕಾಯದಲಿ ಕೂಟಸ್ಥ ಸತ್ಯವೆಂದೂ
ಮಾಯದಿಂದ ತೋರಿ ತಾನೀ ವಿಶ್ವಮಸಿ ಎಂದು
ಹೇಯ ಭೋಗದಲನಾಸಕ್ತನಾಗಿರದೆ ೪

ತಾನು ನಿರ್ಲೇಪನೆಂದರಿಯದೆ ಶರೀರಾಭಿ
ಮಾನದಿಂ ಗೋಪಾಲ ಯತಿಯ ಚರಣವನೂ
ಸಾನುರಾಗದಲಿ ಸೇವಿಸದೆ ಮಿಥ್ಯಾವಿಷಯ
ದೀನತೆಯನ್ನೈದಿ ರಾಗಾದಿಗಳ ಬಿಡದೆ ೫

೧೪

ಇಕೋ ದೇವನೆಂದಾಗಮಗಳು ಪೇಳೆ
ನೀ ಕೋಟಿದೇವರನೇಕೆ ಭಜಿಸುವೆ ಪ

ಸಾಕೊ ಸಂಸ್ಕೃತಿಯಾಟವಿಷ್ಟರ ಮೇಲೆ
ನೂಕೊ ರಾಗ ದ್ವೇಷಗಳ ಚನ್ನಾಗಿ
ಕಾಕೋದರನಂತೆ ಕಾಡದೆ ಜನರನು
ಬೇಕೋ ಸಾಧನಗಳ ನೀ ಸಾಧಿಸಲು ೧

ಏಕೋ ಮೂಢನಂದದಿ ಸುಮ್ಮನಿರುವೆ ವಿ
ವೇಕೋಪಚಯವ ಮಾಡು ಮನದಲಿ
ಲೋಕೋಪಕಾರವ ನಡಸು ನಿಷ್ಕಪಟದಿ
ಈ ಕೋಪವ ಬಿಟ್ಟರಿದಿರಾರು ನಿನಗೆ ೨

ಫಣಿ ಕೋಪಮನನಾಗಿ ಪಗಲ ಕಾಣದೆ ನಿನ್ನ
ನಾ ಕೋಪಮೆಗೆ ಪೆಚ್ಚಿದ ನಿಜ ಸುಖವಾ
ತಾಕೋ ಶ್ರೀ ಪಾದವನು ಗೋಪಾಲಾರ್ಯನ
ಕೋ ಕೋ ಎಂದು ಕೊಡುವನು ಮುಕುತಿಯನು ೩

೧೫

ಎಲ್ಲಿ ನಿತ್ಯಾನಂದವೆಲ್ಲಿದುದಜ್ಞಾನ
ವೆಲ್ಲಿ ಬಂತೀ ಕಾಮವು ಗುರುವೆ
ಎಲ್ಲಿದ್ದುದೀ ಕರ್ಮವೀಗ ನಮಗೀ ಮಾಯೆ
ಯಾವ ಜನ್ಮದ ವೈರಿಯೊ ಸ್ವಾಮಿ ಪ

ಯಾಕೆ ಮಾಡಿದೆಯೊ ಪುಣ್ಯಾಪುಣ್ಯ ಮಿಶ್ರಗಳ
ಯಾಕೆ ಬಂತೀ ದೇಹವು ತಂದೆ
ಯಾಕೆ ವರ್ಣಾಶ್ರಮಂಗಳನೈದಿದೆವು ನಾವಿದಕೆ ಸುಖ ದುಃಖಂಗಳೂ ಸ್ವಾಮಿ
ಯಾಕೆ ಬಂದರು ನಮಗೆ ಸತಿ ಸುತರು ನಾವಿವರೊ
ಳೇಕೆ ಮರುಳಾದೆವಿಂತು ಗುರುವೆ
ಪ್ರಾಕು ಜನ್ಮದ ವಾಸನೆಗಳೆಂಬ ಪಗೆಗಳಿಲ್ಯಾಕೆ
ನೂಕಿದರೆಮ್ಮನೂ ಸ್ವಾಮಿ ೧

ಎಂತು ಬಂತೀ ರಕ್ತ ಮಾಂಸಾಸ್ಥಿ ಚರ್ಮಗಳಿ
ವೆಂತು ವಿಣ್ಮೂತ್ರಂಗಳೂ ದೇವಾ
ಎಂತು ರಾಗದ್ವೇಷ ಮದಮತ್ಸರಂಗಳಲ್ಲೆಂತು ನರಕ ಸ್ವರ್ಗವೂ ಪರಮಾ

ಎಂತು ಬಂತೀ ಭೋಗ ರೋಗ ವಾಸನೆಗಳಿ
ಲ್ಲೆಂತು ವ್ಯಾಮೋಹಂಗಳು ಗುರುವೆ
ಎಂತು ಚಿಂತೆಗಳದರೊಳಭಿಮಾನ ಕಷ್ಟಂಗಳೆಂತೆಂದು
ನಾವರಿಯೆವೂ ಸ್ವಾಮಿ ೨

ಎಂತು ರಾಗ ದ್ವೇಷ ಪೋಗಿ ಸಾಧನೆಗಳೆಮ
ಗೆಂತಹುದು ಚಿತ್ತ ಶುದ್ಧಿ ಪರಮಾ
ಎಂತು ವೇದಾಂತ ತಿಳವದು ಬೊಮ್ಮ ಸುಜ್ಞಾನವೆಂತಹುದು ಸತ್ರಬುದ್ಧಿ ಸ್ವಾಮಿ
ಎಂತು ನಾವಾತ್ಮರಾಗುವೆವು ನಿತ್ಯಾನಂದ
ವೆಂತಹುದು ನಿತ್ಯ ತೃಪ್ತೀ ಗುರುವೆ
ಅಂತು ಕರುಣಿಸಿ ಸಕಲಚಿಂತೆಗಳ ಪರಿಹರಿಸನಂತ
ಗೋಪಾಲಾರ್ಯನೆ ಸ್ವಾಮಿ ೩

೧೬

ಏಕೆ ಮರೆದಿದ್ದೆನಯ್ಯಾ ಎನ್ನೊಳು ನಾ ಗೋಪಾಲ
ಶ್ರೀಕಾಂತ ನಿನ್ನ ಪಾದದ ಚಿಂತೆಯ ಬಿಟ್ಟಜ್ಞನಾಗಿ ಪ

ಕಾಯವೆ ಸತ್ಯವಿದೆಂದು ಕಾಣದೆ ನಾನಿಲ್ಲಿ ಬಂದು
ಮಾಯೆಗೊಳಗಾಗಿ ನಿಂದು ಮತ್ತರ ಸಂಗದಿನೊಂದು
ಜಾಯೆ ಸುತರ್ಗತಿಯೆಂದು ಧ್ಯಾನಿಸಿ ದುಃಖದಿನೊಂದು
ಬಾಯ ಬಡುಕರೊಳ್ನಿಂದು ಬನ್ನಬಟ್ಟುಳಿಸೆಂದು ೧

ಆಶೆಗಳಿಗೊಳಗಾಗಿ ಆನಂದಮಾರ್ಗವ ನೀಗಿ
ವಾಸನೆಗಳಿಂದ ಪೋಗಿ ವಾದಿಸುತಲಿ ಚೆನ್ನಾಗಿ
ಮೋಸಹೋಗಿ ಮುಖಬಾಗಿ ಫಾಸಿಯಾಗಿ ಗುಣಪೋಗಿ
ಕಾಸು ವೀಸಾ ಧಾನ್ಯಕಾಗಿ ದಾಸನಾಗಿ ಪರರಿಗೆ ೨

ಎಲ್ಲರೊಳುವಾದಗಳವಾಡಿ ಬಲ್ಲವನಂದದಿ ಕಾಡಿ
ಖುಲ್ಲರಾ ಮಾರ್ಗವ ಕೂಡಿ ಕೂಳಿಲ್ಲದಿಲ್ಲಿಗೆ ಬಾಡಿ
ತಲ್ಲಣದೊಳಗೋಲಾಡಿ ತಬ್ಬಿಬ್ಬೊ ಕರ್ಮವ ಮಾಡಿ
ಕಲ್ಲೆದೆಯನನೆನ್ನನು ಕಾಯಬೇಕು ಗೋಪಾಲಾರ್ಯ ೩

೧೭

ಕಾಣೆವಾವಿದನು ಕಾಣೆವಾವಿದನಾವ ಶಾಸ್ತ್ರದಲಿ ವಿದುಗಳ ಪ್ರ
ಮಾಣ ವಚನದಲಿ ಮೂರನೆಯ ಪಥದಾ ಪ

ಜಾಣಿಲಾತ್ಮನ ಸಮಾಧಿಯಲನುಭವಿಸಿ ಸುಖವ
ಕಾಣದೆ ಬರಿದೆ ಮುಕುತರಾವೆಂಬ ಪರಿಯಾ ಅ.ಪ

ತಾನೆ ಚೇತನವಂತೆ ತನಗೆ ಕರ್ಮಗಳಂತೆ
ತಾನೆ ಸುಖಮಯನಂತೆ ತಾಪವನಂತೆ
ತಾನೆ ಬೋಮವದಂತೆ ಹಾನಿವೃದ್ಧಿಗಳಂತೆ
ತಾನೆ ನಿರ್ಲೇಪಸ್ತುತಿನಿಂದೆ ತನಗಂತೊ ೧

ಬೋಧೆಯು ತಾನಂತೆ ಸಾಧನವು ಬೇಕಂತೆ
ಭೇದವಿಲ್ಲವದಂತೆ ಭೀತಿ ತನಗಂತೆ
ನಾದ ಬಿಂದುಗಳನರಿದಿಪ್ಪಗತಿಯಂತೆ
ಪಾದಾಭಿಮಾನ ಚಿಂತೆಯು ಪೋಗದಂತೆ ೨

ಕಾಯ ಕರುಣಾಭಿಮಾನಗಳಿಲ್ಲ ತನಗಂತೆ
ಮಾಯೆ ಬಾಧಿಪುದಂತೆ ಮನಸಿನೊಳಗೆ
ಈಯಹಂಕಾರವಿಲ್ಲದ ಬೊಮ್ಮಪದವಂತೆ
ಹೇಯವಿದುಪಾದೇಯವೆನಿಪ ಭ್ರಮೆಯಂತೆ ೩

ಈಶ ತಾನಂತೆ ತನ್ನಾಶೆಗಳು ಬಿಡವಂತೆ
ಕೋಶ ಸಾಕ್ಷಿಕನಂತೆ ಕೋಪ ತನಗಂತೆ

ಪಾಶವಿಲ್ಲವದಂತೆ ಪಾಡುಪಂಥಗಳಂತೆ
ಈ ಸಕಲ ತಾನಂತೆ ಇನ್ನು ವಿಧಿಯಂತೆ ೪

ಚೇತನವೆ ತಾನಂತೆ ಚಿತ್ತನಿಲ್ಲದುದಂತೆ
ಪಾತಕಗಳಿಲ್ಲವಂತೆ ಪರಪೀಡೆಯಂತೆ
ಜಾತಿಸೂತಕವೆಂಬ ಜಂಜಡಗಳಿಲ್ಲವಂತೆ
ಮಾತಿನ ರಿಪು ಮತ್ಸರಗಳು ಬಿಡವಂತೆ ೫

ವಿಶ್ವಾತ್ಮತಾನೆಂಬ ವಿಶ್ವಾಸವುಂಟಂತೆ
ವಿಶ್ವತ್ರೈಜಸರ ನಿಜವರಿಯನಂತೆ
ನಶ್ವರದ ಭೋಗಂಗಳೆಂಬ ನಂಬಿಗೆಯಂತೆ
ವಿಶ್ವಾದಿಗಳ ರೀತಿಯಲ್ಲಿ ಪಗೆಯಂತೆ ೬

ಅಂಡಪಿಂಡಗಳೈಕ್ಯವೆಂಬ ಬುದ್ಧಿಗಳಂತೆ
ಚಂಡಾಲನಿವನೀತ ಮೇಲೆಂಬುದಂತೆ
ಪಂಡಿತನು ಪ್ರವುಢ ತಾನೆಂಬ ಭಾಷೆಗಳಂತೆ
ಕುಂಡಲಿಯ ಹೆಳವ ಕೇಳ್ದಡೆ ಕುದಿವನಂತೆ ೭

ಚಿನ್ಮಯಾತ್ಮಕನು ತಾನೆಂಬ ಚಿಂತೆಗಳಂತೆ
ತನ್ನವರು ತಾನೆಂಬ ಭ್ರಮೆಪೊಗದಂತೆ
ಸನ್ಮುದ್ರೆಯಂತೆ ಸತ್ಯಾಸತ್ಯವೆರಡಂತೆ
ತನ್ಮಯತೆಯಂತೆ ಲಕ್ಷಣೆಯರಿಯನಂತೆ ೮

ಗುರುಭಕುತಿಯಂತೆ ವರಕರುಣವಿಲ್ಲವದಂತೆ
ಗುರುಶರಣನಂತವರನುಗೇಳನಂತೆ
ಪರಮಪದ ತಾನಂತೆ ಪಿರಿದು ಸಂಶಯವಂತೆ
ವರ ಮುಕ್ತಿಯಂತೆ ವಾಸನೆಯು ಬಿಡದಂತೆ ೯

ಈ ಪರಿಯ ಸಂಭಾವನೆಗಳ ಪರಿಹರಿಸಿ ಶ್ರೀ
ಗೋಪಾಲಾರ್ಯ ಜನರಿಗೆ ದಯದಲಿ

ತಾಪಂಗಳನು ಸವರಿ ದಾಟಿಸಯ್ಯಾ ಚಿತ್ತ
ತಾಪದಿಂ ನಿಜಪಾದ ಬೋಧೆಯನು ಕೊಟ್ಟು ೧೦

೧೮

ಭಜಿಸು ಭಜಿಸು ಮನುಜ ಸದಯ ಹೃದಯ ಗೋಪಾಲಾರ್ಯವರ್ಯನ
ನಿಜದಿ ನಿಜದಿ ಕರಣವಿಜಯನ ಜನ ಸುಜನ ವಂದ್ಯನ ಪ

ಕಾಮ ತಾಮಸಗಳಲಿ ಬಳಲುತ್ತ ಸೀಮೆ ಸೀಮೆಗಳನುಸುತ್ತು
ವೀಮನೋರಥಗಳಲೇನು ಗುರುವಿನ
ನೇಮ ಕೀರ್ತನೆಯನಿರಾಮಯಾಮಲಾರ್ಥ ನಿ
ಷ್ಕಾಮ ರಾಮಣೀಯಕವನು ಪ್ರೇಮದಿಂದ ಪೊಗಳುತ ೧

ಯೋಗ ರಾಗದಿಂದ ಮನವ ನಾಗಲಾಗಲಧಿಕ ಭಕ್ತಿ
ಯೋಗ ವೇಗ ಜನಿತ ಸದನುರಾಗದಿಂದ ನಿಲ್ಲಿಸಿ
ರಾಗ ರೋಗವೆಂಬ ತಮವ ನೀಗಿ ಸದ್ವಿರಾಗದಿಂದ
ಆಗಮಾಗಮಾಂತ ವಚನದಾಗು ಪೋಗನರಿತು ನೀ ೨

ಕಾಲ ಕಾಲದಲ್ಲಿ ಬಾಲಲೀಲೆಯಿಂದ ನಡೆದು ನುಡಿದು
ಶೀಲ ಲೋಲನಾಗಿ ಲೋಕ ಜಾಲ ಮೂಲವಾ
ಮೇಲೆ ಮೇಲೆ ತಿಳಿದು ಬೆಳೆದು ನಲಿದು ಭಕ್ತಪಾಲ ಗೋ
ಪಾಲಯತಿ ಕೃಪಾಲ ಸದ್ವಿಶಾಲಸುಖವ ತಳೆದು ನೀ ೩

೧೯

ಭ್ರಮೆಯಿಂದಲಿದೆ ಲೋಕವೆಲ್ಲ ನಿನ್ನ
ಭ್ರಮೆ ತೀರಲು ಲೋಕವೆಳ್ಳನಿತಿಲ್ಲ ಪ

ನೀ ನಿನ್ನ ತಿಳಿದರೆ ಸಾಕು ಯೀ
ಸೂನೀಯ ಭೋಗಂಗಳಿನ್ನೇನು ಬೇಕು

ನೀ ನಿನ್ನ ಮರೆವುದೆ ಕಾಕು ನೀ
ಮೀನ ಮೇಷಂಗಳನೆಣಿಸದೆ ನೂಕು ೧

ಸಾಕು ಮಂದನಾಗಬೇಡ ನಿನಗೆ
ಬೇಕಾದ ಸುಖವಿದೆ ನಿನ್ನೊಳು ನೋಡ
ಶೋಕ ಮೋಹಗಳನೀಡಾಡ ನಿನ್ನ
ನೀ ಕಂಡು ನಿಜ ಸುಧೆಯೊಳಗೋಲಾಡ ೨

ನಿನ್ನೊಳು ನಿಜ ಸುಖವುಂಟು ನೀ
ನನ್ಯವನಳಿದು ನೋಡಲು ಕೈಗಂಟು
ಭಿನ್ನ ಬುದ್ಧಿಯನೆಲ್ಲದಾಂಟು
ಸನ್ನುತಾನಂದಾಮೃತವನೊಲಿದೀಂಟು ೩

ಗುರುವಿನ ಕೃಪೆಯಿಲ್ಲದಿಲ್ಲಾ ಮುಕ್ತಿ
ಕರೆದರೆ ಬರುವರೆ ಕಾಮಿನಿಯಲ್ಲ
ಪರಮ ಧೈರ್ಯವ ಮಾಡುವನಲ್ಲ ನಿನ್ನ
ಮರೆಯದೆ ನೋಡು ನಾನೆಂದಿದನೆಲ್ಲಾ ೪

ಈ ಪಾಳು ಕರ್ಮದಲೇನು ಈಗ
ನಾ ಪೇಳಿದೆ ಕಂಡುದ ಮಾಡು ಮಾಣು
ಕೋಪವ ಬಿಡು ಸುಖಿ ನೀನು ಸದ್ಯ
ಗೋಪಾಲಾರ್ಯರ ಕಂಡೆ ಇನ್ನೇನೂ ೫

೨೦

ಮನವೊಂದು ನಿಂತರೆ ಸಾಕು ಇದಕಿಂತ
ಘನವಾದ ಕರ್ಮವಿನ್ನೇನೊಂದು ಬೇಕು ಪ

ಮನನಿಲ್ಲದಿರುವದು ಕಾಕು ನಿನ್ನ
ಮನವ ನಿಲ್ಲಿಸಿ ಅನ್ಯವನೆಲ್ಲವ ನೂಕು ಅ.ಪ

ಗುರುವಿನ ಚರಣಸೀಮೆಯಲಿ ನಿತ್ಯ
ಪರಿಪೂರ್ಣರೂಪವಿದೆಂಬ ನೇಮದಲಿ
ಅರಿಷಡುವರ್ಗದಂತ್ಯದಲಿ ತೋರು
ವರಿವೆ ತಾನೆಂಬ ಘನವಿವೇಕದಲಿ ೧

ಕರಣ ಜಯದ ಬಳಿಸಂದು ಸಂ
ಸರಣ ಚಿಂತೆಯ ಬಿಟ್ಟು ಮುದದಿಂದ ನಿಂದು
ಅರಿಯ ಪಡುವದಲ್ಲವೆಂದು ತ
ನ್ನಿರವೆಯಾನಂದದ ಘನಪದವೆಂದು ೨

ತಾಪಗಳೆಲ್ಲವ ಬಿಟ್ಟೊ ಸಾಧು
ಗೋಪಾಲಾರ್ಯರ ಹೃದಯದೊಳಿಟ್ಟು
ವ್ಯಾಪಕದಲಿ ವೃತ್ತಿ ನೆಟ್ಟೊ ಯಿಂ
ದೀಪರಿಯ ನಿರ್ವಿಕಲ್ಪದಲಳವಟ್ಟೊ ೩

೨೧

ಮಾಯೆ ಮುಟ್ಟದಿರೆನ್ನನು ನಿನ್ನಯ ಮೂರು
ಕಾಯಾಭಿಮಾನವೆನಿಸುವ ಮೈಲಿಗೆಯನು
ಹೇಯವಿದೆಂದು ಬಿಟ್ಟರಿಕೆಯ ಮಡಿಯುಟ್ಟೆ
ಬಾಯ ಹೊಯ್ಯಿಸುವೆನಿನ್ನು ತಪ್ಪಿದೆಯಾದರೆ ಪ

ಧೀರತನದಿ ಸದಸದ್ವಿವೇಕವ ತೊಟ್ಟು । ಸಾರಿ ಧನಾದಿ ಭೋಗಗಳ ಬಿಟ್ಟು
ಸಾರವಲ್ಲೆಂದು ಸ್ವರ್ಗಾದಿ ಸುಖಂಗಳ । ಮೀರಿದ ವಿರತನು
ನಾನೆಂದೆನಲ್ಲದೆ ನಿನ್ನ
ನಾರಿಯಬೇಕೆಂದೆನೆ ವಿಷಯವಿ । ಕಾರದೊಳ್ಬಳಿಸಂದೆನೆ ಧ್ಯಾನ ಸಾಧನ
ಕಾರವೆ ಸಾಕೆಂದೆನೆ ಕಲ್ಪಿತವಾದ ಘೋರ
ಸಂಸಾರವಸಾರವೆಂದೆನಲ್ಲದೆ ೧

ಶಮೆಯಿಂದ ಚಿತ್ತ ವಿಕ್ಷೇಪವ ತೊಲಯ । ದಯೆಯಿಂದಿಂದ್ರಿಯಗಳ ತಗ್ಗಿಸಿ
ಕ್ರಮದಿಂ ತಿತಿಕ್ಷೆಯಿಂ ಸಹನವ ಮಾಡಿ ।
ಯಮಿತೋಪರಮದಲಗ್ಗಳನೆಂದೆನಲ್ಲದೆ
ಸಮತೆಯಿಲ್ಲದೆ ಬಂದೆನೆ ತನು ಭೋಗ । ಮಮತೆಯೊಳಗೆ ನಿಂದೆನೆ ವಿಘ್ನವಿ
ಕ್ರಮಕೊಳಗಾದೆನೆಂದೆನೆ ವೇದಾಂತೋಪ
ಕ್ರಮವೆನ್ನೊಳಾಯಿತೆಂದು ವಿವರಿಸಿದೆನಲ್ಲದೆ ೨

ದೀಪಿತ ಮೋಕ್ಷೇಚ್ಛೆಯಿಂದ ತೋರುವ ಸಕಲ । ತಾಪತ್ರಯಗಳ ತೊಲಗಿಸಿ
ಈಪರಿ ವೇದಾಂತ ಶ್ರವಣ ಮನನದ ಪ್ರ । ತಾಪದಿಂದರಿಗಳಿಲ್ಲೆನಗೆಂದೆನಲ್ಲದೆ
ನೀ ಪುಸಿಯಲ್ಲೆಂದೆನೆ ಕಲ್ಪಿತ ನಾಮ । ರೂಪವ ನಿಜವೆಂದೆನೆ ತಾದೃಶ್ಯ ವಿ
ಲೋಪಕನಲ್ಲೆಂದೆನೆ ಕೇಳು ಪ್ರತಿಜ್ಞೆಯ ।
ಗೋಪಾಲಾರ್ಯನೆ ನಾನೆಂದೆನಲ್ಲದೆ ೩

೨೨

ಶ್ಲೋ॥ ಶಮ-ದಮ ಸಹಿತೇನಸ್ವಾನುಭಾವೇನ ನಿತ್ಯಂ
ಸಮಮತಿಮನುಯವ್ಯಣ ಸರ್ವದಾ ಸೇವಕಾನಾಂ
ಯಮ ನಿಯಮ ಪರಾಣಾಮೇಕ ತತ್ವಾದರಾಣಾಮಮಿತ
ನಿಜ ಮಹಿಮ್ನಾ ದೇಶಿಕೇಂದ್ರೊ ವಿಭಾತಿ

ಯೇನು ವಿಚಿತ್ರ ಪೇಳೆ ಯೇ ಮತಿಯೆ ನಿದಾನವನೆನ್ನೊಡನೆ
ಮಾನಸ ವೃತ್ತಿಯಾತ್ಮನ ಕೂಡಿಬರಲೊಂದು
ಗಾನ ತೋರುವುದಿದೇನೆ ಪ

ಎಲ್ಲವನುಳಿದೀಗಲೂ ಬಗೆಗೊಂಡು ಮುದದಿಂದ ಬಂದು ನಿಂದು
ಸಲ್ಲಲಿತಾನಂದ ಪದವ ನೋಡುವೆನೆಂದು ಸವರಿಸಿ ಬರಲು ಮುಂದು

ಇಲ್ಲ ಮತ್ತೊಂದಾತ್ಮನಿಂದಧಿಕವೆಂದು ನಿಲ್ಲದೆ ಧ್ಯಾನಿಸಲು
ಝಲ್ಲನೆ ಜಲಧಿಯ ಮೊರವಿನಂದದಿ ತೋರಲಲ್ಲಿ ನಾ ಬೆರಗಾದೆನು ೧

ಅಂಜದೆ ಚಿಂತಿಸಲು ಮುರಜ ಭೇರಿ ಮಂಜುಳ ವೀಣೆಗಳ
ಸಿಂಜಿತಗಳು ಮೇಘನಾದ ಮುಂತಾದವು ಸಂಜನಿಸಿದವೊಳಗೆ
ರಂಜನೆಯಿಂದವನು ಕೇಳುತ ಹೃತ್ಕಂಜದೊಳ್ಬೋಧೆಯೆಂಬ
ಅಂಜನವಚ್ಚಲು ಬಿಂದು ಪೊಳೆಯಿತು ನಿರಂಜನ ರೂಪಿನಲಿ ೨

ಮತ್ತೆ ಮುಂದೆ ನೋಡಲು ಬಿಂದುವೆಂಬುತ್ತಮ ಹಿಮಕರನ
ಕತ್ತಲೆಗವಿದುದು ಅದ ನೋಡುತ ಮನ ತತ್ತರಿಸಿತು ನಿಲ್ಲದೆ
ಚಿತ್ತವನಲುಗದೆ ಗುರುಪಾದವ ಧೃತಿವೆತ್ತು ಚಿಂತಿಸುತಿರಲು
ಕತ್ತಲೆ ಪರಿದು ಕಳಾ ವಿಶೇಷ ನೋಡಲೆತ್ತಲೆತ್ತಲು ತುಂಬಿತು ೩

ಛಂದದಿತೇಜವನು ನೋಡುತಲದರಿಂದಲಧಿಕ ಸುಖವೂ
ಮುಂದೆ ಪುಟ್ಟಲದರನುಭವದಲಿ ಹಿಗ್ಗಿ ನಿಂದು ಜುಂಮುದಟ್ಟಲು
ಎಂದೆಂದು ಕಾಣದ ಸುಖದೊಳು ಮನ ಬಳಿಸಂದು ಲಯವನೈದಲು
ಒಂದಲ್ಲದೆರಡಿಲ್ಲದ ನಿಜ ನಿತ್ಯಾನಂದವೆ ನಾನಾದೆನೂ ೪

ತಾಪತ್ರಯಗಳಡಗಿ ಕರ್ಮಕಲಾಪವಿಲ್ಲದೆ ಪೋದುದು
ಗೋಪಾಲಾರ್ಯರ ಕೃಪೆಯಿಂದ ಭವಬಂಧವೀ ಪರಿ ಬಯಲಾದುದು
ವ್ಯಾಪಾರವೆಲ್ಲವನಿತ್ಯವಾದವು ನಿರ್ಲೇಪತೆಯೆನಗಾದುದು
ದೀಪಿತ ವಿಜ್ಞಾನ ರತ್ನವೆಂದೆನಿಸುವ ದೀಪ ಸುಸ್ಥಿರವಾಯಿತೂ ೫

೨೩

ಸೋಹಮೆಂದು ಸುಖಿಸು ವಿಗತ ಮೋಹದಿಂದ ಸಂತತಂ
ದೇಹ ದೇಹದೊಳಗೆ ತೋರ್ಪನೀ ಹಿತಾತ್ಮನೀತ ಪರಮು ಪ

ಘನದ ರತುನಮಂಟಪವನು ಶುನಕವೇರಿ ತನ್ನ ನೆಳಲ
ಕನಲಿ ನೋಡಿ ಗಳಹಿ ತಾನಿದೆಂಬುದರಿಯದೆ
ಮನದೊಳನ್ನವೆಂದು ಭ್ರಮಿಸಿ ಮತ್ತೆ ಕಡಿಯಲದರೊಳೊಡದು
*ನೆನೆವ ತನ್ನ ರಕುತವನ್ನು ಸವಿವ ರೀತಿಯಲಿ
ವಿನುತ ಜೀವ ತನ್ನ ಛಾಯೆಯನು ಸಮಸ್ತರೊಳಗೆ ನೋಡಿ
ನೆನೆದಿದನ್ಯವೆನುತ ಭ್ರಾಂತನಾಗಿ ಮಾಯೆಯಿಂ
ದನುಭವಿಸುವೆನಿದನಿದೊಲ್ಲೆನೆನುತ ಭೇದ ಬುದ್ಧಿಯಿಂದ
ಮನುಮಥಾಗ್ನಿಯಿಂದ ಬೆಂದು ಮನದಲಿದ್ದ ಕಾರಣಂ ೧

ನರರು ಗಜವ ಪಿಡಿಯೆ ಕಪ್ಪ ಕೊರವುತದರ ನಡುವೆ ತಿಟ್ಟ
ನಿರಿಸಿ ಕಣ್ಣಿಯಲ್ಲಿ ಕಟ್ಟಿಯದರ ಸುತ್ತಲೂ
ನೆರಹಿ ಕಾಷ್ಠ ಮೃತ್ತುಗಳನು ನಿಜದಪ್ಪಿರಮಾಡೆ ಭ್ರಮಿಸಿ
ಕರಿಣಿಗಾಗಿ ಬಂದು ಗಜವು ಮರೆದು ಬಿದ್ದ ರೀತಿಯಿಂ
ದುರೆ ವಿರಿಂಚಿ ರಕ್ತ ಮಾಂಸ ನರ ಮಲಂಗಳಿಂದ ರಚಿಸಿ
ನರಕ ಕೂಪ ಸಾಮ್ಯವಾದ ನರಶರೀರಮಂ
ಮರೆಸಲದರ ಮೇಲೆ ಚರ್ಮವೆನಿಪ ಮಾಯೆಯಿಂದ ನರರು
ಮರೆತು ತಾವಿದೆನ್ನುತದರಲಿದ್ದ ಕಾರಣಂ ೨

ಮರೆದು ತನ್ನ ತಾಣವನ್ನು ಮೆರೆದುಲಂಘಿಸುತಲಿ ಭೇಕ
ವಿರಲು ಹೊಂಚಿ ಪಿಡಿದು ಪಾವು ಪಿರಿದು ದೇಹಮಂ
ನೆರೆದು ನುಂಗಲಾರದಿರುತಲಿರಲು ಭೇಕ ತನ್ನ ಹಸಿವಿ
ಗಿರದೆ ಬಾಯ ತೆಗೆದು ನೊಣನನರಸಿ ಪಿಡಿವ ರೀತಿಯಿಂ
ನರರು ತಮ್ಮ ಕಾಲಸರ್ಪ ಉರುಬಲದನು ಮರೆತು ಭೋಗ
ಪರತೆಯಿಂದ ಕಾಮರೋಷ ವಿರಸರಾಗುತಿರಲು ನೀ
ನರಿದನಿತ್ಯವೆಲ್ಲವೆಂದು ಮರೆದು ಗೋಪಾಲಾರ್ಯ ಪದವ
ನೆರೆದು* ಭಕತಿಯಿಂದ ನೋಡಿ ಪಾಡಿ ಹರುಷದಿಂದ ನೀ ೩

೨೪

ಹೊಂದಿಕೊಂಡಿರಬೇಕು ಮನವೆ ಘನಚೈತನ್ಯ
ಸಂದೋಹನಾದ ದೇಶಿಕನ ಪಾದಾಬ್ಜದೊಳು ಪ

ರಾಗವನು ನೆರೆಬಿಟ್ಟು ರತಿಯ ಮನದಲಿ ನೆಟ್ಟು
ಭಾಗವತನಾಗದರೊಳು ಭಕ್ತಿಯುಟ್ಟು
ಭೋಗವಾಂಛೆಯ ಬಿಟ್ಟು ಬೋಧಿಸುತಲೊತ್ತಟ್ಟು
ಯೋಗ ರಾಜ್ಯವ ಕಟ್ಟು ಯುಕ್ತಿಯಿಂ ಸುಖಬಟ್ಟು ೧

ಯಮ-ನಿಯಮಗಳ ಮಾಡಿ ಏಕಾಗ್ರತೆಯೊಳಾಡಿ
ಸಮ ಚಿತ್ತದೊಳ್ಪಾಡಿ ಸೌಖ್ಯವನು ಬೇಡಿ
ಕ್ರಮದಿ ಸಾಧನೆಗೂಡಿ ಕಾಯ ದಂಡನೆ ಮಾಡಿ
ವಿಮಲ ವೇದಾಂತ ವಿದ್ಯವನೊಲಿದು ನೋಡಿ ೨

ಭೇದ ಬುದ್ಧಿಯನುಳಿದು ಭಿಕ್ಷಾನ್ನದೊಳ್ಬೆಳೆದು
ವಾದ ವಿದ್ಯವ ಕಳೆದು ವಸ್ತುವೆಂದರಿದೂ
ಸಾಧನಗಳೊಳ್ಮೆರೆದು ಸಂಸ್ಕೃತಿ ಪಥವ ತರಿದು
ಸಾಧು ಗೋಪಾಲಾರ್ಯ ಗುರುವಿನೊಳ್ಬೆರೆದೂ ೩

---

* ಈ ಬಗೆಯ ಪದಗಳಲ್ಲಿ ಮೂಲದಲ್ಲಿ 'ಅ' ಸ್ವರವಿದೆ. ನೆನದು, ಮರದು, ನೆರದು, ಇತ್ಯಾದಿ

ವೆಂಕಟದಾಸರ ಕೀರ್ತನೆಗಳು

'ಚಿಕನಾಗಪುರವಾಸ'

(ಅ) ದೇವತಾ ಸ್ತುತಿಗಳು

೧. ಗಣೇಶ ಸ್ತುತಿ

ಶ್ರೀಗಣಪತಿಯೆ ಪಾಲಿಸೈಮತಿಯನೂ
ಯೋಗಿಜನವಂದ್ಯಪದಯುಗನೆ ಶಿವಸುತನೆ ಪ

ಮೂಲಕಂಜಾವಾಸ ಮಿಹಿರಶತಸಂಕೀಶ
ಬಾಲಚಂದ್ರ ಮಹೇಂದ್ರ ಭಾವಿತಗಣೇಶಂ
ಸಾಲುಗೆಲೆಗಮಲದೊಳು ನೆಲೆಗೊಂಡ ಪಶುಪತಿ ಸು
ಲೋಲ ನಿನಗೊಪ್ಪಿತರು ನೂರು ಜಪಶ್ವಾಸ ೧

ಯೋಗಭೋಗಾರೋಗ್ಯ ಭಕ್ತಿಕರ್ಮಾಂತರಾ
ಯಾಗಮವನಳಿದುರ ಪರವಶವಾಗಿ
ಸಾಗಿ ಸಾಧನಗಳಳವಟ್ಟು ಶ್ರೀ ಗುರುಕರುಣ
ವಾಗುವಂದದಿ ನಡೆದ ಸನ್ಮಾರ್ಗಗಳಿಗೆ ೨

ಕರುಣದಿಂ ಚಿಕನಾಗಪುರದಿ ಭಕುತರಿಗಾಗಿ
ಗುರುವಾಸುದೇವಾರ್ಯನೆನಿಸಿ ಮಹಿಮೆಗಳಾ
ಮೆರೆವ ವೆಂಕಟರಮಣ ಭಾವರಾಮೇಶ್ವರ
ವರತನಯ ತದ್ಯಹಸ್ತಂಭಕೃತ ಸದನಾ ೩

೨. ಶ್ರೀರಾಮ ಸ್ತುತಿ

ರಘುನಂದನ ರಘುನಂದನ ರಘುನಂದನ ರಘುನಂದನ ಪ

ಸುಖದಾಯಕ ಸಕಲಾಗಮ ನಿರುತ
ಖಗವಾಹನ ಮಣಿಭೂಷಣ ಕರುಣಾಕರ ಚರಿತ

ಕೌಸಲ್ಯ ವರನಂದನ ಘನಕುಂಡಲ ಮಣಿಮಂಡಲ
ನಾರಾಯಣ ದಾಮೋದರ ಮಧುಸೂದನ ಕೃಷ್ಣ ೧

ಗೋವಿಂದ ಮುಕುಂದಾಚ್ಯುತ ಕೃಷ್ಣಾಂಬುಜನಾಥ
ಲಕ್ಷ್ಮೀಶ ಕೃಪಾಳೋ, ಜಗದೀಶವಂದ್ಯ ವಿಷ್ಣು
ಶ್ರೀ ರಾಘವ ರಾಮಾನುಜ ಪಾಹಿ ಮುಕುಂದ
ಸೀತಾರಮಣ ತ್ರಿನಯನ ಗೋಪಾಲ ಗಿರೀಶ ೨

ಗೋಪಾಲ ಗೋಪಾಲ ಗೋಪಾಲ ಗೋಪಾಲ
ಭಕ್ತಪ್ರಿಯ ಗೋವಿಂದ ಮುಕುಂದ
ಅತಿಭೀಷಣ ಕಟುಭಾಷಣ ಯಮಕಿಂಕರ ಪಠಳಂಕೃತ
ತಾಡನ ಪರಪೀಡನ ಮರಣಾಗಮ ಸಮಯೇ ೩

ಶಿವ ಶಂಕರ ಶಿವ ಶಂಕರ ಶಿವ ಶಂಕರ ಶಿವ ಶಂಕರ
ಉಮಯಾಸಾಮಮಪೇಕ್ಷಿತ ಯಮಶಾಶ್ವತ ಶೂಲಿಂ
ಪರಮೇಶ್ವರ ಹರಗೌರಿರಮಣ * ೪

(ಆ) ಗುರುಸ್ತುತಿಗಳು

೩

ಗುರುವೆ ಪರಬ್ರಹ್ಮ ವಾಸುದೇವಾರ್ಯ
ಗುರುವೆ ಪರಬ್ರಹ್ಮ ಪ

ಅರಿವು ಮರವೆಗಳ ಪರಿಯ ನಿರೂಪಿಸಿ
ಅರಿವಿನ ಘನವಾಹ ತೆರಗೈದು ಪಾಲಿಪ ಅ.ಪ

---

* ವೆಂಕಟದಾಸಾರ್ಯರ ವಂಶಸ್ಥರಾದ ಶ್ರೀಮತಿ ಗೌರಮ್ಮ ಅವರಿಂದ ಪಡೆದಿರುವುದು ಅಪೂರ್ಣ; ಆದಿಪ್ರಾಸವಿಲ್ಲ.

ಸುಖಬುದ್ಧಿಯಿಂಪಾಪಾಸಕ್ತ ಮಾನಸರನು
ಯುಕುತಿಯಿಂದಲಿ ಹರಿಭಕುತಿಗಳವಡಿಪ ೧

ಭಾಗವತಾರ್ಥದಿ ರಾಗವ ಪುಟ್ಟಿಸಿ
ಹಾಗೆ ಗೀತಾಮೃತ ಸಾಗರದೆಡೆಗೊಯ್ವ ೨

ನಾನಾಮತಗಳೊಳು ಮಾನಿಸಹೊಗದಂತೆ
ಶ್ರೀನಿವಾಸನ ಪಾದಧ್ಯಾನವ ಬಲಿಸುವ ೩

ಕಾಮಾದಿ ಕಲುಷಿತ ತಾಮಸ ಜನರನು
ಪ್ರೇಮದಿಂದಲಿ ಸಪ್ತ ಭೂಮಿಕೆಗೇರಿಪ ೪

ಒಂದೊಂದರೊಳು ಮತಿನಿಂದು ತಿಳಿದೊಳಿ
ಸೆಂದು ನಡೆದೂ ಪೂರ್ಣಾನಂದರಹುದಮಾಳ್ಪ ೫

ಹೊರಗೊಳಗುಗಾಣದೆ ಬರಿಯರಿವಳಮಲ
ಪರಮನೆ ನಾನೆಂಬ ಪರಿಗೈದು ಪೊರೆವ ೬

ಕರುಣದಿಂ ಚಿಕನಾಗಪುರದಿ ಭಜಕರಿಗೆ
ಕರದು ಜ್ಞಾನಾಮೃತವೆರೆವ ವಾಸುದೇವಾರ್ಯ ೭

೪

ತಪ್ಪು ತಪ್ಪು ತಪ್ಪು ತಪ್ಪಪರಾಧ ಕೋಟಿಯ
ಸರ್ವಂ ತಪ್ಪನ್ನೆಲ್ಲಾ ಕ್ಷಮಿಸಿ ಒಪ್ಪಿಕೊಳ್ಳಯ್ಯ ಗುರುವೆ ಪ

ದೇಹ ತನ್ನದೆಂಬ ಅಹಂಕಾರದ ತಪ್ಪು ತನ್ನ
ಗೇಹ ಸತಿಸುತರ ಮಮತೆ ಪಾಶದ ತಪ್ಪು
ಮೋಹ ಮದ ಮಾತ್ಸರ್ಯವ ಭ್ರಮೆಗೊಂಬೊ ತಪ್ಪು
ಓಹೋ! ವ್ಯರ್ಥಕಾಲವ ಕಳೆದೆನಹುದಯ್ಯ ೧

ಬಕವೃತ್ತಿಯ ಸೇವೆಯಿಂದ ಮುಕುತನೆಂಬೆನೋ ಹರಿ
ವಿಕಳಮತಿಗಳ ಕೂಡಿ ಯೋಗ್ಯನೆಂಬೆನೋ
ಸಕಲ ವಿಷಯಸುಖವನುಂಡು ವೈರಾಗಿಯೆಂಬೆನೋ ಹರಿ
ಭಕ್ತರ ಸಂಗವ ಬಿಟ್ಟು ಜ್ಞಾನಿಯೆಂಬೆನೋ ೨

ಬರಿಯ ಬ್ರಹ್ಮಜ್ಞಾನದಿಂದ ಮರುಳು ಮಾಡಿದೆ
ಪರಿಪರಿಯ ಭಾವಭೇದಗಳನು ತೋರಿದೆ
ಅರಿಯದ್ದೋದೆನಯ್ಯ ಶ್ರೀಮದ್ಗುರುವೆ ವಾಸುದೇವಾರ್ಯ
ನರಸಾರ್ಯ ಅಮರಗಿರಿನಿಲಯ ಸಕಲ ತಪ್ಪು ಮರೆಯಯ್ಯಾ * ೩

೫೫

ನಿನ್ನ ನೆನಹುದೊರಕಲೆಮಗೆ ನಿತ್ಯ ಮಂಗಳಂ ಪ್ರ
ಸನ್ನ ವಾಸುದೇವಗುರುವೆ ಪರಮಮಂಗಳಂ ಗುರುವೆ ಪ

ಅನಾಥನಾದವನಿಗಾನಂದ ಮಂಗಳಂ ನಿನ್ನ
ಧ್ಯಾನಗೈವ ಧನ್ಯರಿಗೆ ದಿವ್ಯ ಮಂಗಳಂ
ಮಾನಸ ನಿನ್ನೊಳಗೆರಗೆ ಬಹು ಮಂಗಳಂ ಸರ್ವ
ವೂ ನೀವೆಂದರಿತ ಮಹಿಮರಿಗಖಿಲ ಮಂಗಳಂ ೧

ಕಂಗಳು ನಿನ್ನೊಳಿದ್ದರೆ ಶುಭಕಾರ ಮಂಗಳಂ ಭವ
ಭಂಗಗೈವ ನಿನ್ನ ನೋಡೆ ಭವ್ಯ ಮಂಗಳಂ
ಅಂಗಪ್ರತಿಸೇವೆಯೆ ಸರ್ವಾದಿ ಮಂಗಳಂ ಕಷ್ಟ
ಹಿಂಗುವಂಥ ನಿನ್ನ ಕೃಪೆ ಕೋಟಿ ಮಂಗಳಂ ೨

ಪಾದುಕೆಯೂಳಿಗವೇ ಪವಿತ್ರ ಮಂಗಳಂ ನಿನ್ನ
ಪಾದಪದ್ಮ ಸೇವೆ ದೊರಕೆ ಬಹು ಮಂಗಳಂ

---

* ಗುರುಗಳ ಆರಾಧನೆಯಲ್ಲಿ ಬೃಂದಾವನದ ಮುಂದೆ ಹೇಳುವ ತಪ್ಪೊಪ್ಪಿಗೆ ಎಂದು ದಾಸರ ವಂಶಸ್ಥರಾದ ಶ್ರೀಮತಿ ಗೌರಮ್ಮ ಮತ್ತು ಅವರ ಮಗಳು ಪದ್ಮಾವತಿ ಹೇಳಿದ್ದು.

ಓದಿದರೆ ನಿನ್ನ ಕಥೆಯ ವಿಶ್ವ ಮಂಗಳಂ ನೀ
ನಾದರಿಸಿ ಕರೆಯಲೆಮಗತ್ಯಂತ ಮಂಗಳಂ ೩

ನಿನ್ನ ಮುಂದೆ ಕುಣಿಯಲೆಮಗೆ ನಾನಾ ಮಂಗಳಂ ಗುಣ
ವನ್ನು ಪಾಡಿ ಪೊಗಳಿದರಪಾರ ಮಂಗಳಂ
ನಿನ್ನ ಚರಣತೀರ್ಥಪಾನ ಅನಂತ ಮಂಗಳಂ
ನಿನ್ನ ದಿವ್ಯಪ್ರಸಾದವೆ ಭುವನ ಮಂಗಳಂ ೪

ದಾಸಾನುದಾಸನಪ್ಪುದೆ ದೊಡ್ಡ ಮಂಗಳಂ ಗುರು
ವಾಸುದೇವಾರ್ಯ ನಿನ್ನವರಿಗೆಲ್ಲಾ ಮಂಗಳಂ
ಪೋಷಕನೀನಾದುದರಿಂ ಪಂತು ಮಂಗಳಂ ತ್ರಿಭುವ
ನೇಶ ಚಿಕ್ಕನಾಗಪುರವಾಸ ಮಂಗಳಂ ೫

(ಇ) ಆತ್ಮನಿವೇದನಾ ಕೃತಿಗಳು

೬

ಇಂದ್ರಿಯವಶಕನ ಮಾಡಿದಿರೆನ್ನ
ಮುಂದುವರಿವೆನರಿಯದೆ ಸುಪ್ರಸನ್ನಾ ಪ

ಎನ್ನೊಳಿರುವ ಗುಣದೋಷ ಸೂಕ್ಷ್ಮಂಗಳ
ಚನ್ನಾಗಿ ವಿವರಿಸಿ ತಿಳಿದು ನೋಡೆ
ಮನ್ನಿಸಿ ಪೊರೆವ ಕರುಣ ಬರದಿದ್ದರು
ನಿನ್ನವನೆಂಬಭಿಮಾನದಿಂ ಗುರುವೆ ೧

ಶೈಲಕೆ ಸ್ಥೂಲತೆ ಜಾಲಾಂಧ್ರಗತ ರೇಣು
ಜಾಲಕೆ ಸೂಕ್ಷ್ಮತೆಯತಿ ಲಾಘವ
ತೂಲಕೆ ಬಂದಿಪ್ಪ ಸ್ವಾಭಾವಿಕವ ನೋಡಿ
ತಾಳಲಾರದವನಂದದಿ ಮುಂದುವರಿಸುವೆನು ೨

ಮಶಕ ಮಕ್ಷುಕ ಮಲ ಕ್ರಿಮಿ ಖರ ಸೂಕರ
ಶಶ ಗಜ ತುರಗ ವ್ಯಾಘ್ರಾದಿಗಳ
ಪಶುಗಳ ಸಂದಣಿಗಳಲಿ ಕೊಂಬೆನು ಎನ್ನ
ವಶವಿಲ್ಲವೆಂದಿವ ವೊಳಗುಗೈವವರುಂಟೆ ೩

ಪರರೆನ್ನೊಳಿಹ ಗುಣ ದೋಷಾನುಸಾರದಿ
ಹರುಷ ವಿಷಾದಜನಕ ವಾಕ್ಯವ
ಅರಿತರಿಯದೆ ನುಡಿದರೆ ವಿಚಾರಿಸಿ ನಾನೆ
ಚ್ಚರುಗೊಳ್ಳದು ಭ್ರಮೆಯಿಂ ಕೆಡುತಿಹೆನಾಗಿ ೪

ಪರರ ದೂಷಣೆಯ ನಾ ಮಾಡಿದರು
ಪರರೊಳು ಬರಿದೆ ದ್ವೇಷವನೆಸಗಿದರು ಮುಂದೆ
ಹಿರಿಯರ ವಚನವ ಹಳಿದರು ಸಟೆಯನು
ಚರಿಸಿದರಾಗಲೆನಗೆ ವಿಪ್ರಹತಿ ದೋಷ ೫

ರಾಗ ದ್ವೇಷದ ಬಲವಿಡಿದನ್ಯಧರ್ಮವ
ನಾಗಮವಂತರ ಸಮ್ಮತವಾ
ಕೂಗಿ ವಾದಿಸಿ ಜಯಿಸುವ ಬುದ್ಧಿಗೈದರಿ
ನ್ನಾಗಲಿ ಸುರೆಯನ್ನೀಂಟಿದ ದೋಷವೆನಗೆ ೬

ಪರನಾರಿಯರ ರೂಪು ಲಾವಣ್ಯವನು ನೋಡಿ
ಕರಗಿದೆನ್ನೈ ಕಾಮಾಧೀನನಾಗಿ
ಬರಿಯನೃತವನಾಡ್ದೆನ್ನೈ ತಪ್ಪಿದೆನು ಮುಂದೆ
ಬರಲಿ ಸ್ವರ್ಣಸ್ತೆಯ ದೋಷವೆನಗೆ ಸ್ವಾಮಿ ೭

ಆರಾದರೇನವರೆಸಗಿದ ಕರ್ಮದ
ದಾರಿಯೊಳಿರೆ ನಿಗ್ರಹಿಸಿನು ಮುಂದೆ
ದೂರಿಕೊಂಡರೆ ಕೇಳಿ ಖತಿಗೊಂಡೆನಾದರೆ
ಸಾರಲಿ ಗುರುದಾರಗಾಮಿದೋಷವು ನನ್ನ ೮

ಆವಜನ್ಮದ ಸುಕೃತವೊ ನಿನ್ನ ಚರಣದ
ಸೇವೆ ದೊರಕಿ ಧನ್ಯನಾದೆನಯ್ಯಾ
ಭಾವನೆಯಳವಡದ ಅಭಿಮಾನದಿಂದನ್ಯ
ಜೀವರೊಳ್ದೋಷವನೆಣಿಸಿ ನಾನೊಂದೆನೂ ೯

ಎನ್ನ ಜನನಿ ಜನಕರು ನಿನ್ನ ಚರಣದೊ
ಳ್ಚೆನ್ನಾಗಿ ನಿಂದರು ಸದ್ಗುರುವೆ
ನಿನ್ನವನಾದೆ ನಾನಿಲ್ಲ ಜನುಮವೆನ
ಗೆನ್ನುತಿದ್ದರು ರಾಗಾದಿಗಳಾಶೆ ಬಲುಹಯ್ಯ ೧೦

ಮರೆತು ನಡದೆನು ತಪ್ಪಿದೆನಯ್ಯ ಚಿಕನಾಗ
ಪುರವಾಸ ಗುರು ವಾಸುದೇವಾರ್ಯನೆ
ಪರಮ ಪಾಪಿಗಳ ಸಂಸರ್ಗದೋಷವೆನಗೆ
ಬರಲಿ ಮಾಡಿದ ಪ್ರತಿಜ್ಞೆಯ ಬಿಟ್ಟೆನಾದರೆ ೧೧

೭

ಈ ಸಮಯದಲಿ ಸುಮ್ಮನಿರುವರೆ ರಾಮಾ
ದಾಸಾನುದಾಸರೊಳು ತೋರದೆ ಪ್ರೇಮಾ ಪ

ಮರುಗಿ ಬೆದರದಿರೆಂಬ ಮಾತೃ ಮೊದಲೆಯಿಲ್ಲ
ಕರೆದು ನಾ ಬೇಡಿದುದ ಕೊಡುವ ಪಿತೃವಿಲ್ಲ
ನೆರವಾಗಿಯನುಸರಿಸಿ ನಡೆವ ಭ್ರಾತೃಗಳಿಲ್ಲ
ಮೊರೆಯಿಡಲು ನಿನಗೆ ನೀ ಮುಖದೋರೆಯಲ್ಲಾ ೧

ಕಡ ಹುಟ್ಟಿದರೆ ಬಡವ ಕೆಡುವನೆಂಬೀಗಾದೆ
ತೊಡರಿಕೊಂಡೆನ್ನೊಳಗೆ ತೋರಿದುದು ತಂದೆ
ತಡವ ಮಾಡದೆ ಮುಂದೆ ತನಿದಯಾರಸದಿಂದೆ
ಕಡೆಹಾಯಿಸಬೇಕೆಂದೆ ಕರುಣಾಬ್ಧಿಯಿಂದೆ ೨

ಶರಣು ಹೊಕ್ಕೆನು ಜೀಯ ಸೀತಾಮನಃಪ್ರೀಯ
ನರಳಿಪರೆ ಋಣಿಯ ಚಿಕನಾಗಪುರ ನಿಲಯಾ
ಮರೆದೆನ್ನ ದುರ್ನಡೆಯ ಮರುಗಿ ನೀ ಸಲಹಯ್ಯ
ವರದ ವೆಂಕಟರಾಯ ವಾಸುದೇವಾರ್ಯ ೩

೮

ಎಂದಿಗೋ ದಾಸನಿಗೆಂದಿಗೊ ಸನ್ನಿಧಿಯೊಳಿಗ ಪ

ತನುವಿನೊಳ್ ಜರೆಯಡಸಿತು ಮನದಿ ಮರವೆ ಮುಸುಕಿತು
ಋಣದ ಬಾಧೆ ಹತ್ತಿತು ರೋಗವಡಸಿತು
ಜನರ ಪ್ರೀತಿ ತೊಲಗಿತು ಜಾಣ್ಮೆ ತಾನು ಸಡಿಲಿತು
... ದಿಯ ವಾಸವಿಲ್ಲವಾಯ್ತು ... ಮರೆ ದೂರವಾಯ್ತು ೧

ನಿನ್ನ ಸನ್ನಿಧಿಯ ಮೀರಿ ಪುಣ್ಯವ ಬೇರೆ ಬಯಸಿದೆನೆ
ನಿನ್ನ ಮೂರ್ತಿಯನುಳಿದು ಅನ್ಯರ ನೆನೆದೆರಗಿದೆನೆ
ನಿನ್ನ ಸೇವೆಗಧಿಕವೆಂದನ್ಯದೇವರ ಸೇವಿಸಿಕೊಂಡೆನೆ ೨

ಸನ್ನಿಕರ್ಷವನಾದರತೆಯನ್ನು ಕೊಡುವದೆಂದೆನೆ ಅರಿ
ವೆನ್ನೊಳುದಿಸಿತೆ ದೂರನಾದೆನೇತಕೆ
ಇನ್ನುದಾಸೀನಗೈದರೆ ಎನ್ನಿಂದಾಹುದೇನು ಬೇರೆ
ಮನ್ನಿಸಿ ನೀನೊಂದಿರೆ ಸೈರಿಸಲಾರೆಂ ೩

ಪತಿತಪಾವನನು ನೀನು ಪರಮಕರುಣಾನಿಧಿ ನೀನು
ಪತಿಕರಿಸಿ ಬಿಡುವದೇ ಪಾಪಿಯೆ ನಾನು
ಸತತ ನಿನ್ನ ನೆನೆಯುವೆನು ಸೇವೆಗೆ ಕಾತರಿಸಿಹೆನು
ಅತಿಶಯವ ತೋರಿಸು ಆ ಸನ್ನಿಧಿಯೆ ನೋಡಿನ್ನು ೪

ಕರೆದು ಮೂಢರಜ್ಞತೆಯ ಪರಿದು ವಿಜ್ಞಾನ ಸುಧೆಯ
ಎರೆದು ಕಾಯೆ ಚಿಕ್ಕನಾಗಪುರದೊಳು ನೀನೆ
ಗುರುವರ್ಯ ವಾಸುದೇವಾರ್ಯ ಚರಣಕೆರಗಿದೆನಯ್ಯಾ
ನಿರತ ಮಂಗಳಾರತಿಯಸಿರಿಯ ತೋರಿಸೊ ದಮ್ಮಯ್ಯಾ ೫

೯

ಏನು ಕಾರಣವೆಮ್ಮ ದೂರಕೆ ನೀನು ನೂಕಿದನೆನಿಸಿದೆ
ಹಾನಿ ವೃದ್ಧಿಗಳನ್ನು ಕಾಣಿಸಿ ದೀನಧೀರರ ಮಾಡಿದೆ ಪ

ಎಲ್ಲರೊಳು ನೀ ಪೂರ್ಣವಿರುತಿಲ್ಲವೆಮ್ಮೆಡೆಯೊಳಗೆನುವ ಭ್ರಮೆ
ಯಲ್ಲಿ ಬಂದುದು ಎಮಗೆ ತಾವಿನ್ನೆಲ್ಲಿ ನಿನ್ನನಗಲುವರೆ
ಉಳ್ಳವನೆ ನಿನಗಿಂತು ಬರುತಿರುವಲ್ಲಿ ನಮ್ಮಿರವನ್ನು ಪೇಳ್ವದು
ಜಳ್ಳು ನೀನಿದಿರಿಟ್ಟು ತೊಲಗಿದೆಯಲ್ಲ ಶ್ರೀಗುರುವರ್ಯನೆ ೧

ಹಲವು ಪರಿಯಲಿ ಚಿತ್ತಪಾಕವ ತಿಳಿದು ಶ್ರುತಿತಾ ಸಾರಿದರ್ಥವು
ಹೊಳೆಯದೊಂದೊಂದರ್ಥದಲಿ ಮನತೊಳಲಿ ಮಾರ್ಗವ ಕಾಣದೆ
ನಲುಗಿ ಭವಮೃತಿಯೊಂದಿ ಜೀವರು ಬಳಲುತಿರಲವತರಿಪನೆಂಬರು
ತಿಳಿಹಿಯಗಲುವನೆಂದರ ನುಡಿಯಳವಡದು ಗುರುವರ್ಯನೆ ೨

ಕೊರಗಿ ಕರಗುವ ಜೀವರಾರ್ತೈ ಬರುವೆ ನೀನೆಲ್ಲಿಂದ ಸಮಯಕೆ
ಇರುವೆ ನೀನಾವೆಡೆಯೊಳಜ್ಞತೆ ಬರುವದಿವರಿಂಗೇತಕ್ಕೆ
ಹರೆವದೆಂತದರಂದತೋರದು ಧರಿಸುತಿಹೆ ನೀನೆಂತು ತನುವನು
ಮರೆಯ ಮಾಳ್ವೆಯದೇಕೆ ಮೂರ್ತಿಯ ಕರುಣಿಸೈ ಗುರುವರ್ಯನೆ ೩

ನಿನ್ನ ನಿನ್ನೊಳು ನೀನೆ ನಾನೆಂದೆನ್ನದೆಂಬುದರಿಂದ ತಿಳಿದರೆ
ನನ್ನ ನಿನ್ನೊಳು ಕಾಣ್ಬೆ ಅಂದು ಪ್ರಸನ್ನನಾಗಿಯೆ ಕರುಣಿಸಿ
ಎನ್ನೊಳಗೆ ಸರ್ವವನು ಸರ್ವರೊಳೆನ್ನ ತಿಳಿದನ್ಯಾರ್ಥವನೆ ಮರ
ತುನ್ನತಾಮಲ ಪೂರ್ಣನಹೆಯೆಂದಿನ್ನು ತೋರದು ದೇವನೆ ೪

ಸಾಕು ಸನಿಯವ ಸೇರಿಸೆಮ್ಮೊಳು ನೂಕು ಕವಿದಿಹ ತಮವ ಸುಖವನು
ಸೋಕಿಸೈ ಕಡೆಗೊಳಿಸು ಚಿಂತೆಯ ಬೇಕು ನಿನ್ನಡಿ ಸೇವೆಯು
ಶ್ರೀಕರನೆ ಚಿಕನಾಗಪುರ ವರದರಸನೆ ಗುರುವಾಸುದೇವನೆ
ತಾಕು ತಡೆ ಬರದಂತೆ ನಿನ್ನೊಳಗೇಕತೆಯ ದಯಮಾಡಿಸೈ ೫

೧೦

ಮರುಗದೇ ನಿಂತಿಹುದೆ ಮನವು ನಿನ್ನಾ
ಅರಿಯದಪರಾಧ ತಾನಳಿಸುತಿರಲೆನ್ನ ಪ

ನೆರೆಯವರ ಮೈಸಿರಿಯ ನೋಡಿ ಹಿರಿಯರ ನಡೆಯ
ಮರೆತು ಧನದಲಿ ಮತಿಯನಳಿದೆಯಾ
ಕರಕೊಂಡು ನರತತಿಯ ಕೆಣಕಿಯಿವರ ಸಹನೆಯ
ಪರಿಪಾಕದಿಂ ನೋಡಿ ಬಂದ ಪೀಡನೆಯ ೧

ಹಿತವರೆಂಬಂತಿರುವ ಹಿಂಸೆಯನಾಳೋಚಿ
ಸುತ ಜೊತೆಯೊಳಾರೋಗಿಸುತ ಜಾರಿ ನಿಲ್ಲುತ
ಸತಿ ಸುತಾದ್ಯರ ಭೋಗಸಾಧನವ ಕೆಡಿಸುತ್ತ
ಪತಿತರಿಂದರಸುತ್ತ ಪಿಡಿಸಲು[ಕಾ]ಯುತ ೨

ಪಾದುಕಾರ್ಚನೆಯನ್ನು ಪಾಲಿಸಿದ ಬಗೆಯನು
ಬೋಧಿಸುತ ಚಿತ್ತವನು ಬೆದರಿಸುವದೆ
ನೀ ದಯಾಸಾಗರನು ನೀಚರುಪಹತಿಯನು
ಸಾದರದಿ ಬಿಡಿಸಿನ್ನು ಸಾಕು ಮುನಿಸನು ೩

ಕಾಲ ದೇಶವ ಕಂಡು ಕಾಪಥವ ಕೈಕೊಂಡು
ಬಾಳಿದರಳು ಕೂತುಂಡು ಭಕ್ತಿ ಮುಂಕೊಂಡು
ಊಳಿಗವ ಬೆಸಗೊಂಡು ಊರೊಳಗೆ ತಿರುಕೊಂಡು
ಬಾಲ ಇರಲರಿದಾಡುಬಡಿಯೆ ಹಿಡುಕೊಂಡು ೪

ಮಂಗಳಾರ್ತಿಯ ಸೇವೆ ಮಾಣುತಿಹುದೇಗೈವೆ
ಕಂಗಳಿಗೆ ನೀ ವಿಭುವ ಕಾಣಿಸಿದೆ ಸುಖವೆ
ತಿಂಗಳೆನಿತಾದರುವೆ ತಿರಿದೂಳಿಗಕೆ ತರುವೆ
ಸಂಗಿನವರೊಳಗಿರುವೆ ಸತತವೆಲೆ ಗುರುವೆ ೫

ತಪ್ಪಿಗನುಸಾರವಾಗಿ ತಿಳಿಯೆ ಶಿಕ್ಷೆಪೆಯಾಗಿ
ಒಪ್ಪದ ಪದವ ನೀಗಿಪೊಳಿತಾಗಿ
ತೆಪ್ಪಗೂಳಿಗಕಾಗಿ ತಗುಲಿಸುವೆ ನೀನಾಗಿ
ಸುಪ್ರಸನ್ನತೆಯಾಗಿ ಸುಖಬಡುವರಾಗಿ ೬

ದುರುಳರಹುದಘದಿವರು ದೂರಿಗೊಳಗಾದವರು
ಚರಣಾಬ್ಜ ಸೇವಕರು ಚಾರುಮತಿಯವರು
ದುರಿತ ಶತವಡಿಸಿದರು ದಾಟುವರು ನಿನ್ನವರು
ಕರುಣಾಬ್ಧಿ ನೀನಿದಿರುಗಾಣೆ ಸುಖಮಯರು ೭

ಸೆರೆಯ ಪರಿಹರಿಸಿನ್ನು ಸುಖಿಸು ಸದ್ಭಕ್ತರನು
ಗುರು ಸುತರ ಚರಣವನು ಕಂಡು ಬದುಕುವೆನು
ಬರಿದೆ ಬೇಡುವೆ ನಾನು ಪಾಲಿಸುವ ವಿಭು ನೀನು
ಶರಣಾಗತಪ್ರಿಯನು ಶಾಂತಿದಾಯಕನು ೮

ಧರೆಯ ಜನರಜ್ಞತೆಯ ದಹಿಸಿ ನಿಜ ಸದ್ಗತಿಯ
ಕರೆದೀವ ಗುರುರಾಯ ವಾಸುದೇವಾರ್ಯ
ಕರುಣ ನಾಗನಗರಿಯ ಸ್ಥಿರಗೈದು ಸುವಸತಿಯ
ಒರೆದೆ ಭವವಿಜಯ ವೇದಾಂತಪದ್ಧತಿಯ ೯

೧೧

ಮರೆಯೋಕ್ಕು ಗುರುವನು ಮರೆತು ಸಂಶಯವನು
ಚರಣದೂಳಿಗವನ್ನು ಚೆನ್ನಾಗಿ ಮಾಡಿನ್ನು ಪ *

* 'ರಾಮ ಪರಾಕು ಪರಾಕು'ಯೆಂಬವರ್ನಾವಲ್ಲದಿದ್ದರೆ 'ವಾಸಿಯಾಯ್ತು ಮನವೆ ಕೊಲ್ಲುವಗಲ್ಲದೆ ಕೊಡೆವಳವಸೋತು' ಎಂದು ಆರಂಭದಲ್ಲಿ ಕೊಟ್ಟಿದೆ.

ಹರಿಯ ಸ್ಮರಣೆಯನ್ನು ಹಾಡಿ ಹಿಗ್ಗುತ ನೀನು
ಪರಮ ಪದವಿಯನ್ನು ಪಡೆಯೆಂದು ಪೇಳ್ದೆನು ಅ.ಪ

ತರುಣಿ ಸುತರು ದ್ರವ್ಯ ತುರು ಮನವಾರ್ತೆಯ
ಹರಿಬಲೆಯೊಳುಬಿದ್ದು ಹಲುಗಿರಿವುದ ನೋಡಿ
ಪರಮವೈರಾಗ್ಯ ಖಡ್ಗದಿ ಮೋಹ ಪಾಶವ
ಪರಿದು ಜ್ಞಾನಾಮೃತ ಪಾನಗೈಯೆಂದೆನು ೧

ಪರಧನವನು ಕಳಬೇಡ ಕೊಲ್ಲುವರೆಂದು
ವರದರು ಮೀರಿಕದ್ದೊಡನೆ ಕೊಳದಿ ಸಿಕ್ಕಿ
ಕೊರಗುತೆಲ್ಲರಿಗೆ ಪಲ್ಗಿರಿವಂತೆ ಬಯಲಿಗೆ
ಬೆರತು ನೀ ಮುಂಗೆಡಬೇಡೆಂದು ಪೇಳಿದೆ ೨

ತಿರಿದುಂಬ ಪಾಪಿಗೆ ತುಪ್ಪ ಸಕ್ಕರೆ ಪಾಲು
ಬೆರೆದ ಮೃಷ್ಟಾನ್ನ ತಾ ಬರೆ ಸುಖದಿಂದುಂಡು
ಯಿರದನ್ಯರೆಂಜಲಿಗೆರಗುವಂದದಿ ಪೂರ್ವ
ದಿರವ ಬಯಸಿ ನೀನೀತೆರದಲಿ ಕೆ[ಡದೆ] ೩

ಹರಿಸ್ಮರಣೆಯ ಮಾಡು ಹರಿಕಥೆಗಳ ಕೇಳು
ಹರಿಯನರ್ಚಿಸಿ ನೋಡಿ ಹರುಷದಿಂ ಕುಣಿದಾಡು
ಹರಿ ಸರ್ವೋತ್ತಮನೆಂದು ಹಸನಾಗಿ ಬಾಳುವೆ
ಹಿರಿಯರೊಪ್ಪುವ ಮಾರ್ಗ ಹೀಗಿರು ನೀನೆಂದೆ ೪

ದೂಷಿಸುವವನಿಂದ ದೋಷ ಪೋಪುದು ನಿನ್ನ
ಪೋಷಿಸುವವನಿಗೆ ಪುಣ್ಯ ಕೈಸಾರ್ವುದು
ರೋಷ ಹರ್ಷಗಳ ದೂರದಿ ಬಿಟ್ಟು
ಶ್ರೀಹರಿದಾಸರ ದಾಸರದಾಸ ನೀನಾಗೆಂದೆ ೫

ಶ್ರವಣಸುಧಾಪಾನ ರುಚಿಯ ಕಂಡರೆ ನೀನು
ಭವದುಃಖವೆಂಬ ಬಾಡಿದಗಂಜಿಗುಡಿವೆಯಾ
ಸುವಿವೇಕತನ ತಾನು ಸುಮ್ಮನೆ ದೊರೆವದೆ
ಅವಿವೇಕತನವ ಬಿಟ್ಟಾನಂದಬಡುಯೆಂದೆ ೬

ಸಾರಿಗೆ ಸಾರಿಗೆ ಸಾರಿದರೆಯು ನಿನ್ನ
ದಾರಿಯ ಬಿಡೆಯಲ್ಲ ದುಕ್ಕ ತೊಲಗದಲ್ಲ
ಹೊರಲಾರೆನು ನಿನ್ನ ಹತ್ತಿರೆ ವಿಧಿ ನನ್ನ
ಸೇರಿಸಿ ಪೇಳಿದೆ ಸುಖಿಯಾಗಿ ಬಾಳೆಂದು ೭

ಸಾರಿದೆ ಸಾರಿದೆ ಕೆಡಬೇಡ ಭವಸುಖ
ಹಾರುವದಿದು ನಿಜವಲ್ಲ ಸನ್ಮುಕ್ತಿಗೆ
ದಾರಿಗೊಡದು ಸತ್ಸಂಗವ ಮಾಡಿ ವಿ
ಚಾರಿಸಿ ನಿನ್ನ ನೀ ಸುಖಮಯನಾಗೆಂದೆ ೮

ಆಶೆಯ ಬಿಡಲೊಲ್ಲೆ ಆನಂದಬಡಲೊಲ್ಲೆ
ಪೊಸದೆ ವಿಷಯದ ಪೇರಡವಿಯೊಳಗೆ
ಮೋಸಗೈವಳು ಮೃತ್ಯುವದರಿಂದ ಶ್ರೀಹರಿ
ದಾಸರ ಜೊತೆಯ ಬಿಟ್ಟೊರ್ವ ಪೋಗದಿರೆಂದೆ ೯

ಬಲ್ಲೆಯ ಬಲ್ಲೆಯ ಗುರುಪದ ಸೇವೆಗೆ
ಬಲ್ಲೆಯ ಬಲ್ಲೆಯ ಹರಿಕಥೆಗೇಳ್ವರೆ
ಬಲ್ಲೆಯ ಬಲ್ಲೆಯ ಹರಿನಾಮ ಸ್ಮರಣೆಯ
ಕೊಲ್ಲುವೆ ಸಟೆಯಲ್ಲಿ ಕೇಳು ನೀ ನೀ ಮೇಲು ೧೦

ಗುರುಕರುಣವದೆಂಬ ಘಾಳಿ ಬೀಸಲಿ ತಾಳು
ತರಗೆಲೆಯಂತ್ತೆತ್ತಿ ತಂದು ಜ್ಞಾನಾಗ್ನಿಯೊಳ್
ಉರುಹಿ ನಿನ್ನಯರೂಪನಡಗಿಸದಿಪ್ಪೆನೆ
ವರಟು ಮಂಡೆಯದೆ ನಿನ್ನೊಡನೇಕೆ ಹಾರಲಿ ೧೧

ಬರಡು ಮನದೊಳೆ ಬರಿಜಗಳವಿದೆಂದು
ಗುರುವಾಸುದೇವಾರ್ಯ ಗುಪಿತದಿಂ ಚಿಕನಾಗ
ಪುರದಿ ಜ್ಞಾನಾಮೃತಪಾನ ಗೈಸಿದುದರಿಂ
ಬೆರೆದೆನಾತನೊಳು ನೀನಿರು ಪೋಗು ಬಯಲಾಗು ೧೨

೧೨

ಮೊರೆಯ ಲಾಲಿಸಬೇಕು ಮರುಗಿ ದಮ್ಮಯ್ಯಾ
ವರದ ಸದ್ಗುರುರಾಯ ವಾಸುದೇವಾರ್ಯ ಪ *

ಜನನೀಯ ಜಠರಾದಿ ಜಪಿಸಿದ ಸ್ಥಿತಿಯಾ
ನೆನೆಯಾದೆ ಮರೆತಂಥ ನೀಚಾ ನಾನಯ್ಯಾ
ಸನಿಹವನ ಸೇರಾದೆ ಸುಜ್ಞಾನರಡಿಯಾ
ಕಣುಗೆಟ್ಟು ದಾರಿಯಕಾಣೆ ಗುಝುರಾಯಾ ೧

ಕಾಮಾದಿ ರಿಪುಗಾಳ ಕೂಟದಿ ನಿಂದು
ಪ್ರೇಮಪಾಶದ ಕಟ್ಟು ಬಿಗಿಯಾಗಿ ಬಂದು
ಭೀಮಸಂಸಾರದಿ ಬಿದ್ದನಿವನೆಂದು
ನೀ ಮನಕೆಚ್ಚರವಿತ್ತು ಸೆಳಕೊಂಡು ೨

ಕೊಳಚೆಯೊಳಿಪ್ಪಾ ಸೂಕರ ವಾಸನೆಯು
ತೊಲಗಿ ಪೋಗಲಿಯೆಂದು ತೋರ್ಪುದೆ ಮತಿಯು
ಹೊಲೆದೇಹ ನಾನೆಂಬ ಹಳೆಯ ಸಂಗತಿಯು
ಬಲಿತಿದೆ ನೀನಿದ ಬಿಡಿಸಿ ಸನ್ಮತಿಯ ೩

ಸಾಲವ ತಂದು ಸವಿ ಸವಿಯಾಗಿ ತಿಂದೂ
ಬಾಳುತಿರೇ ಕೊಟ್ಟವ ಬಡ್ಡಿ ಬೇಕೆಂದು
ಕೇಳಿ ಬಾಧಿಸಲೇತಕೆ ಕಡಗೈದೆನೆಂದು
ಆಲೋಚಿಪಂತೆಚ್ಚರಾಯಿತೆನಗಿಂದು ೪

* 'ಯಿಂದು ನಾನೇನು ಸುಕೃತವ ಮಾಡಿದೆನೊ' ಯಂಬವರ್ನಾ ಎಂದಿದೆ.

ಬರುವುದು ಸುಖವೆಂದು ಬಲುಯತ್ನಗೈದು
ಸೊರಗಿದೆನಲ್ಲದೆ ಸುಖಗಾಣೆ ನೊಂದು
ಕರಣಕೆಚ್ಚರವೊ ಕರುಣಿಸಲ್ಬವಿದು
ಕರಪಿಡಿದುಳುಹೆಂದು ಕೂಗಿದೆನಿಂದು ೫

ಯೀ ದಯಾರಸಕೆ ನಾನೀವೆನೇನುವನು
ಪಾದಪದ್ಮವ ನಂಬಿ ಪಾಲಿಸೆಂಬುವನು
ಆದರಿಸುತ ಭಕ್ತಿಯಾನಂದವನ್ನು
ವೇದವೇದ್ಯನೆ ಕೊಟ್ಟು ಸಲಹು ನೀನಿನ್ನು ೬

ಪುಟ್ಟಿದಂದಿನಿಂದಾ ಮಡಿ ಮಡಿಯಾಗಿ ದುಡಿದು
ಘಟ್ಟಿಗತನವನು ಗಳಿಸಬೇಕೆಂದು
ಹೊಟ್ಟೆ ಹೊರಕರೊಳಾಡಿ ಹುಸಿಯನೆ ನುಡಿದು
ಕೆಟ್ಟು ಸುಖಗಾಣದೆ ಕೂಗಿದೆನಿಂದು ೭

ಸಾಕಾಯಿತಯ್ಯಾ ಸಂಸಾರ ಕೋಟಲೆಯು
ನಾ ಕಾಣೆ ಸುಖವನು ನಿಮಿಷವಾದರೆಯು
ನೀಕರಿಸುವರಿಂದ ನಿರ್ವೇದ ಗತಿಯು
ಸೋಕಲು ನಿನ್ನೊಳು ಸಿಕ್ಕಿತು ಮತಿಯು ೮

ಧರೆಯೊಳಜ್ಞರ ನೋಡಿ ದಯದಿಂದ ಮುದದಿ
ನರದೇಹದಾಳಿ ಚಿಕನಾಗಪುರವರದಿ
ಒರೆದು ವೇದಾಂತರ್ಥವನು ವಿಸ್ತರದಿ [೧]ಉ
ದ್ಧರಿಸಿದೆ[೧] ವಾಸುದೇವಾರ್ಯ ಸುಖ ಪಥದಿ ೯

---

೧. ನೀನಿರಿಸಿದೆ – ಎಂಬ ಪಾಠಾಂತರ ಹಸ್ತಪ್ರತಿಯಲ್ಲೇ ಇದೆ.

(ಈ) ಸಾಮಾಜಿಕ ಕೃತಿಗಳು

೧೩

ತೊಲಗು ನೀ ತೊಲಗಿನ್ನು ಅಭಿಮಾನವೆ
ಅಲೆಬಡಿಸದಿರೆನ್ನನೂ ಹಲವು ಜನರ
ಕಾಲಕೆಳಗೆ ನಿಲ್ಲಿಸಿಯನ್ನ ಹೊಲೆಗೆಲಸವ ಮಾ
ಡಲೆಳಸಿ ನೆಗ್ಗಿದೆಯಲ್ಲ ಪ

ಸತಿಸುತ ಪೋಷಣೆಯು ಮುಖ್ಯವು ಮಾತಾ
ಪಿತೃಗಳಾರಾಧನೆಯು ಬಳಗ ಬಂಧು
ತತಿಗಳ ಮನ್ನಣೆಯು ಕುಲ ಜಾತಿ ದೇ
ವತೆಯ ಪೂಜಿಪ ಹಬ್ಬವು ಬಿಡಕೂಡದು
ವ್ರತ ಉಪವಾಸವಾರತಿಯಕ್ಷತೆಯು ಮುಂಜಿಯು
ಸುತೆಗೆ ಮದುವೆಯೆಂದು ಮತಿಗೆಡಿಸಿದೆಯಲ್ಲ ೧

ಅರೆಘಳಿಗೆಯು ನಿಲ್ಲಲು ವೇಳೆಯ ಕೊಡ
ದೆರಗಿಸಿ ವಿಷಯದೊಳು ನಾನಾ ಬಗೆ
ಹರುಬಿಗೆ ಹರುಷಿಸಲು ಮನವನೀ
ಕೊರಗಿಸಿ ಕುಣಿಸುತಲು ಒಂದೇ ಕ್ಷಣ
ಹರಿನಾಮ ಸ್ಮರಣೆಗೆ ತೆರಹುದೋರಿಸದಾಯು
ಹರಿದು ಪೋಗುವ ಹಾಗೆ ಕರಗಿಸಿದುದೆ ಸಾಕು ೨

ಶ್ರವಣಕೆ ಮನವಿತ್ತೆಯಾ ನಾಮ ಸ್ಮೃತಿ
ಸವಿಯ ಸೇವಿಸಬಿಟ್ಟೆಯ ಸಜ್ಜನರೊಳೊಂ
ದುವ ದಾರಿಯ [ತೋರಿ]ದೆಯ ಎಂದಾದರು
ಶಿವಸೇವೆಗಳ ತಂದೆಯ ಹೀಗಾಗುವ
ಹವಣನರಿಯದೆ ಸಂಗವ ಮಾಡಿ ನಿನ್ನೊಳಗ
ವಿವೇಕವನು ಪಡೆದವನಾದೆನಯ್ಯಯ್ಯೊ ೩

ಕಂಡವರೊಡವೆಯನು ತಂದು ಕರೆದು
ಹಿಂಡು ಬಳಗವನ್ನು ಮನ್ನಿಸಿಯವ
ಕೊಂಡಾಡೆ ಹರುಷವನು ತೋರಿಸಿ ಬಹ
ಭಂಡಾಟನಡತೆಯನು ಕರೆಸಿಯನ್ನ
ಗುಂಡಿಗೆ ನೂಕಿಸೆ ಕಂಡೆ ನಿನ್ನಾಟವ
ಮೊಂಡಮುಂಡೇದೆನ್ನೀ ಕೂಗಕೇಳಿ ಬೇಗ ೪

ಶ್ರೌತ ಸ್ಮಾರ್ತದ ಬಟ್ಟೆಯ ಹೊಂದುವರೆ ನೀ
ನೋತು ಮಾರ್ಗವ ತೊಟ್ಟೆಯ ಅನ್ಯಾಯದ
ರೀತಿಯ ನೀ ಬಿಟ್ಟೆಯ ನರಕಬಪ್ಪ
ಭೀತಿಯ ನೀತೊಟ್ಟೆಯ ಯೇನೆನ್ನದೆಲೆ
ಕಾತರಿಸುತ ಕಾಮಕಾತು ಕ್ರೋಧವ ಮಾಡಿ
ಮಾತಿಗಾದರು ಒಮ್ಮೆ ಸೋತವನಾದೆಯ ೫

ಕಲಹವ ಜನರೊಳಗೆ ಗಂಟಿಕ್ಕಿತು
ತೊಲಗಿಸಿ ಬಯಲೊಳಗೆ ನಿಲ್ಲಿಸಿಯೆನ್ನ
ಹಲವು ಬಗೆಯ ಮಾತಿಗೆ ಗುರಿಯ ಮಾಡಿ
ಬಳಲಿ ಬಾಡುವ ರೀತಿಗೆ ಕಂಗೆಡಿಸಿದೆ
ಕಾಲದೊಳು ಧನದೊಳು ಬಲದೊಳು ಛಲದೊಳು
ನೆಲೆಗೊಂಡು ನೀಯೆನ್ನ ಥಳಿಸಿದುದೇ ಸಾಕು ೬

ಅರಿಯದಾದೆನು ನಿನ್ನನು ಅದರಿನಿಂದ
ಹುರಿದೆ ನೀನೆನ್ನುವನು ಚಿಕ್ಕನಾಗ
ಪುರದೊಳಗಜ್ಞರನು ರಕ್ಷಿಸಲಾಗಿ
ಗುರುವಾಸುದೇವಾರ್ಯನು ನೆಲಸಿಹನು
ಮರೆಯೊಕ್ಕೆರಗಿ ನಿನ್ನ ಪರಿಯ ಪೇಳಲು ಜ್ಞಾನ
ದುರಿಯೊಳು ದಹಿಪನೆಚ್ಚರ ನಿಲಬೇಡಿನ್ನು ೭

೧೪

ಪೋಗದಭಿಮಾನವೇಗೈವೆನಕಟಾ
ಆಗದಾನಂದಪದ ಇದರಿಂದಲಕಟಾ ಪ

ತನುವೆನ್ನದೆಂದು ಪೋಷಿಸಿ ಪೊರೆದಫಲವೇನು
ಧನವೆನ್ನದೆಂದು ಸಾಧಿಸಿದುದೇನು
ಮನವೆನ್ನದೆಂದು ಮತಿಯನು ಪಡೆದ ಬಗೆಯೇನು
ಅನುಕೂಲವಾಗಿ ಬಾಳಿಸಿದುದೆ ತಾನು ೧

ವನಿತೆಯೆನ್ನವಳೆಂದು ಒಡಲಾದ ಬಗೆಯೇನು
ತನುಜರೆನ್ನವರೆಂದು ತಡಿಗಂಡುದೇನು
ಮನುಜರೆನ್ನವರೆಂದು ಮೃತ್ಯುತೊಲಗುವದೇನು
ಇನಿತು ವಿಧದಲಿ ಸುಖವ ಕಾಣದೆಯಿನ್ನು ೨

ಇದರಿಂದ ಬಂತು ಋಣಬಾಧೆ ಮಾಸಿತು ಬೋಧೆ
ಒದಗಿದಾ ವಿರತಿಯನು ನೀಗಿ ನಿಂದೆ
ಮದ ಹೆಚ್ಚಿ ಮೈಮರೆದೆ ಮೋಹಕ್ಕೆ ಒಳಗಾದೆ
ಎದೆಯಲಿ ವಿಷಯಸುಖಕಾಗಿ ಮತಿದೊರೆದೆ ೩

ಆವ ಜನ್ಮಾಂತರದ ಪೈಶಾಚವೋ ಕಾಣೆ
ಆವ ಮಾಂತ್ರಿಕನಿದನು ಬಿಡಿಸುವನೊ ಕಾಣೆ
ಆವ ವ್ರತನಿಯಮಗಳಿಗಂಜುವುದೊ ನಾ ಕಾಣೆ
ಆವ ಜಪಗೈದಿದನು ಕಳೆಯಲೊ ಕಾಣೆ ೪

ಕರುಣಿ ಚಿಕನಾಗಪುರವರನಿಲಯ ಎನ್ನೊಡೆಯ
ಗುರುವಾಸುದೇವಾರ್ಯ ಗೂಢಚರ್ಯ
ಮರೆಯೊಕ್ಕೆ ನಿನ್ನಡಿಯ ಮಾನಪೈಶಾಚಭಯ
ಹರಿವಂತೆ ಮಾಡು ನಮಿಸಿದೆನು ದಮ್ಮಯ್ಯ ೫

೧೫

ಬರಿದೆ ಬಿಡದೆನ್ನ ಹರುಬೆಂಬೆಯೋ
ತೆರಹುಗೊಡದು ಹರಿಸ್ಮರಣೆಗೆಂಬೆಯೊ ಪ

ಒಲ್ಲೆನೆಂದರೆ ನಿನ್ನ ಕೊಲ್ಲುವುದೆ ಬರಿದು
ಸೊಲ್ಲಿಸದಿರೆ ನಿನ್ನನೀಯುವದೆ
ತಲ್ಲಣಗೊಳದಿರೆ ವಟಯನೊಡೆಯುವದೆ
ಬಲ್ಲೆನೆನ್ನಲಿದಾರಲು ಬಾಯಬಡಿವದೇನೊ ೧

ಪರರೊಳಿಪ್ಪುದೊ ನಿನ್ನ ಕರಣದೊಳಿಪ್ಪುದೊ
ಹರುಬುತಿಂ ಬೀದಿಯಲಿರುತಿಪ್ಪುದೊ
ತಿರುಗುತಿಪ್ಪುದೊ ಬೆಂಬಿಡದೆ ಸಾಲವಕೊಂಡಿಹುದೊ
ಬರಿದೆ ಪತ್ರವೊ ಪೇಳು ಮರುಳೆ ೨

ಪರರು ನುಡಿಯುತಿರೆ ಮರುನುಡಿಯುವೆ ನೀನೆ
ಕರೆಯದಿದ್ದರು ಪೋಗಿ ಬೆರೆಯುತಿಹೆ
ತೊರೆದು ಬಿಡುವ ಬುದ್ಧಿ ಬರದಾದ ಕಾರಣಾ
ಉರುಳಿಗೆ ಸಿಕ್ಕಿದುರುಗನಂತೆ ಹೊರಳುವೆ ೩

ಆಶಾ ಪಿಶಾಚಿ ಹಿಡಿದ ಕಾರಣ ನೀನು
ಮೋಸ ಹೋಗಿಯೆ ನೀನೆ ಮುಂಬರಿದು
ಹೇಸದೆ ಹೀನಾಯಗೆ ಮೈಗೊಡುವೆ ಬಪ್ಪ
ನಾಶವನರಿಯೆ ವಿರತಿಯಿರುವುದಾ ೪

ಬೆರೆದು ಸಂಸಾರದೊಳಿರುವಂತೆ ಚಿಕ್ಕನಾಗ
ಪುರವಾಸಿ ಗುರುವಾಸುದೇವಾರ್ಯನಾ
ಚರಣ ಸೇವೆಯೊಳ್ಮನವಿರಿಸಿ ಬಾಳ್ದರೆ ಸುಖ
ಶರಧಿಯಾಗುವೆ ದುಃಖವರುಗಸಿರದು ನಿನ್ನ ೫

೧೬

ಹಳೆಯವಾಸನೆ ನಿನ್ನ ಹೀರುವದಣ್ಣ
ಬಳಸಿದೆ ಬಹುವಾಗಿ ಬಿಡುವದೆಂತಣ್ಣ ಪ

ಭವರೋಗಿಯಾಗಿದ್ದು ಬಾಯ ಸವಿಗಾಗಿ
ಅವಿವೇಕ ಪಥ್ಯಗಳ ಸವಿದು ಮೂರ್ಛೆದೋಷವು
ಮೂರ್ಛೆಯ ಕವಿದು ಮನ ತೇಲಿ ಬಂತಾಗಿ
ಸುವಿವೇಕ ಮುಚ್ಚೋಯಿತೆ ತೋರದಾಗಿ ೧

ರಾಮನ ನಾಮ ರಸಾಯನವನ್ನು
ನೇಮದಿಂ ಸೇವಿಸು ಬಿಡದಿರುಯಿನ್ನು
ಕಾಮಾಲೆ ಬರದಂತೆ ಕರಣಗಳನ್ನು ಸ
ದಾ ಮನಗುತೆಯಿಂದರಿತರೆ ಸುಖಿಯಿನ್ನು ೨

ಕರುಣದಿಂ ಚಿಕ್ಕನಾಗಪುರದೊಳಗಿರುವ
ಗುರುಪರವಾಸುದೇವಾರ್ಯನ ಪದವ ಪಿಡಿ
ದರೆ ಸುಜ್ಞಾನಾಮೃತವ ನಿನಗೆರೆವ
ಮರೆವೆ ಹಳೆಯ ವಾಸನೆಯ ನಿನ್ನಿರವ ೩

ತಿಮ್ಮಪ್ಪದಾಸರ ಕೀರ್ತನೆಗಳು

‘ತಿರುಪತಿ ವೆಂಕಟ’

(ಅ) ಶ್ರೀಹರಿಸ್ತುತಿಗಳು

೧

(೧) ಶ್ರೀ ಹಯಗ್ರೀವ

ಶ್ರೀ ಹಯಮುಖ ಲಕ್ಷ್ಮೀನಾರಾಯಣ ಶ್ರೀಹರಿಕೇಶವ ನಮೊ ನಮೊ
ಮಹಿಸೂರ್ಪುರ ಪ್ರಭುಗುರು ಪರಕಾಲಮಠಸ್ಥಿತಿಧಾಮ
ನಮೋ ನಮೋ ಪ

ಮಧುಕೈಟಭದೈತ್ಯತುಲ್ಯ ದ್ಯಂಚನುಹಯ ವದನುಡವೈತಿವಿ ನಮೋ ನಮೋ
ವಿಧಿಸತಿಶಾರದ ಚಿರಕಾಲಾರ್ಚನ ಕ್ರತಯಾಮೊದಿತ
ನಮೋ ನಮೋ ೧

ಅರಿದರಕರಧರ ಅಬ್ಜ ಸುರವರ ಪುರಹರಾದಿನುತ ನಮೋ ನಮೋ
ಮುರಹರಭವಹರಮುಚುಕುಂದಾವನ ಧರಾಧರಾಧರ
ನಮೋ ನಮೋ ೨

ಶರಸ್ಮರಕುಶಲವ ಶರಕಮಲಜಪಿತ ಸರಸಿಜನಯನ ನಮೋ ನಮೋ
ಪರಮಪುರುಷಸಿರಿಯುರಕೌಸ್ತುಭಮಣಿ ಹಾರಾಲಂಕೃತ
ನಮೋ ನಮೋ ೩

ಘನಗಿರಿಸಂಸ್ಥಾನಾಧಿಪಗುರು ಯಾಗಮಭೂಮಿಜಯುತ ನಮೋ ನಮೋ
ದನರಗ ಶ್ರೀಮದ್ವೇದಾಂತಾರ್ಯಾರ್ಚನಲೊನ್ನೈತಿವಿ
ನಮೋ ನಮೋ ೪

೨

(೨) ಶ್ರೀರಂಗನಾಥ ಸ್ತುತಿ

ರಂಗನಾಯಕ ನಿನ್ನ ಮಂಗಳಾಕೃತಿಗಂಡು
ಹಿಂಗಿದುದು ಭವ ಬಂಧವೂ ಪ

ಗಂಗಾಜನಕ ಖಗೊತ್ತುಂಗ ತುರಗನೆ ದೇವ
ರಂಗಾಪುರಾಗಾರನೆ ಸ್ವಾಮಿ ಅ.ಪ

ದುರಿತ ಕೋಟಿಗಳ ಪರಿಹರಿಸಿ ರಕ್ಷಿಪ ನಿನ್ನ
ಬರಿನಾಮಸ್ಮರಣೆಯೊಂದು
ಪರಿಪರಿಯ ಭವದ ಕೋಟಲೆಯ ಬಿಡಿಸುವ ನಿನ್ನ
ಚರಿತೆಯ ಶ್ರವಣವೊಂದು
ಅರಿತರಿಯದೆಸಗಿದಘರಾಶಿಯ ದಹಿಸಿ ನಿನ್ನ
ಶರಣಜನ ಸಂಗವೊಂದು
ಇರಲಿವನು ಬಯಸಿ ಬೇಡುವೆನೆಂದು ನಿನ್ನ
ಸಿರಿಚರಣದೆಡೆಗೈದಿ ಸಂತಸದಳೆದುನಿಂದೂ ೧

ಆವಜನ್ಮಾರ್ಜಿತದ ಸುಕೃತ ಪರಿಪಾಕವೊ
ದೇವ ನಿನ್ನಯ ಕರುಣವೋ
ಸಾವಧಾನದಿ ನಿನ್ನ ನೆನೆದು ಪೂಜಿಸಿ ನುತಿಪ
ಸೇವಕರ ಪ್ರೇಮದೊಲವೋ
ಜೀವರಾಶಿಗಳೊಳುದಯಿಸಿ ಮಡಿಯೆ ಪುಟವಿಟ್ಟ
ಭಾವಬಂದೀ ಬಣ್ಣವೋ
ಆವುದನು ತಿಳಿಯದಜ್ಞನನು ನಿನ್ನವರೊಯ್ದು
ಪಾವನಕ್ಷೇತ್ರವನು ಪೊಗಿಸಿದತಿಶಯವೋ ೨

ಗುರು ವಾಸುದೇವಾರ್ಯನಾಗಿ ಚಿಕನಾಗಾಖ್ಯ
ಪುರದಿ ಮಹಿಮೆಯ ತೋರ್ದೆಯ್ಯ
ಕರೆದಜ್ಞರಜ್ಞತೆಯ ಪರಿದು ಸುಜ್ಞಾನ ಸುಧೆ
ಯೆರೆದು ನೀನೆ ಪೊರೆದೆಯ್ಯ
ಪರದೇಸಿ ವೇಷದಿಂ ಮೂಢ ಜನರಿಗೆ ಭಕ್ತಿ
ಯಿರವ ಕೈಸಾರಿಸಿದೆಯ್ಯ
ಮರೆಯೊಕ್ಕೆ ನಾನು ತಿಮ್ಮದಾಸ ದೇವ ಪರಾಕು
ಕರವಿಡಿದು ಕಾಯಬೇಕೆನ್ನ ವೆಂಕಟರಮಣ ೩

೩

(೩) ಶ್ರೀಕೃಷ್ಣ ಸ್ತುತಿಗಳು

ತಾ ಕಾಯುತಿದ್ದ ಕೃಷ್ಣನು ಗೋಪಾಲರನೂ
ಗೋಕುಲದಲ್ಲಿ ಗೂಢನೂ ಪ

ಯೀಕುಂಭಿನಿಯೊಳಗಿರುತಿಹ ದುಷ್ಟರ
ನೂಕುವ ಬಲದಲಿ ಅನುಪಮ ಧೀರಾ ಅ.ಪ

ಅಸಿತ ಪಕ್ಷವು ಬಂದುದೂ ಮಾಸಗಳೊಳು
ಎಸೆವೇಕಾದಶಿಯೆಂಬುದು ಬರಲು ಅಂದು
ಬಸವಾಸುರಾನಾ ಬಡಿದು ತಾನಂದು ವ್ರಜದಿ ವಸುಧೇಶ ನಿದ್ದನೊಲಿದು
ಅಸುರನು ಅಳಿಯಲು ಆ ವ್ರಜವುಳಿಯಲು
ಹಸುಗಳು ಹೆಚ್ಚಲು ಹರಿ ತಾನಲಿಯಲು
ವಸಗೆವ್ರಜದೊಳಗೆ ಬಹುಮಸಗೆ ಹೆಸರಾಗೆ ೧

ದ್ವಾದಶೀ ದಿವಸಾದಲ್ಲಿ ಉದಯಕಾಲ
ವಾದುದು ವಿಹಿತದಲ್ಲಿ ಶ್ರೀಕೃಷ್ಣನಿಗೆ
ಬೋಧವಾಗಲು ಬೇಗದಲಿ ಬಾಲರು ಸಹಾ ಮಾಧವಾ ಮುದದಿಂದಲಿ

ಕಾದಿರೆ ಗೋವ್ಗಳ ಕಾನನಮಧ್ಯದಿ
ಕಾದಲು ಬಂದಾ ಕೇಶಿಯನುದಯದಿ
ಕಾದಿ ಅಸುವಸಿಗಿದಿ ವೊದವಿದೀ ಈ ವಿಧದಿ ೨

ವೃಂದಾಖ್ಯವಾದವನಾದಿ ಗೋಪಾಲಕರಾ
ವೃಂದದಾ ವರಸ್ತೋಮವಾಮದಿ ನಿಂದಿದ್ದನಾಗಾ
ಕಂದರ್ಪಕೋಟಿತೇಜದಿ ಕುಂಭಿನಿಯನ್ನು ಹೊಂದಿಸಿದನು ಹರುಷದಿ
ಮಂದರಧಾರನು ಮಂಜುಳ ಮಹಿಮನು
ನಿಂದಿಹ ನೀರನು ನಿಜಗುಣಧಾಮನು
ಅಂದು ಅಜಬಂಧು ತಾನೆಂದೂ ಅಲ್ಲಿನಿಂದು ೩

ಘನ ನೀಲಾಳಕದ ವೃಂದ ಮಿಶ್ರಿತವಾದಾ
ಮಣಿಮಯ ಮಕುಟದಿಂದಾ ಮೂಡುವ ಕಾಂತಿ
ಪಣೆಯಲ್ಲಿ ಮೊಳೆಯುವಂದಾ ಕಸ್ತುರಿತಿಲಕ ಗಣನೆಗೆ ಬರುವ ಛಂದಾ
ಗುಣಿಸುವರಾರಿದ ಗುಣನಿಧಿಯೊಪ್ಪಿದ
ಪ್ರಣತಪ್ರೇಮದ ಪದ ಮುಖ ಪದ್ಮದ
ಗುಣನೂ ಗುರುತರನೂ ವಿನಯವನೂ ವಿವರಿಪನೂ ೪

ಸಿಂಗಾರಿಯ ಸೋಲಿಸುವಾ ಸುಭ್ರುವದಿಂದಾ
ಮಂಗಳವಾದ ಮುಖದ ಮನ್ನಿಸುತಿಹ
ಕಂಗಳ ಕೋಡಿವರಿವಾ ಕಟಾಕ್ಷವನ್ನೂ ಸಂಗಿಸಿದ ಸುಸ್ಮಿತವಾ
ತೊಂಗುತ ತೋರಲು ತನ್ನಾಸಿಕವೂ
ರಂಗಿಸಿ ರಾಜಿಸೆ ರದನಚ್ಛದವೂ
ಹೊಂಗೆ ಯೀರಂಗೆ ನೋಳ್ಪಂಗೆ ಭವಹಿಂಗೆ ೫

ಕುಂಡಲಗಳ ಕಾಂತಿಯೂ ಕರ್ನಾಗಳಲ್ಲಿ
ಮಂಡಿತವಾಗಿ ಮತ್ತೆಯೂ ಮುಕುರದಂಥಾ
ಗಂಡ ಸ್ಥಳಗಳಲ್ಲಿಯೂ ಗೋಚರಿಸುತ ದಿಂಡಾಗಿ ತೋರೆ ದೀಪ್ತಿಯೂ

ಪುಂಡರೀಕಾಕ್ಷನು ಪೊಳೆಯುತಲಿದ್ದನು
ಹಿಂಡುತ ಖಳರನು ಹೆದರುವ ಜನರನು
ಕಂಡೂ ಕರಕೊಂಡೂ ಕೈಕೊಂಡೂ ಹುರಿಗೊಂಡೂ ೬

ವೇಣುವ ವಿವರಿಸಲು ವೀರನಾ ಮುದ್ದೂ
ತಾನೊಂದು ತೇಜ ತೋರಾಲು ಅಂಗುಲೀಗಳು
ಅನುಕೂಲಗಳಾಗಾಲು ಉಂಗುರಗಳೊಳು ಮಾಣಿಕ್ಯಗಳು ಮೂಡಲು
ಭಾನುವ ಮೀರಲು ಬಾಹುಗಳೊಪ್ಪಲು
ಗಾನಗಳಾಗಲು ಗೋವ್ಗಳು ಕೇಳಲು
ತಾನು ತೋರಿದನು ಜಾಣುವನು ಜಗಧರನೂ ೭

ಭೋಗಿಯ ಭೋಗದ ಹಾಗೆ ಬಾಹುಗಳಿರೆ
ತೂಗಿ ಜಾನುಗಳ ತಾಗೆ ಕೇಯೂರಗಳ
ರಾಗ ರಂಜಿತಗಳಾಗೆ ಕಂಕಣವಲಯ ಯೋಗದಿಂದಿರೆ ಹೀಗೆ
ಆಗಿನ ಕಾಲದಲಮರಿದ ಶೃಂಗದ
ಯೀಗುರು ಕೃಷ್ಣನ ಇಷ್ಟ ಕೊಳಲಿನ
ಯೋಗೀ ಇಹಭಾಗೀ ಗತರಾಗೀ ಗುರಿಯಾಗೀ ೮

ಕಂಬುಕಂಧರದಿಂದಲೂ ಅಲ್ಲಿರುತಿಹ
ತೊಂಬೆ ತಾರಹಾರಗಳು ಲಕ್ಷ್ಮಿಯು ತಾನು
ಇಂಬೀನುರದಲಿರಲು ಕೌಸ್ತುಭಕಾಂತಿ ತುಂಬಿ ನಾಭಿಯ ತಾಕಲು
ಅಂಬುಜ ಸಂಭವನಾಲಯವಿರಲು
ಜೃಂಭಿಸಿ ಮಾಲೆಯು ಜೋಲಿಡುತಿರಲೂ
ನಂಬೀ ಬಹುತುಂಬೀ ಯಿಹವೆಂಬೀ ಜಗದಿಂಬೀ ೯

ಕಟಿತಟದತಿಶಯವು ಕಾಂಚಿಯಧಾಮಾ
ಸ್ಫುಟವಾಗಿ ಸ್ವರ್ಣವಸ್ತ್ರವು ಊರುಗಳಲ್ಲಿಗೆ
ಘಟಿಸಿರೆ ಗೂಢವಾದವೂ ಜಾನುಗಳಿಂದ ಪಟು ಜಂಘೆ ಪುದುಗಿಹವೂ
ಕಟಕಗಳಿಂದಲು ಕಡುಚೆಲುವೆನ್ನಲು
ಅಟಸುತಲಡಿಗಳು ಅತಿಮೃದುವೆನ್ನಲು
ದಿಟನೂ ನರನಟನೂ ಭವತಟನೂ ಪಟುತರನೂ ೧೦

ಕಮಲ ಸೋಕಲು ಕಂದುವ ಲಕ್ಷ್ಮೀಯಕರ
ಕಮಲಕೆ ಕಾಂತಿಯನೀವ ಯೋಗಿಯ ಹೃದಯ
ಕಮಲದಿ ಕುಳಿತಿರುವ ಯೀ ದಿವ್ಯಪಾದ ಕಮಲವಕಾಣಿಸುವಾ
ಕಮಲೆಯ ಕಾಂತನ ಕಮಲಜ ಜನಕನ
ಕಮಲವ ಕಾವನ ಕಾಂತಿಯ ಮೀರ್ವನ
ಕ್ರಮವೂ ಕಾಮದವೂ ಶ್ರಮ ಶಮವೂ ಶೋಭನವೂ ೧೧

ಬಲಿಯ ಬಳಿಗೆ ಬಂಜವು ಭಾಗ್ಯವನಿತ್ತು
ಸಲಹಿದ ಸೌಮ್ಯಗಳಿವು ಬ್ರಹ್ಮನು ಬಂದು
ತೊಳೆಯಲು ಬಂದು ತೋರುತಿದ್ದವು ಆ ಪಾದಗಳೆ ಇಳೆಯೊಳಗಿರುತಿಹವೂ
ಕಲಿಮಲಹರಗಳು ಕಲಿಗಳ ಕಾವವು
ತಾಳಿದವು ನಾಗನ ತದ್ವಶವಾಗಲು
ಸಿಲುಕೀ ಸಿರಿತುಳುಕೀ ಅಘಕಲಕೀ ಅವು ನಿಲುಕೀ ೧೨

ಅಂಕುಶವರವಿಂದವು ಧ್ವಜವಜ್ರ
ವಂಕೀತವಾಗಿಯಾಡ್ಯಾವು ಲಕ್ಷ್ಮಿಯ ಕುಚ
ಕುಂಕುಮವನ್ನು ಕದ್ದವು ಭೂಮಿಗೆ ಪಾದ ಪಂಕಜಗಳು ಬಂದಾವು
ಕಿಂಕರರಭಿಮತ ಕಂಕೆಯನಟ್ಟುತ
ಮಂಕುಗಳೆನಿಸುತ ಮಲೆವರ ಮುರಿಯುತ
ಶಂಕೆ ಸಲೆ ಕೊಂಕೆ ಹೊರೆಯಿಂಕೆ ಸಿರಿಸೋಂಕೆ ೧೩

ಈ ರೀತಿಯಲಿ ಈಶನು ಇರುತಲಿರೆ
ನಾರದ ಬಂದು ನಿಂದನು ಕಾಣುತ ಕೃಷ್ಣ
ಕಾರುಣ್ಯ ನಿಧಿ ಕೇಳ್ದನು ಕ್ಷೇಮಗಳನು ತೋರುತ ರೂಪವ ತಾನು
ವಾರಿಜನೇತ್ರನು ವರದವರೇಣ್ಯನು
ಮೀರದೆ ಮುನಿಯನು ಮಾತನು ನುಡಿದನು
ಸಿರೀ ಅನುಸಾರೀ ಬಗೆದೋರೀ ಮುರವೈರೀ ೧೪

ಅರಿತನು ಆತನನುವ ಆ ಕಂಸಗಾಗ
ಅರುಹಿ ತೋರಿಸಿದರ್ಥವ ಅದು ತನ್ನ ಕಾರ್ಯ
ನೆರವೇರುವತಿಶಯವ ತಾನಾಗಿ ಮುನ್ನ ಪಿರಿದಾಗಿ ಪ್ರೇರಿಸಿರುವ
ಕರುಣಾವನಧಿಯು ಕಾರ್ಯವ ತೋರಿಯು
ಮುರಹರಮೂರ್ತಿಯು ಮುಂದಿರುವಲ್ಲಿಯು
ಅರಿತೂ ಅಲ್ಲಿಕುಳಿತೂ ಬರೆಹೊತ್ತೂ ಯಿದಿರಿತ್ತು ೧೫

ಕಾಣುತ ಮುನಿಕೃಷ್ಣನ ಮಾನಸದಲ್ಲಿ
ಧ್ಯಾನಿಸಿದನು ದೇವನ ತಾ ಬಂದುದನ್ನು
ತಾನು ತೋರಿಸಲು ತತ್ತ್ರಾಣ ಬಂದಾಗ ನಮಿಸಿ ಪ್ರಾಣೇಶಗತಿಪ್ರವೀಣಾ
ಕೃಷ್ಣಾ ಕಂಸಗೆ ಹೊದ್ದುವ ರೀತಿಗೆ
ಶ್ರೀನಿಧಿಯಾದಗೆ ಸೂಚಿಸಿ ಸ್ವಾಮಿಗೆ
ತಾನು ಅಜಸೂನು ಅರುಹಿದನು ಅರಿತದನೂ ೧೬

ಮಾನುಷಮೂರ್ತಿಯಾಗಿಯೆ ಭೂಮಿಗೆ ಬಂದು
ಆನತರನು ಆಳಿಯೆ ಅರ್ಥವ ಸಲಿಸಿ
ಧೇನುವಾಗಿಹೆ ಧೊರೆಯೆ ಯೆನ್ನುತ ಹೀಗೆ ಆನತನಾಗುತಲಿಯೆ
ಮಾನಸಪುತ್ರನು ಮಾತನು ನುಡಿದನು
ಶ್ರೀನಿಧಿ ತಿರುಪತಿ ವೆಂಕಟರಮಣನು
ತಾನೂ ತಾಳಿದನೂ ಮಾನಸನೂ ಮಾಡ್ದುದನೂ ೧೭

೪

(ಸತಿಪತಿಭಾವ)

ನೋಡಿ ನಿನ್ನನು ಧನ್ಯಳಾದೆನು ಮಾಡಿ ಕೃಪೆಯನು ಮನ್ನಿಸೂ
ಬೇಡಿಕೊಂಬೆನು ಭವವ ಮುಂದಕೆ ನೀಡದಂಘ್ರಿಯೊಳೊಂದಿಸೂ ಪ

ಕೃಷ್ಣ ನಿನ್ನನು ಮುದ್ದನಾಡುತ ಕಷ್ಟವನು ಕಡೆಗಾಂಬೆನೊ
ಇಷ್ಟದೈವವು ನನ್ನ ಜಠರದಿ ಪುಟ್ಟೆ ನಿನ್ನನು ಕಂಡೆನೊ
ದುಷ್ಟಕರ್ಮಗಳೆಲ್ಲವನು ನೆರೆ ನಷ್ಟಗೈಯುವ ದೇವನೊ
ಪುಟ್ಟಮಗುವಾಗಿರಲು ಕೇಶವ ಮುಟ್ಟಿಲಾಲಿಪಳಾದೆನೊ ೧

ಬಟ್ಟಚೆಲುವಿನ ರತ್ನದರಳೆಲೆ ಕಟ್ಟಿ ಬೊಪ್ಪದೊಳೊಲೆಯಲೂ
ಪುಟ್ಟ ಮಾಗಾಯಿಗಳು ಕಿವಿಗಳವಟ್ಟು ಕದಪುಗಳೊಪ್ಪಲೂ
ನಟ್ಟನಡು ಪಣೆಯಲ್ಲಿ ಕತ್ತುರಿಬಟ್ಟು ಬೆಡಗನು ಬೀರಲೂ
ಇಟ್ಟ ಕಪ್ಪಿನ ಕಣ್ಗಳೆಸೆಯಲು ಬಿಟ್ಟಬಾಯಲಿ ಸವಿಯಲು ೨

ಮುತ್ತು ರತ್ನಗಳನ್ನು ತೆತ್ತಿಸಿ ಸುತ್ತಕಾಂತಿಯ ಬೀರುವ
ಉತ್ತಮದ ಮಕುಟವನು ನಿನ್ನಯ ನೆತ್ತಿಗಿಡುವೆನು ಕೇಶವ
ಮತ್ತು ಕಂಕಣಗಳನು ಕರಗಳಿಗಿತ್ತು ಕಟ್ಟುವೆ ಪವಳವಾ
ಸತ್ಯವಂತನೆ ನೀನು ಶಿಶುತನವೆತ್ತೆ ಪಡೆದೆನು ಭಾಗ್ಯವಾ ೩

ಸನ್ನುತನೆ ಪದಕಗಳ ಸರಗಳ ನಿನ್ನ ಕೊರಳಿಗೆ ಕಟ್ಟಿ
ಚಿನ್ನ ಮುಕ್ತದಿ ಪೊಳೆವ ಕೌಸ್ತುಭವನ್ನು ಉರಕಳವಡಿಸುವಾ
ರನ್ನ ಮಾಣಿಕದುಡಿಯ ಸೂತ್ರಗಳನ್ನು ಕಟಿಯಲಿ ರಚಿಸುವಾ
ಇನ್ನು ಬಹುವಿಧವಾಗಿ ಮನ್ನಿಪುದನ್ನು ವಹಿಸಿದೆ ದಾಸ್ಯವಾ ೪

ಕಟ್ಟಿ ಘಂಟೆಯ ಸರವ ಕಟಿಯಲಿ ಪುಟ್ಟ ಶ್ರೀಮೃದುಪಾದವಾ
ಮುಟ್ಟಿ ಕೈಯಿಂದಂದುಗೆಗಳ ನಾನಿಟ್ಟು ಘಲಿಘಲಿಗುಟ್ಟುವಾ
ಬಟ್ಟಗೆಜ್ಜೆಯ ಸಣ್ಣಸಾಲ್ಗಳ ದಟ್ಟಗೊಳಿಸೀಯೆಂದವಾ
ನೆಟ್ಟದೃಷ್ಟಿಯಲೀಕ್ಷಿಸುತ ಹೊರಗಟ್ಟಿಬಿಟ್ಟೆನು ಕ್ಲೇಶವಾ ೫

ಒಂದು ಸ್ತನವನು ಸವಿಯುತಲೆ ಮತ್ತೊಂದು ಸ್ತನವನು ಕರದಲಿ
ತಂದು ವದನದೊಳಿಟ್ಟು ದಣಿಯುತ ಮಂದಹಾಸದ ಮುಖದಲಿ
ಇಂದಿರೇಶನೆ ನಿನ್ನ ನೋಡುತ ಇಂದು ಸಲಹಿದೆ ಕೃಪೆಯಲಿ
ವಂದಿಪರು ನಿನ್ನಡಿಗೆ ಸುರಮುನಿವೃಂದ ಭಾವಿಸಿ ಮನದಲಿ ೬

ಸಕಲ ಲೋಕಾಧಾರನಾಗಿಯೆ ಸಕಲ ಜೀವರ ಸಾಕ್ಷಿಯೆ
ಪ್ರಕಟವಾಗೆನಗೀಗ ತೋರಿದೆ ಮುಕುತಿದಾಯಕ ಮೂರ್ತಿಯೆ
ಭೃಕುಟಿಯಲಿ ನಿರ್ಮಿಸಿದ ಮಾಯೆಯ ವಿಕರಿಸುವನುಸಾರಿಯೆ
ಚಕಿತಳೆಗೆ ನನಗೊಲಿದೆ ತಿರುಪತಿ ವೆಂಕಟನಡಿಗೆ ಸ್ವಾಮಿಯೆ ೭

(೪) ಶ್ರೀ ಶಿವ ಸ್ತುತಿಗಳು

೫

ಇಂದುಶೇಖರಾ ಮನ್ನಿಸೋ ದಯದಿಂದ ಶಂಕರಾ ಪ

ಪಂಚವಕ್ತ್ರನೆ ಪಾಲಿಪುದು ತ್ರಿಪಂಚನೇತ್ರನೆ
ಪಂಚಭೂತ ತನುವಿದೆನಗೆ ಪಗೆಯಾಗಿದೆ ನೋಡಯ್ಯಾ
ವಂಚಕನು ನೀನೆಂದೆನ್ನ ವಾರೆನೋಡಬೇಡಯ್ಯಾ
ಸಂಚರಿಪ ಮನಕೆ ಮನುವ ತೋರಿ ನೋಡಬೇಡಯ್ಯಾ
ಪಂಚಶಿರದ ನಾಮಾಧೀಶ ಪರಮ ಕೃಪೆಮಾಡಯ್ಯಾ ೧

ವ್ಯಾಳಭೂಷಣನೆ ಬಿನ್ನಪವನ್ನು ಕೇಳು ಈಶನೆ
ಏಳು ವಿಷಯ ವ್ಯಸನಾದಿಗಳಿಂದೇಳಿಗೆಯ ಘನವಾ
ದಾಳಿವರಿದಾ ಕರಣಾತಡಿಗೆ ಧೈರ್ಯ ಕಲಿತನವಾ
ತಾಳಲಾರೆನಯ್ಯಾ ಎನ್ನ ತನುವಿನವಗುಣವಾ
ಫಾಲನೇತ್ರ ಬಿಡಿಸೊ ನಿನ್ನ ನೆನಹಿಗಿತ್ತಭಯವಾ ೨

ಕಾಮನಾಶನೆ ಕರುಣಿಸಯ್ಯಾ ವ್ಯೋಮಕೇಶನೆ
ಹೇಮ ಭೂಮಿ ಹೆಣ್ಣಿಗಾಗಿ ಹೇಳಲೇನ ನೊಂದೆನೈ
ತಾಮಸಗುಣಂಗಳಿಂದ ತಾಪಹೆಚ್ಚಿ ಬೆಂದೆನೈ
ಕಾಮಿನಿಯರೆಡೆಯೊಳೆನ್ನ ಕಾಡಬೇಡವೆಂದೆನೈ •
ನಾಮರೂಪಕ್ರಿಯಾರಹಿತ ನೀನೆ ಗತಿಯೆಂದೆನೈ ೩

೬

ಗಜಚರ್ಮಾಂಬರ ಗಂಗಾಧರನೇ
ಗಜಮುಖಜನಕ ಗೌರಿಯ ರಮಣ ಓ
ತ್ರಿಜಗದೊಂದಿತನೆ ಸಾಂಬಶಿವ ಮಹಾದೇವ ಪ

ಫಾಲನೇತ್ರನೆ ರುಂಡಮಾಲಾಧರನೆ
ನೀಲಕಂಠನೇ ನಿತ್ಯಾನಂದ ಓ
ಕಾಲಾಂತಕನೆ ಸಾಂಬಶಿವ ಮಹಾದೇವ ೧

ಮದನ ಹರನೆ ಶಿವ ಕಂಬುಕಂಧರನೆ
ಪದ್ಮಾಕ್ಷನಯನ ಪಾರ್ವತಿ ರಮಣ ಓ
ಬುಧಜನಪ್ರಿಯನೆ ಸಾಂಬಶಿವ ಮಹಾದೇವ ೨

ಭೂತಿಭೂಷಣನೆ ಸರ್ವ ಭೂತಾತ್ಮಕ
ಪಾತಕಹರ ಪಾರ್ವತಿ ರಮಣ ಓ
ಅನಾಥ ರಕ್ಷನೆ ಸಾಂಬಶಿವ ಮಹಾದೇವ ೩

ಇಂದ್ರವಂದಿತ ಭುಜಗೇಂದ್ರ ಭೂಷಣನೆ
ತಂದೆ ವಿಳುಗಿರಿ ವೆಂಕಟಸಖನೇ ಓ
ಚಂದ್ರಶೇಖರ ಸಾಂಬಶಿವ ಮಹಾದೇವ ೪

(೫) ಶ್ರೀಗಂಗಾ ಸ್ತುತಿ

೭

ಬಹುತೀರ್ಥ ಸಂಗಮದ ಭಾಗವತಗಂಗೆಯಲಿ
ಬಹುಸ್ನಾನ ದೊರಕಿ ಜೀವನ್ಮುಕ್ತನಾದೆ ಪ

ಶುಭ್ರವರ್ಣದ ಗಂಗೆ ತಾನೆ ನಾರದನಾಗೆ
ಅಭ್ರವರ್ಣದ ಯಮುನೆ ವ್ಯಾಸನಾಗೆ
ಇಬ್ಬರೊಂದಾಗಿ ಪ್ರವಹಿಸಿ ಬಂದು ದೋಷಗಳ
ದಬ್ಬುತಿಹ ಪುಣ್ಯ ಪ್ರಯಾಗಿಯಾಗಿರುತಿರುವ ೧

ಪೂರ್ವಪಶ್ಚಿಮವಾಗಿ ದಕ್ಷಿಣೋತ್ತರವಾಗಿ
ಶರ್ವಾಗ್ನಿ ನೈಋತ್ಯವಾಯು ಮುಖದಿ
ಪರ್ವಕಾಲಗಳೆಂದು ಪ್ರವಹಿಸುವ ನದಿಯಲ್ಲ
ಸರ್ವವ್ಯಾಪಕವಾಗಿ ತುಂಬಿ ಸೂಸುತಲಿರುವ ೨

ನಾರಾಯಣಾದ್ರಿಯಲಿ ಪುಟ್ಟ ಬ್ರಹ್ಮಾಂಡವನು
ಪೂರೈಸಿ ಪರಮಪಾವನ ಗಂಗೆಯೂ
ಸೇರುವರೆ ತನಗೊಂದು ತೀರ್ಥಬೇಕೆಂದೆನುತ
ಧೀರಶುಕ ಕಾವೇರಿಯಲಿ ಕೂಡಿ ನೆಲಸಿರುವ ೩

ಕಮಲಸಂಭವನೆಂಬ ಗೋದಾವರಿಯದೆನಿಸಿ
ವಿಮಲಮತಿ ಸೂತ ಶೌನಕ ಸಂಗದಿ
ಭ್ರಮನಿವಾರಣ ತುಂಗಭದ್ರೆಯೆಂದೆನಿಸುವದು
ರಮೆಯ ರಸನೊಲಿದವರಿಗದು ದೊರಕುತಿಹುದು ೪

ಈ ನದಿಯ ಕೂಡಿರುವ ತೀರ್ಥಗಳನೆಣಿಸುವರೆ
ನಾನೆಂಬ ಕವಿ ಯಾರು ಶೇಷ ತೊಡಗಿ
ಸ್ವಾನುಭವ ಸಂಸಿದ್ಧ ನಿಜಭಕ್ತರೆಂದೆನಿಪ
ಜ್ಞಾನಿಗಳ ಮಹಿಮೆಗಳ ನದಿಗಳೊಡೆ ಬೆರೆದಿರುವ ೫

ಶೀತಬಾಧೆಯು ಲೇಶಮಾತ್ರವಿದರೊಳಗಿಲ್ಲ
ವಾತಾದಿ ವ್ಯಾಧಿಗಳ ಕೊಡುವುದಲ್ಲ
ನೂತನದ ಕಾಲದೇಶಗಳ ಬಯಕೆಯದಲ್ಲ
ಆತುಕೊಳದಿದ್ದರೂ ಪಾತಕವ ಪರಿಹರಿಪ ೬

ಉತ್ತಮ ಪರೀಕ್ಷಿತನೇನು ಮೈತ್ರೇಯ ವಿದುರರು
ಸತ್ಯಸಂಧನು ಕಪಿಲ ದೇವಹೂತಿ
ಮತ್ತೆ ಉತ್ತಾನಪಾದನು ಧ್ರುವನು ಪೃಥು ಚಕ್ರ
ವರ್ತಿಯೆಂಬೀ ತೀರ್ಥವ ತರಿಸಿಕೊಂಡಿರುವ ೭

ಪುಣ್ಯಾತ್ಮ ಪ್ರಾಚೀನ ಬರ್ಹಿಯಾತ್ಮಜರಾದ
ಸನ್ಮನದ ಮಹಿಮರವರೀರೈವರು
ಇನ್ನಿವಳ ಗರ್ಭದಲಿ ಬಂದ ದಕ್ಷನು ತಾನು
ಕನ್ನೆಯರನರುವತ್ತ ಪಡೆದ ತೀರ್ಥಗಳಿರುವ ೮

ಅಪರ ಸೂರ್ಯನ ತೆರದ ಪ್ರಿಯವ್ರತನ ಸಂತತಿಯು
ತಪದಲನುಪಮ ವೃಷಭದೇವನುದಿಸೀ
ಗುಪಿತ ತೇಜೋಮೂರ್ತಿ ಭರತನವತರಿಸಿರಲು
ಉಪಮಾನವಿಲ್ಲದೀ ತೀರ್ಥಗಳು ಬೆರೆದಿರುವ ೯

ದ್ವೀಪವೇಳೆರ ಸುತ್ತ ವ್ಯಾಪಿಸಿದ ವನಧಿಗಳು
ದೀಪಿಸುವ ಸೂರ್ಯಾದಿ ಚಕ್ರಗತಿಯೂ
ಈ ಪರಿಯ ತೀರ್ಥಗಳು ಭೂಮಿ ಸ್ವರ್ಗಾದಿಗಳ
ವ್ಯಾಪಿಸಿಹ ಮಹಿಮ ನದಿಗಳು ಒಂದುಕೂಡಿರುವ ೧೦

ನದಿಗಳಿಗೆ ನಿಜರೂಪವಾದ ನಾಮದ ಮಹಿಮೆ
ಒದಗಿಯಜಮಿಳನಘವನೊದೆದು ನಿಜದೀ
ಹುದುಗಿಸಿದ ವರ್ಣನೆಯ ತಂಪು ಬಹುರುಚಿಕರವು
ಸದಮಲಾನಂದ ನಿಧಿಯಾಗಿ ಹುದುಗಿರುತಿರುವ ೧೧

ವೃತ್ರ ಚಾರಿತ್ರ ನದಿ ಮತ್ತೀತನಾರೆನಲು
ಚಿತ್ರಕೇತುವು ಚಕ್ರವರ್ತಿಯಾಗಿ
ಪುತ್ರ ಸಂತತಿಯಿಂದ ಪ್ರಖ್ಯಾತ ಹಿಮಗಿರಿಯ
ಪುತ್ರಿಶಾಪವು ಬಂದ ಸಿದ್ಧ ನದಿ ಬೆರೆದಿರುವ ೧೨

ನರಹರಿಯ ಚರಣಾರವಿಂದ ಮಕರಂದದಲಿ
ಎರಗಿ ತುಂಬಿಯ ತೆರದಿ ಭಜಿಸುತಿರುವ
ನೆರೆ ಭಕ್ತಪ್ರಹ್ಲಾದ ಗಜರಾಜ ಮನುಚರಿತ
ಪರಮ ಪುಣ್ಯೋದಯದ ನದಿಗಳೊಂದಾಗಿರುವ ೧೩

ಕ್ಷೀರಸಾಗರ ಮಥನ ಕೂರ್ಮನಾದನು ಹರಿಯು
ಶ್ರೀರಮಣಿ ಸುಧೆಯುದಿಸಿದತಿ ಮಹಿಮೆಯೂ
ಶ್ರೀರಮಣ ವಟುವಾಗಿ ಬಲಿಯ ಸಲಹಿದ ಬಗೆಯು
ಸಾರತರ ನದಿಗಳಿವು ಸೇರಿಕೊಂಡಿಹವಾಗಿ ೧೪

ಉಷ್ಣ ಹಿಮಕರರಂಶಸಂಭವ ಮಹಾತ್ಮರನು
ವೃಷ್ಣಿ ಸಂತತ್ಯುದ್ಧವಾದಿಗಳನೂ
ವಿಷ್ಣುವಾದರು ಗಣಿಸಲಾರನೀ ತೀರ್ಥಗಳು
ಕೃಷ್ಣಸಾಗರದಲ್ಲಿ ಸೇರಿ ಪೂರೈಸಿರುವ ೧೫

ಯದುಕುಲಾಂಬುಧಿಯಲ್ಲಿ ಮದನಪಿತ ತಾ ಜನಿಸಿ
ಮುದದಿಂದ ಗೋಕುಲದಿ ಬೆಳೆದು ನಲಿದು
ಚದುರಿಂದ ಗೋವು ಗೋವತ್ಸಪರನೊಡಗೂಡಿ
ಸದದು ದೈತ್ಯರ ನಂದಗಾನಂದವಿತ್ತಾ ೧೬

ಬಾಲಕರ ಭೋಜನದ ನೆವದಿ ಬ್ರಹ್ಮನಿಗೊಲಿದು
ಕಾಳೀಯ ಫಣಗಣಾಗ್ರದಿ ನರ್ತಿಸಿ
ಜ್ವಾಲೆಯನು ನೆರೆನುಂಗಿ ಗೋಕುಲದವರ ಸಲಹಿ
ಬಾಲಲೀಲೆಯ ಬಹಳ ಪುಣ್ಯತೀರ್ಥಗಳಿರುವ ೧೭

ಗೋವಕ್ಕಳೊಡಗೂಡಿ ವನಮಧ್ಯದಲಿ ಚರಿಸಿ
ದೇವತಾ ಯಜ್ಞ ಪತ್ನಿಯರಿಗೊಲಿದೂ
ಗೋವರ್ಧನೋದ್ಧರಣ ಗೋಪಾಂಗನಾ ಜನದ
ಭಾವನೆಯ ಪೂರ್ತಿಗೊಳಿಸಿದ ತೀರ್ಥವಿರುವಾ ೧೮

ವರಧನುವಿನುದಯ ದರ್ಶನನೆವದಿ ಮಧುರೆಯನು
ನೆರೆಪೊಕ್ಕು ಕುಬ್ಜೆಗತಿಶಯದ ರೂಪ
ಕರೆದಿತ್ತು ಕುಸುಮವನು ಕೊಟ್ಟವನಿಗೊಲಿದಾಗ
ಪಿರಿದಾಗಿ ಕಂಸನಿಗೆ ತಾನೆ ಮುಕ್ತಿಯ ಕೊಟ್ಟು ೧೯

ದ್ವಾರಕಾ ನಿರ್ಮಾಣ ದುರುಳ ಜನಸಂಹರಣ
ನಾರಿಯರ ನೆಂಟನೊಡಗೂಡಿ ಬಳಿಕಾ
ಪಾರಿಜಾತವ ಕಂಡು ಈರೆಂಟು ಸಾಸಿರದ
ನೀರೆಯರ ಸಂಸಾರ ಸಂಪತ್ತಿನತಿಶಯದ ೨೦

ಮಾಸಿದರುವೆಯ ಭಕ್ತನವಲಕ್ಕಿಯನು ಮೆದ್ದು
ಲೇಸಾದ ಸಂಪತ್ತನೊಳಗೆ ಕೊಟ್ಟೊ
ಮೀಸಲಳಿಯದ ಮಹಿಮ ಭಕ್ತಜನಸಂಸಾರಿ
ವಾಸುದೇವನ ಮಹಿಮೆ ಜಲನಿಧಿಯ ಕೂಡಿರುವ ೨೧

ತತ್ವಸಾರವನು ನವಯೋಗಿಗಳು ನಿಮಿಗೊರೆದು
ಮತ್ತೆ ನಾರದನು ವಸುದೇವನೆಡೆಗೆ
ಚಿತ್ತಜನ ಜನಕನಭಿಮತದಿಂದವತರಿಸಿ
ಚಿತ್ತವನು ವಸ್ತುವಿನೊಳೈಕ್ಯವನು ಮಾಡಿಸಿದ ೨೨

ವೇದಾಂತ ನಿಧಿಯಾದ ಉದ್ಧವಗೆ ತತ್ವವನು
ಮಾಧವನೆ ತಾನೊರೆದು ಧರಣಿಯೊಳಗೆ
ವೇದಾಂತ ವಿಸ್ತರಕೆ ನಿಲಿಸಿ ನಿಜಪಾದುಕೆಯ
ವೇದವೇದ್ಯನು ಕೊಟ್ಟು ನಿಜಜನಕೆ ನಿಧಿಯಾದ ೨೩

ಕಾಲಗತಿಗಳನೊರೆದು ಮತ್ತೆ ಭೂಲೋಕವನು
ಪಾಲಿಸುವ ದೊರೆಗಳಭಿಮತದ ಗತಿಯೂ
ಮೇಲಾಗಿ ಕಲಿಯುಗದ ಗತಿವಿಸ್ತರವನೆಲ್ಲ
ಲೋಲನೃಪಗೊಲವಿಂದ ಪೇಳ್ದ ವಿವರಗಳಿರುವ ೨೪

ಪರಮಾತ್ಮನೊಡನಾಡಿ ಪರಮ ಪಾವನರಾಗಿ
ಮೆರೆವ ಗೋಪೀ ರತ್ನ ಮಾಲೆಯೊಡನೆ
ನೆರೆಶಿಖಾಮಣಿಯೆನಿಸಿ ತಿರುಪತಿಯ ವೆಂಕಟನು
ಧರಣಿಯೊಳು ಸಕಲರನು ನೆರೆ ಸಲಹುತಿಹನೂ ೨೫

(ಆ) ಗುರುಸ್ತುತಿಗಳು

೮

(೧) ಶ್ರೀವಾಸುದೇವಾರ್ಯರು

ನೀನೊಲಿಯಬೇಕು ನೀನೊಲಿಯಬೇಕು ವಿಜ್ಞಾನ
ಹೀನನಿಗೆ ನಿತ್ಯಾನಂದ ಮೂರುತಿಯೆ ವಾಸುದೇವಾರ್ಯ ಪ

ನರಳಿ ಬಹುಭವದಿ ನಾನಾ ಯೋನಿಮುಖಗಳಿಂ
ದುರುಳಿ ಕೋಟಲೆಗೊಂಡು ಪುಳು ಪಕ್ಷಿ ಪಶು ಜಲಜ
ತರು ಶಿಲೆಗಳೆನಿಪ ಹಲವಲಿ ನವೆಸವೆದು ಸ್ತ್ರೀ
ಪುರುಷತ್ವ ಭೇದವಹ ನರಜನುಮ ಬಹರೆ ೧

ಪುರುಷನೆನಿಸಿದರು ಪಾದೋರು ಬಾಹುಜ ಭೇದ
ವರಿತು ವಿಪ್ರತ್ವ ವಿದ್ಯಾ ನಯ ವಿಜ್ಞಾನ
ಶರಧಿಯೆನಿಸುವ ಭಾಗ್ಯ ಬರುವ ಸಾಧನಗಳನು
ಕರುಣಿಸುವ ಪರಮೇಶನೊಲಿವಂತೆನಗೆ ೨

ವಿವೃತ ಫಲವಹ ಸಶಾಸ್ತ್ರ ನಿಗಮಾದೀತಿಯೊಪ್ಪದಿ
ತದುಕ್ತ ಕರ್ಮಾಚರಣೆಗೈಯುತ ಸ
ಮರ್ಪಿಸುತ್ತೀಶ್ವರಗೆ ತತ್ಫಲವ ಬಯಸದೆ
ತೆಪ್ಪಗಿರುವಧಿಕಾರಿಯಪ್ಪ ಸತ್ಪಥಕೆ ೩

ಶೃತಿಯುಕ್ತಿ ಸ್ವಾನುಭವಗಳ ಬಲದಿ ಮನನಗೈ
ಯುತಲಿ ನಿತ್ಯಾನಿತ್ಯ ವಸ್ತುಗಳ ತಿಳಿದನ
ರ್ಥತೆಯರ್ಥಗಳೊಳು ವೈರಾಗ್ಯ ಭಾಗ್ಯವನೀವ
ಮತಿ ಬಂದು ಭಕತಿ ಜ್ಞಾನಗಳಳವಡುವರೆ ೪

ಬಂದ ವೈರಾಗ್ಯ ನೆಲೆಗೊಂಡು ಬಳಸಿದ ಕ್ರಿಯಾ
ದಂದುಗವು ಸಡಿಲಿ ಬಹಿರಂಗ ವ್ಯಾಪಿಸಿ ಕನ
ಸೆಂದು ಕಾಣುತಲೂಡಲುಣುತಲುಡಿಸಿದರುಡುತ
ತಿಂದು ತೇಗುವ ಕರ್ಮ ಬೆಂದು ಸುಖಿಯಹರೆ ೫

ಹೊರಗೊಳಗುಗಾಣದಾಗಸದಂತೆ ಬಯಲಾಗಿ
ಕರಣಗಳ ಕಾಲಾಟವುಡುಗಿ ಸ್ವ ವ್ಯತಿರಿಕ್ತ
ವರಸಿದರು ಸಂತೃಪ್ತಿ ತೋರದೆ ಸ್ವಾನುಭವ
ಬರಿಯರಿವೆ ನೆಲೆಯಾಗಿ ತಾನೆ ತಾನಹರೆ ೬

ನಿಂತವೇದಾಂತ ಪದ್ಧತಿಯ ನಿಲಿಸುವರೆ ಮೊದ
ಲಂತೆ ಕೃಷ್ಣಾವತಾರದಿ ಪಾರ್ಥಗೊರೆದ ಕೃಪೆ
ವಂತ ನೀ ಮರಳಿ ಚಿಕನಾಗಪುರದಲಿ ಹೊಳೆದ
ನಂತಮಹಿಮನಾಗಿರುವೆ ವಾಸುದೇವಾರ್ಯ ೭

೯

ಋಣವೆಂಬ ಪೈಶಾಚ ಋಜುವಾಗಲೀಸದು
ನೆನಹಿಗೆ ವಿಘ್ನವ ನಿಲಿಸುವದು ಪ

ಮನದೊಳು ನೆಲೆಗೊಂಡು ಮಂಕುಮರುಳ ಮಾಡಿ
ಕಣ್ಣು ಗೆಡಿಪುದ ನೋಡಿ ಕರುಣಬಾರದೆ ರಾಮಾ ಅ.ಪ

ಪತಿತ ಪಾವನನೆಂಬ ಬಿರುದುಳ್ಳ ನಿನ್ನಂಘ್ರಿ
ಸತಿಯಹಲ್ಯೆಯ ಸೋಕಿ ಸಲಹಿದುದೂ

ಸತತ ಸ್ಮರಿಸಲು ಮಾರೀಚನಂ ಭಯದಿಂದ
ಗತಿಗೊಟ್ಟು ಸಲಹಲ್ಯೆದಿದವು ನಿನ್ನಡಿಗಳೂ ೧

ಮನು ಮುನಿಗಳು ಸ್ಮೃತಿ ಮಾರ್ಗದಿ ನಿಷ್ಕೃತಿ
ಯನು ಪೇಳಲಿಲ್ಲವೀ ಋಣ ದೋಷಕೆ
ಪುನಹ ವೃದ್ಧಿಯು ಸಹ ಪೂರ್ೈಸಿಕೊಳಲ
ದನುಭವ ಬಿಡದಾವ ಜನ್ಮಕ್ಕೆಂಬುದ ಕೇಳಿ ೨

ಸಾಕು ಸಾಕಾಯಿತು ಸಂಸಾರ ಕೋಟಲೆ
ಬೇಕಾಯಿತು ನಿನ್ನ ಭಜಿಸುವದೂ
ಈ ಕಷ್ಟವನು ಬಿಡಿಸ್ಯೆ ಕರುಣಾಬ್ಧಿಯೆ
ನೀಕರಿಸುವರಿಂದ ಆನಂದ ದೊರಕಿತು ೩

ಸಂತುಷ್ಟ ಚಿತ್ತನಾಗಿರಬೇಕು ವಿಪ್ರನು
ಚಿಂತಿಸಬಾರದೆಂಬೀ ಪಥವಾ
ಎಂತಾದರು ಹೊಂದಲೀಸದಲೆವ ಋಣ
ಕಂತವಾಗುವ ಹಾಗೆ ಧನವ ಪಾಲಿಸಬೇಕು . ೪

ಕೊಟ್ಟವರೊಡವೆಯ ಕೊಡುವಂತೆ ದ್ರವ್ಯವು
ಪುಟ್ಟುವಂದದಿ ಕೃಪೆಮಾಡೆನಗೆ
ಪಟ್ಟಾಭಿರಾಮ ನಿನ್ನವನೆಂದ ಬಳಿಕಿನ್ನು
ಕೆಟ್ಟನೆಂಬೀ ಮಾತ ಕೇಳದಂದದಿ ಮಾಡಿ ೫

ಗುರು ವಾಸುದೇವಾರ್ಯನಾಗಿ ಚಿಕನಾಗ
ಪುರದಿ ನೆಲಸಿ ತಿಮ್ಮದಾಸನನೂ
ಪೊರೆದನೆಂಬೀ ಮಾತು ಹರಿದಿದೆ ಜಗದೀ ತ
ಪ್ಪಿರಲಿ ನೆಪ್ಪಿರಲಿ ನೀ ಸಲಹು ವೆಂಕಟರಾಯಾ ೬

೧೦

(೨) ಶ್ರೀ ಕೃಷ್ಣಯೋಗೀಂದ್ರರ ಸ್ತುತಿಗಳು

ಏಗೈವೆನೆಂತು ಜೀವಿಪೆನಗಲಿ ಶ್ರೀಕೃಷ್ಣ
ಯೋಗೀಂದ್ರ ಮೂರುತಿಯನೂ
ಭೋಗರದುಜನರ ಭವರೋಗವನು ಪರಿದು ಸುಖ
ಯೋಗ ಸಾಮ್ರಾಜ್ಯವೀವಾ ಗುರುವಾ ಪ

ಒಲಿದು ಬಂಧಗಳನಳವಡಿಸಿಯಾಸನವ
ನೆಲೆಗೊಳಿಸಿ ಮರುತನ ಮಧ್ಯದೀ
ಚಲಿಸದೆ ನೆನೆವ ಯೋಗಿಯ ಮನದುದಿಯಲಿ
ಥಳಥಳಿಪ ಜ್ಯೋತಿಯ ಸುಲಭದಿ
ನೆಲದೊಳಿಹ ಜನರ ಕಂಗಳಿಗೆ ಗೋಚರಿಸಿ ಕಡೆ
ಗೆಳದಜ್ಞತೆಯನುದಯದಿ
ಒಲಿದು ಸುಜ್ಞಾನಸುಧೆಯೆರದು ಸುಖಿಸುವ ಮೂರ್ತಿ
ನೆಲಸಲಂತರ್ಧಾನದಿ ಕ್ಷಣದೀ ೧

ನಾ ಪುಣ್ಯವಂತನೆಂಬೆನೆ ಮೂರ್ತಿಯಗಲುವದೆ
ನಾಪಾಪಿಯೆಂಬೆನೆಕಾಬೆನೆ
ರೂಪುಮರೆಯಾದರೇನ್ನೈ ಪೂರ್ಣವಸ್ತುವೆಂ
ಬೀ ಪಂಥವನು ಪಿಡಿವೆನೆ
ವ್ಯಾಪಾರದಲಿ ಸಿಲುಕಿದೀ ಮನಕೆ ಬಿಡದೆ ಸ
ದ್ರೂಪ ನಂಬಿದ್ದೆನಿದನೆ
ಸಾಪರಾಧಿಗೆ ಮುಖಗೊಡದ ತೆರದಿ ಮರೆಯಾದ
ತಾಪ ಬೆಂಬಿಡದು ತಾನೆ ಎನ್ನನೆ ೨

ಬರಿದೆ ನಾನಪರಾಧಿಯೆಂದು ಪಂಬಲಿಸುವದು
ತರವಲ್ಲ ಧನ್ಯ ನಾನೂ

ಕರುಣದಿಂ ಮೂರುತಿಯ ತೋರಿ ಸುಖಗೊಳಿಸಿ
ಯುರೆ ಮರೆಯಾದ ಭಾವ ತಾನೂ
ಸ್ಮರಿಸಿ ಸ್ಮರಿಸಿಯೆ ಮನವು ಕರಗಿ ತನ್ನೊಳುನಿಜದಿ
ಬೆರೆಯಲೆಂತೆಂಬುದಿದನೂ
ಮರಳಿ ಜಾನಿಸಿ ಧೈರ್ಯವಿಡಿದರೂ ಮೊದಲುಂಡ
ಪರಮಸುಖ ಬಿಡದೆನ್ನನೂ ತಾನೂ ೩

ಭಾಪುರೆ ಭಾಗ್ಯಶಾಲಿಯು ಧನ್ಯಧನ್ಯನೈ
ನಾ ಪುಣ್ಯವಂತನಹುದೂ
ತಾ ಪೂರ್ಣ ಕೃಪೆವಂತ ಶ್ರೀಕೃಷ್ಣಯೋಗೀಂದ್ರ
ನೀ ಪೊಡವಿ ಮೊದಲೊಳಹುದೂ
ತಾಪಬಡುವರು ಭಜಕರೆಂದು ಮಂಗಳಕರದ
ರೂಪವನು ಮೊದಲೆ ತಳೆದೂ
ವ್ಯಾಪಕನು ಶ್ರೀ ದಾಸಾರ್ಯನಾಗಿರುವ
ನೀ ಪದವಿಗೆಣೆಯಾವದು ಇಹುದೂ ೪

ಗುರು ವಾಸುದೇವಾರ್ಯನೆನಿಸಿ ಚಿಕ್ಕನಾಗ
ಪುರ ವರದವೆಂಕಟರಮಣನೆ
ಕರದು ಸುಜ್ಞಾನಸುಧೆಯೆರೆದಜ್ಞರಜ್ಞತೆಯ
ಪರಿದ ಕರುಣಾವಂತನೆ
ವರ ಕೃಷ್ಣಯೋಗೀಂದ್ರ ಶ್ರೀರಾಮದಾಸಾರ್ಯ
ಶರಣಾಗತೋದ್ಧರಣನೆ
ಮರೆಯೊಕ್ಕೆ ನಾನು ತಿಮ್ಮದಾಸ ಜೀಯ್ಯಪರಾಕು
ಕರವಿಡಿಯಬೇಕೆನ್ನನೆ ನೀನೆ ೫

೧೧

ಮಂಗಳಂ ಕೃಷ್ಣ ಯೋಗೀಂದ್ರ ದಿವ್ಯ
ಮಂಗಳವಿಗ್ರಹ ನಿನ್ನ ನೆನಹು ಸರ್ವ ಪ

ನಿನ್ನ ಚರಿತೆಗೇಳಿ ಹಿಗ್ಗಿ ಜೀವಿಪರಿಗೆ
ನಿನ್ನೊಲವನು ಬಯಸುವ ಧನ್ಯಗೆ
ನಿನ್ನ ಭಕತರ ಸಂಗತಿಯೊಳಿರುವರಿಗೆ
ನಿನ್ನ ಮೂರುತಿಗಂಡು ನಮಿಪ ಮಹಾತ್ಮಗೆ ೧

ನಿನ್ನ ವಾಗಮೃತಪಾನದಿ ಮತ್ತರಾದರ್ಗೆ
ನಿನ್ನ ಸೇವೆಗೆ ಮೈಗೊಟ್ಟಿರುವರಿಗೆ
ನಿನ್ನ ಚರಣ ಸೋಕಿದೆಡೆಯೊಳಿರುವರಿಗೆ
ನಿನ್ನಂಗ ಸಂಗ ಮರುತಪೂತದೇಹರ್ಗೆ ೨

ಕರುಣದಿಂ ಚಿಕನಾಗಪುರದಿ ವಾಸುದೇವಾರ್ಯ
ಗುರುವಾಗಿ ನರಸಾರ್ಯನೆಂದೆನಿಸಿ
ತಿರುಪತಿಯರಸನೆ ಕೃಷ್ಣಯೋಗೀಂದ್ರ ಶ್ರೀ
ಕರ ರಾಮದಾಸಾರ್ಯನೆಂದರಿತೆಮಗೆಲ್ಲಾ ೩

(೩) ಶ್ರೀ ರಾಮಕೃಷ್ಣಾರ್ಯ ಸ್ತುತಿ

೧೨

ಜಯ ಜಯ ರಾಮಕೃಷ್ಣಾರ್ಯ ಭವ
ಭಯ ವಿವರ್ಜಿತ ಮಾಮವ ಗುರುವರ್ಯ ಪ

ಶ್ರೀಮದುತ್ತಮ ನಿಜಚರ್ಯ ಗುಣ
ಸ್ತೋಮರಾಜಿತ ಸರ್ವ ಪಂಡಿತಾಚಾರ್ಯ
ರಾಮಣೀಯಕ ಗಾಂಭೀರ್ಯ ಯುತ
ಮಾಮಕ ಮಾನಸ ಜಲರುಹಸೂರ್ಯ ೧

ಕೀರ್ತಿನಿಂದಿತ ಪೂರ್ಣ ಸೋಮ ವಿ
ಷ್ಫೂರ್ತಿ ಮಾಯಾ ನಘ ನಂದಾಭಿರಾಮ

ಆರ್ತಿಹರಣ ಪೂರ್ಣಕಾಮ ಪುಣ್ಯ
ಮೂರ್ತೆ ವಿನಿಗೃಹೀತೇಂದ್ರಿಯ ಗ್ರಾಮ ೨

ಶ್ರೀಮಂಗಳಗಿರಿ ನಿಲಯ ರೂಪ
ಕಾಮಿತ ಫಲದಾನ ನಿಪುಣಾ ಪ್ರಮೇಯ
ಕಾಮರಹಿತ ಜಿತಮಾಯಾ ಬಾಲ
ರಾಮಕೃಷ್ಣಾರ್ಯಗುರೋ ಪಾಹಿ ದಯಯಾ ೩

(೪) ಶ್ರೀ ವೆಂಕಟದಾಸಾರ್ಯರ ಸ್ತುತಿಗಳು

೧೩

ಇದಿರುದೋರಿ ಮರೆಯಾದ ಬಗೆಯಿದೇನಯ್ಯಾ
ಸದಯ ವೆಂಕಟದಾಸಾರ್ಯ ವೇಷದಾಳಿ ಗುರುವರ್ಯ ಪ

ತೊಳಲುತಿರೆ ಭವಕೂಪದೊಳು ಮುಳುಗಿ ಮೂಢ ಜನರು
ಕಳಿವರೆಂತೀಯಾತನೆಯನಳಲುವರೆಂದು
ತಳೆದು ಕೃಪಾರಸವನ್ನು ತಿಳುಹಿ ಭಕುತಿ ವೈರಾಗ್ಯವನು
ಸುಲಭದಿಂ ಜ್ಞಾನವನರುಪಲೊಲಿದು ಧರೆಯೊಳವತರಿಸಿ ೧

ಆವಿರ್ಭಾವಾತಿರೋಭಾವವಾವಗವೂ ಭಕ್ತರ್ಗಾಗಿ ಸ್ವಾ
ಭಾವಿಕವೆಂದು ಪಾರಾಣ ಭಾವವನರಿತೂ
ಸಾವಧಾನಗೈದರೂ ಮನೋವಿಕಾರ ತೊಲಗದೂ
ಕೇವಲಾನಂದ ನಿತ್ಯನಿರಾವಲಂಬ ಸತ್ಯಾತ್ಮಕನೆ ೨

ಪಲವುಭವದಿಮಾಡ್ದ ಸುಕೃತ ಫಲಿಸಿತೆಂದಿದ್ದೆನೀವರೆಗು
ತೊಲಗಿ ತಾಪುಣ್ಯವೆಂಬಂತೆ ಚಲಿಸಿ ಚಿತ್ತವೂ
ತೊಳಲುತಿದೆ ನಿನ್ನ ಸುಖಮಂಗಳರೂಪು ವಚನಗಳ ನೆನೆದು
ನೆಲೆಗೊಳಿಪಂದದಿ ಮತಿಯ ತಿಳುಹುವವರಾರೆಮಗಕಟ ೩

ಹಾನಿ ಧರ್ಮಕ್ಕೊದಗಲು ನಾನುದಿಪೆನೆಂದಭಯವ
ನೀನೊಲಿದಿತ್ತುದಕಾಗಿ ನಾನಾ ರೂಪದೀ
ಜ್ಞಾನ ಮಾರ್ಗವನರುಹಿ ಮಾನವರನುದ್ಧರಿಸಿದೆ
ದೀನ ವತ್ಸಲನೆ ಯೀಗಲೇನುಕಾರಣ ವೀ ಸಮಯದಿ ೪

ಕರದು ಮೂಢರಜ್ಞತೆಯನು ಪರಿದು ಜ್ಞಾನಾನಂದ ಸುಧೆಯ
ಎರದು ಹೊರದೆಯಲ್ಯೆ ಚಿಕ್ಕನಾಗಪುರದಿ
ವರದ ವಾಸುದೇವಾರ್ಯ ಸದ್ಗುರುವೆ ವೆಂಕಟದಾಸತನುವ
ಧರಿಸಿರೆ ನಂಬಿದ್ದರೆಮ್ಮನತಿ ಪುಣ್ಯವಂತರೆಂಬಂತೆ ೫

೧೪

ನಿನ್ನ ನಂಬಿದವರ್ಗೆ ನಿನ್ನಂದವೆ ಬಂದುದಿನ್ನೇನಿನ್ನೇನು ಪ್ರ
ಸನ್ನ ರಾಘವ ದಶವಿಧವಾಯಿತೆಮ್ಮಿರವಿನ್ನೇನಿನ್ನೇನು ಪ

ಕೊರಳು ಗೊಯ್ಯಿಕತೆಯಿಂದ ಕಂಗೆಡುತಿದೆ ಲೋಕವಿನ್ನೇನಿನ್ನೇನು
ಪರರ ಬಾಧೆಗೆ ಕಲ್ಲುಹೊರುವಾಟ ಒದಗಿದುದಿನ್ನೇನಿನ್ನೇನು
ಧರೆಯ ಬಗೆದು ಬೆರತಿಂಬ ಕಾಲವು ಬಂದುದಿನ್ನೇನಿನ್ನೇನು
ಕರುಳ ಬಗೆದು ರಕ್ತಗುಡಿವ ಭಯವು ತೋರಿತಿನ್ನೇನಿನ್ನೇನು ೧

ದಾನಗೈಯಲು ಸ್ಥಾನ ಹಾನಿಯಾಗುವದಾಯಿತಿನ್ನೇನಿನ್ನೇನು
ಜ್ಞಾನ ಕುಲದಿ ಪುಟ್ಟ ಕ್ಷಾತ್ರ ಜೀವನ ಬಂದುದಿನ್ನೇನಿನ್ನೇನು
ಮಾನಿನಿ ದುರುಳನಾಧೀನವಾಗುವದಾಯಿತಿನ್ನೇನಿನ್ನೇನು
ಸೂನುವ ಪರರೆತ್ತಿಕೊಂಡೊಯ್ವ ತೆರಬಂದುದಿನ್ನೇನಿನ್ನೇನು ೨

ಉಟ್ಟ ಬಟ್ಟೆಯು ಪೋಪ ಸಮಯ ತಾನೊದಗಿದುದಿನ್ನೇನಿನ್ನೇನು
ದಿಟ್ಟ ವಿಪ್ರರು ರಾವುತರಾಗುವಂತಾಯಿತಿನ್ನೇನಿನ್ನೇನು
ದಿಟ್ಟಿಸಿ ನೋಡೆ ನೀನೆಮ್ಮನೆನ್ನುವರಾಗದಿನ್ನೇನಿನ್ನೇನು
ಹುಟ್ಟು ಹೊಂದುಗಳಡಗುವ ಕಾಲ ತಾ ಬಂದುದಿನ್ನೇನಿನ್ನೇನು ೩

ಕರುಣದಿಂದೀಕ್ಷಿಸಿ ಕಾಯ್ವವ ನೀನಿರಲಿನ್ನೇನಿನ್ನೇನು
ದುರಿತ ಕೋಟಿಗಳ ದಹಿಪುದು ನಿನ್ನಯ ನಾಮವಿನ್ನೇನಿನ್ನೇನು
ಸ್ಮರಣೆ ಮಾತ್ರದಿ ಧನ್ಯರಹೆವಾವು ಭಯ ಪೋಪುದಿನ್ನೇನಿನ್ನೇನು
ವರ ವಾರಣಸೀವಾಸದಿಚ್ಛೆ ಪುಟ್ಟಿದುದೆಮಗಿನ್ನೇನಿನ್ನೇನು ೪

ಕರುಣದಿಂ ಚಿಕ್ಕನಾಗಪುರದಿ ನೀನೆಲಸಿದೆಯಿನ್ನೇನಿನ್ನೇನು
ಗುರುವಾಸುದೇವಾರ್ಯ ರೂಪುದಾಳಿದೆಯಾಗಿಯಿನ್ನೇನಿನ್ನೇನು
ಕರೆದು ಜ್ಞಾನಾಮೃತವೊರೆದು ರಕ್ಷಿಸಿದೆ ನೀನಿನ್ನೇನಿನ್ನೇನು
ಚರ[ಣ ಕಮಲಗಳ ನಂಬಿದೆವು ನಾನಿನ್ನೇನಿನ್ನೇನು] ೫

೧೫

ಮಂಗಳ ವೆಂಕಟದಾಸಾರ್ಯ ದಿವ್ಯ
ಮಂಗಳ ವಿಗ್ರಹ ನಿನ್ನೊಲವೆಮಗೀಗ ಪ

ಸಹವಾಸ ಸಾನ್ನಿಧ್ಯ ಸಲ್ಲಾಪ ಸಂಸೇವೆ
ಸಹಜದಿ ದೊರೆಯೆ ಧನ್ಯತೆಯೊದಗಿ
ಬಹುಭವಾರ್ಜಿತ ದೋಷದಹಿಸಿಪೋದುದರಿಂದ
ವಿಹಿತ ಧರ್ಮಾಚರಣೆಯ ನೀ ಬೋಧಿಸಲಾಗಿ ೧

ಮಾಡಿದ ಕರ್ಮಫಲವ ಬಯಸದೆ ನೆರೆ
ಕೂಡಿ ಈಶ್ವರನೊಳು ನಿರ್ಲೇಪತೆ
ಜೋಡಿಸಿ ಚಿತ್ತ ಶುದ್ಧಿಯು ಬಂದು ವೈರಾಗ್ಯ
ಬೀಡ ಬಿಡುವವೋಲೆಮ್ಮೊಳು ನೀನೆ ಕೃಪೆಮಾಡೆ ೨

ಗುರುವಾಸುದೇವಾರ್ಯ ಚಿಕ್ಕನಾಗಪುರವಾಸ
ವರದ ವೆಂಕಟದಾಸವರ್ಯ ರೂಪ
ಪರಿದು ಮೋಹವ ಜ್ಞಾನಸುಧೆಯನೆರೆದು ನಿನ್ನೊ
ಳೆರಕವಾಗುವ ತೆರಗೈದುದರಿಂದೆಲ್ಲ ೩

೧೬

ಮರೆಯದ ಭಾವಗೋಚರವಾಯಿತಯ್ಯಾ
ಕರುಣಿ ವೆಂಕಟದಾಸವರ್ಯ ಸದ್ಗುರುವೆ ಪ

ಸನ್ನಿಕರ್ಷವನಾದರಣ ಹೇತು ಮಾನವರಿ
ಗೆನ್ನುತಾನಂದ ರಸರುಚಿ ದೋರಿಸಿ
ನಿನ್ನನೆ ತೊಳಲಿ ಬಳಲುತ ನಿನ್ನೊಳೆರಗುವಂ
ತುನ್ನತರ ಮಾಡಲಂತರ್ಧಾನವಡೆವೆ ೧

ಗೋಪಿನಾರಿಯರಿಗಾನಂದ ರೂಪವ ತೋರಿ
ತಾಪಬಡುವಂತಗಲಿ ಯಿದ್ಧವರ ಮುಖದಿ
ಸೋಪಾಯವಚನದಿಂ ತಿಳುಹಿದರ್ಥವ ನೆನೆಯ
ಲೀ ಪರಿಯ ತೋರಿತೆನಗೆಲೆ ದಯಾನಿಧಿಯೆ ೨

ನೆರೆಧನ್ಯರಾದೆವಾವಿಲ್ಲ ಸಂದೇಹ ಗುರು
ವರ ವಾಸುದೇವಾರ್ಯ ಚಿಕನಾಗಪುರದೀ
ಪರತತ್ವವರುಪಿ ವೆಂಕಟದಾಸ ವೇಷದಿಂ
ಮರಳಿ ನಿಜದೊಳು ನಿಂದೆ ಕರುಣಾಸಮುದ್ರಾ ೩

(ಈ) ಆತ್ಮನಿವೇದನೆ

೧೭

ನಿನ್ನ ಸೇವೆಯೊಂದೇ ಸಾಕು ಇನ್ನೇನು ಬೇಕು
ನನ್ನ ವಾಸುದೇವಾರ್ಯನೆ ಎನ್ನ ನೀನೆ ನೋಡಬೇಕು ಪ

ಮುನ್ನಿನಾ ಜನ್ಮಗಳಲ್ಲಿ ಪುಣ್ಯ ಕರ್ಮಗಳೊದಗಿ
ತನ್ನ ತಾನೆ ಫಲಿಸಿಯೆ ಹಣ್ಣಾದುದಾಗಿ
ನಿನ್ನ ಸನ್ನಿಧಿಗೈತಂದು ಯೆನ್ನ ಸೇರಿಸಿತದರಿಂದ
ಧನ್ಯನಾದೆ ಧನ್ಯನಾದೆನಯ್ಯ ಗುರುವೆ ೧

ಜನನಿ ಜನಕರು ಸುಕೃತ ತನುಗಳಾದರದರಿಂದ
ಮನಸಿನ ಕಲ್ಮಷಗಳು ಕೊನೆಗಂಡವಯ್ಯ
ಚಿನುಮಯಾತ್ಮಕನೆ ನಿನ್ನ ಕೊನೆಗಣ್ಣಿನ ನೋಟವೆನ್ನ
ತನುವಿನೊಳೆರಗಿತಲ್ಲ ಎನಗಿನ್ನೀ ಭವ ಭಯವೆಯಿಲ್ಲ ೨

ಪಾದುಕೆಯೊಳಿಗವಿದು ಪಾವನನ ಮಾಡಿದುದು
ವೇದವೇದ್ಯರ ಗತಿಯನ್ನು ತೋರ್ದುದು
ಆದರಿಸಿ ಕರೆದೆನ್ನ, ಬೋಧೆಗೆ ಯೋಗ್ಯನ ಮಾಡಿ
ನೀ ದಯದಿ ಮಂತ್ರರಾಜದ ಹಾದಿಯ ತೋರ್ಪಂತೆಸಗಿದುದು ೩

ನಿನ್ನ ಸನ್ನಿಧಿಯೆ ಕಾಶಿ ನಿನ್ನ ಮೂರ್ತಿಯೆ ವಿಶ್ವನಾಥ
ನಿನ್ನ ಚರಣ ತೀರ್ಥಗಂಗೆ ಯಮುನೆ ಸರಸ್ವತಿ
ನಿನ್ನ ಪ್ರಸಾದವೆಯಮೃತ ನಿನ್ನೊಲವೆ ಮುಕ್ತಿ ಮಾರ್ಗ
ನಿನ್ನ ವಾಕ್ಯ ದಿವ್ಯಮಂತ್ರ ನಿನ್ನ ದಾಸ್ಯವೆ ಸಾಮ್ರಾಜ್ಯ ೪

ತರುಣನಾಗಪುರವಾಸ ಪರಮಪುರುಷ ವೆಂಕಟೇಶ
ಗುರುವಾಸುದೇವಾರ್ಯ ವೇಷದಾಳಯ್ಯ ಶ್ರೀಶ
ತರಳ ನಾನು ತಿಮ್ಮದಾಸ ಅರಿಯೆನ್ನೈ ಸಂಸಾರಕ್ಲೇಶ
ಹರಿದುಹೋಗುವಂತೆ ಲೇಸಕರುಣಿಸೊ ದಯದಿ ಸರ್ವೇಶ ೫

(ಉ) ಋಣ ಕೀರ್ತನೆಗಳು

೧೮

ಅಯ್ಯಯ್ಯೊ ಮೊರೆಯಿಡಲೇಕೆ ಕೇಳಿಸದೆನ್ನ
ಹುಯ್ಯಲು ವೆಂಕಟರಮಣನೆ
ಕಯ್ಯಾರೆ ಋಣಪಿಶಾಚಕೊಪ್ಪಿಸಿದೆಯಾ
ಕೊಯ್ಯಬಾರದೆ ಕೊರಳನು ಕೋಪ ಬಂದರೆ ಪ

ದೇಶ ಕಾಲದ ವಿಪರ್ಯಾಸವೋ ನಾ ಮಾಡ್ದ
ದೋಷದ ಬಲುಹೊ ತಿಳಿಯದಲ್ಲಾ
ನೀ ಸಲಹೆಂದು ಕೂಗುವದೆನ್ನೊಳುದಿಸಿದು
ದೇಸು ಭವದ ಸುಕೃತವೊ ಫಲಿಸದಿದೇಕೆ ೧

ತಂದೆ ತಾಯಿಗಳು ಪುಣ್ಯವೃಂದವ ಮಾಡ್ದವ
ರೆಂದು ಜನರು ಪೇಳುತಿರುವರೂ
ಕಂದನುದಿಸಿದನೆಂತೆಂದು ಹಿಗ್ಗಿದರಂತೆ
ಕಂಡೆನಲ್ಲಾ ನರಕವನೀ ಋಣಕೆ ಸಿಕ್ಕಿ ೨

ಜನಿಸಿದ ಮೂರು ವರುಷಕೆ ನಿನ್ನಯದಾಸ
ನೆನುತ ಮಾತುಳನಿಂದ ನುಡಿಸಿದೆ
ಅನವರತವು ನಿನ್ನ ನೆನಹಪಾಲಿಸಿದೆಯೀ
ಯನುಭವವೇನೆಂದರೇಕೆ ನುಡಿಯದಿಹೆ ೩

ತನುವ ದಂಡಿಪೆನೆ ವಿಷಯರುಚಿ ಬಿಡದಿದೆ
ವನಿತೆ ಸುತರ ಮೋಹ ಬಿಡದಿದೆ
ಘನವಾದ ಗುರುವಿನನುಗ್ರಹ ದೊರೆತಿದೆ
ಋಣಪೈಶಾಚವಿದೊಂದು ಗಣಿಸದಲೆಯುತಿದೆ ೪

ಮೊರೆಯ ಲಾಲಿಸದೆ ಕೈಬಿಡಬೇಡ ಚಿಕನಾಗ
ಪುರಪತಿ ವೆಂಕಟರಮಣನೆ
ಮರೆಯೊಕ್ಕೆನೈ ತಿಮ್ಮದಾಸ ನಾನೆಲೆ ಜಗ
ದ್ಗುರುವೆ ಶ್ರೀವಾಸುದೇವಾರ್ಯ ದಯಾಬ್ಧಿಯೆ ೫

೧೯

ಋಣವ ಮಾಡಿದ ಪತಿತನು ನಾನು ಸ್ಮೃತಿ
ಧನವ ಪಾಲಿಸು ಸೀತಾರಾಮ ನೀನು ಪ

ಹಿರಿಯರ ಮಾತನು ಹಿಂದುಗಳೆದು ಮುಂದೆ
ಬರುವ ದುಃಖಗಳ ಬಗೆಗೊಳದೆ
ದುರುದುಂಬಿತನದಿಂದ ದುಷ್ಟಸಂಗತಿಗೈದು
ಪರರ ಮೆಚ್ಚಿಸಿ ಬಾಳ್ವ ಪೌರುಷ್ಯವನು ನೀಗಿ ೧

ಹೆಮ್ಮೆಯ ಬಲುವಿಷ ಹೆಡತಲೆಗೇರಿರೆ
ಸುಮ್ಮಾನಬಡುತತಿಸುಖವಿದೆಂದು
ಉಮ್ಮಳಿಪರ ಠಕ್ಕಿಗುಬ್ಬಿ ಯೀ ಪರಮಾತಿ
ಗೊಮ್ಮೆಯು ಮನಗೊಡದೊರಟುಮಾರ್ಗವ ಸಾರಿ ೨

ಕಾಶಿಯೊಳ್ಮರಣವ ಕಾಮಿಸಿದರೆಯು
ಸನ್ಯಾಸವ ಮಾಡ್ದರು ಸನ್ಮುಕ್ತಿಯು
ತಾ ಸೋಕದು ಋಣತಗುವಿದ್ದವನನೆನ್ನು
ವೀ ಸೊಲ್ಲ ಹಿರಿಯರು ಸಾರಿದರೆಯು ಮೀರಿ ೩

ಗೋವ ಕೊಂದವನಿಗೆ ಗಂಗೆಯ ಹಳಿದಗೆ
ಭಾವೆ ಭೂಸುರರನು ಬಡಿದವಗೆ
ಯಾವದು ಗತಿಯದು ನಿಷ್ಕೃತಿ ಋಣಿಗಿಲ್ಲೆಂದು
ಭಾವಜ್ಞರರುಹಿದ ಭಯವನು ಗಣಿಸದೆ ೪

ಬಡ್ಡಿಯ ಹೆಚ್ಚಿಸಿ ಬಹು ಧನವನು ತಂದು
ಕಡ್ಡಿಗೆ ಸರಿಮಾಡಿಕೊಟ್ಟವರಾ
ಅಡ್ಡಿಯ ತೋರಿಸುತ ಸುಲಭ ಮುಳುಗಿಸಿ
ದುಡ್ಡು ದುಗ್ಗಾಣಿಯ ತಿರಿದುಂಬ ರೀತಿಗೆ ೫

ಋಣಕರ್ತೃ ಪಿತೃಶತ್ರು ಧನಕರ್ತೃ ಪಿತೃ ಸಖ
ಯೆನುವ ಗ್ರಂಥಾರ್ಥಗಳನು ಕೇಳಿಯೂ
ಗಣಿಸದೆ ಸತಿ ಸುತರ್ಕೊರಗಿದರೆಯು ಕೆಟ್ಟು
ತೃಣಕಿಂತ ಕಡೆಯಾಗಿ ತಬ್ಬಿಬ್ಬನಾಡುತ್ತ ೬

ಸಾಲವ ಕೊಟ್ಟವ ಸಾರಿ ಸಾರಿಗೆ
ಕೇಳಿದರವನಿಗೆ ಕದ್ದೋಡುತಾ
ಬೇಳುವೆ ಮರಣವ ಬಾಯಲಾಡುತ ಬುದ್ಧಿ
ಜಾಳಾಗುವಂದದಿ ಜಡಿದು ಹೆದರಿಸುತ ೭

ಹಿರಿಯರಾರ್ಜಿಸಿದಂಥಾ ಧನಧಾನ್ಯ ಕ್ಷೇತ್ರ
[ವರ]ಭೂಷಣಗಳ ಮಾರಿ ಸಾಲದ ಭೀತಿಗೆ *

೨೦

ಋಣವ ಮಾಡಿದ ಪಾಪ ರುಜುವಾಗಲೀಸದು
ಹಣ ಹೊನ್ನಕೊಡೆ ಪುಣ್ಯಹೃದಯರು ಒಲಿದು ಪ

ನಿತ್ಯ ಕರ್ಮವು ತಾನೆ ನಿಂತಿತು ಸೂತಕ
ಸುತ್ತಿಕೊಂಡಿರೆ ಮನಸಿಗೆ ತೀರುವನಕಾ ೧

ರಾಮಾಯಣ ಪಾರಾಯಣ ನಿಂತಿತೂ
ಯೀ ಮಹಾಚಿಂತೆ ತಾನಿದಿರಿಡೆ ಬಲಿತೂ ೨

ಧನವ ಸಂಗ್ರಹಿಸಲು ತಿರಿದುಕೊಂಬವನಲ್ಲ
ಕಣುಗೆಡಿಸಲು ಬಂದ ಕಪಟವಿದಲ್ಲ ೩

ಪರಲೋಕ ಹಾನಿಯ ಭಯದಿಂದ ಬಂದೆನು
ಕರವಿಡಿದೆನ್ನನು ಕಾಯಬೇಕಿನ್ನೂ ೪

ನಿಷ್ಕೃತಿಯಿಲ್ಲದ ನೀಚ ಪಾತಕವಿದು
ವಿಷ ಸಹಸ್ರದಿಂ ನಾಶವಾಗುವದು ೫

---

* ಅಸಮಗ್ರ

ಯೀ ದುಃಖವಭಿಮಾನದಿಂ ಬಂದುದಿದನೀಗ
ಬೀದಿಯೊಳರಸುವೆ ಬಿಡುವಂತೆ ಬೇಗ ೬

ದುಡ್ಡು ದುಗ್ಗಾಣಿಯಾದರು ಸಾಕು ಬೇಗದಿ
ಅಡ್ಡಿಯ ಮಾಡದಪ್ಪಣೆಗೊಡಿ ದಯದಿ ೭

ಬೇಳುವೆಯನು ಮಾಡಿ ಬೆದರಿಸುವವನಲ್ಲ
ಶ್ರೀಲಕ್ಷ್ಮೀಪತಿ ಬಲ್ಲ ಸದ್ಗುರು ಬಲ್ಲ ೮

ಕಾಶಿಗೆ ಹೋಗಬೇಕಾಗಿದೆ ಯೀ ಕೊಳೆ
ನಾಶವಾಗದೆ ಗಂಗೆ ನನಗೆ ತೋರುವಳೆ ೯

ನೀಕರಿಸುವರಿಂದ ನಿರ್ವೇದ ದೊರಕಿತು ಹಾಳಾದುದು
ಯೀ ಕಲುಷವದೆಂದಿಗಳಿವದೊ ತೊಳದು ೧೦

ಚಿಕ್ಕನಾಗಪುರದಿ ವಾಸುದೇವಾರ್ಯಗುರು
ಪಕ್ಕನಪ್ಪಣೆಯ ಕೊಟ್ಟ ಕಾರಣ ಬಂದೆ ೧೧

೨೧

ಋಣವ ಮಾಡ್ದಧಮಗುಸುರಲೆಯಿಲ್ಲ ನೀತಿಯ
ಮನು ಮುಖ್ಯಸ್ಮೃತಿಕರ್ತರೂ ಪ

ಕಣುಗೆಟ್ಟಿನೀ ದೋಷ ಕಡಲೊಳಗೆ ಮುಳುಗಿ ಮುಂ
ದಣ ಗತಿಯದೇನೆನಗೆ ಕರುಣಿಸೈ ಗುರುವೆ ಅ.ಪ

ಹೇಮಾದ್ರಿ ಮಾಧವೀಯಾದಿ ಪ್ರಾಯಶ್ಚಿತ್ತ
ನೇಮ ವಿಧಿ ಕಾಂಡಗಗಳೊಳೂ
ಕಾಮದಿಂದಲಿ ಮಹಾಪಾತಕಗಳನು ಮಾಡಿ
ದೀ ಮಹಾ ತಂಡಗಳೊಳೂ

ಭೂಮಿ ಗೋ ದ್ವಿಜರಾಜ ಸ್ತ್ರೀ ದ್ರೋಹಿಗಳೊಳು ಪರ
ಭಾಮಿನೀಗಾಮಿಗಳೊಳೂ
ತಾಮಸಾಧಮರೊಳಧರ್ಮನೆನಿಸಿಹೆನೆಂ
ಗೇ ಮರಳಿ ಮರಳಿ ಪೇಳಿಹುದಲ್ಲವೆ ಗುರುವೆ ೧

ಹದಿನೆಂಟು ಬಗೆ ಮಹಾ ಪೌರಾಣ ಕಥೆಗಳೊಳ
ಗಧಮನೀ ಖುಣವಂತನೆ
ವದರುತಿವೆಯುಪಪುರಾಣಂಗಳಷ್ಟಾದಶಗ
ಳಧಮನೀ ಖುಣವಂತನೆ
ಒದಗಿದೀ ಸಂಖ್ಯೆಯುಪಸ್ಮೃತಿಗಳೊಳಗೂ ಪೇಳ್ವು
ದಧಮನೀ ಖುಣವಂತನೆ
ಸದಯತನ ಪುಟ್ಟದಾಯಿತೀ ಪತಿತ ವಿಷಯದಲಿ
ಹದನೆನಂಮುಂದೆ ಮುಳುಗಿದೆನೆಲ್ಲೊ ಗುರುವೆ ೨

ಮೂರು ಮತ್ತೈದಾ ಭೇದ ಖುಣ ವಿ
ದ್ದರೆಯು ತೀರುವರೆ ಮಾರ್ಗಗಳಿವೆ
ತೀರದಿದ್ದರು ಜನುಮಗೊಡುವವಲ್ಲದೆ ವೃದ್ಧಿ
ಸಿರಿ ಬೆಳೆಯದೆ ನಿಂತಿವೆ
ಆರು ಬಗೆಯಿಂ ಬಡ್ಡಿ ನುಡಿಯದಿದ್ದರು ದಿನವು
ಮೀರಲಿದಕೊದಗುತಲಿವೆ
ದಾರಿಯ ನನಗೀಪರಿಯ ಧನ ಖುಣವ ದೈವ
ಹೇರಿ ತಳವಳಿದೆನ್ನೈರಕ್ಷಿಸೈ ಗುರುವೆ ೩

ಕಾಶಿಗೈದುವರಾಗದಡವಿಯೊಳಿರುವರಾಗ
ದೀಶ ಭಜನೆಯ ಗಣಿಸದೂ
ಯೀಷಣೆಗಳನು ಬಿಟ್ಟು ಸನ್ಯಾಸವನು ಮಾಡ
ಲೀಸದೆ ತನವನರಸದೂ
ದೇಶದೇಶವ ತಿರುಗೆ ತೀರ್ಥಗಳೊಳ್ಮಿಂದರೂ

ಲೇಶ ಮಾತ್ರವು ಸವೆಯದೂ
ಈ ಶರೀರವು ಬೀಳೆ ಕ್ರಮವಾಗಿ ತೊತ್ತು ಸತಿ
ದಾಸಸುತ ಕತ್ತೆಭವಗೊಡುವದ್ಕೆ ಗುರುವೆ ೪

ಋಣವು ಮಾಡಿದ ಪತಿತನುಂಬ ಪಂಕ್ತಿಯೊಳು ಜನ
ರುಣಲಾಗದುಂಡರವನೂ
ತನಯ ಪೌತ್ರರು ಸಹಿತ ಪತಿತನಪ್ಪನು ನಿಮಂ
ತ್ರಣಗೈಸೆ ಧನ ಋಣಿಯನೂ
ಎಣಿಸಲಾ ಕಲ್ಪನರಕವು ಪಿತೃಗಳಿಗೆ ಕರ್ತ
ನನುಭವಿಪ ನರಕಗಳನೂ
ಎನುತ ಭೀಷ್ಮಾಚಾರ್ಯರುಸುರಿದರು ಧರ್ಮನಂ
ದನಗೆ ಭಾರತ ಶಾಂತಿಪರ್ವದೊಳು ಗುರುವೆ ೫

ತಲೆಯೋಡ ಪಿಡಿದು ಚಂಡಾಲಗೇರಿಯಲಾದ
ರಳುತ ಕೊಟ್ಟ ಪರಧನವ
ಸಲಿಸದೆ ಕೆಟ್ಟು ಬಂದೆನು ಭಿಕ್ಷಗೊಡಿಯೆಂದು
ಹಲವು ನಿಂದ್ಯದ್ರವ್ಯವಾ
ಅಳುಕದೆ ತಂದು ಜೀವನಗೈಯ್ಯುದರಿಂದು
ಸಲೆಗೈದು ತಂದ ಋಣವಾ
ಕಳಿವ ನವನರಕಗಳೆಂದು ಹರಿಶ್ಚಂದ್ರ ವಿಭು
ತಿಳುಹಿದರು ದುರ್ಮನ ಬಿಡದಲ್ಲೊ ಗುರುವೆ ೬

ಸುತನ ಮಾರಿದ ದೋಷ ಸತಿಯ ಮಾರಿದ ದೋಷ
ಪಿತೃ ಮಾತೃಪತ್ಯ ದೋಷಾ
ಪತಿತನಾಗುವ ದೋಷ ಪತ್ರವನು ಬರದು ತನು
ಪತನವಾಗುವ ವಿಶೇಷ
ಯತನದಿಂದ ಮಾಡ್ದ ಪುಣ್ಯವು ಪೋಪದೋಷ ಪರ
ಸುತ ಭೃತ್ಯನಪ್ಪ ದೋಷ

ಜೊತೆಗೂಡಿ ಗಣಿಸದೆ ಸಾಲವನು ಮಾಡಿದೀ
ಪತಿತನನು ನರಕಕಿಳುಹುವದೆಲ್ಲೊ ಗುರುವೆ ೭

ನಿತ್ಯಕರ್ಮವ ಮಾಡುವಧಿಕಾರ ಮೊದಲಿಲ್ಲ
ಸತ್ತ ಸೂತಕಕಧಿಕವೂ
ಹೆತ್ತ ತಾಯಿ ತಂದೆಗಳ ಮೃತ ದಿನದಿ ಪಿಂಡಗಳ
ನಿತ್ತರವರನುಸಿರವೂ
ಸತ್ತರೂ ಬಿಡದೆ ಬೆಂಬತ್ತಿ ಪೈಶಾಚದಂ
ತೊತ್ತುವದೇಳೇಳು ಭವವೂ
ಇತ್ತಲ್ಲದೆ ಬಡ್ಡಿಸಹ ಮೌಲ್ಯವನು ಪೋಗ
ದೆತ್ತ ಹೋಗಲಿ ಯೇನಮಾಡಲ್ಯೆ ಗುರುವೇ ೮

ವರುಷ ಸಾವಿರವಾದರೆಯು ಋಣದ ಮಹಿಮೆಯನು
ಬರೆಯುವದಸಾಧ್ಯ ಗುರುವೆ
ಪರಮ ಋಣಿಗಳು ಸ್ಮೃತಿ ಪುರಾಣೇತಿಹಾಸಗಳೊ
ಳರುಪುತಿಹರಿಂತು ಗುರುವೆ
ಹರತು ಋಣಗತ್ತಲೆಯು ನಿನ್ನ ಪದಗಾಬಂತೆ
ಕರುಣಿಸ್ಯೆ ಬೇಗ ಗುರುವೆ
ಮರೆಯೊಕ್ಕೆ ನಾನು ತಿಮ್ಮದಾಸ ಚಿಕ್ಕನಾಗಪುರ
ವರನಿಲಯ ವಾಸುದೇವಾರ್ಯ ಸದ್ಗುರುವೆ ೯

(ಊ) ಸಾಮಾಜಿಕ ಕೃತಿಗಳು

೨೨

ಎಣಿಸಿಕೊ ನಿನ್ನೊಳಗಣ ದೋಷಗಣವಾ
ಗಣಿಸು ಪರರೊಳಿಪ್ಪ ಶುಭಕರ ಗುಣವಾ ಪ

ಪರರ ಬಾಗಿಲ ಕಾಯ್ದು ಪರಿಪರಿ ನುತಿಗೈದು
ಕರಗಿಸಿ ಮನವ ಬೋಧಿಸಿ ತತ್ವವಾ
ಪಿರಿದಾಗಿಯವರ ವಿತ್ತಾದಿಗಳೊಳು ಮನವಿರಿಸಿ ೧

ದೊರೆಯದಿರೆ ಪರಸತಿ ಪರಧನ ಪರರನ್ನ
ಪರನಾಗಿ ಪರಿಪರಿಯುಪಚಾರಗೈದವರ
ಪರ[ವಶ]ವ ಪಡೆದಿರುತವರೊಳು ದೋಷ
ವೆರಸಿದ ಗುಣಗಳನರಸಿ ಕೆಡುವೆಯಾಕೆ ೨

ನಿನ್ನೊಳುದಿಸಿದ ಸದ್ಗುಣ ನಿನ್ನ ಭೂಷಿಸಿ
ಯುನ್ನತನೆನಿಸಿಯೆ ರಕ್ಷಿಪುದೂ
ನಿನ್ನೊಳಗಣ ದುರ್ಗುಣ ನಿನ್ನುವ ದೂಷಿಸಿ
ಕಣ್ಣುಗೆಡಿಸಿ ಕೊಂದು ಕೂಗುವದದರಿಂದಾ ೩

ಮೂಳ ಹೆಮ್ಮೆಯ ಬಿಡು ತಾಳು
ಖೂಳವಾದವ ಸುಡು ಹರುಷ ಬಿಡು
ಶೀಲತನವ ಹೂಡು ಬಾಳುವದನು ನೋಡು
ನಾಳೆ ತಾನಿರುವದೊ ಬೀಳುವದೋ ಗೂಡು ೪

ಪರರ ನಿಂದಿಸಿ ದೋಷ ಪಿರಿದಾಗಲಾಯಷ್ಯ
ಕಿರಿದಾಗಿಯೂ ಕರ್ಮ ನಿನಗಾಗಿಯೆ
ನರಕದೊಳಾಳುವೆ ಕುರಿ ನಾಯಿ ಕಾಕ ಸೂ
ಕರ ಜನ್ಮಗೊಡದೆ ತೊಲಗಿ ಪೋಗುವುದರಿಂದಾ ೫

ವರಜನ್ಮಾಂತರದೆ ಸದ್ಗುಣ ಲೇಶ
ವಿರಲದನೆ ಗಣಿಸುತ ಹಿಗ್ಗಲು
ಕರಗಿ ನಿನ್ನಯ ದೋಷ ಹಿರಿದುಮ್ಮಳವ ಪಡೆ
ದಿರುವೆ ಸುಖ ಮತ್ತೆ ಪರಗತಿ ಪಡೆಯುವೆ ೬

ಗುರುವಾಸುದೇವಾರ್ಯ ಚರಣದೊಲವ ಪಡೆಯುವರೆ
ಪರಗುಣಗಳ ಗಣಿಸು ಕಂಡ್ಯಾ

ಕರುಣದಿಂ ಚಿಕನಾಗಪುರಪತಿ ವೆಂಕಟ
ಗಿರಿವಾಸ ಸನ್ನಿಧಿ ದೊರೆಯುವದಿದರಿಂದಾ ೭

೨೩

ಬೆಳಗಾಗಲೆದ್ದೆ ನಾನೀಗ ಜಾಗ್ರದಲಿ
ಮಲಗಿದ್ದು ನಿದ್ರೆ ತಿಳಿವನಕ ರಾತ್ರೆಯಲಿ ಪ

ಬ್ರಹ್ಮ ತಾನೆಂದೆಂಬ ಭಾನು ಬಳಿಕಸ್ತಮಿಸೆ
ಹಮ್ಮೆಂಬ ಸಂಜೆಗತ್ತಲೆಯಡರಲು
ಉಮ್ಮಳಿಪ ವಿಷಯ ರೂಪದ ಮಾಯೆ ನಡುವಿರುಳು
ಜುಮ್ಮೆನುತ ಮೈಮರೆದ ವಿದ್ಯೆಯಲಿ ಮುಳುಗಿ ೧

ಕೃಷ್ಣಪಕ್ಷದ ಕಡೆಯ ದಿವಸ ನಡುರಾತ್ರಿಯಲಿ
ದಟ್ಟವಿಪ ಮೇಘಮಂಡಲದ ತೆರದಿ
ಇಚ್ಚೆಡೆಯ ಕಾಮದಲಿ ಮನಮುಳುಗಿ ಮತ್ತಲ್ಲಿ
ಮುಟ್ಟಿ ಕರ್ಮವ ಮಾಡಲದು ಕಣ್ಣುಮುಚ್ಚಿರಲು ೨

ಸತ್ಯ ಜಗವೆಂದೆಂಬ ವರುಷ ಋತು ದಾಟಿದುದು
ನಿತ್ಯವಲ್ಲದ ಮಾಯೆ ನಿಶಿ ತೆಗೆದುದು
ಪ್ರತ್ಯಗಾತ್ಮಜ್ಯೋತಿ ಸೂರ್ಯತಾನುದಿಸಿದನು
ಮುತ್ತೆರದಹಂಕಾರ ನಿದ್ರೆ ಲಯವಾಯ್ತು ೩

ಗುರುವಿನಂಘ್ರಿಗೆ ನಮಿಸಿದರುಣ ತಾನುದಿಸುತಿರೆ
ಗುರುತರದ ಮೋಹಾಂಧಕಾರ ಬಳಿಕ
ಹರಿದು ಬೆಳಕಾವರಿಸಿ ಗುರುವಿನುಪದೇಶರವಿ
ಸ್ಫುರಿಸಿ ಸರ್ವತ್ರ ತಾ ನಿಬಿಡವಾಗಿರಲು ೪

ತಿರುಪತಿಯ ವೆಂಕಟನ ಚರಣಕಮಲವನೊಮ್ಮೆ
ಕರಣದೊಳಗಪ್ಪಿ ಕನಸಿನ ಕಡೆಯಲಿ

ಹರಿದುಹೋಯಿತು ಕನಸು ಸ್ಥಿರತೆನಿಂತಿತು ನಿಜವು
ಮರಳಿ ಕನಸನು ಕಾಣದಂತಾಯಿತೀಗ ೫

೨೪

ಬೆಳಗುತಿದೆ ಬೆಳಗುತಿದೆ ಭಾನುವಿನ ಬೆಳಕು
ಥಳಥಳಿಸಿ ಸರ್ವವನು ತೇಜಿಸುವ ಬೆಳಕು ಪ

ಅಮಿತಾಂಡಕೋಟಿಗಳನಾಳಿ ಬೆಳಗುವ ಬೆಳಕು
ತಿಮಿರ ತಂಡಗಳನ್ನು ತೆಗೆದಿಡುವ ಬೆಳಕು
ಸುಮನಸರರೂಪಾಗಿ ಶೋಭಿಸುತ್ತಿಹ ಬೆಳಕು
ವಿಮಲವಾಗಿಯೆ ತಾನು ಒಲಿದಿರುವ ಬೆಳಕು ೧

ಮನೆಮನೆಗಳಭಿಮುಖದಿ ಮೂಡಿನಿಂದಿಹ ಬೆಳಕು
ಮುನಿಮನೋಜ್ಞತೆಯಾದ ಮುಖ್ಯತಮ ಬೆಳಕು
ಸನಕಾದಿಗಳು ತಾವೆ ಸಂಪಾದಿಸಿದ ಬೆಳಕು
ಕೊನೆ ಮೊದಲ ನೋಡಿದರೆ ಕಾಣದಿಹ ಬೆಳಕು ೨

ಹಲವು ಕ್ರಿಯೆ ಸೂತ್ರಗಳ ಹಿಡಿದಾಡಿಸುವ ಬೆಳಕು
ಜಲಜದಂದದಿ ಕರ್ಮಜಡರಹಿತ ಬೆಳಕು
ನಿಲುಕದೆ ಗಗನದಲಿ ನಿಂದವೋಲಿಹ ಬೆಳಕು
ಚಲನವನು ಚಕ್ಷುವಿಗೆ ಜೋಡಿಸಿಹ ಬೆಳಕು ೩

ಕಾರಣವು ತಾನಾಗಿ ಕಾರ್ಯವೆನಿಸಿಹ ಬೆಳಕು
ಮೀರದೆ ಜೀವರನು ಮಿಕ್ಕಿರುವ ಬೆಳಕು
ಮೂರು ಲೋಕಕೆ ಭರ್ತೃ ಮುಕ್ತಿ ಸುಖವಹ ಬೆಳಕು
ಪಾರಮಾರ್ಥಿಕವಾದ ಪರಬ್ರಹ್ಮ ಬೆಳಕು ೪

ಪರಮ ಪಾವನವಾಗಿ ಪಾಪವಳಿಯುವ ಬೆಳಕು
ಶರಣಾಗತರನು ಕಾಯ್ವ ಸುಲಭ ಸುಖ ಬೆಳಕು

ತಿರುಪತಿಯ ವಾಸವನು ತಾಳಿಕೊಂಡಿಹ ಬೆಳಕು
ವರದ ವೆಂಕಟರಮಣನಾಮ ರವಿ ಬೆಳಕು ೫

(ಖ) ಕ್ಷೇತ್ರದರ್ಶನ

೨೫

ಕೆರೆಗೋಡು ಶಂಕರ ಸ್ತುತಿ

ಮರೆಯೊಕ್ಕೆ ನಿನ್ನನು ಮರುಗಿ ರಕ್ಷಿಸಬೇಕು ಶಂಕರೇಶಾ
ಗಿರಿಜೆಯಾಣ್ಮನೆದೇವ ಕೆರೆಗೋಡಿಪುರದೀಶ ಶಂಕರೇಶಾ ಪ

ಮರಳಿ ಮರಳಿ ಗರ್ಭಕುರುಳಿ ನಾನೊಂದೆನು
ಪರಿಪರಿ ಕರ್ಮದ ಫಲಗಳನುಣಲಾಗಿ
ದುರಿತ ತೊಲಗದೀವರೆಗು ನಾನೇಗೈವೆ
ಕರುಣಾರಸ ನಿನಗೇತಕುದಿಸದಿದೆ ೧

ಸೂತ್ರಧಾರಕ ನೀನು ಸಕಲಜೀವರಿಗೆಲ್ಲ
ಪಾತ್ರ ಕೃಪೆಗೆ ನಾನು ಪ್ರೇಮದಿಂ ನೋಡಿನ್ನು
ಗೋತ್ರಾರಾತಿ ವಂದಿತ ಪಾದಕಮಲನೆ
ಸ್ತೋತ್ರವ ಮಾಳ್ಪುದ ಮೊದಲೆ ನಾನರಿಯೆನು ೨

ಮರತಿ ಪುಟ್ಟದು ನಾನಾವಿಧ ಭವಸುಖದಲಿ
ವರೆತರಿತೆನೆನಿಸಿದ ಕರ್ಮದ ಬಲುಹಿನಿಂ
ಬೆರೆತು ಬಯಲ ಮೋಹದಲಿ ಮೋಸಹೋದೆನು
ಕುರಿತು ಕಾಮ್ಯವ ಭಜಿಸಿದೆನೊ ನಿನ್ನನು ೩

ಉರಿಗಣ್ಣ ದೃಷ್ಟಿಯಿಂ ದುರಿತವ ದಹಿಸಿನ್ನು
ವರಶಶಿನೇತ್ರದಿಂ ನೋಡಿ ತಾಪವ ಪರಿ
ಹರಿದಶ್ವನೇತ್ರದಿ ಜ್ಞಾನವನರುಹಿಸು
ಶರಣಾಗತನಪರಾಧವನೆಣಿಸದೆ ೪

ಗುರು ವಾಸುದೇವಾರ್ಯ ಮೂರ್ತಿದಾಳಿದೆ ದೇವ
ವರಚಿಕ್ಕನಾಗಾಖ್ಯಪುರದಿ ಭಕ್ತರಿಗಾಗಿ
ಪರದೇಸಿತನದಿ ಮಹಿಮೆಗಳ ತೋರ್ದನೆ
ಚರಣ ಸೇವಕ ತಿಮ್ಮದಾಸ ನಾನು ಪರಾಕು ಶಂಕರೇಶಾ ೫

(ಎ) ವಿಶೇಷ ಸಂದರ್ಭದ ಕೀರ್ತನೆಗಳು

(೧) ಒಬ್ಬಟ್ಟಿನ ಕೀರ್ತನೆಗಳು

೨೬

ಕಂದII ಗುರುವಾಸುದೇವರಂಘ್ರಿ
ಸ್ಮರಣೆಗೆ ಸಂತೋಷವೀವ ಒಬ್ಬಟ್ಟಿನ ನುತಿ
ವೆರಸಿದ ಕೀರ್ತನೆ ಪೇಳುವೆ
ಹರುಷದಿ ಲಾಲಿಪುದು ಸುಜನರ್ಬಾಲೋಕ್ತಿಯನೂ ೧

ಬೆಲ್ಲವು ಗೋಧಿಯು ತೊಗರಿಯು
ಒಳ್ಳೆಣ್ಣೆಯು ತುಪ್ಪವೆಂಬೀಯ್ಯೈದ ನುತಿಯಲು
ಎಲ್ಲಾ ಲೋಕವ ನಿರ್ಮಿಸಿ
ಚಲ್ಲಿದಭೂತಗಳು ತತ್ವಾರ್ಥಕ್ಕಾಸ್ಪದವಿಲ್ಲ ೨

ಹರುಷದಲಿದರೊಳು ಬೆರೆದಿಹ
ಪರಮನು ವಿಂಗಡಿಸಿ ದೂಷಿಸಿ ಮತ್ತೊಡಗೂಡಿಸಿ
ಕರಗುತ ಪ್ರಮದರಿದರೊಳು
ನೆರೆಪೊಂದುವನೀಗ ಜೀವನಿದು ತತ್ವಾರ್ಥವೂ ೩

೨೭

ಗರ್ವಿಸುವದು ತರವೆ ಗರ್ವಿಸುವದು ತರವಲ್ಲ ನೀವಿದ ಕೇಳಿ
ಸರ್ವೇಶನೊಪ್ಪನೀ ನಡತೆಯ ಕಂಡರೆ ಪ

ತೊಗರಿ : ಬೆಲ್ಲವೆ ಬಾ ನಾನು ತೊಗುರಿಬೇಳೆಯು ನನ
ಗುಲ್ಲಾಸದಿಂದೊಂದು ಯೋಚನೆ ತೋರಿತು
ಎಲ್ಲರು ಒಬ್ಬಟ್ಟು ಒಳ್ಳಿತೆಂದೆಂಬರು
ಬಲ್ಲವರಾದರೆ ವಿವರಿಸದಿರುವರೆ
ಸಲ್ಲದ ಮಾತನಾಡಲಿಬೇಡ ಸತ್ಯವ
ನಿಲ್ಲಿ ನನ್ನೊಳು ಪೇಳು ಮತ್ತೆ ನಾಲುವರಿರು
ವಲ್ಲಿ ನ್ಯಾಯವ ತಿದ್ದಿಕೊಂಬ ನಾವಿಬ್ಬರು
ಇಲ್ಲದ ಬಳಿಕ ಗೋಧಿಯ ದೆಸೆಯಿಂದೇನು
ಸಲ್ಲದ ತುಪ್ಪವನೇನ ಮಾಡಲಿಬೇಕು
ಒಳ್ಳೆಯತನ ನಿನ್ನೊಳು ಇರುವುದಿದ
ನೆಲ್ಲವನೆನಗೆ ಪೇಳು ಸಟೆಯ ಪೇಳ
ಬಲ್ಲೆನೆ ನಾ ನಿನ್ನೊಳು ನಿಮ್ಮೊಳು ನಾನೆ
ಬಲ್ಲಿದನಲ್ಲವೆ ಕೇಳು ನನ್ನನೆ ಯೆಲ್ಲಾ
ಕೊಳ್ಳುವರವನಿಯೊಳು ನೀನೂ ಸ್ವಲ್ಪ
ವಲ್ಲವೆ ನಿಜ ನಮ್ಮೊಳು ಕೋಪಿಸಬೇಡ
ಸಲ್ಲದ ವಸ್ತುಗಳು ಗೋಧಿಯು ಎಣ್ಣೆ
ಯಲ್ಲವೆ ನಿತ್ಯದಲ್ಲೂ ತುಪ್ಪವ ಬಿಡು
ಪೊಳ್ಳುನುಡಿದರೆನ್ನ ಮಾತೆಲ್ಲ ಪಾಳು ೧

ಬೆಲ್ಲ : ಏನೆಲೆ ತೊಗುರಿಬೇಳೆಯೆ ನನ್ನ ಸ್ವಲ್ಪವೆಂ
ದೇನು ಕಾರಣವನು ಕಂಡು ನನ್ನೊಡನೀಗ
ನೀನುಸುರಿದೆ ಮಾತು ಹೆಚ್ಚಿ ಬರುತಲಿದೆ
ಯೀ ನಡೆ ನಿನ್ನಯ ಶ್ರೇಷ್ಠವದೆನಿಟಷ್ಟೊ
ನಾನಿಲ್ಲದಿರಲು ಸೀಯಾಗುವದೆಂತುರೆ
ನೀನು ಸುಮ್ಮನೆ ಹೇಳಿಕೊಂಬೆ ತನ್ನಯ ಸ್ತುತಿ
ತಾನೆ ಮಾಡಿಕೊಂಬ ಮನುಜಗೆ ನರಕವೆಂ
ಬೀನಿಗದಿಯನರಿತರೆ ಪರನಿಂದೆಯ

ನೀನೆಚ್ಚರಂಗೆಟ್ಟು ಮಾಳ್ಪೆಯ ಇನ್ನಭಿ
ಮಾನವನೀಗ ಯಿರುಯೆನ್ನೆಡೆಯೊಳು
ನೀನಿರಬೇಡ ಸಾರು ಹೆಚ್ಚುಗೆ ನಿನ್ನ
ದೇನದನೆನಗೆ ತೋರು ದುರ್ಜನರು ತಾ
ವೀನುಡಿ ನಿಜವೆಂಬರು ಸತ್ಪುರುಷರು
ಮಾನಸದಲಿ ಒಪ್ಪರು ನಿನಗೆ ಅಭಿ
ಮಾನ ಮೊದಲು ಇದ್ದರೂ ಹಾರು ಮುಂದು
ಜಾಣತನವೆಯಾದರೂ ಹೆದರದಿಪ್ಪೆ
ಹೀನಾಯವೆ ಬಂದರೂ ನಾಲುವರೆನ್ನ
ದೀನಡೆಯೆನ್ನುವರು ಎಂಬುದನೀಗ
ನೀನರಿಯದೆ ಬಂದೆಯಿದು ಪಾಪ ಬೇರು ೨

ಗೋಧಿ : ಹೋಗಲೆ ತೊಗುರಿ ಬೆಲ್ಲಗಳಿರ ನನ್ನನು
ಕೂಗಿ ಬೈವಿರಿ ಗೋಧಿ ಯೋಗ್ಯದ ವಸ್ತು ತಾ
ನಾಗದು ಎಂದು ಕೊಬ್ಬಿದ ಮಾತನಾಡುತ
ನೀಗಿಕೊಂಬಿರೆ ನಿಮ್ಮ ಮಾನವ ನೀವೆ ನಾ
ನಾಗದೆ ನಿಮಗೆ ಸಹಾಯ ಒಬ್ಬಟ್ಟೆ ಯಿ
ದಾಗುವದೆಂತು ಗಾಣದೊಳರಯಿಸಿಕೊಂಡು
ಹೋಗಲಿಲ್ಲವೆ ಗರ್ವ ಬೆಲ್ಲವೆ ನಿನ್ನಯ
ಬೇಗೆ ನಿನಗೆ ಯಿದರಿಯೆ ತೊಗುರಿಯ ಬೇಳೆ
ಶ್ರೀಗುರು ಬಲ್ಲ ನಾನನ್ಯಾಯಿಯೆಂಬುದ
ನೀಗ ನೀವರಿಯದಿರೆ ನಿಮ್ಮನು ಅರೆ
ವಾಗೆನ್ನ ಮರೆಗೆ ಬರೆ ಹೇಳುವೆ ಬುದ್ಧಿ
ಯೋಗವ ನಾನಿಲ್ಲಿರೆ ಸದರ ನಿಮ
ಗಾಗಿದೆ ಕೊರಗಿಪರೆ ಮಾತಿನ ಪರಿ
ಯೇಗುವುದೆನಿಸದಿರೆ ನಿಮ್ಮನು ತೃಣ
ಕಾಗಿ ನಾ ಕಾಣುವರೆ ಕಾಣೆನು ಮಾನ

ಹೇಗೆ ನಿಮ್ಮೊಳು ಹೋಗೆ ಯೆನಗೆ ಸಮ
ನಾಗಲು ನೀವು ಬಲ್ಲಿರೆ ಯೀ ಯಾಳಿಗೆ
ಹೋಗಿ ನೀವು ಕೊಬ್ಬಿದರೆ ಈಶ್ವರ ಕೃಪೆ
ಯಾಗುವದೆಂತೆನ್ನು ಮರೆಯೊಗಲೊಲ್ಲಿರೆ ೩

ಎಣ್ಣೆ : ಹರಟಿಕೊಂಬಿರೆ ನೀವೆ ನಿಮ್ಮೊಳು ನನ್ನನು
ಜರೆಯುತಲೆಣ್ಣೆಯಿಂದೇನೆಂದು ನಾನಿಲ್ಲ
ದಿರಲು ನೀವೆಂತೊಂದು ಗೂಡಿ ಬಾಳುವಿರಿದ
ನರಿಯದೆ ಮುಂಗೆಟ್ಟು ನುಡಿದರೇನಾಯಿತೀ
ಪರಿಯಹಂಕಾರ ಲೇಸಲ್ಲ ಹೀನಾಯವು
ಬರುವದು ಪರರ ನಿಂದಿಸಿ ಜೀವಿಸುವುದು
ತರವಲ್ಲ ಸದ್ಗತಿಗೆಟ್ಟು ಕೊನೆಗೆ ಬರ
ದಿರದು ನರಕ ಬೆಂಕಿಯಿಂ ಮೂರುವೇಳೆ ನೀ
ಕೊರಗುವೆ ಬೆಲ್ಲವೆ ಕೇಳು ತೊಗುರಿಯೆ ನೀ
ನಿರದೆ ಸಾರಿಯೊಳು ಬೇಯುವೆ ಗೋಧಿ
ಕೊರಗುವೆ ಕಲ್ಲಿನೊಳು ಚಚ್ಚಿಸಿಕೊಂಡು
ಇರುವದೆ ನಿಮ್ಮವೊಲು ಕಷ್ಟವದೆಂಬದರಿ
ಯಿರೆ ನೀವು ನನ್ನೊಳು ಯಿಂಥಾ ನಡೆ
ಬರುವುದೆ ಬಹು ಕೇಳಾ ಹೀನಾಯವು
ಬರದಿರದೀ ಬಾಳು ಯಾತಕೆ ಸುಖ
ಕರ ಮಾರ್ಗ ತಾ ನಿಮ್ಮೊಳು ಯಿಲ್ಲವು ಯಿದ
ನರಿಯದೆ ನಿಮ್ಮಳಲು ಬಿಡದು ನನ್ನ
ಮರೆಯೊಕ್ಕು ಬದುಕುವದಿದು ಬಹುಮೇಲೂ ೪

ತುಪ್ಪ : ಜಗದೊಳು ನೀವೆ ಬಲ್ಲಿದರೆಂದು ನಿಮ್ಮೊಳು
ನಿಗದಿಯ ಮಾಡಿಕೊಂಬಿರಿ ಗರ್ವ ಹೆಚ್ಚಿತೆ
ಸುಗುಣವಂತರು ನೀವಾದರೀಪರಿಯಲ್ಲಿ

ಬಗುಳಿಕೊಂಬಿರೆ ತುಪ್ಪವಂ ಬಿಡುಯೆನ್ನುತ
ಮಿಗೆ ಸುರತತಿ ಮೊದಲಾಗಿ ನನ್ನಿಂದಲಿ
ಸೊಗಸಾಗಿ ಕೃಪೆವಡೆವರು ನಾನಿಲ್ಲದೆ
ಮಿಗೆ ಶುದ್ಧರಾಗುವಿರೆಂತು ಬರಿದೆ ನಿಮ್ಮ
ನಿಗದಿಯ ಪೇಳಿಸಿಶಾನಿಗೆ ನನ್ನ ನೀ
ವಗಲಲು ರುಚಿಕರವೆಂತು ನಾನೊಪ್ಪೆನು
ನಿಗಮದ ಮಾತಿದುವೆ ಸಟೆಯ ಮಾಡಿ
ಸೊಗಸಾಗಿ ಬಾಳಿ ನೀವೆ ಅನ್ಯಾಯಗ
ಳಗಣಿತವಾಗಿಯಿವೆ ನನ್ನಯ ನ್ಯಾಯ
ನಿಗದಿಯಾದರೆ ಹೋಗುವೆ ತಪ್ಪಿದರೆ ಈ
ಜಗದೊಳಗ್ನಿಯ ಪೊಗುವೆ ನಿಮಗೆ ಆಣೆ
ಯಗಲಿದರಿಲ್ಲಿಂದವೆ ಪೋಟಾಟವೆ
ಜಗದೊಳುತ್ತಮ ವಸ್ತುವೆ ನಾನೆಂಬರು
ಬಗೆಯಿರೆನ್ನನು ನೀವೆ ಮೊಂಡರುಯೆಂದು
ಖಗವಾಹನಗೆ ಪೇಳುವೆ ಚಿಕ್ಕನಾಗ
ನಗರಕೆ ನಡೆಯಿರಿ ನ್ಯಾಯವ ತಿದ್ದುವೆ ॥

ಒಟ್ಟಾಗಿ : ದೇವ ಭಕ್ತಾವನ ಪಾವನ ಚರಿತ ಸುರಾವಳಿನುತಪಾದ
ಭಾವಜ ಜನಕ ರಮಾವಲ್ಲಭಾನಂತ ಗೋವಿಂದ ಮಾಧವ
ನೀವರಿಯದೆ ಪೋಗಲಾವಗತಿ ನಮ
ಗೀ ವಸುಧೆಯೊಳ್ಮುನಿಭಾವಿತ ಚರಣನೆ
ಸಾವಧಾನದೊಳು ಪರಾಮರಿಸಿಯಿಂತಪ್ಪ
ದಾವಲ್ಲಿಯಿದ್ದಡಲ್ಲಿಗೆ ತಕ್ಕ ಶಿಕ್ಷೆಯ
ನೇ ವಿರಚಿಸಿ ಗುಣವಿದ್ದಲ್ಲಿ ರಕ್ಷಿಪು
ದಾವ ಪರಿಯಲಾದರು ಜಗನ್ನಾಥನೆ
ಯೀವ್ಯವಹಾರವನು ನಿಗದಿಗೈದು
ನೀವೊಲಿದೆಮ್ಮುವನು ರಕ್ಷಿಸಬೇಕು ದೇವಾದಿ

ದೇವ ನೀನು ಅನಾಥರ ಕಾವಲ್ಲಿ ದಯಾವಂತನು
ಸುಜನಪತಿ ಭಾವಿತ ಪಾದಪದ್ಮನು ನೀನೆ ಗತಿ
ನಾವರಿದನ್ಯರನು ಬಾಳುವೆವೆಂತು
ರಾವಣಾರಿಯೆ ನೀನು ಕೈಪಿಡಿ ಗತಿ
ಯಿವರೆದಿಕ್ಕು ನೀನು ಮಾಡಿನ್ನೇನು
ಭಾವಿಸೆವನ್ಯರನು ನಮ್ಮಿಂದಲಿ
ಸೇವೆಗೊಳುವ ನೀನಿರಲು ಭಜಿಸದೆ ನಾವು ೬

ಬರಿದೆ ಜಗಳವಾಡಬೇಡವೀಚೆಗೆ ಬನ್ನಿ
ಒರೆಯುವೆ ಬುದ್ಧಿಯ ಕೇಳಲಿಚ್ಛಿಸಿದರೆ
ತರುಣನಾಗಾಖ್ಯಪುರದ ವೆಂಕಟೇಶನು
ಗುರುವಾಸುದೇವಾವತಾರವ ತಾಳಿಯೆ
ಕರುಣದಿಂ ತಿಮ್ಮದಾಸನ ಬಹುದೋಷವ
ಪರಿದಾಳ್ದನೆಂಬ ಬಿರುದಪೊತ್ತು ನಾನೀಗ
ಮೆರೆಯುವೆನೀವೆಲ್ಲ ಬರಿ ಮಾತ ಮಾಡದೆ
ಶಿರದಲಿ ಹೊತ್ತು ನನ್ನಯ ನುಡಿಗೇಳಲು
ಬರುವುದು ಕೀರ್ತಿ ಮೂಜಗದೊಳಗದರಿಂದ
ನೆರೆಯೀಗ ನೀವೆಲ್ಲರೂ ಒಂದಾಗಿಯೆ
ಯಿರಲು ಸೌಖ್ಯವದೆಂಬರು ಏಂಗಡದಿ ನೀ
ವಿರಲು ಜನರು ಬೈವರು ಕೂಡಲು ನನ್ನ
ಗುರುದಯ ಬಹುದೆಲ್ಲರು ಹಿಗ್ಗಿ
ವರು ಮತ್ತರಿತು ಸಾರವ ಕೊಂಬರು ಬಹಳ ಶ್ರೇಷ್ಠ
ರುವದರಿಯದಿದ್ದರೂ ಹೊಣೆಯ ನೀವೆ
ನೆರೆ ನಿಮ್ಮನೀ ಜನರು ಬೈಯದ ಹಾಗೆ
ಉರು ಶಿಕ್ಷೆಯನೆ ಮಾಳ್ಪರು ಯಾರೆಂಬಿರೆ
ಅರಿಯಿರಿ ಗಂಗಪ್ಪ ಹೊಣೆ ಹೋಗಿನ್ನಾದರು ೭

೨೮

ಒಬ್ಬಟ್ಟಿಗೆ ಮಂಗಳ

ಜಯ ಮಂಗಳಂ ಶುಭೋದಯ ಮಂಗಳಂ
ನಯವಿದರಿಗೊಪ್ಪಾದ ಒಬ್ಬಟ್ಟಿಗೆ ಪ

ಐದು ದ್ರವ್ಯಂಗಳೊಡನೈದಿತೊ ಇಚ್ಛೆಯಲಿ ಯೀ ಕೃತಿಯಾಗಿ
ನಾದಿ ತೇಜೋಬ್ಧಿಯಲಿ ಸರ್ವಜನಕೆ
ಐದಿಸುತ ಸುಖವ ಸಂಪಾದಿಸುತ ಗುರುವರನ
ಪಾದಸ್ಮರಣೆಗೆ ಮತಿಯನೀಯುವುದಕೆ ೧

ಹರಿಸಮಾರಾಧನೆಯೊಳರಸಿ ನೋಡಿದರೆ ತಾ
ನಿರದೆಡೆಯೊಳಿಲ್ಲ ಮಂಗಳವೆನಿಸುತ
ಬೆರೆದಿರಲು ತಾನು ಸರ್ವರಿಗು ಹರುಷವನಿತ್ತು
ಪೊರೆದು ಚೆನ್ನಾಯಿತೆನಿಸುವ ವಡವೆಗೆ ೨

ಮೆರೆದು ಚಿಕ್ಕನಾಗಪುರದಲಿ ತನ್ನ ಮಹಿಮೆಯನು
ಗುರುವಾಸುದೇವ ಕೃಪೆಯನ್ನು ಪಡೆದು
ಪರಮ ಭಾಗವತ ಗಂಗಾಧರಯ್ಯನ ಹೊಣೆಯ
ನಿರದೆ ಸಂಪಾದಿಸಿದ ಒಬ್ಬಟ್ಟಿಗೆ ೩

(೨) ದಂಡಕ

೨೯

ಏವಂ ನಿಶಾಸಾಬ್ರುವತೋರ್ದ್ರತೀತಾನಂದಸ್ಯ ಕೃಷ್ಣಾನುಚರಸ್ಯ ರಾ ... ಗೋಪ್ಯಃ
ಸಮುತ್ಥಾಯ ನಿರೂಪ್ಯದೀಪಾನ್ವಾಸ್ತೂಂತ್ಸ ಮಭ್ಯರ್ಚ್ಯದದೀಪ್ಯ ಮಥಯನ್
ರಾದೀಪ ದೀಪ್ತೈರ್ಮಣಿಭಿರ್ವಿರೇಜೋರಜ್ಜೂ ವಿಕರ್ಷತ್ಕರ ಕಂಕಣ ಸ್ರಜಃ
ಚಲ್ನಿತಂಬಸ್ತನಹಾರ ಕುಂಡಲಾಃ ಸ್ವಿದ್ಯತ್ಕಪೋಲಾರುಣ ಕುಂಕುಮಾನೇನಾಃ

ಉದ್ಗಾಯತೀನಾಮರವಿಂದಲೋಚನಂ ವ್ರಜಾಂಗನಾನಾಂ ದಿವಮಸ್ಪೃಶದ್ಧ್ವನಿಃ ದಧ್ನಶ್ಚನಿರ್ಮಥನ ಶಬ್ದಮಿಶ್ರಿತೋನಿರಸ್ಯತೇಯೇನ ದಿಶಾಮಮಂಗಳಂ ಏಕಾದಶಸ್ಕಂಧೇ ಏಕಾದಶಾಧ್ಯಾಯೆ ಶ್ರೀಭಗವಾ ಬದ್ಧೋ ಮುಕ್ತ ಇತಿ ವ್ಯಾಖ್ಯಾ ಗುಣತೋಮೇ ನವಸ್ತುತಃ ಗುಣಸ್ಯ ಮಾಯಾ ಮೂಲತ್ವಾನ್ನಮೇಮೋಕ್ಷೋ ನಬಂಧನಂ ಆತ್ಮಾಬದ್ಧೋ ಮುಕ್ತತಮೇಗುಣತಃ ಮದಧೀನಸತ್ವಾವಿಗುಣೋ ತ್ವಂ ಕಿಂನಸ್ಯಾತ್ತತ್ರಾಹ ಗುಣಸ್ಯ ಮಾಯಾ ಮೂಲತ್ವಾನ್ ಬಂಧನಂ ನಾಸ್ತಿ ಅತ ಏವ ಮೋಕ್ಷಶ್ಚನಾಸ್ತೀಃ ನನು ಕಥಂ ಸರ್ವಶಾಸ್ತ್ರ ವಿರುದ್ಧ ಮುಚ್ಯತೆ ತತ್ರಾಹ ಇತಿ ಮೇಮ್ಯಾಖ್ಯೇತಿ ಏವಂ ಮತ್ತ್ಯತೋನಿರ್ಣಯಃ ಅಲಮತಿಕುತರ್ಕೈ ರಿತ್ಯರ್ಥಃ ಅತ ವೈವಮನ್ವಯಃ ಆತ್ಮಾಬದ್ಧೋ ಮುಕ್ತ ಇತಿಯಾವ್ಯಾಖ್ಯಾ ಉಕ್ತಂ ಸಾಮೆ ಗುಣತಃ ಮದ್ಗುಣ ಪಾರತಂತ್ರ್ಯಾತೋ ಅತ್ರ ಹೇತುತ್ವೇನಗುಣನಿಯಂತರಿ ಸ್ವಸ್ಮಿನ್ ತದ್ವ್ಯತಿರೇಕಮಾಹ ಅತ ಏವ ನಮೇ ಬಂಧನಂ ನಮೇ ಮೋಕ್ಷೋಪೇತಿ ಅನ್ಯತ್ಸಮಾನಂ

(೩) ಗುರುಕರುಣೆಯೊದಗಿದ ಸಂದರ್ಭದ ಹಾಡುಗಳು

೩೦

ಲಿಂಗಾಭಟ್ಟರಗ್ರಹಾರದಲ್ಲಿ ಗುರುದರ್ಶನ

ಕಾವೇರಿ ತೀರದಲಿ ಕಂಡೆ ಗುರುವರರ
ಆವಜನ್ಮಾಂತರದಲಾಯ್ತೊ ಭವಪಾರ ಪ

ಶ್ರೀರಂಗಪಟ್ಟಣದ ಸನ್ನಿಧಿಯೊಳಿರುತಿರುವ
ಆರ್ಯ ಲಿಂಗಾಭಟ್ಟರಗ್ರಹಾರದಲಿ
ಮಾರಹರನಾಲಯದ ಮುಂದೆಸೆವ ಮಠದಲ್ಲಿ
ಸೇರಿದ್ದರದ ಕಾಣೆ ಸ್ನಾನಕವರ್ಯೆತರಲು ೧

ಏಕಾದಶಿಯ ದಿವಸ ದಿನನಸ್ತಮಯದಲ್ಲಿ
ಆ ಕಮಲ ಮಿತ್ರನಿಂಗಭಿನಮಿಸಿ ಬಳಿಕ

ಪ್ರಾಕಾರದಲಿ ಶಿವನ ಪ್ರಾದಕ್ಷಿಣಂಗೆಯ್ದು
ತಾ ಕಾಲದಲಿ ನನ್ನ ಕರೆದು ಮನಿನ್ನಿದವರ ೨

ನಾರಾಯಣಾಯೆನುತ ನಾಮಗಳನಮಿತವನು
ಚೀರಿ ಪೊಗಳುತ ತಾವು ಚರಣಗಳನಿಡುತ
ಸೇರಿ ಸನ್ನಿಧಿಯಲ್ಲಿ ಸದ್ವಿಪ್ರರಿಬ್ಬರಿರೆ
ಮೀರಿಯವರನು ನನ್ನ ಮಂದಲಿಸಿದವರನ್ನು ೩

ಅಪರಿಮಿತ ಜನ್ಮಗಳಲಾರ್ಜಿಸಿದ ಕರ್ಮಗಳ
ಸುಪವಿತ್ರ ದೆಮ್ಮಡಿಗೆ ಸೇರಿಸೆಂದೆನುತ
ತಪನವಿಗ್ರಹರದನು ತಾವೆ ಸೆಳೆದೆವೆನುತ್ತ
ಸುಪಥನನು ಮಾಡಿ ಸಲೆ ಸನ್ಮಂತ್ರವಿತ್ತರನು ೪

ಇರು ಜಪಿಸುತೀ ಮನವನಿಚ್ಛೆ ಬಂದಂತೆಂದು
ಯೆರಗಿಸಿದರೀಶನಡಿಗೆಣೆಸಿ ನೂರೆಂಟಾ
ತಿರುಪತಿಯ ವೆಂಕಟನ ತನು ರೂಪರಾದಿಂಥ
ಉರು ದಯಾನಿಧಿಯಾದ ವಾಸುದೇವಾರ್ಯರನು ೫

೩೧

ಪಾದುಕೆಗಳ ಭಾಗ್ಯ

ಶ್ರೀಗುರುವು ಶ್ರೀರಂಗಪಟ್ಟಣಕಾಗಿ ಬಿಜಯಂಗೈದು ಮಠದಲಿ
ಯೋಗಪೀಠದಲಿರ್ದ ಸಮಯದಿ ವಿಪ್ರಕುಲ ಬಂದು
ಆಗ ಚಾತುರ್ಮಾಸ್ಯ ಒದಗಿರಲಾಗಿ ಪ್ರಾರ್ಥನೆಗೈದ ಕಾರಣ
ರಾಗರಹಿತನು ವಾಸುದೇವನು ನೆಲಸಿದನು ದಯದಿ ೧

ತೀರಿ ವ್ರತವನು ವಿಶ್ವರೂಪದ ದಾರಿಯಲಿ ಸಂಚರಿಸಿ ಪುನರಪಿ
ಮಾರಹರನಾಲಯದ ಮುಂದಣ ಮಠಕೆ ಬಂದಿರುತಾ
ಸಾರಿ ಸಾಯಂಕಾಲದಲಿ ಕಾವೇರಿಯಲಿ ಸ್ನಾನವನು ಮಾಡಿಯೆ
ನಾರೆಯಣನಾಮವನು ಸ್ಮರಿಸುತ ಬಹುದ ನಾಂ ಕಂಡೆಂ ೨

ಕಂಡ ಬಳಿಯಲೆ ಭಕ್ತಿಭಾವದಿ ದಂಡದಂತಾನೆರಗೆ ಕೃಪೆಯಿಂ
ಮಂಡೆಯೆತ್ತೇಳಾರು ನೀನೆಂದಾಗ ಮಂದಲಿಸಿ
ಪುಂಡಾರೀಕಾಂಬಕನ ದಾಸನೆ ಗಂಡುಗಲಿಯಾಗಿಹೆಯ ಕ್ಷೇಮವೆ
ಕಂಡೆವಿಂದಿಗೆ ಬಹುದಿವಸಕೆಂದಾಗ ನುಡಿಯುತಿರೆ ೩

ಆ ಬಳಿಯ ಮನೆಯಿರಲು ಮಾಳಿಗೆ ಶೋಭಿಸುತ ಬೆಳುದಿಂಗಳಿಗೆ ಬಲು
ಗಾಬರಿಯ ಸಂದಣಿ ಮಹಾನವಮಿಯ ಮಹೋತ್ಸವದಾ
ಕಾಬರಿದ ಮೇಲಿದ್ದ ವಿಪ್ರನು ತಾ ಭುಜಿಸಿ ತಾಂಬೂಲಶೇಷವ
ತೂಬಿರಿಯೆ ಮುಕ್ಕುಳಿಸಿ ಗುರುಶಿರದೊಳಗೆ ಬಿದ್ದುದದು ೪

ಹರಹರಾಗುರುಕೃಪೆಯೆಕೋಪವುಬರಬಹುದುನಿನಗೆನುತನುಡಿಯಲು
ಗುರುವು ಕಂಡಾ ಬಳಿಯ ಕೇಶವಮೂರ್ತಿಯೆಂಬವನು
ಅರಿಯದಾದ್ಯೆ ಮೇಲೆ ಕುಳಿತೀ ಬರುವ ಯತಿಗಳ ನ್ಯಾಯವೇಯೆಂ
ದರುಹಲಾ ದ್ವಿಜಬೆದರಿ ಧುಂಮಿಕ್ಕಿದನು ಭೂತಳಕೆ ೫

ತಪ್ಪಿದೆನು ದಮ್ಮೈಯ ಗರ್ವವನೊಪ್ಪಿಕೊಳಬೇಕೆನಗೆ ಗತಿಯೇ
ನಪ್ಪುದೋ ಕಂಗಾಣದಾದೆನು ವಾಸುದೇವಾರ್ಯಾ
ತಪ್ಪಿದೆನು ತಪ್ಪಿದೆನು ತಪ್ಪಿದೆ ತಪ್ಪಿದೆನು ತಪ್ಪಿದೆನೆನುತ್ತಲಿ
ಧೊಪ್ಪನಡಗೆಡಹಿದರ ತನುವನು ನೋಡ್ದ ಗುರುವರನು ೬

ತಂದೆ ಬಾ ಯನ್ನಯ್ಯ ಬೆದರದಿರೆಂದಭಯವನು ಕೊಡುತ ಕರುಣಾ
ಸಿಂಧು ವಾಗಮೃತದಲಿ ನೆನಸಿದ ಪರಿಯನೇನೆಂಬೆ
ಕಂದನಪ್ಪನು ಸುಗುಣವಂತನು ಮುಂದಣೀ ದಿವಸಕ್ಕೆ ನಿನಗೆನು
ತೆಂದು ಮತ್ತವರಾಡಿದುಕ್ತಿಯನೆಂತು ಬಣ್ಣಿಪೆನು ೭

ಸಹಜ ತಂಬುಲ ಶಿರದ ಮೇಲಕೆ ಬಹುದು ಗುರುಕೃಪೆ ರೂಪವೆತ್ತೀ
ವಿಹಿತ ಪ್ರಾಯಶ್ಚಿತ್ತಗೈದುರು ವಿರತಿಯನು ಕಲಿಸಿ
ಸಹಜ ಸುಖಸಂವಿತ್ತದವಿ ತಾ ಬಹುದುನೊದಗಿಸಿತಾಗಿ ಮುಂದೀ
ಬಹು ಜನರ ಗೋಷ್ಠಿಯನು ಬಿಡಿಸಿದುದೆಂದರುತ್ತರವಾ ೮

ಇರುವುದನುಚಿತ ಜನಸಮೂಹದಿ ಬರುವುದನುಚಿತ ಬರದ ಮಾರ್ಗದಿ
ಕರದು ಮನ್ನಿಸಿ ಜನರ ಕ್ಷೇಮವ ಕೇಳ್ವುದನುಚಿತವು
ಅರಿಕೆದಟ್ಟಿತು ಮನಕೆ ಗುರು ತಾನುರುಹು ಸಂನ್ಯಾಸವನು ಥೂಯೆಂ
ದಿರದೆ ಮೋರೆಯ ಮೇಲೆ ತಾನುಗುಳಿದನು ಸಿದ್ಧವಿದೂ ೯

ಪ್ರೇಷೆ ತಾ ಜ್ಞಾನಕ್ಕೆ ಮಾತೃವು ಪ್ರೇಷೆಯೇ ಜ್ಞಾನಕ್ಕೆ ತಂದೆಯು
ಪ್ರೇಷೆ ಭವಸಾಗರವ ದಾಂಟಿಪ ನಾವೆ ಸುಖಕರವೂ
ಪ್ರೇಷೆ ಸರ್ವೋತ್ಕರುಷವಪ್ಪುದು ಪ್ರೇಷೆಯನ್ನುಚ್ಚರಿಸಿ ಮತ್ತಭಿ
ಲಾಷೆಯಿಂ ಜನಸಂಗಗೈಯ್ಯಲ್ಕಾಯ್ತೆ ನಿಗ್ರಹವೂ ೧೦

ಭಲರೆ ಗುರುವರ ಧನ್ಯನಾದೆನು ಮರೆತೆ ತಪ್ಪಿದೆ ಮುಂದೆ ಜನರೊಳ
ಗಿರೆನು ಗುಹೆಯನು ಪೊಕ್ಕು ಮೌನವ್ರತ ಸಮಾಧಿಯಲಿ
ಯಿರುವವೋಲ್ ವೈರಾಗ್ಯವನು ನೀ ಕುರುಣಿಸಿದೆಯೆಂದೆನುತ ನಗುತಲಿ
ಹರುಷದಿಂ ಕಾವೇರಿಗೈತಂದನು ಗುರೂತ್ತಮನು ೧೧

ಸಾವಿರದ ಸಂಖ್ಯೆಯಲಿ ಮೃತ್ತಿಕೆ ಯೀವುದಕ್ಕೆನ್ನುವನು ನೇಮಿಸಿ
ಭಾವಿಸುತ ಪ್ರಣವವನು ಸ್ನಾನವ ಮಾಡಿ ನಿಯಮದಲಿ
ಭಾವವಳಿಸಿ ಕಮಂಡಲವ ಜಲಕೀವ ಸಮಯದಲುಗುಳ್ದ ವಿಪ್ರನ
ಭಾವದಲಿ ನಡುಗದಿರು ಸುತನಹನೆಂದ ಗುರುವರನು ೧೨

ಏನನೆನ್ನುವೆನಾ ದ್ವಿಜನು ಸುತ ಹೀನನತಿ ಯತ್ನಗಳ ಮಾಡುತ
ಭಾನುವಿಂಗೆರಗುತ್ತಲಿದ್ದನು ಪುತ್ರಕಾಮುಕನು
ಏನು ಕೃಪೆಯೋ ತಿಂಗಳೆರಡಕೆ ಮಾನಿನಿಯು ತಾ ಗರ್ಭದಾಳಿಯೆ
ಸೂನುವನು ತಾ ಪಡೆದಳೀ ಗುರು ಪೇಳ್ದ ದಿವಸದಲಿ ೧೩

ಮಿಂದು ಕಾವೇರಿಯಲಿ ಗುರುವರ ಬಂದು ಮಠಕಾಕ್ಷಣವೆ ವಿಪ್ರರ
ಸಂದಣಿಯ ನೆರೆ ಕಳುಹಿಯೆನಗಪ್ಪಣೆಯ ಕೊಡಲಾಗಿ
ಬಂದು ಮನೆಯೊಳಗಿದ್ದು ರಾತ್ರಿಯು ಸಂದ ಬಳಿಕಾನೈದಿ ನದಿಯೊಳು
ಮಿಂದು ಗುರವರಗೆರಗಲೈದಿಯೆ ಕಾಣೆ ನಾನಲ್ಲಿ ೧೪

ಸ್ನಾನಕ್ಕೈದಿದರೇನೊ ಬಂದರೆ ಕಾಣುವೆನು ನಮಿಸುವೆನುಯೆಂದೇ
ನಾನು ನೋಡಿದೆ ಬಾರದಿರೆ ಮಧ್ಯಾಹ್ನ ಪರಿಯಂತ
ಭಾನುವಿಂಗರ್ಘ್ಯವನು ಕೊಟ್ಟು ಮಹಾನುಭಾವರ ನೆನನೆನದು ದುಂ
ಮಾನದಿಂದಿರುತಿದ್ದೆ ಸಾಯಂಕಾಲ ಪರಿಯಂತ ೧೫

ಇರುಳಿಗೂ ಬರದಿರಲು ಪಾದುಕೆಯಿರಲು ಪೂಜಿಸಿ ನಮಿಸಿಯಗಲಿದ
ಪರಮ ತಾಪದಿ ಕುದಿದು ರೋದನಗೈದೆ ಪಂಬಲಿಸಿ
ಗುರುವರನೆ ನಿನ್ನಂಘ್ರಿಕಮಲದ ದರುಶನವು ಮರೆಯಾಯ್ತೆ ದೀನನ
ಕರೆದು ಮನ್ನಿಸಿ ಕಾಯ್ದೆಯಲ್ಲೈ ವಾಸುದೇವಾರ್ಯಾ ೧೬

ಏನು ಗತಿ ಮುಂದೆನಗೆ ಮಾರ್ಗವದೇನನುಗ್ರಹಿಸಿಪ್ಪ ಮಂತ್ರ ವಿ
ದೇನು ಜಪಿಸುವ ಮಾನವೆಂತಿದರರ್ಥವೇನಹುದು
ನಾನರಿಯದವನೆಂಬುದನು ನೀ ಜ್ಞಾನದೃಷ್ಟಿಯೊಳರಿದು ರಕ್ಷಿಸು
ದೀನನನು ಕೈವಿಡಿದು ಬಿಡುವರೆ ವಾಸುದೇವಾರ್ಯಾ ೧೭

ಭವಸಮುದ್ರದಿ ಮುಳುಗುತೇಳುತ ಲವಚಿ ತೆಗೆವರ ಕಾಣದಳಲುತ
ಕವಿಧು ತಮ ಕಂಗಾಣದಿರೆ ನೀನಾಗಿ ದಯತೋರಿ
ಭವಭವಾಂತರದುರಿತಗಳ ಪರಿಭವಿಸಿಯಭಯವನಿತ್ತು ಸಲಹಿದ
ದಿವಿಜವಂದ್ಯನೆಯಗಲಿದ್ಯೆ ಶ್ರೀ ವಾಸುದೇವಾರ್ಯಾ ೧೮

ಅರಿಯೆ ಹೃತ್ಕಮಲದಲಿ ಭಾವಿಪ ಪರಿಯನಿದಿರಿಟ್ಟಿರಲು ನೀ ಶುಭ
ಕರದ ಮೂರುತಿಯಾಗಿ ಗ್ರಂಥಾರ್ಥಗಳ ಶೋಧಿಸಿಯೆ
ಅರಿಯಬೇಕೆಂಬಿಚ್ಛೆ ಬರಲಿಲ್ಲುರುವ ನಿನ್ನಯ ವಾಗಮೃತ ರಸ
ಸುರಿಯೆ ತಾನೇ ಪಾನಗೈಯುತ ಮತ್ತನಾಗಿದ್ದೆ ೧೯

ಜೀವಿಸುವೆ ನಾನೆಂತು ಧರೆಯೊಳು ಪಾವನದ ಮೂರುತಿಯ ಕಾಣದೆ
ಭಾವದಲಿ ಸುಖಗೊಳಿಪ ವಾಕ್ಸುಧೆಯರತ ಕಾರಣದಿಂ
ದೇವ ಮರೆಯಪರಾಧವಿದ್ದರು ಕಾವ ಕರುಣೆಗೆ ಕೋಪವೇ ಸಂ
ಜೀವ ನೀ ಭುವನಕ್ಕೆ ತೋರೈ ವಾಸುದೇವಾರ್ಯಾ ೨೦

ಮೊರೆಯಿಡುತಲೀ ರೀತಿಯಿಂದಿರುತಿರಲು ಪಾದುಕೆಗಳಿಗೆ ನಮಿಸುತ
ಬರಲು ಪಲ್ಲವ ಬಾಯ್ಗ ಗುರುಕೃಪೆಯಿಂದ ತಾನಾಗಿ
ತಿರುಪತಿಯ ವೆಂಕಟನೆ ಮೂರ್ತಿಯ ಧರಿಸಿ ಯತಿವರನೆನಿಸಿದುದನಾ
ಹರುಷದಿಂ ಪಾಡಿದೆನು ಕೀರ್ತನ ನೆವದಿ ಮೈಮರೆದೂ ೨೧

೩೨

ತತ್ವೋಪದೇಶ

ತೋರಿಸಬೇಕು ನಿನ್ನ ನಿಜವನು
ಕಾರುಣ್ಯನಿಧಿ ಗುರುರಾಯ ನೀನು ಪ

ತೋರುವ ತೋರಿಕೆಯನು ಮೀರಿ ಮಿಕ್ಕಿಹ
ಪಾರಮಾರ್ಥಿಕ ಸಚ್ಚಿದಾನಂದ ರೂಪವ ಅ.ಪ

ಕಾಯ ಬಂದಂದವೆನಗೆ ಕಾಣಿಸದು
ಮಾಯಾಪಾಶದ ತೊಡರೆನ್ನ ಬಿಡದು
ಜಾಯಾಸುತಾದ್ಯರ ಬರಿಯ ಮೋಹದಲಾಯು
ಬೀಯವಾಗುತಲಿದೆ ಬಿಡಿಸಿದ ಬೇಗದಿ ೧

ಪ್ರಕೃತಿಯೊಳ್ ಕೂಡಿ ಪ್ರಕೃತಿಧರ್ಮಗಳಾದ
ಸುಕೃತ ದುಷ್ಕೃತ ಫಲ ರೂಪವಾದ
ವಿಕರಿಪ ಸುಖದುಃಖದನುಭವಕದಕೊಳಗಾಗ
ದಕಳಂಕದಿರವಿದೆಂಬುದು ತೋರದಿದೆ ದೇವ ೨

ಆಕಾಶದೊಳು ದೀಪಪ್ರಕಾಶವು
ಏಕವಾದಂತೆ ಚಿದಚಿತ್‌ಸಂಮೇಳವು
ಐಕ್ಯವಾಗಿರಲಚಿದ್ಭಾವವಳಿದು ಚಿತ್ತು
ಏಕವಾಗಿಹ ನಿತ್ಯನಿರ್ಗುಣ ರೂಪವ ೩

ಅರಿವಿದ್ದೂ ಮರವೆಯೊಳರಿವರಿಯದೆ
ಪಿರಿದಾಗಿ ಹಮ್ಮು ವಿಹರಿಸುತಿಹುದು
ಮರವೆಯಹಂಭಾವ ತೋರದರಿವಿನೊಳು
ಬೆರೆದು ಬೆರೆದ ಪರಿ ತೋರದಿರುವ ಹಾಗೆ ೪

ಮೃತ್ತಿನಿಂದಾದ ಘಟಶರಾವಾದಿಗಳು
ಮತ್ತೊಂದು ರೂಪವಾದ ತೆರದಲಿ
ಚಿತ್ತೊಂದುಪಾಧಿಯಿಂ ನಾನಾತ್ವವಾಗಿರೆ
ಕೃತ್ರಿಮವಿದ ಕಡೆಗೊಳಿಸಿ ನಿಜದೊಳಿರಿಸಿ ೫

ಬೀಜದಿಂದಾದ ತರು ಭಿನ್ನರೂಪಾಗಿ
ಬೀಜದಾಕಾರ ಮಾಜಿದಂದದಲಿ
ವ್ಯಾಜರಹಿತ ವಿಭ್ರಾಜಮಾನ ಬ್ರಹ್ಮಬೀಜದಿಂ
ಮೂಜಗವಾದ ಬಗೆಯದೇನು ೬

ನಂಬಿದೆ ನಿನ್ನ ಚರಣಸರೋಜವ
ಅಂಬುಜನಾಭ ಗುರು ವಾಸುದೇವ
ನಂಬುಗೆಯನು ಕೊಟ್ಟು ಕರುಣವೆನ್ನೊಳಗಿಟ್ಟು
ಯಿಂಬಿಟ್ಟು ಸಲಹಿದ ವೆಂಕಟರಮಣ ನೀ ೭

೩೩

ಈ ಪರಿಯ ದೈನ್ಯತೆಯ ತಾಳಿ ಪ್ರಳಾಪಿಸುತ್ತಿರೆ ಕಡೆಯ ಜಾವದಿ
ಧೂಪಿಸಿದ ಸಮಯದಲಿ ನಿದ್ರೆಯ ಮರವೆ ಮುಸುಕಿದುದು
ತಾ ಪರಮ ಕೃಪೆವಂತ ಬಂದು ಪ್ರಳಾಪವೇನಿದುಯೆಂದು ನನ್ನಯ
ತಾಪವನು ತಂಪಿಸುತ ಬಿಗಿಯಪ್ಪಿದನು ದೇಶಿಕನು ೧

ಕಂಗಳೊಳಗಾನಂದಜಲ ಸುರಿದಂಗದೊಳು ರೋಮಾಂಚವಾಗಿಯೆ
ಮಂಗಳಾಕೃತಿಗಂಡು ಚರಣಕ್ಕೆರಗಿದೆನು ಮರಳಿ

ಕಂಗಳೊರತೆಯ ತೊಡೆದು ದಿವ್ಯ ಕರಂಗಳಿಂದಲಿ ಶಿರತಡವಿ ಸ
ರ್ವಾಂಗವನು ಬಿಗಿಯಪ್ಪಿಯಭಯವನಿತ್ತ ದೇಶಿಕನು ೨

ನಿನ್ನೊಳಾನಿಹೆನೆಲ್ಲಿ ಪೋಪೆಡೆಯನ್ನು ತೋರಿಸು ನನಗೆ ನೀನಾ
ರೆನ್ನ ಮನ ನಿನ್ನುವನುಳಿದು ನಿಲಬಲ್ಲುದೇ ಮಗನೇ
ಇನ್ನು ಧೈರ್ಯವ ಮಾಡು ಗಿರಿಗುಹೆಯನ್ನು ಸೇರ್ವೆನು ನಾನು ಜನತತಿ
ಯನ್ನು ಹೊದ್ದುವದಿಲ್ಲವೆಂದುಸುರಿದನು ದೇಶಿಕನು ೩

ಇರಿಸಿರುವೆನೀ ಪಾದುಕೆಗಳನು ಹರುಷದಿಂದರ್ಚಿಸುತ ಭಾವಿಸು
ಬರಿಯ ಭ್ರಾಂತಿಯ ಬಿಟ್ಟು ಭಕ್ತಿಯ ಬಲದಿ ಮಂತ್ರವನು
ನಿರುತ ಜಪಿಸುತ್ತಿರು ಯಥೇಚ್ಛೆಯೊಳರಿವು ಸುಖಸಂಪತ್ತಿ ಲಭಿಪುದು
ಪರಮ ಭಕತನು ನೀನೆನುತ ವಾಚಿಸಿದನು ದೇಶಿಕನು ೪

ವಿಜಯದಶಮಿಯ ದಿವಸ ಲಭಿಸಿತು ವಿಜಯಕರ ಮುಂದಿನ್ನು ನಿನಗೆಲೆ
ದ್ವಿಜನೆ ಸುತ ಪೌತ್ರಾದಿ ಕುಲಪಾರಂಪರೆಗೆ ನಿನ್ನಾ
ಸುಜನತೆಯ ಕರುಣಿಪುದು ಭಕ್ತವ್ರಜದೊಲೋಲಾಡುವದು ತಪ್ಪದು
ವಿಜಯಸಾರಥಿ ನಿನ್ನ ವಶವೆಂದನು ಗುರೂತ್ತಮನು ೫

ಅನಿತರೊಳು ಜನಸಂದಣಿಯ ಧ್ವನಿಯನು ತಿಳಿದು ನಾನೆದ್ದೆ ಬೇಗದಿ
ಘನಕೃಪಾನಿಧಿ ಗುರುವ ಕಾಣದೆ ಮತ್ತೆ ಬಳಲಿದೆನು
ಇನನುದಿಸಿದೊಂದರೆಘಳಿಗೆ ತಲೆಯನು ಬಿಡದೆಯಿದ್ದಲ್ಲಿ ಪಾದುಕೆ
ಯನು ಶಿರದಿ ತಾಳಿದೆನು ಮನೆಗೈದಿದೆನು ಹರುಷದಲಿ ೬

ತಿರುಪತಿಯ ವೆಂಕಟನು ಸುಖವನು ಕರುಣಿಸಲು ದೇಶಿಕನ ತನುವನು
ಧರಿಸಿ ಪಾದುಕೆಯಿತ್ತು ಸಲಹಿದನೊಲಿದು ಕೃಪೆಯಿಂದ
ಹರುಷದಿಂದೀ ದಿವಸ ಶ್ರೀ ಗುರುವರನ ಪೂಜಾಕಾರ್ಯವೆನಿಪುದು
ನಿರುತ ಭಜಿಸುವರಿಂಗೆ ಸಕಲೇಷ್ಟಾರ್ಥ ಸಿದ್ಧಿಪುದು * ೭

---

* ಕೊನೆಯಲ್ಲಿ 'ಶ್ರೀ ವಾಸುದೇವಾರ್ಯ ಗುರುಚರಣಾರವಿಂದಾಭ್ಯಾಂ ನಮೋ ನಮಃ'ಎಂದಿದೆ.

೩೪

ಶರಣು ಶರಣು ಶರಣು ಶ್ರೀ ಗಣನಾಥ ಪ

ಶರಣು ಶ್ರೀಶಾರದೆಯೆ ಶರಣು ವೆಂಕ
ಟರಮಣ ಶರಣು ಸದ್ಗುರುವೆ ಅ.ಪ

ಶರಣು ಮಾತೆಯ ಪಿತನೆ ಶರಣು ಹಿತಬೋಧಕನೆ
ಶರಣು ಬುದ್ಧಿಪ್ರದನೆ ಶರಣು ಸುಖಕರನೆ
ಶರಣು ವೇದಾಂತೋಪವೇಶನೆ ಪೋಷಕನೆ
ಶರಣು ಚನ್ನಾಂಬೆ ಶ್ರೀ ನಾರಾಯಣಾರ್ಯ ೧

ಶರಣು ನಾರಾಯಣಾರ್ಯ ಸದ್ಗುರುವರ್ಯ
ಶರಣು ಶ್ರೀವಾಸುದೇವಾರ್ಯ ಸದ್ಗುರುವೆ
ಶರಣು ಶ್ರೀ ಕೃಷ್ಣಯೋಗೀಂದ್ರ ಸದ್ಗುಣಸಾಂದ್ರ
ಶರಣು ಶ್ರೀ ವೆಂಕಟದಾಸಾರ್ಯ ಗುರುವರ್ಯ ೨

ಶರಣು ವಿಪ್ರೋತ್ತಮನೆ ಶರಣು ಪವಿತ್ರೆಯರೆ
ಶರಣು ಹರಿಹರ ಭಕುತರೆ ಮಹಾತ್ಮರೆ
ಶರಣು ಶ್ರೀ ಚಿಕ್ಕನಾಗಪುರವಾಸ ವೆಂಕಟೇಶ
ಶರಣು ಮರೆಹೊಕ್ಕೆ ನಿಮ್ಮ ನಾನು ತಿಮ್ಮದಾಸ ೩

೩೫

ಸಂಕೀರ್ಣ ಕೃತಿಗಳು

ನಂಬಿದೆ ನಿನ್ನ ಪಾಲಿಸೋ ಕರುಣಾಂಬುಧಿಯೆನ್ನ ಪ

ನಂಬಿದೆ ನಿನ್ನ ಪಾದಾಂಬುಜಯುಗವ ಹೇ
ಮಾಂಬರ ಸುಗುಣ ಕದಂಬ ವೆಂಕಟರಾಯಾ ಅ.ಪ

ಎಷ್ಟೆಂದುಸುರೆ ಕೋಟಲೆಗಳ
ಇಷ್ಟ ಮೂರುತಿಯೆ ಅಟ್ಟಿ ಬರುತ ವಿಷ

ಹುಟ್ಟು ಹೊಂದುಗಳೆಂಬ ಕಷ್ಟವ ಬಿಡಿಸೊ ವಿ
ಶಿಷ್ಟ ವೆಂಕಟರಾಯಾ ೧

ದಂದುಗದಿಂದಾ ಎನ್ನಯಮನ ಕಂದಿ
ಕುಂದುತಿದೆ ಇಂದು ನೀ ಬೆದರದಿ
ರೆಂದಭಯವನಿತ್ತು ಬಂಧವ ಕಳೆಯೆನ್ನ
ತಂದೆ ವೆಂಕಟರಾಯಾ ೨

ಕಡು ಮನೋವ್ಯಥೆಯಾ ವಿಭಾಡಿಸು
ನುಡಿಯಾಲಿಸಯ್ಯಾ ಬಿಡದೆ ನೀ ಎನ್ನ ಕೈ
ಪಿಡಿದು ಸಂಸ್ಕೃತಿಯೆಂಬ ಕಡಲ ದಾಂಟಿಸೊ ಎ
ನ್ನೊಡೆಯ ವೆಂಕಟರಾಯಾ ೩

ಗತಿ ನೀನೆಯೆಂದು ಸಾರಿದೆ ನಿನ್ನ
ನತಿ ದೀನ ಬಂಧು ಪತಿತ ಪಾವನ ನೆಂ
ದತಿಶಯದಿಂ ಶೃತಿ ನುತಿಸುತಲಿದೆ ತಿರು
ಪತಿಯ ವೆಂಕಟರಾಯ ೪

ಅಪರಾಧ ಶತವಾ ಮಾಡಿದೆ ನಾನು
ಕೃಪೆಯಿಂದ ಕ್ಷಮಿಸೈ ಜಪತಪವರಿಯದ
ಚಪಲ ಚಿತ್ತನು ನಾನು ವಿಮಲಪರಾನಂದ
ನಿಪುಣ ವೆಂಕಟರಾಯಾ ೫

ವಿಪ್ರವತ್ಸಲನೆ ಯನಗೆ ನೀನು
ಸುಪ್ರೀತನಾಗೈ, ತಪ್ಪುಗಳೆಲ್ಲವ
ನೊಪ್ಪುಗೊಳ್ಳುತ ಸಲಹಪ್ಪ ನಿಚ್ಚಲು ತಿ
ಮ್ಮಪ್ಪ ವೆಂಕಟರಾಯಾ ೬

ದುರಿತ ಭಂಜನನೆ ಮಹಾಪುಣ್ಯಾ
ಚರಿತ ರಾಜಿತನೆ ನೆರೆ ನಂಬಿದರ ಪತಿ

ಕರಿಸುವ ಬಿರುದುಳ್ಳ ಪರಮಾತ್ಮ ಮೂಡಲ
ಗಿರಿಯ ವೆಂಕಟರಾಯಾ ೭

ವಾರಿಜನಾಭ ಮಹೋನ್ನತ
ವಾರಣಾಧಾರಾ ಗಾರುಗೊಳಿಸುವ ಸಂ
ಸಾರ ದುಃಖವನಿದನಾರಿಗುಸುರುವೆ ಕೊ
ನೇರಿ ವೆಂಕಟರಾಯಾ ೮

ಮಂಗಳಾತ್ಮಕನೆ ಸೀತಾಕಾಂತ
ಮಂಗಳ ಮಹಿಮ ಮಂಗಳಗಿರಿ ನರ
ಸಿಂಗರಾಘವ ರಘುಪುಂಗವ ಅಲಮೇಲು
ಮಂಗ ವೆಂಕಟರಾಯಾ ೯

೩೬

ಪಾಹಿಗೋಪವೇಷಾ ವಿದಳಿತ ಭಕ್ತಸರ್ವ
ದೋಷಾಗತ ಮದ ಮೋಹ ಲೋಭ ರೋಷಾ
ಕೌಸ್ತುಭ ಮುಖ್ಯ ಮಂಜು ಭೂಷಾ
ಹರೇ ಮಾಂ ಪಾಹಿ ಗೋಪವೇಷಾ ಪ

ಭವ್ಯ ಗುಣ ಕಲಾಪ ಶಾರ್ಙ್ಗ ಚಾಪ
ಬೋಧ ರೂಪ ವಕ್ಷಸ್ಥಳ ಚತುರ್ಮುಖ
ಸೇವ್ಯ ಯೋಗಿ ವರ ಭಾವ್ಯ ಪದ್ಮಮುಖ
ದಿವ್ಯ ಲಕ್ಷಣಾಂಚಿತ ಪದಯುಗಳ ೧

ಚಂದ್ರ ಕುಲಾವತಂಸ ದಮಿತ ಕಂಸ
ಪರಮಹಂಸ ಚಿದಾವರ್ಣವಿತೇಂದ್ರ
ಮುಖ್ಯ ವಿಹಗೇಂದ್ರ ವಾಹನೋಪೇಂದ್ರ
ಕಾಳಿಯೋರಗ ಮದಹರಣ ೨

ಕಂಜದಳನಿಭಾಕ್ಷ ಸುಜನರಕ್ಷ
ದನುಜಶಿಕ್ಷಾ ಪ್ರವೀಣ ಧನಂಜಯಾರ್ತಿಹರ
ಮಂಜುಭಾಷಣ ನಿರಂಜನಾಗಣಿತ
ನಿರುಪಮಲೀಲಾ ೩

ನಂದಕ ಪ್ರಹರಣ ಭೂರಿಕರಣಾ
ವಾಲ್ಯಶರಣಾ ಗತಾವನನಂದ
ನಂದನ ಸನಂದನಾದಿ ಮುನಿ ಬೃಂದ
ವಂದ್ಯ ಸಕಲಜನ ಶರಣ್ಯಾ ೪

ದಂತಿರಾಜವರದಾ ರಾತ್ರಿ ಚರದಾವಾಗ್ನಿ ಶರದ
ವ್ರಜಶ್ರೀಕಾಂತ ಮೌನಿಘನ ಚಿಂತನೀಯ
ವೇದಾಂತವೇದ್ಯ
ಕೋಸಲಪುರ ನಿಲಯಾ ೫

೩. ಪೂಜಾ ವಿಧಾನದ ಕೀರ್ತನೆಗಳು

('ಶ್ರೀಕೃಷ್ಣಾಷ್ಟೋತ್ತರ ಶತನಾಮವಾಕ್ ಪುಷ್ಪಪೂಜಾ')

೩೭

ಗಣೇಶ ಸ್ತುತಿ

ಕೊಡು ಮತಿಯ ಗಣನಾಥ ಪೊಡಮಡುವೆ ನಿನ್ನಡಿಗೆ
ಜಡಮತಿಯ ಕಡೆಗೊಳಿಸಿ ಮೃಡತನಯ ಸಲಹು ಪ

ಮೃಡನೆನಲು ಸುಖರೂಪನೊಡನಿಪ್ಪ ಮತಿ ಮೃಡನು
ಜಡ ತಾನು ಕಲ್ಪಿತವು ಬಿಡಿಸಿದನು ನೀನು ಕೊಡು ಮತಿಯನು ಅ.ಪ

ಮೃಡತನಯನೆಂಬೆರಡು ಶಬ್ದದರ್ಥವ ನೋಡೆ
ಎಡೆಬಿಡದ ಸುಖರೂಪನೆಂಬರ್ಥವಿಹುದು
ಒಡಲು ಮೃಡನಿಗೆ ನೀನು ಕಡೆಗೆ ಮೃಡ ನೀನಾದೆ
ನಡುವೆ ಜಡನಾದೆನ್ನ ಮೃಡನ ಮಾಡಯ್ಯ ೧

ತನುವೆರಡರೊಳಗಿರುವ ತತ್ವ ಗಣವೆನಿಸುವದು
ತನುಗಣಕೆ ನೀ ಸ್ವಾಮಿಯಾಗಿರಲು ಬಳಿಕ
ಜನರೆಲ್ಲ ನಿನ್ನಡಿಯ ತನುವಿನಲಿ ವಿಘ್ನಗಳ
ಕೊನೆಗಂಡು ಮನದಭೀಷ್ಟವ ಪಡೆಯುತಿಹರು ೨

ವಿಘ್ನೇಶನೆಂಬೊಂದು ಪದಕೆ ವರ್ಣತ್ರಯವು
ವಿಘ್ನವೆಂಬೆರಡು ವರ್ಣದಿ ಜ್ಞಾನವೊಂದು
ವಿಘ್ನಹತಿಯದಕೀಶ ವಿಘ್ನೇಶ ನೀನೆ ನಿ
ರ್ವಿಘ್ನದಿಂ ಜ್ಞಾನವನು ಕೊನೆಗಾಣಿಸಯ್ಯ ೩

ಮೊದಲ ವರ್ಣವೆ ಸಾಕ್ಷಿಯದರ ಕಡೆಯದು ಮಾಯೆ
ಯಿದಕೊಡೆಯನೆನುತಿಹುದು ಮೂರನೆಯ ವರ್ಣ
ಅದರಿಂದ ಕರಣಪ್ರೇರಕನೆಂಬ ಹದನಾಗಿ
ವೊದಗಿದುದು ವಿಘ್ನೇಶನೆಂಬ ನಿನ್ನ ನಾಮ ೪

ಪರಮಾತ್ಮ ನೀನೆಂದು ನೆರೆ ತಿಳಿದು ನಿನ್ನಡಿಗೆ
ಎರಗಿದೆನು ವ್ಯವಹಾರ ದೆಸೆಯಿಂದಲೀಗ
ತಿರುಪತಿಯ ವೆಂಕಟನೆ ವರದ ಗಣಪತಿಯೆಂದು
ಮೆರೆಯುತಿಹೆ ರಾಮೇಶನಾಲಯಾವಾಸ ೫

ಓಂ ಶ್ರೀಕೃಷ್ಣಾಯ ನಮಃ

೩೮

ಶಾರದಾ ಸ್ತುತಿ

ರಕ್ಷಿಸೆನ್ನನು ಶಾರದಾಂಬೆ ನೀನು
ಪಕ್ಷಿವಾಹನ ಸುತ ಮನಃಪ್ರತಿಬಿಂಬೆ ಪ

ಆದಿಮಧ್ಯಾಂತರಹಿತಳೆ ಅ
ನಾದಿ ವಸ್ತುವಿನಲ್ಲಿ ಭೇದರಹಿತಳೆ

ವಾದಿಜನರಿಗಗೋಚರಳೆ ನಿನ್ನ
ಪಾದವೆ ಗತಿಯೆಂದರಾದರಿಸುವಳೆ ೧

ಚಿದ್ರೂಪೆಯಾಗಿಪ್ಪೆ ನಿಜದಿ ಪರಿ
ಮುದ್ರಿತೆಯಾಗಿ ನಾದದಿ ತೋರ್ಪೆ
ಮುದದಿ ಇದ್ದು ನೀ ಚಕ್ರಸಪ್ತಕದಿ ನಾಲ್ಕ
ಹೊದ್ದಿ ನಾಮವನದ ಪ್ರಕಟಿಪೆ ಕ್ರಮದಿ ೨

ಪರವೆಂದು ನಾಭಿಯಲಿರುವೆ ಮತ್ತೆ
ಮೆರೆವೆ ಹೃದಯದಲ್ಲಿ ಪಶ್ಯಂತಿ ಭಾವೆ
ಕೊರಳಲ್ಲಿ ಬಿಡದಿರುತಿರುವೆ ಮಧ್ಯಮೆ
ವರ ನಾಮ ವೈಖರಿಯಿಂದ ತೋರಿಸುವೆ ೩

ಗೀತೆ ಭಾಗವತರೂಪಿನಲಿ ನೀನು
ಮಾತೆಯಂದದಲರ್ಥಗಳನು
ಪ್ರೀತಿಯಲಿ ಮಾತು ಬೋಧಿಸಿ ಪರಮನಲಿ ನಿತ್ಯ
ಪ್ರೀತಿಯನುಂಟು ಮಾಡಿದೆ ಮನಸಿನಲಿ ೪

ಮಂದಬುದ್ಧಿಯ ನೆರೆ ಬಿಡಿಸು ಹಿಂದೆ
ಬಂಧಿಸಿ ಬಂದಕರ್ಮವ ಕಡೆಗೊಳಿಸು
ತಂದೆ ಕೃಷ್ಣನ ಮುಂದೆ ನಿಲಿಸು ಯಿನ್ನೂ
ಸಂದೇಹವೇಕೆ ನೀನೇ ಬಂದು ನೆಲಸು ೫

ತೋರಿಸು ಮತಿಗೆ ಜ್ಞಾನವನು ಇದು
ಜಾರದಂದದಲರ್ಥಗಳನು ಪ್ರೀತಿಯನು
ಸೇರಿ ಚಿತ್ತದಲಿನ್ನು ನೀನು ಮಂದ
ಬಾರದ ಹಾಗೆ ಮಾಡೆನ್ನ ಮುಕ್ತನನು ೬

ಕರುಣಾಪೂರಿತದೃಷ್ಟಿಯಿಂದ ನಿನ್ನ
ಚರಣದಲಿಂಬಿಟ್ಟು ಕೊಳಲದರಿಂದ

ನೆರೆ ಧನ್ಯನಹೆನು ನಿನ್ನಿಂದ ಕೂಡೆ
ತಿರುಪತಿ ವೆಂಕಟನೊಲವದರಿಂದ ೭

ಓಂ ಕಮಲಾನಾಥಾಯ ನಮಃ ॥ ೨ ॥

ಗುರುಸ್ತುತಿಗಳು:

೩೯

(೧) ವಾಸುದೇವಾರ್‍ಯರು

ಗುರು ಚರಣ ಮಹಿಮೆಯನು ಗಣಿಸಿ ಬದುಕುವೆನು
ದುರಿತಾಂಧಕಾರಕ್ಕೆ ದಿವ್ಯ ಭಾನುವನೂ ಪ

ನಿತ್ಯವಾಗಿರುವುದನು ನಿಜ ಸುಖಾತ್ಮಕವನ್ನು
ಸತ್ಯದಲಿ ಸರ್ವವನು ಸಲಹಿ ತೋರ್ಪುದನು
ಅತ್ಯಂತ ಕಾಂತಿಯಿಂದಾಢ್ಯತರವೆನಿಪುದನು
ಯಿತ್ತೆನ್ನ ಮಸ್ತಕವನಿದನೆ ನಂಬುವೆನು ೧

ಅರಿವಿನತಿಘನವಾಗಿಯಜ್ಞಾನವಳಿವುದನು
ಅರಿಕೆಯನು ಜನರಿಗಿತ್ತದನು ನಿಲಿಪುದನು
ಬೆರೆದು ಕರಣಗಳಲ್ಲಿ ಬೇರಾಗಿ ಹೊಳೆವದನು
ಬರಿಯ ಭ್ರಾಂತಿಯ ಬಿಡಿಸಿ ಭಾಗ್ಯವೀವುದನು ೨

ನಿರುಪಮ ನಿಜಾನಂದ ನಿರ್ವಿಕಲ್ಪಕವನ್ನು
ಶರಣಾಗತರ ಕಾಯ್ವ ಸುರಧೇನುವನ್ನು
ತಿರುಪತಿಯ ವೆಂಕಟನ ತತ್ವದತಿಶಯವನ್ನು
ಧರಿಸಿರುವ ಗುರು ವಾಸುದೇವರಡಿಯನ್ನು ೩

ಓಂ ವಾಸುದೇವಾಯ ನಮಃ

೪೦

ಧನ್ಯತೆ

ಬಂದೊದಗಿತು ಪುಣ್ಯಫಲವೂ ಮುಚು
ಕುಂದ ವರದ ವಾಸುದೇವಾರ್ಯರೊಲವು ಪ

ಸಂಚಿತಾಗಾಮಿ ಪ್ರಾರಬ್ಧವೆಂಬ
ಕಂಚುಕಿಯಾದ ಕರ್ಮದ ಬಹು ಬದ್ಧ
ದಂಚುಗಾಣುವುದಾವ ಸಿದ್ಧ ಇದು
ಕಿಂಚಿದಾದುದು ಗುರುಚರಣರೇಣಿಂದಾ ೧

ಏನು ಸುಕೃತವ ಮಾಡಿದೆನೊ ನಿನ
ಗಾನತ ನಾನಾದ ಬಗೆಯು ತಾನೇನೋ
ನೀನೆ ಕರುಣವಿತ್ತುದೇನೋ ನಾನು
ಜ್ಞಾನವೆಂತೆಂಬ ಸ್ವರೂಪವನರಿಯೆನೊ ೨

ಪರಿಹರಿಸಿತು ಜನ್ಮ ಮರಣ ದು:ಖ
ದುರವಣೆ ದಹಿಸಿತು ಲಕ್ಷ್ಮಿಯ ರಮಣ
ತಿರುಪತಿ ವೆಂಕಟರಮಣ ನೀನೆ
ಗುರು ವಾಸುದೇವ ರೂಪಿನಲಿತ್ತೆ ಕರುಣ ೩

ಓಂ ಯುಧಿಷ್ಠಿರ ಪ್ರತಿಷ್ಠಾತ್ರೇ ನಮಃ

(೨) ನೀಲಕಂಠಾರ್ಯರು

೪೧

ಗುರುಚರಣ ಪೂಜೆಯನು ವಿರಚಿಸುವೆನೀಗ
ಪರಮಾತ್ಮನೆಂದೆಂಬ ಸ್ಥಿರಮನದಿ ಬೇಗ ಪ

ವರಮಂತ್ರರೂಪದಲಿ ಗುರು ತಾನು ದಯದಿಂದ
ಭರದಿಂದ ಹೃದಯಮಂದಿರಕೆ ಬರಲಾಗಿ

ಗುರುತರದಹಂಕಾರಶಯನದಿಂ ಮುರಿದೆದ್ದು
ಬರುವೆನಿದಿರಾಗಿ ಕರೆತರುವೆನೊಡಗೂಡಿ ೧

ಬ್ರಹ್ಮಕಮಲದಲೊಡೆದು ಜ್ಞಾನನಾಳದಿ ಕೂಡಿ
ರಮ್ಯದಳವೆಂಟುಳ್ಳ ಕಮಲ ಮಧ್ಯದಲಿ
ನಮ್ಮ ಗುರುಮೂರ್ತಿಯನು ಸಂಭ್ರಮದಿ ಕುಳ್ಳಿರಿಸಿ
ಪೊಮ್ಮನದಲರ್ಘ್ಯಾದಿಗಳನು ಭಕುತಿಯಲಿತ್ತು ೨

ಕರಗಳೆರಡುಳ್ಳ ಹರಿ ನಯನವೆರಡರ ಹರನು
ವರಮುಖವಿದೊಂದರಲಿ ವಾಗೀಶನೆನಿಸಿ
ಪರಿಹರಿಸಿ ಗುಣಗಳನು ಪರಬ್ರಹ್ಮವಾಗಿರುವ
ಗುರುವರನ ಮೂರ್ತಿಯನು ನೆರೆ ನೋಡಿ ಮನದೊಳಗೆ ೩

ಅವಿವೇಕವಂ ಪರಿದ ಗುರುಪದಕೆ ಪಾದ್ಯವನು
ಸುವಿವೇಕವೆಂಬರ್ಘ್ಯವನು ಸಹಿತ ಕೊಟ್ಟು
ಅವಿವೇಕದಿಂ ಬಂದ ಜೀವಭಾವವ ಬಿಡಿಸಿ
ಕವಿವರನು ನೀನೆಂಬ ಶುದ್ಧಾಚಮನದಿಂದ ೪

ಪರಮಪಾವನರೂಪ ಸ್ನಾನದುಪಚಾರದಲಿ
ಎರಡಿಲ್ಲವೆಂದೆಂಬ ಶುಭ್ರ ವಸ್ತ್ರದಲಿ
ಬರೆದು ತಾ ಜೀವರೊಳು ಸೂತ್ರಾತ್ಮನಾದಡೆಯು
ಬೆರೆಯದಿಹನೆಂತೆಂಬ ಸೂತ್ರೋಪಚಾರದಲಿ ೫

ಶರಣಾಗತರ ಕಾಯ್ವ ಗುಣಗಣಗಳಾಭರಣ
ಪರಿಪರಿಯ ಕಾಮಗಳ ಹೊದ್ದದನುಲೇಪ
ನೆರೆ ನಿವಾರಿತವಾದ ವಾಸನಾಕ್ಷಯ ಪುಷ್ಪ
ಸರಗಳೀ ಪರಿಭಾವನೆಗಳೆಂಬ ಭಕ್ತಿಯಲಿ ೬

ಜಡ ದುಃಖ ಪುಸಿಗಳಿಗೆ ಬೇರೆಂಬ ಧೂಪದಲಿ
ಎಡೆಬಿಡದ ಜ್ಯೋತಿಃಸ್ವರೂಪ ದೀಪದಲಿ
ಬಿಡದ ಸುಖದನುಭವದ ದಿವ್ಯ ನೈವೇದ್ಯದಲಿ
ಜಡಕೆ ಮಂಗಳವಿತ್ತ ಬಗೆಯ ತಾಂಬೂಲದಲಿ ೭

ನಿತ್ಯ ಪ್ರಕಾಶದಲಿ ಪೊಳೆವ ಮಂಗಳ ದೀಪ
ಸತ್ಯದಾಧಾರದಲಿ ಸುಳಿವ ಕರಣಗಳ
ಮತ್ತೆ ಸತ್ಯದೊಳಿರಿಸುತಿಹ ಮಂತ್ರಪುಷ್ಪದಲಿ
ಸುತ್ತುವರಿದಿಹ ವಸ್ತುವೆಂದು ಬಲವಂದು ೮

ಘನ ಮಹಿಮನಂಘ್ರಿಯಲಿ ತನು ಮನಾದಿಗಳನ್ನು
ನಿನಗೆ ಸಂದುದೆನುತ್ತಲಿತ್ತು ನಮಿಸುತ್ತಾ
ಕನಕಮಯವಾದ ಶ್ರೀ ತಿರುಪತಿಯ ವೆಂಕಟನ
ತನುರೂಪ ನೀಲಕಂಠಾರ್ಯರನು ಬಿಡದೆ ೯

ಓಂ ಸನಾತನಾಯ ನಮಃ

೪೨

ಮಂಗಳ ನೀಲಕಂಠಾರ್ಯರಿಗೆ ಜಯ
ಮಂಗಳ ಮಾಯಾ ವಿದೂರನಿಗೆ ಪ

ಆನಂದಭರಿತಗೆ ಆಶ್ರಿತಫಲದಗೆ
ಜ್ಞಾನಸ್ವರೂಪಗೆ ಜ್ಞೇಯನಿಗೆ
ನಾನೆನ್ನದೆಂಬಭಿಮಾನವ ತೊಲಗಿಸಿ
ಮಾನವರನ್ನು ಮುಕ್ತರೆನಿಪನಿಗೆ ೧

ಮರೆಯೊಕ್ಕ ಮಾತ್ರಕೆ ಮರುಗಿ ಮರವೆಯನ್ನು
ಪರಿದು ವಿಜ್ಞಾನವಂತರ ಮಾಡುತಾ

ಧರೆಯೊಳು ಮಹಿಮೆಯ ಹರಹಿ ಭಕುತಿಮಾರ್ಗ
ವರುಹಿ ಮೂಢರ ಮುಕ್ತರೆನಿಪನಿಗೆ ೨

ಕರುಣದಿಂ ಕೌಶಿಕಪುರದಿ ನೆಲಸಿ ಶಾಸ್ತ್ರ
ಮರಿಯಾದೆಯನ್ನುದ್ಧರಿಸಿ ಲೋಕವ
ಪೊರೆವ ಶ್ರೀ ತಿರುಪತಿ ವೆಂಕಟರಮಣಗೆ
ಹರಿಹರಾತ್ಮಕ ನೀಲಕಂಠಾರ್ಯಗೆ ೩

ಓಂ ವಾಸುದೇವಾತ್ಮಜಾಯ ನಮಃ

(೩) ರಾಮಕೃಷ್ಣಾರ್ಯರು

೪೩

ಭಜಿಸುವರ ಭಾಗ್ಯವೆ ಭಾಗ್ಯ ಭುವನದಲಿ
ತ್ರಿಜಗದೊಡೆಯನು ರಾಮಕೃಷ್ಣ ರೂಪಿನಲಿರಲು ಪ

ಶ್ರುತಿ ವಿಧಿತ ನಿಯಮಗಳ ಮಾಡಿ ತದನಂತರದಿ
ಶತಸಹಸ್ರರಿಗೊರೆದು ಕಾವ್ಯ ಪಾಠವನು
ಶ್ರುತಿಗಗೋಚರ ಕೃಷ್ಣ ಪಾದಪೂಜೆಯ ನಿತ್ಯ
ಜಿತಮನಸ್ಕದಿ ರಚಿಸಿ ನಲಿವ ಮೂರ್ತಿಯನು ೧

ವೇದಾಂತ ಶಾಸ್ತ್ರವನು ವೇದವಿತ್ತುಗಳಿಂಗೆ
ವಾದಗುಟ್ಟಿದ ತೆರದಲುಪದೇಶಗೈದು
ವೇದಶಾಸ್ತ್ರಾರ್ಥವನು ಸಾದರದಿ ಸಕಲರಿಗೆ
ಬೋಧಿಸುವ ಸಂಸಾರಸಾಗರೋತ್ತಾರರನು ೨

ರಾಮಾವತಾರದಲಿ ರಾಮನೆಂದೇ ನಾಮ
ವಾಮೇಲೆ ದ್ವಾಪರದಿ ರಾಮ ಕೃಷ್ಣರೆಂದು

ನಾಮವೆರಡವರಿಂಗೆ ತನುವೆರಡು ಬಳಿಕೀಗ
ರಾಮಕೃಷ್ಣನಾಮದಲಿ ಕಲಿಯುಗದಿ ಜನಿಸಿರಲು ೩

ಅವತಾರವೆಂಬುದುಪಚಾರವಲ್ಲಿದು ಕೇಳಿ
ಭವನ ಪ್ರತಿಬಿಂಬ ಶ್ರೀ ಶಂಕರಾಚಾರ್ಯ
ಭವದೂರ ಗುರುಮೂರ್ತಿ ಕೃತ ಗ್ರಂಥ ವ್ಯಾಖ್ಯಾನ
ಶಿವರೆಂದು ಆನಂದ ಘನ ಸ್ವಪ್ನವಾಗಿರಲು ೪

ಅಜನ ಭಜನೆಯಲಜನು ತ್ರಿಜಗರಕ್ಷಾರ್ಥದಲಿ
ಅಜನ ಪೌತ್ರತ್ವದಲಿ ನಿಜಸತಿಯ ನೆವದಿ
ತ್ರಿಜಗ ಕಂಟಕ ರಾವಣನ ಮುರಿದು ಭಜಕರಿಗೆ
ಅಜ ಪದವಿ ಮೊದಲಾಗಿ ಕೊಟ್ಟ ರಾಮನನು ೫

ಭೂಮಿ ಭಾರವನಿಳುಹಲೆಂದು ನೇಮವ ಧರಿಸಿ
ರಾಮನನುಜನು ತಾನು ಕೃಷ್ಣನೆಂದೆನಿಸಿ
ಭೀಮ ಫಲುಗುಣ ಧರ್ಮ ಮುಖದಿ ಕೌರವ ಪಡೆಯ
ಭೂಮಿಯಲಿ ನೆಲೆಗೊಳಿಸಿದಮಲ ಮೂರ್ತಿಯನು ೬

ಧರೆಗಧಿಕವೆಂದೆಂಬ ದೃಷದಪುರದಲಿ ನಿಂದು
ಶರಣಾಗತರ ಸಲಹಿ ಮಹಿಮೆಗಳ ಮೆರೆದು
ತಿರುಪತಿಯ ವೆಂಕಟನ ಪ್ರತಿಬಿಂಬ ಗುರುವರ್ಯ
ಪರವಾಸುದೇವ ಶ್ರೀ ರಾಮಕೃಷ್ಣಾರ್ಯರನು ೭

ಓಂ ಪುಣ್ಯಾಯ ನಮಃ

೪೪

ಮಂಗಳಂ ರಾಮಕೃಷ್ಣಾರ್ಯ ದಿವ್ಯ
ಮಂಗಳವಿಗ್ರಹ ಸದ್ಗುರುವರ್ಯ ಪ

ವಾದಿ ಜನರ ಮನೋಬಾಧೆಯ ಬಿಡಿಸುತ
ಬೋಧೆಯ ಬಲಿಸಿ ಬ್ರಹ್ಮಾನಂದದ
ಹಾದಿಯ ತೋರಿಸಿಯಾದರಿಸಿಯೆ ಕಾಯ್ವ
ಬೋಧವಿಗ್ರಹ ನಿನ್ನ ಪಾದಪದ್ಮಗಳಿಗೆ ೧

ಭೂರಿ ಜನ್ಮಗಳೆತ್ತಿ ಸೇರಲು ತಡಿಯನು
ದಾರಿಗಾಣದೆ ಭವ ವಾರಿಧಿಯ
ಹಾರೈಸಿದವರಿಗೆ ತೋರಿ ಜ್ಞಾನದ ನಾವೆ
ಯೇರಿಸಿ ತಡಿಗೈದಿಸಿದ ಮೂರ್ತಿಗೆ ೨

ಕರುಣದಿಂ ಧರಣಿಯೊಳವತರಿಸಿಯೆ ಭಕ್ತ
ಪರಿಪಾಲನಾರ್ಥದಿ ಯುಗಯುಗಕೂ
ನರಹರಿ ರಾಮ ಶ್ರೀಕೃಷ್ಣ ರಾಮಕೃಷ್ಣಾರ್ಯ
ತಿರುಪತಿ ವೆಂಕಟರಮಣನಿಗೆ ೩

ಓಂ ಲೀಲಾಮಾನುಷ ವಿಗ್ರಹಾಯ ನಮಃ

೪೫

ಜಯ ಮಂಗಳಂ ಸದಾ ಶುಭ ಮಂಗಳಂ
ಮಂಗಳಂ ಗುರು ವಾಸುದೇವ ಮೂರುತಿಗೆ ಪ

ಕುಂದಣಕೆ ಸರಿಯಾದ ಕಾಯದತಿ ಕಾಂತಿಗೆ
ಸಿಂಧುವನು ಪೋಲ್ವ ಗಂಭೀರ ರಸಕೆ
ಇಂದುಬಿಂಬವ ಜರೆವ ಮುಖದ ಸೊಂಪಿನ ಸಿರಿಗೆ
ಕಂದರ್ಪ ಕೋಟಿ ಲಾವಣ್ಯ ನಿಧಿಗೆ ೧

ಅಭಯದಾನವ ಕೊಡುವ ಕರಗಳತಿ ಚೆಲುವಿಕೆಗೆ
ಶುಭಗಳಿಗೆ ನೆಲೆಯಾದ ನೇತ್ರಗಳಿಗೆ

ವಿಭವಗಳಿಗೆಡೆಬಿಡದ ಮುಗುಳುನಗೆಯೊಗುಮಿಗೆಗೆ
ತ್ರಿಭುವನಂಗಳನಳೆದ ಪದ ನಳಿನಗಳಿಗೆ ೨

ಜ್ಞಾನಮುದ್ರೆಯ ಕರದಿ ಜ್ಞಾನೋಪದೇಶವನು
ತಾನೆ ಕರೆದಿತ್ತು ಭಕ್ತರ ಸಲಹುತಾ
ಮಾನವನು ಕಡೆಗೊತ್ತಿ ಮಾನ್ಯ ತಾನೆಂದೆನಿಪ
ಶ್ರೀನಿಕೇತನ ನಿಜದ ಚಿನ್ಮಯಾತ್ಮಕಗೆ ೩

ಕಾವೇರಿ ಗಂಗೆಯೊಲು ಕಮಲನಾಭನ ಕಥೆಯ
ಪಾವನದ ತೀರ್ಥದಲಿ ಪಾಪವಳಿದು
ಜೀವಭಾವವ ಬಿಟ್ಟು ಬ್ರಹ್ಮ ತಾನೇಯಾಗಿ
ಯಾವಗವು ಸುಖಶರಧಿಯಾದ ಚಿನ್ಮಯಗೆ ೪

ರಾಗಾದಿರಹಿತನಿಗೆ ರಾಗಿಗಳ ಸಂಸಾರ
ಸಾಗರವ ದಾಟಿಸುವ ಬೋಧ ಘನಗೆ
ಯೋಗಿಗಳ ಸಂಮತಗೆ ಗುರು ವಾಸುದೇವಗೆ
ಯೋಗೇಶ ತಿರುಪತಿಯ ವೆಂಕಟೇಶ್ವರಗೆ ೫

ಓಂ ಶ್ರೀವತ್ಸಕೌಸ್ತುಭಧರಾಯ ನಮಃ

೪೬

ಕೃಷ್ಣ ಸ್ತುತಿ

ಸಲಹು ನಂದಕುಮಾರ ಸಲಹು ಗೋಪೀತನಯ
ಸಲಹು ವಸುದೇವನಿಗೆ ಪುತ್ರನೆನಿಸಿದನೆ
ಸಲಹು ದೇವಕಿ ಜಠರದಲಿ ಬಂದನೆನಿಸಿದನೆ
ಸಲಹು ಶ್ರೀ ರಾಮ ಶ್ರೀಕೃಷ್ಣ ಜಯ ಕೃಷ್ಣ ಸಲಹು ಸಲಹೂ ಪ

ನಂದನೆನೆ ಸಕಲ ಸಂಪತ್ತ ಸೂಚಿಸುತಿಹುದು
ಚಂದದಿಂದಣಿಮಾದಿ ಸಿದ್ಧಿಯಿರಲಾಗಿ

ಬಂದವಿದ್ಯೆಯು ಮುಚ್ಚಲಾ ಶಕ್ತಿ ಕುತ್ಸಿತವು
ಹಿಂದುಗಳೆವದರಿಂದ ನಂದನಕುಮಾರ ೧

ಜ್ಞಾನಶಕ್ತಿಯು ತಾನು ಗುಪ್ತವಾಗಿರಲಾಗಿ
ಧ್ಯಾನಿಸುವ ಭಕ್ತರಿಗೆ ವಿಸ್ತರಿಸಿ ಕೊಡಲು
ನೀನು ಗೋಪೀತನಯನೆಂಬ ನಾಮವ ತಾಳ್ದೆ
ದೀನರಕ್ಷಾಮಣಿಯೆ ಜ್ಞಾನದಾಯಕನೆ ೨

ವಸುವೆನಲು ಪರಿಶುದ್ಧವಾದ ಕರಣದ ಪೆಸರು
ಎಸೆದು ನೀನಿರಲಲ್ಲಿ ದೇವನೆನಿಸುವದು
ಅಸಮ ತೇಜದಿ ಪುರುಷನೆನಿಸಿ ಸಲಹಲು ಜಗವ
ವಸುದೇವಪುತ್ರನೆನಿಸಿತು ನಿನ್ನ ನಾಮ ೩

ದೇವಕಿಯು ನಿನ್ನ ಬಗೆ ಮಾಯೆ ಬ್ರಹ್ಮಾಂಡಗಳ
ಭಾವಿಸಲು ನೀನದನು ಕುಕ್ಷಿಯೊಳಗಿರಿಸಿ
ಸಾವಧಾನದಿ ಸಕಲದೊಳು ಸತ್ಯನಾಗಿರಲು
ದೇವಕಿಯ ಜಠರದಲಿ ಬಂದನೆನಿಸಿದನೆ ೪

ನಿತ್ಯದಲಿ ಯೋಗಿಗಳು ನಿನ್ನಲ್ಲಿ ರಮಿಸುತಿರೆ
ಪ್ರತ್ಯಕ್ಪ್ರಕಾಶದಲಿ ಜಡಪದಾರ್ಥಗಳು
ಅತ್ಯಂತ ರಮಣೀಯವಾಗಿಯದರೊಳು ಜನರು
ನಿತ್ಯ ರಮಿಸಲು ರಾಮನೆನಿಪ ಶ್ರೀ ಹರಿಯೆ ೫

ಮೂರು ವರ್ಣದ ನಾಮ ಮುನಿವಂದ್ಯ ನಿನಗಿರಲು
ಸಾರುವುದು ಸದ್ರೂಪನೆಂದೆರಡು ವರ್ಣ
ಮೂರನೆಯ ವರ್ಣವಾನಂದಮಯನೆನ್ನುತಿದೆ
ಈ ರೀತಿಯಲಿ ನೀನು ಕೃಷ್ಣನೆನಿಸಿದನೆ ೬

ಪರಮಾತ್ಮ ನೀನಾಗಿ ಪರಿಪರಿಯ ರೂಪಿನಲಿ
ಸುರಮುನೀಶ್ವರ ಭಾವ್ಯ ಚರಿತನೆಂದೆನಿಸಿ

ತಿರುಪತಿಯ ವಾಸವನು ಸ್ಥಿರವಾಗಿ ನಿರ್ಧರಿಸಿ
ಯಿರುವ ವೆಂಕಟರಮಣ ಕರುಣರಸಪೂರ್ಣ ೭

ಓಂ ಯಶೋದಾವತ್ಸಲಾಯ ನಮಃ

೪೭

ಪೂಜಾ ಸಿದ್ಧತೆ

ಪೂಜೆಯ ಮಡುವ ಬನ್ನೀ ನಮ್ಮ
ಮೂಜಗದೊಡೆಯ ಶ್ರೀ ಹರಿಯ ಪ

ರಾಜೀವಲೋಚನನಂಘ್ರಿ ಕಮಲ ಭಕ್ತಿ
ಭಾಜನರೆನಿಸಿ ದುಃಖವ ಪರಿಹರಿಸಿ ಅ.ಪ

ಇಹ ಪರ ಭೋಗದ ಭ್ರಮೆಗೆ ದೇಹ
ಸಹವದರೊಳು ತಿರುತಿರುಗೆ
ನಿಹಿತದ ಸುಖವದರೊಳಗೆ ಉಂಟೆ
ವಹಿಸಿತು ಭವ ಬಂಧ ನಮಗೆ
ಕುಹಕ ಬುದ್ಧಿಯಲಂದು ಬಯಲ ಭ್ರಾಂತಿಗೆ ಸಂದು
ಬಹು ದುಃಖಬಟ್ಟುದ ನೆನೆದು ನಾವಿಂದು ೧

ತನುವಿದನೆನಿತು ಪೋಷಿಸಲು ಮತ್ತೆ
ವನಿತಾದಿ ಜನರ ನಂಬಿರಲು
ಧನ ತನ್ನದೆಂದು ಬಚ್ಚಿಡಲು ಭೋಗ
ಕನುಕೂಲವಾಯಿತೆಂದೆನಲು
ತನುವಳಿಯಿತು ಜನ ಸಡಿಲಿತು ಗಳಿಸಿದ
ಧನ ಹೋಯಿತನುಮಾನವೇತಕಿನ್ನಿನಿತು ೨

ಸುಖವೆಂಬದು ದುಃಖ ತಿಳಿಯೆ ಮದ
ಮುಖರಾಗದಿರಿ ಮನವೆಳೆಯೆ
ಸುಖಪರಿಪೂರ್ಣನು ಹರಿಯೆ ಯಿನ್ನು

ಸುಖವುಂಟು ನಮಗಾತನೊಲಿಯೆ
ಸಕಲ ಲೋಕೇಶ ಶ್ರೀ ತಿರುಪತಿ ವೇಂಕಟೇಶ
ನಕುಟಿಲ ಭಕುತರಿಗುಂಟು ಸಂತೋಷ ೩

ಓಂ ಶ್ರೀ ಹರಯೇ ನಮಃ

೪೮

ಪೂಜೆಗಣಿಮಾಡಿ ಬೇಗದಲಿ ಜನರೆಲ್ಲ
ಸೋಜಿಗವದೇನೆಂಬೆ ಶ್ರೀ ಕೃಷ್ಣ ಬಂದ ಪ

ಕನಕಮಯ ಭೂಮಿಯಲಿ ಘನ ರತ್ನ ಮಂಟಪವ
ಚಿನುಮಯನ ಪೂಜೆಗತಿ ನೂತನವಿದೆನಲು
ದಿನಮಣಿಗೆ ಸರಿಯಾದ ಮುತ್ತು ರತ್ನದ ಕುಚ್ಚ
ನನುಕಟ್ಟಿ ಮೇಲಕ್ಕೆ ಪಟ್ಟೆಗಳ ಕಟ್ಟಿ

ಪನ್ನೀರು ಪರಿಮಳದ ಚಳೆಯವನು ಭೂಮಿಯಲಿ
ಕನ್ನಡಿಯು ಕಲಶ ಮಂಗಳವಾದ್ಯವೆಸೆಯೆ
ಬನ್ನಿ ಸಕಲರು ಕೃಷ್ಣ ಪಾದ ದರುಶನ ಮಾಡಿ
ಉನ್ನತದ ಮಂಟಪದ ಮಧ್ಯಕೈತರುವ ೧

ಮೃದುತರದ ಹಾಸಿಕೆಯ ಮೇಲೊರಗುಮೂಡೆಯನು
ಮುದದಿಂದಲಳವಡಿಸಿ ಪಾದುಕೆಯ ತೊಡಿಸಿ
ಪದುಮನಾಭನ ದಿವ್ಯ ಸಿಂಹಾಸನದ ಮೇಲೆ
ಚದುರಿಂದಲಾವಾಹನವ ಮಾಡುವಂತೆ ೨

ಕೇಳುತಿದೆ ದುಂದುಭಿಯ ಘೋಷ ನಾರದ ವೀಣೆ
ಕೇಳುತಿದೆ ಗಂಧರ್ವನೃತ್ಯರವ ವೀಣಾ
ಕೇಳುತಿದೆ ಗರುಡ ಪಕ್ಷದ ಮಾರುತ ಧ್ವನಿಯು
ಕೇಳುತಿದೆ ಶ್ರೀ ಹರಿಯ ಪಾಂಚಜನ್ಯದ ನಾದ ೪

ಬಂದನಿದೆಯಚ್ಯುತನು ಕಂಡಿರೇ ಕಾಂತಿಯನು
ಚಂದ್ರಶೇಖರ ಸಖನ ಬರವಿದೇಯಹುದೂ
ಬಂದ ನಮ್ಮನು ಸಲಹಬೇಕೆಂಬ ದಯದಿಂದ
ಇಂದು ತಿರುಪತಿಯ ವೆಂಕಟರಮಣನೊಲವಿಂದ ೫

ಓಂ ಚತುರ್ಭುಜಾತ್ತಚಕ್ರಾಸಿಗದಾ ಶಂಖಾದ್ಯುದಾಯುಧಾಯ ನಮಃ

೪೯

ಅಂಕಿತನಾಮ ಸ್ತುತಿ

ಮಂಗಳ ತಿರುಪತಿಯರಸಗೆ ಜಯ
ಮಂಗಳ ವೆಂಕಟರಮಣನಿಗೆ ಪ

ವಟಪತ್ರಶಯನಗೆ ಕೈಟಭ ರಿಪುವಿಗೆ
ಸ್ಫುಟನಾಭಿ ಕಮಲಸಂಭವಪಾಲಗೆ
ಘಟಿಸಿ ಬ್ರಹ್ಮಾಂಡಗಳಗಣಿತಗಳನಲ್ಲಿ
ನಟಿಸಿ ಪ್ರಾಣಿಗಳಲ್ಲಿ ನಲಿವನಿಗೆ ೧

ನಿಗಮವ ತಂದಗೆ ನಗವ ತಾಳಿದನಿಗೆ
ಜಗತಿಯ ದಂಷ್ಟ್ರದಿ ಧರಿಸಿದಗೆ
ಭುಗಿಲೆಂದು ಕಂಭದಲುದಿಸಿ ಪ್ರಹ್ಲಾದನ
ಮಗನೆಂದಂಕದೊಳಿಟ್ಟ ನರಸಿಂಹಗೆ ೨

ಅದಿತಿ ಗರ್ಭದಿ ಬಂದು ವಟುರೂಪನಾದಗೆ
ಮುದದಿಂದ ಜಮದಗ್ನಿ ಸುತನಾದಗೆ
ಪದುಮಜೆಯರಸ ಶ್ರೀ ರಘುರಾಮಚಂದ್ರಗೆ
ಯದುಕುಲೋದ್ಭವನಾದ ಶ್ರೀ ಕೃಷ್ಣಗೆ ೩

ಪುರಮೂರ ಗೆಲಿದಗೆ ತುರಗ ರೇವಂತಗೆ
ಪರಿಪರಿ ರೂಪಿನ ಪರಮಾತ್ಮಗೆ
ಶರಧಿಸುತಾ ಮುಖಚಂದ್ರ ಚಕೋರಗೆ
ಸುರಸಿದ್ಧ ವೃಂದವಂದಿತ ಪಾದಗೆ ೪

ತಿರುಪತಿಯಲಿ ನಿಂದು ಚರಣ ಸೇವಕರಿಗೆ
ವರವಿತ್ತು ಪೊರೆವ ಕರುಣಾನಿಧಿಗೆ
ಸ್ಮರಣೆಮಾತ್ರದಲಘತಿಮಿರ ಸಮೂಹಕ್ಕೆ
ತರಣಿ ಶ್ರೀ ವೆಂಕಟರಮಣನಿಗೆ ೫

ಓಂ ದೇವಕೀನಂದನಾಯ ನಮಃ

೫೦

ಷೋಡಶೋಪಚಾರ ಪೂಜೆ

ಪೂಜಿಸುವೆನನವರತ ಪರಮ ಪುರುಷನನು
ನೈಜ ಮೂರ್ತಿಯನೀಗಲಭಿಮುಖಿಸಿ ನಿರ್ಗುಣದಿ ಪ

ಹೃದಯಕಾಶಿಯಲಿಪ್ಪ ಜ್ಞಾನಗಂಗೆಯ ಮಿಂದು
ಮೃದುತರದ ಸತ್ವಗುಣವೆಂಬ ನಿತ್ಯಕರ್ಮವ ಮಾಡಿ
ಒದಗಿ ಶಮೆದಮೆಯೆಂಬ ನಿತ್ಯಕರ್ಮವ ಮಾಡಿ
ಮುದದಿಂದ ಪರಮಾತ್ಮನಿಹ ಮಂದಿರಕೆ ಬಂದು ೧

ಧ್ಯಾನ

ಪ್ರಣವ ಮಂಟಪದಲ್ಲಿ ಕನಕಮಯ ಪೀಠವನು
ತನುಕರಣಮನಃಪ್ರಕೃತಿ ಯೆಂಬ ನೆಲೆಗಳನು
ಅನುಕೂಲದಿಂ ರಚಿಸಿ ಸಚ್ಚಿದಾನಂದನನು
ಮನದಲ್ಲಿ ಧ್ಯಾನವನು ಬಳಿಕೀಗ ಮಾಡುವೆನು ೨

ಆವಾಹನ–ಆಸನ–ಪಾದ್ಯ

ದೇಶಕಾಲಾತೀತ ಪರಿಪೂರ್ಣನಾಗಿರುವ
ವಾಸುದೇವನನೊಮ್ಮೆಯಾವಾಹಿಸುವೆನು
ಆಸನವನೀವೆ ಸರ್ವಾಧಾರವಸ್ತುವಿಗೆ
ದೋಷರಹಿತನ ಪಾದಗಳ ತೊಳೆವೆನೊಲವಿನಲಿ ೩

ಅರ್ಘ್ಯ–ಆಚಮನ–ಮಧುಪರ್ಕ

ಬೆಲೆರಹಿತಗರ್ಘ್ಯವನು ನೆರೆಕೊಟ್ಟು ಕರಗಳಿಗೆ
ಸಲಿಲದಿಂ ಶುದ್ಧನಿಗೆ ಶುದ್ಧಾಚಮನವ
ಸಲಿಸಿ ಮಧುಪರ್ಕವನು ಕ್ಷೀರಸಾಗರಗಿತ್ತು
ವಿಲಯಾದಿ ಪಂಚಪದಗೆರೆದು ಪಂಚಾಮೃತವ ೫

ಸ್ನಾನ–ವಸ್ತ್ರ

ಸ್ಮರಿಸಿದರೆ ಸಂಸಾರಮಲವಳಿವ ಮಹಿಮನಿಗೆ
ಸುರನದಿಯ ಪಡೆದವನಿಗಭಿಷೇಕಗೊಳಿಸಿ
ನಿರತ ದಿಗ್ವಸ್ತ್ರನಿಗೆ ವರದುಕೂಲವನುಡಿಸಿ
ಕರಣ ಪ್ರೇರಕನಿಗುಪವೀತದುಪಚಾರದಲಿ ೫

ಆಭರಣ

ಅಷ್ಟವಿಧಗಂಧವನು ಅಷ್ಟಮದ ರಹಿತನಿಗೆ
ನಿಷ್ಠೆಯಿಂ ಭಕ್ತಿರಸದಿಂದ ಹದಗೊಳಿಸಿ
ಅಷ್ಟ ವಿಧಮೂರುತಿಗೆ ಮುಟ್ಟಿ ಲೇಪವ ಮಾಡಿ
ದುಷ್ಟಮದವನು ಕುಟ್ಟಿ ದಿವ್ಯ ಕುಂಕುಮವಿಟ್ಟು ೭

ಪುಷ್ಪ–ಧೂಪ–ದೀಪ–ನೈವೇದ್ಯ–ತಾಂಬೂಲ

ಪರಿಪರಿಯ ಪುಷ್ಪಗಳ ನಿರ್ವಾಸನಗೆ ತಿಮಿರ
ಹರಪ್ರಭಗೆ ಧೂಪದೀಪಂಗಳನು ಬೆಳಗಿ
ಪರಿಪೂರ್ಣಕಾಮನಿಗೆ ಷಡುರಸಾನ್ನವನಿತ್ತು
ಪರಮ ಮಂಗಳಗೆ ತಾಂಬೂಲದುಪಚಾರದಲಿ ೮

ಕೋಟಿಸೂರ್ಯಪ್ರಭಗೆ ಕೋಟಿವರ್ತಿಗಳುಳ್ಳ
ಮೀಟಾದ ಮಂಗಳಾರತಿಯ ಪಿಡಿದೆತ್ತಿ
ಕೋಟಿ ಮೂವನ್ಮೂವರೂರ ಪುಷ್ಪವ ಚಂದ್ರ
ಜೂಟಸಖ ತಿರುಪತಿಯ ವೆಂಕಟನ ಪದಕಿತ್ತು ೯

ಓಂ ಶ್ರೀಶಾಯ ನಮಃ

೫೧

ಪೀಠಸಮರ್ಪಣೆ

ಕಂ॥ ಮಾನಸ ಪೂಜೆಯ ವಿರಚಿಸಿ
ಶ್ರೀನಿಲಯನ ಚರಣಗಳಿಗೆ ಪಾವುಗೆಗಳ ನಾಂ
ಆನತನಾಗುತಲೊಪ್ಪಿಸಿ
ಭಾನುವಿನ ಪಥದಲಿಳುಹಿ ಬಿಂಬದಿ ಭಜಿಪೆಂ

ಬಂದೀ ಪೀಠದಿ ನೆಲಸೊ ಹೃದಯ
ಮಂದಿರದಿಂದಾ ಕರುಣದಿಂ ವೆಂಕಟರಾಯಾ ಪ

ಪುರದೊಳು ವಿಮಲೆಯುತ್ಕರುಷಣಿಯಗ್ನಿ ಯೊ
ಳಿರುವಳು ಜ್ಞಾನೆ ದಕ್ಷಿಣದೇಶದಿ
ನಿರುರುತಿಯೊಳು ಕ್ರಿಯೆ ವರುಣನೊಳ್ಯೋಗಾಖ್ಯೆ
ಮರುತನೊಳ್ಪ್ರಹ್ವಿ ಸೋಮನೊಳ್ ಸತ್ಯೆಯಿಹಳಾಗಿ ೧

ಈಶನೊಳೀಶಾನೆ ಮಧ್ಯದೊಳನುಗ್ರಹೋ
ಪಾಸಿಕೆಯಾದಿಯಾಗಿರುತಿಹರು
ವಾಸುದೇವನೆ ನಮ್ಮನೊಲಿದು ರಕ್ಷಿಸುವರೆ
ಸಾಸಿರ ನಾಮಸನ್ನುತನೆ ಸಂತಸದಿಂದ ೨

ಅನಲನೊಳ್ ಧರ್ಮ ನಿರುರುತಿಯೊಳ್ ಜ್ಞಾನವು
ತನುಗೊಂಡು ವೈರಾಗ್ಯ ಮರುತನೊಳು
ವಿನಯದಿಂದೈಶ್ವರ್ಯನೀಶದೇಶದಿ ಸೇವೆ
ಗನುಕೂಲರಾಗಿ ಕಾದಿರುವರೆನ್ನೊಡೆಯನೆ ೩

ಮುಂದೆಯಧರ್ಮ ದಕ್ಷಿಣದೊಳಜ್ಞಾನವು
ಹಿಂದೆಡೆಯೊಳಗವೈರಾಗ್ಯ ತಾನು
ಇಂದುದೇಶದೊಳನೈಶ್ವರ್ಯನೊಂದಿರುವನು
ಇಂದೆಮ್ಮನೊಲಿದು ರಕ್ಷಿಸಲು ಗೋವಿಂದನೆ ೪

ಕಲಶದೊಳ್ ಗಂಗಾದಿ ನದಿಗಳು ಶಂಖದ
ಜಲದೊಳು ಬ್ರಹ್ಮಾದಿಗಳ ತೀರ್ಥಸಂಘವು
ಒಲಿದರ್ಘ್ಯ ಪಾದ್ಯಾಚಮನ ಸ್ನಾನ ಶುದ್ಧಾಂಬು
ಗಳ ಪಂಚಪಾತ್ರೆಗಳೊಳು ನೆಲಸಿವೆ ಸ್ವಾಮಿ ೫

ಪುರುಷಸೂಕ್ತದಿಂದೆನ್ನ ಶರೀರದೊಳ್ಪೂಜಿಪ
ವರಬಿಂಬದೊಳು ನ್ಯಾಸಗೈದಿಹೆನು
ಪರಮ ಮಂತ್ರಾಧಿದೇವತೆಗಳನೆಂಟು ಪ
ನ್ನೆರಡಕ್ಕರದ ವಿದ್ಯೆಯಿಂದಲು ಜಗದೀಶ ೬

ಗುರುವಾಸುದೇವಾರ್ಯರೂಪದಿ ಶ್ರೀರಂಗ
ಪುರದ ಕಾವೇರಿ ತೀರದೋಳು ನೀನೆ
ಕರುಣಿಸಿದತಿ ಗೋಪ್ಯ ಮಾರ್ಗದಿಂದರ್ಚಿಪೆ
ತಿರುಪತಿ ಕ್ಷೇತ್ರದ ದೊರೆಯೆ ವೆಂಕಟರಾಯ ೭

ಓಂ ನಂದಗೋಪಪ್ರಿಯಾತ್ಮಜಾಯ ನಮಃ

೫೨

ಆವಾಹನ

ಆವಾಹನೋಪಚಾರವು ನಿನಗೆ ವಿಭುವೆ
ಆವರಣರಹಿತ ಪರಿಪೂರ್ಣ ಚಿತ್ಸುಖವೆ ಪ

ಹೃದಯಕಮಲದಿ ನೆನೆದು ಪೂಜಿಸುವೆನೆಂದು ಮ
ತ್ತೊದಗಿ ಬಿಂಬದೊಳಿಳುಹಿಯರ್ಚಿಸುವೆನೆಂದು

ಇದಿರಾಗಿ ನಿಲ್ಲು ಸ್ಥಾಪಿತನಾಗು ಹತ್ತಿರಿರು
ಹದುಳುನಾಗೆಂದೆನೀ ತಪ್ಪನೆಣಿಸದೆ ಸಲಹು ೧

ಅಣುಮಹತ್ತರಿಪೂರ್ಣ ವಾಸುದೇವನೆ ನಿನ್ನ
ಗಣಿಸಿ ನೆಲೆಗಾಣವೀ ಶ್ರುತಿಗಳೆಂಬುದನು
ಮನದೊಳೆಣಿಸುತಲಿಹೆನು ಸರ್ವರೊಳು ಸಮಬುದ್ಧಿ
ಯನು ಪಾಲಿಸೆಂದು ಬೇಡುವೆನು ಜಗದೀಶಾ ೨

ಪರಿಪೂರ್ಣನೆಂಬ ಭಾವದಿ ಮನವು ನಿಲದಾಗಿ
ಗುರಿಗೈದು ನಿನ್ನ ಮಂಗಳ ಮೂರುತಿಯನು
ಪರಿಪರಿಯಲುಪಚರಿಸಿ ಸ್ಥಿರಗೈವೆನೀ ಮನವ
ತಿರುಪತಿಯೆ ಸ್ಥಿರವಾಸ ಶ್ರೀ ವೆಂಕಟೇಶಾ ೩

ಓಂ ಯಮುನಾವೇಗಸಂಹಾರಿಣೇ ನಮಃ

೫೩

ಪೂಜಾ ನಿರೂಪಣ

ಕರುಣಾಸಾಗರ ಬಂದೆಯ ಸುದಿನವಿಂದಾನಂದ ಸಂದೋಹನೆ
ವರ ಸಿಂಹಾಸನವೀವೆ ಮಂಡಿಸು ಪದಾಂಭೋಜಂಗಳಂ ಪಾಲಿಸೈ
ಸುರಸಿಂಧೂದಕದಿಂದ ಮುಟ್ಟಿ ತೊಳೆವೆಂ ಹಸ್ತಂಗಳಂ ನೀಡಬೇ
ಕರವಿಂದಾಕ್ಷನೆ ತೋಯವರ್ಘ್ಯವಿದಕೋ ಶ್ರೀ ವೆಂಕಟಾದ್ರೀಶನೇ ೧

ಮೂರಾವರ್ತಿಯಲಾಚಮಾನಕಿದಕೋ ಕ್ಷೀರಂ ಜಗನ್ನಾಥನೇ
ಸ್ಮೇರಾಸ್ಯಾಂಘ್ರಿ ಕರಂಗಳನ್ನೊರಸುವೆಂ ದಿವ್ಯಂಬರ ಕ್ಷೌಮದಿಂ
ದಾರಿದ್ರ್ಯಾರ್ತಿನಿವಾರಣಾರ್ಥಕೊಲವಿಂ ಮಧ್ವಾಜ್ಯದಧ್ಯಾದಿಯಿಂ
ಪಾರಾವಾರಶಯನ ನಿನ್ನ ಭಜಿಪೆಂ ಶ್ರೀ ವೆಂಕಟಾದ್ರೀಶನೇ ೨

ಮಧುಪರ್ಕಂ ಮಧುಸೂದನಂಗೆ ನಿನಗೈ ಮತ್ತಾಚಮನೋದಕಂ
ಬುಧರಿಂ ಪೂಜಿಪ ಪಾದಪದ್ಮಯುಗಳಕ್ಕೀ ಪಾದುಕಾಯುಗ್ಮಮಂ

ವಿಧಿಯಿಂದಿತ್ತೆನು ಮೆಟ್ಟಿ ದೇವ ಬಿಜಯಂಗೈ ಮಜ್ಜನಸ್ಥಾನಕಂ
ಸುಧೆಯಂ ನಿರ್ಜರರಿಂಗೆ ಕೊಟ್ಟ ವಿಭುವೇ ಶ್ರೀ ವೆಂಕಟಾದ್ರೀಶನೇ ೩

ಸ್ನಾನಂ ಶುದ್ಧಜಲಂಗಳಿಂ ದಧಿಮದುಕ್ಷೀರಾಜ್ಯದಿಂ ಶರ್ಕರಾ
ಸ್ನಾನಂ ಪೌರುಷಸೂಕ್ತ ಮಂತ್ರವಿಧಿಯಿಂ ಸ್ನಾನಂ ರಮಾಸೂಕ್ತದಿಂ
ಸ್ನಾನಂ ಸಾಗರ ನಾಲ್ಕರಿಂ ಶ್ರುತಿಗಳಿಂ ವಸ್ತ್ರದ್ವಯಂ ಪಾದುಕಾ
ಶ್ರೀನಾಥಂಗುಪವೀತಯುಗ್ಮವಿದಕೋ ಶ್ರೀ ವೆಂಕಟಾದ್ರೀಶನೇ ೪

ಶ್ರೀಗಂಧಾಗುರು ಲೇಪನಂ ಮೃಗಮದಂ ಯೋಗೀಂದ್ರ ವಂದ್ಯಾಂಘ್ರಿಯೇ
ಭೋಗದ್ರವ್ಯವಿದೀಗ ಭೂಷಣಚಯಂ ಕಂಠಾಂಗುಲೀಶ್ರೋತ್ರಕುಂ
ಶ್ರೀ ಗೌರೀಪ್ರಿಯಮಿತ್ರ ದಿವ್ಯ ಮಕುಟಂ ಪುಷ್ಪಂಗಳಿಂ ಪೂಜಿಪೆಂ
ಬೇಗಾನಂದವನಿತ್ತು ನಮ್ಮ ಸಲಹೈ ಶ್ರೀ ವೆಂಕಟಾದ್ರೀಶನೇ ೫

ಓಂ ಬಲಭದ್ರಪ್ರಿಯಾನುಜಾಯ ನಮಃ

೫೪

ದ್ವಾದಶನಾಮ ಪೂಜೆ

ಜಯ ಜಯ ವೆಂಕಟನಾಯಕ ಜಯ ಜಯ
ಜಯ ಜಯ ಲಕ್ಷ್ಮೀರಮಣ ಜಯ
ಭಯಪರಿಹರ ಶುಭನಾಮಧೇಯ ಜಯ
ಜಯ ವಿಭವಪ್ರದಚರಿತ ಜಯ ಪ

ಜಯ ಜಯ ಕೇಶವ ನಾರಾಯಣ ಜಯ
ಜಯ ಮಾಧವ ಗೋವಿಂದ ಜಯ
ಜಯ ವಿಷ್ಣುವೆ ಮಧುಸೂದನ ತ್ರಿವಿಕ್ರಮ
ಜಯ ವಾಮನ ಜಯ ಶ್ರೀಧರ ಜಯ ೧

ಜಯ ಜಯ ಹೃಷೀಕೇಶ ಪದ್ಮನಾಭ ಜಯ
ದಾಮೋದರ ಸಂಕರ್ಷಣ ಜಯ

ಜಯ ವಾಸುದೇವನೆ ಜಯ ಪ್ರದ್ಯುಮ್ನನೆ
ಜಯಾನಿರುದ್ಧ ಪುರುಷೋತ್ತಮ ಜಯ ೨

ಜಯ ಜಯಾಧೋಕ್ಷಜ ನಾರಸಿಂಹ ಜಯ
ಜಯ ಜಯಾಚ್ಯುತ ಜಯ ಜನಾರ್ದನ
ಜಯ ಜಯೋಪೇಂದ್ರನೆ ಜಯ ಹರೆ ಶ್ರೀ ಕೃಷ್ಣ
ಜಯ ತಿರುಪತಿ ವೆಂಕಟರಮಣ ೩

ಓಂ ಪೂತನಾಜೀವಿತಹರಾಯ ನಮಃ

೫೫

ಸಾಸಿರನಾಮ ಪೂಜೆ

ಸಾಸಿರ ನಾಮ ಪೂಜೆಯ ಸಮಯಾ ಶ್ರೀ
ವಾಸುದೇವನೆ ರಕ್ಷಿಪ ಸಮಯಾ ಸ್ವಾಮಿ ಪ

ಸಾಸಿರ ದಳ ಪದ್ಮ ಮಧ್ಯಕೆ ಶ್ರೀ ವೇದ
ವ್ಯಾಸ ಗುರುವು ಬಂದಿಹ ಸಮಯಾ
ಭಾಸುರ ಛಂದಸ್ಸು ಮುಖಮಂಡಲದಿ ಪ್ರ
ಕಾಶಿಸಿ ಮಂತ್ರ ಸಿದ್ಧಿಪ ಸಮಯಾ ಸ್ವಾಮಿ ೧

ಶ್ರೀರಮೆ ಧರೆ ಸಹ ಹೃದಯಮಧ್ಯದಿ ಶ್ರೀಮನ್
ನಾರಾಯಣ ನೀನಿಹ ಸಮಯಾ
ತೋರುತಿದಿರೆ ಪೀಠದಿ ಪೂಜೆಗೊಳುತೆನ್ನ
ಸ್ಮೇರಾಸ್ಯದಿಂ ನೋಡುವ ಸಮಯಾ ಸ್ವಾಮಿ ೨

ಬೀಜನಾಮವು ದಕ್ಷಿಣ ಸ್ತನ ದೇಶದಿ
ಭ್ರಾಜಿಸಿ ಭಕ್ತಿಗೂಡುವ ಸಮಯಾ
ರಾಜಿಪ ಶಕ್ತಿ ನಾಮವು ವಾಮದಿ ಫಲ
ರಾಜಿಯ ಬೆಳಸುತಿರುವ ಸಮಯಾ ಸ್ವಾಮಿ ೩

ಹೃದಯದಿ ಕೀಲಕ ನಾಮವು ನಿನ್ನಯ
ಪದಸನಿಯವ ಸೇರಿಪ ಸಮಯಾ
ಪದರದೆ ವಿಘ್ನತತಿಗೆ ಭಜಿಸೆನ್ನುತ
ಸದಯ ಸದ್ಗುರು ನಿಯಮಿಪ ಸಮಯಾ ಸ್ವಾಮಿ ೪

ಅಂಗುಲಿಗಳು ನಿನ್ನ ಮಂಗಳ ನಾಮಗಳ
ಸಂಗದಿ ಶುದ್ಧಿವಡೆದಿಹ ಸಮಯಾ
ಗಂಗೆಯ ಪಡೆದ ನಿನ್ನಡಿಗೆ ತುಲಸಿ ಕುಸು
ಮಂಗಳನರ್ಪಿಸುತಿಹ ಸಮಯಾ ಸ್ವಾಮಿ ೫

ಅಂಗಗಳಾರು ಶುಭಾಂಗಗಳಾಗಿ ನಿನ್ನ
ಮಂಗಳ ತನುವ ಧ್ಯಾನಿಪ ಸಮಯಾ
ತೊಂಗದೆ ವಿಷಯಗಳೊಳು ನಿನ್ನ ಪದ
ದುಂಗುಟದುದಿಯ ಸೇರಿಹ ಸಮಯಾ ಸ್ವಾಮಿ ೬

ದಶನಾಮ ದಶಕ ದಶಕ ಸಮಯದಿ ದಿವ್ಯ
ದಶವಿಧ ಭೋಜ್ಯ ಭೋಜಿಪ ಸಮಯಾ
ದಶವಿಧದಾರತಿಗಳ ಬೆಳಕಿಗಿಂದ್ರಿಯ
ದಶಕವು ವಶಕೆ ಬಂದಿಹ ಸಮಯಾ ಸ್ವಾಮಿ ೭

ಮೀನ ಕಮಠ ಕೀಟ ನರಹರಿ ವಟು ರಾಮ
ಜಾನಕೀಪತಿ ಕೃಷ್ಣ ಬುದ್ಧ ಕಲ್ಕಿ
ನೀನಾಗಿ ಭಕತರಿಷ್ಟವನಿತ್ತೆ ನನ್ನಯ
ದೀನತೆಯಳಿವರಿದೇ ಸಮಯಾ ಸ್ವಾಮಿ ೮

ಅನುಗ್ರಹಶಕ್ತಿಯೊಳಿರುತಷ್ಟಶಕ್ತಿಗ
ಳನು ನೋಡಿ ಸೇವೆಗೊಳುವ ಸಮಯಾ
ಸನಕಾದಿಗಳು ಶ್ರುತಿ ಸ್ಮೃತಿ ಪುರಾಣಂಗಳು
ವಿನಮಿತರಾಗಿ ನುತಿಪ ಸಮಯಾ ಸ್ವಾಮಿ ೯

ವರ ಸಿಂಹಾಸನದಗ್ನಿ ದಿಕ್ಕಿನೊಳ್ ಧರ್ಮನು
ಹರುಷದಿಂ ಸೇವೆಗೈಯುವ ಸಮಯಾ
ನಿರುರುತಿ ದೇಶದಿ ಜ್ಞಾನನು ತಾಮಸ
ಬರದಂತೆ ಕಾದು ನಿಂದಿಹ ಸಮಯಾ ಸ್ವಾಮಿ ೧೦

ವೈರಾಗ್ಯ ವಾಯವ್ಯದೊಳು ನಿಂದು ದುಃಖವ
ಹಾರಿಸುತಲಿ ಸೇವಿಪ ಸಮಯಾ
ಸಾರಿರುತ್ತೈಶ್ವರ್ಯನೀಶನೆಡೆಯೊಳ್ ನೀನು
ತೋರಿದೂಳಿಗ ಗೈಯುವ ಸಮಯಾ ಸ್ವಾಮಿ ೧೧

ಸುರಪತಿ ದೆಶೆಯೊಳಧರ್ಮನು ಬೆದರುತ
ಕರವ ಮುಗಿದು ನಿಂದಿಹ ಸಮಯಾ
ಇರುತ ದಕ್ಷಿಣದಲಜ್ಞಾನನು ಚೇಷ್ಟೆಯ
ತೊರೆದು ಭಯದಿ ಭಜಿಸುವ ಸಮಯಾ ಸ್ವಾಮಿ ೧೨

ವರುಣದಿಕ್ಕಿನೊಳವೈರಾಗ್ಯನು ನಿನ್ನಡಿ
ಗೆರಗುವವರ ನೋಡುವ ಸಮಯಾ
ಇರುತಲುತ್ತರದಲನೈಶ್ವರ್ಯ ಮಂತ್ರದು
ಚ್ಚರಣೆಯ ತಪ್ಪನೆಣಿಪ ಸಮಯಾ ಸ್ವಾಮಿ ೧೩

ಕಾಮಾದಿಗಳು ಪೀಠಸೀಮೆಯೊಳಗೆ ನಿಂತು
ಕೈಮುಗಿದಲುಗದಿರುವ ಸಮಯಾ
ತಾಮಸ ರಾಜಸ ಸಾತ್ವಿಕಗಳು ನಿನ್ನ
ನಾಮದ ಬಲುಹ ತಿಳಿವ ಸಮಯಾ ಸ್ವಾಮಿ ೧೪

ಎಂಟು ದಿಕ್ಕಿನ ದೊರೆಗಳು ಪರಿವಾರ ಸಹ
ಬಂಟರಾಗಿಯೆ ಕಾದಿಹ ಸಮಯಾ
ಎಂಟು ಬಗೆಯ ಸಿರಿದೇವಿಯರೊಂದಾಗಿ
ನಂಟುತನವ ಬಳಸಿಹ ಸಮಯಾ ಸ್ವಾಮಿ ೧೫

ಮೊದಲ ನಾಮವು ವಿಶ್ವಮಯ ನಿನ್ನ ನಿರ್ಗುಣ
ಪದವ ಸೂಚಿಸಿ ಸಲಹುವ ಸಮಯಾ
ತುದಿಯ ನಾಮದಿ ಭಕತರಿಗಾಗಿ ತನುದಾಳಿ
ಒದೆದು ದುರಿತವ ರಕ್ಷಿಪ ಸಮಯಾ ಸ್ವಾಮಿ ೧೬

ದೂರಕೆ ದುರಿತವು ಹಾರಿ ಹೋಗಿಯೆ ಭಕ್ತಿ
ಸೇರಿ ನಿನ್ನೆಡೆಯೊಳಾನಿಹ ಸಮಯಾ
ದಾರಿದ್ರ್ಯ ದುಃಖವು ತೋರದಾನಂದವ
ಸಾರಿ ನಿನ್ನನು ನುತಿಸುವ ಸಮಯಾ ಸ್ವಾಮಿ ೧೭

ಸಾಸಿರ ತಾರಕ ಜಪ ಮೊದಲು ಲಭಿಸಿ
ಸಾಸಿರ ನಾಮ ಜಪವು ಮಧ್ಯದಿ
ಸಾಸಿರ ವಂದನೆ ಕುಸುಮ ತುಲಸಿಗಳ
ಸಾಸಿರದಿಂದೊಪ್ಪುವ ಸಮಯಾ ಸ್ವಾಮಿ ೧೮

ಸಾಸಿರ ಸಾಸಿರ ಜನ್ಮ ಜನ್ಮಗಳೊಳು
ಸಾಸಿರ ಸಾಸಿರ ತಪ್ಪುಗಳಾ
ಸಾಸಿರ ಬಾರಿ ಮಾಡಿದ್ದರು ನಾಮದ
ಸಾಸಿರ ಪ್ರಭೆಯೊಳಳಿವ ಸಮಯಾ ಸ್ವಾಮಿ ೧೯

ಮುಂದೆನ್ನ ಕುಲವೃದ್ಧಿಯೊಂದಿ ನಿನ್ನಯ ಕೃಪೆ
ಯಿಂದ ಭಕತಮಯವಹ ಸಮಯಾ
ಯಿಂದೆನ್ನ ಭಾಗ್ಯಕೆಣೆಯ ಕಾಣದೆ ನಿನ್ನ
ಮುಂದೆ ನಾ ನಲಿದು ಕುಣಿವ ಸಮಯಾ ಸ್ವಾಮಿ ೨೦

ಗುರುವರನುಪದೇಶಿಸಿದ ಮಂತ್ರಕೆ ಸಿದ್ಧಿ
ಬರುವ ನಿನ್ನಯ ಕೃಪೆಗಿದು ಸಮಯಾ
ಕರುಣದಿಂ ನೋಡಿ ಕೈಪಿಡಿದಭಯವನಿತ್ತು
ಪೊರೆವದಕೆನ್ನನಿದೇ ಸಮಯಾ ಸ್ವಾಮಿ ೨೧

ಧನ್ಯನು ಧನ್ಯನು ಧನ್ಯನು ನಾನೀಗ
ಧನ್ಯನು ಮತ್ತು ಧನ್ಯನು ವಿಭುವೆ
ಧನ್ಯರು ಜನನೀ ಜನಕ ಬಾಂಧವರೆಲ್ಲ
ಧನ್ಯರೆಮ್ಮನು ನೋಡುವ ಸಮಯಾ ಸ್ವಾಮಿ ೨೨

ಮೂಲ ಮಂತ್ರಾಕ್ಷರ ಮೂಲ ನೀನಾಗಿಯೆ
ಮೂಲಾವಿದ್ಯೆಯ ತೊಲಗಿಪ ಸಮಯಾ
ಮೂಲೋಕನಾಯಕ ಮುಕ್ತಿ ಮಾರ್ಗಕೆಯಿದೆ
ಮೂಲವಾಗಿಯೆ ಬದುಕುವ ಸಮಯಾ ಸ್ವಾಮಿ ೨೩

ಮುರಹರ ಮಾಧವ ನರಹರೆ ಕೇಶವ
ದುರಿತ ತಿಮಿರ ಭಾಸ್ಕರ ಕೃಷ್ಣ
ಶರಣುಹೊಕ್ಕೆನು ನಿನ್ನ ಚರಣ ಪಂಕಜಗಳ
ಪೊರೆಯುವರೆನ್ನನಿದೆ ಸಮಯಾ ಸ್ವಾಮಿ ೨೪

ತಿರುಪತಿಯೊಡೆಯನೆ ಶ್ರೀ ವಾಸುದೇವಾರ್ಯ
ಗುರುವಾಗಿ ಕಾವೇರಿ ತೀರದಲಿ
ಕರುಣದಿಂ ಪಾದುಕೆಗಳನಿತ್ತ ಭಾಗ್ಯವು
ಸ್ಥಿರವಾಗಿ ಭಕತಿ ಹೆಚ್ಚುವ ಸಮಯಾ ಸ್ವಾಮಿ ೨೫

ಓಂ ಶಕಟಾಸುರಭಂಜನಾಯ ನಮಃ

೫೬

ಧೂಪ

ಧೂಪವಿದು ದೇವ ನೀನಾಘ್ರಾಣಿಸು
ತಾಪಹರವಾಗಿರುವ ಸೂಕ್ಷ್ಮಗಂಧದ ದಿವ್ಯ ಪ

ಪಾವಕನು ನಿನ್ನ ಮುಖದಲಿ ಜನಿಸಿ ಬ್ರಹ್ಮಾದಿ
ದೇವತಾಮುಖನಾಗಿ ಲೋಕಗಳನು

ಪಾವನವ ಮಾಡುತ್ತ ದಶವಿಧದ ದ್ರವ್ಯವನು
ತಾ ವಹಿಸಿ ನಿನ್ನ ಪಾದದ ಮುಂದೆ ನಿಂದಿಹನು ೧

ಸೋಮಷೋಡಶ ಕಲೋತ್ಪನ್ನ ವಾಗಿಹ ಧೂಪ
ಸೋಮ ನಿನ್ನಯ ಮನದಿ ಜನಿಸಲೀ ಧೂಪ
ಸೋಮನನು ಪುನಹ ಮನದಲಿ ನಿಲಿಸುತಿಹ ಧೂಪ
ಕಾಮಿತಾರ್ಥಪ್ರದವು ಭಾವಿಪರಿಗೀ ಧೂಪ ೨

ಪರಿಪೂರ್ಣನಾಗಿ ಜಗದೊಳ ಹೊರಗೆ ನೆಲಸಿರುತ
ಪರಿಪರಿಯ ಪೂಜೆಗಳ ತೆಗೆದುಕೊಳುತ
ಶರಣಾಗತರ ಸಲಹಿ ಮಹಿಮೆಗಳ ಬೀರುತ್ತ
ತಿರುಪತಿಯಲಿರುತಿರುವೆ ವೆಂಕಟೇಶ್ವರನೆನುತ ೩

ಓಂ ನಂದವ್ರಜ ಜನಾನಂದಾಯ ನಮಃ

೫೭

ದೀಪ

ದೀಪವಿದ ಬೆಳಗುವೆನು ದೇವ ನೀ ನೋಡು
ವ್ಯಾಪಿಸಿದ ತಿಮಿರವನು ಪರಿಹರಿಸಿ ರಂಜಿಸುವ ಪ

ಸಕಲ ದೇವಾತ್ಮಕದ ತಿಲ ತೈಲವಾಗಿರಲು
ಅಕಲುಷಿತ ವರ್ತಿಯಿಂ ಮಿಳಿತವಾಗಿ
ಪ್ರಕಟವಾಗಿರುವಗ್ನಿ ಪ್ರಭೆಯೊಡನೆ ಸ್ಫುಟವಾಗಿ
ಮುಖ ಸಮೀಪದಿ ಮೂರು ಲೋಕಗಳ ಬೆಳಗುತಿಹ ೧

ಜ್ಞಾನವೇ ಗೋಘೃತವು ಮೂರ್ತಿಗಳೆ ವರ್ತಿಗಳು
ನೀನಿದಕೆ ಮೂಲ ಕಾರಣವಸ್ತುವೂ
ಸಾನುಕೂಲದಿ ಗುಣಗಳೊಂದಾಗಿ ಚಿತ್ತಿನೊಳು
ಲೀನವಾಗಿರೆ ನಿರ್ಮಲಾಕೃತಿಯ ತಾಳಿರುವ ೨

ಎನ್ನ ಜೀವವೆ ದೀಪ ನಿನ್ನ ಪಾದವೆ ಬ್ರಹ್ಮ
ಭಿನ್ನ ಭಾವವನುಳಿದು ಪೂರ್ಣರೂಪದಲಿ
ನಿನ್ನೊಳಗೆ ನಿಲಿಸೆನ್ನ ಪುಣ್ಯತಮವೆಂದೆನಿಪ
ಸ್ವರ್ಣಮಯ ತಿರುಪತಿಯ ವಾಸ ವೆಂಕಟರಮಣ ೩

ಓಂ ಸಚ್ಚಿದಾನಂದವಿಗ್ರಹಾಯ ನಮಃ

೫೮

ನೈವೇದ್ಯ

ನೈವೇದ್ಯವಿದು ಭುಂಜಿಸಲು ಯೋಗ್ಯವಾಗಿದೆ
ಕೈವಲ್ಯದಾಯಕ ನೀನಾರೋಗಣೆ ಮಾಡು ಪ

ಆದಿತ್ಯ ವಸು ರುದ್ರ ಬ್ರಹ್ಮಾದಿ ಸಕಲ ದೇ
ವರ್ಕಳು ಮಂಡಲದೊಳಗಿಹರು
ಆದಿಯೊಳ್ ಭೂಮಿಯ ಪ್ರೋಕ್ಷಿಸಿ ಮತ್ತಲ್ಲಿ
ಸಾಧಿಸಿ ಮಂಡಲವದು ರಂಜಿಸುತಲಿದೆ ೧

ಭೋಗ್ಯ ಭೋಕ್ತೃಗಳೆಂದು ಬಗೆಯರಡಾಗಿದೆ
ಭೋಗ್ಯವು ಜಗವಿದು ಭೋಕ್ತೃ ನೀನು
ಪ್ರಾಜ್ಞ ರೂಪದಿ ಸುಪ್ತಿ ಸುಖಸಾಕ್ಷಿರೂಪನೆ
ಸಾರ್ಘ್ಯಪಾದ್ಯಗಳಿಂದ ಸತ್ಕರಿಸುವೆನೀಗ ೨

ಜಡಪ್ರಕೃತಿಯೆ ಪಾದವೆಂಟರ ಪೀಠವು
ಜಡವಿರಹಿತವಾದ ಪ್ರಕೃತಿ ತಾ ಮಣೆಯು
ದೃಢ ವಿವೇಕವೆ ದಿವ್ಯ ಹರಿವಾಣವದರಲ್ಲಿ
ಒಡಗೂಡುವನುಭವವೆಂಬನ್ನ ಬಡಿಸಿದೆ ೩

ಇಪ್ಪತ್ತುನಾಲ್ಕು ತತ್ವಂಗಳೆ ಶಾಕಂಗ
ಳೊಪ್ಪುವ ಬಹು ವಿಷಯಗಳೆ ವ್ಯಂಜನವು

ತಪ್ಪದೆ ಮಾಡುವ ಭಕ್ತಿ ತಾ ರಸವು
ತುಪ್ಪವು ಜೀವನ ಬೆರಸುವ ಗುಣವು ೭

ಪರಮನೊಳೈಕ್ಯವಾದನುಭವ ಕ್ಷೀರವು
ನೆರೆ ಪುಟ್ಟಿದಾನಂದ ತಾನೆ ಸಖ್ಖರೆಯು
ತಿರುಪತಿ ನಿಲಯ ಶ್ರೀ ವೆಂಕಟರಮಣನೆ
ಕರುಣಕಟಾಕ್ಷದಿಂದಾರೋಗಣೆ ಮಾಡು ೫

ಓಂ ನವನೀತವಿಲಿಪ್ತಾಂಗಾಯ ನಮಃ

೫೯

ತಾಂಬೂಲ

ತಾಂಬೂಲ ಪ್ರತಿಗ್ರಹವ ಮಾಡು ಮಾರಮಣಾ
ಜಾಂಬೂನದಾಕಾರ ಜಲಜದಳನಯನಾ ಪ

ಜಾಂಬವತಿ ಮೊದಲಾದ ಅಷ್ಟಮಹಿಷಿಯರೆಲ್ಲ
ಸಾಂಬಾದಿ ಪುತ್ರರೊಡಗೂಡಿ ಸೇವಿಸಲು
ಸಾಂಬರಾಲಂಕಾರ ಸಕಲ ಭೋಗಂಗಳನು
ತಾಂಬೂಲವಿದು ಶೋಭನವ ಮಾಡುತಿಹುದಾಗಿ ೧

ಶ್ವೇತವರ್ಣದ ದಿವ್ಯ ನಾಗವಲ್ಲಿಗಳಿಂದ
ಖ್ಯಾತಿವಡೆದಿಹ ಕ್ರಮುಕಫಲಗಳಿವರಿಂದ
ನೂತನದ ಮೌಕ್ತಿಕದ ಚೂರ್ಣ ಕರ್ಪುರದಿಂದ
ಪ್ರೀತಿಯಿಡುವಂದದಲಿ ರಮ್ಯವಾಗಿರುತಿರುವ ೨

ಸ್ಫುರಿಸುತಿದೆ ನಿನ್ನ ಮಂಗಳಕಾಂತಿ ಸೂರ್ಯನಲಿ
ಸ್ಫುರಿಸುತಿದೆ ಚಂದ್ರಾಗ್ನಿಗಳಲೀ ಪರಿಯಲಿ
ಸ್ಮರಿಸಿದರೆ ಕೈವಲ್ಯ ಮೊದಲಾದ ಪದವೀವ
ತಿರುಪತಿಯ ಸ್ಥಿರವಾಸ ಶ್ರೀ ವೆಂಕಟೇಶ ೩

ಓಂ ನವನೀತ ನಟಾಯ ನಮಃ

೬೦

ವೆಂಕಟೇಶ ಮಂಗಳ

ಜಯ ಮಂಗಳಂ ಶುಭೋದಯ ಮಂಗಳಂ
ಭಯನಾಶನಾಯ ತಿರುಪತಿ ವೆಂಕಟೇಶಾಯ ಪ

ಮಣಿಖಚಿತ ಮುಕುಟಾಯ ಇನಕೋಟಿ ರೂಪಾಯ
ಕನಕಕುಂಡಲ ಕರ್ಣಶೋಭಿತಾಯ
ಘನ ರುಚಿರ ಮೌಕ್ತಿಕಾಹಾರಯುತ ಕಂಠಾಯ
ವನಜಾರಿದರ ಗದಾಯುಧ ಚಾರು ಹಸ್ತಾಯ ೧

ಹೃದಯಶೋಭಿತ ಮಹಾ ಕೌಸ್ತುಭಾಭರಣಾಯ
ವಿಧಿಜನಕ ನಾಭಿಪಂಕಜ ಭಾಸುರಾಯ
ಸದಮಲಾಯತ ಕಾಂಚಿದಾಮಯುತ ವಸನಾಯ
ಬುಧಜನಮನೋವೇದ್ಯ ಪಾದಪದ್ಮಾಯ ೨

ಲಕ್ಷ್ಮೀಕಳತ್ರಾಯ ಸೂಕ್ಷ್ಮಸ್ವರೂಪಾಯ
ಕುಕ್ಷಿಗತಭುವನ ಪರಿಪಾಲಕಾಯ
ಪಕ್ಷೀಂದ್ರಕಂಧರಾರೂಢಾಯ ದುಷ್ಟಜನ
ಶಿಕ್ಷಾಸಮರ್ಥಾಯ ಸಾಕ್ಷಿ ಚೈತನ್ಯಾಯ ೩

ವಿಶ್ವಸ್ವರೂಪಾಯ ವಿಶ್ವತರು ಮೂಲಾಯ
ವಿಶ್ವಗುಣ ಸಂಹಾರಕಾರಣಾಯ
ವಿಶ್ವನಾಟಕಸೂತ್ರಧಾರಾಯ ನಿತ್ಯಾಯ
ವಿಶ್ವಕೃತ ಸುಕೃತದುಷ್ಕೃತ ಲೇಪರಹಿತಾಯ ೪

ಧರಣಿಕಮಲಾಲಯಾಶ್ರಿತ ದಿವ್ಯ ಪಾರ್ಶ್ವಾಯ
ಸುರಮುನಿ ಸ್ತುತಿ ಘೋಷಪೂರಿತಾಯ

ಪರಮಪಾವನಪುಣ್ಯ ಶೇಷಾದ್ರಿನಿಲಯಾಯ
ಸ್ಮರಜನಕ ಸುರಶಿಖಾಮಣಿ ವೆಂಕಟೇಶಾಯ ೫

ಓಂ ಅನಘಾಯ ನಮಃ

ಕಂ॥ ಗಣಪತಿ ನಿನ್ನಾಗ್ನೇಯದ
ಲಿನ ತಾ ನೈರುತ್ಯದೆಶೆಯೊಳಂಬಿಕೆಮರುತನೊ
ಳನುಪಮ ಶಂಕರನೀಶಾ
ನ್ಯನೋಳರ್ಚಿತರಾರೈಯ್ಯ ತಿರುಪತಿಯೊಡೆಯಾ

ನೀನೇ ಗಣಪತಿ ಸೂರ್ಯನು
ನೀನೇ ಶಿವ ನಿನ್ನ ಶಕ್ತಿ ದೇವಿಯು ನಾನೂ
ನೀನಾಗಿ ನಿನ್ನ ಭಜಿಸಿದೆ
ನೀ ನಿರ್ಣಯ ನಿನ್ನ ವಚನ ವೆಂಕಟರಮಣಾ

೬೧

ಶಿವ ಮಂಗಳ

ಶಿವಮಂಗಳಂ ಸದಾಶಿವ ಮಂಗಳಂ
ಮಂಗಳಂ ರಜತಾದ್ರಿ ಮುಖ್ಯನಿಲಯಾಯ ಪ

ಹಿಮಕರಾವತಂಸಾಯ ಹಿಮರುಚಿರಕಾಯಾಯ
ಹಿಮರೂಪಗಿರಿಚಿತ್ತ ಹಾರಕಾಯ
ಹಿಮಹರಾಮಿತಕಾಂತಿ ಸದೃಶಾಯ ಸೌಮ್ಯಾಯ
ಹಿಮತಾಪರಹಿತಾಯ ಹೇಮವರ್ಣಾಯ ೧

ವರಜಟಾಮಕುಟಾಯ ವಾರಿಯುತಕೇಶಾಯ
ಸ್ಫುರದಿನಾನಲಸೋಮಲೋಚನಾಯ

ಗರನೀಲಕಂಠಾಯ ಕದ್ರುಸುತ ಹಾರಾಯ
ಪರಶು ಮೃಗ ಶೂಲಾದಿ ಪರಮಾಯುಧಾಯ ೨

ನಾಗೋಪವೀತಾಯ ನಾಗೇಶ ವಲಯಾಯ
ನಾಗಧವಳಾಂಗಾಯ ನಾಯಕಾಯ
ನಾಗವಾಹನ ಮುಖ್ಯ ನಾಕಜನನಾಥಾಯ
ನಾಗಪರ್ಯಂಕಸ್ಥ ನಿತ್ಯಮಿತ್ರಾಯ ೩

ಗೌರೀಧೃತಾಂಗಾಯ ಗಂಧರ್ವಸೇವ್ಯಾಯ
ಭೂರಿ ಗುಣಬ್ರಹ್ಮಾಂಡ ಭೂಷಿತಾಯ
ಚಾರು ಕಟಿ ಜಘನೋರು ಜಾನು ಶುಭ ಜಂಘಾಯ
ನೀರಜಾಮಲ ಪೀಠ ನಿಹಿತ ಪಾದಾಯ ೪

ಮೃಗಚರ್ಮವಸನಾಯ ಮಂಜುಳ ಮಯೂಖಾಯ
ಜಗದೇಕನಾಥಾಯ ಜೀವನಾಯ
ಸುಗಮ ತಿರುಪತಿ ನಾಮ ಸದ್ಧಾಮಧಿನಾಥಾಯ
ಗಗನಧುನಿ ಗಿರಿ ವಾಸ ಗಂಗಾಧರಾಯ ೫

ಓಂ ನವನೀತನವಾಹಾರಾಯ ನಮಃ

೬೨

ವೇದ : ಋಗ್ವೇದ

ವೇದವನಿದನವಧರಿಸು ಮಂತ್ರ
ಭೇದವಾದರು ಮತ ಬೇರಲ್ಲವೆನಿಸು ಪ

ಆದಿಯೊಳ್ ಋಗ್ವೇದದಲ್ಲಿ ಅಗ್ನಿ
ಯಾದನು ದೇವತೆಯಾ ಯಜ್ಞದಲ್ಲಿ
ಈದೇವ ಋತ್ವಿಕ್ಕಿನಲ್ಲಿ ಹೊಂದ
ಲಾದರಿಸುತಲಾಗ ಹೊಗಳ್ವರೆಂಬಲ್ಲಿ ೧

ಹೋತೃತ್ವದಲ್ಲಿಯು ನಿಂದು ಸ್ವರ್ಣ
ಧಾತುವು ತಾನಾದ ದಕ್ಷಿಣೆಗೆಂದು

ಈ ತೆರದಲಿ ದೇವ ಬಂದು ವಿಪ್ರ
ವ್ರಾತಸ್ತೋತ್ರಕೆ ಯೀತ ನೋಡಲಾದನೆಂದು ೨

ಸುರರಿಗೀತನು ಮುಖ್ಯ ಸಖನು ದ್ವಿಜ
ವರರ್ಕೊಟ್ಟಾಹುತಿಯವರ್ಗಿತ್ತು ವೃಷ್ಟಿಯನು
ಬರಿಸುವನೆಂದೀತನನ್ನು ನೀನೆ
ಇರಿಸಿದೆ ತಿರುಪತಿಯಾಳ್ವ ವೆಂಕಟನು ೩

ಓಂ ಮುಚುಕುಂದಪ್ರಸಾದಕಾಯ ನಮಃ

೭೩

ಯುಜುರ್ವೇದ

ದ್ವಿತೀಯ ವೇದವ ಪ್ರತಿಗ್ರಹಿಸು ನಿನ್ನ
ಮತದಿಂದಲಿಹ ಮಂತ್ರಗಳ ಮನಸ್ಕರಿಸು ಪ

ಯಜನವೆನುಪುದೆಜುರ್ವೇದ ಪೂಜೆ
ಋಜುವೆನಿಪುದು ಯಜ್ಞ ರಚನೆಯ ಭೇದ
ಭಜನೆಗಾಸ್ಪದ ನಿನ್ನ ಪಾದವೆಂದು
ಸುಜನರು ಸೂಚಿಪ ಸುಖಕರ ವಾದ ೧

ಸೃಷ್ಟಿಕಾಲದಿ ಸ್ವಾಮಿ ನೀನು ಜನರಿ
ಗಿಷ್ಟಾರ್ಥಧೇನುವೆಂದೀ ಯಜ್ಞವನ್ನು
ಕೊಟ್ಟೆ ಕರೆದು ಕೈಯ್ಯಲಿದನು ದೇವ
ತುಷ್ಟಿಯಿಂ ಭಾಗ್ಯವ ತಂದೀವುದನ್ನು ೨

ಕರೆಯೆ ಋಗ್ವೇದ ಸುರುನೂ ಬಂದ
ವರ ಭಜಿಪುದು ಯಜುರ್ವೇದವು ತಾನು
ಎರಡರಿಂದೇಕ ಕರ್ಮವನೂ ಮಾಡೆ
ತಿರುಪತಿ ವೆಂಕಟಗಿರಿಗಧೀಶ್ವನು ೩

ಓಂ ಷೋಡಶಸ್ತ್ರೀಸಹಸ್ರೇಶಾಯ ನಮಃ

೬೪

ಸಾಮವೇದ

ಸಾಮವೇದವ ಶ್ರುತಿಗೊಳಿಪೆ ಪೂರ್ಣ
ಕಾಮನೆ ಪರಮೇಶ ನೀ ವೇದರೂಪಿ

ಸ್ವರವೆತ್ತಿ ಕರೆವದು ಸಾಮ ಅಗ್ನಿ
ಬರಬೇಕು ಅಧ್ವರಕೆಂಬುದು ನೇಮ
ಬರುವನಗ್ನಿಯು ದೇವಸ್ತೋಮ ಬಂದು
ಬರುಹಿಯಲಿಹನೆಂಬ ಬಿರಿದು ನಿಃಸೀಮ ೧

ತರತರದಲಿ ವೇದಗಳನೂ ನೀನು
ಸುರಿಯೆ ಸಹಾಯವ ಮಾಡಿ ಯಜ್ಞವನು
ಧ್ಧರಿಸಿದೆ ಧರ್ಮವರ್ಧನನು ಮೂರು
ಬೆರಸಲು ನಿಗಮವು ಮುಖ್ಯವೆಂದಿದನು ೨

ಮೂರು ಶ್ರುತಿಗಳೇಕದಲ್ಲಿ ಕ್ರತುವ
ಪೂರಿತವನು ಮಾಡಿ ಕಾಲಕಟ್ಟಲೆಯಲಿ
ಸೇರಿಸಿ ತಿರುಪತಿಯಲ್ಲಿ ನೀನೆ
ತೋರಿದೆ ವೆಂಕಟಗಿರಿವರದಲ್ಲಿ ೩

ಓಂ ತ್ರಿಭಂಗಿನೇ ನಮಃ

೬೫

ಅಥರ್ವಣ ವೇದ

ತುದಿಯ ನಿಗಮವ ಕೇಳು ತಂದೆ ಶ್ರೀ ಹರಿಯೆ
ಹುದುಗಿಹವು ಮಂತ್ರಗಳು ಹೊರೆವೆ ನೀ ದೊರೆಯೆ ಪ

ಮೂರು ವೇದಗಳಿಂದ ಮಾಡಿ ಕ್ರತುಗಳ ಜನರು
ಸೇರಿ ಭೂಸ್ವರ್ಗಗಳ ಸವಿದು ಭೋಗ್ಯಗಳಾ

ಭೂರಿ ಜನ್ಮಗಳೆತ್ತಿ ಬಳಲುತಿರೆ ಜಗವನ್ನು
ತೋರಲೋಸ್ಕರ ಮಂತ್ರತತಿಗಳಿಹವಾಗಿ ೧

ಮಂತ್ರಂಗಳಲಿ ಸ್ವಾಮಿಮೂರ್ತಿವತ್ತಾಗುತಿರೆ
ಯಂತ್ರ ಪೀಡಿತ ಜನರನೆತ್ತಿ ಬದುಕಿಸಲು
ತಂತ್ರವಿದ ಮಾಡಿದೆ ನೀ ತಂದೆ ಲೋಕಕ್ಕೆ ಸ್ವಾ
ತಂತ್ರನಾಗಿಹನೆಂದು ತಿಳುಹಿಕೊಡೆ ದೇವ ೨

ಈ ರೀತಿಯಲಿ ನೀನು ಯಜ್ಞಕಧಿಪತಿಯಾಗಿ
ಸೇರಿ ಮಂತ್ರಂಗಳಲಿ ಸದ್ರೂಪನೆನಿಸಿ
ಕೋರಿದರ್ಥವ ಕೊಟ್ಟು ಕಾಯುತ್ತ ಸಂಸಾರ
ಪಾರ ತಿರುಪತಿಯನ್ನು ಪಡೆದ ವೆಂಕಟಪತಿಯೆ ೩

ಓಂ ಮಧುರಾಕೃತಯೇ ನಮಃ

೬೬

ಉಪನಿಷತ್ತು

ಶ್ರುತಿಯ ಶಿರಗಳನೀಗ ಸೂಚಿಪೆ ಸ್ವಾಮಿ
ವಿತತವಾಗಿಹ ವಿಶ್ವಕ್ಕೊಡೆಯ ನೀ ಗ್ರಹಿಸು ಪ

ಆದಿ ಮಧ್ಯಾಂತಗಳಿಲ್ಲದನಾದಿ
ಯಾದಾ ನಿರ್ಗುಣಬ್ರಹ್ಮ ನಿಜರೂಪವೆಂದು
ಸಾಧಿಸಿ ಬೋಧಿಸಿ ಸರ್ವೋಪಾಧಿಯನು
ಭೇದಿಸಿ ಬಿಡುತಿಹ ಬಹು ಸಿದ್ಧವಾದ ೧

ಮಾಯೆಯ ರೂಪದಿ ಮಾಡಿ ವಿಶ್ವವನು
ಆಯದಿಂದಾಧಾರವಾಗಿಯೂ ತಾನು
ನೋಯದೆ ನೋಡುತ್ತ ನಿಂದ ಸಾಕ್ಷಿಕನು
ಈಯಂಡದೊಳು ಪೂರ್ಣನಾಗಿಹನೆಂಬ ೨

ಹರಹುತ ಲೋಕವ ಹೊಂದಿಸು ತಿಂತು
ಇರುವನು ನಿತ್ಯದಲೀ ದೇವನೆಂದು
ಅರುಹುತಲಿದೆ ಶ್ರುತಿಶಿರವಿದು ಕೇಳು
ತಿರುಪತಿ ವೆಂಕಟಗಿರಿನಾಥ ಕೃಷ್ಣ ೩

ಓಂ ಶುಕವಾಗಮೃತಾಬ್ಧೀಂದವೇ ನಮಃ

೬೭

ಶಾಸ್ತ್ರಗಳು

ಈಗ ಶಾಸ್ತ್ರಗಳನ್ನು ಎರಗಿ ಪೇಳುವೆ ನಾನು
ಯೋಗೇಶ ಪ್ರತಿಗ್ರಹಿಸು
ಆಗುಮಾಡಿದೆ ನೀನು ಅಖಿಲಾಗಮಂಗಳನು
ಭಾಗಿಸಿ ಬಹುವಾಗಿ ಬಗೆಗಳನು ಪ

ಹದಿನಾಲ್ಕು ಸೂತ್ರಗಳು ಹುದುಗಿದ ವೃತ್ತಿಗಳು
ವೊದಗಿ ಶಬ್ದವ ಬೋಧಿಸಿ
ಅದರ ದೋಷಗಳನ್ನು ಅಟ್ಟಿ ಶುದ್ಧಿಯ ಮಾಳ್ಪು
ದಿದು ತಾನೆ ಮೊದಲಾಗಿ ಯೀ ಶಾಸ್ತ್ರವಿರಲು ೧

ಎರಡನೆಯದು ತರ್ಕವೆಲ್ಲಾ ಜೀವರ ಬಗೆಯ
ನರುಹಿಸಿ ಕೊಡುತಿಹುದು
ಪರಿಕಿಸಿ ಹದಿನಾರು ಪರಿ ಪದಾರ್ಥಗಳನ್ನು
ನೆರಹಿಸಿಯಿರೆ ನೀನುನಿನಗೊಪ್ಪಿಸುವೆನು ೨

ಈ ಸಾಧನಗಳಿಂದಲೇಕ ವಸ್ತುವ ತಿಳಿದು
ತಾ ಸಾಧಿಸುವ ಬಗೆಯ
ಮೋಸವಿಲ್ಲದ ಹಾಗೆ ಮುಕ್ತಿ ತೋರ್ಪುತ್ತರ ಮೀ
ಮಾಂಸೆ ಯೆಂದೆಂಬುದೆ ನಿಜ ಶಾಸ್ತ್ರ ವಾಗೆ ೩

ಕರ್ಮ ಬ್ರಹ್ಮವೆಯೆಂದು ಕೊಂಡಾಡಿ ಜನರನ್ನು
ಧರ್ಮಮಾರ್ಗದಿ ನಿಲಿಪ

ಮರ್ಮದೋರುವ ಪೂರ್ವ ಮೀಮಾಂಸೆ ಯೆಂಬುದ
ನಿರ್ಮಿಸಿಯಿರೆ ನೀನು ನಿರ್ಣೈಪುದಾಗಿ ೪

ಪರಿಕಿಸಿ ನಿನ್ನುವನು ಪಡೆಯಿಸಿ ಪ್ರಾಣಗಳನ್ನು
ಪರಮಾನಂದದಿ ನಿಲಿಸಿ
ಮೆರೆವ ಶ್ರೀ ತಿರುಪತಿ ವರದ ವೆಂಕಟರಮಣ
ಚರಣಸೇವೆಗೆ ಯೆನ್ನ ಚಲಿಸದಂತಿರಿಸು ೫

೭೮

ಮಂತ್ರಪುಷ್ಪ

ಮಂತ್ರಪುಷ್ಪವ ಸಮರ್ಪಿಸುವೆನೊಲವಿನಲಿ
ಯಂತ್ರವಾಹಕ ನಿನ್ನ ದಿವ್ಯಚರಣದಲಿ ಪ

ಮಂತ್ರಂಗಳುದಿಸಿದವು ಮುಖಕಮಲದಲಿ ನಿನ್ನ
ಮಂತ್ರಗಳ ಬ್ರಹ್ಮನಿಗೆ ಕೊಟ್ಟೆ ನೀ ಮುನ್ನ
ಮಂತ್ರಂಗಳನು ಜಪಿಸಿ ನವಬ್ರಹ್ಮರಾದಿಯಲಿ
ಮಂತ್ರಮೂರ್ತಿಗಳಾದರದರಿಂದಲೀ ವಿಧದ ೧

ಮಂತ್ರಹೃದಯದಿ ನಿಂದು ಮಂತ್ರಿಸಿದ ಜೀವನನು
ಮಂತ್ರಾರ್ಥವಸ್ತು ಪರಬ್ರಹ್ಮವನೆ ಮಾಡಿ
ಯಂತ್ರತ್ವವನು ಬಿಡಿಸಿ ಯಂತ್ರಿ ತಾನೆಂದೆನಿಸಿ
ಸಂತತಾನಂದಸಾಗರವ ಸೇರಿಸುವ ೨

ಹಿಂಸಾದಿ ದೋಷಗಳನುಳಿದು ನಿರ್ಮಲವಾಗಿ
ಹಂಸನೊಳು ಬೆರಸಿ ಗುಣಕರಣ ಪುಷ್ಪಗಳ
ಹಂಸಮಂಡಲರೂಪ ತಿರುಪತಿಯಲಿಹ ಪರಮ
ಹಂಸ ವೆಂಕಟರಮಣ ನೀನೆ ನಾನೆಂಬ ೩

ಓಂ ಗೋವಿಂದಾಯ ನಮಃ

೬೯

ಪುರಾಣ

ಪರಮ ಲಾಲಿಸು ಪುರಾಣವನು ನೀನು
ದ್ಧರಿಸಿ ಲೋಕಗಳಾಳ್ವ ಧರ್ಮಸಾರವನು ಪ

ಸೃಷ್ಟಿಯ ಕ್ರಮವ ಸೂಚಿಸಲು ಮಾಯೆ
ಯಷ್ಟಪ್ರಕೃತಿಯಾಗಲದು ಸರ್ಗ ಮೊದಲು
ಅಷ್ಟರಾಧಾರದ ಮೇಲೂ ಭೂತ
ಪುಟ್ಟಿಸಿದ ಭೌತಿಕ ಪ್ರತಿಸರ್ಗವೆನಲು ೧

ವಿವರಿಸುತಿರೆ ವಂಶಗಳನು ಮತ್ತು
ವಿವಿಧ ಮನುಗಳಹ ವಿಸ್ತಾರವನ್ನು
ಅವರ ವಂಶಾವಳಿಗಳನು ಪೇಳಿ
ಧ್ರುವವಾದ ಪುರುಷಾರ್ಥ ದಾರಿದೋರ್ಪುದನು ೨

ಇಹ ಪರಗಳ ಸುಖದಿರವ ಮೋಕ್ಷ
ಬಹ ಯುಕ್ತಿ ಸಹ ಪೇಳ್ವ ಬಹು ಗ್ರಂಥದೊಲವ
ಅಹುದೆಂದು ತಿರುಪತಿಯಾಳ್ವ ಬಹು
ಮಹಿಮ ವೆಂಕಟನಾಥ ಮನ್ನಿಸು ದೇವಾ ೩

ಓಂ ಯೋಗಿನಾಂ ಪತಯೇ ನಮಃ

೭೦

ರಾಮಾಯಣ

ಮನುಜಾವತಾರ ಶ್ರೀ ರಾಮನೆಂಬುದು ನಿಜವೆ
ಮುನಿಮನಕೆ ನಿಲುಕದವನು
ಅನುಪಮನು ನಿಜಜನರನುದ್ಧರಿಸಬೇಕೆಂದು
ತನುವಿಡಿದು ತೋರಿಸಿದನು ತಾನು ಪ

ದಶರಥಗೆ ಸುತನೆಂಬುದದು ವರವನಿತ್ತುದಕೆ
ಸಸಿನೆ ಬಿಡೆ ಮುಕ್ತಿ ಪಥಕೆ
ಎಸೆದು ವನದೊಳು ಹೊಳೆದುದದು ಮುನಿಗಳೆಲ್ಲರಿಗೆ
ವಶವಾದನೆಂಬ ನೆವಕೆ
ಶಶಿಮುಖಿಯನಗಲಿದುದು ನಿಜ ಭಕ್ತ ರಾವಣನ
ಅಸುರ ಜನ್ಮದ ಭಂಗಕೆ
ಕುಸುಮಶರ ವಶನಾದ ವಾಲಿ ವಧೆಯವನಘವ
ನಶಿಸಿ ನಿಜವೀವದಕ್ಕೆ ನಿಲುಕೆ ೧

ಸುಗ್ರೀವ ಮೊದಲಾದ ವಾನರರ ನೆರಹಿದುದು
ಸ್ವರ್ಗದವರವರಾಗಲು
ದುರ್ಗತಿಸ್ಥ ಕಬಂಧ ಮೊದಲಾದವರ ಶಾಪ
ನುಗ್ಗುನುಸಿಯಾಗುತಿರಲು
ದುರ್ಗರೂಪದ ಮೋಕ್ಷ ಭಜಕರಿಗೆ ವಶವೆಂದು
ಮಾರ್ಗ ಸೇತುವ ತೋರಲು
ನುಗ್ಗಿ ಲಂಕಾದ್ವೀಪದೊತ್ತಿನಲಿ ನಿಂದು ಅಪ
ವರ್ಗಧಸಿಗೆಯ ಮಾಡಲು ಕೊಡಲು ೨

ಕರುಣರಸವೇ ಬಾಣವೆಣಿಸೆ ಪುಷ್ಪಸಮಾನ
ದುರಿತ ಮಾರ್ಜನ ಪಾವನ
ಧರಣಿಯೊಳಗಿರಲೇಕೆ ಪುರವರಕೆ ಬಾಯೆಂದು
ಕರೆವ ಪರಿಯವರ ಗಾನ
ಧುರದಿ ಸಾಕ್ಷಾತ್ಕಾರಿಪ ಛಲವಿಡಿದ ರಾವಣನು
ನೆರೆ ತನ್ನ ತಿಳಿದ ಜಾಣ
ತಿರುಪತಿಯ ವೆಂಕಟನು ಸಕಲರಿಗೆ ಮುಕ್ತಿಯನು
ಕರುಣದಿಂ ಕರೆದಿತ್ತನು ತಾನು ೩

ಓಂ ವತ್ಸ ವಾಟೀಚರಾಯ ನಮಃ

೭೧

ಭಾರತ

ಆದಿಯಲಿ ಕೌರವರ ಪಾಂಡವ
ಮೇದಿನೀಶರ ಜನನ, ವಿದ್ಯವ
ನೋದಿದುದು ಲಾಕ್ಷಾನಿವಾಸದಲಗ್ನಿ ಸಂಬಂಧ
ವೇದವಿದರೂಪದಲ್ಲಿ ಧರ್ಮಸು
ತಾದಿಗಳು ತಾವಿದ್ದು ದ್ರೌಪದಿ
ಗಾದರೈವರು ಪತಿಗಳೆಂಬುದು ಭಾರತಾಖ್ಯಾನ ೧

ದ್ಯೂತದಲಿ ರಾಜ್ಯವನು ಸ್ತ್ರೀಯನು
ಸೋತು ವನದಲಿ ನಿಂದು ಗುಪ್ತದಿ
ದೂತರಾದರು ಮತ್ಸ್ಯನೃಪತಿಯ ಮೆರೆವ ನಿಳಯದಲಿ
ಮಾತ ಸಲಿಸೆ ಮಹಾತ್ಮ ಕೃಷ್ಣ
ಪ್ರೀತಿಯಲಿ ಪಾಂಡವರ ಕಾರ್ಯ
ಕ್ಕೀತ ಸಂಧಿಗೆ ನಡೆದನೆಂಬುದು ಭಾರತಾಖ್ಯಾನ ೨

ಮುರಿದು ಸಂಧಿಯನುಭಯರಾಯರ
ನೆರಹಿ ಪಾರ್ಥಾಸ್ತ್ರದಲಿ ಸರ್ವರ
ತರಿದು ಯಮಸುತನಿರಿಸಿ ರಾಜ್ಯದ ಪರಮ ಪೀಠದಲಿ
ಎರೆದನಭಿಷೇಕವನು ಭಕ್ತರ
ಹೊರೆದ ತಿರುಪತಿ ವೆಂಕಟೇಶನು
ಮೆರೆದ ಮಹಿಮೆಯನೆಂಬುದಿದು ತಾ ಭಾರತಾಖ್ಯಾನ ೩

ಓಂ ಅನಂತಾಯ ನಮಃ

೭೨

ಭಾಗವತ

ದೇವಕಿಯ ಗರ್ಭದಲಿ ಲೋಕವ
ಕಾವ ಕೃಷ್ಣನು ಬಂದು ನಂದನ

ಠಾವಿನಲಿ ತಾ ಬೆಳೆದು ಗೋವನು
ಕಾವ ನೆವದಲಿ ಗೋಪಗೋಪೀ
ಭಾವವನು ನೆಲೆಗೊಳಿಸಿ ದುಷ್ಟರ
ಜೀವವನು ನೆರೆ ತೆಗೆದ ಹಾಗೆ
ಮಾವ ಕಂಸಗೆ ಮುಕ್ತಿಯಿತ್ತಾ
ಮಾತೃ ಪಿತೃ ಬಂಧನವ ಬಿಡಿಸಿದ
ಭಾಗವತವೂ ಲಾಲಿಸಿದನೂ ದೇವದೇವಾ ೧

ನಡೆಯಲುಪನಯನಾಖ್ಯ ಕರ್ಮವ
ದೊಡನೆ ವಿದ್ಯವನೋದಿ ದುಷ್ಟರ
ಬಡಿದು ಪತ್ನಿಯರೆಂಟುಮಂದಿಯ
ಪಡೆದು ದ್ವಾರಕಿಯಲ್ಲಿ ಯಾದವ
ರೊಡನೆ ಭೋಗಿಸಿ ಭೋಗಭಾಗ್ಯವ
ತಡುಕಿದರಿಗಳ ತರಿದು ಕೌರವ
ಪಡೆಯ ಮರ್ದಿಸಿ ಪಾಂಡವರನಾ
ಪೊಡವಿಪಾಲರ ಮಾಡಿದಂಥಾ
ಭಾಗವತವೂ ಲಾಲಿಸಿದನೂ ದೇವದೇವಾ ೨

ಪರಿಹರಿಸಿ ಭಾರವನು ಭೂಮಿಗೆ
ಪರಮ ಭಕತರ ಸಲಹಿ ಕಥೆಯನು
ಹರಹಿ ಮುಂದಣ ಜನರು ಸಂಸ್ಕೃತಿ
ಶರಧಿಯನ್ನಿದರಿಂದ ದಾಂಟುವ
ತೆರನ ಮಾಡಿಯೆ ಕಾಯ್ದ ಕರುಣಾ
ಶರಧಿ ತಿರುಪತಿ ವೆಂಕಟೇಶನೆ
ನಿರುಪಮಾಮಿತ ಮಹಿಮ ನೀನೇ
ಚರಿಸಿದಂಥಾ ಚಾರುತರವಹ
ಭಾಗವತವೂ ಲಾಲಿಸಿದನೂ ದೇವದೇವಾ ೩

ಓಂ ಧೇನುಕಾಸುರ ಭಂಜನಾಯ ನಮಃ

೭೩

ಪಂಚಾಂಗ

ಪಂಚಾಂಗವನು ಪಾದಪದ್ಮಕೊಪ್ಪಿಸುವೆ
ಪಂಚೇದ್ರಿಯಂಗಳನು ಪಾಲಿಸುವ ವಿಭುವೇ ಪ

ಮೂರು ಗುಣಯುಕ್ತದಲಿ ಮೂಡುವಿಂದ್ರಿಯವೈದು
ಮೂರು ಮಡಿಯೆನೆ ಪಕ್ಷ ಮೊದಲು ಬಹುದು
ತೋರೆ ಸತ್ವಲ ಶುಕ್ಲ ತಾಮಸದಿ ಕೃಷ್ಣವದು
ಈ ರೀತಿಯಿಂ ಪಕ್ಷವೆರಡೆ ತಿಥಿಯಹುದೂ ೧

ಪ್ರಕೃತಿಯಹಂಕಾರಗಳು ಪಂಚ ಮಹಭೂತಗಳು
ವಿಕೃತಿಯಿಂದಿವೆಯೇಳು ವಾರಂಗಳು
ಸುಕೃತ ದುಷ್ಕೃತಗಳಿಗೆ ಸದ್ಮವಹ ತತ್ವಗಳು
ಪ್ರಕೃತಿಗುಣ ಮೂರು ಸಹ ಪೊಳೆವ ತಾರೆಗಳು ೨

ಈ ತತ್ವ ಕರ್ಮಗಳಿಗೆಡೆಯಾಗೆ ಯೋಗಗಳು
ವ್ಹೋತು ತಿರುಗುವ ಕರಣವವು ಮನಗಳು
ಪ್ರೀತಿಯಿಂ ತಿರುಪತಿಯ ಪತಿ ನೀನು ನಿರ್ಮಿಸಲು
ಸೋತಿಹವು ವೆಂಕಟನೆ ಸುಖದಿ ಲಾಲಿಸಲು ೩

ಓಂ ತೃಣೀಕೃತ ತೃಣೇವರ್ತಾಯ ನಮಃ

೭೪

ಅಷ್ಟಕ

ಪಾಹಿ ಪಾಹಿ ಮುಕುಂದ ಕೇಶವ ಪಾಹಿ ಮುರಹರ ಮಾಧವಾ
ಪಾಹಿ ಗೋಕುಲವಾಸ ಪಾವನ ಪಾಹಿ ಕೃಷ್ಣ ಜನಾರ್ದನಾ
ಪಾಹಿ ಭಕ್ತಮನೋಹರಾಕೃತೆ ಪಾಹಿ ಶ್ರೀಧರ ವಾಮನಾ
ಪಾಹಿ ಪಂಕಜನೇತ್ರ ಜಯಜಯ ಪಾಹಿ ವೆಂಕಟನಾಯಕಾ ೧

ಪಾರರಹಿತ ಭವಾಬ್ಧಿ ಮಧ್ಯ ವಿಹಾರವೇಷ ವಿನೋದಿನಂ
ದಾರ ಪುತ್ರ ಧನಾಲಯಾದಿಷು ಸಾರಮತಿಮತಿದುಃಖಿನಂ
ಕ್ರೂರ ಕ್ರೋಧಕಷಾಯ ಕಲುಷಿತ ಕರಣ ಮತ್ಯಭಿಮಾನಿನಂ
ಶ್ರೀ ರಮಣ ವೈಕುಂಠವಲ್ಲಭ ಪಾಹಿ ವೆಂಕಟನಾಯಕಾ ೧

ರಕ್ಷ ರಕ್ಷ ಮಹೇಶ ಸುರಮುನಿಪಕ್ಷ ಮನ್ಮಥಶಿಕ್ಷಕಾ
ರಕ್ಷ ರವಿಚಂದ್ರಾನಲಾಂಬಕ ರಕ್ಷ ರಜತಗಿರೀಶ್ವರಾ
ರಕ್ಷ ರಾಕ್ಷಸಭಯನಿವಾರಕ ರಕ್ಷ ಕಾಮಿತದಾಯಕಾ
ರಕ್ಷ ಗಜವ್ಯಾಘ್ರಾಜಿನಾಂಬರ ರಕ್ಷ ಶಿವ ಗಂಗಾಧರ ೩

ಕಾಮಕರಿಪದ ಮರ್ದಿತಂ ತನು ದಾಮ ಬಂಧನ ಪೀಡಿತಂ
ತಾಮಸಂ ತ್ವತ್ಪಾದ ಸೇವಾ ನಾಮಮಾತ್ರ ವಿವರ್ಜಿತಂ
ಭೀಮ ರವಿಜಭಯಾತುರಂ ಕುರು ಕಾಮಹರ ತವ ಸೇವಕಂ
ವ್ಯೋಮಕೇಶ ವಿರಿಂಚಿ ವಿಬುಧಸ್ತೋಮ ಶಿವಗಂಗಾಧರ ೪

ವಾಸುದೇವ ವರೇಣ್ಯ ಮಧುಹರ ವಾಸುಕೀರಿಪು ಕೇತನ
ವಾಸವಾನುಜ ಪದ್ಮನಾಭ ಸುರೇಶ ಕ್ಲೇಶವಿಭಂಜನ
ಭಾಸಮಾನ ಭವಾಬ್ಧಿತಾರಕ ದಾಸಪದ್ಮದಿವಾಕರ
ದೇಶಕಾಲಾತೀತ ನಿರುಪಮ ಪಾಹಿ ವೆಂಕಟನಾಯಕಾ ೫

ಶರಣಜನ ಸುರಕುಜ ತವಾಮಲ ಚರಣಪಂಕಜ ಪಂಜರೇ
ವಿರಜೆವಿಶತು ಮನಃಸ್ಥಿರಂ ಮಮ ಕುರು ತಥೈವ ಕೃಪಾಕರ
ಪರಮಕಾರಣ ಪರತರಾತ್ಪರ ಪುರುಷ ಪ್ರಕೃತಿಪ್ರವರ್ತಕಾ
ಸರಸಿಜೋದ್ಭವಸ್ತಂಭ ವ್ಯಾಪಕ ಪಾಹಿ ವೆಂಕಟನಾಯಕ ೬

ನೀಲಕಂಠ ನಿಧೀಶಮಿತ್ರ ಸುಶೀಲ ಸಾಂಬ ಸದಾಶಿವ
ಫಾಲಲೋಚನ ಪರಶು ಮೃಗ ಧರ ಲೋಲ ಫಣಿ ವರ ಕುಂಡಲ
ಶೂಲಪಾಣಿ ಸುರಾದ್ರಿಚಾಪ ಜಟಾಲತಾಪರಿಶೋಭಿತ
ಕೀಲಿತಾಮರವೈರಿಪುರ ನಿರ್ಮೂಲ ಶಿವಗಂಗಾಧರ ೭

ದೇಹಿ ದಾಸ್ಯಮನಾಮಯಂ ಹರ ದೇಹಿ ಸಾಧುಸಮಾಗಮಂ
ದೇಹಿ ತವಚರಿತಾಮೃತಂ ಭವ ದೇಹಿ ದೇವ ಸುದರ್ಶನಂ
ದೇಹಿ ಭರ್ಗ ಪದಾಶ್ರಯಂ ವಿಭೊ ದೇಹಿ ನಿತ್ಯ ನಿರೋಗತಾಂ
ದೇಹಿ ಶಿವಗಂಗೇಶ ತಿರುಪತಿಧಾಮ ವೆಂಕಟನಾಯಕ ೮

ಓಂ ಯಮಳಾರ್ಜುನಭಂಜನಾಯ ನಮಃ

೭೫

ವೀಣಾನಾದ

ವೀಣಾನಾದವ ಕೇಳು ವಾರಿಜಾಕ್ಷಾ ಕೃಷ್ಣ
ಪ್ರಾಣೇಶ ಪದ್ಮನಾಭ ಪರಮಪುರುಷಾ
ಕಾಣಿಸಿಕೊಂಬ ಜಗವ ಕಾಬ ಸಾಕ್ಷಿಯೆ
ವಾಣಿಯ ಹಸ್ತದಲೊಪ್ಪುತ ಸಪ್ತ
ಶ್ರೇಣಿಗಳನ್ನನುಸರಿಸುವ ದಿವ್ಯ ಪ

ವೇದರೂಪದಿ ನಿನ್ನ ವಾಕು ತಾನೂ ಮೋ
ನಾದರೂಪದಿ ತೋರಿ ನಾಲ್ಕು ವಿಧದಿ
ಪಾದವೆರಡು ಪರಾ ಪಶ್ಯಂತಿಯೆಂದು
ಭೇದದಿ ಮಧ್ಯಮ ವೈಖರಿಯೆರಡಿಂ
ಪಾದೀ ಸರಿಗಮಪದನಿ ಯದೆನಿಪ ೧

ಶ್ರುತಿಗಳ ಸಂಜ್ಞೆಯಿಂದ ಸಾರಾವಾದಾ ಸ್ವರದ
ತತಿಯಾಗಿ ಸೋಪಾನವ ತಾನು ಸೇರುತ
ಗತಿಯಿಂದಲೇರುತಿಳಿದು ಗುಣಗಳಿಂದಲೆ
ಸತತವು ಷಡ್ಜಗಳೇಳನು ಸೂಚಿಸಿ
ಮತದಲಿ ನಿನ್ನಯ ಮಹಿಮೆಯ ಪೇಳ್ವ ೨

ಲೋಕವೀರೇಳರಲ್ಲಿ ಲೀಲೆಯಿಂದ ನೀನು
ಸೋಕಿ ಸೋಕದ ಹಾಗೆ ಸಂಚರಿಪುದ

ವಾಕೊಂದೆ ಬಹಳ ಶಬ್ದವೆನಿಸಿಕೊಳುತ
ಏಕನು ತಿರುಪತಿಯೊಡೆಯನನೇಕದಿ ಸಾಕುವ
ವೆಂಕಟಸ್ವಾಮಿಯುಯೆನುವಾ ೩

ಓಂ ಉತ್ತಾಳೋತ್ತಾಳ ಭೇತ್ರೆ ನಮಃ

೭೬

ತಾಳ

ತಾಳರವವನು ತೋರ್ಪೆನು ತಾ
ನೇಳು ವಿಧಗಳಾಗಿ ತಿರುಗುವ ಗತಿಯುಳ್ಳ ಪ

ಧ್ರುವವೆಂದು ಮಠ್ಯವೆಂದು ಧ್ವನಿಯು ರೂಪಕವೆಂದು
ತ್ರಿವಡೆ ಜಂಪೆಗಳೆಂದು ತಾವೆರಡು
ಅವು ಐದು ಗಣನೆಯೊಳಟ್ಟತಾಳವಾರದು
ಇವರ ಹಾಗೆಕ್ಕ ತಾಳವದೇಳು ಬಗೆಯೆಂಬ ೧

ಕಾಲ ಮಾರ್ಗವು ಕ್ರಿಯೆ ಕೂಡಿದಂಗಗಳೆಂದು
ಕೇಳಿ ಗ್ರಹವು ಜಾತಿ ಕಳೆಗಳೆಂದು
ಆ ಲಯವೆನ್ನುತಲೆತಿ ಪ್ರಸ್ತಾರಕವೆಂದು
ಈ ಲಲಿತದ ವಸ್ತುಯಿವು ಹತ್ತು ಪರಿಯೆಂಬ ೨

ಒಂದೊಂದು ಬಹುವಾಗಿಯೊಡೆದು ನಾನಾ ಭೇದ
ದಿಂದ ಗಾನಕೆ ಕೂಡುತಿಷ್ಟವಾಗಿ
ನಿಂದು ನಾದಿಸುತಿವೆ ನಿನ್ನಾಜ್ಞೆ ಯಲಿ ದೇವ
ಇಂದಿದ ತಿರುಪತಿಯೊಡೆಯ ಲಾಲಿಸು ಕೃಷ್ಣ ೩

ಓಂ ತಮಾಲಶ್ಯಾಮಲಾಕೃತಯೇ ನಮಃ

೭೭

ಮದ್ದಳೆ

ಮರ್ದಳವನಿದ ಮನ್ನಿಸು ಮಾರಮಣ
ವರ್ಧಿಸುವದಾನಂದವ
ಸಿದ್ಧವಹ ಶಬ್ದಗಳನು ಸೂಚಿಸುತ
ಲಿದ್ದು ಪ್ರೇರಿಪುದರ್ಥವ ಪ

ಉಭಯ ಮುಖದಿಂದಲುದಿಸಿ ತಾನಿಂತು
ಶುಭತರಾಕೃತಿಯೆನ್ನಿಸಿ
ಲಭಿಸುತ್ತ ನರ್ತಕಿಯನು ಲಾಲಿಸುತ
ವಿಭು ನಿನ್ನ ನೋಲೈಪುದು ೧

ಸ್ಥೂಲತರ ಸ್ವನವಾದರೂ ಕಿಂಕಿಣೀ
ಜಾಲಕಿದು ಜೋಡಾಗುತ
ಪಾಲಿಸುತ ಪದಗತಿಯನು ಮನದ ಬಲ
ಕಾಲಯವದಹುದೆನ್ನಲು ೨

ಮೊದಲ ವರ್ಣವು ರುದ್ರನು ಮಧ್ಯದಲಿ
ಹುದುಗಿದಕ್ಷರ ವಿಷ್ಣುವು
ತುದಿಳಕಾರವು ಬ್ರಹನು ಇಷ್ಟಕ್ಕೆ
ಸದನವಾಗ್ಯನುಸರಿಸಲು ೩

ಮೂರು ಮೂರ್ತಿಗಳಂಗವ ವರ್ಣಗಳು
ತೋರೆ ನಡುವೆ ದಕಾರವ
ಸೇರಿದ ರಕಾರ ತಾನು ವ್ಯಂಜನದಿ
ತಾರಕಬ್ರಹ್ಮವಾಗೆ ೪

ಇಂತು ಮರ್ದಳವೆಸೆಯಲು ಇಂದಿರಾ
ವಂತ ನೀ ಕಟ್ಟಿದಂತೆ

ಕಂತುಪಿತ ತಿರುಪತೀಶಾ ಇಲ್ಲಿ ನೀ
ನಿಂತು ಕೇಳ್ವೆಂಕಟೇಶಾ ೫

ಓಂ ಗೋಪಗೋಪೀಶ್ವರಾಯ ನಮಃ

೭೮

ಶೋಭನ : ವೆಂಕಟೇಶ

ಶೋಭನಂ ಶ್ರೀ ಶೋಭನಂ ಶ್ರೀಭೂವಲ್ಲಭ ವೆಂಕಟನಾಯಕ ಪ

ಇಲ್ಲದ ಮಾಯೆಯ ನಿರ್ಮಿಸಲು ಉಳ್ಳವ ನೀನದರೊಳಗಿರಲು
ನಿಲ್ಲದೆ ನಲಿಯುತ ಹಬ್ಬುತ ಹಸರಲು ಯೆಲ್ಲವು ನೀನಾಗಿರುತಿರಲು ೧

ಯುಕ್ತಿಗಸಾಧ್ಯನು ನೀನಾಗಿ ಭಕ್ತರ ಪಾಲಿಸಬೇಕಾಗಿ
ಶಕ್ತಿಗೊಡೆಯ ರಾಮಕೃಷ್ಣ ನೀನಾಗಿ ಭಕ್ತರ ಪಾಲಿಸಬೇಕಾಗಿ ೨

ಕರುಣಾರ್ಣವನ ಕಟಾಕ್ಷದಲಿ ಪರಿಪರಿ ಕಾಮವ ಪಡೆಯುತಲಿ
ತಿರುಪತಿ ವೆಂಕಟರಮಣನ ಮನದಲಿ ಸ್ಮರಿಸುತಲಿರೆ ಸಂಪತ್ತಿನಲಿ ೩

ಓಂ ಯೋಗಿನೇ ನಮಃ

೭೯

ಶೋಭನ : ಶಿವ

ಶಿವಶಿವ ಶಿವಶಿವ ಶೋಭನಂ
ಭವಭಯನಾಶಕ ಗೌರೀನಾಯಕ ಪ

ಶಿರದಲಿ ಗಂಗೆಯ ಧರಿಸಿರಲು
ತರಣಿ ಪಾವಕ ಶಶಿ ನೇತ್ರಗಳು
ಪರಶುಮೃಗಂಗಳ ಧರಿಸಿರೆ ಕರಗಳು
ವರದಾಭಯಗಳಲೊಪ್ಪಿರಲು ೧

ವಾಮವ ಗೌರಿಗೆ ಕೊಟ್ಟಿರಲು
ಸಾಮಜಕೃತ್ತಿಯ ಹೊದ್ದಿರಲು

ಭೀಮನು ಮೂರ್ತಿಯ ಬೇಡಲು ಕೊಡಲು
ಕಾಮನ ನೋಟದಿ ಕೆಡಹಿರಲು ೨

ಧರೆಯೊಳು ದಕ್ಷಿಣ ಕಾಶಿಯಲಿ
ಯಿರೆ ಗಂಗಾಧರ ರೂಪಿನಲಿ
ತಿರುಪತಿ ವೆಂಕಟ ವರ ನಾಮದಲಿ ಮೆರೆವೆ
ಮಹೇಶ್ವರ ಮಹಿಮೆಯಲಿ ೩

ಓಂ ಕೋಟಿಸೂರ್ಯಸಮಪ್ರಭಾಯ ನಮಃ

೮೦

ನಮಸ್ಕಾರ : ಶ್ರೀಕೃಷ್ಣನಿಗೆ

ನಮೋ ನಮೋ ದೇವಕೀತನಯ
ನಮೋ ನಮೋ ವಾಸುದೇವ ಹೃದಯ
ನಮೋ ನಮೋ ನಂದಾಭ್ಯುದಯ
ನಮೋ ನಮೋ ಗೋಪಿಕಾ ಪ್ರಿಯ ಪ

ದೀನಜನಾವನಲೋಲ ದಾನವಶಿಕ್ಷಕ ಕಾಲ
ಭಾನುಶತಾಭಜಾಲ ಶ್ರೀ ನಿಜಭೋಗವಿಶಾಲ ೧

ಮುರಹರ ಮುಚುಕುಂದ ಸೇವ್ಯ ನರಹರೆ ನಿರುಪಮ ದಿವ್ಯ
ಕುರು ಯದು ವಂಶಾರ್ಯವರ್ಯ ಸರಸಿಜೋದ್ಭವ ಭಕ್ತಿ ಭಾವ್ಯ ೨

ಪರಮ ಪುರುಷ ಶ್ರೀ ರಮಣ ಶರಧಿಶಯನ ನಿರಾವರಣ
ದುರಿತತಿಮಿರಹರಚರಣ ತಿರುಪತಿ ವೆಂಕಟರಮಣ ೩

ಓಂ ಇಳಾಪತಯೇ ನಮಃ

೮೧

ಕಕುದ್ಗಿರಿ ಶಿವಸ್ತೋತ್ರ

ಶಿವ ಶಿವ ಕೈಲಾಸವಾಸ ಶಿವ ಶಿವ ಬ್ರಹ್ಮಾಂಡಕೋಶ
ಶಿವ ಶಿವ ದುರಿತವಿನಾಶಾ ಶಿವಶಿವ ಶಿವ ಸ್ವಪ್ರಕಾಶ ಪ

ಮಂಗಳಮಹಿಮ ಶ್ರೀನಾಮ ಮಂಗಳದಾಯಕ ಸೋಮ
ಅಂಗಜನಿಗ್ರಹ ಭೀಮ ತುಂಗವಿಕ್ರಮ ಸಾರ್ವಭೌಮ ೧

ವೃಷಭವಾಹನ ಶುಭ್ರವರ್ಣ ವಿಷಕಂಠ ವಿಷಮವಿಹೀನ
ವಿಷಯವರ್ಜಿತ ಭಕ್ತಾಧೀನ ವಿಷಮನಯನ ವಿಶ್ವತ್ರಾಣ ೨

ಪರಮಪಾವನ ಶಿವಗಂಗಾ ವರನಾಮ ಪರ್ವತಲಿಂಗ
ಸುರನದೀಧರ ಗೌರೀಸಂಗ ತಿರುಪತಿ ನಿಲಯಾಂತರಂಗ ೩

ಓಂ ಪರಂಜ್ಯೋತಿಷೇ ನಮಃ

೮೨

ಕೃಷ್ಣ ಸ್ತೋತ್ರ

ಶ್ರೀ ಕೃಷ್ಣ ಜಯಜಯ ಶ್ರೀಕಾಂತಾ ಮನಃ ಪ್ರಿಯ
ನಾಕಾಧೀಶ್ವರಧ್ಯೇಯ ಲೋಕಾನುಗ್ರಹಕಾಯ ಪ

ಅರವಿಂದದಳನೇತ್ರ ಪರಮ ಪುಣ್ಯಚರಿತ್ರ
ದುರಿತನಿಶಾಹರಮಿತ್ರ ಸುರನುತಿಪಾತ್ರ ೧

ಮಕರ ಕುಂಡಲಕರ್ಣ ಮಕುಟಾದ್ಯಾವೃತಸ್ವರ್ಣ
ವಿಕಸಿತೋತ್ಪಲವರ್ಣ ಸಕಲಾಂಡಪೂರ್ಣ ೨

ಪರಮಮಂಗಳಧಾಮ ಶರಣಜನಾಖಿಲಕಾಮ
ತಿರುಪತಿ ವೆಂಕಟರಮಣ ವರಪುಣ್ಯನಾಮ ೩

ಓಂ ಯಾದವೇಂದ್ರಾಯ ನಮಃ

೮೩

ಕಕುದ್ಗಿರಿ ಶಿವಸ್ತೋತ್ರ

ಶಿವಶಿವ ಜಯಜಯ ಶಿವ ಸರ್ವೋತ್ತಮಕಾಯ
ಶಿವ ದೂರಿಕೃತಮಾಯ ಶಿವಶರಣಾಗತಪ್ರಿಯ ಪ

ಸನಕಾದಿ ಮುನಿಹೃದಯ ವನಜಸ್ಥಾಪಿತಸೂರ್ಯ
ದನುಜ ವಿಮರ್ದನ ವೀರ್ಯ ಸುಗುಣನಿರಾಕೃತ ಕೋಪ ೧

ನಗರಾಜವರ ಚಾಪ ನಿಗಮಾಗೋಚರ ರೂಪ
ಜಗದಂತಃಸ್ಥಿತದೀಪ ಸುಗುಣನಿರಾಕೃತ ಕೋಪ ೨

ಪರಮಪಾವನ ಕಾಮಹರ ಕಕುದ್ಗಿರಿಧಾಮ
ವರ ಗಂಗಾಧರನಾಮ ತಿರುಪತೀಶ್ವರ ಪ್ರೇಮ ೩

ಓಂ ಯದೂದ್ವಹಾಯ ನಮಃ

೮೪

ಮಂಗಳ: ವೆಂಕಟೇಶ್ವರ

ಜಯಮಂಗಳಂ ಶುಭೋದಯ ಮಂಗಳಂ
ಭಯಹರಗೆ ತಿರುಪತಿಯ ವೆಂಕಟೇಶ್ವರಗೆ ಪ

ಸುರಲೋಕವನು ಪಡೆದ ಶಿರದಮಕುಟದ ಪ್ರಭೆಗೆ
ಮೆರೆವ ಕಸ್ತುರಿ ತಿಲಕ ಹೊಳೆವ ಪಣೆಗೆ
ಸ್ಮರಚಾಪವನು ಪೋಲ್ವ ಪುರ್ಬುಗಳ ಚೆಲುವಿಕೆಗೆ
ಕರುಣರಸ ತುಂಬಿ ತುಳುಕುವ ನಯನಗಳಿಗೆ ೧

ಕನಕಕುಂಡಲಗಳಿಗೆ ಘನ ನಾಸಿಕದ ಮಣಿಗೆ
ಮಿನುಗುತಿಹ ಮುಗುಳುನಗೆಯೊಗುವ ಮುಖಕೆ
ಇನಕೋಟಿಪ್ರಭೆಗೆ ಮಿಗಿಲೆನಿಪ ಕೌಸ್ತುಭಮಣಿಗೆ
ವನಮಾಲೆಯನು ಧರಿಸಿ ಶೋಭಿಸುವ ಕಂಠಕೆ ೨

ಭುಜವೆರಡರಲಿ ಶಂಖಚಕ್ರಗಳನುರೆ ಧರಿಸಿ
ಅಜಸುರಾದ್ಯರು ಬಿಡದೆ ಭಜಿಪ ಪದವ
ಭಜಿಪರಿಗೆ ಭವಶರಧಿ ಕಟಿಪ್ರಮಾಣವಿದೆಂದು
ಅಜಪಿತನು ತೋರುತಿಹ ಕರಚತುಷ್ಟಯಕೆ ೩

ಹದಿನಾಲ್ಕು ಲೋಕಕಾಶ್ರಯವಾಗಿ ತೋರುತಿಹ
ಪದುಮಭವನನು ಪಡೆದ ನಾಭಿಸಹಿತ
ಉದರಮಂಡಲಕೆ ಮತ್ತದರಡಿಯ ಶೋಭಿಸುವ
ಹದಿನಾರು ಬಣ್ಣದಪರಂಜಿ ಕಟಿಸೂತ್ರಕೆ ೪

ಕಿರಿಘಂಟೆಸರದೊಡನೆ ಹೊಳೆವ ಪೀತಾಂಬರಕೆ
ಗರುಡನಂಸದಿ ಮೆರೆವ ಊರುಗಳಿಗೆ
ಸುರನದಿಯ ನೆರೆ ಪಡೆದ ಚರಣದುಂಗುಟಗಳಿಗೆ
ತಿರುಪತಿಯ ವೆಂಕಟನ ದಿವ್ಯ ಮೂರುತಿಗೆ ೫

ಓಂ ವನಮಾಲಿನೇ ನಮಃ

೮೫

ಮಂಗಳ : ಕಕುದ್ಗಿರಿ ಗಂಗಾಧರ

ಜಯಮಂಗಳಂ ಶುಭೋದಯ ಮಂಗಳಂ
ಜಯ ಕಕುದ್ಗಿರಿ ಗಂಗಾಧರ ಲಿಂಗಗೆ ಪ

ಜಡೆಯುಡುಪತಿಯು ಗಂಗೆಯೊಡಗೂಡ್ದ ಮಸ್ತಕಕೆ
ಮಡುಹಿ ಮಾರನ ಭಸಿತದಾಳ್ದ ಪಣೆಗೆ
ಪೆಡೆಯೆತ್ತಿ ಗಾನಗೈವಹಿ ಕುಂಡಲಂಗಳಿಗೆ
ದೃಢಭಕತರಿಷ್ಟದಾಯಕ ಶಿವನಿಗೆ ೧

ಸೋಮಸೂರ್ಯಾಗ್ನಿ ಲೋಚನೆಗೆ ವಿಷದಾಳಿ ಸುರ
ಸ್ತೋಮವನು ಕಾಯ್ದ ಶೋಭನ ಕಂಠಕೆ
ಭೀಮನಿಗೆ ಭಯಹರಗೆ ಪರಶುಮೃಗ ಹಸ್ತನಿಗೆ
ಕಾಮಿತಾರ್ಥದ ವರಾಭಯ ಕರನಿಗೆ ೨

ನಾಗಕಂಕಣಧರಗೆ ನಾಗೋತ್ತರೀಯನಿಗೆ
ನಾಗಯಜ್ಞೋಪವೀತವ ತಾಳ್ದಗೆ
ನಾಗಚರ್ಮಾಂಬರಗೆ ನಗರಾಜ ಚಾಪನಿಗೆ
ನಾಗಾರಿ ಗಮನ ಬಾಣಗೆ ಶಿವನಿಗೆ ೩

ಗಿರಿಜೆಗರ್ಧಾಂಗವನ್ನಿತ್ತ ಶುಭವಿಗ್ರಹಗೆ
ವರ ವೃಷಭವನ್ನೇರಿ ಸಂಚರಿಪಗೆ
ಬರೆದುಂಗುಟದಿ ಪೊಳೆದ ಚಕ್ರದಿಂ ದೈತ್ಯಕುಲ
ಹರಣ ವರದಾಯಕಗೆ ಸರ್ವೇಶಗೆ ೪

ತಿರುಪತಿಯ ವಾಸವನು ದೃಢಗೈದು ಕಕುದ್ಗಿರಿಯ
ಪರಮ ಕ್ಷೇತ್ರದಿ ಮಹಿಮೆಗಳ ತೋರ್ಪಗೆ
ವರದ ವೆಂಕಟಪತಿಗೆ ಗಂಗಾಧರೇಶ್ವರಗೆ
ಶರಣಾಗತರ ಕಾಯ್ವ ಸಾಂಬಶಿವಗೆ ೫

ಓಂ ಪೀತವಾಸಸೇ ನಮಃ

೮೬

ಉಯ್ಯಾಲೆ : ಶ್ರೀಹರಿ

ಉಯ್ಯಲೆಯ ತೂಗುತಿಹರು ಶ್ರೀಹರಿಯ
ಪ್ರೀಯ್ಯ ಮನ್ನಣೆಯ ಭಟರು
ಜೀಯ್ಯ ಪರಾಕುಯೆಂದು ಭಕ್ತಿಯಲಿ
ಶ್ರೀಯರಸಗೆರಗಿ ನಿಂದು ಪ

ಮೂರಾರು ಮತ್ತೈವರು ಕರಣಗಳ
ಪ್ರೇರಿಸುತ ದೇವರವರು
ಸಾರಿ ಸರಪಣಿಯ ಪಿಡಿದು ಮುರಹರನ
ಮೀರದಾಡಿಸಿದರೊಲಿದು ೧

ಎಂಟು ಕಂಭದ ಮಂಟಪ ಪ್ರಕೃತಿ ತಾ
ನೆಂಟು ಬಗೆಯಾಗೆ ರೂಪ
ಎಂಟು ಮದ ಸರಪಣಿಗಳು ಮನದ ಮಣೆ
ಗಂಟಿಕೊಂಡಿಹವಲುಗಲು ೨

ಮೃದುತರದ ಸತ್ವಗುಣದ ಹಾಸಿಕೆಯ
ಹದುಳದಿಂದೊಪ್ಪವಡೆದ
ಚದರರದನುಭವದೊರಗನು ಹರಿಯಪ್ಪಿ
ಮುದದಿಂದಲೊಪ್ಪುತಿರಲು ೩

ಹದಿನೈದು ಮಂದಿ ಭಟರು ಅನವರತ
ಒದಗಿ ಸೇವಿಸುತಿಪ್ಪರು
ಅದ ನೋಡಿ ಕೃಷ್ಣ ನಗುತ ಚರಣದಿಂ
ದೊದೆಯಲುಯ್ಯಲೆಯಾಡಿತು ೪

ಈ ಪರಿಯಲಾಡುತಿರುವ ಉಯ್ಯಲೆಯ
ಶ್ರೀಪತಿಯೆ ಕುಳಿತು ನಲಿವ
ಪಾಪವರ್ಜಿತವೆನಿಸುವಾ ತಿರುಪತಿಯ
ವ್ಯಾಪಿ ವೆಂಕಟ ಸಲಹುವ ೫

ಓಂ ಪಾರಿಜಾತಾಪಹಾರಕಾಯ ನಮಃ

೮೭

ಉಯ್ಯಾಲೆ : ಶಿವಗಂಗೆ ಗಂಗಾಧರ

ದೇವ ಫಣಿಭೂಷಣನೆ ಬಾ ಸಕಲ ಜನ
ಜೀವಚೈತನ್ಯ ಬಾರೈ
ದೇವತೆಗಳುಯ್ಯಲೆಯನು ಭಯಭಕ್ತಿ
ಭಾವದಿಂ ತೂಗತಿಹರು ಪ

ಅವನಿಯೊಳಗಯನವೆರಡು ಸರಪಣಿಗೆ
ಭುವನವೇಳರ ಪೀಠವು
ಶಿವನೆ ತೊಡಿಸಿರಲು ಮೇಲೆ ಕುಣಿಕೆ ತಾ
ಧ್ರುವನ ಕೈಲಿಹುದುಯ್ಯಲೆ ೧

ಧರಣಿಯಿದು ಮೇಲುಮಣೆಯು ಗಗನದಿ
ಸುರಲೋಕವಾರು ನೆಲೆಯು
ಸ್ಫುರಿಸುತಿಹ ಶಶಿಸೂರ‍್ಯರು ದೀಪವಾ
ಗಿರಲೊಪ್ಪುತಿಹದುಯ್ಯಲೆ ೨

ಇಂದ್ರಾದಿ ದಿಕ್ಪಾಲಕರು ಮಿಕ್ಕಾದ
ಗಂಧರ್ವ ಸುರ ಸಿದ್ಧರು
ವಂದಿಸುತ ಸ್ತುತಿಗೈಯುತ ಸಂದಣಿಸಿ
ಮುಂದೆ ನಿಂದಿಹರು ಮುದದಿ ೩

ಕುಸುಮಮಾಲೆಗಳಾಗಿವೆ ನಕ್ಷತ್ರ
ವೆಸೆದು ಗಗನದಲೊಪ್ಪುತ
ಅಸಮತೇಜೋರಾಶಿಯೆ ಮದನಹರ
ನಸುನಗುತ ಬಂದು ನೆಲೆಸು ೪

ಮಂಗಳ ಮಹಾಮಹಿಮನೆ ಶಿವಗಂಗೆ
ಗಂಗಾಧರೇಶ ನೀನೆ
ಲಿಂಗವೆಂದೆನಿಸುತಿಲ್ಲಿ ತಿರುಪತಿಯ
ರಂಗ ವೆಂಕಟನೆನಿಸುವೆ ೫

ಓಂ ಗೋವರ್ಧನಾಚಲೋದ್ಧರ್ತ್ರೇ ನಮಃ

೮೮

ನೃತ್ಯ (೧)

ನೃತ್ಯವನವಧರಿಸು ನಿರುಪಮ ನೃತ್ಯವನವಧರಿಸು ಪ

ನೃತ್ಯಕೆ ಮಾಯೆಯೆ ನರ್ತಕಿಯಾಗಲು
ನರ್ತನಕರ್ತೃವು ನೀನೆಯಾಗಲು ಅ.ಪ

ಪ್ರಥಮದಿ ಸ್ವರವುಂ ಹೊರಡಲು ತಾಳವು
ಮಿಥುನದಿ ನಾಂದಿಯ ಮಾಡಲು ವಿಧಿಯಿಂ ೧

ಮರ್ದಳನಾದವು ಮೂಡಲು ಹಾಗೆ
ಮರ್ದಿಸಿ ಭೂಮಿಯ ಮಾನಿನಿ ನಿಲಲು ೨

ರಂಗವು ರಂಜಿಸಿ ರಾಗಗಳಿಂದಲು
ಮಂಗಳನಾಟ್ಯವು ಮುಂಗುಡಿಸಾಗಲು ೩

ರಾಗದ ಭೇದಗಳ್ ರೂಢಿಗಳಾಗುತ
ಸಾಗಲು ಲಯಗತಿಸಹಿತದಿ ಬೆಳೆದು ೪

ಆಡುವ ನೃತ್ಯವರ್ನರ್ಪಿಪೆ ತಿರುಪತಿ
ನಾಡಿನ ವೆಂಕಟನಾಥನೆ ಲಾಲಿಸು ೫

ಓಂ ಗೋಪಾಲಾಯ ನಮಃ

೮೯

ನೃತ್ಯ (೨)

ನೃತ್ಯವನವಧರಿಸು ಮಾಯೆಯ ನೃತ್ಯವನವಧರಿಸು ಪ

ನೃತ್ಯವು ಲೋಕದ ನಟನೆಗಳೆಲ್ಲಾ
ಕೃತ್ಯವು ಶ್ರೀಹರಿ ಕಟ್ಟಳೆಯಾಗಲು ಅ.ಪ

ಸ್ವರವೆನೆ ಪ್ರಣವದ ಸೌಮ್ಯದ ನಾದವು
ಯೆರಡೊಂದೆಂದರೆ ಈಶನು ಪ್ರಕೃತಿಯು ೧

ಮರ್ದಳವೆಂದರೆ ಮೊದಲ ಮಹತ್ತದು
ಮರ್ದಿಪ ಮಾನಿನಿ ಮಾಯೆಯೆಂದೆನಿಪಳು ೨

ರಂಗವು ನಿನ್ನಯ ರತಿಕರ ನೋಟವು
ಸಂಗಿಸೆ ನಮ್ಮಯ ಶಿರದಲಿ ಕುಣಿವಳು ೩

ಭಂಗಿಸಿ ಭಂಗಿಸಿ ಭವದಲಿ ಮೆಟ್ಟುತ
ಹಿಂಗದ ರೀತಿಗೆ ಹೀಗಾಡುವಳು ೪

ಮುಂಗುಡಿಯೆಂದರೆ ಮೊದಲಹಂಕಾರವು
ತೊಂಗುತ ಭೂತಂಗಳ ಸಾಗಿಪುದು ೫

ಮೊದಲಿನ ಕೊನೆಗಳು ಮಾತ್ರೆಗಳೈದವು
ಪೊದಗಿದ ಭೂತಗಳೊಡಲಾಗುವವು ೬

ನಡದೀ ಕೊನೆಗಳು ನೂಕುತ ಬೆಳೆಯಲು
ನೆಡುವವು ವೃಕ್ಷದ ನಿಡುಬೇರುಗಳು ೭

ಒಡೆದಾ ಭೂತಗಳೊಂದೊಂದ್ಯೆದವು
ಬಿಡದವ ಬೆರಸುತ ಬಹುವಾಗುವವು ೮

ಇಂತೀ ಲೋಕಗಳೀರೇಳೆಂತಲು
ನಿಂತೇ ಕುಣಿವಳು ನಿನ್ನಯ ಮಾಯೆಯು ೯

ಆಗಲು ಪ್ರಾಣಿಗಳಮಿತಗಳಿವರೊಳು
ಭೋಗದ ಬಯಕೆಯೆ ಬಹು ರಾಗಗಳು ೧೦

ಲಯೆಗಳು ಕ್ರಿಯೆಗಳು ಲೋಕಗಳತಿಗಳು
ನಿಯಿಮಿಸಿ ತಿರುಪತಿ ನಾಯಕ ನಿಂತವು ೧೧

ಓಂ ಸರ್ವಪಾಲಕಾಯ ನಮಃ

ಕಂ॥ ಆದಿತ್ಯವಾರ ನೃತ್ಯವ
ನಾದರದಿಂ ಕೃಷ್ಣರಾಯ ನೀನವಧರಿಸ್ಯೆ
ಬೋಧೆಯ ಬೋಧಿಸಿ ಗುರು ನೀ
ನಾದ್ಯೆ ತಿರುಪತಿಯ ಸದನ ವೆಂಕಟರಮಣಾ

೯೦

ಪ್ರಾರ್ಥನೆಗಳು - ಕೃಷ್ಣ

ದೇವ ತ್ರಾಹಿ ಗೋಪಾಲಕೃಷ್ಣ ದೇವ ತ್ರಾಹಿ ಪ

ದೇವ ತ್ರಾಹಿ ದಯಯಾ ವನಚತುರ ನಿರಾವರಣಾಖಿಲ
ಭಾವಭರಿತ ನಿಜಪಾವನ ಭಕ್ತಜನಾವಳಿಸಂವೃತ ಭಾವಜಜನಕ ಅ.ಪ

ನಿರ್ಗುಣ ನಿರುಪಮ ದುರ್ಗಮಗುಣಗಣ
ಸರ್ಗಸ್ಥಿತಿಲಯವರ್ಗಪ್ರವಾಹಾ
ನರ್ಗಳಾವಾಸನಾ ನಿರ್ಗಮಹೇತ್ವಪವರ್ಗದ ಕೃಷ್ಣಾ ೧

ಇಂದಿರಾ ಮುನಿ ಮನೋಮಂದಿರ ವಿನತಾ
ನಂದನವಾಹನ ಕುಂದರದನ ಕುರು
ನಂದನ ಸೇನಾ ವೃಂದನಿಷೂದನ ನಂದನ ಕೃಷ್ಣಾ ೨

ಅರ್ಜುನಪಾಲಕ ದುರ್ಜನಶಿಕ್ಷಕ ಸಜ್ಜನರಕ್ಷಕ
ಭರ್ಜಿತಕರ್ಮ ಸುದುರ್ಜಯ ಮೋಕ್ಷದ
ನಿರ್ಜರ ತಿರುಪತಿ ನಿರ್ಜಿತ ವೆಂಕಟಕೃಷ್ಣ ೩

ಓಂ ಅಜಾಯ ನಮಃ

೯೧

ಚಂದ್ರಶೇಖರ

ಸೇವಾಂ ದೇಹಿ ಚಂದ್ರಶೇಖರ ಸೇವಾಂ ದೇಹಿ
ಸೇವಾಂ ದೇಹಿ ಸದಾವನತಾಖಿಲ ಜೀವ ದುರಿತಹರ ಪ

ಪಾವನಚರಿತ ಸುರಾವಳಿ ಮುನಿಗುಣ
ಭಾವಿತಚರಣ ಸುಪಾವಕ ನಯನಾ ಅ.ಪ

ಅಂಬರರೂಪ ದಿಗಂಬರ ಭುವನಕು ಟುಂಬ ಸದಾಶಿವ
ತುಂಬುರು ಗಾನವಿಡಂಬನ ಸುರಸರಿ
ದಂಬುಕ ಭಕ್ತ ಹೃದಂಬುಜ ಭಾನೋ ೧

ಪುರಹರ ಮುರಹರಧರ ಕರುಣಾಕರ ನರ ವರದಾಯಕ
ನಿರುಪಮ ಹಿಮವದ್ ಗಿರಿವರಚಾಪ ಕು
ಧರಜ್ಯಾಕರುಷಣ ಪರಮಕೃಪಾಳೋ ೨

ಶಿವ ಶಿವ ಶಂಕರ ಭುವಿಭೂಧರವರ ಶಿವಗಂಗಾಧಿಪ
ಭವ ಗಂಗಾಧರ ಅವ ಮಾಂ ಲಕ್ಷ್ಮೀ
ಧವ ವೆಂಕಟ ಸಖದಿವಿಭವ ವಂದ್ಯಾ ೩

ಓಂ ನಿರಂಜನಾಯ ನಮಃ

೯೨

ಶ್ರೀಕೃಷ್ಣ

ಪಾಹಿ ಮಾಂ ದೇವ ಶ್ರೀಕೃಷ್ಣ ಪಾಹಿ ಮಾಂ ಭಕ್ತವತ್ಸಲ ಪ

ದೇಹಿ ಮೇ ಭಕ್ತಿಮಚಲಂ
ತ್ರಾಹಿ ಮಾಂ ತ್ವಂ ಕೃಪಾದೃಷ್ಟ್ಯಾ ಪಾಹಿ ಮಾಂ ಅ.ಪ

ಬಂಧಿತಂ ಕರ್ಮಭಿರ್ಬಹುನಿಂದಿತಂ ವೃತ್ತಿತೋ ನಿತ್ಯಾಕ್ರಂದಿತಂ
ಕ್ಲೇಶಬಾಹುಳ್ಯೈಃಸಂಧಿತಂ ಮಾಂ ಕೃಪಾದೃಷ್ಟ್ಯಾ ೧

ಸಂಚಿತಾಗಾಮಿಪ್ರಾರಬ್ಧ ವಂಚಿತಂ ವಿಷಯ ಭೋಗ ಸಿಂಚಿತಂ
ನಿತ್ಯಸದ್ಗುಣ ಮುಂಚಿತಂ ಮಾಂ ಕೃಪಾದೃಷ್ಟ್ಯಾ ೨

ನಿತ್ಯ ಶುದ್ಧ ಬುದ್ಧ ಮುಕ್ತ ಪ್ರತ್ಯಗಾತ್ಮನ್ ತಿರುಪತಿ ಸತ್ಯ ಶ್ರೀ
ವೆಂಕಟ ತವ ಭೃತ್ಯಭೃತ್ಯಂ ಕೃಪಾದೃಷ್ಟ್ಯಾ ೩

ಓಂ ಕಾಮಜನಕಾಯ ನಮಃ

ಕಂ॥ ಶಶಿವಾರದ ಕುಸುಮಾರ್ಚನೆ
ಶಶಿಧರ ಧರ ಮಿತ್ರ ನಿನ್ನ ಚರಣಕ್ಕೊಪ್ಪಲ್

ಹಸನಾಗಿ ನರ್ತಿಸುವದನು
ಕುಶಲದಿ ನೀ ನೋಡಿ ಸಲುಹು ವೆಂಕಟರಮಣಾ

೯೩

ಶಂಕರ

ಪಾಹಿ ಮಾಂ ದೇವ ಶಂಕರ ಪಾಹಿ ಮಾಂ ಚಂದ್ರಶೇಖರ ಪ

ಪಾಹಿ ಮಾಂ ಪಾರ್ವತೀವರ ಪಾಹಿ ಮಾಂ ಪಾದಕಿಂಕರಂ ಅ.ಪ

ಮಂಗಳಮಹಿಮ ಜಗನ್ಮಂಗಳಾಂಗ ಮಹಾಕಾಶ
ಲಿಂಗ ಯೋಗಿಜನ ವೃಂದ ಸಂಗ ಮಾಂ ಪಾದಕಿಂಕರಂ ೧

ಪಂಕಜಜಾರ್ಚಿತ ಪಾದಪಂಕಜ ಭಕ್ತಹೃದಯ
ಪಂಕಜಾಲಯ ಗೌರೀವಾಮಾಂಕ ಮಾಂ ಪಾದಕಿಂಕರಂ ೨

ಭದ್ರರೂಪ ಶಿವನಾಮಕಾದ್ರಿ ಗಂಗಾಧರ ವೆಂಕ
ಟಾದ್ರಿ ವಾಸ ಪ್ರಿಯ ಚಿತ್ಸಮುದ್ರ ಮಾಂ ಪಾದಕಿಂಕರಂ ೩

ಓಂ ಕಂಜಲೋಚನಾಯ ನಮಃ

ಕಂ॥ ಮಂಗಳವಾರದ ಪೂಜೆಯ
ಮಂಗಳೆಯೊಲವಿಂದ ಮಾಡ್ದೆ ಭುವನೇಶ್ವರಿಯಿಂ
ಮಂಗಳ ಪಾರಂಪರೆ ನ
ಮ್ಮಗಳದೊಳೆರ್ಚುಗಿನ್ನು ವೆಂಕಟರಮಣಾ

೯೪

ಚಿಂತಯಾಮಿ ತ್ವಾಮದ್ಯಾಹಂ ಚಿಂತಯಾಮ್ಯಹಂ
ಚಿಂತಿತಾರ್ಥದಂ ಭಜತಾಂ ಚಿಂತಾಮಣಿಂ ಚಿಂತಾಪಹಂ ಪ

ಭಾನುನಿಭ ನಖರಾಜಂ ಜ್ಞಾನಾಶ್ರಯಪಾದಾಂಭೋಜಂ
ದೀನಜನ ಭಯೋದ್ವೇಜಂ ಜಾನೂರು ಸುರುಚಿ ಭಾಜಂ ೧

ಹೇಮಾಂಬರ ವಿರಾಜಿತಂ ಹೇಮಸೂತ್ರ ಸುಶೋಭಿತಂ
ವ್ಯೋಮಾಲಯ ಪಾದಯುಕ್ತಂ ಕೋಮಲ ಶ್ಯಾಮಾಂಗ ದ್ಯುತಿಂ ೨

ಇಂದಿರಾಶ್ರಿತ ವಕ್ಷಸಂ ಗಂಧಹಾರಮಣಿಭಾಸಂ
ಮಂದರಮಾಲಾವತಂಸಂ ಕಂದರ್ಪಕೋಟಿ ವರ್ಚಸಂ ೩

ಚಕ್ರಾದ್ಯಾಯುಧ ಭ್ರಾಜಿತಂ ನಕ್ರಕುಂಡಲ ಶೋಭಿತಂ
ಶಕ್ರಾನನಂ ಸುವಿಸ್ಮಿತಂ ವಕ್ರಾಳಕ ತತಿ ತತಂ ೪

ಕಸ್ತೂರೀ ತಿಲಕ ಫಾಲಂ ವಿಸ್ತೃತಮೌಳಿ ಭಾಜಾಲಂ
ಪ್ರಸ್ತುತ ವೆಂಕಟಶೈಲಂ ಸುಸ್ಥಿತ ಕೀರ್ತಿವಿಶಾಲಂ ೫

ಓಂ ಮಧುಘ್ನೇ ನಮಃ

೯೫

ಶಂಭು

ಶಂಭೋ ಪಾಲಯ ಮಾಂವಿಭೋ ಶಂಭೋ ಪಾಲಯ
ದಂಭೋಳಿಧರಾದಿ ಮೌಳಿಜೃಂಭಿತಾಂಘ್ರಿ ಸರೋರುಹ ಪ

ಇಂದಿರಾವಲ್ಲಭ ಮಿತ್ರ ಕಂದರ್ಪಕೋಟಿಭಾಗಾತ್ರ
ನಿಂದಿತಾಘ ಸುಪವಿತ್ರ ಬೃಂದಿತ ಭುವನಸೂತ್ರ ೧

ಗಂಗೇಂದುಮೌಳೇ ತ್ರಿಣೇತ್ರ ಭೃಂಗೀಶ ನಾಟ್ಯ ವಿಚಿತ್ರ
ತುಂಗ ರಜತಗಿರಿತ್ರ ಮಂಗಳಾನಂತಚರಿತ್ರ ೨

ವೈಕುಂಠನಿಲಯ ಬಾಣ ಕಾಕೋಲ ಕಂಠಾಭರಣ
ಕಾಕೋದರಯುತ ಕರ್ಣ ಆಕಲಿತ ಗಜಾಜಿನ ೩

ಮಾಲಿತ ಕರೋಟಿಧರ ಪಾಲಿತ ಲೋಕಸಾಕಾರ
ಆಲಿಂಗಿತಾಂಗನಾಕಾರ ಶೂಲಾದ್ಯುದಾಯುಧಕರ ೬

ರಜತೇತರಾದ್ರೀಷ್ವಾಸ ಭಜಿತ ವೆಂಕಟಾದ್ರೀಶ
ಸುಜನ ಹೃತ್ಪದ್ಮಾಧೀಶ ಅಜಿತ ಕಕುದ್ಗಿರಿವಾಸ ೫

ಓಂ ಮಧುರಾನಾಥಾಯ ನಮಃ

೯೬

ಹೊನ್ನಾಂಬಾ ಪ್ರಾರ್ಥನೆ

ಹೊಂದಿದೆ ನಿನ್ನ ಹೊನ್ನಾಂಬಾ ನಿತ್ಯ
ಹಿಂದಿಡು ನನ್ನ ಹೊನ್ನಾಂಬಾ ಪ

ಹೊಂದೇರಿನಾ ಹೊನ್ನಾಂಬಾ ತಾಯಿ
ಹೊಂದಳಿರಡಿಯ ಹೊನ್ನಾಂಬಾ ಅ.ಪ

ಹೆತ್ತೆಯೆಲ್ಲವ ಹೊನ್ನಾಂಬಾ ಮತ್ತೆ
ಹೊತ್ತಂತಿಹೆ ಹೊನ್ನಾಂಬಾ
ಹತ್ತಿದ ಹೇತು ಹೊನ್ನಾಂಬಾ ಸಲ
ಹುತ್ತುತಿಹೆ ಸಿರಿ ಹೊನ್ನಾಂಬಾ ೧

ಹೊರೆಯಲು ಜಗವ ಹೊನ್ನಾಂಬಾ ಕೀರ್ತಿ
ಹರೆದುದು ಹರಿದು ಹೊನ್ನಾಂಬಾ
ಹಿರಿಯಳು ನೀನು ಹೊನ್ನಾಂಬಾ ಕೊಡು
ಹರುಷವ ನೋಡು ಹೊನ್ನಾಂಬಾ ೨

ಹಳಿದೆ ಹಲವ ಹೊನ್ನಾಂಬಾ ಸುತ್ತ
ಹೊಳೆಯುತಲಿಹೆ ಹೊನ್ನಾಂಬಾ
ಹೊಳಚು ದುಃಖವ ಹೊನ್ನಾಂಬಾ ಸುಖ
ಧೊಳೆಯೆ ಬಾ ಹೊನ್ನಾಂಬಾ ೩

ಹೊಣೆ ನೀನೆನಗೆ ಹೊನ್ನಾಂಬ ಹೀಗೆ
ಹಣೆಯಲಿ ಬರೆದೆ ಹೊನ್ನಾಂಬಾ
ಹಣಹೊನ್ನ ಕೊಡು ಹೊನ್ನಾಂಬಾ ನನ್ನ
ಪ್ರಣತನಪಾಹಿ ಹೊನ್ನಾಂಬಾ ೪

ಹೊಸತೆ ನಿನಗೆ ಹೊನ್ನಾಂಬಾ ನಿನ್ನಾ
ಹೆಸರಿನ ಸುತನು ಹೊನ್ನಾಂಬಾ
ಹುಸಿಯದೆ ಸಲಹು ಹೊನ್ನಾಂಬಾ ನಾನು
ಹಸನಾಗುವೆ ಹೊನ್ನಾಂಬಾ ೫

ಹೊದಿಸು ದಯವ ಹೊನ್ನಾಂಬಾ ಮುಂದೆ
ಹೆದರೆನು ನಾನು ಹೊನ್ನಾಂಬಾ
ಹುದಿಗಿದೆನಡಿಯ ಹೊನ್ನಾಂಬಾ ಬಾಳ
ಹದನಿದು ಬಳಿಕ ಹೊನ್ನಾಂಬಾ ೬

ತಿರುಪತಿಯಾಳ್ವನ ಸಖನಾ ಕಕು
ದ್ಗಿರಿವರ ಗಂಗಾಧರನಾ
ಅರಸಿ ರಕ್ಷಿಸು ಸುಪ್ರಸನ್ನಾ ಬಿಡ
ದಿರು ಹೊನ್ನಾಂಬಿಕೆ ನನ್ನಾ ೭

ಓಂ ದ್ವಾರಕಾನಾಯಕಾಯ ನಮಃ

ಕಂ॥ ಬುಧವಾರದರ್ಚನೆಯ ನಾಂ
ವಿಧಿಯಿಂದರ್ಚಿಸಿದೆ ನಿನ್ನ ಪದ ಪದುಮಗಳಿಗೆ
ವಿಧಿಜನಕ ನೀನೆ ತಿರುಪತಿ
ಸದನನೆ ಸಲಹೆಮ್ಮ ಬಿಡದೆ ವೆಂಕಟರಮಣಾ

೯೭

ಶ್ರೀಕೃಷ್ಣ

ಶ್ರೀ ಕೃಷ್ಣದೇವ ಸದಾನಂದ ಶ್ರೀ ಕೃಷ್ಣದೇವ ಪ

ಶ್ರೀ ಕೃಷ್ಣ ಕರುಣಾನಿಧೇ ಭಕ್ತವತ್ಸಲ
ಶ್ರೀ ಕೃಷ್ಣ ಪರಮ ಪುರುಷ ಸಚ್ಚಿದಾನಂದ ಅ.ಪ

ವಸುದೇವ ನಂದನ ಕಂಸನಿಷೂದನ
ಕುಸುಮೇಷು ಕೋಟಿ ಸಮಾನ ಪದಾಂಭೋಜ ೧

ಲೀಲಾಮಾನುಷ ಮೂರ್ತೇ ಶ್ರೀವತ್ಸ ವಕ್ಷಸ್ಕ
ಪಾಲಿತ ಮುನಿಜನ ವೃಂದ ನಿರಂಜನ ೨

ಪೂತನಾ ಶಕಟ ತೃಣಾವರ್ತ ಭಂಜನ
ಪಾತಕಹರ ಪುಣ್ಯಕೀರ್ತೇ ಜನಾರ್ದನ ೩

ಅಕ್ರೂರ ವರದ ತ್ರಿವಿಕ್ರಮ ದರ ಪದ್ಮ
ಚಕ್ರ ಗದಾಧರ ರವಿಕೋಟಿ ಸಂಕಾಶ ೪

ಕಾಳೀಯ ಫಣಾ ಮಣಿ ರಂಜಿತ ಪದಯುಗ್ಮ
ನೀಲಮೇಘಶ್ಯಾಮ ನೀರಜಲೋಚನ ೫

ಕೌಸ್ತುಭಮಣಿ ಭೂಷ ಕನಕಕುಂಡಲ ಕರ್ಣ
ಸಂಸ್ತುತ ಮಹಿಮ ಶ್ರೀ ಧರಣೀ ಸೇವಿತ ಪಾರ್ಶ್ವ ೬

ನಂದ ಕಿಶೋರ ಯಶೋದಾ ಮನೋಹರ
ಸುಂದರ ತಿರುಪತಿ ಧರಣೀಧರಾವಾಸ ೭

ಓಂ ಬಲಿನೇ ನಮಃ

೯೮

ಸ್ತೋತ್ರಗಳು – ನೀಲಕಂಠ

ಶ್ರೀ ನೀಲಕಂಠ ಮಹಾದೇವ ಶ್ರೀನೀಲಕಂಠ ಪ

ಶ್ರೀ ನೀಲಕಂಠ ಪಾವನಶೀಲ ಪರಮೇಶ
ಫಾಲಾಕ್ಷ ಫಣಿಭೂಷ ಪರಮ ಮಂಗಳಮೂರ್ತೇ ಅ.ಪ

ಸರ್ವಜ್ಞ ಸರ್ವೇಶ ಶರ್ವ ಸದಾನಂದ
ಸರ್ವವಂದಿತಪಾದ ಸದಸತ್ಪರಾಧಾರ ೧

ವೃಷಭೇಂದ್ರ ವಾಹನ ವಿಷಮ ವರ್ಜಿತ ದೇವ
ಝಷಕೇತನಾರ್ದನ ಜಯ ಭಕ್ತವತ್ಸಲ ೨

ವಿಶ್ವೇಶ ವಿಶ್ವಾಧಾರಕ ವಿಶ್ವಕಾರಣ
ವಿಶ್ವ ವಿಶ್ವಾತ್ಮಕ ವಿಜಿತಪುರತ್ರಯ ೩

ವರದೇಶ ವರದವರೇಣ್ಯ ಉಮಾಧವ
ಶರಣಾಗತಜನಭರಣ ಸುರದ್ರುಮ ೪

ಭವ ತಿರುಪತಿ ಕ್ಷೇತ್ರ ಸ್ಥಿತ ಶ್ರೀ ವೆಂಕಟಮಿತ್ರಾ
ಭವ ಕಕುದ್ಗಿರಿವಾಸ ಶಿವ ಗಂಗಾಧರ ಲಿಂಗ ೫

ಓಂ ಬೃಂದಾವನಾಂತಃ ಸಂಚಾರಿಣೇ ನಮಃ

ಕಂ॥ ಗುರುವಾರದರ್ಚನೆಯನಿದ
ಹರುಷದಿ ಕೈಕೊಂಡು ನಮ್ಮ ಸಲಹಲು ನೀನೇ
ಗುರು ವಾಸುದೇವ ರೂಪನು
ಧರಿಸಿಯೆ ಮಂತ್ರಗಳನಿತ್ತೆ ವೆಂಕಟರಮಣಾ

೯೯

ಲಕ್ಷ್ಮೀಪ್ರಿಯಕೃಷ್ಣ

ಲಕ್ಷ್ಮೀಪ್ರಿಯ ಕೃಷ್ಣ ಲಕ್ಷ್ಮೀಪ್ರಿಯ ಕೃಷ್ಣ
ಲಕ್ಷ್ಮೀಪ್ರಿಯ ಸತ್ಯಭಾಮಾಪ್ರಿಯ ಪ

ಗೋವಿಂದ ಮುನಿವಂದ್ಯ ದೇವ ಕೇಶವ ಯೋಗಿ
ಭಾವಾಗೋಚರ ಸರ್ವರೂಪ ಶ್ರೀಕೃಷ್ಣ ೧

ಪರಮ ಪಾವನ ನಿತ್ಯವರದ ದಾಮೋದರ
ಅರವಿಂದ ಲೋಚನ ಶ್ರೀ ಪದ್ಮನಾಭ ೨

ನಾರಾಯಣಾಧೋಕ್ಷಜಾನಂತ ಪರಿಪೂರ್ಣ
ಶ್ರೀ ರಾಘವೋಪೇಂದ್ರ ಸಂಕರ್ಷಣಾಖ್ಯ ೩

ಅನಿರುದ್ಧ ಪ್ರದ್ಯುಮ್ನ ಮಾಧವ ಶ್ರೀ ವಿಷ್ಣೊ
ದನುಜಮರ್ದನ ದಿವ್ಯ ರೂಪ ನರಸಿಂಹ ೪

ವಾಮನ ಶ್ರೀಧರ ಹೃಷೀಕೇಶ ಶ್ರೀ ಹರೆ
ಕಾಮಿತ ಫಲದ ಜನಾರ್ದನ ರಾಮ ೫

ವಾಸುದೇವಾಚ್ಯುತ ವಸುದೇವ ನಂದನ
ವಾಸುಕಿಶಯನ ತ್ರಿವಿಕ್ರಮ ಭೀಮ ೬

ಮಧುಸೂದನಾನಂದಘನ ಪುರುಷೋತ್ತಮ
ಬುಧವಂದ್ಯ ತಿರುಪತಿ ವೆಂಕಟರಮಣಾ ೭

ಓಂ ತುಲಸೀದಾಮ ಭೂಷಣಾಯ ನಮಃ

೧೦೦

ಗೌರೀಪ್ರಿಯಹರ

ಗೌರೀಪ್ರಿಯ ಹರ ಗೌರೀಪ್ರೀಯ ಹರ
ಗೌರೀಪ್ರಿಯ ಹರ ಗಂಗಾಧರ ಪ

ನಿರುಪಮ ನಿರ್ಗುಣ ನಿತ್ಯ ನಿರಾಮಯ
ಪರಿಪೂರ್ಣ ಪರಮೇಶ ಪರ ಸ್ವಪ್ರಕಾಶ ೧

ನಿರ್ಮಿತಚಿಚ್ಛಕ್ತಿ ಪರಿಣಾಮಬ್ರಹ್ಮಾಂಡ
ನಿರ್ಮಲ ನಿಗಮಾಂತವೇದ್ಯ ಸ್ವಸಾಧ್ಯ ೨

ಬಾಲೇಂದುಶೇಖರ ಭಕ್ತ ದುರಿತಹರ
ಫಾಲಾಕ್ಷ ಫಣಿಹಾರಯುಕ್ತಶರೀರ ೩

ಇನಕೋಟಿಸಂಕಾಶ ಕನಕಕುಂಡಲ ದೇವ
ವಿನುತ ವಿರೂಪಾಕ್ಷ ವಿಬುಧೌಘ ಪಕ್ಷ ೪

ಶಿವ ಶಿವ ಶಂಕರ ದುರಿತ ದಿವಾಕರ
ಭವ ಭಯ ಪರಿಹರ ಭವದೂರ ಧೀರ ೫

ಪರಶು ಮೃಗಾಭಯ ವರದ ಚತುರ್ಭುಜ
ಪರಮ ಪಾವನ ಶೀಲ ಪುಣ್ಯ ವಿಶಾಲ ೬

ಶರಣಾಗತ ತ್ರಾಣ ನಿಜಕರ್ಮ ನಿರ್ಲೇಪ
ಸುರಗಿರಿ ವರ ಚಾಪ ತ್ರಿಭುವನ ದೀಪ ೭

ಮಂದರಗಿರಿ ವಾಸ ಮನ್ಮಥತನು ನಾಶ
ನಂದಿವಾಹನ ಭೃಂಗಿನಾಟ್ಯ ವಿಲಾಸ ೮

ಮುನಿವಂದ್ಯ ಮೃದುಪಾದ ಘನ ಕಕುದ್ಗಿರಿವಾಸ
ವನಜಾಕ್ಷ ತಿರುಪತಿ ವೆಂಕಟರೂಪ ೯

ಓಂ ಸ್ಯಮಂತಕ ಮಣಿಹರ್ತ್ರೇ ನಮಃ

೧೦೧

ಫಲಪ್ರಾಪ್ತಿ

ಬಂದೊದಗಿತು ಪುಣ್ಯಫಲವು ಮುಚು
ಕುಂದವರದ ವಾಸುದೇವಾರ್ಯರೊಲವು ಪ

ಸಂಚಿತಾಗಾಮಿಪ್ರಾರಬ್ಧವೆಂಬ
ಕಂಚುಕಿಯಾದ ಕರ್ಮದ ಬಹುಬದ್ದ
ದಂಚುಗಾಣುವುದಾವ ಸಿದ್ಧ ಇದು
ಕಿಂಚಿದಾದುದು ಗುರುಚರಣರೇಣಿಂದ ೧

ಏನು ಸುಕೃತವ ಮಾಡಿದೆನೊ ನಿನಗಾನತ
ನಾನಾದ ಬಗೆಯು ತಾನೇನೊ
ನೀನೆ ಕರುಣವಿತ್ತುದೇನೊ ನಾನು
ಜ್ಞಾನವೆಂತೆಂಬ ಸ್ವರೂಪವನರಿಯೆನೊ ೨

ಪರಿಹರಿಸಿತು ಜನ್ಮ ಮರಣ ದುಃಖ
ದುರವಣೆ ದಹಿಸಿತು ಲಕ್ಷ್ಮಿಯರಮಣ
ತಿರುಪತಿ ವೆಂಕಟರಮಣ ನೀನೆ
ಗುರು ವಾಸುದೇವರೂಪಿನಲಿತ್ತೆ ಕರುಣ ૩

ಓಂ ನರನಾರಾಯಣಾತ್ಮಕಾಯ ನಮಃ

ಕಂ॥ ಭೃಗುವಾರದರ್ಚನೆಯನಿದ
ನಿಗಮಾಗಮವೇದ್ಯ ಗ್ರಹಿಸಿ ಸಿರಿ ಧರಣಿಯು ಸಹ
ಭಗವಂತ ನಿನ್ನ ಭಕ್ತರೊ
ಳಗಲದೆ ನಾನಿಹುದ ಮಾಡು ವೆಂಕಟರಮಣಾ

೧೦೨

ಪ್ರಾರ್ಥನೆಗಳು – ಶ್ರೀರಾಮ

ರಾಮ ರಕ್ಷಮಾಂ ರಾಮ ರಕ್ಷಮಾಂ
ರಾಮ ರಕ್ಷಮಾಂ ರಾಮ ರಕ್ಷಾಮಾಂ
ರಾಮ ರಕ್ಷಮಾಂ ಕಾಮಿತಾರ್ಥದ
ಪ್ರೇಮಸಾಗರ ಶ್ರೀ ಮನೋಹರ ಪ

ದಶರಥಾತ್ಮಜ ದಾನವಾಂತಕ
ಶಶಿನಿಭಾನನ ಶತಮಖಾರ್ಚಿತ
ಕುಶಿಕನಂದನ ವಶಮಖಾವನ
ಶಶಿಮುಖೀತನೋಃ ಶಮಲವಾರಣ ೧

ಹರ ಶರಾಸನ ಹರ ಧರಾಸುತಾ
ಕರ ಪರಿಗ್ರಹಾರಾಮ ನಿಗ್ರಹ
ಗುರು ನಿಯೋಜಿತ ಗುಹ ಸುಪೂಜಿತ
ವರ ವನಾಶ್ರಿತ ಭರತ ಪ್ರಾರ್ಥಿತ ೨

ಮೃಗ ನಿಷೂದನ ಖಗಪ ಪಾಲನ
ಅಗಳ ಭಂಜನ ಶಬರಿ ಪಾವನ
ಸುಗತಿ ದಾಯಕ ವಾಲಿಶಿಕ್ಷಕ
ಮೃಗಪರಕ್ಷಕ ರಾಜ್ಯದಾಯಕ ೩

ಶರಧಿಬಂಧನ ಪುರ ವಿಮರ್ದನ
ವರವಿಭೀಷಣ ಭಯನಿವಾರಣ
ಧುರ ಧುರಂಧರ ದುಷ್ಟ ಖಳಸಹೋ
ದರ ಶಿರೋಹರ ದೈತ್ಯಸಂಹರ ೪

ಧರಣಿಜಾನ್ವಿತ ದುರಿತ ವಾರಕ
ಭರತವಂದಿತ ಪುರವರಸ್ಥಿತ
ವರ ಮುನಿಸ್ತುತ ಸುರಸಮಾಶ್ರಿತ
ತಿರುಪತೀಶ್ವರ ವೆಂಕಟೇಶ್ವರ ೫

ಓಂ ಕುಬ್ಜಾ ಕೃಷ್ಣಾಂಬರಧರಾಯ ನಮಃ

೧೦೩

ದೇವಿ ಜಗನ್ಮಾಯೆ

ಜಯ ದೇವಿ ಜಗನ್ಮಯೆ ಪಾಹಿ ಜಯ ದೇವಿ ಜಗನ್ಮಯೆ ಪಾಹಿ ಪ

ಜಯ ವಾಗೀಶ್ವರಿ ಜಯ ಕಮಲಾಲಯೆ
ಜಯ ಗಿರಿಸುತೆ ಜಯ ಜಾನಕಿ ಅ.ಪ

ಶರಹರಕಲಮಾಯಾಬಿಂದುತ್ರಯ
ಪರಿಶೋಭಿತ ಮನು ಸಂಘಾರಾಧ್ಯೆ ೧

ಚಂಡಿ ಭಂಡ ಶುಂಭನಿಶುಂಭಾರ್ದಿನಿ
ಪಂಡಿತವರ್ಧಿನಿ ಪರಮಾರಾಧ್ಯೆ ೨

ದಶಮುಖ ಪಂಚತ್ವಾಗಮ ಕಾರಣೆ
ದಶದಶವದನಾರ್ದನಿ ನಿರವದ್ಯೆ ೩

ವಿಧಿ ಹರಿ ಹರ ರುದ್ರೇಶ್ವರ ಭಾವಿತೆ
ಮಧುಸೂದನ ಹೃದಯ ಸದುದವಸಿತೆ ೪

ವಿಧಿವದನಾಲಯೆ ವಿಧುಧರ ವಾಮಗೆ
ಬುಧ ಹೃನ್ಮುಖ ಕರಣಾಶ್ರಯೆ ಸದಯೆ ೫

ಷೋಡಶ ಪಂಚಕ ಪಂಚಕ ದಶವಿಧ
ಗೂಢಾಕ್ಷರಮಯ ಶೋಭನ ಗಾತ್ರೆ ೬

ತಿರುಪತಿ ಕಕುದ್ಗಿರಿ ಪುಣ್ಯ ನದೀ ನದ
ಶರನಿಧಿ ಮಹಿಮಾಸ್ಪದೆ ಶುಭ ವರದೆ ೭

ಓಂ ಮಾಯಿನೇ ನಮಃ

೧೦೪

ಶಂಕರ

ಶಂಕರಾವ ಮಾಂ ಶಂಕರಾವ ಮಾಂ
ಶಂಕರಾವ ಮಾಂ ಕಿಂಕರಂ ತವ ಪ
ಶಂಕರಾವ ಮಾಂ ಪಂಕಜಾಲಯಾ
ಲಂಕೃತಾಂಘ್ರಿಣಾ ನಿರತ ಪೂಜಿತ ಅ.ಪ

ಫಾಲಲೋಚನ ಫಣಿವಿಭೂಷಣ
ಕಾಲಖಂಡನ ಕಲುಷಭಂಜನ
ಲೋಲಕಂಕಣಾಲಿಪ್ತಚಂದನ
ಮೂಲಕರಣ ಮೃದುಸುಭಾಷಣ ೧

ಭಕ್ತಪಾಲಕ ಮುಕ್ತಿದಾಯಕ
ಶಕ್ತಿಪ್ರೇರಕ ಯುಕ್ತಿಬೋಧಕ
ತ್ಯಕ್ತಲೌಕಿಕ ಮುಕ್ತಬಂಧಕ
ದಿಕ್ತಟಾದಿಕ ವ್ಯಕ್ತರೂಪಕ ೨

ಭೂತಭಾವನ ಭೂರಿಲೋಚನ
ಭೀತಿಭೇದನ ನೀತಿವರ್ಧನ
ವೀತಬಹುಜನ ವಿತತಸದ್ಗುಣ
ಪಾತಕೀಜನ ಪಾಪ ಶೋಧನ ೩

ಶಿವ ಮಹೇಶ್ವರ ಶಿವಗುಶೇಖರ
ಭವ ಪರಾತ್ಪರ ಭುವನಮಂದಿರ
ಧ್ರುವ ದಿಗಂಬರ ಧೂರ್ತಪುರಹರ
ದಿವಪ ಭಾಸುರ ಶ್ರೀ ಉಮಾವರ ೪

ತಿರುಪತೀತಿಭೂಧರ ವರೇಸದಾ
ವರದ ವೆಂಕಟೇಶ್ವರ ಇತಿಸ್ಥಿತ
ವರ ಕಕುದ್ಗಿರೀಶ್ವರ ಗಂಗಾಧರ
ಚರಣಸೇವಕಂ ಮಾಂ ಕುರು ಪ್ರಭೂ ೫

ಓಂ ಪರಮ ಪುರುಷಾಯ ನಮಃ

೧೦೫

ರಾಮ

ಜಗದ್ಗುರೋ ರಾಮ ತ್ರಾಹಿ ಶ್ರೀ ರಾಮಚಂದ್ರ
ಜಗದ್ಗುರೋ ರಾಮ ತ್ರಾಹಿ ಪ

ದಶರಥನಂದನ ದನುಜ ವಿಮರ್ದನ
ಪಶುಪತಿನುತ ಗುಣ ರವಿನಯನ ೧

ಕೌಸಲ್ಯಾತ್ಮಜ ಕಮನೀಯಾನನ
ಕೋಮಲ ಕುವಲಯ ದಳ ವರ್ಣ ೨

ವನಚರ ಪೋಷಕ ಸೇತು ವಿಧಾಯಕ
ಘನ ಧನುಃಶರಧರ ಧೃತಲೋಕ ೩

ಜಯಜಯ ರಾಘವ ಜಾನಕೀವಲ್ಲಭ
ಭಯಗಣ ನಾಶನ ಭಾನು ನಿಭ ೪

ದಶಮುಖ ನಂದನ ಮಾನ ವಿಭಂಜನ
ಬಿಸಜಜ ಪೂಜಿತ ಪದನಳಿನ ೫

ಮುನಿಮಖಪಾಲಕ ತಾಟಕೀಶಿಕ್ಷಕ
ಮುನಿಸತಿದಾಯಕ ಮುನಿತಿಲಕ ೬

ತರಣಿ ಕುಲೋದ್ಭವ ತಿರುಪತಿ ಗಿರಿವರ
ಸ್ಥಿರಸ್ಥಿತ ವೆಂಕಟ ಸುಖಸಾರ ೭

ಓಂ ಮುಷ್ಟಿಕಾಸುರ ಚಾಣೂರ ಮಲ್ಲಯುದ್ಧವಿಶಾರದಾಯ ನಮಃ

ಕಂ॥ ಸ್ಥಿರವಾರದರ್ಶನೆಯು ಸು
ಸ್ಥಿರ ಸಂಪದ್ಭಕ್ತಿ ವಿಜ್ಞಾನಪ್ರದವೆಂದೇ
ಸ್ಥಿರಚಿತ್ತನಾಗಿ ಮಾಡ್ದೆನು
ಸ್ಥಿರವಾಗಿರು ಮನದಿ ನೀನೆ ವೆಂಕಟರಮಣಾ

೧೦೬

ಸದಾಶಿವ

ಸದಾಶಿವ ದೇವ ಪಾಹಿ ಶ್ರೀ ವಿಶ್ವನಾಥ
ಸದಾಶಿವ ದೇವ ಪಾಹಿ ಪ

ಆದಿ ನಿಷೇವಿತ ರಜತಧರಾಧರ
ವೇದನಿಧೇಕಿಲ ಸುರಪ್ರವರ ೧

ಅಮಿತ ಗುಣಾಲಯ ಅಂಡ ವಿಭೂಷಣ
ಬಹುಮುಖ ಬಹುಪದ ಬಹುನಯನ ೨

ವಿಧುಕರರಾಜಿತ ಮುಕುಟ ಮಹೇಶ್ವರ
ಕುಧರಸುಖಾಕೃತಸುಖವಿಭವ ೩

ಪರ್ವತರಾಜ ಪ್ರಥಮ ಸುತಾವರ
ಶರ್ವ ಸುರಾರಿ ವಿರೋಧಿ ಶರ ೪

ಅಜಿನದ್ವಯ ಶುಭವಸನ ಮನೋಹರ
ಸುಜನ ಶುಭೋದಯ ಕೃತಿ ಚತುರ ೫

ಸಪ್ತದ್ವಯಸಾಹಸ್ರ ಮಹಾಋಷಿ
ಸದ್ಗತಿದಾಯಕ ಸುಜಿತಖರ ೬

ಪಕ್ಷಿಧ್ವಜ ಶ್ರೀ ವೆಂಕಟಗಿರಿ ಗೃಹ
ಪಕ್ಷ ಕಕುದ್ಗಿರಿಸಾಂಬಶಿವ ೭

ಓಂ ಸಂಸಾರವೈರಿಣೇ ನಮಃ

೧೦೭

ಶ್ರೀ ವೆಂಕಟೇಶ ಸ್ತೋತ್ರಗಳು

ಜಯ ಜಯ ವೆಂಕಟರಮಣ ಜಯ ಜಯ ದಾನವಹರಣ ಪ

ಜಯ ಜಯ ನಕ್ರವಿದಾರಣ ವಾರಣ
ಭಯಸಂಹರಣ ವಿತರಣಸುಚರಣ ಅ.ಪ

ವೇದೋದ್ಧಾರಣ ಶೀಲ ಭೂಧರಧಾರಣ ಲೀಲ
ಸೂದಿತಕನಕನಯನ ಧರಣೀಧರ
ಮೋದಿತ ವರಪ್ರಹ್ಲಾದ ತ್ರಿವಿಕ್ರಮ ೧

ಪರಶುಧರಾಶ್ರಿತ ವರದ ಶರನಿಧಿ ಬಂಧನ ಸುಖದ
ಸರಸಿಜಭವ ಮದ ಭಂಜನ ಪಾಂಡವ
ಪರಿಪಾಲನ ದೀಕ್ಷಾವ್ರತ ಭರಣ ೨

ತ್ರಿಪುರಸತೀವ್ರತ ಹರಣ ಕುಪಥಮತೋದ್ಭವ ಕರಣ
ಸುಪಥಪ್ರದ ಶುಭ ತುರಗಾರೋಹಣ
ಗುಪಿತ ಚರಿತ ತಿರುಪತಿ ಶುಭಸದನ ೩

ಓಂ ಕಂಸಾರಯೇ ನಮಃ

೧೦೮

ವೆಂಕಟಗಿರಿವಾಸ ವೆಂಕಟಗಿರಿವಾಸ
ವೆಂಕಟಗಿರಿವಾಸ ಶ್ರೀ ವೆಂಕಟೇಶ ಪ

ಸುರ ಸಮುದಾಯ ಶಿರೋಮಣಿ ರಾಜಿತ
ಚರಣಸರೋರುಹ ಶ್ರೀ ವೆಂಕಟೇಶ ೧

ಕಮನೀಯ ವಿಗ್ರಹ ಕಮಲಾಲಯಾಕರ
ಕಮಲಶೋಭಿತಪಾದ ಶ್ರೀ ವೆಂಕಟೇಶ ೨

ವಿಧಿಮುಖಾಮರಗಣ ವಿಧಿವಿಹಿತಾರ್ಚಿತ
ಬುಧಹೃದಯಾಲಯ ಶ್ರೀ ವೆಂಕಟೇಶ ೩

ಸನಕಾದಿಮುನಿವಂದ್ಯ ಸಾಧುಸಂರಕ್ಷಕ
ವನಧಿಸುತಾ ಭೂಮಿಧವ ವೆಂಕಟೇಶ ೪

ಅಂಜನವೃಷಶೇಷ ವಿನತಾತನುಜ ನಾಮ
ರಂಜಿತಾಚಲವಾಸ ಶ್ರೀ ವೆಂಕಟೇಶ ೫

ನಾರಯಣಾದ್ರಿ ಸಿಂಹಾದ್ರಿ ಶ್ರೀಶೈಲೇತಿ
ಸಾರ ವೆಂಕಟನಾಮಾಷ್ಟಕ ಭೂಧರೇಶ ೬

'ವೆಂ ಪಾಪಂ ಕಟತಿ ನಾಶಯತೀತಿ' ವಿಖ್ಯಾತ
ಸಾಂಪ್ರತ ಸುಸ್ಥಿರ ಶ್ರೀ ವೆಂಕಟೇಶ ೭

ನಿತ್ಯ ನಿಜಾನಂದ ನಿರುಪಮಾಮಿತಶಕ್ತಿ
ವೃತ್ತಿ ಪ್ರವರ್ತಕ ಶ್ರೀ ವೆಂಕಟೇಶ ೮

ದಿವ್ಯ ದಕ್ಷಿಣಮುಖ್ಯದೋರ್ಧೃತ ಶ್ರೀ ಚಕ್ರ
ಸವ್ಯದೋರ್ಧೃತ ಶಂಖ ಶ್ರೀ ವೆಂಕಟೇಶ ೯

ಭಜಿತವ್ಯಂ ಪಾದಪಂಕಜಮಿತಿ ದರ್ಶಿತ
ನಿಜ ದಕ್ಷಾಧಃಪಾಣೇ ಶ್ರೀ ವೆಂಕಟೇಶ ೧೦

ಭಜತಾಂ ಭವಾಂಭೋಧಿ ಕಟಿಮಿತಮಿತಿ ವಾಮ
ಕಟಿ ನ್ಯಸ್ತ ಕರಕಂಜ ಶ್ರೀ ವೆಂಕಟೇಶ ೧೧

ಹಾರ ಕಿರೀಟ ಕುಂಡಲ ಕೌಸ್ತುಭಾನ್ವಿತ
ನೀರದ ನಿಭ ಗಾತ್ರ ಶ್ರೀ ವೆಂಕಟೇಶ ೧೨

ಕಂಕಣ ಕೇಯೂರ ವಲಯ ಶೋಭಿತ ಕರ
ಕುಂಕುಮಾಂಕಿತ ಮಾಲ ಶ್ರೀ ವೆಂಕಟೇಶ ೧೩

ಕಟಿಸೂತ್ರ ಕಲಿತ ಪೀತಾಂಬರ ಕಿಂಕಿಣಿ
ಕಟಕಮಂಡಿತಪಾದ ಶ್ರೀ ವೆಂಕಟೇಶ ೧೪

ತಿರುಪತೀತಿಖ್ಯಾತ ತೀರ್ಥಭೂತಾದ್ರೀಶ
ವರದ ವಿಶ್ವಾಧಾರ ಶ್ರೀ ವೆಂಕಟೇಶ ೧೫

ಓಂ ಮುರಾರಯೇ ನಮಃ

೧೦೯

ಶ್ರೀ ವೆಂಕಟೇಶ ಷಡ್ಗುಣಧಾಮ ಶ್ರೀ ವೆಂಕಟೇಶ
ಶ್ರೀ ವೆಂಕಟೇಶ ಸದಾನಂದ ವಿಗ್ರಹ ಪಾವನಕೀರ್ತೇ ಪರಮೇಶ ಪ.

ಕೇಶವ ಬ್ರಹ್ಮಾದಿಕಾಯ ನಾರಾಯಣ
ಶ್ರೀಶ ಗೋವಿಂದ ಗೋವರ್ಧನೋದ್ಧರ ವಿಷ್ಣೋ ೧

ಮಧುಸೂದನಾಮಿತಮಹಿಮ ತ್ರಿವಿಕ್ರಮ
ಬುಧವಂದ್ಯ ವಾಮನ ಭಯಹರ ಶ್ರೀಧರ ೨

ಹೃಷೀಕೇಶ ನಿಜ ಜನಹೃತ್ಕಂಜಸ್ಥಿರ ಭಾನೋ
ವಿಷಮರಹಿತ ಪದ್ಮನಾಭ ದಾಮೋದರ ೩

ಸಂಕರ್ಷಣ ವಾಸುದೇವ ಸನಾತನ
ಪಂಕಜನೇತ್ರ ಪಾವಕಮುಖ್ಯ ಪ್ರದ್ಯುಮ್ನ ೪

ಅನಿರುದ್ಧ ಪುರುಷೋತ್ತಮಾದಿಕಾರಣ ಲೋಕ
ಜನಕಾಧೋಕ್ಷಜ ಜೀವಸುಖ ಶುದ್ಧ ನರಸಿಂಹ ೫

ಅಚ್ಯುತಾನಂತ ಜನಾರ್ದನಾಮಿತ ರೂಪ
ಸಚ್ಚಿದ್ರೂಪೋಪೇಂದ್ರ ಸರ್ವೇಶ ಶ್ರೀಹರೆ ೬

ಶ್ರೀ ಕೃಷ್ಣ ರುಕ್ಮಿಣೀ ಸತ್ಯಭಾಮಾ ಧವ
ಏಕರೂಪಾವ್ಯಯಾನೇಕ ಶಕ್ತ್ಯಾತ್ಮಕ ೭

ಕ್ಲೇಶತಿಮಿರ ಹರ ಕೋಟನಾಮಾತ್ಮಕ
ಕೋಶಪಂಚಕ ದೂರ ಕೋಶ ಪ್ರವರ್ತಕ ೮

ತಿರುಪತೀತಿಖ್ಯಾತ ದಿವ್ಯಕ್ಷೇತ್ರೋದ್ಭವ
ಸುರತರು ವೆಂಕಟಧರಣೀಧರಾಧೀಶ ೯

ಓಂ ನರಕಾಂತಕಾಯ ನಮಃ

೧೧೦

ಶ್ರೀ ನೃಸಿಂಹ ಸ್ತೋತ್ರ

ವರದ ಶ್ರೀ ನರಸಿಂಹ ವಿಮಲಾತ್ಮ ನರಸಿಂಹ
ಪರಮ ಪಾವನಸಿಂಹ ಪಾಹಿ ನರಸಿಂಹ ಪ

ನಿರ್ಗುಣ ನಿರುಪಮ ನಿತ್ಯ ನಿಜಾನಂದ
ನಿರ್ಲೇಪ ನಿಗಮಾಂತವೇದ್ಯ ನರಸಿಂಹ ೧

ವಿಶ್ವನಿರ್ಮಾಣಾದಿ ವಿವಿಧ ಶಕ್ತ್ಯಾತ್ಮಕ
ವಿಧಿಹರ ರೂಪ ಶ್ರೀ ವೀರನರಸಿಂಹ ೨

ಪರಿಭ್ರಾಜಮಾನಾರ್ಕ ಪಾವಕ ಶಶಿಯುಕ್ತ
ಪದ್ಮ ಮಹಾಯೋಗಪೀಠ ನರಸಿಂಹ ೩

ಸಮ ಕಾಲೋದಿತ ಸೂರ್ಯಶಶಿಕೋಟಿಸಂಕಾಶ
ಸರಸಿಜಜಾತಾಯುತೋತ್ಸಂಗ ಸಿಂಹ ೪

ಬ್ರಹ್ಮಾಮರೇಂದ್ರಾದಿ ಬೃಂದ ಕಿರೀಟಾಗ್ರ
ಮಣಿ ನೀರಾಜಿತ ಪಾದಪದ್ಮ ನರಸಿಂಹ ೫

ಧೃತ ಶಂಖ ಚಕ್ರಾಬ್ಜ ದಿವ್ಯ ಚತುರ್ಭುಜ
ಧರಣೀಧರಾಚ್ಯುತ ದೇವ ನರಸಿಂಹ ೬

ಪ್ರಹ್ಲಾದಖೇದಾಪಹಾರಕ ಪರಿಪೂರ್ಣ
ಆಹ್ಲಾದ ಸುಕೃತಾಟ್ಟಹಾಸ ನರಸಿಂಹ ೭

ಆಂತ್ರಮಾಲಿಕಾಕಂಠ ಅಮಿತ ನಖಾಯುಧ
ಅಂಕಾರೋಪಿತ ದೈತ್ಯಕಾಯ ನರಸಿಂಹ ೮

ಮಕುಟಮಂಡಿತ ಶುಭ ಮಕರಕುಂಡಲ ಧರ
ಪ್ರಕಟಿತಕರುಣಾಕಟಾಕ್ಷ ನರಸಿಂಹ ೯

ಕೇಯೂರ ಹಾರ ಕೌಸ್ತುಭಮಣಿ ಭೂಷಿತ
ಕಾಂಚನಚೇಲ ಕಲುಷಹರ ಸಿಂಹ ೧೦

ಸಕಲ ಲೋಕಾಧೀಶ ಸಾಧು ಸಂರಕ್ಷಕ
ಸುರ ಸಿದ್ಧ ಮುನಿ ವಂದ್ಯ ಶ್ರೀ ನರಸಿಂಹ ೧೧

ತೂಲನಾಮಕ ಗ್ರಾಮ ನಿಕಟಾದ್ರಿ ಸ್ಥಿರವಾಸ
ಪಾಲಿತಬಹುಭುವನೇಶ ನರಸಿಂಹ ೧೨

ದ್ವಿತೀಯ ಶ್ರೀ ತಿರುಪತಿ ಕ್ಷೇತ್ರಸಮಾ
ನಾದ್ರಿ ವೆಂಕಟಪತಿ ಪ್ರತಿವೇಷ ನರಸಿಂಹ ೧೩

ಓಂ ಅನಾದಿ ಬ್ರಹ್ಮಚಾರಿಣೇ ನಮಃ

೧೧೧

ಶ್ರೀ ಕೃಷ್ಣ ಸ್ತೋತ್ರ

ಕೃಷ್ಣ ಕೃಪಾಳೋ ಕೃಷ್ಣ ಕೃಪಾಳೋ
ವೃಷ್ಣಿ ಕುಲೋದ್ಭವ ಕೃಷ್ಣ ಕೃಪಾಳೋ ಪ

ವಸುದೇವ ನಂದನ ವರ ರತ್ನ ಭೂಷಣ
ಕುಶಲಕರೇಕ್ಷಣ ಕೃಷ್ಣ ಕೃಪಾಳೋ ೧

ಭುವನತ್ರಯಾಧಾರ ಬಹುಗೋಪಿಕಾ ಜಾರ
ನವನೀತ ದಧಿ ಚೋರ ಕೃಷ್ಣ ಕೃಪಾಳೋ ೨

ಮುರಳೀನಾದ ವಿನೋದ ವಿಶ್ವಾತ್ಮಕ
ವಿರಳೀಕೃತಲೀಲ ಕೃಷ್ಣ ಕೃಪಾಳೋ ೩

ಗುಂಜಾಭರಣ ಸುಗುಂಜಿತ ಮಣಿಮಯ
ಮಂಜೀರ ಪದಪದ್ಮ ಕೃಷ್ಣ ಕೃಪಾಳೋ ೪

ರಾಗಾದಿ ದೋಷ ಕಲುಷಮನಸೋ ಮೇ
ಕಾಗತಿರಧುನಾ ಕೃಷ್ಣ ಕೃಪಾಳೋ ೫

ಆರ್ತಸಂರಕ್ಷಕ ಪಾರ್ಥಸಹಾಯಕ
ಕೀರ್ತಿವಿಧಾಯಕ ಕೃಷ್ಣ ಕೃಪಾಳೋ ೬

ಕಾಮಸಂಪುಟದಿವ್ಯನಾಮಜಪನಶೀಲ
ಕಾಮಿತಾರ್ಥಪ್ರದ ಕೃಷ್ಣ ಕೃಪಾಳೋ ೭

ಕಾಳೀಯ ಫಣ ಮಾಣಿಕ್ಯ ರಂಜಿತ ಪಾದ
ಕಾಳಿಂದೀ ಪಾವನ ಕೃಷ್ಣ ಕೃಪಾಳೋ ೮

ಮಾಮವಲೋಕಯ ಮಾಧವ ಮುರಹರ
ತಾಮಸಮಪಹರ ಕೃಷ್ಣ ಕೃಪಾಳೋ ೯

ತವ ಸತ್ಕಥಾ ಶ್ರವಣೇ ಕೀರ್ತನೇ ಮಮ
ಶಿವಸುಧಿಯಂ ದೇಹಿ ಕೃಷ್ಣ ಕೃಪಾಳೋ ೧೦

ತಿರುಪತಿ ಕ್ಷೇತ್ರನಿಲಯ ಕರುಣಾಲಯ
ವರದ ಶ್ರೀ ವೆಂಕಟಕೃಷ್ಣ ಕೃಪಾಳೋ ೧೧

ಓಂ ಕೃಷ್ಣಾವ್ಯಸನಕರ್ಷಕಾಯ ನಮಃ

೧೧೨

ಆರತಿ

ಆರತಿಯನು ನಾನು ಬೆಳಗುವೆ ನಮ್ಮ
ಪ್ರೇರಿಪ ಪ್ರಭುವ ಪಡೆವೆನೆಂಬ ಪ

ವಿಷಯಂಗಳಾರತಿ ವಿಸ್ತರಿಸಲು ಬಹು
ವಿಷಮಮಾರ್ಗವ ಕಾಬ ವೊಡಲಿತ್ತವು
ವಿಷವಾಯಿತಾ ಸುಖ ವಿವಿಧ ಭೋಗಂಗಳು
ಮೃಷೆಯೆಂದು ಹರಿಯನ್ನೆ ಮಚ್ಚಿಕೊಂಬ ೧

ಲೋಕಂಗಳೈದಲು ಲೋಪವಾದವುಯೆಲ್ಲ
ಸಾಕಾಯಿತವರಲ್ಲಿ ಸಂಚರಿಸಿ
ಈ ಕುಹಕವ ನಂಬಲೆಲ್ಲವು ಬಹು ದುಃಖ
ಶ್ರೀಕಾಂತನ ಕೂಡಿ ಸುಖವಿರುವ ೨

ಹದಿನಾಲ್ಕು ಕರಣದ ಹವಣಿನಾರತಿಯಲ್ಲಿ
ಹುದುಗಿಸಿ ಜ್ಞಾನದ ಹೊಸ ದೀಪವ
ಹೃದಯಕಮಲದಲ್ಲಿ ಹೊಂದಿಹ ತಿರುಪತಿ
ಸದನ ವೆಂಕಟಗೆತ್ತಿ ಸುಖಿಯಾಗುವ ೩

ಓಂ ಶಿಶುಪಾಲ ಶಿರಶ್ಛೇತ್ರೇ ನಮಃ

೧೧೩

ವಾದ್ಯ

ವಾದ್ಯವಸಿದನೀಸವಧರಿಸು
ವೇದ್ಯದ ವಿದ್ಯವ ವ್ಯವಹರಿಸು ಪ

ಹೊಂಕದ ಶಂಖದ ಪರಿಪರಿ ಧ್ವನಿಗಳ
ಭೊಂಕನೆ ಮೊರೆಯುವ ಭೇರಿಗಳ
ಅಂಕೆಯ ಮೀರಿದ ಆ ಪಟಹಂಗಳ
ಶಂಕಿಸದೂದುವ ಸರಳೆಗಳ ೧

ಚರ್ಮದ ಬಂಧದ ಚರ್ಚಿತ ಘೋಷದ
ಕರ್ಮಪ್ರದಮುಖ ಶುಭಕರ ಸ್ವರದ
ನಿರ್ಮಲಕಾಂಸ್ಯದ ನಿತ್ಯನಿನಾದದ
ಧರ್ಮದಿ ವೇಣುವು ಧ್ವನಿ ಮಾಡುವ ೨

ತುಂಬುರ ಮುಖ್ಯದ ತಂತ್ರಿಗಳ ರವವು
ಬೆಂಬಿಡದೊದಗಲು ಬಹು ವಿಧವು
ತುಂಬಿರೆ ತಿರುಪತಿನಾಥಗೆ ಯೋಗ್ಯವು
ಯೆಂಬಿವಕೊಡೆಯ ನೀ ವೆಂಕಟಪ್ರಭುವು ೩

ಓಂ ದುರ್ಯೋಧನ ಕುಲಾಂತಕಾಯ ನಮಃ

೧೧೪

ಶರಣಾಗತಿ – ಕೃಷ್ಣ

ಚರಣಕೆರಗುವೆ ಕೃಷ್ಣಾ ಪರಿಹರಿಸು ಜನ್ಮವನು
ಶರಣಜನಬಂಧು ನೀನು ಕೃಷ್ಣಾ ಪ

ಕರುಣನಿಧಿಯಡಿಗೊಮ್ಮೆ ಶಿರವೆರಗಿದವರು ಭವ
ಶರಧಿಯೊಳು ಬೀಳರೆಂದೂ ಕೃಷ್ಣಾ ಅ.ಪ

ಹಲವು ದೇಹಂಗಳಲಿ ಮಾಡಿದಘ ವೃಂದಗಳು
ಬಲವಂದಡಪಕೆ ಲಯವು ಕೃಷ್ಣಾ
ಜಲಜಸಂಭವ ತೊಡಗಿ ಶಲಭಾಂಕದೊಳಗೊಂದ
ನುಳಿಯದೇ ಪ್ರಾಣಿಗಳಲಿ ಕೃಷ್ಣಾ
ತೊಳಲಿ ಬಂದೆನು ನೀನು ನಿರ್ಮಿಸಿದ ಪರಿಯಲ್ಲಿ
ತೊಲಗಿಸಿನ್ನೀ ಭಯವನು ಕೃಷ್ಣಾ
ನಳಿನಾಕ್ಷ ನಿನ್ನ ಪ್ರಾದಕ್ಷಿಣವು ಬಳಿಕಾಯ್ತು
ನಿಲಿಸೆನ್ನ ನಿನ್ನಡಿಯೊಳು ಕೃಷ್ಣಾ ೧

ಜನನ ಜನನಗಳಲ್ಲಿ ಕಿವಿಮುಚ್ಚಿ ತಲೆವಾಗಿ
ನಿನಗೆರಗಿದವನಾದೆನು ಕೃಷ್ಣಾ
ಗಣನೆಯಿಲ್ಲದ ಜನ್ಮಗಳಲಿನಿತು ನಮಿಸಿದರೆ
ಗಣನೆಗೊಳದಿಪ್ಪುದೇನು ಕೃಷ್ಣಾ
ಅಣು ಮಾತ್ರದವನಾಗಿ ಘನತರದವಿದ್ಯೆಯಲಿ
ಮನಮುಳುಗಿ ಬಹು ನೊಂದೆನೋ ಕೃಷ್ಣಾ
ಯೆಣಿಸದಪರಾಧ ಕೋಟಿಗಳ ಭವ ಭೀತನನು
ಅನುಪಮನೆ ಕೊಡು ಗತಿಯನು ಕೃಷ್ಣಾ ೨

ಮರೆಯೊಕ್ಕವರ ಕಾಯ್ವ ಬಿರಿದು ನಿನ್ನದು ದೇವ
ಮರೆಯೊಕ್ಕೆನೆಂದೆನೀಗ ಕೃಷ್ಣಾ
ಮರಳಿ ನುಡಿವರೆ ಗುಣಗಳಡಿಮೆಟ್ಟುತಿವೆ ಬೇಗ
ಸ್ಮರಣೆದೊರಕೊಳ್ಳದಾಗ ಕೃಷ್ಣಾ
ಸೆರೆಯವನ ಬಂಧುಗಳು ಬಿಡಿಸುವರು ಕಂಡಾಗ
ಸೆರೆಯವನಿಗುಂಟೆ ಯೋಗ ಕೃಷ್ಣಾ
ತಿರುಪತಿವಿಹಾರಿ ದುರಿತಾರಿ ವೆಂಕಟರಮಣ
ಕರವಿಡಿಯೆ ಸದ್ಗತಿ ಸೆರಾಗ ಕೃಷ್ಣಾ ೩

ಓಂ ವಿದುರಾಕ್ರೂರಾಯ ನಮಃ

೧೧೫

ಅಪರಾಧ ಸ್ತೋತ್ರ

ಕ್ಷಮಿಸಿ ಕಾಯಬೇಕು ದೇವಾ ಮಾಯಾ
ಭ್ರಮಿತನಾದ ಮೂಢನಪರಾಧ ಶತವನು ಪ

ಗುಣ ಮೂರರೊಳು ಬದ್ಧನಾಗಿ ಮತ್ತೆ
ಗುಣಕಾರ್ಯ ವಿಷಯಂಗಳೊಳು ಸಕ್ತನಾಗಿ
ಗುಣ ಹತ್ತರಭಿಮಾನಿಯಾಗಿ ಯಿಪ್ಪ
ಗುಣಹೀನನಿಗೆ ಜ್ಞಾನ ದೊರಕೊಳ್ಳದಾಗಿ ೧

ಪುಣ್ಯ ಪಾಪ ಮಿಶ್ರವೆಂಬ ಕರ್ಮ
ಜನ್ಯವಾದ ಸ್ಥೂಲದೇಹ ತಾನೆಂಬ
ಭಿನ್ನಮತಿಗೆ ದೊರಕೊಂಬ ಜ್ಞಾನ
ವಿನ್ನುಂಟೆ ನಿರ್ನೈಸೆ ಸುಗುಣ ಕದಂಬ ೨

ಚಂಚಲವಾಗಿಪ್ಪ ಮನವು ಅಲ್ಲಿ
ವಂಚನೆಯಿಂ ಮಾಳ್ಪ ಸ್ತುತಿ ಪೂಜೆ ಜಪವು
ಸಂಚಿತವಾಯಿತಘ ವ್ರಜವು ಹೀಗೆ
ವಂಚಿಪ ಮಾಯೆಯ ಗೆಲಲಾರಿಗಳವು

ಕರ್ಮಕಲಾಪವ ಕಳಿದು ಚಿತ್ತ
ನಿರ್ಮಲನಾಗಿ ಬ್ರಹ್ಮವ ನೆರೆ ತಿಳಿದು
ಹಂಮಳಿದುಳಿವದೆಲ್ಲಿಯದು ನೀನು
ಸುಮ್ಮನಿರದೆ ಕಾಯೆ ಸುಲಭವಾಗಿಹುದು ೬

ಬಂಧನವಿದ ಪರಿಹರಿಸು ಕೃಪೆ
ಯಿಂದಲಿ ಭವದಿಂದಲೆನ್ನನುದ್ಧರಿಸು

ತಂದೆ ನೀ ತಿರುಪತಿಯರಸು ಲೋಕ
ಬಂಧು ಶ್ರೀ ವೆಂಕಟರಮಣ ನಿರೀಕ್ಷಿಸು ೫

ಓಂ ವಿಶ್ವರೂಪ ಪ್ರದರ್ಶಕಾಯ ನಮಃ

೧೧೬

ಬಿನ್ನಪ – ವೆಂಕಟರಮಣ

ಬಿನ್ನಪವ ಕೇಳು ಬಿನ್ನಪವ ಕೇಳೈ ಪ್ರ
ಸನ್ನ ವೆಂಕಟರಮಣ ಪ

ತೊಳಲಿದರು ಬಹುಭವದಿ ತೊಡರಿ ಬಂದಿಹ ಕರ್ಮ
ತೊಲಗದೆ ಬಳಲಿಸುತಲಿಹುದು ಜಗದೀಶ
ಸುಲಭ ಮಾರ್ಗವ ಕಾಣದಳಲುತಿರೆ ನೀನೆ ಕೃಪೆ
ದಳೆದು ಗುರುರೂಪದಿಂ ಬಂದೆ ನನ್ನೆಡೆಗೆ ೧

ಗೆದ್ದೆನೆ ಭವವ ಗುರು ಒದ್ದು ನೂಕಿದ ದುರಿತ
ವಿದ್ದರೂ ನನಗೆ ಭಯವಿಲ್ಲೆನ್ನುತಿಹೆನು
ಬದ್ಧತೆಯು ಬಿಡಲಿಲ್ಲ ಮೋಹ ಸಡಿಲುವುದಿಲ್ಲ
ನಿರ್ಧರದಿ ನಿಜವು ತಾ ನಿಲುಕದಿಹುದೀಶ ೨

ಕಂಡ ಭಯ ಕಾಡುವುದು ಷಂಡತನವೋ ನನ್ನ
ಪಂಡಿತತ್ವಾಭಿಮಾನದ ಬಲವೊ ತಿಳಿಯೆ
ಪುಂಡರೀಕಾಕ್ಷ ನನ್ನೊಲವಿಗಿದಿರೆನಿಸದಿದು
ದಿಂಡುಗೆಡೆದಿಹೆನೀಗ ದಯಮಾಡು ಸ್ವಾಮೀ ೩

ನೀನೊಲಿದು ನಿರ್ಣಯವು ನಿಲುಕದಿಹುದೇಕೆ ಬಲು
ಮಾನಾವಮಾನಗಳು ತೊಲಗದಿಹವೇಕೆ
ಹೀನಕರ್ಮಂಗಳಲಿ ರುಚಿಗೆಡದೆಯಿಹುದೇಕೆ
ದೀನವತ್ಸಲನೆ ದಮ್ಮಯ ನಂಬಿದೆನು ೪

ನಿನ್ನವನು ನಾನಾಗಿ ನಿನ್ನಿದಿರೆ ರಿಪುಗಳಿಂ
ಬನ್ನಬಡಲೊದಗದಪವಾದವೆನಗೀಗ
ನನ್ನ ಕರ್ಮವದೆಂಬೆನೇ ಸ್ವತಂತ್ರತೆಯುಂಟೆ
ರನ್ನ ತಿರುಪತಿಯ ವೆಂಕಟ ನೀನೆ ಬಲ್ಲೆ ೫

ಓಂ ಸತ್ಯವಾಚೇ ನಮಃ

೧೧೭

ಪ್ರಾರ್ಥನೆ – ಕೃಷ್ಣ

ಹುಟ್ಟಿ ಹುಟ್ಟಿ ಹೊಂದಲಾರೆನಯ್ಯ ಕೃಷ್ಣನೆ ಯೀ
ಕಷ್ಟವನ್ನು ಬಿಡಿಸಿ ಕಾಯಬೇಕು ಕೃಷ್ಣನೆ ಪ

ಇಷ್ಟು ದಿವಸ ನಿನ್ನನರಿಯದಿದ್ದೆ ಕೃಷ್ಣನೆ ನೀನು
ದೃಷ್ಟಿಯಿಟ್ಟು ಹುಟ್ಟದಂತೆ ಮಾಡು ಕೃಷ್ಣನೆ ಅ.ಪ

ಗರ್ಭದೊಳು ನವಮಾಸ ಸಿಕ್ಕಿ ಕೃಷ್ಣನೆ ನೊಂದೆ
ನರ್ಭಕತ್ವದಲ್ಲಿ ಮುಗ್ಧನಾದೆ ಕೃಷ್ಣನೆ
ನಿರ್ಬಂಧವಾಯಿತು ವಿದ್ಯದಲ್ಲಿ ಕೃಷ್ಣನೆ ಮತ್ತೆ
ನಿರ್ಭರದ ಪ್ರಾಯದಲ್ಲಿ ಬೆರೆತೆ ಕೃಷ್ಣನೆ ೧

ಮದಗಳೆಂಟರಿಂದ ಮೈಯ ಮರೆತೆ ಕೃಷ್ಣನೆ ಬೇಗ
ಹುದುಗಿ ಕ್ಲೇಶವೈದರಲ್ಲಿ ಬಿದ್ದೆ ಕೃಷ್ಣನೆ
ವೊದಗಿ ಪಾಶವೆಂಟರಿಂದ ಬಿಗಿದೆ ಕೃಷ್ಣನೆ ಹಮ್ಮು
ಇದಕೆ ಮೂಲವಾಯಿತು ಕರ್ಮದಿಂದ ಕೃಷ್ಣನೆ ೨

ಅರಿಗಳಾರುವರಿಂದ ಕೊರಗುತಿಹೆನು ಕೃಷ್ಣನೆ ಮುಂದ
ನರಿಯದವರ ಸಂಗವನ್ನು ಮಾಡಿ ಕೃಷ್ಣನೆ
ಉರುಳಿಬಿದ್ದೆ ವಿಷಯಕೂಪದಲ್ಲಿ ಕೃಷ್ಣನೆ ಯಿದನು
ಪರಿವ ಶಕ್ತಿಯನ್ನು ಕಾಣೆನಯ್ಯ ಕೃಷ್ಣನೆ ೩

ಮಾಯಾಕಾರ್ಯ ದೇಹವೆನ್ನದೆಂದು ಕೃಷ್ಣನೆ ಅದು
ಹೇಯವೆಂದು ಕಾಣದಾದೆನಯ್ಯ ಕೃಷ್ಣನೆ
ನೋಯದಂತೆ ಪೋಷಣೆಯ ಮಾಡಿ ಕೃಷ್ಣನೆ ಯೀಗ
ನೋಯಲಾಗಿ ಭಯವು ಜನಿಸಿತಯ್ಯ ಕೃಷ್ಣನೆ ೪

ಹರಿವ ನದಿಯ ನಡುವೆ ಪರ್ಣ ಸಿಕ್ಕಿ ಕೃಷ್ಣನೆ ಸುಳಿಯ
ಬೆರಸಿ ತಡಿಯ ತಾನು ಸೇರದಂತೆ ಕೃಷ್ಣನೆ
ಕುರುಡ ಕೂಪವರಿಯದುರುಳುವಂತೆ ಕೃಷ್ಣನೆ ಕಾಲ
ಶರಧಿಯಲ್ಲಿ ಮುಳುಗಿ ನೆಲೆಯ ಕಾಣೆ ಕೃಷ್ಣನೆ ೫

ಇರುಹೆ ಕಡೆಯು ಬ್ರಹ್ಮನಾದಿಯಾಗಿ ಕೃಷ್ಣನೆ ಲೋಕ
ಮರುಳುಗೊಂಡು ಮಾಯೆಯಿಂದ ಮರುಗಿ ಕೃಷ್ಣನೆ
ಕೊರಗುತಿದೆ; ಮಾಯೆಯನ್ನು ದಾಟಿ ಕೃಷ್ಣನೆ ಬೇಗ
ಪರಮನೊಳು ಬೆರೆಸಿ ಕೊರಗ ಬಿಡಿಸು ಕೃಷ್ಣನೆ ೬

ರಜ್ಜು ಸರ್ಪನಾಗಿ ತೋರಿ ಬೆದರೆ ಕೃಷ್ಣನೆ ಅದರ
ಬೆಜ್ಜರವ ಪರಿವ ಮಂತ್ರವುಂಟೆ ಕೃಷ್ಣನೆ
ರಜ್ಜುವೆಂದು ತಿಳಿವುದೊಂದೆ ಮಂತ್ರ ಕೃಷ್ಣನೆ ಹಾಗೆ
ರಜ್ಜು ಸ್ಥಾನ ನಿನ್ನ ನಿಜವ ತೋರು ಕೃಷ್ಣನೆ ೭

ಕರ್ಮವೆ ಜನ್ಮಕ್ಕೆ ಹೇತುವೆನಲು ಕೃಷ್ಣನೆ ಅಂದು
ಬ್ರಹ್ಮವತ್ಸಪಾಲರಪಹರಿಸೆ ಕೃಷ್ಣನೆ
ಕರ್ಮವಿತ್ತೆ ಬದುಲ ನಿರ್ಮಿಸಲು ಕೃಷ್ಣನೆ ಹಾಗೆ
ಕರ್ಮವೆನ್ನದೀಗಲೆನ್ನ ಸಲಹು ಕೃಷ್ಣನೆ ೮

ದುರಿತ ದುಃಖದಿಂದ ನೋವ ಜನರ ಕೃಷ್ಣನೆ ಅವರ
ದುರಿತಗಳ ನೂಕಿ ನಿನ್ನೊಳಿರಿಸು ಕೃಷ್ಣನೆ
ತಿರುಪತೀಶ ದೇವ ವೆಂಕಟೇಶ ಕೃಷ್ಣನೆ ಮಾಯಾ
ತೆರೆಯ ತೆಗೆದು ನಿನ್ನ ನಿಜವ ತೋರು ಕೃಷ್ಣನೆ ೯

ಓಂ ಸತ್ಯಸಂಕಲ್ಪಾಯ ನಮಃ

೧೧೮

ಶರಣಾಗತಿ

ಎನಗೆ ಕಾರಣವೇನು ಪಾಪಕ್ಕೆ ಯಿನ್ನು
ನಿನಗೆ ಕಾರಣವೆಂಬ ಮಾತಿನ್ನದೇಕೆ ಪ

ಎನ್ನ ಸೃಷ್ಟಿಯ ಮಾಡ ಹೇಳಿದೆನೆ ಮತ್ತೆ
ಅನ್ನವನಿತ್ತುಣ್ಣ ಕಲಿಸೆಂದೆನೆ
ಮನ್ಮಥ ನೆಲೆಯಾಗಬೇಕೆಂದೆನೆ ಬೇಗ
ಕನ್ನೆಯೊಬ್ಬಳ ಮುಂದೆ ನಿಲಿಸೆಂದೆನೆ ಸ್ವಾಮಿ ೧

ಜಾತಾದಿ ಷೋಡಶ ಕರ್ಮಗಳ ನಿತ್ಯ
ಪ್ರೀತಿಯಿಂದಲಿ ಮಾಡಿ ಸ್ವರ್ಗಗಳ
ವ್ರೋತು ಪಾಪಗಳಿಂದ ನರಕಗಳ ಹೊಂದಿ
ಯಾತನೆಗೊಳಿಪಂತಾಗೆಂದೆನೆ ವಿಧಿಗಳ ೨

ಮಡದಿ ಮಕ್ಕಳು ಮನೆವಾರ್ತೆಯೆಂಬ ಬಲು
ತೊಡಕಿನೊಳನ್ಯರೆನ್ನವರೆಂತೆಂಬ
ಬಡಿಶಕ್ಕೆ ಸಿಲುಕಿಯೊದ್ದಾಡಿಕೊಂಬ ಯಿಂಥ
ಹೆಡಗುಡಿಯನು ಕಟ್ಟಿ ಕೊಲ್ಲೆಂದೆನೆ ಸ್ವಾಮಿ ೩

ಆಡಿಸಿದಂತೆ ನೀನಾಡುವೆನು ಯೀಗ
ನೋಡಿದರಿಲ್ಲ ಸ್ವತಂತ್ರವಿನ್ನೇನು
ಬೇಡಿಕೊಂಬೆನು ಪಾದಕ್ಕೆರಗೀಗ ನಾನು ನೀನು
ಕೂಡಿ ರಕ್ಷಿಸಬೇಕು ಕಪಟವಿನ್ನೇನು ೪

ಸೂತ್ರಧಾರಕ ನೀನು ಸಕಲಕ್ಕೆ ಮಾಯಾ
ಮಾತ್ರವೀ ಜಗವಿದನಾಡಲಿನ್ನೇಕೆ
ಪಾತ್ರ ಕೃಪೆಗೆ ನಾನು ಗುರು ನೀನಾಗಲ್ಕೆ ಸುಪ
ವಿತ್ರ ಚರಿತ್ರ ವೆಂಕಟ ಮರೆಹೊಕ್ಕೆನು ೫

ಓಂ ಸತ್ಯಭಾಮಾಧವಾಯ ನಮಃ

೧೧೯

ರಾಜೋಪಚಾರ

ರಾಜೋಪಚಾರ
ರಾಜೀವನೇತ್ರ ನೀನವಧರಿಸು ಬೇಗ ಪ

ಸಾವಿರದ ದಳವುಳ್ಳ ಕಮಲವೊಂದಕೆ ಶಕ್ತಿ
ಸಾವಿರದ ಮೌಕ್ತಿಕದ ಸರಗಳೊಪ್ಪಿಹವು
ಕಾವಿಹುದು ಸಕಲ ದೇವಾತ್ಮಕದ ಶಾರದೆಯು
ನಾ ವಹಿಸಿ ತುರಿಯ ಕಲಶದ ಛತ್ರವೆಂದೆಂಬ ೧

ಆವಗವು ಸತ್ವಾದಿ ಗುಣಗಳಿಂದೊಪ್ಪಿರುವ
ಆವರಣ ವಿಕ್ಷೇಪ ಶಕ್ತಿಯೆಂಬೆರಡು
ದೇವ ನಿನ್ನುಭಯ ಪಾರ್ಶ್ವದಲೊಲವುತಿಹ ಸರ್ವ
ಭಾವದಿಂದುಭಯ ಚಾಮರವೆರಡರಿಂದ ೨

ಗಂಧರ್ವ ನಗರದಿಂದ್ಯೆತಂದ ನಾರಿಯರು
ಛಂದದಿಂ ನರ್ತಿಸುತಲಿಹರ್ಯೆವರಿವರು
ಒಂದಾಗಿ ಬಳಿಕಿವರ ಹೊಂದಿ ಮತ್ತೈವರಿರೆ
ಹಿಂದೆ ನಾಲ್ವರುವೆರಸಿ ನಲಿವ ನರ್ತನವೆಂಬ ೩

ಪರವೆಂದು ನಾಭಿಯಲಿ ಪಶ್ಯಂತಿ ಹೃದಯದಲಿ
ಸ್ವರವಿಹುದು ಕಂಠದಲಿ ಮಧ್ಯಮಾಖ್ಯೆಯಲಿ
ಸ್ಫುರಿಸಿ ಮುಖಕಮಲದಲಿ ವೇದಶಾಸ್ತ್ರಗಳಾಗಿ
ಮೆರೆವ ವೈಖರಿಯೆಂಬ ಗೀತವಿದ ಕೇಳು ೪

ತಾಳ ಮರ್ದಳೆ ಘಂಟೆ ಭೇರಿ ಶಂಖಗಳಿಂದ
ಮೇಲಾದ ವೀಣೆ ವೇಣುಗಳ ರವದಿಂದ

ಲಾಲಿಸುವ ಛಿಣಿ ಛಿಣೀ ಛಿಣಿಗಳೆಂಬವರಿಂದ
ನೀಲ ಮೇಘಧ್ವಾನ ದಶನಾದದಿಂದ ೫

ಪರಿಪರಿಯ ಗತಿಯುಳ್ಳ ಚಿತ್ತವೆಂಬಶ್ವವನು
ವರ ಸತ್ವ ಗುಣವೆಂಬ ಹಲ್ಲಣವ ಬಿಗಿದು
ನಿರತ ಪರಮಾತ್ಮನೀಕ್ಷಣದ ಕಡಿವಾಣವನು
ಪಿರಿದಾಗಿಯಳವಡಿಸಿ ಮುಂದೆ ನಿಂದಿಹುದಾಗಿ ೬

ಒಲವುತಿಹ ಸುಖ ದುಃಖವೆರಡು ಘಂಟೆಗಳಿಂದ
ನೆಲನ ಸೋಕುವ ಕಾಮ ಸುಂಡಿಲದರಿಂದ
ಫಲ ಚತುಷ್ಟಯ ಪಾದ ಮೇಲು ಮಂಟಪದಿಂದ
ಬಲುಮೆಯಹ ಮೂಲ ಕಾರಣವೆಂಬ ಗಜವು ೭

ಹಿಂದೆಮುಂದರುವರೊಂದಾಗಿ ವಹಿಸಿರಲದಕೆ
ಹೊಂದಿಸಿದ ಚೌಕಿ ಮನವೆಂಬುದದರಲ್ಲಿ
ಮಂದ ಮೃದು ಬಹು ವಿಷಯ ಸುಖದ ಹಾಸಿಕೆ ಹಾಸಿ
ದಂದಳವಿದನುಭವದ ಕೊಂಬಿನಿಂದೊಪ್ಪಿರುವ ೮

ಆರು ನೆಲೆಯುಳ್ಳ ರಥವದಕೆ ಶಕ್ತಿಗಳೆಂಬ
ಮೂರು ಕಲಶಗಳಲ್ಲಿ ನಾಲ್ಕು ಸತ್ತಿಗೆಯು
ಮೂರವಸ್ಥೆಗಳದರ ತುರಿಯವೆಂಬುದೆ ನಾಲ್ಕು
ಮೂರುಲೋಕವನಾಳ್ವ ಮಹಿಮ ನೀ ಪ್ರತಿಗ್ರಹಿಸು ೯

ನುಡಿವುದೆಲ್ಲವು ವೇದ ನಡೆವುದೆಲ್ಲವು ಶಾಸ್ತ್ರ
ಬಿಡದೆ ನಿನ್ನಾಜ್ಞೆಯೊಳಗಿರೆ ಪುರಾಣ
ದೃಢವಾಗಿ ನಿನ್ನ ಭಜನೆಯ ಮಾಳ್ಪ ದಿವಸವದು
ಕಡುಪುಣ್ಯವಾದ ಪಂಚಾಂಗವೆನಿಸುವದು ೧೦

ಉದಯದಲಿ ನಿನ್ನ ಸ್ಮರಣೆಯ ಮಾಡೆ ಪುಣ್ಯತಿಥಿ
ಒದಗಿಸುವ ಸತ್ಕರ್ಮ ವಾರವೆನಿಸುವದು

ಅದರಲ್ಲಿಯನುಭವವೆ ನಕ್ಷತ್ರ ನಿನ್ನಲ್ಲಿ
ಹುದುಗೆ ಜೀವನು ಯೋಗ ಹುದುಗುವದೆ ಕರಣ ೧೧

ಸಕಲ ವೇದಂಗಳಲಿ ಪ್ರತಿಪಾದಿಸಿದ ಫಲವು
ವಿಕಳವಿಲ್ಲದೆ ನಿನ್ನ ನಿಮಿಷ ಧ್ಯಾನಿಸಲು
ಸಕಲ ತೀರ್ಥಸ್ನಾನ ದಾನ ಜಪ ತಪ ಯಜ್ಞ
ಸಕಲವೂ ಬಹುದೆಂಬ ಸರ್ವೋಪಚಾರ ೧೨

ಸುರ ಸಿದ್ಧ ಮುನಿವೃಂದ ನಿರತ ಸೇವಿತ ಚರಣ
ಶರಣಾಗತೋದ್ಧರಣ ಶರಧಿಜಾರಮಣ
ತಿರುಪತಿಯ ಸ್ಥಿರವಾಸ ನಿರುಪಮ ಮಹಾಕರುಣ
ಮರೆಯೊಕ್ಕೆ ಸಲಹೆನ್ನ ಪ್ರಾಣ ವೆಂಕಟರಮಣ ೧೩

ಓಂ ಜಯಿನೇ ನಮಃ

೧೨೦

ತೀರ್ಥ ವಿನಿಯೋಗ

ತೀರ್ಥವ ಜನರು ಕೊಂಬರೆ ಬನ್ನಿ ತೀರ್ಥವ ಜನರು ಪ

ಪಾರ್ಥಸಾರಥಿ ಭಕ್ತಪಾಲಕನಾಗಿರೆ
ಸ್ವಾರ್ಥವೆ ಬರುವುದು ಸಾರಿ ಸಮೀಪವ ಅ.ಪ

ಪಾದೋದಕವ ನಿಂತು ಪಡೆದು ಪ್ರಸಾದವ
ನಾದರಿಸಲು ನಿತ್ಯರಾಗುವಿರೀಗಲೆ ೧

ಸ್ವಾಮಿಯಾರೋಗಿಸಿದ ಶೇಷ ಸ್ವೀಕಾರದಿಂ
ಕಾಮಿತಾರ್ಥಗಳೆಲ್ಲ ಕೈವಶವಹವು ೨

ಚರಪುಗಳನು ಕೈಯ ಜೋಡಿಸಿ ಗ್ರಹಿಸಲು
ನಿರುಪಮ ತಿರುಪತಿನಾಥ ರಕ್ಷಿಪನಾಗಿ ೩

ಓಂ ಸುಭದ್ರಾ ಪೂರ್ವಜಾಯ ನಮಃ

೧೨೧

ತೀರ್ಥಪ್ರಸಾದ

ತೀರ್ಥಪ್ರಸಾದಕಪ್ಪಣೆಯ ಪಾಲಿಸೊ ದೇವ
ಸಾರ್ಥಕವಹುದು ನಿನ್ನರ್ಚನೆಯದರಿಂದ ಪ

ದುರಿತಕೋಟಿಗಳ ಹಿಂಗಿಸಿ ಮನೋಮಲಿನವ
ಪರಿದು ನಿರ್ಮಲತೆಯನ್ಯೈದಿಪುದು
ಪರಿಪರಿ ಭವ ಕೃತ ಪಾಪ ನಿಷ್ಕೃತಿ ನಿನ್ನ
ಚರಣಾಂಬುವೆಂದರುಹುತಲಿದೆ ಶ್ರುತಿತತಿ ೧

ಮೊದಲು ಪಾತ್ರಾಂತರದಲಿ ಗ್ರಹಿಸಿಯೆ ಯಂತ್ರ
ವಿಧಿಯಿಂದ ಬರೆದು ಬೀಜಾಕ್ಷರಂಗಳನು
ಹದಿನಾರೆಂಟಾವರ್ತಿ ಜಪಿಸಿ ಮೂಲವನೆತ್ತಿ
ವದನದಿಂ ಬಿಂದು ಸೂಸದವೋಲ್ಸೇವಿಪ ಹಾಗೆ ೨

ಮೂರಾವರ್ತಿಯೊಳಿಂತು ಸೇವಿಸಿ, ಶಿರದಲ್ಲಿ
ಸೇರಿಸಿ, ಬೇರೆ ಹಸ್ತವ ಮಾರ್ಜಿಸಿ
ಸಾರಿಸಿ ತಡವಿ ತನುವ ಧನ್ಯನಹೆನು ಸಂ
ಸಾರಸಾಗುವ ದಾಂಟಿಸುವರೆ ಜಗದೀಶ ೩

ಚರಣದಂಗುಟದಿಂದ ಚಿಮ್ಮಿದ ತುಲಸಿಯು
ಬೆರೆದ ಪುಷ್ಪವು ಬಂತೆನ್ನೊರೆಗೆ ಸರ್ವೇಶ

ಹರುಷದಿಂ ನಿನ್ನಡಿ ಸರಸಿಜಯುಗಳವ
ಮರೆಯೊಕ್ಕ ದೀನನೊಳ್ಕರುಣ ಬಂದುದೆ ಕೃಷ್ಣಾ ೪

ತಿರುಪತಿನೆಲೆವಾಸ ವರದವೆಂಕಟೇಶ
ಗುರು ವಾಸುದೇವಾರ್ಯನಾಗಿಯೆ ನೀನೆ
ಅರುಹಿದ ಮತ ಪಿಡಿದಿರುವೆನು ತ್ವನ್ನಾಮ
ಸ್ಮರಣೆ ಮಾತ್ರವನಿತ್ತು ಪೊರೆಯಬೇಕೆನ್ನನು ೫

ಓಂ ಜಿಷ್ಣವೇ ನಮಃ

೧೨೨

ಧನ್ಯತೆ

ಧನ್ಯನಾದೆನಯ್ಯ ನಾನು ಧನ್ಯನಾದೆನು
ಅನ್ಯಮಾರ್ಗವನುಳಿದು ನಿನ್ನ ಭಕ್ತ ಭಕ್ತನಾಗಿ ಪ

ನಿನ್ನ ಮೂರುತಿಯ ನೋಡಿ ನಿನ್ನ ಗುಣವ ಕೊಂಡಾಡಿ
ನಿನ್ನ ನಾಮಗಳ ಪಾಡಿ ನಿನ್ನ ಮುಂದೆ ಕುಣಿದಾಡಿ ೧

ಆವ ಜನ್ಮಾರ್ಜಿತ ಪುಣ್ಯ ತಾವೊದಗಿತೊ ನಾ ಕಾಣೆ
ನೀವೊಲಿದರೆ ದುರ್ಲಭ ವಾವುದೀ ಮೂರು ಲೋಕದಿ ೨

ತಿರುಪತಿ ಕ್ಷೇತ್ರಾಧಿವಾಸ ಪರಮಪುರುಷ ವೆಂಕಟೇಶ
ಗುರು ವಾಸುದೇವಾರ್ಯ ವೇಷ ಮರೆಯೊಕ್ಕೆ ನಾ ನಿನ್ನ ದಾಸ ೩

ಓಂ ಭೀಷ್ಮ ಮುಕ್ತಿಪ್ರದಾಯಕಾಯ ನಮಃ

೧೨೩

ಭಕ್ತರ ನಿರ್ಗಮನ

ಗಮಿಸಿ ಜನರು ನಿಮ್ಮ ಗೃಹಗಳಿಗೆ ಯೀಗ
ರಮೆಯರಸಗೆ ನಿದ್ರೆ ರಾಜಿಪುದಾಗಿ ಪ

ನಿಜರೂಪನಾಗಿದ್ದು ನಿಖಿಳವ ನಿರ್ಮಿಸಿ
ರುಜುವಾಗಿ ಜೀವರ್ಗೆ ರಾಗವ ಸಲಿಸಿ
ಭಜಿಸಲು ತನ್ನನು ಬಹು ರೂಪಗಳ ತಾಳಿ
ಯಜನ ತೀರಲು ನಿದ್ರೆಗೈದುವನಾಗಿ ೧

ಸರಸಿಜೋದ್ಭವನಾಗಿ ಸೃಷ್ಟಿಸಿ ಲೋಕವ
ಧರಿಸಿ ಸತ್ವವ ಹಾಗೆ ದೇವನು ಕಾಯ್ದು
ಎರಗಿದವರಿಗಿಷ್ಟವೀಯುತ ಸರ್ವತ್ರ
ಚರಿಸುವನೀ ಶ್ರಮಶಮವಾಗಲಿ ೨

ವರಿಸುವ ಜನರೀತಗೊಬ್ಬರಲ್ಲಮಿತವು
ನೆರೆದಿರೆ ವರಗಳ ನೀಡುವ ದಿಟವು
ವರದ ಶ್ರೀ ತಿರುಪತಿ ವೆಂಕಟಗಿರಿಪ್ರಭುವು
ವರಿಸಲಿ ನಿದ್ರೆಯ ಪರೆಯಲೋಲಗವು ೩

ಓಂ ಜಗದ್ಗುರವೇ ನಮಃ

೧೨೪

ಪಾದಪದ್ಮದೀಕ್ಷಣದ ಸುಖ

ಕಂ॥ ಅಗಲಲು ಬಾರದೆ ಮನ ದೃ
ಗ್ಯುಗಳವು ಹರಿಪಾದಪದ್ಮದಿ ನೆಲಸೆ ಭಕ್ತರ್

ತೆಗೆಯದೆ ತಿರುಪತಿ ವೆಂಕಟ
ನಗನಾಥನ ಬೇಡಿಕೊಳ್ಳುತಿಹರೀ ಪರಿಯಿಂ

ಈ ಪಾದಪದ್ಮದೀಕ್ಷಣದ ಸುಖವೇ ಸಾಕು
ಗೋಪಾಂಗನೆಯರ ಮನಕಮೃತರೂಪಾಗಿರುವ ಪ

ಪದ್ಮವರಳಿದ ಪರಿಯ ಮೃದುವಾಗಿ ತೋರಿಸುವ
ಪದ್ಮಜೆಗೆ ನಿತ್ಯವಾಶ್ರಯವೆನಿಸುವ
ಪದ್ಮಭವ ನೆರೆತೊಳೆದು ಪೂಜಿಸಿದುದೀ ಲೋಕ
ಪದ್ಮಕಾಶ್ರಯವಾಗಿ ತದ್ರೂಪವಾಗಿರುವ ೧

ಲೋಕಪಾವನ ಗಂಗೆಯನು ಪಡೆದುದೀ ಪಾದ
ಜೋಕೆಯೊಳಗಹಿ ಶಿರದಿ ನೆರೆ ನರ್ತಿಸಿದುದು
ಬೇಕೆಂದು ಯೋಗಿಗಳ ಹೃದಯಕಮಲದಿ ನೆಲಸಿ
ನೂಕಿ ಭಕ್ತರ ಭವವ ರವಿಯಂತೆ ಹೊಳೆಯುತಿಹ ೨

ಗೋಪಾಲ ಗೋವುಗಳ ಬಳಿವಿಡಿದು ಸಂಚರಿಸಿ
ಗೋಪಿಯರ ಮನೆಯ ಪಾಲ್ಬೆಣ್ಣೆ ಬಯಸಿ
ಗೋಪ್ಯದಲಿ ನಡೆದವರ ಮನಕಗೋಚರವೆನಿಸಿ
ಗೋಪರೊಡೆಯನ ಮನೆಗೆ ಬಂದು ನೆಲಸುತಲಿರುವ ೩

ಬಲಿಯ ದಾನವ ಬೇಡಿ ಶಿಲೆಯ ಸತಿಯನು ಮಾಡಿ
ನೆಲನೊತ್ತಿ ಕೌರವನ ಮಕುಟ ಸೋಕಿ
ಥಳಥಳನೆ ಬೆಳಗಿ ತತ್ಸಭೆಯ, ವಿದುರನ ಮನೆಗೆ
ನಲವಿಂದ ನಡೆದವನ ಸಲಹಿದತಿ ಕೋಮಲದ ೪

ಸುರರು ವಂದಿಸಲವರ ಶಿರದ ಪುಷ್ಪದ ರಾಶಿ
ಸುರಿದು ತಾರಾ ಮಧ್ಯ ಚಂದ್ರನಂತೆ
ನೆರೆಮೆರೆವ ಗುರು ವಾಸುದೇವ ರೂಪಿನಲಿರುವ
ತಿರುಪತಿಯ ವೆಂಕಟನ ದಿವ್ಯ ಮಂಗಳ ಪಾದ ೫

ಓಂ ಜಗನ್ನಾಥಾಯ ನಮಃ

೧೨೫

ಶಯನ ಸಮಯ

ಕಂ॥ ಸಂದಣಿ ಹರೆಯದೆ ಭಕ್ತರ
ವೃಂದವು ಕೈವಾರಿಸುತ್ತ ಬರಲೆಡಬಲದೊಳ್
ಇಂದಿರೆ ಧರಣಿಯು ಸಹಿತಾ
ಮಂದಸ್ಮಿತಮುಖನು ನೋಡುತ್ಕೈತಹನೊಲವಿಂ

ದೇವ ಶಯನಕೆ ಬರುವ ಸಮಯ ಬಳಿಕೀಗ
ದೇವತೆಗಳೆಲ್ಲರನು ಕಳುಹಿ ನಿಜ ಮಂದಿರಕೆ ಪ

ಶ್ರೀದೇವಿ ಭೂದೇವಿಯರು ತಮ್ಮ ಕರಗಳಲಿ
ಆದಿಪುರುಷನ ಕರಗಳನು ಪಿಡಿದು ಮುದದಿ
ಮಾಧವನ ಮುಖಪದ್ಮವನು ನೋಡಿ ಹರುಷದಲಿ
ವೇದವೇದ್ಯನ ಪೀಠದಿಂದಿಳಿಸಿ ತರುತಿಹರು ೧

ಸನಕಾದಿ ಭಾಗವತ ಜನರುಗಳ ಮದಲಿ
ಇನಕೋಟಿ ತೇಜನತಿ ಕರುಣ ರಸವೆರಸಿ
ಮನದೊಳಹ ಮೂರ್ತಿ ತಾ ನಿರಿಟ್ಟು ಮತ್ತೀಗ
ಮನದೊಳಗೆ ನೆಲಸುವಂದದಿ ಮುಂದೆ ನಿಂದಿಹನು ೨

ತನ್ನಿಂದ ನಿರ್ಮಿಸಿದ ಫಲಪತ್ರಗಳ
ಮನ್ನಿಸುತ ಭಕ್ತಿಯಲಿ ಭಕ್ತರಿತ್ತುದನು
ಉನ್ನತದ ಪದವಿಯನು ಬಳಿಕಿತ್ತು ಬರುತಿಹನು
ಪನ್ನಗಾರಿಧ್ವಜನು ತಿರುಪತಿಯ ವೆಂಕಟನು ೩

ಓಂ ವೇಣುನಾದ ವಿಶಾರದಾಯ ನಮಃ

೧೨೬

ಪಾದವೆಚ್ಚರಿಕೆ

ಪಾದವೆಚ್ಚರಿಕೆ
ವೇದವೇದ್ಯನೆ ವರದ ವೆಂಕಟೇಶ್ವರನೆ ಪ

ಹದಿನಾಲ್ಕು ಲೋಕಗಳ ಹರಹಿಗಾಶ್ರಯ ಪಾದ
ಚದುರಿಂದ ಜೀವರೊಳು ಚರಿಪ ಪಾದ
ಹದವರಿತು ಸರ್ವವನು ಹೊಂದಿ ಹೊರೆಯುವ ಪಾದ
ಒದಗಿ ಮುನಿಗಳ ಮನದಲೊಲಿದಿರುವ ಪಾದ ೧

ಸುರರ ಮಣಿಮಕುಟಗಳು ಸೋಕಿ ಶೋಭಿಪ ಪಾದ
ಪರಮ ಪಾವನೆ ಲಕ್ಷ್ಮಿ ಪಿಡಿದೊತ್ತುವ ಪಾದ
ಧುರದಿ ನರರಥವೇರಿ ದೇದೀಪಿಸಿದ ಪಾದ
ಹರಿವೈರಿಕರಗಳಲಿ ಹೊಳೆವ ಪಾದ ೨

ಸಿರಿಯುಳ್ಳ ಕುರುಪತಿಯ ಶಿರವೆರಗಿಸಿದ ಪಾದ
ಪರಿದು ನಾಗನ ಶಿರಗಳೊಳು ಹೊಳೆದ ಪಾದ
ಅರವಿಂದಮುಖಿಯರೊಡನತಿ ನರ್ತಿಸಿದ ಪಾದ
ನೆರೆ ಜರೆದ ಶಿಶುಪಾಲನ್ನೊಳಗಿಟ್ಟ ಪಾದ ೩

ಕರುಗಳೊಡಗೂಡಿ ಕಾನನದಲಾಡಿದ ಪಾದ
ಕರುಣದಿಂ ಪಾಂಡವರ ಕಾಯ್ದ ಪಾದ
ಮರೆಯೊಕ್ಕ ಸುಜನರಿಗೆ ಮುಕ್ತಿಗೊಡುತಿಹ ಪಾದ
ಸ್ಮರಿಸಲಘರಾಶಿಗಳ ಸಂಹರಿಪ ಪಾದ ೪

ಬಲಿ ಯಜ್ಞವಾಟಕ್ಕೆ ಬಂದು ನೆಲಸಿದ ಪಾದ
ಬಲು ಬೆಳೆದು ಲೋಕಗಳ ಬಂಧಿಸಿದ ಪಾದ
ಕಲಕಿ ಗಂಗೆಯ ಧರೆಗೆ ಕೋಡಿವರಿಸಿದ ಪಾದ
ಸುಲಭದಿಂ ಭಕ್ತರಿಗೆ ಸುಖವೀವ ಪಾದ ೫

ಧ್ವಜರೇಖೆಯಿಂ ಕೂಡಿ ಥಳಿಥಳಿಸುತಿಹ ಪಾದ
ವಿಜಯವಹ ವಜ್ರದಿಂದೊಪ್ಪುತಿಹ ಪಾದ
ಗಜವ ಶಿಕ್ಷಿಪಮುದ್ರೆ ಗೋಚರಿಸುತಿಹ ಪಾದ
ನಿಜಪದ್ಮದಿಂ ಲೋಕನಿಧಿಯಾದ ಪಾದ ೬

ಅರೆಯಾದ ಸತಿಯನಂಗನೆಯ ಮಾಡಿದ ಪಾದ
ಧರೆಯ ಧರಿಸಿಹ ಶೇಷ ಧ್ಯಾನಿಸುವ ಪಾದ
ತರುಣನಾಯಕ ಪುರದಿ ಸ್ಥಿರದಿ ನೆಲಸಿದ ಪಾದ
ತಿರುಪತಿಯ ವೆಂಕಟೇಶ್ವರ ನಿಮ್ಮ ಪಾದ ೭

ಓಂ ವೃಷಭಾಸುರ ವಿಧ್ವಂಸಿನೇ ನಮಃ

೧೨೭

ಪರಾಕು

ಶ್ರೀಕರ ಚರಿತನೆ ಕರುಣಾ
ಲೋಕನದಿಂ ನೋಡಿ ನಮ್ಮ ರಕ್ಷಿಪ ಸ್ವಾಮಿಯೆ
ಯೀ ಕಡೆಗೆ ತಿರುಗಲೀಕ್ಷಣೆ
ನಾಕಾಧಿಪವಂದ್ಯ ಗೋವಳರಾಯ ಪರಾಕು ||ಕಂದ|| ೧

ಗುಂಜಾಭರಣದ ಚೆಲುವನ
ಮಂಜೀರಾಭರಣದ ಪಾದಪದ್ಮನೆ ನಮ್ಮಯ
ಸಂಜೀವನ ನೋಡು ನಮ್ಮನು
ಕಂಜಾಕ್ಷನೆ ಬಾಲಕೃಷ್ಣರಾಯ ಪರಾಕ್ಕೆ ೨

ಉದಯೆಲಿ ಗೋವು ಗೋವಳ
ರೊದಗಲು ವನಕೈದಿಯಾಡಿ ಬಂದ್ಯೆಯೆನ್ನುತ
ಪದಕೆರಗುವರೆಡ ಬಲದೊಳು
ಸುದತಿಯರೆಲೆ ಮುದ್ದು ಮೋಹನ ಕೃಷ್ಣ ಪರಾಕು ೩

ಓಂ ಬಾಣಾಸುರ ಕರಾಂತಕಾಯ ನಮಃ

೧೨೮

ವನಿತೆಯರ ಆರತಿ

ಕಂ॥ ಸಿರಿಧರಣಿಯರೊಡೆವೆರಸಿಯೆ
ತಿರುಪತಿಯಧಿನಾಥನೊಲಿದು ಶಯ್ಯಾಸನದೊಳ್
ಯಿರುತಿರೆ ಸತಿಯರು ಹರುಷದಿ
ಪರಿಪರಿಯಾರತಿಯನೆತ್ತಿ ನಡೆದರು ಮುದದಿಂ

ಆವ ಜನ್ಮದ ಪುಣ್ಯ ಫಲಿಸಿತು ನಮಗೆ
ದೇವಾಧಿದೇವ ಬಂದನು ನಮ್ಮ ಮನೆಗೆ ಪ

ನೆನೆಯಲು ಮನದೊಳು ನೆಲೆಗೊಂಡನಮ್ಮ
ಸನಿಯಕೆ ಕರೆದರೆ ಯಿದಿರಾದನಮ್ಮ
ಮನದ ಮಧ್ಯಕೆ ಮತ್ತೆ ಬರುವ ಕಾಣಮ್ಮ
ವನಿತೆಯರಾರತಿಯ ತಂದೆತ್ತಿರಮ್ಮಾ ೧

ಪಾದವ ತೊಳೆದು ಪನ್ನೀರಿಂದ ನಾನು
ಆದರದಿಂ ಹಸ್ತಕಿತ್ತು ಹಸ್ತವನು
ಪಾದಾವಧಾನವ ಪೇಳಲ್ಕೈದಿದನು
ಮೋದದಿಂದಾರತಿಯಾ ತಂದೆತ್ತಿರಮ್ಮಾ ೨

ತಿರುಪತಿಯಿಂದ ಭಕ್ತರ ಪಾಲಿಸಲೆಂದು
ವರದ ವೆಂಕಟರಾಯ ತಾ ಬಂದನಿಂದು
ಗುರುವಾಸುದೇವಾರ್ಯನಾದನೀ ಬಂಧು
ತರುಣಿಯರಾರತಿಯ ತಂದೆತ್ತಿರಮ್ಮಾ ೩

ಓಂ ಯುಧಿಷ್ಠಿರಪ್ರತಿಷ್ಠಾತ್ರೇ ನಮಃ

೧೨೯

ಸುರಸತಿಯರ ಆರತಿ-ಶೋಭನೆ

ಕಂ॥ ಪರೆದುದು ಜನತತಿ ಶ್ರೀಹರಿ
ವರಶಯ್ಯಾಸನದಲಿಪ್ಪ ಸಮಯದಲೆನ್ನಾ
ಪರಿಯನು ಬಿನ್ನವಿಸುವೆ ನಾಂ
ಸಿರಿಚರಣವನೊತ್ತುತೊತ್ತುತೆಮ್ಮರಸನಿಗೇ

ಆದಿತ್ಯವಾರದರ್ಚನೆ
ಯಾದುದು ನಿನ್ನೊಲವಿನಿಂದ ಬಿನ್ನಹವಿದ ನೀ
ನಾದರಿಸಿ ಸಲಹು ತಿರುಪತಿ
ಭೂಧರ ಶುಭದಿವ್ಯಸದನ ವೆಂಕಟರಮಣಾ

ಸಿರಿಧರಣಿಯರೊಡೆವೆರಸಿ ಹರುಷದಿ ವೆಂಕಟಪತಿಯು
ಇರೆ ಹಂಸತಲ್ಪದೆಡೆಯಲ್ಲಿ ಸುರಸತಿಯರು
ಕುರುಜಿನಾರತಿಯಾ ಬೆಳಗಿದರು ಶೋಭನವೆ ೧

ವೇದವನುದ್ಧರಿಸಿದಗೆ ಭೂಧರವನು ತಾಳ್ದವಗೆ
ಮೇದಿನಿಯನೆತ್ತಿ ನಿಲಿಸಿದಗೆ ನಿಲಿಸಿದ ವೆಂಕಟಪತಿಗೆ
ಮೋದದಲಾರತಿಯಾ ಬೆಳಗಿದರು ಶೋಭನವೆ ೨

ನರಹರಿ ರೂಪಾದವಗೆ ಧರಣಿಯನಳೆದಾ ಹರಿಗೆ
ದುರುಳ ಕ್ಷತ್ರಿಯರಾ ತರಿದವಗೆ ತರಿದಾ ವೆಂಕಟಪತಿಗೆ
ತರುಣಿಯರಾರತಿಯಾ ಬೆಳಗಿದರು ಶೋಭನವೆ ೩

ಜಾನಕಿಯನು ವರಿಸಿದವಗೆ ಧೇನುಕನನು ಬಡಿದವಗೆ
ಮಾನಿನಿಯರ ವ್ರತವನಳಿದವಗೆ ಅಳಿದಾ ವೆಂಕಟಪತಿಗೆ
ಜಾಣೆಯರಾರತಿಯಾ ಬೆಳಗಿದರು ಶೋಭನವೆ ೪

ತುರುಗವನೇರಿದ ಹರಿಗೆ ಶರಣಾಗತವತ್ಸಲಗೆ
ತಿರುಪತಿಯ ಕ್ಷೇತ್ರದರಸಗೆ ಅರಸ ವೆಂಕಟಪತಿಗೆ
ಪರಿಪರಿಯಾರತಿಯಾ ಬೆಳಗಿದರು ಶೋಭನವೆ ೫

ಓಂ ಬರ್ಹಿಬರ್ಹಾವತಂಸಕಾಯ ನಮಃ

೧೩೦

ಬಿನ್ನಹಗಳು

ಕಂ॥ ಇಂದುವಿನ ವಾರದರ್ಚನೆ
ಸಂದುದು ನಿನ್ನಡಿಗಳಿಂಗೆ ಗ್ರಹಗತಿ ಸೂಚಿಸೆ
ಹಿಂದಣ ಕರ್ಮದ ಫಲವನು
ಸಂದೇಹವು ಬಿಡದು ಬಿಡಿಸು ವೆಂಕಟರಮಣನೆ

ದುರಿತವನು ಪರಿಹರಿಸು ಸ್ಥಿರಭಕ್ತಿಯಿರಿಸು
ತಿರುಪತಿಯ ಸ್ಥಿರವಾಸ ಶ್ರೀ ವೆಂಕಟೇಶ ಪ

ಭಯವಾಗುತಿದೆ ದೇವ ಭಯಬಿಡಿಸುತಿರೆ ಕರ್ಮ
ಭಯವಿಲ್ಲದಿರುವದೆಂತು
ಭಯನಿವಾರಕನಾಮ ಭಯತಿಮಿರ ರವಿಯಹುದು
ಭಯ ಹೋಗಿ ಸ್ಥಿರವಾಗಿ ಮನ ನಿಲ್ಲದಿಹುದು ೧

ಪರಮ ಯೋಗ್ಯನಿಗೊಂದು ಪಿರಿದಾದ ದುಃಖವಿದೆ
ಪರಿಹರಿಸದಾವ ವಿಧದಿ
ಕರಗಿ ಕಂದುತಲಿರಲು ಬಿರಿಸು ಕರ್ಮದ ಗತಿಯು
ನರಹರಿಯೆ ಮಹಿಮೆಯನು ನೆರೆ ತೋರಿಸೀಗ ೨

ಭಜನೆಯನು ಮಾಡಿದರೆ ಭಜನೆ ಕಾಮನೆಯಾಗಿ
ನಿಜ ದೊರಕದೆಂಬ ಭಯವು

ಭಜಿಸಿ ಪಾಪವ ಕಳೆಯೆ ಭಜನೆಯದಕಾಗುವುದು
ಭಜನೆ ದೇಹದಿ ನಿಂದು ಭವ ತಾನು ನಿಲ್ಲುವುದು ೩

ಕರ್ಮಕೀ ಪರಿ ಬಲವು ಧರ್ಮವಾಗಿರೆ ಬಲಿತು
ಕರ್ಮವೇ ಬೆಳೆಯುತಿಹುದು
ಮರ್ಮವರಿತರು ಬಿಡದು ಹೆಮ್ಮೆಯದು ಬಲ್ಲವಿಕೆ
ಧರ್ಮ ಬರುವದು ನಿನಗೆ ಕರ್ಮವಿದ ಕಡೆಗೊಳಿಸು ೪

ಇಚ್ಛೆಯಿಂದಿದ ಸೃಜಿಪೆ ಯಿಚ್ಛೆಯಿಂ ಪರಿಹರಿಪೆ
ಇಚ್ಛೆಯೇ ತೋರುತಿಹುದು
ಇಚ್ಛೈಸಿ ನಿನ್ನಡಿಯನಚ್ಯುತನೆ ಭಜಿಪರಿಗೆ ೫
ತುಚ್ಛವಾದೀ ಕರ್ಮ ಬಿಚ್ಚದಿಹುದೇನು

ಗರ್ವ ಬರುವದು ಜನಕೆ ಸರ್ವಗತನೆನಿಸಿದರೆ
ನಿರ್ವಹಿಪೆನೆನಲು ಹೀಗೆ
ಸರ್ವೇಶ ನೀನೊಲಿದು ಸರ್ವದೋಷವ ಕಳೆಯೆ
ಗರ್ವವೆಡೆಗೊಳ್ಳದೈ ಪೂರ್ವದವನೆನಿಸು ೬

ಸೂತ್ರವನು ನಿರ್ಮಿಸಿದೆ ಸೂತ್ರ ನಿನ್ನಾಧೀನ
ಸೂತ್ರಕ್ಕೆ ಶಕ್ತಿಯೆಂತು
ಯಾತಕೀ ಕರ್ಮಗತರನು ಮಾಡಿ ಜನರುಗಳ
ಪಾತಕರು ಹೊರಗೆಂದು ಯಾತನೆಯ ಮಾಳ್ಪೆ ೭

ಮೃಷೆಯೆಂದ ಮಾತ್ರದಲಿ ಮೃಷೆಯಾಗದೀ ದುಃಖ
ವಿಷಮವೇ ಬಳಲಿಸುವದು
ವಿಷವು ಮೊದಲಾಗಿ ತದ್ವಿಷಮ ಕರ್ಮದಿ ಹರವು
ವಿಷಮವಿದು ನಿನ್ನ ನಿಜದಲಿ ತೊಲಗದೆಂತು ೮

ಕರುಣಾಕರನೆ ನೀನು ಗುರುಮುಖದಿ ಕರ್ಮಗಳ
ಬರಸೆಳೆದು ಬಯಲಮಾಡೆ
ಮರೆವೆಯಾವರಣವಿರಬೇಕೆ ತಿರುಪತಿವಾಸ
ವರದ ಶ್ರೀ ವಾಸುದೇವಾರ್ಯ ವೆಂಕಟರಮಣ ೯

ಓಂ ಪಾರ್ಥಸಾರಥಯೇ ನಮಃ

೧೩೧

ಶ್ರೀ ಕೃಷ್ಣ ಪಾರಮ್ಯ

ಕಂ|| ಮಂಗಳವಾರದ ಪೂಜೆಗೆ
ಮಂಗಳ ನೈರುತ್ಯದಲ್ಲಿ ಶಿವನಪ್ಪಣೆಯಿಂ
ಮಂಗಳ ನಾಮವ ಜಪಿಸುತ
ಮಂಗಳವನ್ನೀಯುತೆಮಗೆ ಶೋಭಿಸುತಿಪ್ಪಳ್

ನಿನ್ನ ಚರಣವ ನಂಬಿ ಭಜಿಸುತಿಹ ಭಕ್ತನಿಗೆ
ಬಿನ್ನಂಟೆ ಗ್ರಹಗತಿಗಳು ಕೃಷ್ಣಾ ಪ

ಉನ್ನತದ ಚಕ್ರವರ್ತಿಯ ಹೊಂದಿ ಬದುಕುವನಿ
ಗನ್ಯರಟ್ಟುಳಿ ಬರುವದೇ ಕೃಷ್ಣಾ ಅ.ಪ

ನೀನೊಬ್ಬನೇ ದೇವನೆಂದು ಪೇಳುತಲಿಹುದು
ಸಾನುನಯವುಳ್ಳ ಶ್ರುತಿಯು ಕೃಷ್ಣಾ
ಏನೊಂದು ರೂಪಾಗಿ ತೋರಿದರು ಸಕಲವೂ
ನೀನಲ್ಲದನ್ಯವುಂಟೇ ಕೃಷ್ಣಾ
ಏನೆಂಬೆ ಚಿನ್ನ ಹಲವಂದದಾಭರಣದಲಿ
ಕಾಣಿಸಿದರದು ಭೇದವೇ ಕೃಷ್ಣಾ
ನೀನೇ ದೇವಾತ್ಮಕನು ನೀನೆ ಗ್ರಹರೂಪಕನು
ನೀನೊಲಿದ ನರಗೆ ಭಯವೇ ಕೃಷ್ಣಾ ೧

ಉತ್ತವನು ಬಿತ್ತುವನು ಬಿತ್ತಿದವನುಂಬವನು
ಮತ್ತೊಬ್ಬನದಕೆ ಬಹನೇ ಕೃಷ್ಣಾ
ಉತ್ತು ಬಿತ್ತಿದೆ ಮಾಯೆಯೆಂಬ ಕ್ಷೇತ್ರದಿ ನಿನ್ನ
ಚಿತ್ತೊಂದು ಬೀಜವನ್ನು ಕೃಷ್ಣಾ
ಬಿತ್ತು ವೃಕ್ಷಾಕಾರವಾದಂತೆ ಲೋಕವಿದು

ವಿಸ್ತರದಿ ಬಹುವಾಯಿತು ಕೃಷ್ಣಾ
ಬಿತ್ತಿ ಬೆಳೆದುಂಬಾತನುತ್ತಮನು ನೀನಿರಲು
ಮತ್ತೊಂದು ಭಯವದೇಕೆ ಕೃಷ್ಣಾ ೨

ಇಂದ್ರಾದಿ ದಿಕ್ಪಾಲಕರ ರೂಪನಾಗಿರುವೆ
ಚಂದ್ರಾದಿ ಗ್ರಹರೂಪನು ಕೃಷ್ಣಾ
ಇಂದ್ರ ಚಂದ್ರಾದಿತ್ಯ ವರುಣಾದ್ರಿ ಗಗನಾದಿ
ಇಂದ್ರಿಯಾಧೀಶ ನೀನೆ ಕೃಷ್ಣಾ
ಇಂದ್ರಿಯಾಧೀನರಾಗಿರುವರರಿಯರು ನಿನ್ನ
ಮಂದಬುದ್ಧಿಯ ಮೂಢರು ಕೃಷ್ಣಾ
ತಂದ್ರಿಯನು ಪರಿಹರಿಸಿ ಹೊಂದಿ ನಿನ್ನನು ಭಜಿಪ
ಛಂದವನು ನೀ ತೋರಿಸು ಕೃಷ್ಣಾ ೩

ಒಡೆಯನೊಬ್ಬನು ಜಗಕೆ ಬಳಿಕಾತನಾಜ್ಞೆಯಲಿ
ನಡೆವರೆಲ್ಲರು ಮೀರದೆ ಕೃಷ್ಣಾ
ನಡೆಯಲರಿಯದು ಹಲಬರೊಡೆಯರಾಗಲು ನೀತಿ
ಕೆಡುವುದದು ಕದನಮುಖದಿ ಕೃಷ್ಣಾ
ನುಡಿದು ಭೇದವ ನಿತ್ಯ ಕದನವನು ಮಾಡುತಿಹ
ಜಡರ ಮಾತದು ಸತ್ಯವೇ ಕೃಷ್ಣಾ
ಬಿಡಿಸಿ ಭೇದವನೊಬ್ಬನೊಡೆಯನೆಂದುರು ಸಾರ್ವ
ಸಡಗರದ ಶ್ರುತಿ ನಿತ್ಯವು ಕೃಷ್ಣಾ ೪

ಬಿಡದೆ ನಿನ್ನಂಘ್ರಿಯನು ದೃಢವಾಗಿ ಭಜಿಸುವರು
ಜಡತೆಯಳಿದ ಮಹಾತ್ಮರು ಕೃಷ್ಣಾ
ಬಿಡುವದವರಿಗೆ ಲೋಕ ನಡೆವ ನಡತೆಯ ಭ್ರಮೆಯು
ನಡತೆಯದು ನಿನ್ನ ನಿಜವು ಕೃಷ್ಣಾ
ನಡೆದು ಬಳಿಕಾ ಮಾರ್ಗವನು ಹೊಂದಿದವ ನಿಪುಣ
ಬಿಡಬೇಕು ಮೂಢಮತವ ಕೃಷ್ಣಾ

ಪೊಡವಿಯೊಳು ತಿರುಪತಿಯ ವಾಸ ವೆಂಕಟರಮಣ
ಕೊಡು ನಿನ್ನ ಭಜಿಪ ಮತಿಯ ಕೃಷ್ಣಾ ೫

ಓಂ ಅವ್ಯಕ್ತ ಗೀತಾಮೃತ ಮಹೋದಧಯೇ ನಮಃ

೧೩೨

ಪ್ರಾರ್ಥನೆಗಳು – ಆತ್ಮನಿವೇದನೆಗಳು

ನೀನೇ ಗತಿಯೆನಗಿನ್ನು ದೀನನಾದೆನು ಬಹಳ
ನೀನಲ್ಲದಾರು ಬಳಿಕಾ ದೇವಾ
ಏನು ಸಾಧನವುಂಟು ಪ್ರತ್ಯರ್ಥಗೋಚರವೆ
ಧ್ಯಾನಧಾರಣೆ ದೂರವು ದೇವಾ ಪ

ಕಾಣದೇ ನಿನ್ನಂಘ್ರಿಕಮಲವನು ಭವವೆಂಬ
ಕಾನನಕೆ ಗುರಿಯಾದೆನು ದೇವಾ
ಪ್ರಾಣರಕ್ಷಕರಿಲ್ಲದತಿ ಕಷ್ಟಕೊಳಗಾದ
ಏಣ ಕುಣಕನೊಲಾದೆನು ದೇವಾ
ಏನೆಂಬೆ ಮೂಢತ್ವವೇ ಮೌಲ್ಯವೆನಗಾಯ್ತು
ಜ್ಞಾನ ದೊರಕೊಂಬುದೆಂತು ದೇವಾ
ಜ್ಞಾನವಿಲ್ಲದೆ ಬಂಧ ಪರಿಹರಿಸದೆಂದೀಗ
ಮಾನಸದಿ ಮರಗುತಿಹೆನು ದೇವಾ ೧

ದುರಿತಕೋಟಿಗಳ ಜನ್ಮಂಗಳಲಿ ಮಾಡಿದರೆ
ದೊರಕಿತದರಿಂದ ಜಡವು ದೇವಾ
ಪರಿಪರಿಯ ಕರ್ಮಗಳು ಜನ್ಮಗಳ ಕೊಡುವದಕೆ
ತರತರದಿ ಕರವಿಡಿದಿವೆ ದೇವಾ
ಗುರಿಯಾದನೀ ಪರಿಯ ಕರ್ಮಶರಧಿಯ ತೆರೆಗೆ
ಪರಿಹರವ ಕಾಣೆನಿದಕೆ ದೇವಾ

ಪರಮ ಪಾವನವಾದ ದುರಿತಹರ ನಾಮಕ್ಕೆ
ಕರಗದೋ ನನ್ನ ಕರ್ಮ ದೇವಾ ೨

ಲೋಕದೊಳಗಿಹ ಪಾತಕರು ತಾವು ಜೊತೆಯಾಗಿ
ಬೇಕೆಂದು ಪಾತಕವನು ದೇವಾ
ಜೋಕೆಯಲಿ ಛಲವಿಡಿದು ಪಾಪರಾಶಿಯ ಮಾಡೆ
ಸಾಕೆ ನಾಮದ ಸೋಂಕಿಗೆ ದೇವಾ
ನೂಕುವುದು ನಿಷ್ಕೃತಿಗೆ ಮಲತ ಪಾಪವ ನಾಮ
ಬೇಕೆ ನೆರವೆಂಬುದದಕೆ ದೇವಾ
ಯಾಕೆ ನಾನೊಬ್ಬ ಮಾಡಿದ ಪಾಪರಾಶಿಯನು
ನೂಕದಿಹ ಬಗೆಯಿದೇನು ದೇವಾ ೩

ದುರಿತವೆನಗಿಲ್ಲೆಂದು ಸ್ಥಿರಬುದ್ಧಿಯಿಂದೊಮ್ಮೆ
ಯಿರುತಿಹೆನು ಧೈರ್ಯವಿಡಿದು ದೇವಾ
ಅರಿವು ಸಿಕ್ಕದೆ ಮರವೆ ಮುಂದಾಗಿ ನಿಂದಿರಲು
ಮರುಗಿ ಮತ್ತೊಮ್ಮೆ ಮನದಿ ದೇವಾ
ಅರಿವೆಂತು ಸಿಕ್ಕುವದು ದುರಿತಭರಿತನಿಗೆಂದು
ಸ್ಥಿರಬುದ್ಧಿ ನಿಲ್ಲದಿಹುದು ದೇವಾ
ಉರುಳುವುದು ಮನವೆಲ್ಲಿ ಪರಿವುತಿಹೆ ನಾನಲ್ಲಿ
ಸ್ಥಿರವೆಂದಿಗೆನಗಪ್ಪುದು ದೇವಾ ೪

ಏನಾದಡೇನಘವು ಬಹಳವಾಗಿಹುದಿದಕೆ
ಹೀನಬುದ್ಧಿಯೆ ಸಾಕ್ಷಿಯು ದೇವಾ
ನಾನಿನಿತು ದೋಷಿಯಾದಡದೇನು ದೋಷಿಗಳ
ನೀನ್ಯೆಸೆ ರಕ್ಷಿಸುವನು ದೇವಾ
ಭಾನುವಿನ ಮುಂಭಾಗದಲಿ ತಿಮಿರ ತಾ ನಿಂದು
ಏನಾಗಬಲ್ಲುದೈ ದೇವಾ
ದೀನತನವಳಿವಂತೆ ಜ್ಞಾನವನು ಬಳಿಕಿತ್ತು
ಆನತನ ನೀ ರಕ್ಷಿಸು ದೇವಾ ೫

ಕಾಲ ಬಂದರೆ ಮೋಕ್ಷ ತಾನೆ ದೊರಕುವದೆಂದು
ಮೇಲಾಗಿ ಪ್ರತಿ ನುಡಿಯಲು ದೇವಾ
ಕಾಲವೆಂಬೀ ನದಿಗೆ ಕಡೆಯಿಲ್ಲ ಮೋಕ್ಷಕ್ಕೆ
ಕಾಲ ತಾ ಬಹು ದೂರವು ದೇವಾ
ಕಾಲಕರ್ಮಗಳೆಂಬ ನೇಮವನೆ ದೃಢವಿಡಿಯೆ
ಕಾಲವೇ ಕಲ್ಪಿತವದು ದೇವಾ
ಲೀಲೆಯಿಂ ನಿರ್ಮಿಸಿದ ಸಂಸಾರ ಭಂಜನೆಗೆ
ಕಾಲವದು ನಿನ್ನ ಕೃಪೆಯು ದೇವಾ ೬

ನಿನ್ನ ನಂಬಿದವರ್ಗೆ ಸಂಸಾರಗೋಷ್ಪದವು
ಚೆನ್ನಾಗಿ ನಂಬಿಯೆಂದು ದೇವಾ
ನಿನ್ನ ನುಡಿಯಿಂದ ಗೀತೆಯಲಂದು ಬೋಧಿಸಿದೆ
ಧನ್ಯನಾದನು ಪಾರ್ಥನು ದೇವಾ
ಉನ್ನತದ ಯೋಗಾದಿ ಸಾಧನದಿ ಪರಿಹರವೆ
ನಿನ್ನ ಕೃಪೆಯೇ ಮುಖ್ಯವು ದೇವಾ
ನಿನ್ನ ನಂಬಿದೆನು ತಿರುಪತಿಯ ವೆಂಕಟರಮಣ
ಧನ್ಯ ಧನ್ಯನು ಧನ್ಯನೂ ದೇವಾ ೭

ಕಂ॥ ಬುಧವಾರದರ್ಚನೆಯನಿದ
ಮುದದಿಂ ಸ್ವೀಕರಿಸಿ ನಿನ್ನ ಮೊರೆಯಂ ಕೇಳ್ದಾ
ಬುಧ ಸಂಗವನಿತ್ತು ನಿನ್ನ
ಪದಸೇವಕನೆನಿಪುದೆಂದು ವೆಂಕಟರಮಣಾ

ಓಂ ಕಾಳೀಯ ಫಣಾಮಾಣಿಕ್ಯರಂಜಿತ ಶ್ರೀಪದಾಂಬುಜಾಯ ನಮಃ

೧೩೩

ಎಂದಿಗಚ್ಯುತ ನಿನ್ನ ಕೃಪೆಯಾಗಿ ಭವವೆಂಬ
ಬಂಧನವು ಪರಿಹರಿಪುದೊ ಹರಿಯೇ ಪ

ಸಂದುದಪರಿಮಿತ ಭವ ನಿಂದುದಗಣಿತ ಕರ್ಮ
ವೆಂದು ನಿನ್ನವನೆನಿಪುದೊ ಹರಿಯೇ ಅ.ಪ

ಸೂಸುತಿದೆಯಜ್ಞಾನ ಮಾಸುತಿದೆ ಸುಜ್ಞಾನ
ದೋಷಗಳು ಬಹುವಾಗಿವೆ ಹರಿಯೇ
ಆಶೆಯೆಂಬುದಕಂತವಿಲ್ಲ ಬಹುಬಗೆ ತರದ
ಪಾಶದಲಿ ಬಿಗಿವಡೆದೆನೋ ಹರಿಯೇ
ಈಶ ನಿನ್ನಯ ಮಾಯೆಯೆಂಬ ಬಲು ಹುರಿ ಬಲೆಯು
ಬೀಸಿ ಸೋವುತ್ತಲಿದೆಕೋ ಹರಿಯೇ
ಕ್ಲೇಶಸಾಗರದಲ್ಲಿ ಮುಳುಗಿ ತಡಿಯನು ಕಾಣೆ
ವಾಸುದೇವ ಕಡೆಹಾಯಿಸೋ ಹರಿಯೇ ೧

ಆವರಣ ವಿಕ್ಷೇಪವೆಂದೊಂದು ಶಕ್ತಿ ತಾ
ನಾವರಿಸಿ ಬ್ರಹ್ಮಾಂಡವ ಹರಿಯೇ
ತೀವಿಕೊಂಡೊಳಹೊರಗೆ ವಿಕ್ಷೇಪ ಶಕ್ತಿ ತಾ
ಜೀವಕೋಟಿಗಳ ಸೃಜಿಸಿ ಹರಿಯೇ
ತಾವುಗಾಣದ ತೆರದಿ ಬಹುವಿಧದ ಕರ್ಮದಲಿ
ಜೀವರನು ಬಂಧಿಸಿಹುದು ಹರಿಯೇ
ಈ ವಿಧದ ಮಾಯೆ ತಾ ಯೋಗಿಗಳಿಗಸದಳವು
ದೇವ ಕೃಪೆಮಾಡಿ ಸಲಹೋ ಹರಿಯೇ ೨

ಮೂರು ಗುಣ ಮೂಲದಲಿ ಮೂರು ಕರ್ಮಗಳುದಿಸಿ
ಮೂರಾರು ಕವಲಾದುದೋ ಹರಿಯೇ
ಸಾರಿ ವೃಕ್ಷವ ಬಳ್ಳಿ ಮೀರಿ ಮುಸುಕಿದ ತೆರದಿ
ತೋರದಿದೆ ನಿನ್ನ ನಿಜವ ಹರಿಯೇ
ಬೇರುವರಿದಿಹ ಕರ್ಮಲತೆಯ ಜಾರಿಸಿ ಗುಣವ
ಮೀರುವ ಉಪಾಯವೆಂತೋ ಹರಿಯೇ
ಸೇರಿದೆನು ನಿನ್ನ ಚರಣವನು ವೆಂಕಟರಮಣ
ದಾರಿಯನು ತೋರಿ ಸಲಹೋ ಹರಿಯೇ ೩

ಕಂ|| ಗುರುವಾರದರ್ಚನೆಯನಿದ
ಗುರುವಾಗಿಯೆ ಪೇಳ್ದೆ ನೀನೆ ಮೂಢನ ಸಲಹಲ್
ಗುರುಸೇವೆಯೆಂತೊ ತಿಳಿಯದು
ಗುರುವರ ಸಂಗತಿಯನರಿಯೆ ನೀನೇ ಗತಿಯೈ

ಓಂ ದಾಮೋದರಾಯ ನಮಃ

೧೩೪

ನೀನಲ್ಲದನ್ಯವೆನಗಿಲ್ಲ ನಾರದ ವರದ
ಏನೆಂಬೆ ಸರ್ವರಿಗು ನೀನೆಯಹುದಾದಡೆಯು ಪ

ಧನದ ಬಲವುಳ್ಳವರು ಧರ್ಮಗಳ ಮಾಡುವರು
ಮನದ ಮೇಧಾವಿಗಳು ಮಂತ್ರಿಸುವರು
ತನುವಿನಲಿ ತ್ರಾಣಿಗಳು ತೀರ್ಥಗಳ ಪಡೆಯುವರು
ಅನುವದಿಸಿ ವೇದಗಳನವರಾಧ್ಯರಹರು ೧

ತನುವ ದಂಡಿಸಿ ಪೂಜ್ಯ ತನುವಾದರವರ್ಗುಂಟು
ಧನದ ತ್ಯಾಗದಿ ಮುಂದೆ ದೈನ್ಯ ಹರವು
ಮನವ ನಿಗ್ರಹಿಸಿದರೆ ಮುಖ್ಯ ಜ್ಞಾನವುಬಹುದು
ಇನಿತಾದರವರ್ಗಿರುವದೇನುಂಟು ನನಗೆ ೨

ಇತರ ಮಾತುಗಳಾಡದೀ ವಾಕನೊಳಗಿರಿಸಿ
ಮಿತವಾಗಿ ಸತ್ಯಯುತಮಾಗಿ ನುಡಿಸಿ
ಅತಿದೋಷಗಳು ಹೋಗಿಯವರ್ಗೆ ಮುಂದಣ ಭವದಿ
ವಿತತವಾಹದವಿದ್ಯೆ ವಿವರಿಸಲಿದುಂಟೆ ೩

ಸತತವೂ ಧನವಿಲ್ಲ ಸಾಧು ಸಮ ತನುವಿಲ್ಲ
ವ್ರತತೀರ್ಥಗಳಲಾಡಿದೊಡಲಿದಲ್ಲ
ಮತಿಯಲ್ಲಿ ನೋಡಿದರೆ ಮಂತ್ರ ಮನನಗಳಿಲ್ಲ
ಸ್ತುತಿ ಮಾಳ್ಪ ಸೂಕ್ತಗಳ ಸೊಲ್ಲು ತಾನಿಲ್ಲ ೪

ಹಿಂದಾದ ಮುಂದೆ ಬಹ ಹೊಂದಿದೀ ಭವ ಸಹಿತ
ತಂದೆ ಕಣ್ದೆರವಾಗಿ ತಾ ತೋರಿತು
ಬಿಂದು ಸಾಧನವಿಲ್ಲದೊಡಲೊಂದು ಲಭಿಸಿರಲು
ಬಂಧವನು ಬಿಡಿಸುವರೆ ಬಂದೆ ಗುರುವಾಗಿ ೫

ಪರಮ ಕರುಣಾಸಿಂಧು ಪತಿತ ಪಾವನ ಶೀಲ
ದುರಿತಾಂಧಕಾರಕ್ಕೆ ದಿವಸಕರನು
ಪರಿ ದೀನವತ್ಸಲನು ಹಾಗನಾಥರ ತಾನು
ಹೊರೆವನೆಂಬೀ ಮಾತು ಹುಸಿಯಾಗಲಿಲ್ಲ ೬

ನನ್ನನೀಪರಿಯಲ್ಲಿ ನೋಡಿ ಸಲಹಿದ ಮೇಲೆ
ಯಿನ್ನೇಕೆ ಸಂದೇಹವಿದೆ ಚೋದ್ಯವು
ಸನ್ನುತನೆ ತಿರುಪತಿಯ ಸ್ವಾಮಿ ವೆಂಕಟರಮಣ
ನಿನ್ನಡಿಯ ಸ್ಮರಣೆಯನು ನನಗಿತ್ತೆಯಾಗಿ ೭

ಕಂ॥ ಭೃಗುವಾರದರ್ಚನೆಯನಿದ
ಭೃಗುಸುತೆ ಸಹ ನೀನು ಕೊಳುತೆ ರಕ್ಷಿಸುಯೆನ್ನಂ
ಹೊಗಲಾರೆನು ಭವಸಿಂಧುವ
ನಿಗಮಾರಾಧಿತನೆ ದೇವ ವೆಂಕಟರಮಣಾ

ಓಂ ಯಜ್ಞಭೋಕ್ತ್ರೇ ನಮಃ

೧೩೫

ನೀನೆ ರಕ್ಷಿಸಬೇಕು ಹೀನಬುದ್ಧಿಯ ನರನ ಪ

ಯೇನೆಂಬೆ ವಿಷಯಗಳೊಳು ಮನಮುಳುಗಿ
ಧ್ಯಾನವನೊಮ್ಮೆಯು ಮಾಡದ ಮರುಳ ಅ.ಪ

ಕಂಡುದನೆಲ್ಲವ ಬಯಸಿ ದಂಡಿಸಲಾರದೆ ಮನವ
ಕೆಂಡಕೆ ಮುತ್ತುವ ಶಲಭನ ತೆರದಿ
ಕಂಡು ನೊಂದು ಮತ್ತದ ಬಿಡದಿರಲು ೧

ಕಾಯವ ನಿತ್ಯವಿದೆಂದು ಹೇಯದಿ ತೋರಲು
ಕಂಡು ನೋಯದೆ ತಾಪತ್ರಯಗಳ
ನುಂಡು ಆಯಸಗೊಳುತಿರಲಿದ ನೀ ಕಂಡು ೨

ದುಃಖದಿ ನೋವರ ನೋಡಿ ಸುಕ್ಕುತಲಾಕ್ಷಣದೊಳಗೆ
ದುಃಖವು ಬಂದರೆ ಪರಿಹರವಾಗದೆ
ಸಿಕ್ಕಿರೆ ಬಲೆಯೊಳು ದುಃಖಿಸುತಿರಲು ೩

ಪ್ರಾಚೀನ ಕರ್ಮಗಳು ವೀಚಿಗಳಂದದಿ ಬರಲು
ಸೂಚಿಸಿ ಶಿಕ್ಷಿಪ ಶಾಸ್ತ್ರದ ನೆಳಲೊಳು
ಚಾಚದೆ ತಾವೆ ತಾವಾಗಿರಲು ೪

ದುರಿತಗಳೆ ಬಹುವಾಗಿ ಸ್ಫುರಿಸುತ್ತಲಿರಲಾಗಿ
ಮರುಗುವ ರಕ್ಷಕ ನೀನಿರಲಾಗಿ
ಮರೆಯೊಗದಿರಲೀ ದುರಿತವ ನೀಗಿ ೫

ದ್ವಂದ್ವಗಳೊಂದೆಂದೊಮ್ಮೆ ನಿಂದಿರೆ ಕರ್ಮದ ಹೆಮ್ಮೆ
ಹೊಂದದು ಎಂದಿಗು ಅದು ತನ್ನ ಸೊಮ್ಮೆ
ಯೆಂದಿಗೆ ಹೃದಯದಿ ನಿಲುವೆ ನೀನೊಮ್ಮೆ ೬

ಮಾನವ ಬಿಟ್ಟರೆ ಬುದ್ಧಿ ಜ್ಞಾನದ ಸಾಧನ ಸಿದ್ಧಿ
ತಾನೇ ಬರುವುದು ಪುಣ್ಯಸಮೃದ್ಧಿ
ಜ್ಞಾನಾತ್ಮಕ ಕೃಷ್ಣ ನೀನಿರು ಹೊದ್ದಿ ೭

ಭಜಿಸಿದನೆ ಭಕ್ತಿಯಲಿ ಯಜಿಸಿದನೆ ಯಾಗದಲಿ
ದ್ವಿಜತನವನ್ನಾದರು ಬಿಡದಿದ್ದನೆ
ಅಜಮಿಳನೆ ನಿನ್ನೊಲವಿಗೆ ಸಾಕ್ಷಿ ೮

ಕರುಣಕಟಾಕ್ಷವ ನೀನು ಯಿರಿಸಲು ಧನ್ಯನು ನಾನು
ತಿರುಪತಿ ನಿಲಯ ಶ್ರೀ ವೆಂಕಟ ಕಾಣು
ಗುರು ವಾಸುದೇವರೂಪಿನ ಚಿದ್ಘಾನು ೯

ಓಂ ದಾನವೇಂದ್ರ ವಿನಾಶಕಾಯ ನಮಃ

೧೩೬

ಲಕ್ಷ್ಮೀ ಸ್ತೋತ್ರ

ತಾಯೆ ತಲೆವಾಗಿದೆನು ತವ ಪಾದ ಪದ್ಮದಲಿ
ಮಾಯೆ ದಾಟಿತು ಮಹಿಮಳೇ ದೇವಿ ಪ

ಕಾಯ ಕರ್ಮಗಳೆಂಬ ಕಾತ್ಯ ಸಮುದಾಯವನು
ದಾಯದಿಂದಳವಡಿಸಿದೆ ದೇವಿ ಅ.ಪ

ಅಜಸುರಾದಿಗಳಿಂಗೆ ಅಮರಿಸಿಹೆ ಭಾಗ್ಯವನು
ಭಜಿಸುತಿಹರನವರತವೂ ದೇವಿ
ನಿಜದಿರವನೂ ಕೊಟ್ಟು ನಿಲಿಸಿರಲು ನೀನವರ
ತ್ರಿಜಗ ವಂದಿತರಾದರು ದೇವಿ
ಸುಜನ ವಂದಿತನಾದ ಶ್ರೀಹರಿಯೆ ನೀನಾಗಿ
ರುಜುಕರದಲಾಳುತಿರುವೆ ದೇವಿ
ಕುಜನನಾದರು ನಾನು ಕರವಿಡಿದು ನೀ ಕಾಯ್ದು
ದ್ವಿಜಜನ್ಮದೆಣಿಕೆದೋರ್ದೆ ದೇವಿ ೧

ಅಣುಮಾತ್ರವಿರಲಿಲ್ಲ ವಿಷಯ ಭೋಗಕೆ ಬೀಜ
ದಣಿಸಿದುದು ದಾರಿದ್ರವು ದೇವಿ
ಕಣುಗಾಣದಿದ್ದವಗೆ ಕೊಟ್ಟೆಯನ್ನವ ನೀನೆ
ಮಣಿವದನು ಮಾಡ್ದ ನೀನೆ ದೇವಿ
ಪ್ರಣತ ರಕ್ಷಾಮಣಿಯೆ ಪರತತ್ವವನ್ನಿತ್ತೆ

ಎಣಿಪುದೆಂತೀ ಮಹಿಮೆಯಾ ದೇವಿ
ಕ್ಷಣಮಾತ್ರ ಪೂಜೆಯನು ಕ್ರಮದಿ ಮಾಡ್ದವನಲ್ಲ
ಭಣಿತೆಯಿದ ಬಗೆವರಾರು ದೇವಿ ೨

ಪರಿತೃಪ್ತಳಾಗಿರುವೆ ಪರಮಭಾಗ್ಯವನೀವೆ
ನೆರೆ ನೀನೆ ನಿರ್ಮಿಸಿರಲು ದೇವಿ
ಇರಿಸಿದಂತಿರುವರಿಂದೇನಹುದು ಕೊಡುವದಕೆ
ಅರಿಯಲಖಿಳವು ನಿನ್ನದೇ ದೇವಿ
ಮರುಗಿ ನೀನೇ ಕಾಯ್ವೆ ಮಾತೃ ರೂಪಹುದಾಗಿ
ಸುರತರುವಿನುಪಮಾನಳೇ ದೇವಿ
ವರದ ತಿರುಪತಿ ವಾಸ ವೆಂಕಟೇಶನ ರೂಪ
ಧರಿಸಿಹಳೆ ದಿವ್ಯ ಲಕ್ಷ್ಮೀದೇವಿ ೩

ಕಂ॥ ಸ್ಥಿರವಾರವಿಂದು ಕೇಶವ
ಸ್ಥಿರವಹುದಿತ್ತಭಯವೆನಗೆ ಭಯವನು ಬಿಡಿಸೈ
ಸ್ಥಿರವಲ್ಲದ ಸಂಸಾರವ
ಸ್ಥಿರವೆಂದೇ ನೊಂದೆನೈಯ ವೆಂಕಟರಮಣಾ

ಓಂ ನಾರಾಯಣಾಯ ನಮಃ

೧೩೭

ಅಂಜಿಕೆ

ಅಂಜಿಕೆಯಾಗುತಿದೆ ಯಿದನೋಡಿ ಅಂಜಿಕೆಯಾಗುತಿದೆ
ಮಂಜಿನಂದದ ಮಾಯೆ ರಂಜನೆಯಾಗಿ ರಂಜನನರಿಯದಿರೆ ಪ

ಹುಸಿಯೆಂದು ಶ್ರುತಿ ಸಾರ್ದರೂ ತಾನೊಮ್ಮೆ ನಸಿಯದೆ ನಿಜದಂತಿರೆ
ಹೊಸದು ಕಟ್ಟಿದ ಬಲೆ ಹೊದಿಸಿದಂದದಿ ಮತ್ತೂ ಹೊಸಹೊಸತಾಗಿರಲು
ಹಸಿವು ತೃಷೆಗಳೆಂಬಿವು ದಿನದಿನ ಹಸಗೆಡಿಸುತಲಿರಲು

ಕುಸುಮಬಾಣನ ಕಾಟ ಕುಸಿಯ ಮೆಟ್ಟಲು
ಮನ ಮಸಿಯಾಗಿ ಮುದ್ರಿಸಲು ೧

ಪೇಳ್ವದು ಪರತತ್ವವು ಬುದ್ದಿಯ ಬಾಳ್ವಿಕೆ ಬಹು ಬದ್ಧವು
ಕೋಳ್ಕೊಂಡ ಶೂರನ ಕಲಿತನದಂತಿದು ಕೀಳ್ವಾಯಕಿಳೀಯುತಿರೆ
ಕೇಳ್ವರೆ ಮಾರ್ಗವನು ಜ್ಞಾನಿಯು ಕೋಳ್ವಿಡಿಯಲಿ ಬದ್ಧನು
ಹಾಳ್‌ವಾದದಲಿ ಹೊತ್ತು ಹೋಗುತ
ನಿಜವಾಗಿ ಆಳ್ವನನರಿಯದಿರೆ ೨

ಯೋಗಿಗಳ್‌ಕಾಣದಿರೆ ಕರ್ಮದ ರಾಗಿಗಳ್ ಕಾಳಾಗಿರೆ
ಭೋಗಿಗಳೆಲ್ಲರು ಭಯದಲ್ಲಿ ಮುಳುಗಿರೆ ರೋಗಗಳ್ ಬಹುವಾಗಿರೆ
ಸಾಗದೆ ಮಾರ್ಗವಿರೆ ಪುನರಪಿ ಪ್ರಾಗನೆ ಪಡೆಯುತಿರೆ
ಹಾಗೆ ವಾಸನೆಯನ್ನು ಹೊದ್ದಿ
ಮತ್ತತಿಶಯವಾಗಿಯೆ ವೆರಕೊಂಡಿರೆ ೩

ಧರ್ಮವ ಮಾಡದಿರೆ ಮನ ಪಾಪ ಕರ್ಮವ ಕೂಡುತಿರೆ
ದುರ್ಮಾರ್ಗವೆಂದರೆ ದೃಢವಾಗಿ ನಲಿದು ವಿಕರ್ಮಕ್ಕೆ ವೊಡಲಾಗಿರೆ
ಹಮ್ಮನು ನೆಗ್ಗಿದರೆ ಹೋಗದೆ ಬಿಮ್ಮಾಗಿ ಬೆಳೆಯುತಿರೆ
ನೆಮ್ಮುತ ವಿಷಯವ ನೆನೆಯುತಲೀ ಪರಿ ಹೆಮ್ಮೆಯೆ ಹೆಚ್ಚುತಿರೆ ೪

ಮೊಳೆಯುತ ಮೇಲ್ಮುಟ್ಟಿರೆ ಹಮ್ಮಿದು ಬೆಳೆಯುತ ಬೇರ್ಬಿಟ್ಟಿರೆ
ಕಳಚಿದರ್ಕೆಡದಾಶೆ ಕಾಲ್ಕಟ್ಟಿ ಕೆಡಹಿರೆ ತಳತುದಿ ತೋರದಿರೆ
ಅಳಿಯುವದೆಂದಿಗಿದು ಸುಖ ತಾನು ಹೊಳೆಯುವದೆಂದಿಗದು
ನಳಿನಾಕ್ಷ ತಿಳುಹಿಸು ನಂಬಿದೆ ತಿರುಪತಿನಿಳಯ ವೆಂಕಟನಾಥನೆ ೫

ಕಂ॥ ಎಡೆಬಿಡದನುತಪಿಸುತ ಪದ
ವಿಡಿದೆರಗಿಯೆ ಬಿನ್ನವಿಸಲು ತಿರುಪತಿಯೊಡೆ ಯಂ
ಕಡು ಕರುಣದಿಂದ ಗುರುತನು
ವಿಡಿದಭಯವನಿತ್ತ ನುಡಿಯನನುವದಿಸುವೆನಾಂ

ಓಂ ಪರಸ್ಮೈಬ್ರಹ್ಮಣೇ ನಮಃ

೧೩೮

ಅಭಯ

ಹೆದರದಿರ್ಪೇಳ್ವೆ ಹೇ ಜೀವಾ ಬ್ರಹ್ಮನಿಗಾನು
ಮೊದಲು ಪೇಳಿದ ಮಾರ್ಗವ ಪ

ಪದರವಾಗಿ ಲೋಕಗಳನೂ ಪಲವು ಜೀವರಾಶಿಗಳನೂ
ಇದಿರಮಾಡಿ ತೋರಿಸಿಹೆನು ಇದಕೆ ನೀನು ಅ.ಪ

ಏಕನಾಗಿದ್ದು ಮೊದಲು ಬಹಳವಾಗ
ಬೇಕೆಂದು ಬುದ್ಧಿಯಿಡಲು
ಈಕೆ ಮಾಯೆಯಾದಳೆನ್ನ ಯಿಚ್ಛೆಯಿಂದಲಿಲ್ಲ ಮುನ್ನ
ಸೋಕಿದಂತೀಗಿರ್ದಡಿದೇನು ಶೂನ್ಯಕೆ ನೀನು ೧

ರಜ್ಜು ಸರ್ಪನ ತೆರದಿ ತೋರಿದರದು
ಬೆಜ್ಜರ ಭ್ರಾಂತ್ರಿ ಮೂಲದಿ
ಸಜ್ಜಿಸಿದೆ ಮಾಯೆ ಹಾಗೆ ಭರ್ಜಿಸುವ ಬಗೆ ಹೇಗೆ
ವರ್ಜಿತಕೆ ವಿಧಿಯೊಂದುಂಟೆ ವೋಹೋ ಕಂಗೆಟ್ಟೆ ೨

ಕನಸಿನ ಸಿರಿ ಕಷ್ಟವು ಎದ್ದವನಿಗೆ
ನೆನಸಿದರುಂಟೆ ನಿಜವು
ಮನದ ಭ್ರಮೆಯಿಂದ ಬಂದ ಮಿಥ್ಯಕುಂಟೆ ಮುಕ್ತಿ ಬಂಧ
ಇನಿತ ನಾನೆ ತೋರಿಸಿಹೆನು ಇದಕೆ ನೀನು ೩

ತಿಳಿದರೂ ತಾನೆ ತೋರ್ಪುದು ಕೇಳ್ ಬಹುಕಾಲ
ಬಳಸಿ ಬಂದುದು ಬಲಿದು
ಹೊಳೆದರೂ ತಾ ಜೀವನನ್ನು ಹೊದ್ದದುಣ್ಣುತಿದ್ದರದನು
ಕಳಚಿ ಹೋಯಿತೆಂದೆ ನೀ ಕಾಣು ಕೊರತೆ ತಾನೇನು ೪

ಹುರಿದ ಬೀಜವ ನೋಡಲು ಆಕಾರವಾಗಿ
ಯಿರುವದು ಯಿದ ಬಿತ್ತಲು
ತಿರುಗಿ ಪುಟ್ಟಿ ತೋರುವದೆ ತಿಳಿಯೆ ಮಾಯೆಯನ್ನು ಬಾಧೆ
ಬರುವದೇನೈ ಭದ್ರವಾಗಿರು ಭೋಗಿಸುತಿರು ೫

ಹೋಗದೇತಕೆ ಹೋರುತಾ ಬಾಧಿಸುವದು
ಯೋಗಿಗೂ ಯಿದ್ದೆ ತೋರುತಾ
ಸಾಗುವಂತೆ ಮುಂದೂ ತಾನು ಸಿದ್ಧವಾಗಿ ಮುಕ್ತರನ್ನು
ಭೋಗಿಗಳ ಮಾಡುತಿಹದು ಬಾಧಿತವಹುದು ೬

ತೋರಿದ ನಾನೆ ತೆಗೆವೆ ಇದಕೆ ನೀನು
ಹೋರದಿರೆನ್ನ ನಿಜವೆ
ಸೇರು ನನ್ನ ಚರಣವನು ದಾರಿದೋರ್ಪ ತಿರುಪತಿ
ವಾರಿಜಾಕ್ಷ ವೆಂಕಟೇಶನು ಒಲಿವೆ ನಾನು ೭

ಓಂ ಪನ್ನಗಾಶನವಾಹನಾಯ ನಮಃ

೧೩೯

ಪುನಃ ಪ್ರಾರ್ಥನೆ

ನಿನಗಿನಿತು ಮಮಕಾರವಿರಲೆನಗೆ ಭಯವೇನು
ಚಿನುಮಯನೆ ಧನ್ಯ ನಾನು ಪ

ಜನಕ ನೀನೆನಗಾದೆ ತನುಜ ನಾ ನಿನಗಾದೆ
ಘನಮಹಿಮ ಕಾಮಧೇನು ನೀನು ಅ.ಪ

ಜನ್ಮಕೋಟಿಗಳಲ್ಲಿ ಪುಣ್ಯಕರ್ಮಗಳನ್ನು
ಮುನ್ನ ಮಾಡಿಸಿದೆ ನೀನು

ಮುನ್ನಿನಾ ದೇಹಗಳು ಭಿನ್ನವಾಗಲು
ಕರ್ಮವಿನ್ನುಳಿವ ಬಗೆಯದೇನು
ಚಿನ್ಮಯನೆ ತನುಕರಣ ಭಿನ್ನವಾದರು ಸಾಕ್ಷಿ
ನಿನ್ನೊಳಿಂಬಿಟ್ಟೆಯವನು
ಸನ್ನುತನೆ ಬಾಲಕನಿಗುಣ್ಣ ಕಲಿಸುವ ತೆರದಿ
ನಿನ್ನನಿತ್ತುದೇನೆಂಬೆನು ನಾನು ೧

ದುಷ್ಟಸಂಗವ ಬಿಡಿಸಿ ದುರ್ಬುದ್ಧಿಯನು ಕೆಡಿಸಿ
ಶಿಷ್ಟರೊಳು ತಂದು ನಿಲಿಸಿ
ಕಷ್ಟಸಾಧನಗಳನು ಮುಟ್ಟಲೀಸದೆ ಸುಲಭ
ನಿಷ್ಠೆಯಲಿ ಚಿತ್ತವಿರಿಸಿ
ಹುಟ್ಟುಹೊಂದುಗಳನ್ನು ಕೊಟ್ಟು ಮೋಹಿಸುತಿರುವ
ಪುಟ್ಟ ಫಲಗಳ ತೇಲಿಸಿ
ಮುಟ್ಟಿ ನಿನ್ನಯ ಪದವನಿಟ್ಟು ಹೃದಯಾಂಬುಜದ
ಲಿಷ್ಟಮೋಕ್ಷವ ತೋರಿಸಿ ನಿಲಿಸಿ ೨

ವಿದ್ಯವಿಸ್ತರವಾದರದ್ದುವದು ಗರ್ವದಲಿ
ಬುದ್ಧಿ ನಿಲ್ಲದು ನಿನ್ನಲಿ
ಇದ್ದು ವೃದ್ಧರ ಪಥದಿ ಹೊದ್ದಿ ಶುದ್ಧತ್ವವನು
ಶ್ರದ್ಧೆ ಸೇರದು ನಿನ್ನಲಿ
ಉದ್ದುರುಟುತನದಿಂದ ಬಿದ್ದು ವಾದದ ಮಡುಹ
ವದ್ದು ಸುಕೃತವ ಕಾಲಲಿ
ಇದ್ದ ನಿಜಸ್ಥಿತಿಯಿವಗೆ ಸಿದ್ಧವಾಗದುಯೆಂದು
ನಿರ್ಧರಿಸಿ ನೀನೆ ದಯದಿ ಇಲ್ಲಿ ೩

ಅನಿಮಿತ್ತ ಬಂಧು ನೀನೆಂಬುದನು ಫಲುಗುಣನು
ಮನದೊಳೆಣಿಸಿದುದಿಲ್ಲವೆ
ಅಣುಮಾತ್ರಮುಪಕಾರ ಜನರಿಂದ ನಿನಗುಂಟೆ

ಮನಕೆ ದೂರ ನೀನಲ್ಲವೆ
ವನಜಭವ ದಿಕ್ಪಾಲ ಮನುಗಳೈಶ್ವರ್ಯಗಳು
ನಿನಗೆ ಗಣನೆಗೆ ಬರುವವೆ
ಇನಿತು ಬ್ರಹ್ಮಾಂಡಗಳ ನೆನದು ನಿರ್ಮಿಸಿ ಬಳಿಕ
ಕ್ಷಣದೊಳಳಿಸುವದಿಲ್ಲವೆ ನಿಜವೆ ೪

ನಿನ್ನ ಭಜಿಸುವ ಭಾವವಿನ್ನುಂಟೆ ಜಡಮತಿಗೆ
ಅನ್ಯವಿಷಯದಿ ಮೋಹಿಸೆ
ತನ್ನ ಮರೆದತಿದುಃಖದುನ್ನತದ ಸಂಸಾರ
ವೆನ್ನದೆನ್ನುತ ದುಃಖಿಸೆ
ನಿನ್ನ ನೆನಯದೆ ಬಹಳ ಜನ್ಮವೇಗದ ನದಿಯ
ಲುನ್ನಿಸುವ ಕರ್ಮ ಹೊದ್ದಿಸೆ
ಭಿನ್ನ ಬುದ್ಧಿಯಲೊಂದಿ ತನ್ನ ತಾನರಿಯದಿರೆ
ನಿನ್ನಿಂದ ಮುಕ್ತನೆನಿಸೆ ನಿಲಿಸೆ ೫

ಚಲಿಸದಂದದಿ ಮನವ ನಿಲಿಸಿ ನಿನ್ನೊಳು ಬಾಹ್ಯ
ವಳಿವ ಬಗೆಯಿಲ್ಲವಲ್ಲ
ನಳಿನನಾಭನೆ ನೀನು ಸುಲಭನೇ ಯೋಗಿಗಳು
ಬಳಲುವರು ಕಾಣರಲ್ಲ
ನಿಲುವೆ ಮನದಲಿ ನೀನೆ ಸಲಹೆಂದು ಭಜಿಸಿದರೆ
ಗೆಲರೆ ಸಂಸೃತಿಯನೆಲ್ಲ
ತಿಳುಹಿ ಸುಲಭದ ದಾರಿಯೊಳಗೆನ್ನ ನೀನಿರಲು
ಬಳಲುವಿಕೆಯಿಲ್ಲವಲ್ಲಾ ಲಲ್ಲಾ ೬

ಬಿನುಗು ಭೋಗವನುಂಡು ಜುಣುಗಿ ಮತ್ತದರಲ್ಲಿ
ಮನವೆರಗಿ ಮುಳುಗುತಿಹುದು
ತನುವಿನಭಿಮಾನದಲಿ ನೆನಹು ತಗ್ಗದು ಮತ್ತೆ
ಕನಲಿ ಮುರಿದೇಳುತಿಹುದು

ಅನುವರಿಯದಂಧತಮದಲಿ ತಾನು ನೆರೆಹೊಕ್ಕು
ಘನದುಃಖಬಡುತಲಿಹುದು
ಇನಿತವಸ್ಥೆಯಲಿರುವ ಮನಕೆ ಸಿಕ್ಕಿರಲೆನ್ನ
ದಿನಕರನೆ ಕೈವಿಡಿವುದು ಸೆಳೆದು ೭

ಧ್ಯಾನ ಧಾರಣೆಯಿಂದ ನಿನ್ನ ಮೂರ್ತಿಯ ನಿತ್ಯ
ಮಾನಸದಿ ನಿಲಿಸಬೇಕು
ಧ್ಯಾನಾಂಗ ನಿಯಮಗಳನಭ್ಯಾಸವಂ ಮಾಡಿ
ತಾನು ತಾನಾಗಬೇಕು
ಏನೊಂದ ಕಂಡರೂ ನಾಮರೂಪವ ಬಿಟ್ಟು
ನೀನೆಂದು ನಿಲ್ಲಬೇಕು
ಏನೆಂಬೆನಿವನೆಲ್ಲ ನೀನೆ ಸಾಧಿಸಿಕೊಟ್ಟು
ದೀನನನು ಸಲಹಬೇಕು ಸಾಕು ೮

ಪರಮ ಕರುಣಾನಿಧಿಯೆ ಪರಿಪೂರ್ಣ ಪರಮೇಶ
ಪರಮಸಂವಿದ್ರೂಪನೇ
ಶರಣಜನಸುರಧೇನು ದುರಿತಭೂಧರಕುಲಿಶ
ಕರಿವರನ ರಕ್ಷಿಸಿದನೇ
ಮರೆಯೊಕ್ಕೆ ನಿನ್ನಡಿಯ ಮರವೆಯನು ಪರಿಹರಿಸು
ಅರಿವಿನೊಳು ಪೊಗಿಸು ನೀನೆ
ತಿರುಪತಿಯ ನೆಲೆವಾಸ ವರದ ವೆಂಕಟರಮಣ
ಅರವಿಂದದಳನೇತ್ರನೆ ಅಜನೆ ೯

ಓಂ ಜಲಕ್ರೀಡಾಸಮಾಸಕ್ತಗೋಪೀವಸ್ತ್ರಾಪಹಾರ ಕಾಯ ನಮಃ

೧೪೦

ಮರಳಿ ಮುನ್ನಿನ ಭಾವ ಬರುವುದೇ ನಿನ್ನಡಿಯ
ಮರೆಯೊಕ್ಕ ಭಕ್ತಜನಕೆ ಪ

ಪರಮಪಾವನ ನಿತ್ಯ ನಿರುಪಮ ಚಿದಾನಂದ
ಕರುಣಾಬ್ಧಿ ನೀನೆ ದೊರಕೆ ನಿಲುಕೆ ಅಪ

ಮಂಗಳನೆ ಮಂಗಳವನಿತ್ತೆ ಮನಸಿಗೆ ನೀನು
ಅಂಗ ಮಂಗಳವಾಯಿತು
ಹಿಂಗಿದವು ದುರಿತಗಳು ಸಂಗವಿದ್ದರು ಜಡದ
ತೊಂಗವವ ಮನ ಮೀರಿತು
ನುಂಗುತಿದೆ ದೋಷಗಳ ಬಂದಡೊಡಬನ ತೆರದಿ
ಭಂಗವೆಂಬುದು ಹೋಯಿತು
ಅಂಗ ಲಿಂಗದ ಕಾಂತಿ ಹೊಂಗಿ ಹೊರಹೊಮ್ಮುತಿದೆ
ರಂಗ ನಿನ್ನೊಲವಾಯಿತು ಯಿನಿತು ೧

ಹೊನ್ನಿನೊಳಗಿದ್ದ ಮಲಿನವನಗ್ನಿ ಕಳಚಿದರೆ
ಮುನ್ನಿನಂದದಿ ಮಲಿನವೆ
ಹೊನ್ನಾದ ಕಬ್ಬಿನವು ಕಬ್ಬಿನದ ಸಂಗದಲಿ
ಯಿನ್ನು ಕಬ್ಬಿನ ಭಾವವೆ
ಬೆಣ್ಣೆ ಕ್ಷೀರದಿ ಬಂದು ಘೃತವಾದ ಬಳಿಕ ತಾ
ಬೆಣ್ಣೆಯಲ್ಲದೆ ಕ್ಷೀರವೆ
ನಿನ್ನ ಕೃಪೆಯಿಂದ ಮಂಗಳನಾಮವನು ಸ್ಮರಿಸೆ
ನಿನ್ನವಗೆ ದೋಷ ಬಹವೆ ಇಹವೆ ೨

ಬಾಳೆಯನು ಬಿತ್ತಿ ಪ್ರತಿ ದಿವಸ ನೋಡಿದಡಲ್ಲಿ
ನೀಳವಾಗಿಹುದು ಸುಳಿಯು
ಕಾಲ ಬಂದರೆ ಗೊನೆಯು ಹಾಯ್ದು ಫಲವಾಗಿರಲು
ಮೇಲೊಮ್ಮೆಯುಂಟೆ ಯೆಲೆಯು
ಕಾಲ ಕರ್ಮಾಧೀನವಾಗಿರುವ ಸಂಸಾರ
ಲೋಲ ಮನಸಿನ ವೃತ್ತಿಯು
ಜಾಲದಿಂದಿರಲಲ್ಲಿ ನಿನ್ನಂಘ್ರಿ ಸ್ಮರಣೆಯಿಂ
ಮೇಲುಂಟೆ ಕರ್ಮಗತಿಯು ಸ್ಥಿತಿಯು ೩

ವೃತ್ತಿ ಮಾಯಾಕಾರ್ಯ ಮಾಯೆ ನಿನ್ನಾಧೀನ
ವೃತ್ತಿ ಮಾಯೆಯು ಕಲ್ಪಿತ
ಸುತ್ತಿ ಸುಳಿಸುಳಿದಾಡಿ ಸತ್ಯದಂದದಿ ತೋರಿ
ಮತ್ತೆ ನಿನ್ನೊಳಗರ್ಪಿತ
ಚಿತ್ತು ತಾನೆ ನಾಮರೂಪಾದ ಬಗೆಯಿಂದ
ಚಿತ್ತು ಚಿತ್ತಾಹುದುಚಿತ
ಸತ್ಯಸಂಧನು ನೀನು ಚಿತ್ತವನು ಬಿತ್ತರಿಸಿ
ವೃತ್ತಿಯಾಯಿತು ಬೆಳೆಯುತಾ ಇರುತಾ ೪

ಮನದ ಸಂಶಯ ಬಿಡದು ಶ್ರವಣಮನನಾದಿಗಳ
ನನುದಿನವು ಮಾಡುತಿರಲು
ಮನಕೆ ಸಾಕ್ಷಿಕನಾದ ನೀನು ಘನಮಾಯೆಯನು
ಮನಕೆ ಮರೆಮಾಡುತಿರಲು
ಚಿನುಮಯನೆ ಮಾಯೆಯನು ಕಡೆಗೆ ತೆಗೆಯಲು ಜ್ಞಾನ
ಜನಿಸುವುದು ನೀನು ಕೊಡಲು
ಇನಕೋಟಿಸಂಕಾಶ ಇಭರಾಜದುರಿತಹರ
ಎನಲು ನಿಜವಾಗುತಿರಲು ನಿಲಲು ೫

ತರಣಿಕಿರಣಗಳಿಂದ ಜನಿಸಿದಾ ಮೇಘಗಳು
ತರಣಿಯನು ಮುಚ್ಚಲಳವೆ
ತರಣಿ ತಾನೆನದಿವನು ಹರಹಿ ಹಿಂದಕೆ ತೆಗೆಯೆ
ನೆರೆ ಹಿಂಗಿ ಹೋಗದಿಹವೆ
ಪರಮಪುರುಷನು ನೀನು ಸ್ಮರಿಸಿ ಮಾಯೆಯ ಬೀಸಿ
ತಿರುಗಿಸಲು ಮಾಯೆಗಿರವೆ
ದುರಿತವಾಗಿರೆ ಜನಕೆ ನೆರೆ ಭಕ್ತಿಯನು ನೀನು
ಕರುಣಿಸಲು ಮತ್ತೆ ಭವವೆ ಧ್ರುವವೆ ೬

ಅರಣಿಯಿಂದುದುಭವಿಸಿದನಲ ಮುನ್ನಿನ
ತೆರದ ಅರಣಿಯಾಗಿಯೆ ತೋರ್ಪನೆ

ಅರೆದು ತಿಲವನು ತೆಗೆಯೆ ತೈಲವನು ತಿಲ ಬಳಿಕ
ಇರುವದೆ ತೈಲದೊಡನೆ
ಬೆರೆದು ಕರ್ಪೂರವಗ್ನಿಯೊಡನಾಡಿ ಬೇರ್ಪಟ್ಟು
ಮೆರೆವುದೆಂತಗ್ನಿಯೊಡನೆ
ತಿರುಪತಿಯ ವೆಂಕಟನೆ ನಿನ್ನ ಚರಣದೊಳಿಟ್ಟ
ಶರಣ ಮುನ್ನಿನ ಮನುಜನೆಯಹನೆ ೭

ಓಂ ಪುಣ್ಯ ಶ್ಲೋಕಾಯ ನಮಃ

೧೪೧

ಸೇರಿ ಬದುಕುವೆ ನಮ್ಮ ಸ್ವಾಮಿಯಂಘ್ರಿಯನು
ಭೂರಿ ದೋಷಗಳನ್ನು ಬಯಲ ಮಾಳ್ಪದನು ಪ

ನಿರ್ಗುಣದ ರೂಪವದು ನಿಲುಕದೆಂದಿಗೂ ಮನಕೆ
ದುರ್ಗುಣದ ಪುಂಜಕ್ಕೆ ದೊರಕುವುದೆ ಹುಡುಕೆ
ಅರ್ಗಳದ ವೃತ್ತಿಗಳಲಾಳಿ ಮುಳುಗಿರಲಿದಕೆ
ಮುಗ್ಗಿ ಮೋಹಿಪ ನಾನು ಮಥಿಸಲಿನ್ನೇಕೆ ೧

ಸಗುಣಮೂರ್ತಿಯ ನೋಡೆ ಸ್ಥಿರದಿ ಬುದ್ಧಿಯು ನಿಲದು
ಅಗಣಿತದ ವಾಸನೆಯೊಳತಿಬದ್ಧವಡೆದು
ಬಿಗಿ ಭದ್ರವಾಗಿರಲು ಬಹು ಕರ್ಮವೆಳೆದೆಳೆದು
ಬಗೆಯದನು ನೆರೆ ನೋಡಿ ಬಿಟ್ಟದನು ಜರೆದು ೨

ಧ್ಯಾನಿಪರು ಧ್ಯಾನಿಸಲಿ ಧೈರ್ಯದಲಿ ಬ್ರಹ್ಮವನು
ಜ್ಞಾನಿಗಳು ತಿಳಿಯಲಾ ಗೂಢ ತತ್ವವನು
ಮಾನರಹಿತರು ಹರಿಗೆ ಮಾಡಲಾ ಕರ್ಮವನು
ನಾನೊಂದನೊಡಬಡೆನು ನೋಡಿ ಕಠಿಣವನು ೩

ವೇದಶಾಸ್ತ್ರಗಳೋದಿ ವಾದಿಸಲಿ ವಾದಿಗಳು
ಸಾಧಿಸಲಿ ಸ್ವರ್ಗವನು ಸಕಲ ಶ್ರೌತಿಗಳು
ಬೋಧಿಸಲಿ ಪರರಿಂಗೆ ಬಹುತತ್ವಭೇದಿಗಳು
ಮಾಧವನಿಗೆರಗುವದೆ ಮತವೆನಗೆ ಕೇಳು ೪

ಪಾದಪದ್ಮವನಂಬಿ ಪಡೆದರಮಿತರು ಗತಿಯ
ಓದಿದವರೈದಿದರು ವಾಸನೆಯ ಬಗೆಯ
ಕಾದು ರಕ್ಷಿಪುದಂಘ್ರಿ ಕೊಡುವುದಮಿತದ ಸಿರಿಯ
ವಾದಿಸದೆ ನಂಬಿದೆನು ವಿಧಿಜನಕನಡಿಯ ೫

ಇದು ತಾನೆ ಲೋಕಗಳನೆಲ್ಲವಾಳುವ ದೊರೆಯು
ಇದು ತಾನೆ ಯೋಗಿಗಳಿಗಿದಿರಾದ ಬಗೆಯು
ಇದು ವಿಷಯದೊಳಗಿರುವರೆಬ್ಬಿಸುತ್ತಿಹ ಸುಧೆಯು
ಇದನೆ ನಾನಂಬಿದೆನು ಯಾಕೆ ಕರೆಕರೆಯು ೬

ತರುಬಿ ನಿಂದಿದೆ ಲೋಕ ತತ್ಪಾದಪದ್ಮವನು
ಹೊರೆಯುತಿಹುದಾ ಜನವ ಹೊಣೆಯಾಗಿ ತಾನು
ತಿರುಪತೀಶ್ವರ ನನಗೆ ತೋರ್ದನೀ ಮತಿಯನ್ನು
ವರದೇಶ ನನಗೊಲಿದವೊಡೆಯ ವೆಂಕಟನು ೭

ಓಂ ತೀರ್ಥಪಾದಾಯ ನಮಃ

೧೪೨

ಯೋಗನಿದ್ರೆ

ಯೋಗನಿದ್ರೆಯ ಮಾಡುತಿಹನು ಕ್ಷೀರ
ಸಾಗರಮಧ್ಯದಿ ಭೋಗಿಶಯನನು ಪ

ಏಳು ಸುತ್ತಿನ ಪುರವಿದನೂ ಎಂಟು
ಪಾಲಾಗಿ ರಮಣಿ ತಾ ಕಾದಿರಲದನು

ಬಾಲಕನೊಬ್ಬ ಪಾಲಿಪನೂ ಮಂತ್ರಿ
ನಾಲುವರೊಪ್ಪಿರೆ ಶ್ರೀಹರಿ ತಾನು ೧

ಕಾಲಜ್ಞಾನಿಗಳೈವರಿಹರೂ ಅವ
ರೂಳಿಗಕ್ಕೈವರು ಕಾದುಕೊಂಡಿಹರು
ವೇಳೆ ವೇಳೆಯ ಬಲ್ಲ ಭಟರು ತಮ್ಮ
ಊಳಿಗವನು ಬಂದು ಪೇಳುತ್ತಲಿಹರು ೨

ಸಕಲ ಲೋಕಂಗಳ ಸೃಜಿಸಿ ಅಲ್ಲಿ
ಸಕಲ ಲೋಕೇಶನು ತಾನೆ ವಿಶ್ರಮಿಸಿ
ಸಕಲವ ತನ್ನೊಳಗಿರಿಸಿಯೀಗ
ಮುಕುತಿದಾಯಕ ವೆಂಕಟೇಶ ಶ್ರೀ ವೆರಸಿ ೩

ಕಂ॥ ಹರಿ ಪವಡಿಸೆ ಹರೆದೋಲಗ
ಸುರರೆಲ್ಲರ್ ಸ್ಥಾನಕ್ಕೈದಲಾನಂದಾಂಬುಧಿ
ತೆರೆಯಿಳಿದು ತಿರುಪತೀಶನ
ಚರಣವೆ ತಾನಾಗಿ ನಿಂದುದೆನ್ನೆದೆಮನೆಯೊಳ್

ಓಂ ವೇದವೇದ್ಯಾಯ ನಮಃ

೧೪೩

ಏಕೋಭಾವ

ಕಂಡೆ ನನ್ನನು ಕಾಯ್ವನೆಂಬುದ ಕಂಡೆ ಪಾವನನಾದುದ
ಪುಂಡರೀಕದಳಾಯತಾಕ್ಷನೆ ಗಂಡುಮಾಡುವ ಗೂಢವ ಕಂಡೆಕಂಡೆ ಪ.

ಮಲಿನವೆಂಬುದು ಮನಕೆ ತೋರಲು ಮಲಿನ ಹೇತುವು ಮೂಡಲು
ಮಲಿನಕಳುಕುತಲಿದ್ದ ಸಮಯಕೆ ಬಲುಹಿನರಿಕೆಯ ಬೀರಲು
ಮಲಿನವೇ ಹುಸಿಯೆಂಬ ನಿಶ್ಚಯ ಬಲಿದು ಬಲು ಹುರಿಯಾಗಲು
ಕಲಕಿ ಸಂಶಯ ಕಡೆಗೆ ಜಾರಲು ನಿಲುಕಿ ನೀನಿದಿರಾಗಲು ೧

ಶುದ್ಧವೆಂಬುದಶುದ್ಧವೆಂಬುದು ಬುದ್ಧಿಕಲ್ಪಿತಮಾತ್ರವು
ಇದ್ದು ಸುತ್ತಲು ಈಶನಂತಿರೆ ಹೊದ್ದುವನ್ಯವದಾವದು
ಶುದ್ಧ ಶ್ರೀಹರಿ ಪೂರ್ಣ ಮಿಕ್ಕಿನ ಬದ್ಧನೆಂಬುದೆ ಭ್ರಾಂತಿಯು
ಅದ್ವಯಾನಂದಾಬ್ಧಿ ಯೆಂಬೀ ನಿರ್ಧರವ ನೆರೆ ತೋರಲು ೨

ಅಳುಕದಿರು ನಾ ವಿಶ್ವವಾಗಿಯೆ ಹೊಳೆದು ತೋರಿದೆನೊಬ್ಬನೇ
ಬಳಸಬೇಡತಿಭೀತಿಯೆಂಬುದ ತಿಳಿದು ನೋಡೆಂದರುಹಿದೆ
ಹುಳುಕು ತಾನದು ಹೊಂದದೆಂದಿಗು ಸುಳಿದು ಶುದ್ಧನ ಮಾಡಿದೆ
ಒಳಗೆ ನೀನಿಹೆ ನಲಿದು ತಿರುಪತಿ ನಿಳಯ ವೆಂಕಟನಾಥನೆ ೩

ಕ॥ ಇಂತೀ ಭಾವನೆಗೈಯುವು
ದೆಂತೊದಗಿದುದೆನಲು ಸದ್ಗುರುವ ಕರುಣವು ತಾ
ಬಂತೆನಗೆ ತಿರುಪತೀಶನೆ
ಸಂತೋಷದಿ ವಾಸುದೇವ ಯತಿಯಾರ್ಗೀಯಲ್

ಓಂ ದಯಾನಿಧಯೇ ನಮಃ

೧೪೪

ಪರಿಭಾವನೆ

ನಿಂತ ಭಾವದ ಬಗೆಯನೆಂತು ಬಣ್ಣಿಪೆನು
ಚಿಂತಾಯಕನೆ ನೀನು ಚಿತ್ಸ್ವರೂಪದಲಿ ಪ

ಸಕಲ ಲೋಕವ ಸೃಜಿಸಿ ಸಕಲದೊಳು ನೀ ನೆಲಸಿ
ಸಕಲವನು ನಿನ್ನೊಳಗೆ ಸಲೆ ಸೇರಿಸಿ
ಪ್ರಕಟಿಸಿದ ಜಗವೆಲ್ಲ ಪರಿಪರಿಯ ಕಲ್ಪದಲಿ
ಪ್ರಕೃತಿಯಲಿ ಲಯವಾಗೆ ಪರಮ ಸದ್ರೂಪದಲಿ ೧

ಚಿತ್ರಕರ್ಮಗಳಿಂದ ಚರಿಸಿ ನಾನಾತ್ವದಲಿ
ಚಿತ್ರದಂದದಿ ತೋರಿ ಚೈತನ್ಯವಾಗಿ

ಕರ್ತೃಭೋಕ್ತೃತ್ವದಲಿ ಕರಣಾದಿ ರೂಪದಲಿ
ಚಿತ್ರರಚನೆಗೆ ಸಾಕ್ಷಿ ಚಿತ್ಸ್ವರೂಪದಲಿ ೨

ಹರಿ ಹರ ಬ್ರಹ್ಮ ಯಮ ಹರಿ ವರುಣ ಧನದಾದಿ
ಸುರಮುನಿಗಳೊಳಗಿರುವ ಸುಖವೆಲ್ಲ ನಿನ್ನ
ನಿರತಿಶಯ ಸುಖದಲ್ಲಿ ಲೇಶನೀನಿತ್ತವರ
ವರದರವರೆಂದೆನಿಸಿ ಮೆರೆದು ಸುಖರೂಪದಲಿ ೩

ಈ ವಿಧದ ದೇವತೆಗಳಿರವ ನೋಡಿದರವರು
ದೇವ ನೀನೊಲಿದು ದಯಮಾಡಿದವರು
ಭಾವಿಸುತ ನಿನ್ನಂಘ್ರಿಕಮಲವನು ಭಕ್ತಿಯಲಿ
ಭಾವ ನಿನ್ನೊಳು ನಿಲಲು ಭುವನೇಶ ನಿತ್ಯದಲಿ ೪

ಪರಿಪೂರ್ಣ ಪರಮೇಶ ಪರಮ ಮಂಗಳರೂಪ
ಪರನೆನಿಸಿ ದೇಶಕಾಲಾದಿಗಳಿಗೆ
ಗುರುಮೂರ್ತಿ ಶ್ರೀ ವಾಸುದೇವಾರ್ಯರೆಂದೆನಿಸಿ
ತಿರುಪತಿಯ ವೆಂಕಟನೆ ಹೃದಯಕಮಲದಲಿ ೫

ಓಂ ಸರ್ವತೀರ್ಥಾತ್ಮಕಾಯ ನಮಃ

೧೪೫

ಬೀಗಮುದ್ರೆ

ಬೀಗಮುದ್ರೆಗಳಹವು ಬಹು ಬಾಗಿಲುಗಳಾಗಿ
ಸಾಗರಾತ್ಮಜೆಯರಸ ಸುಖದಿ ಪವಡಿಸಲು ಪ

ಪುರದ ಮುಂಭಾಗದಲಿ ಹೊಳೆವ ದ್ವಾರಗಳೈದು
ಹೊರಗುಭಯಪಾರ್ಶ್ವದಲಿ ಹೊಂದಿರುವವೆರಡು

ತೆರೆದು ಮುಚ್ಚುತಲಿರುವ ತತ್ವಕ್ಷಿಮದಲೆರಡು
ಗುರಿಕಾರರೊಳಸರಿದು ಗೋಪ್ಯರಾಗುವರಿಂತು ೧

ಮೊದಲ ಜಾವದಲಿವನು ಮುಚ್ಚಿ ಮುದ್ರಿಸುತಿಹರು
ಹುದುಗಿದೊಳ ದ್ವಾರಗಳ ಹಾಗೆ ತೆರೆದಿಹರು
ಅದರೊಳರಸೆಡೆಯಾಡಿಯಾ ಭೋಗವನುಭವಿಸಿ
ಕದಲಂತಃಪುರಕೆ ಕಡು ಮುದ್ರಿಸುವರು ೨

ಅಂತರದೊಳಿಹ ದ್ವಾರವವು ನಾಲ್ಕು ಬಳಿಕಲ್ಲಿ
ಅಂತರಿಸದಧಿಪತಿಗಳವರು ನಾಲುವರು
ಸಂತತವು ಕಾದಿರುತ ಸರಿವರೊಳಮುಖವಾಗಿ
ನಿಂತು ದೊರೆಯೊಡನಿವರ್ಗೆ ನಿದ್ರೆಯಾಗುವದಿಂತು ೩

ದ್ವಾರ ನಾಲ್ಕರೊಳೊಂದೆ ದೊಡ್ಡದದರಲಿ ದೊರೆಯು
ಸೇರಿ ನಿರತವು ತಾನು ಸಂಚರಿಪನಾಗಿ
ಮೂರುಳಿದ ದ್ವಾರಗಳು ಮುಖ್ಯವಹುದಾದಡೆಯು
ತೋರುವೊಂದು ದ್ವಾರದಲಿ ತಾವೇಕವಾಗಿಹವು ೪

ಸಣ್ಣ ದ್ವಾರಗಳಿನ್ನು ಸಾವಿರಗಳುಂಟೊಳಗೆ
ಕಣ್ಣಿ ಯೊಂದಿವಕೆಲ್ಲ ಕಟ್ಟಿರುವದದನು
ಪಿಣ್ಣವಾಗಿಯೆ ದೊರೆಯು ಪಿಡಿದೆಚ್ಚರದೊಳಿದ್ದು
ಕಣ್ಣಾಗಿ ತಾ ಕಾಯ್ವ ಕೋಟೆಯಿದನೊಳಗಿದ್ದು ೫

ಯೋಗನಿದ್ರೆಯದೆಂದಡಿದು ಪರಮ ಪುರುಷನಿಗೆ
ರಾಗವಿಲ್ಲದೆ ದೇವರಾಜಿಯಲಿ ನಿಂದು
ಭೋಗವನ್ನಿವರ್ಗೆಲ್ಲ ಬಹಿರಂಗದೊಳಗಿತ್ತು
ಭೋಗಾವಸಾನದಲಿ ಬಳಿಕೊಟ್ಟುಗೂಡಿಸಲು ೬

ಏಕನದ್ವಯನಮಲನೀಶ್ವರನು ಪರದಲ್ಲಿ
ಪ್ರಾಕೃತದ ಪದ್ಧತಿಯ ಪರಿಪಾಲಿಸುತಲು

ಲೋಕೇಶ ತಿರುಪತಿಯ ಲೋಲ ವೆಂಕಟರಮಣ
ನೀ ಕಳೇಬರದಲಿರಲಿಂದಿರೆಯನೊಳಕೊಂಡು ೭

ಓಂ ಸರ್ವಗ್ರಹರೂಪಿಣೇ ನಮಃ

೧೪೬

ಗುರುಮಂಗಳ

ಮಂಗಳ ಶ್ರೀ ಗುರುವರನಿಗೆ ಜಯ
ಮಂಗಳ ದುರಿತ ನಿವಾರಣಗೆ ಪ

ಮಾಯಾರಹಿತನಿಗೆ ಮನಕಗೋಚರನಿಗೆ
ಕಾಯ ಕರಣ ಕೃತ್ಯ ದೂರನಿಗೆ
ಹೇಯಾದಿ ಭೇದ ರಹಿತನಿಗೆ ನಿಜ ಭಕ್ತಿ
ದಾಯಕನಾದ ಶ್ರೀ ಗುರುವರ್ಯಗೆ ೧

ಜ್ಞಾನಸ್ವರೂಪಗೆ ಜ್ಞಾನದಾಯಕನಿಗೆ
ಜ್ಞಾನಶಕ್ತಿಯೊಳೊಡಬೆರದಿಹಗೆ
ಜಾನಿಸುತಿಪ್ಪರಜ್ಞಾನವಿರೋಧಿಗೆ
ತಾನೆ ತಾನಾಗಿ ನಲಿವ ಮೂರ್ತಿಗೆ ೨

ಸ್ವಾನುಭವಾನಂದ ಪರಿಶುದ್ಧನಾದಗೆ
ದೀನಜನರ ಪರಿಪಾಲಿಪಗೆ
ಮಾನರಹಿತನಿಗೆ ಮಾನ್ಯ ಸನ್ನುತನಿಗೆ
ಭಾನುವಿನಂದದಿ ಹೊಳೆವನಿಗೆ ೩

ಪುಣ್ಯ ಪಾಪಗಳೆಂಬ ಕಣ್ಣಿಯ ಕಟ್ಟನು
ಚೆನ್ನಾಗಿ ಕಳಚಿದ ಚಿನ್ಮಯಗೆ
ತನ್ನವರನ್ಯರೆಂತೆಂಬ ಭೇದವ ಬಿಟ್ಟು
ತನ್ನಂತೆ ತನ್ನವರನು ಮಾಳ್ಪಗೆ ೪

ಸುರತರು ರೂಪಗೆ ಸುರಭಿಯಂತಿರುವಗೆ
ಪುರುಷಾರ್ಥ ದಾನಿಗೆ ಪುಣ್ಯಾತ್ಮಗೆ
ತಿರುಪತಿ ನಿಲಯ ಶ್ರೀ ವೆಂಕಟರಮಣಗೆ
ಗುರು ವಾಸುದೇವ ರೂಪಿನ ದೇವಗೆ ೫

ಕಂ॥ ಇಂತೀ ಪೂಜಾ ಸ್ತುತಿಗಳ
ಸಂತಸದಿಂ ಪಾಡಿ ಪೊಗಳಿ ಕೇಳುವ ಜನರಿಗೆ
ಸಂತತ ಕಾಮಿತ ವರಗಳ
ಸಂತೋಷದಿ ಕೊಡುವ ನೊಲಿದು ವೆಂಕಟರಮಣಂ

ಓಂ ಪರಾತ್ಪರಾಯ ನಮಃ

೧೪೭

(೪) ಕಾಯ-ಜೀವ ಸಂವಾದ

ಕಂ॥ ವಿರತಿಯು ಪುಟ್ಟದೆ ಸಂಸ್ಕೃತಿ
ಹರೆಯದೆನುತ್ತೊಲಿದು ಗುರುತಾವಾದಿಪನೆವದಲಿ
ಬರೆ ಭಸೂಸುರನಾಗಿ ಕಾಣದೆ
ದುರುನುಡಿಗಳ ನುಡಿದೆನದ ಕೆತೊಲಗದೆ ಮತ್ತಂ ೧

ಪರಿಪರಿ ಶಂಕೆಗಳಿಂದಲಿ
ದುರುನುಡಿಗಳ ಬಿಡಿಸಿಯುತ್ತರಗೊಡುವಂತೆನ್ನಯ
ಕರಣದೊಳೆಚ್ಚರದೋರು
ತಿರಿಸಲೆರಗಿಯೆ ಸಂಸಾರದಿರವ ಬಿನ್ನವಿಸಿದೆನಾಂ ೨

೧೪೮

ನಿಮ್ಮ ನುಡಿಗಳ ಕೇಳಲೆನಗೆ ಹೊತ್ತಿಲ್ಲಿಯದು
ನಮ್ಮ ಗೃಹಕೃತ್ಯಗಳು ಬಹಳವಾಗಿಹವೊ ಪ

ನಮ್ಮಯ್ಯನೊಂದು ಗ್ರಾಮವನೇಕಸ್ವಾಮ್ಯದಲಿ
ತಮ್ಮ ದಂಪತಿಗಳುಪಭೋಗಕೆಂದು
ತಮ್ಮಲ್ಲಿ ತಾವೆ ಸಂವಾದಿಸಿದರವರಲ್ಲಿ
ಹಮ್ಮು ಕಡೆಯಾದ ಹದಿಮೂವರುದಿಸಿದರೂ ೧

ದುರುಳರಾಗನು ಹಿರಿಯನವನನು ಜರುಳಿದವರು
ಕಿರಿಯನಭಿಮಾನನೆಂಬುವನು ನಾನು
ಹಿರಿಯತನದಭಿಮಾನದಿಂದವರು ಬಳಿಕೆನ್ನ ಪರಿ
ಪರಿಯ ಬಾಧೆಯಲಿ ಕ್ಲೇಶ ಬಡಿಸುವರು ೨

ಸ್ತ್ರೀ ಕಾಮನೆ ರಾಗ ಪ್ರತಿಕೂಲದಿಂ ದ್ವೇಷ ಬೇಕೆಂಬದನೆ
ಕಾದುನುಳಿಯೆ ಕ್ರೋಧಾ
ಆಕ್ರಮಿಸಿ ಸಕಲವನು ಬಚ್ಚಿಡುವನವ ಲೋಭ
ಸಾಕು ಗುರುಹಿರಿಯರೆಂಬವರರಿಯೆ ಮೋಹಾ ೩

ನಿತ್ಯವಲ್ಲದ ಸಿರಿಯ ನಂಬಿ ಬೆರೆತಿಹಮದನು
ಉತ್ತಮರ ಕೂಡೆ ಸೆಣೆಸುವನು ಮತ್ಸರನು
ಮತ್ತೆ ಈರ್ಷ್ಯನು ದುಃಖನನ್ಯರಿಗೆ ಬಗೆಯುತಿಹ
ವ್ಯರ್ಥದಿಂ ಬಸವಳಿಯುತಿಹನಸೂಯಕನು ೪

ದಂಭವನೆಂಬವನಲ್ಲಿ ಪುರುಷಾರ್ಥವಿಸಿಕಿಲ್ಲ
ಹಂಬಲಿಸುತಿಹ ದರ್ಪಕೊಬ್ಬಿ ಬರಿದೆ
ಉಂಬರೊಬ್ಬರಿಗಿಲ್ಲ ಸಕಲವೂ ನನಗೆಂದು
ದೊಂಬಿಯಲಿ ನಾ ಸಿಕ್ಕಿ ಬಳಲುತಿಹೆನಾಗಿ ೫

ವೃತ್ತಿಯೆರಡದರಲ್ಲಿ ಫಲವೆರಡು ಜನ್ಮಕ್ಕೆ
ಬಿತ್ತಿ ಬೆಳೆವರೆ ಚೌಳು ಜಲವ ಕಾಣೆ
ಒತ್ತರಿಸಿ ಬರುತಿರುವ ಜ್ಞಾತಿಗಳ ಬೆಂಕಿಯಲಿ
ಹೊತ್ತು ಹೊತ್ತಿಗೆ ಬರಿದೆ ದಹಿಸುತಿಹೆನಾಗೀ ೬

ಬರಿಯ ಭ್ರಾಂತಿನ ಬಲೆಯ ಬೀಸಿ ನೋಡುತ್ತಿರುವ
ತಿರುಪತಿಯ ವೆಂಕಟನ ಚರಣಗಳನು
ಕರಗಳಲಿ ಬಿಗಿಯಪ್ಪಿ ಶಿರವೆರಗಿ ಗುರುಮುಖದಿ
ಅರುಪಿದುದ ನಿಲಿಸೆಂದು ಬೇಡಿಕೊಳುತಿಹೆನು ೭

ಕಂ॥ ತನುವಿನೊಳಭಿಮಾನವಿರಲೀ
ಘನತರ ಸಂಸಾರ ದುಃಖ ತೊಲಗದು ಸತ್ಯ
ತನು ನಿತ್ಯತೆದೋರ್ದಕಾರಣ
ಮನದೊಡನಿಂತೆಂದು ಜೀವನನು ವಾದಿಸಿದಂ

೧೪೯

ಕಾಯವಿದು ನಿತ್ಯವೆಂದು ನೆಚ್ಚಬೇಡ
ಮಾಯಾಕಾರ್ಯನಾಗಿ ಮೆರೆವುದಿದು ತಿಳಿದುನೋಡಾ
ಕಾಯವಳಿವ ಮುನ್ನ ಹರಿಯ ಕೃಪೆಯ ಜೋಡ ತೋಡು
ನಾಯಬಾಯತುತ್ತ ನಂಬಿ ಬೆರೆಯ ಬೇಡ ಪ

ಮಾತಾಪಿತೃರೇತಸ್ಸಿಂದ ಪತನವಾಗಿ ಪಂಚ
ಭೂತಕಾರ್ಯದಿಂದ ಸ್ಥೂಲಾಕಾರವಾಗಿ
ರೇತಸ್ಸು ರಕ್ತಗಳಾರು ಕೋಶವಾಗಿ ಕರ್ಮ
ಜಾತಕಾಯ ಹೀಗೆ ತೋರುತಿಪ್ಪುದಾಗಿ ೧

ಹುಟ್ಟಿ ಬೆಳೆದು ನಲಿದು ಮುಪ್ಪಿನಿಂದ ಕ್ಷೈಸಿ ಕಡೆಗೆ
ನಷ್ಟವಾಗಿ ಹೋಗಿ ಮಣ್ಣಿನೊಳಗೆ ಬೆರಸಿ
ಇಷ್ಟೂ ಪರಿಯೊಳಾರು ವಿಕಾರವ ತೋರಿಸಿ ವಂ
ದಿಷ್ಟೂ ಫಲವಿಲ್ಲದಂತೆ ಯಿದಕೆ ಭ್ರಮಿಸಿ ೨

ಕಾಲಕರ್ಮ ಪಂಚಭೂತ ಮಿಳಿತವಾಗಿ ಇದಕೆ
ಮೂಲವಾದ ಕರ್ಮವೆ ಪ್ರಧಾನವಾಗಿ

ಢಾಳಿಸುವಾತ್ಮನ ತೇಜಾಧಾರವಾಗಿ ಕರ್ಮ
ತೇಲಲಾಗಿ ದೀಪದಂತೆ ಪೋಪುದಾಗಿ ೩

ಬತ್ತಿಯನ್ನು ಎಣ್ಣೆಮುಗಿವ ಸಮಯಕಾಗಿ ಎಣ್ಣೆಯೂ
ಮತ್ತೆ ತಂದು ತುಂಬೆ ದೀಪ ಪೋಗದಾಗಿ
ಇತ್ತೆರದ ಕರ್ಮದಿಂದ ಚಕ್ರವಾಗಿ ಜನ್ಮ
ಮೃತ್ಯುಗಳೀ ದೇಹಕ್ಕವಧಿಯಿಲ್ಲವಾಗಿ ೪

ತೈಲಮಿಶ್ರವರ್ತಿಯಗ್ನಿ ಸಮ್ಮೇಳದಿಂದಾ ದೀಪ
ಬಾಳಿಬೆಳಗುವುದು ತೈಲದಾಧಾರದಿಂದಾ
ತೈಲಮುಗಿಯೆ ದೀಪ ಕೆಟ್ಟು ಹೋಹ ಛಂದದಂತೆ
ಕೇಳು ದೇಹವೀಪರಿಯೊಳಿಹುದರಿಂದಾ ೫

ಹುಟ್ಟಿದಲ್ಲಿ ಸೂತಕವು ಹೊಂದಿದಲ್ಲಿ ಸೂತಕವು
ಮುಟ್ಟಿವಸ್ತುಗಳುಚ್ಚಿಷ್ಟಂಗಳಹವೂ
ನಟ್ಟನಡುವೆ ಬಂದದೆಂದು ಶಿಷ್ಟರಿದ ಮನ್ನಿಸರು
ನಷ್ಟವಾಗಿ ಕಡೆಗೆ ತಾನು ಹೋಹ ದೇಹವೂ ೬

ತಾನು ಬಂದ ಬಗೆಯು ತನಗೆ ತಿಳಿಯದಿದ್ದರೂ ನಿನ್ನ
ಸೂನು ಬಂದ ಬಗೆಯ ನೋಡಿ ತಿಳಿದುಕೊಂಡಾರು
ಹೀನನಾದ ಕಾಯವಭಿಮಾನಿಸದಿರು ಮುಂದೆ
ಶ್ರೀನಾಥನ ಪದವ ಭಜಿಸಿ ಸುಖದಿಂದಿರುತಿರು ೭

ಮನವೆ ಮಿಥ್ಯದೇಹದಭಿಮಾನವೇತಕೆ ಬಹು
ಜನುಮ ಜನುಮದಲ್ಲಿ ದುಃಖದಗೆ ನೂಕೆ
ಕೊನೆಗೂ ಹೀಗೆ ಬಂಧವನ್ನು ಕೊಡುವದಕ್ಕೆ ಮಚ್ಚಿ
ಜಿನುಗುವಿರಿಕೆಯೇನು ಇನ್ನೂ ಬಿಡದೆ ಬಯಕೆ ೮

ಘೋರರೂಪಾಪಾರಸಂಸಾರಾಂಬುಧಿಯನ್ನೂ
ಮೀರಲೇರು ವೆಂಕಟೇಶನಾಮನಾವೆಯನ್ನು

ಧೀರಗುರು ವಾಸುದೇವರಂಘ್ರಿಯನ್ನು ಬೇಗ
ಸಾರುವ ವಿವೇಕತನವಂದು ಚೆನ್ನೂ ೯

ಕಂ॥ ಜೀವನು ವಿರತಿಯ ಸಾಧಿಪ
ಭಾವಧಿ ಮನದೊಡನೆ ಕಾಯವ ನೆಚ್ಚದಿರೆನ್ನುತ
ಕೈವಲ್ಯದ ಪಥವ ಪೇಳಲು
ಜೀವನೊಳಾಡಿದುದು ಕಾಯವಚ್ಚರಿಯೆನ್ನಲೂ

೧೫೦

ಎನ್ನನು ನೀ ಜರೆವೆ ಜೀವನೆ
ನಿನ್ನನೀ ತಿಳಿದೆನೆಂದೂ
ಮುನ್ನ ಮಾಡಿದ ಪುಣ್ಯಕರ್ಮಂಗ
ಳೆನ್ನಿಂದ ಮನ್ನಿಸದುಪಕಾರವಾ ಜೀವಾ ಪ

ದೇಹವು ಹೇಯವೆಂಬೆ ಮತ್ತೀಗ
ದೇಹದೊಳಿರುತಿರುವೆ
ದೇಹದಾಧಾರದಲ್ಲೀ ಧ್ಯಾನಿಸಿ
ಸೋಹಂ ಭಾವನೆ ಬಂದುದೂ
ಉಹಾಪೋಹಗಳಲ್ಲಿ ಚದುರನು ನಾನೆಂಬೆ
ಓಹೊ ನಾನಿಲ್ಲವೆ ಜೀವಾ ೧

ಚಿತ್ತೆ ತಾ ಪ್ರಕೃತಿಯಾಗೀ ಭೂತದ
ಮೊತ್ತವೆಂದೆನಿಸಿತಲ್ಲೈ
ಮತ್ತೆ ಭೂತಂಗಳವೂ ನಾಲ್ಕುಳ್ಳ
ತತ್ವವಿಪ್ಪತ್ತಾಯಿತು
ಹತ್ತಿಂದ್ರಿಯಂಗಳಿಂದ ವಿಕರ್ಮಗಳು ಪುಟ್ಟಿ
ಮುತ್ತೆರನಾಯಿತಲ್ಲೈ ಜೀವಾ ೨

ಕನಕವೆ ಕುಂಡಲಾದಿ ಭೂಷಣ
ಭಣಿತೆಯ ತಾಳಿರಲು
ಕನಕವಲ್ಲವೆ ಭೂಷಣ ಯೆಣಿಸಲು
ಚಿನುಮಯಾತ್ಮಕನಿಂದಲೆ
ಜನಿಸಿ ದೃಶ್ಯತ್ವದಿ ತೋರಿದಡೇನಾಯಿತು
ತನುವಾತ್ಮನಲ್ಲವೇನ್ಯೆ ಜೀವಾ ೩

ಮಾಡಿದ ಉಪಕಾರವ ಮರೆಯುವ
ಮೂಢಗೆ ನರಕವೆಂದು
ಆಡದೆ ಶೃತಿನಿಕರ ನೀನದ
ನೋಡದೆ ನುಡಿಯುತಿಹೆ
ಕೂಡಿಕೊಂಡೆನ್ನನು ನಿಜದೊಳು ಬೆರೆದರೆ
ಪ್ರೌಢ ನೀನೆನಿಸಿಕೊಂಬೆ ಜೀವಾ ೪

ಕಾರ್ಯಕಾರಣ ರೂಪವಾ ನೋಡಲು
ಕಾರ್ಯಕಾರಣವಲ್ಲವೆ
ಸೂರ್ಯನಿಂದಾದುದಕ ಬೆರೆಯದೆ
ಸೂರ್ಯನ ಮರಳಿ ನೋಡೂ
ಧೈರ್ಯಶಾಲಿಯೊಳಿಪ್ಪ ಧೈರ್ಯತ್ವವಾತನ
ವೀರ್ಯವಲ್ಲವೆ ನೋಡಲೂ ಜೀವಾ ೫

ರೂಪನಾಮಗಳೆರಡೂ ಸತ್ತಾನು
ವ್ಯಾಪಿಸಿ ಜಗವಾದುದು
ದೀಪದೊಳಗೆ ಕಾಳಿಕೆ ತೋರ್ಪಂತೆ
ಈ ಪರಿಯಲಿ ಮಾಯೆಯು
ವ್ಯಾಪಾರಂಗಳನುಪಸಂಹರಿಸಲು ಕಾಯ
ವ್ಯಾಪಕನೊಳು ನಿಂದುದೂ ಜೀವಾ ೬

ಪೊಳೆದೆನು ನಾ ಮೊದಲೂ ಆಮೇಲೆ
ಪೊಳೆದೆ ನೀ ಪ್ರತಿಫಲಿಸಿ
ಜಲಗತ ಪ್ರತಿಬಿಂಬವೂ ನಿಜವಲ್ಲ
ದಳಿವಂತುಪಾಧಿಯಿಂದಾ
ನಿಲುವುದು ನಿಜಬಿಂಬವಾಭಾಸ ನೀ ಪುಸಿ
ನಿಲುವೆ ನಾ ನಿಜದೊಳಗೆ ಜೀವಾ ೭

ಬಂಜೆಯ ಮಗ ನಿಜವೊ ಅವನಿಗೆ
ಮುಂಜಿಯೆಂಬುದು ನಿಜವೋ
ಅಂಜಿಕೆದೋರಿಸಿತು ರಜ್ಜುವು
ರಂಜಿಸಿ ಸರ್ಪನಾಗಿ
ವ್ಯಂಜಿಸಿ ಕರಣದಿ ನಿದ್ರೆಯೊಳ
ಭಂಜಿಸಿ ಮಂಜಿನಂದದಿ ಪೋಪೆಯ್ಯೆ ಜೀವಾ ೮

ಇರಿಸಲು ಬೇರೆನ್ನನು ತೆರಹಿಲ್ಲ
ಬೆರೆಸಾತ್ಮನೊಳು ಬಿಡದೆ
ಕಿರಣಂಗಳು ರವಿಯ ಬಿಟ್ಟೊಮ್ಮೆ
ಇರಬಲ್ಲವೆ ನೋಡಲು
ತಿರುಪತಿನಿಲಯ ಶ್ರೀ ವೆಂಕಟರಮಣನ
ಚರಣನಾನಲ್ಲವೇನ್ಯೆ ಜೀವಾ ೯

ಕಂ॥ ಇಂತೀ ಪರಿಯಲಿ ಜೀವನ
ನಿಂತಿರುವವನಿಲ್ಲದವನ ನುಡಿವದು ಸಹಜವು
ಎಂತಾದರು ತನ್ನ ತಿಳಿಯದೆ
ಮುಂತೋರದ ನುಡಿಯಿದೇನೆನೆ ಮುಳಿದಂ ಜೀವಂ

೧೫೧

ಕಾಯ ನೀ ನನ್ನ ಜೀವನೆನ್ನುವೆ ಕೇಳು
ಬಾಯ ಬನ್ನಣೆ ಮಾತ್ರವಲ್ಲದೆ ಬಗೆಯಲೇನುಂಟದರೊಳು ಪ

ತೋರಿದೆ ಭೂತ ತತ್ವ ಸಂಘದಿ ನೀನೂ
ಭೂರಿ ಭೂತಗಳೆಲ್ಲ ಮಾಯಾ ಕಾರ್ಯವಾಕೆಯೆ ಮಿಥ್ಯವೂ
ಈ ರೀತಿಯಿಂದಲಾತ್ಮನಿಟ್ಟೆಯಲಿದು
ಸೇರಿದಂತಿಹುದಾಗಿ ಭ್ರಾಂತಿಯು ಜಾರುವನ್ನಗ ಪೊಳೆಯಲು ೧

ಮುನ್ನ ನೀ ಬಂದೆನೆಂಬಲ್ಲಿ ಪರಮನು
ಭಿನ್ನವಿಲ್ಲದೆ ಪೂರ್ಣವಾಗಿರಲಿನ್ನು ನಿನಗೆಡೆಯಾವದೂ
ಅನ್ಯ ವಿಲ್ಲದನನ್ಯನೀಶನೆ ನಾನು
ನಿನ್ನ ಕಾರ್ಯದ ನೇತ್ರಮಾತ್ರಕ್ಕುನ್ನತ ಕೃತಿಯಾಗಿರೇ ೨

ಮರುಭೂಮಿಯೊಳು ಮುಸುಕೆ ಮಿತ್ರನ ಕಾಂತಿ
ಕೆರೆಯ ನೀರಿನ ಹಾಗೆ ಕಾಣುತಲಿರಲು ನೋಡಿದರುದಕವೆ
ಬರಿಯ ಚೌಳೆಂತಾ ಪರಿಯು ನಿನ್ನಯ ತೋರ್ಕೆ
ನಿರತ ಉಂಟೆಂಬಂತೆ ನಿನ್ನಯ ಮರುಳಿನಿಂ ಮುಂದಿರುತಿರೆ ೩

ಹೊಳೆಯಲಿಲ್ಲವು ಹುಸಿಯಾಗಿ ನೀ ಮುನ್ನ
ಬಳಿಕ ನಿನ್ನೊಳು ಬದ್ಧನೆಂಬೀ ಬಗೆಯು ತನಗೆಂತಪ್ಪುದೂ
ತಿಳಿದು ನೋಡಲು ತಾನೊಬ್ಬನಾತ್ಮನು
ಕಳೆದು ಕೂಡುವ ಮಾತು ಮಾತ್ರವೆಯಳವಿಗೊಂಡಿರವಿಷ್ಟಕೆ ೪

ಅರಿವಿನಾ ಘಟ್ಟಿಯಾಗಿಹೆ ನಾ ನಿತ್ಯ
ವರಿವು ಮರವೆಗಳೆಂದು ತೋರ್ದರು ಕರಣಧರ್ಮಗಳಲ್ಲದೆ
ಬೆರದು ಬೇರಾಹ ಬಗೆಯಂದಿಗಿಲ್ಲವು
ತಿರುಪತಿಯ ಶ್ರೀ ವೆಂಕಟೇಶನೆ ತರುಬಿಕೊಂಡಿರೆ ವಿಶ್ವವಾ ೫

ಕಂ॥ ನುಡಿಯಲು ಜೀವನು ಕೋಪದಿ
ಕಿಡಿಗೆದರುವ ಕಂಗಳಿಂದಭಿಮಾನನ ಬಲದಿಂ
ತಡೆಯದೆ ತನು ಜೀವನನಾ
ಭರ್ಜಿಸುತ ವಾದಿಸಿದುದ ಪುಸಿತನ ಬಂತೆಂಬುದರಿಂ

೧೫೨

ಏನೊ ಜೀವ ನನ್ನ ನುಡಿವ ನಾಲಗೆಯು ನಿನ್ನ
ದೇನೊ ಕಾಣೆ ನಿನ್ನಾ ಬಣ್ಣವನೆನ್ನಾಣೆ ಕೇಳು ಪೇಳುವೆನೂ ಪ

ಭೂತಂಗಳು ಪುಸಿಯೇನೊ ಮಾತೆ ಮಾಯೆಯಲ್ಲವೇನೊ
ಏತಕೀಗರ್ವವು ನೀನು ಜಾತನಾದ ಬಗೆಯೇನೊ
ಕೈತವವ ಬಿಡುಯಿನ್ನೂ ಹೇತು ಹೀನೋಕ್ತಿಗಳೇನು
ನೀತಿಯಾಗಿ ಪೇಳು ನಾನು ತಾತಪ್ಪಮಾನನಪ್ಪೆನೂ ೧

ಬಿಸಿಲು ದೊರೆದೇರನೆ ನಾನು ಪುಸಿಯಮಾತ ನುಡಿವೆ ನೀನು
ನಶಿದು ಪೋಪೆನಹುದು ನಾನು ಹಸದೊಳಿಪ್ಪುದುಂಟೆ ನೀನು
ಸಸಿನೆ ತಿಳಿದುಸುರಿನ್ನು ಕುಸಿಯ ಹಾಕದಿರೆನಿನ್ನೂ
ನುಸುಳುದಾರಿ ಮನವನ್ನು ಹೊಸದು ಕೊಂಡಾಡಿದರೇನು ೨

ನೋಡುವ ಕಣ್ಣು ನಿನ್ನದೇನೊ ಆಡುವಾಟನಿನ್ನದೇನೊ
ಓಡುವ ಕಾಲು ನಿನ್ನದೇನೊ ನೀಡುವ ಕೈ ನಿನ್ನದೇನೊ
ಬೀಡ ಬಿಡುವರೆ ನೀನು ಗೂಡಾಗಿಯಿದ್ದೆ ನಾನು
ಕೂಡಲಿಂದ್ರಿಯ ಕರಣ ತಾನು ಕಾಡುಪಾಲಾಗುವೆನೀನು ೩

ಎದ್ದು ನಡೆದಾಡುವೆ ನಾನು ನಿದ್ರೆಗೈವೆ ಮಲಗಿ ನಾನು
ಹೊದ್ದುಕೊಂಬೆ ಹೊದಿಕೆಗಳನು ಗದ್ದುಗೆಗಧಿಕಾರಿ ನಾನು
ಸಿದ್ಧಿಯೆನ್ನಿಂದಲೆ ತಾನು ನಿರ್ಧರಿಪುದಿದ ನೀನು
ಬುದ್ಧಿಹೀನನಾಗದಿರಿನ್ನು ಬದ್ಧವಾಡು ಕೇಳ್ವೆ ನಾನು ೪

ತಿರುಪತೀಶನಂಘ್ರಿ ನಾನು ಬರಿಯ ಪ್ರತಿಬಿಂಬ ನೀನು
ಗುರುವಾಸುದೇವಾರ್ಯರನ್ನು ಎರಗಿ ಸಂಪಾದಿಸಿದೆ ನಾನು
ಕರೆದು ಬಿಗಿದಪ್ಪಿದರೆನ್ನುವನು ಒರೆಯೆ ಕಿವಿಯೊಳ್ಮಂತ್ರವನ್ನು
ಭರದಲೆನ್ನ ಜಿಹ್ವೆ ಜಪಿಸಿ ಅಂತೆನೆಂಬೆ ನಿನ್ನ ನೀನು ೫

ಕಂ॥ ಒರಟುತ್ತರದಿಂದ ದೇಹವು
ಬರಿ ಜಗಳವ ತೆಗೆಯೆ ಜೀವನರಿತಿದರಂದವ
ನೆರೆಮೂರ್ಖರ ದಾರಿಯೊಳಗೆ
ಬರುತರುಪುವ ಜಾಣನೆಂದು ನೀತಿಯ ನುಡಿದಂ

೧೫೩

ಛಳಿಸದಿರು ಚಂಡಿ ತನುವೆ ನೀನು
ಒಳಗಾಗದೊರಟುತನವೆ ತರವೆ ಪ

ಗರ್ಭವಾಸವಗಳಿಸಿದೆ ಹಾಗೆ ನೀ
ನರ್ಭಕತ್ವದಲಾಡಿದೆ ಬಿಡದೆ
ನಿರ್ಭಯದಿ ನೀ ಬದುಕಿದೆ ಭೋಗದಲಿ
ದುರ್ಭಗರ ದಾರಿಗೊಲಿದೆ ನಲಿದೆ ೧

ಕಾಮಾಂಧಕಾರಕೆಳೆದೆ ನನ್ನ ನಿ
ಷ್ಕಾಮದಲಿ ನಿಲಲೀಸದೆ ಕಳದೆ
ನೇಮಕ್ಕೆ ನೀನಲಸಿದೆ ಶೀತೋಷ್ಣ
ಭೀಮಕ್ಕೆ ನೀ ಬೆದರಿದೆ ಬರಿದೆ ೨

ಕಾಲಗಳ ಬಹು ಕಳಸಿದೆ ವ್ಯರ್ಥದಲಿ
ಶ್ರೀಲೋಲನನುಸರಿಸದೇ ಹೋದೆ
ಮೂಲವನೆವರೆ ಮಾಡಿದೆ ದೋಷಗಳ
ಕೀಲುಗಳಿಗಳಿಕಾಲ್ನೀಡಿದೆ ಜಡಿದೆ ೩

ಮನವೀಗ ಮಾಡಿತಿನಿತಾ ನಾನಿದಕೆ
ಮನೆ ಮಾತ್ರವಾಗೆ ಮಾತನಿಡುತಾ
ತನುವಿನಲಿ ತಪ್ಪಿಡಿಯುತಾ ಯಾಕೆ ನೀ
ನೆನುವೆಯನೆ ನೀನೆ ಚಿತ್ತವ್ರಾತಾ ೪

ಮನ ನೀನೆ ನೀನೆ ಮನವೂ ಕ್ರಿಯೆಯ
ಮನ ಮಾಡೆ ಮೂಡ್ದೆತನುವೂ ಘನವೂ
ನೆನೆಯಲೆರಡಿಲ್ಲ ನೀವು ಏಕತ್ವ
ವೆನುತೆಂದೆನಿರೆ ಬಂಧವೂ ದಿಟವೂ ೫

ಕಾರಣವೆ ಮನವಾದರೆ ಅದರೊಡನೆ
ಹೋರುವೆನು ನಾನು ಹೆದರೆನದರೆ
ತೋರೆ ನೀ ಮುಂದೆ ಬೇರೆ ಬಂಧನವೂ
ಬೀರಿತಿದು ನೀ ಕಯ್ಯಾರೆ ತಾರೆ ೬

ನೀ ಬಾರದಿರುವೆಯಲ್ಲ ಯೀಮಾತ
ನಾ ಬಾಯಲೆನ್ನೆನಲ್ಲಾ ಸೊಲ್ಲಾ
ಆ ಬಗೆಯ ಮೂಡಿತಿಲ್ಲ ಇದಿರಾಗಿ
ನೀ ಬಂದು ನಿಲಲು ಸಲ್ಲಾ ಹೊಲ್ಲಾ ೭

ನನಗುಂಟು ಮನಸಿಗುಂಟು ವ್ಯವಹಾರ
ನಿನಗಾಗಬಾರದಂಟೂ ನಂಟು
ಜನಿಸಿಬರೆ ಬಂತುಗಂಟು ಆವರಣ
ವೆನಗಾಯಿತು ಪದರವೆಂಟೂ ಬಂಟೂ ೮

ಅನುಮಾನವಿಲ್ಲವಿಸಿದಕೆ ಪ್ರತ್ಯಕ್ಷ
ವನುಭವಿಸಿ ಪೇಳ್ದೆನದಕೆ ಅಳುಕೆ
ಜಿನುಗದಿರು ಮುಂದೆ ಜೋಕೆ ಹರಿಯಂಘ್ರಿ
ಯನುಸರಿಸದಂದವೇಕೆ ಬೇಕೆ ೯

ಹರಿಪಾದಪದ್ಮವನ್ನು ನಾನು
ಬೆರೆವೆ ನೀ ಬಳಲಿಕೆಯನೂ ಯಿನ್ನೂ
ತರಬೇಡ ತಥ್ಯವನ್ನು ಪಡೆವದಕೆ
ಬರೆ ಮುಂದೆ ಬಹುಮಿತ್ರನೂ ನೀನು ೧೦

ಶರೀರವಿರೆ ಶ್ರಮವು ನಿನಗೆ ಜನ್ಮಗಳ
ಧರಿಸುತ್ತ ದಣಿವು ನಿನಗೆ ಹೀಗೆ
ಸರಿಯಾಯ್ತು ದುಃಖ ನಮಗೆ ಇದಕಂಡು
ಇರುವ ಬಗೆ ವಿಶ್ವದೊಳಗೆ ಹೇಗೆ ೧೧

ಅದರಿಂದ ನೀನು ನಾನು ಒಂದಾಗಿ
ಹುದುಗಲಾದಿಯನೀಶನೂ ತಾನು
ಪದವಿಯನು ಪಾಲಿಸುವನು ಬಳಿಕಲಿ
ನ್ನುದಯಿಸುವಕಷ್ಟಗಳನೂ ಕೊಡನೂ ೧೨

ಬರುವದಾನಂದ ನಮಗೆ ತಿರುಪತಿಯ
ವರದ ವೆಂಕಟರಮಣಗೆ ಎರಗೆ
ಭರಿತಾತ್ಮಗಾವು ಹೊರಗೆ ಹೀಗೆ ನಾ
ವಿರಲುಂಟು ದೇವನೊಳಗೆ ಸಲುಗೆ ೧೩

ಕಂ॥ ಛಂದಾನುವೃತ್ತಿ ಮೂರ್ಖರಿ
ಗೆಂದಾಡಿದ ನುಡಿಯು ಸತ್ಯವಾಯಿತೀ ದೇಹವು
ಮುಂದೊರದೆ ಪೇಳಲುತ್ತರ
ನೀಂದೊಡಬಡಿಸುತ್ತ ಕೇಳಿಕೊಳುತಿಹದೊಲವಿಂ

೧೫೪

ನಿನ್ನ ಮಾತ ಕೇಳಿ ಗಾಳಿ ನಿಲ್ಲಬೇಕೆ ಶೀತ
ವನ್ನು ಸಹಿಸು ನೀನು ಮಾಯಾಬಲೆಗೆ ಸಿಲುಕೆ ಪ

ಮುನ್ನ ಕಾಯವೆತ್ತಬೇಡವೆಂದಡದಕೆ ನೀನು
ಧನ್ಯನಾಗದೀಗ ಋತುಧರ್ಮಕಳುಕೆ ಅ.ಪ

ಬಲೆಯ ಬೀಸಬೇಡವೆಂದು ಪಕ್ಷಿ ಪೇಳಲು ಕೇಳಿ
ಬಲೆಯ ಬೀಸುದಿಪ್ಪುದೆಂತು ಪಕ್ಷಿ ಸಿಕ್ಕಲು
ಅಳುಕಿ ಸಾದು ಬಲೆಯ ಬಾಧೆ ಬಲಿಗನಾಗಲು ಹಾಗೆ
ಛಳಿಯು ನಿನ್ನ ಬಾಧಿಸದು ಪರಮನಾಗಲು ೧

ಬಲಿಗನಂತು ಪಕ್ಷಿ ಭಕ್ಷಣೆಯ ಮಾಳ್ಪನು ಹಾಗೆ
ನಳಿನನಾಭ ತಾನು ವಿಷಯಾಸಕ್ತನೊ ಯೇನು
ಸಿಲುಕದಿಪ್ಪನೊಂದರೊಳಗೆಂಬುದಿದೇನು ಎಂದು
ಬಲಿಯವಾಗೆ ಶಂಕೆ ಮನವೆ ನಿನಗೆ ಪೇಳ್ವೆನು ೨

ಇಲ್ಲವಾದ ಜಗವ ಮಾಯೆಯಿಂದ ನಿರ್ಮಿಸಿ ತಾನು
ಅಲ್ಲಿ ಪೊಕ್ಕು ಉಳ್ಳದೆಂಬಹಾಗೆ ನಟಿಸಿ
ನಿಲ್ಲಲೀಸದಿದನು ಮತ್ತೆ ಕ್ಷಣದೊಳಳಿಸಿ ಕೂಡೆ
ನಿಲ್ಲುವನು ನಿಜದಿ ನಿರ್ವಿಕಾರಿಯೆನಿಸೀ ೩

ತಾನು ಸುಖಿಸುವಂತೆ ಎನ್ನ ಸುಖಿಸಬಾರದೆ ಲೋಕ
ದೀನಬಂಧುವೆಂಬ ನುಡಿಯ ಹೋಗಲಾಡದೆ
ಮಾನವರ ತನ್ನ ಹಾಗೆ ಕಾಣಬಾರದೆ ಎಂದು
ನೀನು ಕೇಳೆ ಪೇಳ್ವೆ ನಿನ್ನ ಮಾತ ಮೀರದೆ ೪

ಆನಂದರೂಪಗೆ ದುಃಖ ತೋರಿಸುವದೆ ಆತ
ನೀನೆಂದೊಮ್ಮೆ ತಿಳಿಯೆ ನಿನಗೆ ದುಃಖ ಮರೆಯದೆ
ಭಾನುವಿನ ಮುಂದೆ ತಮವು ನಿಲ್ಲಬಲ್ಲುದೆ ಜೀವ
ನಾನೆಂಬುದರಿಂದ ಸುಖವು ಮರೆಸಿಕೊಂಡಿದೆ ೫

ವೇದದಲ್ಲಿ ಪೇಳಿದಂತೆ ಋಷಿಗಳೆಲ್ಲರೂ ತಾವು
ವೇದವೇದ್ಯಬ್ರಹ್ಮವೆಂದು ಸುಖವ ಕಂಡರೂ

ಆದಿಮಧ್ಯತುದಿಗಳಲ್ಲಿ ಬ್ರಹ್ಮವೆಂಬರು ಅದ
ಸಾದರದಿ ಸಾಧಿಸಲು ಸುಖವ ಕಾಂಬರು ೬

ಅರಿವು ಮರವೆ ಎರಡು ಬಳಿಕ ಕರಣಧರ್ಮವೂ ತಾವು
ಕರಣಸಾಕ್ಷಿಯಾದ ನಿಜವನರಿಯಲರಿಯವು
ಕುರುಹನಿಟ್ಟು ನೋಡಲರಿವಿನೊಳಗೆ ಬೆರೆವವೂ ಕೂಡೆ
ತಿರುಪತೀಶ ವೆಂಕಟೇಶನೊಳಗೆ ಬೆರೆವವೂ ೭

ಕಂ॥ ತನು ತಾ ಜೀವನ ನುಡಿಗೇ
ಳ್ದನುವಾಗಿ ಮೇಲೆ ಮುಕ್ತಿಮಾರ್ಗಕ್ಕೆತನದಿ
ಅನುಕೂಲನಪ್ಪೆನು ನಾ ನಿ
ನ್ನನು ಮೀರೆನೆನುತ್ತ ಪೇಳುತ ತನುವಾದಿಪುದು

೧೫೫

ಯುಕ್ತಿ ಯುಕ್ತದಮಾತ ಕೇಳಬೇಕು
ಶಕ್ತಿಯನು ಮಾಡದಿರು ಮುಕ್ತಿಗನುವಾಗು ಪ

ಚಿತ್ತಶುದ್ಧಿಯಲಿದ್ದು ಭಾವ ವಿಷಯದಿಕೂಡೆ
ಮತ್ತೆ ಬಂಧಿಸಿ ಬಲಿದು ಮುಳುಗುತಿಹುದು
ಕಿತ್ತದನು ನಿಜದಲ್ಲಿ ನಿಲಿಸಿಯನುಸಂಧಾನ
ವತ್ಯಧಿಕವಾದಡೆಯು ಮಿತನುಡಿ ಹಿತವೂ ೧

ಕಾರ್ಯಕಾರಣರೂಪನಾಗಿ ಜಗದೀಶ್ವರನು
ಧೈರ್ಯಗಳು ಬರುವಂತೆ ಪ್ರೇರಿಸುತ್ತಾ
ಆರ್ಯರೊಳಗೆಣಿಕೆಯನು ಮಾಡಿಸುತಲಜ್ಞಾನ
ಸೂರ್ಯನಾಗಿಯೆ ತಾನು ತೋರುತಿರ್ದಡೆಯೂ ೨

ಕರಣೇಂದ್ರಿಯಂಗಳಿವು ಜಡವಾಗಿ ವಿಷಯಗಳ
ಬೆರೆಸಲರಿಯವು ತಾವು ಇಚ್ಛೆಯಿಂದಾ

ತಿರುಪತಿಯ ವೆಂಕಟನು ಸೂತ್ರಧಾರಕನಾಗಿ
ಗುರುವಾಸುದೇವ ರೂಪದಿ ಸಲಹುತಿರಲು ೩

ತನುವನುಕೂಲಕೆ ಬಂದುದ ನೆನೆದುಸುರಿದ ಜೀ
ವನಭಿಮಾನವ ಸಡಿಲಿಸುತಲಿ
ವಿನಯದಿ ಗುರುವನು ಸೇರ್ವರೆ ನಿನಗೆರವಿಲ್ಲೆನ್ನುತ
ಅನುಸರಿಸಿದ ಕಾರ್ಯವಾಸಿಗೋಸುಗ ಬಿಡದೆ ೪

೧೫೬

ನೀನೆನಗೆರವೆ ನಾನಿನ್ನೆಂತಗಲುವೆ
ಬಾ ನನ್ನ ತನುವೆ ಸದ್ಗುರುವಿಗೊಂದಿಸುವರೆ ಪ

ಮೊದಲಿಗಮಿತ ದುಷ್ಟತನುಗಳ ಸಂಗದಿ
ಕುದಿದು ಸಂಸಾರಾಗ್ನಿಯೊಳು ಬಳಲಿದೆನು
ಅದರಿಂದ ನಿನ್ನ ನಿಗ್ರಹಿಸಿದೆನಲ್ಲದೆ
ಪದರದಿರೆನ್ನೊಳು ಪಡೆಯೆ ನಿನ್ನೊಂದನೂ ೧

ಗುರುಸೇವೆಗಲಸದೆ ಛಳಿಮಳೆಯೆನ್ನದೆ
ಬರಿಯ ಬಯಲ ಸಂಸಾರ ಭೋಗದಲಿ
ಎರಗದಿರೆನ್ನ ದಾರಿಗೆ ಬಾ ನಿನ್ನಾರೈಕೆ
ಯಿರಲೆನ್ನೊಳಿನ್ನು ತಪಿಸಿ ಕಂಗೆಡಿಪುದಿಲ್ಲ ೨

ಶ್ರವಣ ಸುಖದಿ ನನ್ನ ಬೆರೆದು ಬೇರಾಗದೆ
ಭವಶರಧಿಯ ದಾಂಟುನಂತೆ ನೀ ಮಾಡು
ವಿವರಿಸಿ ಹರಿಗುಣ ಕಥೆಗಳನೆಮ್ಮೊಳು
ಕವಿದಿಪ್ಪ ತಮವ ತೊಲಗಿಸಿಕೊಂಬ ನಾವಿನ್ನು ೩

ನಿನ್ನಿಂದ ಸಂಸಾರ ವಿಷಯ ಸುಖದ ಲಾಭ
ನಿನ್ನಿಂದ ಕೃಛ್ರಾದಿ ತಪಸಿನ ಲಾಭ

ನಿನ್ನಿಂದ ಸತ್ಕರ್ಮತೀರ್ಥಯಾತ್ರೆಯ ಲಾಭ
ನಿನ್ನಿಂದ ವೈರಾಗ್ಯ ಭಾಗ್ಯದ ಲಾಭ ೪

ನಿನ್ನೊಳಗಿರುವಿಂದ್ರಿಯಂಗಳಿಂದ್ರಿಯಗಳೊ
ಳುಣ್ಣುವ ಮನ ಮನದೊಳು ಕೂಡ್ವ ಜೀವ
ಎನ್ನುವರೆನ್ನನೆನ್ನಿರವನರಿಯೆನಿದ
ನಿನ್ನಿಂದ ಗುರುಕೃಪೆವಡೆದು ತಿಳಿಯಬೇಕೂ ೫

ನೆವವಿಲ್ಲದುಪಕಾರಗೈವೆ ನೀನೆನಗಾಗಿ
ವಿವಿಧ ಭೋಗದ ಸುಖವೆನಗೆ ನಿನ್ನಿಂದ
ವಿವರಿಸೆ ನಿನಗೆ ಉಂಟು ಲಾಭವು ಮತ್ತೆ
ನವೆವೆಯಲ್ಲದೆ ವೃದ್ಧಿಯಾಗುವೆಯಾ ಪೇಳು ೬

ನಿನ್ನಿಂದ ಸುಖಬಟ್ಟು ನಿನ್ನ ಬಾಳಿಸಲಾರ
ದೆನ್ನನುಳುಹುವದೆಂತನ್ಯಾಯ ಸುಖವು
ಉಣ್ಣುವರಾರಿದನುಂಡು ಬದುಕಿರುವ
ಅಣ್ಣನ ತಿಳಿಯಲು ಗುರುವೆ ಗತಿ ಕಂಡ್ಯಾ ೭

ವಂದಿಸಿಯೂಳಿಗಗೈವಲ್ಲಿಯಲಸದೆ
ದಂದುಗ ಸುಖಕಾಗಿ ದಾರಿದೆಗೆಯದೆ
ಒಂದಾಗಿ ಯೆನ್ನೊಳಿದ್ದರೆ ನನ್ನ ಸುಖವ ನಾ
ಹೊಂದಲು ನಿನಗಾನಂದವಪ್ಪುದೆ ಕೇಳು ೮

ಮರುಗಿ ಮನದಿ ನಮ್ಮ ಮರವೆಯಾಟವ ಕಂಡು
ತಿರುಪತಿ ವೆಂಕಟರಮಣನು ತಾನೆ
ಗುರುವಾಸುದೇವಾರ್ಯನಾಗಿಹನಾತನ
ಚರಣವ ಮರೆಯೊಕ್ಕು ಬದುಕುವ ನಡೆಬೇಗ ೯

ಕಂ॥ ಜೀವನ ನುಡಿಯನು ಲಾಲಿಸಿ
ಭಾವದಿ ಸರಿಬಂದ ಬಗೆಯ ಕಾಣದೆ ಗರ್ವದಿ
ತಾವೊಲಿವರೆ ಮನಬಾರದು
ನೀವೊಬ್ಬನೆ ಸಾಧಿಸೆನೆ ಮನ ಕೆರಳಿ ನುಡಿದುದೂ

೧೫೭

ಎಲೆ ತನುವೆ ಗರ್ವಿಸಿದೆಯಾ ನಿನ್ನ ಬಾಳಿಕೆಯ
ತಿಳಿಯದೆ ಬಗುಳುತಿಹೆಯಾ ಪ

ಥಳಿಸೆ ನೀ ಜೀವನನು ಗೆಲುವುದಕೆ ನಿನ್ನುವನು
ಒಲಿಸಿಕೊಂಬುದ ಕಾಣದೆ ಜಡವೆ ಅ.ಪ

ನೀನುಳಿಯೆ ಜೀವನಿಗೆ ತೆರೆಹಿಲ್ಲ ಹೊಳೆವದಕೆ
ತಾನೊಡಂಬಡಿಸುತಿಹನೂ
ಏನೆಂಬೆ ನನ್ನ ಬಿಟ್ಟೀ ಜೀವ ಬಾಳುವದ
ಕಾಣದೆ ಹರಟುತಿಹನೂ
ಕಾಣುವದೆ ಕಣ್ಣು ಕೇಳುವದೆ ಕಿವಿ ನಾನಗಲೆ
ಯೀನಾಸ ಗಂಧವನ್ನು
ತಾನರಿವದೆ ಜಿಹ್ವೆ ರಸವನುಂಬದೆ ತ್ವಕ್ಕಿಗೇನು
ಛಳಿ ಬಿಸಿಲ ಹದನೂ ಚನ್ನ ೧

ಕಾಲು ನಡೆಯದು ಕರವು ಪಿಡಿಯದಾಡದು ಮಾತ
ನಾಲಗೆಯು ಉಳಿದವೆರಡೂ
ತಾಳಲಾರವು ವಿಸರ್ಗಾನಂದ ಕೃತ್ಯವನು
ಜಾಳು ಪ್ರಾಣವದು ಕರಡು
ಗಾಳಿರೂಪಿನ ಪಾನವ್ಯಾನವು ಸಮಾನವೂ
ಕೇಳುದಾನವದು ಬರಡೂ
ಹಾಳೂರ ಕೊಳಕ್ಕೆ ಕಾಲ ನೀಡಿದ ತೆರದಿ
ಬಾಳುವೀ ಜೀವ ಕುರುಡೂ ನೋಡು ೨

ಬರಿದೆ ವ್ಯವಹರಿಸಿದರೆ ಫಲವಿಲ್ಲ ನಿಮ್ಮೊಡನೆ
ಸರಸಕೆ ರಸಜ್ಞರಲ್ಲಾ
ಇರುವರೆಮ್ಮವರು ಮೂವರು ಬುದ್ಧ್ಯಹಂಕಾರ
ನೆರೆ ಚಿತ್ರ ಸಂಜ್ಞರೆಲ್ಲಾ
ಬರಿದೆಯಾಳೋಚಿಸುವನೊರ್ವ ಹೆಮ್ಮೆಯೊಳೊರ್ವ
ನೆರೆಯೊಳಿಹನೊಬ್ಬ ಬಲ್ಲಾ
ತಿರುಪತಿಯ ವೆಂಕಟನ ಚರಣವನು ಭಜಿಸುವರೆ
ನೆರೆ ಜಾಣ ನಾನೆಯಲ್ಲದಿಲ್ಲಾ ೩

ಕಂ॥ ಮನ ನುಡಿಯಲಿಂದ್ರಿಯಂಗಳು
ಘನರೋಷದಿ ಜೀವ ತನುಗಳನು ನಿಲ್ಲೆನ್ನುತ
ಮನವೆ ಬಾ ನಮ್ಮೊಳು ನುಡಿ
ನಿವಗಧಿಕಾರವನು ಕೊಟ್ಟವವನಾವನಯ್ಯಾ

೧೫೮

ನಡತೆಯನೆಣಿಸಿದರೆ ಗುಣವೇನು ತೃಣಕು
ಕಡೆಯಾಗುವಲ್ಲಿ ಸಂದೇಹವಿಲ್ಲ ಪ

ನೀನು ಹಿಂದೆಗೆಯೆ ಕಣ್ಣು ಕಾಣದೆಂಬೆಯಲ್ಲೋ ಯೀಗ
ಕಾಣು ಕಿವಿಯಿಂದ ರೂಪ ಜಾಣೆಯ ಮಗನೆ ೧

ಕೇಳು ಮೂಗಿನಿಂದಾ ನುಡಿಯ ತಾಳು ಗಂಧವ ಬಾಯಿಂದಾ
ಹೇಳು ಮಾತ ಕಣ್ಣಿನಿಂದಾ ಕೂಳುಗೊಂಬೆ ೨

ನಡೆಯೊ ಕೈಯಿಂದ ಕಾಲಿಂ ಪಿಡಿಯೊಗುದದಲುಣ್ಣೋ
ಪಡೆಯೊ ನೀನುಪಸ್ಥೆಯ ಬಿಟ್ಟಾನಂದವಾ ೩

ವಾಕಿನಿಂ ವಿಸರ್ಗವನ್ನು ಸೋಕಿಸೊ ಸ್ಪರ್ಶವ ನೀನು
ತಾಕದೊಲ್ ತ್ವಗಿಂದ್ರಿಯವ ಕಾಕಿ ಮನವೆ ೪

ಜೀವನು ಕುರುಡನೇನೊ ಪ್ರಾಣಗಳ್ [ಕೊ]ರಡುಗಳೇನೊ
ಯಾವಗವು ನೀನೊರ್ವ ಬಾಳುವೆಯೇನೊ ೫

ಕಾದಿ ಮನೆಗೆ ಕೇಡು ತಾ ದರಿದ್ರತೆಗೆ ಬೀಡು
ಸಾಧುವಾಗಿ ನಮ್ಮೊಳಾಡು ಕೆಡಬೇಡ ನೋಡು ೬

ಹತ್ತು ದಾರಿಯೊಳಾಡುವೆ ಗೊತ್ತಿಗೆ ನೀನಿಲ್ಲದಿರೊ
ಮತ್ತನಾಹೆ ಕೆಣಕಲು ಸತ್ತವನಂತೆ ೭

ನಿನ್ನ ಹತ್ತಿರೆ ದೈವವು ಬನ್ನ ಬಡಿಸಲೆಮ್ಮನು
ಕಣ್ಣುಗಾಣದೆ ಸೇರಿಸಿತು ಕಾಲಗತಿಯಿಂದಾ ೮

ತಿರುಪತೀಶನೊಲವನು ಸರಸದಿಂ ಸಾಧಿಪ ನೀನು
ತೊರೆಯಲೆಮ್ಮ ತಿಳಿದುದು ಜಾಣುಮೆ ತಾನು ೯

ಕಂ॥ ಕರಣಗಳಾಡಿದ ಮಾತನು
ಹರುಷದಿ ಕೇಳುತ್ತ ಜೀವ ತನು ಸಹ ಮನಮಂ
ಪರಿಪರಿ ವಿಧದಲಿ ಬೋಧಿಪ
ಪರಿಯಿಂ ದೂಷಿಸಿದನಾಗ ನಾಚುವ ತೆರದಿಂ

೧೫೯

ಮನವೆ ನಿನಗೇಕಿನ್ನು ಲಜ್ಜೆದೋರದು ಬಳಿಕ
ಕನಲಿ ನಿಂದಿಸುವೆ ಜನರನಿತರಾ ಪ

ಘನಘೋರಮಲಜನಿತ ತನುವಿನೊಳು
ನೀನಿರುತಲನವರತ ತೊಳಲಬಹುದೇ ಬರಿದೆ ಅ.ಪ

ಓದಿ ಗ್ರಂಥಗಳನು ಪಠಿಸಿಯದರರ್ಥವನು
ಬೋಧಿಸುವೆ ಪರರಿಗೆಲ್ಲಾ ಸೊಲ್ಲಾ

ಸಾದರದಿ ತನ್ನಿಷ್ಠೆಯಲಿ ನಡೆಯುತನುಭವವ
ನೀದಿನಕು ತಂದುದಿಲ್ಲವಲ್ಲಾ
ಬೋಧೆವಡದಿಹ ಯೋಗಿಗಳ ಜರೆವ ಬಗೆಯಲ್ಲಿ
ನೀ ದೊಡ್ಡ ಜಾಣನಲ್ಲಾ ಬಲ್ಲ
ಸಾಧಿಸಿದ ವಿದ್ಯವನು ವಾದದಲಿ ನೀಗಾಡಿ
ಬೀದಿಯಲಿ ನಿಂತೆಯಲ್ಲಾ ನಲ್ಲಾ ೧

ಧನಧಾನ್ಯ ದಾಸ ಕತಿಯೊಳಗೊಂದಿಕೊಂದಿರುವ
ಜನರಲವಿವೇಕ ವಿಡಿದೂ ಜರಿದೂ
ತನು ಪಾಶ ಬದ್ಧದಲಿ ನರಕ ಭಾಜನರಾಗಿ
ದಿನವ ಕಳೆಯುತ್ತಲಿಹರೂ ಯಿವರೂ
ಎನುತಲನುತಾಪದಲಿ ನೀ ಮತ್ತೆಯನವರತ
ಧನಿಕರಿದ್ದೆಡೆಗೆ ಬಂದೂ ನಿಂದೂ
ಧನವ ಕೊಡಿ ಸತ್ಪಾತ್ರನಾನೆಂದು ವೊಂದುವರೆ
ಹಣವ ಕೈಯೊಡ್ಡಿ ಕೊಂಡೂ ಉಂಡೂ ೨

ತೋರುವ ಜಗತ್ತಿದುವೆ ಪರಮಾತ್ಮನಿಂದಲೆ
ತೋರುವದು ಭ್ರಮೆಗೆ ಹಲವೂ ಕೆಲವೂ
ತೋರದಡಗದ ನಿತ್ಯ ವಸ್ತುವೆ ತಾನೆಂದು
ಧೀರತನದಿಂದಲಿರವೂ ಅರಿವೂ
ಈ ರೀತಿಯಲಿ ತಿಳಿದು ಮುಕ್ತನಾಗದೆ ಬರಿಯ
ಕ್ರೂರ ಬುದ್ಧಿಯಲಿ ಯಿರವೂ ಮರವೂ
ದಾರಿಗಾಣದೆ ನಿನ್ನ ಅನುಭವವ ನೀ ಮತ್ತೆ
ಹೊರುವುದೆ ನಿನಗೆ ಮತವೂ ದೃಢವೂ ೩

ಇಂದ್ರಿಯಂಗಳ ಸುಖವನೆ ಮೆಚ್ಚಿ ನೀನವರ
ಹಿಂದುಗೊಂಡೆರಗಿ ಬಿಡದೆ ಪಡೆದೆ
ಸಂದ ಭೋಗದ ಸವಿಯನೆನನೆನದು ಮತ್ತದನು
ಮುಂದು ಬೇಕೆಂದು ಹೊರೆದೆ ಬೆರೆದೆ

ಕಂದಿ ಕಾಮಕ್ರೋಧದಗ್ನಿಯಲಿ ನೀ ಬೆಂದು
ಹೊಂದಿ ನೀಂ ಜನ್ಮಪಿಡಿದೆ ಮರೆದೆ
ಹಿಂದುಗಳೆವಾತ್ಮನನು ಹಿತವೆಂದು ಮಿಥ್ಯವನು
ನೊಂ[ದು] ನೋಡದೆ ಬರಿದೆ ೬

ಚದುರ ವಿದ್ಯವ ಕಲಿತೆನೆಂಬುದೊಂದೇ ಘನತೆ
ಸುದತಿ ಸಂಪತ್ತಿನಲ್ಲೆ ರಮತೆ
ಒದಗಿ ಬಹಳೋದ್ಯೋಗಗಳ ಮಾಡಿ ಬಹುದಿವಸ
ಬದುಕಿದವ ನೆಂಬುದರಲೆ ಯಿರತೆ
ಇದ ನಾನು ಸಂಪಾದಿಸಿದೆನೆನ್ನ ಶೌರ್ಯತೆಗೆ
ಇದಿರಿಲ್ಲವೆಂದು ಇದಕೆ ಬೆರತೆ
ಮುದದಿ ಗುರು ವಾಸುದೇವಾರ್ಯವೆಂಕಟರಮಣ
ನೊಡಮೂಡದಿತರ ನಡತೆ ಜಡಕೆ ೭

೧೬೦

ನೆಲೆಗೊಂಡದೇನು ಮನವೆಯೀಗ
ಚಲಿಸುವೆ ನೀನು ಹಲವು ವಿಷಯದೊಳು ಪ

ಸಿಲುಕಿದ ಬಗೆಯಿಂದ ಹೊಲಬುದಪ್ಪಿತು
[ಸಲೆ]ನಿನ್ನ ನಿಜವ ನೀ ಕಾಣು ಅ.ಪ

ಗುರುವಿನಂಘ್ರಿಗೆ ನೀನು ನಮಿಸಿ ನಿನ್ನ
ಮರವೆಯ ಭಾವವ ಕೆಡಿಸಿ
ಕರಣವ ನಿಲುಕಡೆಗೊಳಿಸಿ ಬಹು
ಕರುಣವ ನಿನ್ನೊಳಗಿರಿಸಿ
ಪರಮಾತ್ಮನಾಗ್ಯನ್ಯ ವಿಷಯವೊಂದಲಾಶೆ
ಪರಿದು ಭ್ರಾಂತಿಯಲೊಂದಿದ ಸುಖವ ಸೂಸಿ ೧

ಮನೆಯೊಂದು ನನಗಿಹುದೆಂದು ಅಲ್ಲಿ
ಜನರೆಡೆಗೊಳೆ ದುಃಖ ಬಂದು
ಅನುಭವಿಪುದು ಯುಕ್ತವೆಂದು ಅದ
[ಕನು]ಕೂಲವಾಗಬೇಕೆಂದು
ಅನುದಿನವನು ಸಂಧಾನದಿ ನಿಂದು ಗುರು ಕೊಟ್ಟ
ಅನುಭವ ಬಯಲಾಗಿ ಭ್ರಮೆಗೆ ನೀ ಸಂದು ೨

ನೀನೊದು ಕೊಡಹೇಳಿ ಕೇಳಿ ಅಲ್ಲಿ
·ಹೀನತೆಯನು ಬಹುತಾಳಿ
ದೀನರು ನೀವೆಂದು ಪೇಳಿ ಅನು
ಮಾನದ ಬಲು ಬಿರುಗಾಳಿ
ಏನೆಂಬೆ ಬೀಸಲು [ತಾ] ನದರೊಳಗಾಳಿ
ಜ್ಞಾನಹೋಯಿತು ಭೇದ ಬುದ್ಧಿಯ ತಾಳಿ ೩

ಮಾಯಕವಾಗಿರೆ ಜಗವೂ ಬಹೂ
ಪಾಯಗಳಿಂದ್ರಜಾಲಕವೂ
ಆಯುವರಿಯದದರಿರವೂ ತನ್ನ
ತಾಯ ಕಾಣದ ಶಿಶುತನವೂ
ಈಯಶೇಷವು ಸ್ವಪ್ನದನುಭವವಳಿವವು
ಬಾಯಮಾತಿನಜ್ಞಾನ ಕಪಟ ಸಂಭ್ರಮವೂ ೪

ಪರಮಾತ್ಮನೊಬ್ಬನಾಗಿಹನೂ ತಾನು
ಪರಿ ಪರಿ ರೂಪ ತೋರುವನು
ಅರಿತೆ ಭೇದವನಿದ ನೀನು ಬಹು
ಜರೆಯುತ ಗುಣದೋಷಗಳನು
ಗುರುವಾಸುದೇವರೂಪಿಲಿ ನಿನ್ನ ಕರವನು
ತಿರುಪತಿ ವೆಂಕಟ ಪಿಡಿಯೆ ಭ್ರಾಂತೇನು ೫

(ಅಸಮಗ್ರ)

ನಾರಾಯಣದಾಸರ ಕೀರ್ತನೆಗಳು

'ನಾರಾಯಣಾಖ್ಯ /ದಾಸ'

(ಅ) ದೇವತಾ ಸ್ತುತಿಗಳು

(೧) ನರಸಿಂಹ ಸ್ತುತಿಗಳು

೧

ಜಯಮಂಗಳಂ ನಿತ್ಯ ಶುಭಮಂಗಳಂ
ಭಯಹರಗೆ ಭಕ್ತಜನ ಪೋಷ ನರಸಿಂಹನಿಗೆ ಪ

ಕನಕಕಶಿಪು ಹರಣಗೆ ಕಾಮಿತಾರ್ಥಪ್ರದಗೆ
ದಿನಕರಾನಲ ಸೋಮ ಲೋಚನನಿಗೆ
ಪ್ರಣತ ರಕ್ಷಾಮಣಿಗೆ ಪ್ರಹ್ಲಾದವರದನಿಗೆ
ಇನಕೋಟಿತೇಜನಿಗೆ ಇಂದ್ರವಂದಿತಗೆ ೧

ಮಣಿಮಕುಟಹಾರ ಕೌಸ್ತುಭಕುಂಡಲಾನ್ವಿತಗೆ
ಘನ ಚಕ್ರಧರ ವರಾಭಯಕರನಿಗೆ
ವನಜಜೆಯ ವಾಮಾಂಕದೊಳು ವಹಿಸಿ ನಲಿವನಿಗೆ
ಸನಕಾದಿ ವಂದ್ಯ ಸರಸಿಜ ಪಾದಯುಗ್ಮನಿಗೆ ೨

ಖಗರಾಜವಾಹನಗೆ ಕಂದರ್ಪ ಜನಕನಿಗೆ
ನಿಗಮಗೋಚರಗೆ ನಿತ್ಯಾನಂದಗೆ
ಅಗಣಿತ ಗುಣಾಢ್ಯನಿಗೆ ಅನುಪಮ ಚರಿತ್ರನಿಗೆ
ಮೃಗರಾಜವದನನಿಗೆ ಮನುಜಕಾಯನಿಗೆ ೩

ನಾರದಾದಿಸ್ತುತಗೆ ನಾಗಪತಿಶಯನನಿಗೆ
ಮಾರಶತ ಸುಂದರಗೆ ಮಾರಮಣಗೆ
ಈರೇಳು ಲೋಕಗಳನುದರದೊಳಗಿರಿಸಿಹಗೆ
ಭೂರಿಭಾಗ್ಯವನಿತ್ತು ಪೊರೆವ ಶ್ರೀಹರಿಗೆ ೪

ಘೋರದುರಿತಾಪಹಗೆ ಗುರು ವಾಸುದೇವನಿಗೆ
ನಾರಾಯಣಾಖ್ಯ ದಾಸನ ಪೊರೆವಗೆ
ಧೀರ ತಿರುಪತಿನಿಲಯ ವೆಂಕಟೇಶನಿಗೆ
ನೀರಜಾಪ್ತನಗರದ ಲಕ್ಷ್ಮೀನೃಸಿಂಹನಿಗೆ ೫

೨

ರಕ್ಷಿಸು ಎನ್ನನು ನರಸಿಂಹ
ರಕ್ಷಣ ನಿರತ ನರಸಿಂಹ ಪ

ಅಕ್ಷಯಫಲದ ವಿಪಕ್ಷದಹನ ಸುವಿ
ಚಕ್ಷಣ ತ್ರ್ಯಕ್ಷ ನೃಸಿಂಹ ಅ.ಪ

ಕನಕಕಶಿಪುಹರ ನರಸಿಂಹ
ಸುನಖಜಾಲ ನರಸಿಂಹ
ಪ್ರಣತ ಪ್ರಹ್ಲಾದನಿಗೊಲಿದು ಸ್ತಂಭದಿ ಬಂದ
ದಿನಕರತೇಜ ನೃಸಿಂಹ ೧

ಜ್ವಾಲಾಮುಖ ಶ್ರೀ ನರಸಿಂಹ
ಜ್ವಾಲಾಮಾಲ ನರಸಿಂಹ
ಲೀಲಾಜಾಲ ಹತಾಘ ಸಮೂಹ ವಿ
ಶಾಲ ಮಹಿಮ ನರಸಿಂಹ ೨

ಹಾರ ಮಕುಟಯುತ ನರಸಿಂಹ
ಹರುಷವರ್ಧನ ನರಸಿಂಹ

ಮಾರಸುಂದರ ದರಚಕ್ರವರಾಭಯ
ಧಾರಕ ವರ ನರಸಿಂಹ ೩

ಅಂಡಜವಾಹನ ನರಸಿಂಹ
ಕುಂಡಲಿಶಯನ ನೃಸಿಂಹ
ಕುಂಡಲಧರ ಬ್ರಹ್ಮಾಂಡ ಸುಪಾಲನ
ಪಾಂಡುಕೀರ್ತೆ ನೃಸಿಂಹ ೪

ಅಂಗದಭೂಷಿತ ನರಸಿಂಹ
ಮಂಗಳಾಂಗ ನರಸಿಂಹ
ಮಂಗಳಕರ ಪೀತಾಂಬರ ಸುರ
ಸಂಘ ಸುಖದ ನರಸಿಂಹ ೫

ನೀರಜನಾಭನೆ ನರಸಿಂಹ
ನೀರಜಪಾದ ನೃಸಿಂಹ
ಪಾರರಹಿತ ಭವವಾರಿಧಿತಾರಕ
ಮಾರಜನಕ ನರಸಿಂಹ ೬

ಇಂದಿರಾಪತೆ ನರಸಿಂಹ
ಸಿಂಧುಗಂಭೀರ ನೃಸಿಂಹ
ಮಂದರಧರ ಗೋವಿಂದಾಚ್ಯುತ ಮುಚು
ಕುಂದವರದ ನರಸಿಂಹ ೭

ನಾರದ ಸನ್ನುತ ನರಸಿಂಹ
ನರಕಾಂತಕ ನರಸಿಂಹ
ಪಾರಾವಾರವಿಹಾರ ಕೃಪಾಕರ
ಪರಮಪುರುಷ ನರಸಿಂಹ ೮

ತಿರುಪತಿವಾಸನೆ ನರಸಿಂಹ
ವರ ವೆಂಕಟಪತೆ ನರಸಿಂಹ
ಶರಣಾಗತ ನಾರಾಯಣದಾಸನ
ನಿರುತ ಪೊರೆವ ನರಸಿಂಹ ೯

೩

(೨) ಶ್ರೀರಾಮ ಸ್ತುತಿಗಳು

ಬಾರೊ ಬಾರೊ ಭಾಗ್ಯದ ನಿಧಿಯೆ
ಬಾರೋ ಭಾಗ್ಯದ ನಿಧಿಯೆ ಪ

ಭರತಾಗ್ರಜನೆ ಭವಭಯಹರನೆ
ಕರುಣಾಕರನೆ ಕಂದರ್ಪ ಜನಕನೆ ಅ.ಪ.

ದಿನಪಕುಲೇಶ ದಿವಿಜರ ತೋಷ
ದೀನಜನೋದ್ಧಾರ ದಿವ್ಯಪ್ರಕಾಶ ೧

ದಶರಥ ಬಾಲ ದಶಮುಖ ಕಾಲ
ಶಶಿಮುಖಿ ಸೀತಾವಿಹರಣ ಲೋಲ ೨

ವಾಲಿವಿನಾಶ ವರಮುನಿವೇಷ
ಪಾಲಿತ ಗೌತಮಯೋಷಾ ಸರ್ವೇಶ ೩

ವಾರಿಧಿಶಯನ ವಾರಿಜನಯನ
ದೂರೀಕೃತಪಾತಕ ವರಚರಣ ೪

ತಿರುಪತಿವಾಸ ಶ್ರೀ ವೆಂಕಟೇಶ
ಶರಣಾಗತ ನಾರಾಯಣದಾಸಪೋಷ ೫

೪

ಬಿಟ್ಟಿರಲಾರೆ ನಿನ್ನ
ಪಟ್ಟಾಭಿರಾಮಮೂರ್ತೇ ಬಿಟ್ಟಿರಲಾರೆ ನಿನ್ನ ಪ

ಕಷ್ಟಂಗಳನೆಲ್ಲ ನಷ್ಟಗೊಳಿಸಿ ಫಲ
ವೃಷ್ಟಿಗರೆಯುತಿಹ ಇಷ್ಟಮೂರುತಿ ರಾಮ ೧

ಅಂಗಜಜನಕ ಶುಭಾಂಗನೆ ನೀಯೆನ್ನ
ಭಂಗವ ಪರಿವ ಭುಜಂಗಶಯನ ರಾಮ ೨

ಮಣಿಮಯಮಕುಟ ಕನಕಕುಂಡಲಧರ
ದಿನಕರಭಾಸುರ ದೀನವತ್ಸಲ ರಾಮ ೩

ದಶರಥನುದರದಿ ಶಿಶುರೂಪದಿ ಪುಟ್ಟಿ
ದಶಕಂಠನ ಕೊಂದು ಶಶಿಮುಖಿಯ ತಂದ ರಾಮ ೪

ಸದಯಹೃದಯ ಭಕ್ತ ಬದಿಯೊಳು ನೀ ನಿಂದು
ಚೆದರದಿರುವ ಸ್ಥಿರ ಪದವ ಕೊಡುವೆ ರಾಮ ೫

ನೀರದನಿಭ ತನು ನಿರುಪಮ ವೈಭವ
ನಾರದಾದಿನುತ ನರವರ ಶ್ರೀರಾಮ ೬

ತರುಣ ನಾಗಪುರ ವರದೊಳು ಕರುಣದಿ
ಮರೆಹೊಕ್ಕ ದಾಸನ ನಿರತ ಪೊರೆವ ರಾಮ ೭

೫

ಮಂಗಳಂ ಮಂಗಳಂ ದಾಶರಥಿಗೆ
ಮಂಗಳಂ ಮಂಗಳಂ ಪ

ರಘುಕುಲದೊಳು ಪುಟ್ಟಿ ರಾಮಚಂದ್ರನೆಂದು
ಅಘಹರ ನಾಮವ ತಾಳಿದಗೆ
ಸುಗುಣಿ ಅಹಲ್ಯಾ ಶಾಪವ ಪಾದದಿಂ ತಿದ್ದಿ
ಅಗಜಾವಲ್ಲಭ ಧನುವ ಮುರಿದ ಜಾನಕೀಪತಿಗೆ ೧

ವನದೊಳು ಚರಿಸಿ ವಾಲಿಯ ಸಂಹರಿಸಿ ಬೇಗ
ವನಧಿಯ ದಾಟಿ ಲಂಕೆಯ ಪೊಕ್ಕು
ಘನಪರಾಕ್ರಮಿ ದಶಕಂಠನ ಕೊಂದವ
ನನುಜಗೆ ಲಂಕೆಯನಿತ್ತ ಸೀತಾಪತಿಗೆ ೨

ಹರುಷಿತನಾಗಿ ಅಯೋಧ್ಯಾಪುರಕೆ ಬಂದು
ಧರಣಿಜೆ ಸಹ ಸಿಂಹಾಸನವೇರ್ದಗೆ
ತರಳ ನಾರಾಯಣದಾಸನ ರಕ್ಷಿಪ
ಗುರು ವಾಸುದೇವ ರೂಪಿನ ವೆಂಕಟೇಶಗೆ ೩

೬

ರಾಘವಂ ಸ್ಮರಾಮಿ ಸತತಂ ರಾಘವಂ ಪ

ಭೋಗ ಮೋಕ್ಷಪ್ರದಂ ಶ್ರೀಶಂ
ಭೋಗೀಶಶಯನ ಸರ್ವೇಶಂ ಅ.ಪ

ದಶರಥ ಸುಕುಮಾರಂ ದಂಡಿತ ದೈತ್ಯ ಶರೀರಂ
ವಸುಧಾತ್ಮಜಾ ವಿಹಾರಂ ವಾರಿಧಿ ಸದೃಶ ಗಂಭೀರಂ ೧

ಕರಧೃತಶರಚಾಪಂ ಕಂದರ್ಪಕೋಟಿಸ್ವರೂಪಂ
ಪರಿಹೃತ ಭಕ್ತತಾಪಂ ಪಂಡಿತ ಹೃನ್ಮಂದಿರದೀಪಂ ೨

ನಾರದಾದಿ ಸ್ತುತಪಾತ್ರಂ ನಳಿನೀದಳ ಸುನೇತ್ರಂ
ನೀರದ ಸಮಾನ ಗಾತ್ರಂ ನಿರುಪಮ ಸುಸ್ಮಿತವಕ್ತ್ರಂ ೩

ತರುಣ ತುಲಸೀಮಾಲಂ ತಾಪಸ ಜನಾನುಕೂಲಂ
ವರ ಮೃಗಮದಫಾಲಂ ವಂದಕೌಘಪಾಲನಶೀಲಂ ೪

ತರುಣನಾಗಪುರೀಶಂ ಗುರು ವಾಸುದೇವವೇಷಂ
ವರ ಚುಂಚಸೇತುವಾಸಂ ತಿರುಪತಿ ಶ್ರೀ ವೆಂಕಟೇಶಂ ೫

೭

ರಾಮ ದಯಾಳೂ ರಾಮ ದಯಾಳೂ
ಕಾಮಿತಫಲದ ಶ್ರೀರಾಮ ದಯಾಳೂ ಪ

ದಶರಥನಂದನ ರಾಮ ದಯಾಳೂ
ವಸುಧಾಪಾಲನ ರಾಮ ದಯಾಳೂ ೧

ಮಣಿಮಯಮಕುಟ ಶ್ರೀರಾಮ ದಯಾಳೂ
ಸನಕಾದಿವಂದಿತ ರಾಮ ದಯಾಳೂ ೨

ಮಕರಕುಂಡಲಕರ್ಣ ರಾಮ ದಯಾಳೂ
ಮದನಮೋಹನ ವೇಷ ರಾಮ ದಯಾಳೂ ೩

ಮುಕುರ ಕಪೋಲ ಶ್ರೀರಾಮ ದಯಾಳೂ
ಪ್ರಕಟಿತ ಮಹಿಮನ್ ರಾಮ ದಯಾಳೂ ೪

ನೀಲಾಳಕಜಾಲ ರಾಮ ದಯಾಳೂ
ಫಾಲಲೋಚನಸಖ ರಾಮ ದಯಾಳೂ ೫

ಮೃಗಮದತಿಲಕ ಶ್ರೀರಾಮ ದಯಾಳೂ
ಅಗಣಿತ ಗುಣಗಣ ರಾಮ ದಯಾಳೂ ೬

ಸುಭ್ರೂಯುಗಳ ಶ್ರೀರಾಮ ದಯಾಳೂ
ಸುರಸಂಘಸುಖದ ರಾಮ ದಯಾಳೂ ೭

ನೀರಜಲೋಚನ ರಾಮ ದಯಾಳೂ
ನಿರುಪಮ ವಿಗ್ರಹ ರಾಮ ದಯಾಳೂ ೮

ಚಾರು ನಾಸಾಪುಟ ರಾಮ ದಯಾಳೂ
ಚತುರಾಸ್ಯಪೂಜಿತ ರಾಮ ದಯಾಳೂ ೯

ಅರುಣಾಧರ ಶ್ರೀರಾಮ ದಯಾಳೂ
ಆರ್ತಸಂರಕ್ಷಕ ರಾಮ ದಯಾಳೂ ೧೦

ಕುಂದರದನ ಶ್ರೀರಾಮ ದಯಾಳೂ
ಮಂದಸ್ಮಿತಾನನ ರಾಮ ದಯಾಳೂ ೧೧

ಅಂಗದ ಭೂಷಿತ ರಾಮ ದಯಾಳೂ
ಮಂಗಳದಾಯಕ ರಾಮ ದಯಾಳೂ ೧೨

ಆಜಾನುಬಾಹು ರಾಮ ದಯಾಳೂ
ಅಸುರಾಂತಕ ಶ್ರೀರಾಮ ದಯಾಳೂ ೧೩

ಕರಧೃತಶರಚಾಪ ರಾಮ ದಯಾಳೂ
ಖರದೂಷಣಹರ ರಾಮ ದಯಾಳೂ ೧೪

ಕಂಬುಕಂಧರ ಶ್ರೀರಾಮ ದಯಾಳೂ
ಕೈವಲ್ಯಪ್ರದ ರಾಮ ದಯಾಳೂ ೧೫

ಶ್ರೀವತ್ಸವತ್ಸ ಶ್ರೀರಾಮ ದಯಾಳೂ
ಶ್ರಿತಲೋಕಪಾಲಕ ರಾಮ ದಯಾಳೂ ೧೬

ಹಾರಕೌಸ್ತುಭಧರ ರಾಮ ದಯಾಳೂ
ಹರ್ಷವೃದ್ಧಿದ ಶ್ರೀರಾಮ ದಯಾಳೂ ೧೭

ವಾರಿಜನಾಭ ಶ್ರೀರಾಮ ದಯಾಳೂ
ಮಾರಜನಕ ಶ್ರೀರಾಮ ದಯಾಳೂ ೧೮

ಕಟಿಧೃತಕಾಂಚೀ ರಾಮ ದಯಾಳೂ
ಖಂಡಿತಹರಚಾಪ ರಾಮ ದಯಾಳೂ ೧೯

ಪೀತಾಂಬರಧರ ರಾಮ ದಯಾಳೂ
ಪಾತಕಹರ ಶ್ರೀರಾಮ ದಯಾಳೂ ೨೦

ಭರತಪೂಜಿತಪಾದ ರಾಮ ದಯಾಳೂ
ಭವಭಯಹರಣ ಶ್ರೀರಾಮ ದಯಾಳೂ ೨೧

ರಾವಣಮರ್ದನ ರಾಮ ದಯಾಳೂ
ರಕ್ಷಿತಮುನಿಜನ ರಾಮ ದಯಾಳೂ ೨೨

ಜಾನಕಿವಲ್ಲಭ ರಾಮ ದಯಾಳೂ
ಮೌನಿಮಾನಸಗಮ್ಯ ರಾಮ ದಯಾಳೂ ೨೩

ಲಕ್ಷ್ಮಣಪೂರ್ವಜ ರಾಮ ದಯಾಳೂ
ಶಿಕ್ಷಿತದುರ್ಜನ ರಾಮ ದಯಾಳೂ ೨೪

ಹನುಮತ್ಸೇವಿತ ರಾಮ ದಯಾಳೂ
ಮನಸಿಜಹರನುತ ರಾಮ ದಯಾಳೂ ೨೫

ನೀಲಮೇಘಶ್ಯಾಮ ರಾಮ ದಯಾಳೂ
ನಿತ್ಯನಿರಾಮಯ ರಾಮ ದಯಾಳೂ ೨೬

ಭಕ್ತವತ್ಸಲ ಶ್ರೀರಾಮ ದಯಾಳೂ
ಭಾನುವಂಶಜ ಶ್ರೀರಾಮ ದಯಾಳೂ ೨೭

ಮಾಮವ ಸತತಂ ರಾಮ ದಯಾಳೂ
ಮಂಜುಳ ಭಾಷಣ ರಾಮ ದಯಾಳೂ ೨೮

ಗುರು ವಾಸುದೇವಾರ್ಯ ರಾಮ ದಯಾಳೂ
ವರದ ವೆಂಕಟೇಶ ರಾಮ ದಯಾಳೂ ೨೯

೮

ರಾಮ ಪಾಲಯ ಮಾಂ ಕೋದಂಡಪಾಣಿ
ರಾಮ ಪಾಲಯ ಮಾಂ ಪ

ರಾಮರಾಮ ರಣಭೀಮಪರಾಕ್ರಮ
ಕಾಮಿತದಾಯಕ ಕರುಣಾಜಲಧೆ ಅ.ಪ

ದಶರಥನಂದನ ದಾನವಮರ್ದನ
ಪಶುಪತಿ ಪ್ರಿಯಸಖ ಫಣಿಪತಿಶಯನಾ ೧

ಕುಶಿಕಜ ಸಹಚರ ಕುವಲಯಪಾಲನ
ಶಶಿರವಿಲೋಚನ ಶಶಿಧರಮೂರ್ತೆ ೨

ವಾಲಿವಿನಾಶಕ ವನಚರತೋಷಕ
ಪಾಲಿತ ಸುರಮುನಿಜಾಲ ಸುಶೀಲ ೩

ಸೇತುವಿಧಾಯಕ ಸೀತಾನಾಯಕ
ವಾತಾತ್ಮಜನುತ ವರಮೃದುಚರಣ ೪

ತರುಣ ನಾಗಪುರವರಮಧ್ಯಸ್ಥಿತ
ಗುರು ವೆಂಕಟಪತೆ ಪರಮ ದಯಾಳೂ ೫

೯

ಲಾಲಿ ರಘುಕುಲಸೋಮ ರಾಜೇಂದ್ರರಾಮ
ಲಾಲಿ ಅಘಹರಭೀಮ ಅಮಿತಗುಣಸೀಮ ಪ

ಲಾಲಿ ದಶರಥಪುತ್ರ ದಿವಿಜನುತಿಪಾತ್ರ
ಲಾಲಿ ಪಶುಪತಿಮಿತ್ರ ಪದ್ಮದಳನೇತ್ರ
ಲಾಲಿ ದಶಮುಖಗೋತ್ರದಳನ ಶುಭಗಾತ್ರ
ಲಾಲಿ ಸುಸ್ಮಿತವಕ್ತ್ರ ಸೀತಾಕಳತ್ರ ೧

ಲಾಲಿ ವನನಿಧಿಶೋಷ ವಾಲ್ಮೀಕಿ ತೋಷ
ಲಾಲಿ ಮಣಿಮಯಭೂಷ ಮಂಜುತರ ಭಾಷ
ಲಾಲಿ ವನಚರವೇಷ ವಾತಸುತಪೋಷ
ಲಾಲಿ ಮುನಿಹೃತ್ಕಲುಷಮರ್ದನ ಸಹರ್ಷ ೨

ಲಾಲಿ ಕರಧೃತಚಾಪ ಕಾರುಣ್ಯರೂಪ
ಲಾಲಿ ತರುಣೀಶಾಪತರಣ ಪ್ರತಾಪ
ಲಾಲಿ ಧರಣೀತಾಪದಾರಣ ಸುರೂಪ
ಲಾಲಿ ಪರಿಜನಪಾಪಹರ ರಾಮಭೂಪ ೩

೧೦

ಸಾಕೇತಾಧಿಪ ರಾಮ
ಸರಸಿಜಲೋಚನ ರಾಮ
ನಾಕಾಧಿಪನಂದದಿ ಚಾಮೇಂದ್ರನ
ನೀ ಕರುಣದಿ ಸಂರಕ್ಷಿಸು ನಿರುತವು ಪ

ದಶರಥನಂದನ ರಾಮ
ದಾನವಮರ್ದನ ರಾಮ

ವಸುಧಾಪಾಲಕನಾಗಿ ಸುರೌಘವ
ನಸುನಗುತಲೆ ಸುಖವಿತ್ತು ಸಲಹಿದೆ ೧

ಸೀತಾವಲ್ಲಭ ರಾಮ
ಶ್ರಿತಜನಪೋಷಕ ರಾಮ
ವಾತಾತ್ಮಜಸೇವ್ಯನೆ ನೃಪವರನನು
ಪ್ರೀತಿಯಿಂದಲೆ ವರಗಳನಿತ್ತು ಸಲಹೈ ೨

ನಾರದ ಸನ್ನುತ ರಾಮ
ನರವರರೂಪನೆ ರಾಮ
ಧಾರುಣಿಯೊಳು ನಾರಾಯಣ
ಕೋರಿದಿಷ್ಟವನಿಪ್ಪ ವೆಂಕಟರಮಣ ೩

೧೧

ಸಾಕೇತಪುರವಾಸ ಸರ್ವಲೋಕ ಶರಣ್ಯ
ಸರಸಿಜಾಕ್ಷ ಮುಕುಂದನೇ ಪ

ನಾಕಚರಪತಿವಂದ್ಯ ನರನಾಥನಾಗಿ ನೀ
ನರಲೋಕದೊಳ್ ಮೆರೆಯುವೇ ಸ್ವಾಮಿ ಅ.ಪ

ವಸುಮತಿಯ ಭಾರವನು ಪರಿಹರಿಸಬೇಕೆನುತ
ದಶರಥನ ಸತಿಯುದರದಿ
ಶಿಶುರೂಪದಿಂ ಜನಿಸಿ ರಾಮಚಂದ್ರನು ಎಂದು
ಪೆಸರ ನೀ ತಾಳಿ ಮುದದಿ
ಕುಶಿಕಜನ ಜೊತೆಯಲ್ಲಿ ಪೋಗಿ ವಿದ್ಯವ ಕಲಿತು
ಅಸುರೆ ತಾಟಕಿಯ ವಧಿಸಿ
ಕುಸುಮಶರಪಿತನೆ ಮುನಿಕ್ರತುವ ರಕ್ಷಣೆಗೈದು
ಋಷಿಸತಿಯ ಶಾಪವಳಿದೆ ಸ್ವಾಮಿ ೧

ಮಿಥಿಲಾಪುರಕೆ ಪೋಗಿ ಮುರಿದು ಹರಚಾಪವನು
ಮೈಥಿಲಿಯ ಕರವ ಪಿಡಿದು
ಪಥದಿ ನೀ ಬರುತಿರಲು ಪರಶುರಾಮನ ಕಂಡು
ಪರಮ ಶಕ್ತಿಯನು ಸೆಳೆದು
ಸತಿಯಿಂದಲೊಡಗೂಡಿ ಪುರವ ಸೇರಲು ಕೈಕೆ
ಪತಿಯ ವರವನು ಕೇಳಲು
ವಿತತ ಚಿಂತಿತನಾಗಿ ನುಡಿದ ತಂದೆಯ ಮಾತ
ನತಿ ಹರುಷದಿಂ ತಾಳಿದೆ ಸ್ವಾಮಿ ೨

ಜನನಿಗೆರಗುತ ಆಕೆ ಮಾಡಿದಾಶೀರ್ವಾದ
ವನು ಶಿರದೊಳಾಂತು ಬಂದು
ಧನಕನಕ ವಸ್ತು ಗೋವುಗಳ ಬ್ರಾಹ್ಮರಿಗಿತ್ತು
ಮುನಿವೇಷವನ್ನು ಧರಿಸಿ
ಅನುಜ ಲಕ್ಷ್ಮಣ ಸೀತೆ ಸಹಿತ ಪುರವನು ಬಿಟ್ಟು
ವನವಾಸಕಾಗಿ ತೆರಳಿ
ಮುನಿವರರ ಆಶ್ರಮಂಗಳ ಪೊಕ್ಕು ಭರತನಿಗೆ
ಘನ ಪಾದುಕೆಯನಿತ್ತೆಯ್ಯೆ ೩

ತೆರಳಿ ಬಂದನಸೂಯೆ ಅತ್ರಿಗಳಿಗಭಿನಮಿಸಿ
ತರುಣಿಸಹ ಪೂಜೆಗೊಂಡು
ಚರಿಸುತ್ತ ವನದೊಳು ವಿರಾಧವಧೆಯಂಗೈದು
ಸುರಲೋಕಕವನ ಕಳುಹಿ
ಶರಭಂಗನಿಗೆ ದರ್ಶನವ ಕೊಡಲು ತನುವ ಬಿಡೆ
ಪರಮಪದವಿತ್ತಾತಗೆ
ಗುರು ಅಗಸ್ತ್ಯಾಶ್ರಮದೊಳೌತನವ ಸ್ವೀಕರಿಸಿ
ವರ ಪಂಚವಟಿಗೈದಿದೆ ಸ್ವಾಮಿ ೪

ಪರಮಘೋರಾಕಾರೆ ಶೂರ್ಪನಖಿ ಕಿವಿಮೂಗ
ಪರಿಹರಿಸಿ ಅನುಜನಿಂದ
ಖರದೂಷಣಾದಿಗಳ ಸಂಹರಿಸಿ ಜಗದೊಳಗೆ
ಉರುಮಹಿಮೆಯನು ತೋರಿಸಿ
ಬರಲು ಕಾಂಚನಮೃಗವು ವನಿತೆ ತರಬೇಕೆನಲು
ತರಹೋಗಿ ಅದನು ಕೊಂದು
ಭರದಿ ರಾವಣ ಬಂದು ಜಾನಕಿಯ ಕೊಂಡೊಯ್ಯೆ
ಬಹಳ ಚಿಂತೆಯ ತಾಳಿದೆ ಸ್ವಾಮಿ ೫

ಪರಮಭಕ್ತ ಜಟಾಯುವಿಗೆ ಮೋಕ್ಷವನು ಕೊಟ್ಟು
ತರಿದು ದುಷ್ಟ ಕಬಂಧನ
ಸ್ಥಿರಪದವನಿತ್ತವಗೆ ಶಬರಿಪೂಜೆಯ ಕೊಂಡು
ಬರುತಲಾ ಮಾರ್ಗದಲ್ಲಿ
ವರ ಜಲಜ ಪಂಪಾಸರೋವರದ ತೀರದಲಿ
ಹರಿವರನು ಇರಲು ಕಂಡು
ತ್ವರೆಯಿಂದ ಸುಗ್ರೀವ ಸ್ನೇಹ ಮಾಡಿಯೆ ಸಪ್ತ
ತಾಳತರುಗಳ ತರಿದೆಯ್ಯೆ ಸ್ವಾಮಿ ೬

ಶರವೊಂದರಿಂ ವಾಲಿಯನು ಮಥಿಸಿ ಅಂಗದನ
ಕರುಣದಿಂ ಪರಿಪಾಲಿಸಿ
ವರಲಗ್ನದೊಳ್ ಪಟ್ಟಗಟ್ಟಿ ಸುಗ್ರೀವನಿಗೆ
ಪರಮಭಾಗ್ಯವನು ಕೊಟ್ಟು
ಕರೆದು ವಾತಾತ್ಮಜನ ಕರದಿ ಮುದ್ರಿಕೆಯಿತ್ತು
ತರುಣಿಗದ ಕೊಡಪೇಳಲು
ಭರದಿ ಲಂಕೆಗೆ ಪೋಗಿ ಜನಕಜೆಗೆರಗಿ ಕಥೆಯ
ನರುಹಿ ಉಂಗುರವಿತ್ತನೈ ಸ್ವಾಮಿ ೭

ಮರುದಾತ್ಮಜನು ಲಂಕೆಯನು ದಹಿಸಿ ಬೇಗದಲಿ
ಶರಧಿಯನು ದಾಟಿ ಬಂದು

ಪರಮಪುರುಷನೆ ನಿನ್ನ ಕರದಿ ಮಣಿಯನ್ನಿತ್ತು
ಅರುಹಲಾಕ್ಷೇಮವನ್ನು
ಹರುಷದಿಂ ಸೇನೆಗಳನೊಡಗೊಂಡು ವಾರಿಧಿಗೆ
ವರ ಸೇತುವೆಯ ನಿರ್ಮಿಸಿ
ಸರಭಸದಿ ಬಲ ಸಹಿತ ಸರ್ವಾತ್ಮಕನು ನೀನು
ಸಾರಿ ಲಂಕೆಗೆ ಮುತ್ತಿದೆ ಸ್ವಾಮಿ ೮

ಅನುಜನಿಂದತಿಕಾಯ ಇಂದ್ರಜಿತುಗಳನೆಲ್ಲ
ಅತಿ ಲೀಲೆಯಿಂದ ವಧಿಸಿ
ಘನ ಪರಾಕ್ರಮರಾದ ರಾವಣಾದಿಗಳ ನೀ
ಹನನವಂಗೈದು ಮುದದಿ
ದಿನಪ ಕುಲಪತಿ ನೀನು ದೀನವತ್ಸಲನೆಂದು
ದಿವಿಜರಿಂ ಸ್ತುತಿಯಕೊಂಡು
ಪ್ರಣತನಾದ ವಿಭೀಷಣನಿಗೆ ಪಟ್ಟವ ಕಟ್ಟಿ
ಚಿನುಮಯತ್ವವ ಹರಹಿದೆ ಸ್ವಾಮಿ ೯

ಧರಣಿಸುತೆಯೊಡಗೂಡಿ ದಿವ್ಯ ಪುಷ್ಪಕವೇರಿ
ತೆರಳಿ ಸುರಪಥದಿ ನೀನು
ಬರುತ ಮುನಿವರ ಭರದ್ವಾಜರಾಶ್ರಮದಲ್ಲಿ
ಪರಮ ಸತ್ಕಾರಗೊಂಡು
ಭರತನಿಗೆ ಬಂದರೆಂದರುಹುವರೆ ಹರಿವರನ
ಕರೆದು ಭರದಿಂದ ಕಳುಹಿ
ಕರುಣದಿಂ ಬಂದು ಅನುಜನ ಅಂಕದೊಳು ಧರಿಸಿ
ಕರಗಳಿಂದಪ್ಪಿಕೊಂಡೆ ಸ್ವಾಮಿ ೧೦

ಶಿರದೊಳಗೆ ಧರಿಸಿದ್ದ ಜಟೆಯ ಶೋಧನೆಗೈದು
ವರ ರಥವನೇರಿ ಹೊರಟು
ಪರಿಪರಿಯ ಭೇರೀಮೃದಂಗ ಕಹಳಾದಿಗಳ

ಪರಮ ಶಬ್ದಗಳಿಂದ
ಪರಮೋತ್ಸವದಿ ವೆರಸಿ ವನಚರರ ರವಗೂಡಿ
ಪುರವ ನೀ ಸೇರೆ ಮುದದಿ
ಮೊರೆದವವು ದುಂದುಭಿಯ ವಾದ್ಯಗಳು ದಿನವಿಜರಿಂ
ಸುರಿದವಾ ಪುಷ್ಪವೃಷ್ಟಿ ಸ್ವಾಮಿ ೧೧

ಜನನಿಗೆರಗುತ ಮಂಗಳಸ್ನಾನವನು ಮಾಡಿ
ಕನಕ ವಸ್ತ್ರಗಳ ಧರಿಸಿ
ವನಚರರುಗಳ ಕಳುಹಿ ಉದಧಿ ನಾಲ್ಕರ ಜಲಗ
ಳನು ತರಿಸಿ ತರುಣಿ ಸಹಿತ
ಘನರತ್ನಮಯವಾದ ಸಿಂಹಾಸನವನೇರಿ
ಅನುಜರಿಂ ಸೇವೆಗೊಳುತ
ಅನುನಯದಿ ಗುರುವಸಿಷ್ಠಾದಿಗಳ ಕರಗಳಿಂ
ದಭಿಷೇಕವನ್ನು ಪಡೆದೆ ಸ್ವಾಮಿ ೧೨

ತರಣಿಕೋಟಿಪ್ರಭೆಯ ಬೆಳಗುತ್ತ ಪೀಠದಲಿ
ಧರಣಿಜೆಯ ಸಹಿತ ನೀನು
ಸ್ಮರಶತದ ಲಾವಣ್ಯದಿಂದ ಕುಳಿತಿರಲಾಗ
ವರ ಭಟರು ಪೊಗಳುರತಿರಲು
ಹರಿವರನು ಪಾದವನೊತ್ತುತಿರೆ ಹಾರವನು
ತರುಣಿಯಿಂದವಗೆ ಕೊಡಿಸಿ
ಧರಣೀಸುರಾದಿ ಜನಗಳ ದಿವ್ಯ ಭೋಜನದಿ
ಪರಮತೃಪ್ತಿಯಗೊಳಿಸಿದೆ ಸ್ವಾಮಿ ೧೩

ಪರಮಾತ್ಮ ನೀ ರಾಜ್ಯವನ್ನಾಳಿ ದುಷ್ಟರನು
ಪರಿದು ಸುಖವಿತ್ತೆ ಧರೆಗೆ
ಹರುಷದಿಂದೀ ಕಥೆಯ ಕೇಳಿ ಪೇಳಿದರವರ್ಗೆ
ಪರಮ ಪದವಿಯನೀಯುವೆ

ಗುರು ವಾಸುದೇವಾರ್ಯ ರೂಪವನು ಧರಿಸಿ ನೀ
ತರುಣ ನಾಗನಗರದಲಿ
ಕರವಿಡಿದು ನಾರಾಯಣಾಖ್ಯ ದಾಸನ ನಿರತ
ಪೊರೆಯುತಿಹೆ ವೆಂಕಟೇಶ ಸ್ವಾಮಿ ೧೪

೧೨

ಸೀತಾಪತೆ ರಾಮ ಸೀತಾಪತೆ ರಾಮ
ಸೀತಾಪತೆ ರಾಮ ಶ್ರೀರಘುರಾಮ ಪ

ದಶರಥನೃಪ ಬಾಲ ದಾನವಕುಲ ಕಾಲ
ಧರಣಿಜಾಲೋಲ ದಾನಸುಶೀಲ ೧

ಕರಧೃತಶರಚಾಪ ಕಂದರ್ಪಶತರೂಪ
ದರಹಸಿತಾಲಾಪ ತರಣಿಪ್ರತಾಪ ೨

ರಘುಕುಲಾಂಬುಧಿಸೋಮ ರಾಕ್ಷಸಕುಲಭೀಮ
ರಣಚಂಡ ವಿಕ್ರಮ ರಾಜಲಲಾಮ ೩

ಸಾರಸ ದಳನೇತ್ರ ಸನಕಾದಿ ನುತಿಪಾತ್ರ
ನೀರದ ನಿಭಗಾತ್ರ ನಿರುಪಮ ಕ್ಷಾತ್ರ ೪

ಸದ್ಗುಣಗಣ ಭೂಷ ಸರ್ವಭೂತಾವಾಸ
ಸಜ್ಜನ ಪರಿಪೋಷ ಸಕಲ ಲೋಕೇಶ ೫

ವನಜನಿರ್ಮಿತ ಮಾಲ ವಾನರಕುಲಪಾಲ
ಕನಕಾಂಚಿತ ಚೇಲ ಕರುಣಾಲವಾಲ ೬

ಶ್ರೀ ತಿರುಪತಿವಾಸ ಶ್ರಿತದಾಸ ಪರಿತೋಷ
ಶ್ರೀಗುರುವರವೇಷ ಶ್ರೀ ವೆಂಕಟೇಶ ೭

(೩) ಕೃಷ್ಣ ಸ್ತುತಿಗಳು

೧೩

ಬಾರೊ ಬಾರೊ ಶ್ರೀ ವೇಣುಗೋಪಾಲ ಎನಗೆ ನೀ
ತೋರೊ ತೋರೊ ನಿನ್ನ ಮೂರ್ತಿಯ ಪ

ವಸುದೇವಾತ್ಮಜ ವಾರಿಜಲೋಚನ
ಶಶಿಮುಖಿಯರ ಕೂಡಿ ಸರಸವಾಡುತ ಬಾ ೧

ನೀಲಾಳಕಾವೃತ ನಿತ್ಯ ನಿರಾಮಯ
ಫಾಲತಿಲಕ ಭಕ್ತಜಾಲಪೋಷಕ ಬಾ ೨

ಮಕರಕುಂಡಲಧರ ಮನ್ಮಥಮೋಹನ
ಪ್ರಕಟಿತ ಮಹಿಮ ನೀ ಪ್ರಭೆಯ ಬೀರುತ ಬಾ ೩

ಮಂದಸ್ಮಿತಾನನ ಮಧುರ ಮಂಜುಳ ಭಾಷ
ಸಿಂಧುಗಭೀರ ಪುರಂದರನುತ ಬಾ ೪

ನೀಲಮೇಘಶ್ಯಾಮ ನಿರುಪಮ ವನಮಾಲಿ
ಬಾಲರ ಕೂಡಿ ನೀನೋಲಾಡುತ ಬಾ ೫

ಪೀತವಸನ ಭಕ್ತಪಾತಕಹರ ಸರ್ವ
ಭೂತಾವಾಸನೆ ಪಶುವ್ರಾತಪಾಲಕ ಬಾ ೬

ನಿನ್ನ ಮಹಿಮೆಗಳ ವರ್ಣಿಸಲಳವಲ್ಲ
ಪನ್ನಗಶಯನ ಸುಪರ್ಣವಾಹನ ಬಾ ೭

ಭವಶರಧಿಯೊಳ್ ಬಿದ್ದು ಭಂಗಪಡುತಲಿಹೆ
ಭವಭಯಹರನೆ ಎನ್ನ ಬವಣೆ ತಪ್ಪಿಸೆ ಬಾ ೮

ತಿರುಪತಿವಾಸ ಶ್ರೀಧರ ವೆಂಕಟೇಶನೆ
ತರಳ ನಾರಾಯಣದಾಸಗೊಲಿದು ಬಾ ೯

೧೪

ಬೇಗ ಬಾರೊ ರಂಗ ಕುಣಿಕುಣಿಯುತ
ಬೇಗ ಬಾರೊ ರಂಗ ಪ

ಬೇಗ ಬಾರೊ ರಂಗ ಬೆಡಗ ಬೀರುತ ನೀನು
ಸಾಗರಾತ್ಮಜಾಕಾಂತ ಸರಸಿಜಾಂಬಕ ದಯದಿಂ
ಬೇಗ ಬಾರೊ ರಂಗ ಅ.ಪ.

ನಂದಗೋಪಬಾಲ ನವನೀತ ಚೋರ
ಕುಂದ ತುಲಸೀಮಾಲ
ಮಂದಹಾಸ ಮುಖ ಮದನ ಜನಕ ಸುರ
ಬೃಂದವಂದ್ಯ ಸುಖದಾಯಕ ನೀ ದಯದಿಂ ೧

ವೇಣುಗಾನಲೋಲ ಗೋಪಿಕಾಜಾರ
ದೀನಭಕ್ತಪಾಲ
ಭಾನುಕೋಟಿನಿಭ ಭವಭಯಪರಿಹರ
ಕಾಣಿಸು ಕಮನೀಯಮೂರ್ತಿಯ ನೀ ದಯದಿಂ ೨

ಶೇಷಗಿರಿನಿವಾಸ ಗುರುವಾಸುದೇವ
ವೇಷ ವೆಂಕಟೇಶ
ಪಾಶವಳಿದು ನಾರಾಯಣದಾಸನ
ಪೋಷಿಸು ಚಿಕ್ಕನಾಗಪುರದಿ ನಿರತ ದಯದಿಂ ೩

(೪) ಶಿವಸ್ತುತಿಗಳು

೧೫

ಗಿರಿಜಾಕಾಂತನೆ ನಿನ್ನ ಶುಭ
ಚರಣವ ನಂಬಿದೆ ಮುನ್ನ
ಕರವಿಡಿದೀಗಲೆ ಕಾಯಬೇಕೆನ್ನ
ಪರಿಪರಿ ವರಗಳ ಕೊಡುವ ಪ್ರಸನ್ನ ಪ

ಗಜ ಚರ್ಮಾಂಬರನೆ ನಿತ್ಯ
ಸುಜನರ ಪಾಲಿಸುತಿಹನೆ
ಅಜಹರಿಸನ್ನುತ ಅಮಿತ ಮಹಿಮನೆ
ತ್ರಿಜಗೋದ್ಧಾರನೆ ಭುಜಗಭೂಷಿತನೆ ೧

ನಂದಿಯನೇರಿಯೆ ಬಂದು ಎನ್ನ
ಮಂದಿರದೊಳ್ ನಿಂದು
ಕುಂದದಿರುವ ಆನಂದವ ಕೊಡು ಎಂದು
ವಂದಿಸುವೆನು ನಾ ನಿನಗೆ ಕೃಪಾಸಿಂಧು ೨

ವರ ಚಿಕ್ಕನಾಗರದಿ ನಿಂದು
ಗರಪುರವಾಸನೆ ದಯದಿ
ವರದ ಶ್ರೀ ವೆಂಕಟರಮಣನ ರೂಪದಿ
ಪೊರೆವೆ ನಾರಾಯಣದಾಸನ ಮುದದಿ ೩

೧೬

ರಜತಾದ್ರಿಪನೆ ನೀನು ರಮಣೀಯ ಮೂರ್ತಿಯಿಂ
ರಾಜಿಸ್ಯೆ ಬೇಗ ಎನಗೆ ಪ

ಭುಜಗಭೂಷಣ ನಿನ್ನ ಪೂಜಿಸಲುಬೇಕೆಂದು
ಭಜಿಸುತ್ತಲಿಹೆನು ನಾನು ಸ್ವಾಮಿ ಅ.ಪ

ಗಂಗಾಧರೇಶ್ವರನೆ ಗೌರೀಮನೋಹರನೆ
ಮಂಗಳಾಸ್ಪದ ಮಹಿಮನೆ
ಶೃಂಗಾರವಂತನೆಶ್ರಿತಜನೋದ್ಧಾರಕನೆ
ಲಿಂಗರೂಪದಿ ಮೆರೆವನೆ
ಶೃಂಗಭೂಷಿತವಾದ ಶುಭಕಾಂತಿಯುತವಾದ
ತುಂಗ ವೃಷಭವನೇರ್ದನೆ
ಮಂಗಳಾಂಗನೆ ಮಹಾ ಸ್ಫಟಿಕಮಯವಾದ ಶಿವ
ಲಿಂಗವನು ಕೊಡು ಬೇಗದಿ ಸ್ವಾಮಿ ೧

ಶೂಲಧರ ವಿಗ್ರಹನೆ ಶುಕಮೌನಿ ಪೂಜಿತನೆ
ಮೂಲಕಾರಣ ರುದ್ರನೆ
ಫಾಲಲೋಚನ ಪಂಡಿತಾರಾಧ್ಯ ಪರಮೇಶ
ಮೂಲೋಕವಂದ್ಯಪದನೆ
ಬಾಲೇಂದುಶೇಖರನೆ ಭವರೋಗವೈದ್ಯನೆ
ಕಾಲಕಾಲ ಕೃಪಾಢ್ಯನೆ
ನೀಲಲೋಹಿತನೆ ನಿರ್ಗುಣ ಮೂರುತಿಯೆ ಎನ್ನ
ಪಾಲಿಸೈ ಪರಮಾತ್ಮನೆ ಸ್ವಾಮಿ ೨

ಪರಶುಮೃಗಕರನೆ ಪಶುಪತಿಯೆ ಚಿಕ್ಕನಾಗಾಖ್ಯ
ಪುರದೊಳಗೆ ನೆಲಸಿರುವನೆ
ವರದಾಭಯಾನ್ವಿತನೆ ವಲಿದೊರವ ಕೊಡುತಿಹನೆ
ಪರಮ ಕರುಣಾಪೂರನೆ
ಮರೆಹೊಕ್ಕೆನೈ ನಿನಗೆ ಮನದಭೀಷ್ಟವ ಬೇಗ
ಕರುಣಿಸೈ ಶ್ರೀಕಂಠನೆ
ವರವಿತ್ತು ರಕ್ಷಿಸೈ ವರಕೃಷ್ಣನೃಪತಿಯನು
ತಿರುಪತೀಶ್ವರ ರೂಪನೆ ಸ್ವಾಮಿ ೩

೧೭

ಬಾರಯ್ಯ ಭಕ್ತವತ್ಸಲ ನೀನು
ವಾರಿಜಾಂಬಕಿ ಪಾರ್ವತಿಗೂಡಿ ಬೇಗದಿ ಪ

ಗಜಚರ್ಮಾಂಬರ ನಿನ್ನನೆ ಭಜಿಸಬೇಕೆನ್ನುತ
ಭಜಿಸುತಲಿರುವೆನು ಭವಹರನೆ
ಭಜಗಭೂಷಣನೆ ಭುವನಾಧಾರನೆ
ಸುಜನಸೇವಿತ ಜಗತ್ಸುಖಕರ ಮೂರ್ತಿಯೆ ೧

ಕಾಲಾಗ್ನಿ ರುದ್ರನೆ ಕಲಿಕಲ್ಮಷಘ್ನನೆ
ಫಾಲಲೋಚನದಿಂದ ಪೊಳೆಯುವನೆ
ನೀಲಗ್ರೀವನೆ ನಿರ್ಮಲಕಾಯನೆ
ಶೂಲಾದ್ಯಾಯುಧಧರ ಸುರವಂದ್ಯನೆ ೨

ತರುಣನಾಗಾಖ್ಯಪುರದ ಮಧ್ಯದೊಳಗಿಹ
ಗುರು ವೇಂಕಟೇಶ್ವರ ರೂಪಿನಲಿ
ಶರಣಾಗತ ನಾರಾಯಣದಾಸನ
ಪೊರೆಯುತಲಿಹ ಶ್ರೀಗರಳಪುರೀಶ್ವರ ೩

೧೮

ಬಾರೊ ಬಾರೊ ಮನೆಗೆ ಬಾರೊ ಬಾರೊ
ಬಾರೊ ಸ್ಫಟಿಕಲಿಂಗರೂಪದಿ ವಾರಿಜಾಕ್ಷಿಗೌರೀರಮಣ ಪ

ಅಂದಿನಿಂದ ಪ್ರಾರ್ಥಿಸುವೆ ಅಂಧಕಾಸುರ ಹರನೆ
ನಂದಿಯನೇರಿ ನೀನು ಕಂದನಲ್ಲಿ ಕರುಣವಿಟ್ಟು ಬಾರೊ ೧

ಶಿರದಲ್ಲಿ ಗಂಗೋಡುಪರ ನಿರತದಲ್ಲಿ ಧರಿಸಿಕೊಂಡು
ಪರಶುಮೃಗಾಭಯ ವರದ ಕರಗಳಿಂದ ಸ್ಫುರಿಪನೆ ೨

ನಾಗಚರ್ಮಾಂಬರನೆ ನಗರಾಜಚಾಪನೆ
ನಾಗೇಶಭೂಷಣನೆ ನಾಗೇಶಶಯನ ಸಖನೆ ೩

ಅಂಗಜನನುರುಪಿದ ಮಂಗಳಾಂಗನೆ ನಿನ್ನ
ಮಂಗಳ ಮಹಿಮೆ ಸ್ತುತಿಸಿ ಲಿಂಗವ ಪೂಜಿಸಿ ಕುಣಿವೆ ೪

ಸಾಮಗಾನಲೋಲಚಿತ್ತ ಸೋಮಸೂರ್ಯಾಗ್ನಿನೇತ್ರ
ಕಾಮಿತಫನದಾತ ಕಮಲಭವನುತಿಪಾತ್ರ ೫

ಗಿರಿಜೆಗರ್ಧಾಂಗವ ಪರುಷವಲಿತ್ತನೆ
ಪರಮಭಕ್ತರಿಗೊಲಿದು ಪರಮ ಭಾಗ್ಯವೀಯ್ಯುವನೆ ೬

ತರುಣನಾಗಪುರದಲ್ಲಿ ಸ್ಥಿರವಾಗಿ ನೆಲಸಿಹ
ಗುರು ವೆಂಕಟೇಶರೂಪ ಗರಳಪುರೀಶ್ವರ ದೇವ ೭

೧೯

ರಕ್ಷಮಾಂ ಶಿವಶಂಕರ ಸ್ವಾಮಿನ್
ಪಕ್ಷಿವಾಹನ ಸಖ ಪರಮ ಮಂಗಳಮೂರ್ತೆ ಪ

ಅಜಿನಾಂಬರಧರ ಆನಂದವಿಗ್ರಹ
ಅನುಪಮಾಮಿತ ತೇಜ ಆತ್ಮಬಂಧೊ
ತ್ರಿಜಗತ್ಪೋಷಕ ತ್ರಿಪುರಾಂತಕ ದೇವ
ಭಜಕಭವಾಪಹ ಭವ್ಯಚರಿತ ಶಂಭೊ ೧

ಕೈಲಾಸವಾಸ ಕಮನೀಯ ಹಾಸ
ಕಾಮಿತ ಫಲದೇಶ ಕಾಮಾರೆ
ಫಾಲಲೋಚನ ಫಣಿರಾಜವಿಭೂಷಿತ
ಪಾಲಿತ ಮುನಿಬೃಂದ ಪಾರ್ವತಿವರ ಶಂಭೊ ೨

ಶ್ರೀ ಮಹಿಷಾಪುರವಾಸ ಶ್ರಿತಕೃಷ್ಣ ನೃಪತೋಷ
ಶ್ರೀ ತಿರುಪತಿ ವೆಂಕಟೇಶ ರೂಪ
ಪ್ರೇಮಪೂರಿತ ನಾರಾಯಣದಾಸ ಪೋಷಕ
ಸೋಮಶೇಖರ ಶ್ರೀ ತ್ರಿನಯನೇಶ್ವರ ಶಂಭೊ ૩

೨೦

ಶ್ರೀಕಂಠೇಶ್ವರ ದೇವ ಶ್ರೀಕಂಠೇಶ್ವರ ದೇವ ಶ್ರೀಕರಗುಣಗಣ
ಈ ಕುಂಭಿನೀಶ ಚಾಮೇಂದ್ರನ ಪೋಷಿಸು ಪ

ಕರಿಚರ್ಮಾಂಬರಧರ ಕರುಣಾಸಾಗರನೆ ತ್ರಿ
ಪುರಹರತ್ರಿನಯನ ವರಶೂಲಪಾಣಿಯೆ
ನರನಾಥತನಯನ ಕರವ ಪಿಡಿದು ಸತತ
ಪರಿಪಾಲಿಸೀ ಮಹಿಯೊಳ್ ಕರುಣದಿಂ ಶಶಿಧರ ೧

ಪನ್ನಗಭೂಷಣ ನಿನ್ನ ಮಹಿಮೆಗಳ
ವರ್ಣಿಸ ಶಕ್ಯವೆ ಪನ್ನಗೇಶ್ವರನಿಂದ
ಸನ್ಮುನಿವಂದ್ಯನೆ ಸರ್ವೇಶ ಭಕ್ತರ್ಗೆ
ಉನ್ನತಪದವೀವೆ ಉರ್ವಿಯೊಳ್ ಗೌರೀಶ ೨

ಪರಶು ಮೃಗಾಭಯ ವರದ ಚತುರ್ಭುಜ
ವರ ವೃಷಭವನೇರಿ ಗರಪುರದೊಳ್ ಮೆರೆವೆ
ತರಳ ನಾರಾಯಣದಾಸನ ಬಿನ್ನಪವ
ಕರುಣದಿಂ ಸಲಹು ವೇಂಕಟರಮಣನ ಪ್ರಿಯ ૩

(ಆ) ಸ್ತ್ರೀದೇವತಾ ಸ್ತುತಿಗಳು

(೧) ಪಾರ್ವತಿ

೨೧

ಜಯಮಂಗಳಂ ನಿತ್ಯ ಶುಭಮಂಗಳಂ
ಭಯಕರದ ಭವಗಳನು ಪರಿವ ಪಾರ್ವತಿಗೆ ಪ

ಚಂದ್ರನನು ಧರಿಸಿರುವ ಚಾರುತರ ಮೌಳಿಗೆ
ಅಂದವಾದಳಕ ಕುಂಕುಮವೆಸೆವ ಫಣಿಗೆ
ಇಂದ್ರಚಾಪವ ಪೋಲ್ವ ಪುರ್ಬುಗಳ ಚೆಲುವಿಗರ
ವಿಂದ ದಳದಾಯತದ ಲೋಚನಂಗಳಿಗೆ ೧

ಅಕಳಂಕ ರತ್ನತಾಟಂಕ ಕರ್ಣದ್ವಯಕೆ
ಮುಕುರವನು ಪಳಿಯುತಿಹ ಕದಪುಗಳಿಗೆ
ವಿಕಸಿಸುವ ಚಂಪಕಾಕುಸುಮ ಸದೃಶದ ದಿವ್ಯ
ಮುಖವ ಶೋಭಿಪ ಮುದ್ದು ಮೂಗುತಿಯ ನಾಸಿಕಕೆ ೨

ಚೆಂದುಟಿಗೆ ಕುಂದ ಕುಟ್ಮಲ ದಂತಸಾಲ್ಗಳಿಗೆ
ಮಂದಸ್ಮಿತೋಲ್ಲಾಸಿ ಮುಖಕಮಲಕೆ
ಕುಂದಣದ ಒಂದಿ ಮುಕ್ತಾಹಾರವಳವಟ್ಟ
ಕಂಧರಕೆ ಪದಕಗಳು ಪೊಳೆವ ವಕ್ಷಸ್ಥಳಕೆ ೩

ಮರಕತಾಮಲ ವಜ್ರಖಚಿತ ವಲಯಾನ್ವಿತದ
ಸರಸಿಜೋತ್ಪಲ ವರಾಭಯ ಕರಂಗಳಿಗೆ
ವರ ಕಾಂಚಿದಾಮದಿಂ ಸ್ಫುರಿಸುತಿಹ ಕಟಿತಟಕೆ
ಮೊರೆವ ನೂಪುರವಿಟ್ಟ ಪಾದಪದ್ಮಂಗಳಿಗೆ ೪

ವರ ಮಹಿಷೂರಪುರ ನಿಲಯ ತ್ರಿನಯನ ಸತಿಗೆ
ಪರಮ ಸಿತವಸನಳಿಗೆ ಫಣಿವೇಣಿಗೆ
ಕರುಣದಿಂ ನಾರಾಯಣಾಖ್ಯ ದಾಸನ ಪೊರೆವ
ತಿರುಪತೀಶನ ಸೋದರಿಗೆ ಮನೋನ್ಮಣಿಗೆ ೫

(೨) ಶ್ರೀ ಚಾಮುಂಡೇಶ್ವರೀ ಸ್ತುತಿಗಳು

೨೨

ಚಾಮುಂಡೇಶ್ವರಿ ಚಾಮೇಂದ್ರನೃಪನನ್ನು
ಪ್ರೇಮದಿಂ ರಕ್ಷಿಸಮ್ಮ ಪ

ಜೀಮೂತಶ್ಯಾಮಳೆ ಕೋಮಲಶುಭಗಾತ್ರೆ
ಕಾಮಿತ ಫಲದಾಯಕಿ ಕಲ್ಯಾಣಿ ಅ.ಪ.

ನಿನ್ನ ಸನ್ನಿಧಿಗೆ ನಾ ಬಂದು ಪ್ರಾರ್ಥಿಸೆ ಪ್ರ
ಸನ್ನಳಾಗಿ ನೃಪನ
ರನ್ನದ ಸಿಂಹಾಸನವೇರಿಸಿ ಎನ
ಗುನ್ನತೋನ್ನತವಾದಾನಂದವನಿತ್ತೆ ೧

ಆಯುರಾರೋಗ್ಯ ರಾಜ್ಯೈಶ್ವರ್ಯ ಪುತ್ರರಿಂ
ದಾನಂದವನ್ನೈದಿ
ನಾಯಕಮಣಿಯಂದದಿಂ ನರನಾಥರ್ಗೆ
ನಾಥನಾಗಿ ನಲಿಯುತ್ತಲಿರಲಿ ಸದಾ ೨

ಗಿರಿಯೊಳುತ್ತಮ ಮಹಾಬಲಗಿರಿಯೊಳು ನಿಂದು
ಕರುಣಾರಸವೆರಸಿ
ಪೊರೆವೆ ನಾರಾಯಣದಾಸನ ಬಿನ್ನಪವ
ತಿರುಪತೀಶನ ಸೋದರಿ ಶುಭವರ್ಧಿನಿ ೩

೨೩

ಚಾಮುಂಡೇಶ್ವರಿ ಪಾಲಿಸು ಬೇಗದಿಂ
ಚಾಮರಾಜೇಂದ್ರ ನೃಪನ ಪ

ಪ್ರೇಮದಿಂ ರಾಜ್ಯಾಭಿಷೇಕವ ಮಾಡಿಸಿ
ಈ ಮಹಿಯನ್ನೀತನಿಂದಾಳಿಸು ತಾಯೆ ಅ.ಪ

ನವರಾತ್ರಿಯು ಬಂತೆನ್ನುತ ಜನಗಳು
ತವಕಿಸುತಿಹರಮ್ಮ
ಅವನೀಶಾಧಿಪನ ಸಿಂಹಾಸನವೇರಿಸಿ
ನವರಾತ್ರಿಯುತ್ಸವವಂ ಮಾಡಿಸು ತಾಯೆ ೧

ಈ ಪಟ್ಟಣಕಭಿಮಾನಿ ನೀನಿರೆ ಜನ
ತಾಪ ಪಡುವುದುಂಟೆ
ಪಾಪ ಕೃತ್ಯಂಗಳ ಮಾಳ್ಪರ ಪರಿದು ನೀ
ತಾಪವಳಿದು ತಂಪಿಸಿ ಜನವನು ಪೊರೆಯೆ ೨

ಧರೆಯೊಳುತ್ತಮ ಮಹಾಬಲಗಿರಿವಾಸಿನಿ
ಗುರು ವಾಸುದೇವ ರೂಪಿಣಿ
ಕರುಣದಿಂ ನಾರಾಯಣದಾಸನ ಮನಕೆ
ಹರುಷವ ಕೊಡು ವೆಂಕಟಪತಿ ಸೋದರಿ ೩

೨೪

ಚಾಮುಂಡೇಶ್ವರಿ ಪಾಲಿಸೆ ನಮ್ಮ
ಚಾಮರಾಜೇಂದ್ರ ನೃಪಾಲನ ನಿರುತವು ಪ

ಇಂದ್ರಾದಿ ದೇವರ್ಕಳೆಲ್ಲ ನಿನ್ನಂಘ್ರಿಯ
ಕುಂದ ಮಂದರಾದಿ ಕುಸುಮರತ್ನಗಳನ್ನು

ತಂದು ಪೂಜಿಸಲಾಗ ಪರಿತುಷ್ಟಳಾಗಿ ನೀ
ನಂದು ಕುಂದದ ವರಗಳನಿತ್ತು ಸಲಹಿದೆ ೧

ಇಳೆಯೊಳು ಕೃಷ್ಣೇಂದ್ರ ನಿನ್ನ ಪೂಜೆಯ ಭಕ್ತಿ
ಯಲಿ ಗೈದು ವರಪುತ್ರನನ್ನಾತ ಪಡೆದನು
ಒಲಿದು ನೀನಿತ್ತ ಪುತ್ರನು ಸುಖದಿಂದೀ ಭೂ
ವಲಯವನಾಳಿಕೊಂಡಿರುವಂತೆ ವರವಿತ್ತು ೨

ಶರಣಾಗತಜನ ರಕ್ಷಣೆಗೈಯುತ
ವರ ಮಹಾಬಲಗಿರಿಯೋಳು ನಿಂದು ಮೆರೆಯುವೆ
ತರಳ ನಾರಾಯಣದಾಸನ ಬಿನ್ನಪವ
ಕರುಣದಿಂ ಸಲಹು ವೆಂಕಟರಮಣ ಸೋದರಿ ೩

೨೫

ಪಾಲಯಮಾಂ ಶ್ರೀ ಚಾಮುಂಡೇಶ್ವರಿ
ಫಾಲನಯನದಯಿತೆ ಪ

ಮೂಲಕಾರಣ ಶಿವೆ ಮೃಗರಾಜ ವಾಹನೆ
ನೀಲವೇಣಿ ಶ್ರೀ ರಾಜರಾಜೇಶ್ವರಿ ಅ.ಪ

ಪಂಕಜಾಕ್ಷಿ ಪರಾತ್ಪರೆ ಪಾವನೆ
ಪಂಕಜಭವವಿನುತೆ
ಪಂಕಜಾರ್ಚಿತೆ ಪರಮದಯಾನ್ವಿತೆ
ಕಿಂಕರಜನ ರಕ್ಷಿಣಿ ಕಾತ್ಯಾಯಿನಿ ೧

ಚಂಡ ಮುಂಡ ವಿಮರ್ದಿನಿ ಜಗದು
ದ್ದಂಡ ಮಹಿಮಪೂರ್ಣೆ

ಮಂಡಲೇಶ ಶ್ರೀಕೃಷ್ಣ ನೃಪಾಲಾ
ಖಂಡ ರಾಜ್ಯಪ್ರದೆ ಶ್ರೀ ಪಾರ್ವತಿ ೨

ಗುರು ವಾಸುದೇವಾರ್ಯ ರೂಪಿಣಿ ಮಹಿಷಾ
ಪುರ ಪರ್ವತವಾಸೆ
ಶರಣಾಗತ ನಾರಾಯಣದಾಸ ಪೋಷಿಣಿ
ತಿರುಪತಿ ವೆಂಕಟರಮಣ ಸೋದರಿ ಗೌರಿ ೩

೨೬

ಮಂಗಳ ಶ್ರೀ ಚಾಮುಂಡೇಶ್ವರಿಗೆ ಜಯ
ಮಂಗಳ ಶ್ರೀಚಕ್ರಪುರವಾಸಿನಿಗೆ ಜಯ
ಮಂಗಳ ಶ್ರೀ ಚಾಮುಂಡೇಶ್ವರಿಗೆ ಪ

ಅಜಸುರಾರ್ಚಿತಳಿಗೆ ಅಂಬುಜವದನೆಗೆ
ತ್ರಿಜಗನ್ಮಾತೆಗೆ ತ್ರಿಪುರಸುಂದರಿಗೆ
ಭಜಕಭವಾಬ್ಧಿಯ ದಾಟಿಸಿ ಪೊರೆಯುವ
ಭುಜಗಭೂಷಣ ಸಹ ಭುವನೇಶ್ವರಿಗೆ ಜಯ ೧

ನವರಾತ್ರೋತ್ಸವದಿಂದಾನಂದಭರಿತಳಾಗಿ
ನಲಿಯುತಂಬಾವಿಲಾಸದ ಮಧ್ಯದೊಳಗೆ
ಅವನೀಶಾಧಿಪ ಕೃಷ್ಣನೃಪತಿಗೆ ವರಗಳ
ತವಕದಿಂ ಕರೆಕರೆದೀವ ಶ್ರೀಗೌರಿಗೆ ೨

ಭೂಧರೋತ್ತಮ ಮಹಾಬಲಗಿರಿವಾಸೆಗೆ
ಶ್ರೀಧರಾಧವ ವೇಂಕಟೇಶ ಸೋದರಿಗೆ
ಆದರದಿಂ ನಾರಾಯಣದಾಸನನು ಪೊರೆವ
ಆದಿಕಾರಿಣಿ ಮಹಿಷಾಸುರಮಥನಿಗೆ ೩

೨೭

ರಕ್ಷಿಸಮ್ಮ ರಕ್ಷಿಸಮ್ಮ ಎನ್ನ
ರಕ್ಷಿಸು ಚಾಮುಂಡಿ ತಾಯೆ ರಕ್ಷಿಸಮ್ಮಾ ಪ

ಅಂದಿನಿಂದ ನಿನ್ನ ಭಜನೆಗೊಂಬೆನಮ್ಮ ನಿನಗೆ
ಕಂದನಲ್ಲಿ ಕರುಣ ಬರಲಿಲ್ಲವಮ್ಮಾ
ಬಂಧನದಿ ಸಿಕ್ಕಿ ಕೊರಗುತಿರುವೆನಮ್ಮ ಇನ್ನು
ಬಂಧನವ ಪರಿದು ಸುಖದಿ ರಕ್ಷಿಸಮ್ಮಾ ೧

ತಂದೆ ತಾಯಿಗಳೆನಗೆ ಇಲ್ಲವಮ್ಮಾ ಈಗ
ಬಂಧುಜನರು ಬಹಳವಾಗಿ ಜರಿವರಮ್ಮಾ
ತಂದೆ ತಾಯಿಗಳು ಸಕಲವು ನೀನೆಯಮ್ಮಾ ಎಂದು
ವಂದಿಸುವೆ ಪಾದಗಳಿಗೆ ರಕ್ಷಿಸಮ್ಮಾ ೨

ತಿರುಪತೀಶನ ರೂಪಿನಲ್ಲಿ ಮೆರೆವೆಯಮ್ಮಾ ಮಹಿಷಾ
ಪುರದಿ ನಿಂದು ಕೃಷ್ಣೇಂದ್ರನ ಪೊರೆವೆಯಮ್ಮಾ
ನಿರತ ನಂಬಿದವರ್ಗೆ ಸುಖವ ಕೊಡುವೆಯಮ್ಮಾ ಬೇಗ
ಕರುಣದಿಂ ನಾರಾಯಣದಾಸನ ರಕ್ಷಿಸಮ್ಮಾ ೩

(ಇ) ಗುರುಸ್ತುತಿ

ಶ್ರೀ ನೃಸಿಂಹಭಾರತಿಗಳು (ಶ್ರೀ ಶೃಂಗೇರಿ ಜಗದ್ಗುರುಗಳು)

೨೮

ಗುರುವರನನು ಭಜಿಪೆ ಶ್ರೀ ಶೃಂಗೇರಿ ಗುರುವರನನು ಭಜಿಪೆ ಪ

ಪರಮ ಪಾವನನಾದ ಗೂಢತತ್ತ್ವವನೊರೆವ
ನರಸಿಂಹಭಾರತಿ ಗುರುವರನನು ಭಜಿಪೆ ಅ.ಪ

ಸ್ವರ್ಣಪೀಠದಿ ಕುಳಿತು ಸ್ವರ್ಣಾಂಬರವ ಪೊದ್ದು
ಚಿನ್ಮುದ್ರೆಯನು ಧರಿಸಿ
ಪನ್ನಗಭೂಷಣ ಪರಶಿವನಂದದಿ
ತನ್ನ ಭಕ್ತರ ಕರೆದು ಛಿನ್ನಸಂಶಯರಮಾಳ್ಪ ೧

ಮಣಿಮಯ ಮಕುಟವ ಮಸ್ತಕದೊಳಗಿಟ್ಟು
ಮಣಿಮಾಲಿಕೆಯ ಧರಿಸಿ
ದಿನಮಣಿಶತತೇಜವನು ಬೆಳಗುತ್ತ ತಾನು
ಘನ ಶಾಸ್ತ್ರಮಾರ್ಗವನನುವದಿಸುತಲಿಹ ೨

ಚಂದ್ರಗಾವಿಯನುಟ್ಟು ಚಂದ್ರಮೌಳೀಶ್ವರನ
ಛಂದದಿ ಪೂಜಿಸುತ
ಸಿಂಧುಜಾ ಧವನಾದ ತಂದೆ ವೇಂಕಟಪತಿ
ಯಂದದಿ ದಾಸಗಾನಂದವನಿತ್ತು ಪೊರೆವ ೩

(ಈ) ಆತ್ಮನಿವೇದನ ಕೃತಿಗಳು

೨೯

ಈ ಸುಖವ ಬಿಟ್ಟನ್ನು ಬೇರೆ ಸುಖವುಂಟೆ
ವಾಸುದೇವನ ಭಜಿಸಿ ಸುಖಿಯಾಗು ಮನವೆ
ಈ ಸುಖವ ಬಿಟ್ಟಿನ್ನು ಬೇರೆ ಸುಖವುಂಟೆ ಪ

ಕಾಮಕ್ರೋಧಾದಿಗಳ ಕಡೆಗೊತ್ತಿ ನಿರತ ನಿ
ಷ್ಕಾಮನಾಗಿಯೆ ತುಲಸಿ ಕುಸುಮಗಳ ತಂದು
ಪ್ರೇಮಪೂರಿತನಾಗಿ ಸರ್ವಪರಿಪೂರ್ಣ ಶ್ರೀ
ರಾಮಪೂಜೆಯಗೈದು ಸುಖಿಯಾಗು ಮನವೆ ೧

ಸೂನು ಮನೆ ಮೊದಲಾದ ಮಮಕಾರವನು ಬಿಟ್ಟು
ಧ್ಯಾನವನು ಶ್ರೀಹರಿಯ ಮೂರ್ತಿಯೊಳಗಿಟ್ಟು

ಸಾನುರಾಗದಿ ಹರಿಯ ನಾಮಸುಧೆಯನು ನೀನು
ಪಾನವನುದಿನ ಗೈದು ಸುಖಿಯಾಗು ಮನವೆ ೨

ಧರೆಯೊಳತ್ಯಧಿಕವೆಂದೆನಿಪ ಚಿಕ್ಕನಾಗಾಖ್ಯ
ಪುರದೊಳಗೆ ಮಹಿಮೆಯಿಂ ಭಕ್ತರನು ಪೊರೆವ
ಗುರು ವಾಸುದೇವಾರ್ಯರೂಪ ವೆಂಕಟಪತಿಯ
ಚರಣದಾಸ್ಯವ ಪಡೆದು ಸುಖಿಯಾಗು ಮನವೆ ೩

೩೦

ಋಣಬಾಧೆಯನು ಬಿಡಿಸೈ ಬೇಗ ಶ್ರೀರಾಮಾ
ಧನವ ಕೊಡಿಸಿ ಸಲಹೋ ಭಕ್ತರೊಳ್ ಪ್ರೇಮಾ ಪ

ದ್ವಿಸಹಸ್ರಾಧಿಕ ಶತರೌಪ್ಯದ ಋಣವಿದು
ಮಸಗುತಲಿದೆ ಯೆನ್ನ ಹೃದಯದೊಳ್ ಬಲಿದು
ಕುಸುಮಶರಪಿತ ನಿನ್ನ ಪೂಜೆಗೆ ಮನಗೊಡದು
ವಸುಧೆಯೊಳ್ ಬಂಧುಗಳಿಂದ ಜರಿಸುವದು ೧

ತಂದೆಗಳ್ ಋಣದಿ ಕೊರಗಿ ನಿನ್ನ ಸೇರ್ದರು
ಅಂದಿನಿಂದಲಾ ಋಣವೆನ್ನ ಕೊರಗಿಸುವದು
ಮಂದರಧರ ಗೋವಿಂದ ಶ್ರೀಪತಿಯೆ ನೀ
ಕಂದನ ರಕ್ಷಿಸು ಋಣವ ಪರಿಹರಿಸಿ ೨

ಜನಿಸಿದ ಒಂದು ವರುಷಕೆ ನಿನ್ನಯ ದಾಸ
ನೆನುತ ತಾಯಿತಂದೆಗಳಿಂದ ನುಡಿಸಿದೆ
ಅನವರತವು ನಿನ್ನ ಪಾದಪೂಜೆಯ ಕೊಡದೆ
ಅನುದಿನವೂ ಋಣದೊಳ್ ಕೊರಗಿಸುತಿಹೆ ಯಾಕೈ ೩

ನಿನ್ನ ಪೂಜೆಯ ಬಹಳ ಮಾಡಲುಬೇಕೆಂದು
ಎನ್ನ ಮನಸಿನೊಳು ಬಹುವಾಗಿ ಯಿಹುದು

ಪನ್ನಗಶಯನ ಕೃಪಾಂಗಮೂರ್ತಿಯೆ ಎನ್ನ
ಮನ್ನಿಸಿ ನಿನ್ನ ಪೂಜಾರ್ಹತೆ ಕೊಡು ಸ್ವಾಮಿ ೪

ತಿರುಪತಿ ಕ್ಷೇತ್ರದಿಂದಲೆ ಬಂದು ಚಿಕ್ಕನಾಗ
ಪುರದೊಳು ನೆಲಸಿಹ ವೆಂಕಟರಮಣನೆ
ಮರೆಹೊಕ್ಕೆನೈ ನಾರಾಯಣದಾಸ ನಿರತವು
ಕರುಣದಿಂ ಸಲಹೆನ್ನ ಗುರು ವಾಸುದೇವಾರ್ಯ ೫

೩೧

ಒಂದೆ ಸಾಕೆನಗೆ ನಿನ್ನಯ ಸೇವೆ
ಯೊಂದೆ ಸಾಕೆನಗೆ ಪ

ಒಂದೆ ಸಾಕು ನಿನ್ನಯ ಸೇವೆ ನಿರತವು
ಮಂದರಧರ ಶ್ರೀ ವೆಂಕಟರಮಣನೆ ಅ.ಪ

ದೇವಕಿನಂದನನೆ ಎನ್ನನು ನೀ
ಕಾವ ಕೃಪಾಕರನೆ
ಭಾವಜನಯ್ಯನೆ ಭಾನುಪ್ರಕಾಶನೆ
ದೇವರದೇವ ಶ್ರೀ ವೆಂಕಟರಮಣನೆ ೧

ವಾರಿಧಿರೂಪವಾದ ಭವದೊಳು ಮುಳುಗಿ
ದಾರಿಗಾಣದೆ ಯಿಹೆನು
ತೋರಿಸಿ ದಾರಿಯ ಜ್ಞಾನದ ನಾವೆಯಿಂ
ಸೇರಿಸು ತಡಿಯ ಶ್ರೀ ವೆಂಕಟರಮಣನೆ ೨

ತಿರುಪತಿಯಿಂದ ಬಂದು ತರುಣನಾಗ
ಪುರದೊಳು ಗುರು ರೂಪಲಿ
ಕರುಣದಿಂದ ನಾರಾಯಣದಾಸನಿಗೆ ಬೇಗ
ಸ್ಥಿರಸುಖವೀವ ಶ್ರೀ ವೆಂಕಟರಮಣನೆ ೩

೩೨

ನಿನ್ನ ನಂಬಿದೆ ಕಮಲದಳಾಕ್ಷನೆ
ಅನ್ಯದೈವವನ್ಯಾಕೆ ಮರೆಯೊಗಲಿ ಪ

ಪನ್ನಗಶಯನ ಕೃಪಾಂಗನೆ ನೀ ಯೆನ್ನ
ಮನ್ನಿಸು ನತಜನಪಾಲ ಶ್ರೀಲೋಲನೆ ಅ.ಪ

ಆದಿಯೊಳ್ ವೇದವನು ತಂದ ಮತ್ಸ್ಯನೆ
ಮೋದದಿಂ ನಗವನು ಪೊತ್ತ ಕೂರ್ಮನೆ
ಆದರದಿ ಧರೆಯ ದಾಡೆಯೊಳಾಂತ ವರಾಹನೆ
ಸಾಧು ಪ್ರಹ್ಲಾದರಕ್ಷಕ ನರಸಿಂಹನೆ ೧

ಬಲಿಯ ಭೂಮಿಯ ಬೇಡಿದ ವಾಮನನೆ
ಛಲದಿಂದಾ ಕೊಡಲಿ ಹಿಡಿದ ಭೃಗುರಾಮನೆ
ನೆಲದೊಳ್ ರಾವಣವ ಕೆಡಹಿದ ಸೀತಾರಾಮನೆ
ಬಲು ಬಲವಂತ ಕಂಸನ ಕೊಂದ ಕೃಷ್ಣನೆ ೨

ಸ್ತ್ರೀರ ಮಧ್ಯೆ ನಿರ್ವಾಣದಿ ನಿಂತ ಬುದ್ಧನೆ
ಪಾರವಿಲ್ಲದ ದುಷ್ಟರ ಸೀಳ್ದ ಕಲ್ಕ್ಯನೆ
ಘೋರ ದುರಿತಗಳ ಪರಿವ ಶ್ರೀರಮಣನೆ
ಪಾರಮಾರ್ಥಿಕ ಸಚ್ಚಿದಾನಂದ ರೂಪನೆ ೩

ಋಣದ ಬಾಧೆಯೊಳಗೆ ಸಿಕ್ಕಿ ನಿರತವು
ಘನವಾಗಿ ಕೊರಗುತಲಿಹ ಯೆನಗೆ ನೀ
ಕನಕದ್ರವ್ಯವನಿತ್ತು ಋಣವ ತೀರಿಸಿ ಬೇಗ
ಮನವ ಸಂತೋಷಿಸು ಮನಸಿಜಪಿತ ದೇವ ೪

ತರುಣ ನಾಗಾಖ್ಯಪುರದ ಮಧ್ಯದೊಳಿಹ
ಗುರು ವಾಸುದೇವಾರ್ಯರ ರೂಪಲಿ

ತರಳ ನಾರಾಯಣದಾಸನ ರಕ್ಷಿಪ
ವರದ ಶ್ರೀ ತಿರುಪತಿ ವೆಂಕಟರಮಣನೆ ೫

೩೩

ನೀನೇ ಗತಿ ಎನಗೆ ವೆಂಕಟರಾಯ ನೀನೇ ಗತಿ ಎನಗೆ ಪ

ನೀನೇ ಗತಿ ಎನಗೆ ಸೂನುವು ನಾ ನಿನಗೆ
ಮಾನದಿಂ ಪರಿಪಾಲಿಸೈ ಸ್ವಾಮಿ ಅ.ಪ

ಋಣದ ಬಾಧೆಗೆ ಸಿಲುಕಿ ತಂದೆಯೆ ನಾನು
ಘನವಾಗಿ ಕೊರಗುತಿರೆ
ಕನಕಾದ್ರಿವಾಸನೆ ಕಾಮಿತ ಫಲದನೆ
ನಿನಗ್ಯಾಕೆ ದಯಬಾರದೈ ಸ್ವಾಮಿ ೧

ದೀನದಯಾಪರನೇ ನಿನಗೆ ನಾ
ನಾನತನಾದೆನಯ್ಯಾ
ಸೂನುವಾದೆನ್ನಯ ಋಣಬಾಧೆಯನು ಹರಿದು
ದೀನನ ರಕ್ಷಿಸಯ್ಯಾ ಸ್ವಾಮಿ ೨

ಕಷ್ಟಪಡುವೆನಯ್ಯಾ ಎನ್ನಯ
ಕಷ್ಟವೆಷ್ಟೆಂದು ಪೇಳಲಯ್ಯಾ
ಕಷ್ಟಾಪಹಾರಿ ನೀ ಕಡೆಗಣ್ಣಿಂದೀಕ್ಷಿಸಿ
ಕಷ್ಟವ ಪರಿಹರಿಸೈ ಸ್ವಾಮಿ ೩

ಮಂಗಳಮಹಿಮ ನೀನೆ ಎನ್ನಯ ಹೃದ
ಯಂಗಳದೊಳು ನಿಂದು
ಭಂಗವ ಪರಿದು ಮಂಗಳವಿತ್ತು ಸಲಹೆಂದು
ಅಂಗಗಳಿಂ ನಮಿಪೆ ಸ್ವಾಮಿ ೪

ನಂದನಂದನನೇ ಸನಕ ಸ
ನಂದಾದಿ ವಂದಿತನೆ
ಕುಂದರದನ ಗೋವಿಂದನೆ ಎನಗೆ ಆ
ನಂದವ ಕೊಡು ಬೇಗದಿ ಸ್ವಾಮಿ ೫

ಆಂಜನೇಯಾರ್ಚಿತನೇ ಭಕ್ತರ ಮನೋ
ರಂಜಿತ ಪದಯುಗನೆ
ಕಂಜದಳಾಕ್ಷನೆ ಕರುಣಾಪೂರನೆ
ಕುಂಜರ ರಕ್ಷಕನೆ ಸ್ವಾಮಿ ೬

ಗುರುವಾಸುದೇವಾರ್ಯರ ರೂಪಲಿ ನಿಂದು
ತರುಣನಾಗ ನಗರದಿ
ಪೊರೆವೆ ನಾರಾಯಣ ದಾಸನ ಹರುಷದಿ
ಕರುಣಿ ವೆಂಕಟರಮಣಸ್ವಾಮಿ ೭

೩೪

ಯಾಕೆ ದಯ ಬಾರದೊ ದಾಸನ ಮೇಲಿ
ನ್ಯಾಕೆ ದಯ ಬಾರದೊ ಪ

ಯಾಕೆ ದಯ ಬಾರದೊ ಯದುಕುಲಾಂಬುಧಿ ಚಂದ್ರ
ಸಾಕುವರ‍್ಯಾರೆನ್ನ ಸರ್ವೇಶ ಸಲಹೆಂದರ‍್ಯಾಕೆ ಅ.ಪ.

ತಂದೆತಾಯಿಗಳಿಲ್ಲ ತನುವ ರಕ್ಷಿಪರಿಲ್ಲ
ಸಿಂಧುಶಯನ ಎನ್ನ
ತಂದೆ ನೀ ಸಲಹೆಂದರ‍್ಯಾಕೆ ೧

ಕಾಮಕ್ರೋಧಗಳೆನ್ನ ಕಡು ಬಳಲಿಸುತಿವೆ
ಕಾಮನಯ್ಯನೆ ನೀ
ಪ್ರೇಮದಿಂ ಸಲಹೆಂದರ‍್ಯಾಕೆ ೨

ಮಾಯಾಪಾಶವು ನೋಯಿಸುತಿದೆ ಎನ್ನ
ಮಾಯಾಧೀಶನು ನೀನು
ಪಾಯದಿಂ ಸಲಹೆಂದರ್‍ಯಾಕೆ ೩

ಕ್ಷಣಮಾತ್ರವಾದರು ಚಿನುಮಯಾತ್ಮಕ ನಿನ್ನ
ನೆನೆಯುವಂತೆ ಮನ
ಎನಗಿತ್ತು ಸಲಹೆಂದರ್‍ಯಾಕೆ ೪

ಚರಣಕಮಲವನ್ನು ಚಲಿಸದೆ ನಂಬಿಹೆ
ಪರಿದೆನ್ನ ಭವಗಳ
ಪರಮಾತ್ಮ ಸಲಹೆಂದರ್‍ಯಾಕೆ ೫

ಕಷ್ಟಪಡುತಲಿಹೆ ಕರವ ಪಿಡಿದು ಮನೋ
ಭಿಷ್ಟವನಿತ್ತು ಶ್ರೀ
ಕೃಷ್ಣ ನೀ ಸಲಹೆಂದರ್‍ಯಾಕೆ ೬

ವರ ಚಿಕ್ಕನಾಗಾಖ್ಯ ಪುರದೊಳು ಗುರುವೆಂದು
ಮೆರೆವ ವೆಂಕಟೇಶ
ಕರುಣದಿಂ ಸಲಹೆಂದರ್‍ಯಾಕೆ ೭

(ಉ) ಕ್ಷೇತ್ರವರ್ಣನೆ

(೧) ತಿರುಪತಿ

೩೫

ಮಂಗಳ ತಿರುಪತಿನಾಥನಿಗೆ ಜಯ
ಮಂಗಳ ದುರಿತ ನಿವಾರಕಗೆ ಪ

ಕಮಲಾಕಾಂತಗೆ ಕಮಲಜ ಜನಕಗೆ
ಕಮಲವ ಕರದಲಿ ಧರಿಸಿಹಗೆ

ಕಮಲಮುಖಿಯರೊಡನಾಡಿದ ದೇವಗೆ
ಕಮಲದಳಾಯತಲೋಚನಗೆ ೧

ಅಂಬುಧಿಶಯನಗೆ ಅರವಿಂದ ನಾಭಗೆ
ಅಂಬುಧರಾಭ ಶುಭಾಂಗನಿಗೆ
ಕಂಬುಕಂಧರನಿಗೆ ಕರಚತುಷ್ಟಯನಿಗೆ
ತುಂಬುರಗಾನವಿಲೋಲನಿಗೆ ೨

ಗುರು ವಾಸುದೇವಾರ್ಯರೂಪದಿಂ ಚಿಕ್ಕನಾಗ
ಪುರದೊಳಾವಾಸವಾಗಿರುವನಿಗೆ
ತರಳ ನಾರಾಯಣದಾಸ ರಕ್ಷಕನಿಗೆ
ವರದ ಶ್ರೀ ವೆಂಕಟರಮಣನಿಗೆ ೩

(೨) ಮೈಸೂರು

೩೬

ಮಂಗಳ ತ್ರಿನಯನೇಶ್ವರನಿಗೆ ಜಯ
ಮಂಗಳ ತ್ರಿಪುರಸುಂದರೀಕಾಂತಗೆ
ಮಂಗಳ ತ್ರಿನಯನೇಶ್ವರನಿಗೆ ಪ

ಇಂದುವಿಭೂಷಗೆ ಇಭಚರ್ಮವಸನಗೆ
ಸುಂದರಾನನಗೆ ಶುಭ್ರಾಂಗನಿಗೆ
ನಂದಿವಾಹನನಿಗೆ ನಾಗಭೂಷಣನಿಗೆ
ಬಂಧರೂಪಕಭವಭಯಹರಗೆ ೧

ಫಾಲಲೋಚನನಿಗೆ ಪರಮಪಾವನನಿಗೆ
ನೀಲಗ್ರೀವನಿಗೆ ನಿರಾಮಯಗೆ

ಕಾಲಾಂತಕನಿಗೆ ಕಲಿದೋಷಹರಣಗೆ
ಶೂಲಧಾರಕಗೆ ಶುಭಪ್ರದಗೆ ೨

ಅಜಹರಿಸ್ತುತ್ಯಗೆ ಆಗಮವೇದ್ಯಗೆ
ಅಮಿತ ಮಹಿಮನಿಗೆ ಅನುಪಮಗೆ
ತ್ರಿಜಗದ್ವಂದ್ಯಗೆ ತ್ರಿಪುರಾರಾತಿಗೆ
ನಿಜಸುಖದಾಯಿಗೆ ನಿತ್ಯನಿಗೆ ೩

ನಾರದವಂದ್ಯಗೆ ನಗರಾಜಚಾಪಗೆ
ಭೂರಿ ಭಕ್ತರ ನಿತ್ಯ ಪೋರೆಯುವಗೆ
ಕಾರಣಾತ್ಮಕನಿಗೆ ಕರುಣಾಶರಧಿಗೆ
ಘೋರದುರಿತ ಪರಿಹಾರಕಗೆ ೪

ವರ ಮಹಿಷಾಪುರದೊಳು ಕೃಷ್ಣನೃಪತಿಯ
ನಿರತ ಪೊರೆವ ತ್ರಿನಯನೇಶ್ವರಗೆ
ತರಳ ನಾರಾಯಣದಾಸ ರಕ್ಷಕನಿಗೆ
ವರದ ವೆಂಕಟಪತಿ ರೂಪನಿಗೆ ೫

(ಊ) ಪರಿಶಿಷ್ಟ : ತೆಲುಗು ಕೃತಿ

೩೭

ಇಂತಕಿ ವಚ್ಚಿನ್ನಾಡು ಸೀತಾರಾಮು
ಡಿಂಟಿಕಿ ವಚ್ಚಿನಾಡು ಪ

ಅಂಟಿ ಭಜಿಂಚಿತೆ ಅಭಯಮಿಚ್ಚೇವಾಡು
ವೆಂಟಿ ತನ ಸೀತನುಗೂಡುಕೊನಿ ರಾಮುಡಿಂಟಿಕಿ. ಅ.ಪ.

ಋಣಮುಲ ದೀರ್ಚವಲೆನನುಕೊನಿ
ಮನಸುಬೆಟ್ಟಿ ವಚ್ಚೆನು
ಕನಕಾಂಬರಧರ ಕೌಸಲ್ಯಾತನಯುಡು
ಅಣುರೇಣು ತೃಣಕಾಷ್ಠ ಪರಿಪೂರ್ಣುಡು ರಾಮುಡಿಂಟಿಕಿ ೧

ಇದಿ ಮಂಚಿ ಸಮಯಮನಿ ಶ್ರೀರಾಮುನಿ
ವಿಧವಿಧಮುಗ ವೇಡಿತಿ
ಪದಮನಾಭ ಶ್ರೀರಾಮುಡು ನಿರತಮು
ಮದಿಲೋ ಕೋರಿನ ಕೋರಿಕಲಿಚ್ಚೆಟಂದುಕಿಂಟಿಕಿ ೨

ಗುರು ವಾಸುದೇವಾರ್ಯುಲ ರೂಪಮು ತಾಳಿ
ತರುಣ ನಾಗಪುರಮುಲೋ
ತಿರುಪತೀಶ ಶ್ರೀ ವೆಂಕಟರಮಣುಡು
ಕರುಣಿಂಚಿ ನಾರಾಯಣದಾಸುನಿ ಬ್ರೋಚುಟಕಿಂಟಿಕಿ ೩

ರಂಗಸ್ವಾಮಿದಾಸರ ಕೀರ್ತನೆಗಳು

'ರಂಗಸ್ವಾಮಿದಾಸ'

ದೇವತಾವೃಂದ

ಶ್ರೀ ಗಣಪತಿ

೧

ಆರಂಭದಲಿ ನಮಿಪೆ ಬಾಗಿ ಶಿರವ
ಹೇರಂಬ ನೀನೊಲಿದು ನೀಡೆನಗೆ – ವರವ ಪ

ದ್ವಿರದ ವದನನೆ ನಿರುತ । ದ್ವಿರದ ವರದನ ಮಹಿಮೆ
ಹರುಷದಲಿ ಕರಜಿಹ್ವೆ ಎರಡರಿಂದ
ಬರೆದು ಪಾಡುವದಕ್ಕೆ । ಬರುವ ವಿಘ್ನನವ ತರಿದು
ಕರುಣದಿಂದಲಿ ಎನ್ನ ಕರಪಿಡಿದು ಸಲಹೆಂದು ೧

ಕುಂಭಿಣಿಜೆ ಪತಿ ರಾಮ । ಜಂಭಾರಿ ಧರ್ಮಜರು ।
ಅಂಬರಾಧಿಪ ರಕುತಾಂಬರನೆ ನಿನ್ನ ॥
ಸಂಭ್ರಮದಿ ಪೂಜಿಸಿದರೆಂಬವಾರುತಿ ಕೇಳಿ
ಹಂಬಲವ ಸಲಿಸೆಂದು । ನಂಬಿ ನಿನ್ನಡಿಗಳಿಗೆ ೨

ಸೋಮಶಾಪದ ವಿಜಿತ । ಕಾಮ ಕಾಮಿತ ದಾತ
ವಾಮ ದೇವನ ತನಯ ನೇಮದಿಂದ
ಶ್ರೀ ಮನೋಹರನಾಥ ಶಾಮಸುಂದರ ಸ್ವಾಮಿ
ನಾಮ ನೆನೆಯುವ ಭಾಗ್ಯ ಪ್ರೇಮದಲಿ ಕೊಡು ಎಂದು ೩

ಹಲಕುಲಿಶಾಂಕುಶ ನಳಿನಧ್ವಜಪದ ಜಲರುಹನಾಭಾ ನಮೋ ನಮೋ
ಶ್ರದ್ಧಗಪರಂಪರ ಸೇವಾರ್ಚನ ಗೊನಿ ತದ್ದಾಮೊದಿತ
ನಮೋ ನಮೋ ೬

ಲರೊಧ್ಯವಹಲ್ಯಾಕರ್ರುರಸುತ ಭೂ ಸುರಾದಿದಯಪಾಲ ನಮೋ ನಮೋ
ಶರಣಾಗತಬಿರುದಾಂಕಿತ ಮಧ್ಘಯದುರಿತವಿದೂರ
ನಮೋ ನಮೋ ೭

ದೊಡ್ಡಕೃಷ್ಣರಾಜೇಂದ್ರ ಪ್ರಭೃತಿತೀ ಧರಪತಿವಂದಿತ ನಮೋ ನಮೋ
ಸಡ್ಡಗತವಪದ ಸೇವಾರ್ಹಲು ಯೀಶದ್ವಂಶಜಪ
ನಮೋ ನಮೋ ೮

ಸಿರಿಯಭಿನವರಂಗನಾಥ ಯತೀಂದ್ರಸೇವಕಸೇವಿತ ನಮೋ ನಮೋ
ಸರಿತುಲಸೀಗುರುಚರಣಾಶ್ರಿತ ರಂಗಸ್ವಾಮಿದಾಸೊದ್ಧರ
ನಮೋ ನಮೋ ೯

(೨) ಶ್ರೀರಾಮ ಸ್ತುತಿಗಳು

೨

ಬಾರ್‍ಯೆ ಬೇಗ ಶ್ರೀರಾಮ ನಮೊ ಭಾನುಕುಲಾಂಬುಧಿ ಸೋಮ ನಮೊ
ತೊರಿಸು ತವಪದಕಮಲ ನಮೊ ನೀರದಶ್ಯಾಮಲವದನ ನಮೊ ಪ

ಅಜಹರಪ್ರಾರ್ಥಿತಮೋದ ನಮೊ ಅಯೋಧ್ಯನಗರವತಾರ ನಮೊ
ಸುಜನಪಾಲ ಕುಜನಾರಿ ನಮೊ
ಸನ್ಮುನಿಯಾಶ್ರಮವಿಹರ ನಮೊ ೧

ಸರಯೂತೀರ ಸಂಚಾರ ನಮೊ ಸತ್ಯಪರಾಕ್ರಮ ಸ್ವಾಮಿ ನಮೊ
ಪರಮಪುರುಷ ಪದ್ಮಾಕ್ಷ ನಮೊ ಪತಿತೋದ್ಧರ
ಪರಮಾತ್ಮ ನಮೊ ೨

ಕ್ರೂರತಾಟಕಧ್ವಂಸ ನಮೊ ಮಾರೀಚಾದಿ ವಿಚ್ಛೇದ ನಮೊ
ಕಾರ್ಮುಕವಿದ್ಯಧುರೀಣ ನಮೊ ಕೌಶಿಕಮಖಸಂರಕ್ಷ ನಮೊ ೩

ಗೌತಮಸತಿಯಘಭಂಗ ನಮೊ ಕಾಂತಯಹಲ್ಯಾಸ್ತೋತ್ರ ನಮೊ
ಮಾತಾಪಿತಗುರುವೇ ನಮೊ ಮಮುದ್ಧರಿಸು ಮಹಾತ್ಮ ನಮೊ ೪

ಕ್ರೂರನು ಕುಟಿಲನು ಕುಮತಿ ನಮೊ ಕಲುಷಾರ್ಚಿತ ದುಷ್ಕರ್ಮಿ ನಮ
ಸಾರರಹಿತ ಸಂಸಾರಿ ನಮೊ ಸರ್ವ ದೋಷಪರಿಹಾರ ನಮೊ ೫

ಕೌಸಲೇಯಕನಕಾಂಬ್ರ ನಮೊ ದಾಶರಥೆ ದನುಜಾರಿ ನಮೊ
ಶ್ರೀಶಚನ್ನಪುರಿಧಾಮ ನಮೊ ದಾಸವೈಷ್ಣವಕುಲಪ್ರೇಮ ನಮೊ ೬

ರಾಮರಾಮಜಯರಾಮ ನಮೊ ರಾಮತುಲಸಿದಳಧಾಮ ನಮೊ
ರಾಮತುಲಸಿಗುರಸ್ವಾಮಿ ನಮೊ ರಂಗಸ್ವಾಮಿದಾಸೇಶ ನಮೊ ೭

೩

ರಾಮಬಾರೊ ಪರಂಧಾಮ ಬಾರೊ
ಕೋಮಲಾಂಗ ರವಿಕುಲಾಬ್ಧಿ ಸೋಮ ಬಾರೊ ಪ

ಕೇಶವ ನಾರಾಯಣ ಮಾಧವ ಗೋವಿಂದ ಬಾರೊ
ದಾಶರಥೆ ದಯಾಸಮುದ್ರ ಬೇಗ ಬಾರೊ ೧

ವಿಷ್ಣು ಮಧುಸೂದನ ತ್ರಿವಿಕ್ರಮ ವಾಮನ ಬಾರೋ
ಶಿಷ್ಟಜನರ ತಾಯಿತಂದೆ ಸ್ವಾಮಿ ಬಾರೋ ೨

ಶ್ರೀಧರ ಹೃಷೀಕೇಶ ಪದ್ಮನಾಭ ಬಾರೊ
ಆದಿಮಧ್ಯಾಂತರಹಿತ ಶೌರಿ ಬಾರೊ ೩

ದಾಮೋಧರ ಸಂಕರ್ಷಣ ವಾಸುದೇವ ಬಾರೊ
ಕಾಮಕಮಲಜ ಕುಶಲವ ಗಂಗಾಜನಕ ಬಾರೊ ೪

ಪ್ರದ್ಯುಮ್ನ ಅನಿರುದ್ಧ ಪುರುಷೊತ್ತಮ ಬಾರೊ
ಮುದ್ದುಪಾದ ಸೇವೆಕೊಟ್ಟು ಪಾಲಿಸ ಬಾರೊ ೫

ಅಧೋಕ್ಷಜ ಶ್ರೀನಾರಸಿಂಹ ಅಚ್ಯುತ ಬಾರೊ
ಅಧಮನು ಆರ್ತನು ವಂದಿಪರ ಪತಿತೋದ್ಧಾರ ಬಾರೊ ೬

ಜನಾರ್ದನ ಉಪೇಂದ್ರ ಹರಿ ಶ್ರೀಕೃಷ್ಣ ಬಾರೊ
ಅನಾಥಪಾಲಕಾಪದ್ಬಾಂಧವ ಅಘಹರ ಬಾರೊ ೭

ಗುರುವರ ತುಲಸೀರಾಮಸ್ವರೂಪ ಭೂಪ ಬಾರೊ
ಧರರಂಗಸ್ವಾಮಿದಾಸ ಜೀವೋದ್ಧಾರ ಬಾರೋ ೮

೪

ರಾಮನಾಮವೆನ್ನು ಮನವೆ ನಿನ್ನ ಪಾಮರಪಾತಕನಾಶನವೆ ಬರಿ
ನೇಮವ್ರತಗಳು ನಿಷ್ಫಲವೆ ಪರಂಧಾಮ ಭಜನೆ ಮೋಕ್ಷಪ್ರದವೆ ಪ

ಶೀಲತನವುನೀಬಿಡಬೇಡಾ ನಾನ್ ಶೀಲನೆಂದುನೀಹೇಳಬೇಡಾ ಶ್ರೀ
ಲೋಲನಸ್ಮರಣವ ಮರಿಬೇಡಾ ಇಹ ಜಾಲಿಮನಸಿನಲಿ
ತರಬೇಡಾ ೧

ಕಾಲದೇಶವನನುಸರಿಸಿ ನೀನು ಲೀಲೆಯಾಗಿ ಕ್ರಮದಲಿ ನಡಸಿ ಶ್ರೀ
ಫಾಲಯನಸ್ತುತ ಘನತೆನಿಸೀ ಏವೇಳೆಯು ಶ್ರೀರಾಮನ ಜಪಿಸಿ ೨

ಕುಲಧನಯೌವನ ಬಲದಿಂದಾ ನಿಜ ತಿಳಿಯದೆಸುಮ್ಮನೆ ಮದಬಂದದಲಿ
ಸಿಲುಕದೆ ಸುಜ್ಞಾನದಿಂದಾ ಗುರಿ ತಿಳಿದುಭಯಭೇದಸ್ಥಿತಿ ಚಂದಾ ೩

ವಿಮಲತುಲಸಿರಾಮನೆನ್ನುವದು ರಂಗಸ್ವಾಮಿದಾಸನಿಗೆ ಪ್ರಾಪ್ತವದು
ಸಮರಸ ಸದ್ಗುಣ ಲಭಿಸುವದು ಸರ್ವ ಶೇಷ್ಯೈಕ್ಯವು ಒಂದಾಗುವದು ೪

೫

ರಾಮಾ ರಾಜೀವನಯನ ಜಯ ರಾಮಾ ಪ

ರಾಮಜಲಧರಶ್ಯಾಮ ಸದ್ಗಣಸೋಮ
ರಾಮತುಲಸಿದಳಧಾಮ ಶೌರಿಗುರು ೧

ಹೈಮವತೀನುತನಾಮ ಭಕ್ತ ಜನ
ಪ್ರೇಮ ದೈತ್ಯರಣಭೀಮ ಶೌರಿಗುರು ೨

ಸರಸಿಜ ಹಲಕುಲಿಶಾಂಕುಶಧ್ವಜ
ಅರಿದರ ಪತಾಕವಿರಚಿತ ತಪದ ೩

ವರ ಕಿರೀಟ ಕೇಯೂರ ಕೌಸ್ತುಭಾ
ಭರಣದುರಿತಚಯಹರಣ ಕೃಪಾಂಬುಧಿ ೪

ಹಾಟಕಾಂಬರ ಕಿರೀಟಿ ಸೂತ ಖಗ
ಘೋಟಕ ತುಲಸೀತೋಟಾಲಯಸ್ಥಿರ ೫

ದೇಶಿಕಾಂಗಧರ ತುಲಸಿರಾಮ ಚರ
ಣಾಶ್ರಿತ ರಂಗಸ್ವಾಮಿದಾಸಾವನಜಯ ೬

(೩) ಶ್ರೀಕೃಷ್ಣ

೬

ಶ್ರೀಕೃಷ್ಣಪರಬ್ರಹ್ಮ ನಮೊ ಶೇಷತಲ್ಪಶಯಶೌರಿ ನಮೊ
ಪ್ರಾಕೃತರಹಿತಾನಂತ ನಮೊ ಪರಮಪುರುಷ
ಭವದೂರ ನಮೊ ೧

ಮದನಾರ್ಧ್ವಧುಸುರಸ್ತೋತ್ರ್ಯ ನಮೊ ಮಧುಕೈಟಭದೈತ್ಯಾರಿ ನಮೊ
ಯದುಕುಲಾಂಬುಧಿಸುಧಾಂಶ ನಮೊ ವಾಸುದೇವ
ಪರಮಾತ್ಮ ನಮೊ ೨

ದೇವಕಿದೇವಿಕಿಶೋರ ನಮೊ ದ್ವಿಜಸುತಪ್ರಾಣಸುರಕ್ಷ ನಮೊ
ಭಾವಜಪಿತ ಜಗನ್ನಾಥ ನಮೊ ಭಕ್ತಪ್ರಿಯಗೋಂವಿದ ನಮೊ ೩

ಅಷ್ಟಮಗರ್ಭಸಂಜಾತ ನಮೊ ಅಮಿತಧೈರ್‍ಯಗಾಂಭೀರ್‍ಯ ನಮೊ
ದುಷ್ಟಪೂತನಧ್ವಂಸ ನಮೊ ಧೇನುಕಶಕಟವಿದೂರ ನಮೊ ೪

ಗೋವರ್ಧನಗಿರಿಧಾರಿ ನಮೊ ಗೋಪಗೋಪಿಕಾಲೋಲ ನಮೊ
ಶ್ರೀವಸುದೇವಾನಂದ ನಮೊ ಸಾಂದೀಪಪ್ರಿಯಬೋಧ ನಮೊ ೫

ಯಶೋದನಂದೋತ್ಸಾಹ ನಮೊ ವೇಣುಗಾನವಿನೋದ ನಮೊ
ಶಿಶುಪಾಲಶಿರಚ್ಛೇದ ನಮೊ ಶಂಖಚಕ್ರಕರಧಾರಿ ನಮೊ ೬

ಕೌರವಗರ್ವವಿದಾರಿ ನಮೊ ಕುಬ್ಜಪಾಲಕಮಲಾಕ್ಷ ನಮೊ
ಪಾರಿಜಾತಮಪಹಾರಿ ನಮೊ ಪಾವನತೀರ್ಥಪದಾಯ ನಮೊ ೭

ತೃಣಾವರ್ತನಾಶಾಯ ನಮೊ ದ್ವಾರಕಾಪುರವಿಹಾರಿ ನಮೊ
ಮೌನಿಮಾನಸೋಲ್ಲಾಸ ನಮೊ ಮಧುರಾಪುರಿನಾಥಾಯ ನಮೊ ೮

ವಿದುರ ಅಕ್ರೂರಸ್ತೌತ್ಯ ನಮೊ ವೃಷಭ ಮುಷ್ಟಿಕ
ಮುರಾರಿ ನಮೊ (?) ೯

ಶ್ರೀರುಕ್ಮಿಣಿಹೃದಯೇಶ ನಮೊ ಸಿಂಧುಶಯನ ಕಂಸಾರಿ ನಮೊ
ಜಾರಚೋರ ನವನೀತ ನಮೊ ಜಂಭಭೇದಿಸುತಪ್ರೇಮ ನಮೊ ೧೦

ವೈಜಯಂತಿವನಮಾಲ ನಮೊ ವನದಶ್ಯಾಮಲವರ್ಣ ನಮೊ
ವಜ್ರಸ್ಥಗಿತಕಿರೀಟ ನಮೊ ವರಮಣಿಕುಂಡಲಧರಣ ನಮೊ ೧೧

ಭುಜಕಿರೀಟಶುಭಗಾತ್ರ ನಮೊ ಭುವನಮೋಹನಾಕಾರ ನಮೊ
ಅಜಪಿತಕನಕಸುಚೇಲ ನಮೊ ಆರ್ತಶರಣ್ಯೋದ್ಧಾರ ನಮೊ ೧೨

ಕಾಲಯವನಮದಖಂಡ ನಮೊ ಕೋಟಿರವಿಪ್ರಭಾಭಾಸ ನಮೊ
ಮಾಲಾಕಾರುಪಕಾರ ನಮೊ ಲೀಲಾಮಾನುಷವೇಷ ನಮೊ ೧೩

ದ್ರೌಪತಿಕಭಯೋದ್ಧಾರ ನಮೊ ಧನಂಜಯಾದಿಸುಪಕ್ಷ ನಮೊ
ಶ್ರೀಪತಿಸಕಲಾಧಾರ ನಮೊ ಸರ್ವಭೂತಹೃದಯಾತ್ಮ ನಮೊ ೧೪

ನಿಖಿಲಚರಾಚರರೂಪ ನಮೊ ನಾಮರೂಪಕ್ರಿಯರಹಿತ ನಮೊ
ಅಖಂಡಮಚಲಾಕಾರ ನಮೊ ಅದ್ಭುತಮಹಿಮಾಪಾರ ನಮೊ ೧೫

ಸಗುಣನಿರ್ಗುಣಾತೀತ ನಮೊ ಸತ್ಯಾಸತ್ಯಸುಬೋಧ ನಮೊ
ನಿಗಮಾಗನಶೃತಿಸಾರ ನಮೊ ನಿರ್ವಿಷಯಾಭವಪ್ರಣವ ನಮೊ ೧೬

ಅಜಪಸೂತ್ರಸಂಕೇತ ನಮೊ ಹಂಸತತ್ವಸುಪ್ರಕಾಶ ನಮೊ
ತ್ರಿಜಗಾಂತರ್ಬಹಿವ್ಯಾಪ್ತ ನಮೊ ತ್ರಿಗುಣಾಪ್ರತಿಭಾಗಮ್ಯ ನಮೊ ೧೭

ತುಳಸಿರಾಮ ಗುರುಸ್ತೋತ್ರ ನಮೋ ತಾರ್ಕ್ಷ್ಯಾಚಲವರವಾಸ ನಮೊ
ಮುಳಬಾಗಿಲಪುರಿಪಾಲ ನಮೋ ಮಹಾನುಮಪ್ರಿಯ
ವಂದ್ಯ ನಮೋ ೧೮

ಮಂಗಳಮಘಚಯಭಂಗ ನಮೋ ಮಂಗಳಂ ಪಾಹಿ ಪಾಹಿ ನಮೋ
ರಂಗಸ್ವಾಮಿದಾಸ ಪೋಷ ನಮೋ ಮಂಗಳಾಂಗ ಶ್ರೀಕೃಷ್ಣ ನಮೋ ೧೯

(ಆ) ಗುರುಸ್ತುತಿಗಳು

೭

(೧) ತುಳರಾಮದಾಸಸ್ತುತಿ

ಗುರುವರ ತುಲಸೀರಾಮಯ್ಯಾ ಪೂರ್ವದ್ವಾರ
ಗುರುಸ್ತುತಿ ಮಂಪಾಲಯಾ ವಿಜಿತೇಂದ್ರಿಯಾ ಪ

ಪುರಪುರವರ ತವ ತಿರುತಾರೊತ್ಸವ
ನಿರತಸೇವಕ್ಕೃತನುತ ಜನವೈಭವ ೧

ಪತಿತಜನಾವನ ಪದ್ಮಸುಲೋಚನ
ಪ್ರಥಮಾಶ್ರಮ ಘನಕೃತಮುಖರಂಜನ ೨

ವೆಂಕಟಲಕ್ಷಾಂಬ ಸುಗರ್ಭೋದ್ಭವ
ಪಂಕಜಭವಿ ಸಂಪದಯುತಪ್ರಭಾವ ೩

ಕೇಶವಪದನಿಜ ದಾಸಸ್ವರೂಪಾ
ಆಶಯೇಶಯ ಜಿತವರಪ್ರತಿಭಾ ೪

ಶುಕಮುನಿ ವಾಗ್ಝರಿಸೂನೃತಚರಿತ
ಸಕಲಪಂಡಿತೋತ್ತಮಜನವಿನುತ ೫

ಮಹಿಸೂರ್ಪುರವರ ಮಹಿಪತಿಸಮುಖ
ಅಹಿಪತಿರೀತ್ಯಾ ಹರಿಗುಣಕಥಕಾ ೬

ಚಾಮನೃಪಾಲ ಸುಜ್ಞಾನಬೋಧಿನೀ
ಸಮಾಜಶೇಖರ ಸಾತ್ವಿಕಧೀಮಣಿ ೭

ಶ್ರೀರಾಮೋತ್ಸವ ಸೇವಾಬ್ದಪ್ರತಿ
ಸಾರ್ಥಶತಂ ನಿಷ್ಕನ್ನಾ ಕರ್ಷಿತ ೮

ಭಗವದಾಂಶ ಸಂಭೂತ ಕೃಪಾಕರ
ಅಗಣಿತ ಸುಗುಣಾಲಂಕೃತಧೀವರ ೯

ಮಂಗಳಕರ ಗುರುತುಲಸೀರಾಮಾ
ರಂಗಸ್ವಾಮಿದಾಸ ಹೃದಯಸುಧಾಮಾ ೧೦

೮

ಜಯತುಲಸೀರಾಮಾ ಜಗದಭಿರಾಮಾ
ಭಯನಗಸುತ್ರಾಮ ಭರತಪುರೀಧಾಮ ಪ

ವೆಂಕಟಲಕ್ಷಾಂಬ ಉದರಾಬ್ಧಿ ಸೋಮ
ಕಿಂಕರಾಶ್ರಿತಪ್ರೇಮ ಕವಿಸಾರ್ವಭೌಮ ೧

ಪತಿತಜನೋದ್ಧರಿತ ಪ್ರಥಮಾಶ್ರಮರತ
ರತಿಪತಿಗುಣಜಿತರಮ್ಯ ಸುಭಾಷಿತ ೨

ವರಸಕಲಾಗಮಶಾಸ್ತ್ರಾರ್ಥ ಪ್ರವೀಣ
ನಿರ್ಮಲಧೀಷಣ ನೀರಜಲೋಚನ ೩

ರಾಮಕೃಷ್ಣೋತ್ಸವ ನೇಮಧುರೀಣ
ಕಾಮಿತಫಲಪ್ರದ ಕರುಣಾಭರಣಾ ೪

ಅಥಿತಿ ಅಭ್ಯಾಗತ ಆದರಣೇಹಿತ
ಬುಧವರಪೂಜಿತ ಭುವಿಪ್ರಖ್ಯಾತ ೫

ನಿರತಾನ್ನದಾನ ನಿಖಿಲಾವಧಾನ
ಪರಮಾರ್ಥಜ್ಞಾನ ಪರಿಬೋಧಮಾನ ೬

ತಾಮರತುಲಸೀದಾಮ (ಶುಭಾಂಗಾ)
ಶ್ರೀರಂಗಸ್ವಾಮಿದಾಸ ಭವತಿಮಿರಪತಂಗಾ ೭

೬

ಜೊಜೊ ತುಲಸೀರಾಮ ಜೊಜೊ ಶ್ರೀರಾಮ
ಜೊಜೊ ಸುಗುಣಸ್ತೋಮ ಜೊಜೊಯಭಿರಾಮಾ ಪ

ಜೊಜೊ ಸ್ವಾರ್ಥತ್ಯಾಗಿ ಜೊಜೊ ನಿಜಯೊಗಿ
ಜೊಜೊ ವಿಷಯವಿರಾಗಿ ಜೊಜೊ ಹಿತಲಾಗೀ ೧

ಜೋಜೋ ಸತ್ಯವಿಚಾರ ಜೋಜೋ ಸುಕುಮಾರ
ಜೋಜೋಪತಿತೋದ್ಧಾರ ಜೋಜೋ ಯಘುದೂರ ೨

ಜೋಜೋ ಪರಮೋದಾರ ಜೋಜೋ ಗಂಭೀರ
ಜೋಜೋ ದುರ್ಮತಹಾರ ಜೋಜೋ ಜಿತಮಾರ ೩

ಮಂಗಳಕರೋಲ್ಲಾಸ ಮಂಜುಮುಖಹಾಸಾ
ರಂಗಸ್ವಾಮೀದಾಸ ರಮ್ಯಹೃದಿವಾಸಾ ೪

೧೦

ಸ್ವಾಮಿಲಾಲೀ ತುಲಸೀ ರಾಮಲಾಲೀ
ಪ್ರೇಮತುಲಸೀನಳಿನಾಕ್ಷಧಾಮ ಲಾಲೀ ಪ

ಪ್ಲವಂಗಾಷಾಢಬಹುಳದಶಿಮಿಭಾರ್ಗವಿ ಲಾಲೀ
ಭುವಿಯವತಾರ ಸಾಯಂತ್ರಂ ಮೃಗಶಿರಯುತ ಲಾಲೀ ೧

ವೇಂಕಟಲಕ್ಷ್ಮಾಂಬೋದರಪಯೋಧಿಸೋಮ ಲಾಲೀ
ಪಂಕಜಲೋಚನ ಪ್ರಥಮಾಶ್ರಮವ್ರತನೇಮ ಲಾಲೀ ೨

ಸಿದ್ಧವಟಾವಿರ್ಭವ ವೈಷ್ಣವ ದೇವ ಲಾಲೀ
ಇದ್ದರತುಲಸೀಕುಲಕೊಂಡಾರ‍್ಯಪ್ರಿಯಸುತ ಲಾಲೀ ೩

ಸಕಲಾಗಮ ಶಾಸ್ತ್ರಾರ್ಥಪರಿಶ್ರಮಸೇಯುಷಿ ಲಾಲೀ
ಶುಕವಾಗಝು ಸಂಶೋಭಿತ ಚರಿತ ಸತ್ಕವಿ ಲಾಲೀ ೪

ಶಮದಮಸದ್ಗುಣ ಶಾಂತಪ್ರತಿಭಸೂನೃತ ಲಾಲೀ
ತೆಮಲಕನೆಪ್ಪುಡು ತಾರಕಮಂತ್ರುಪದೇಶಿ ಲಾಲೀ ೫

ಶ್ರೀಮದಹೋಬಿಲಸ್ವಾಮಿಯತೀಂದ್ರಸೇವಕ ಲಾಲೀ
ಕೋಮಲಭಾಷಿತಕವಿಜನವಂದಿತ ಕೌಶಲ ಲಾಲೀ ೬

ರಾಮಕೃಷ್ಣಪರಬ್ರಹ್ಮಮಹೋತ್ಸವರುಚಕೃತ ಲಾಲೀ
ನೇಮರಹಿತಮೂರ್ಖಾದಿಪತಿತೋದ್ಧಾರ ಲಾಲೀ ೭

ತವಗುಣಜಿತಕೇಯೂರಸತ್ವಾಭರಣ ಲಾಲೀ
ಸುವರ್ಣಮಣಿಮಯಭೂಷಣ ಸ್ವಾರ್ಥತ್ಯಾಗ ಲಾಲೀ ೮

ಪುರಪುರಭಜನಾಗಾರಾ ಗಣಿತಸ್ಥಾಪಿತ ಲಾಲೀ
ಪರಮೋದಾರಪರ ಚಿಂತನ ಕರುಣಾಕರ ಲಾಲೀ ೯

ಧರಮಹಿಸೂರ್ರುರವರ ಪ್ರಭುಪೂಜಿತ ಸ್ಮರಜಿತಲಾಲೀ
ತಿರುರಾಮೋತ್ಸವ ತುಲಸೀವನಪ್ರತಿಷ್ಠಿತ ಲಾಲೀ ೧೦

ದುರಿತನಗಾಸಿನಿ ಸುಮತಮುಖ ಧಾರ್ಮಿಕಲಾಲೀ
ಭರತಪುರಿಯರ್ಚಾವತಾರ ಭಾವಿಕ ಲಾಲೀ ೧೧

ಆಧಾರಭ್ರೂಮಧ್ಯಾಂತರ್ಬಹಿ ವೇದ್ಯ ಲಾಲೀ
ಖೇದಮೋದರಹಿತ ಬ್ರಹ್ಮಾನಂದ ಲಾಲೀ ೧೨

ಪುತ್ತಡಿಗುರುಧರಲಕ್ಷ್ಮಿ ಸಂಪದ್ಯುಕ್ತ ಲಾಲೀ
ಚಿತ್ತುಅಚಿತ್ತೀಶ್ವರ ತತ್ವತ್ರಯ ಶೇಷಿ ಲಾಲೀ ೧೩

ಸಿರಿಮುಳುಬಾಗಲಸನ್ನಿಧಿ ಸ್ಥಾಪನಚೇಯು ಲಾಲೀ
ಧರರಂಗಸ್ವಾಮಿದಾಸ ಜೀವೋದ್ಧಾರಕ ಲಾಲೀ ೧೪

೧೧

(೨) ಅಭಿನವ ರಂಗನಾಥ ಯತಿಗಳು (ಪರಕಾಲಮಠ)

ಶುಭಫಲಪ್ರದಮೌನಿ ಮಾಂ ಪಾಲಯ ಶುಭಫಲಪ್ರದಮೌನೀ
ಅಭಿನವರಂಗನಾಥ ಪರಕಾಲಧೀಮಣಿ ಪ

ವಿಬುಧಜನಾರ್ಚಿತ ವಿಮಲ ಸುಗಣ್ಯಾ
ಅಭಿನುತಿಚೇಕೊನು ಆರ್ತಶರಣ್ಯಾ ೧

ಶಮದಮಶಾಂತಾದಿ ಸದ್ಗುಣಭರಿತ
ಸುಮಶರಜಿತಯಾಶ್ರಮತ್ರಯತ್ಯಜಿತ ೨

ನಿಯತಿಯುಕ್ತ ಬ್ರಂಹತಂತ್ರಕೃಪಾಂಗಾ
ಹಯಮುಖಚರಣಸರೊರುಹಭೃಂಗಾ ೩

ಸಕಲಾಗಮಶಾಸ್ತ್ರಾರ್ಥ ಪುರಾಣ
ಪ್ರಕಟತ ಪರಿಶ್ರಮಪ್ರತಿಭಪ್ರವೀಣಾ ೪

ಧರಿಶ್ರೀಕೃಷ್ಣ ನೃಪದೇಶಿಕ ಪ್ರಮುಖ
ಪರಮಶೀಲವ್ರತಪತಿತೋದ್ಧಾರಕ ೫

ಸರ್ವತಂತ್ರಸ್ವಾತಂತ್ರಯತೀಂದ್ರಾ
ಯುರ್ವಿಯಾಮುಷ್ಮಿಕ ಹಿತಕರಸಾಂದ್ರಾ ೬

ನಿಗಮಾಂಗುರುಪದನಿತ್ಯಾರಾಧಕ
ದ್ವಿಗುಣರಹಿತಪರತತ್ವಸ್ಥಾಪಕ ೭

ಮಂಗಳತರಸತ್ಸಂಗಧುರೀಣಾ
ರಂಗಸ್ವಾಮಿದಾಸಾರ್ಚಿತಚರಣಾ ೮

(ಇ) ವಿಶೇಷಸಂದರ್ಭದ ಹಾಡುಗಳು

೧೨

(೧) ನರಸಿಂಹಸ್ವ್ಯನ ಮನೆಯ ಹರಿಕಥೆ ಸಂದರ್ಭದಲ್ಲಿ

ಆನಂದಮಾನಂದವಾನಂದವಾಯಿತು
ಸಾನಂದವಾದ ನಾರಸಿಂಹಯ್ಯಮಂದಿರದಲ್ಲಿ ಪ

ರಾಮಮಹೋತ್ಸವ ಪ್ರೇಮದಿಮಾಡಲು
ಸ್ವಾಮೀಲಕ್ಷ್ಮಣಸೀತ ಸಮೇತರಾಗಿಬರಲು ೧

ಭಾರತ ರಾಮಾಯಣ ಭಾಗವತಾದಿ ಗ್ರಂಥ
ಪಾರಾಯಣಂಗಳು ಭೂಸುರಾಧಿಪರು ಮಾಡಲು ೨

ಭಕ್ತಾಜನರು ಹರಿಭಜನೆ ಮಾಡಲು ರಾಗ
ರಕ್ತೀಭಕ್ತೀ ಯುಕ್ತಶಕ್ತೀ ಪರರಾಗಿನಿರಲು ೩

ಪರಿಪರಿ ತೆರದಿ ವಾದ್ಯಪಂಕ್ತೀ ಮಂಟಪದಲ್ಲಿ
ತಿರುವಾರಾಧನೆ ತೀರ್ಥಪ್ರಸಾದ ವಿನಿಯೋಗ ೪

ಪರಮಭಾಗವತರು ಪಂಡಿತ ನಿಪುಣರು
ತರುಣೀಮಣಿಯರೆಲ್ಲ ತತ್ಸೇವೆಮಾಡಲು ೫

ಸಿರಿಶುಕ್ಲವರ್ಷ ಚೈತ್ರಶುದ್ಧ ಬಿದಿಗೆ ಭರಣಿ
ಗುರುತುಲಸೀರಾಮಜನನ ಚಾರಿತ್ರೆನುಡಿಯಲು ೬

ಶ್ರೀಲಕ್ಷ್ಮೀದೇವಮ್ಮ ಸುಖಪ್ರಸುವಿಸಿದಳು
ತುಲಸೀರಾಮಾಖ್ಯನನ್ನ ತತ್ಕಾಲ ಲಗ್ನದಲ್ಲಿ ೭

ಶ್ರೀಶಾ ತುಲಸೀರಾಮಸ್ವಾಮೀ ಪದಾರವಿಂದ
ಆಶ್ರೀತರಂಗಸ್ವಾಮೀದಾಸಾನು ಸೇವಿಸಲು ೮

೧೩

(೨) ೧ನೇ ರಾಮಕೋಟಿ ಸಂದರ್ಭ

ಚನ್ನಪಟ್ಟಣ ಶ್ರೀಹರಿ ಸರ್ವಚೇತನೋದ್ಧರೀ
ಪನ್ನಗಶಯನ ಮುರಹರೀ ಪಾಪದ್ವಿರದ ಕೇಸರಿ ಪ

ಕರುಣತೊರಿಸು ಕೇಶವಾ ದುರಿತಪಾಶ ಬಿಡಿಸುವಾ
ಸಿರಿರಾಮಕೋಟಿ ನಾಮವಾ ಸ್ಮರಣೆಕೊಟ್ಟೆ ಮಾಧವಾ ೧

ಭಯನಿವಾರಣಮಾಡಿಸಿ ಪ್ರಜಗಳೆಲ್ಲರಪೋಷಿಸಿ
ಜಯಪ್ರದವಹೊಂದಿಸಿ ಜಗತ್ಕೀರ್ತಿನಿಲ್ಲಿಸಿ ೨

ಸಂಘದಿಂದಧ್ಯಾನವಾ ಸಮರಸಸುಜ್ಞಾನವಾ
ಇಂಗಿತಾರ್ಥಾಚರಣವಾ ಹೀಗೆ ನಿಲ್ಲಿಸು ರಾಘವಾ ೩

ರಾಮಕೋಟಿಸೇವೆಗೆ ರಮ್ಯಜನರು ಕೂಡಿಕೆ ಸಂ
ಭ್ರಮದಿಭಜನ ಮಾಡಲಿಕೆ ಸತ್ಯಾಮೃತವನು ಕೊಡಲಿಕೆ ೪

ಗುರುವು ತುಲಸಿರಾಮನಾ ಪರಮಕೃಪಾಪಾತ್ರನಾ
ಗಿರುವ ರಂಗಸ್ವಾಮಿದಾಸಾರ್ಚಿತ ಶ್ರೀನಾರಾಯಣ ೫

೧೪

(೩) ೪ನೇ ರಾಮಕೋಟಿ ಸಂದರ್ಭ

ದಯಾಬ್ಧಿ ಸಿರಿಧರಣಾ ಪಾಹಿಮಾಂ
ಭಯಕೃದ್ಭಯನಾಶನ ಹಯವದನಾ ಪ

ಜಯಪ್ರದ ಮುರಹರ ಜಾನಕೀಶ ಅಘ
ಕ್ಷಯ ಖಗವಾಹನ ಸಾರಸೇಕ್ಷಣ ೧

ಚಾತುರ್ಥದ ರಾಮಕೋಟಿಯ ಜರುಗಿಸಿ
ಕೌತೂಹಲ ಪ್ರಜತತಿಗೆ ಲಭಿಸಿದೆ ೨

ಆಪದೊದ್ಧಾರಣ ಆರ್ತಶರಣ್ಯಾ
ಭೊಪಸುಜನಗಣ ತಾಪನಿವಾರಣ ೩

ಪ್ಲೇಗಿನವಾಂತರ ಪರಿಹರಿಸಿಪುರ
ಭೋಗಿಶಯನ ಪರಪಾಲಿಸು ಬೇಡುವೆ ೪

ಚನ್ನಪಟ್ಣಾಧೀಶ ಸ್ತೌತ್ಯವುಮೇಶ
ಎನ್ನಪರಾಧಗಳ ಮನ್ನಿಸು ಶ್ರೀಶ ೫

ಯುವತೀಮಣಿಯರೆಲ್ಲ ಶಿವಕರಭಕ್ತಿಯಿದಿಂ
ತವನಾಮಾಮೃತ ಸವಿಗೊಲಿದರು ರಕ್ತಿ ೬

ಪ್ರೇಮ ತುಲಸಿಗುರುಸ್ವಾಮಿ ಸೇವಕ ರಂಗ
ಸ್ವಾಮಿದಾಸ ಹೃದಿಧಾಮ ಶ್ಯಾಮಾಂಗ ೭

೧೫

(೪) ೩ನೇ ರಾಮಕೋಟಿ ಸಂದರ್ಭ

ಕೌಸಲ್ಯಾಗರ್ಭಾಬ್ಧಿಸೋಮಾ ಸ್ವಾಮಿ
ಕೌಶಿಕ ಮಖಪಾಲ ರಾಮ ಪ

ಆಶಯೇಶಯ ಜನಕ ಪಾಪ
ವಿನಾಶ ತಾಪಸಹೃದಯ ಕಮಲಾ

ವಾಸ ಭದ್ರ ಗರೀಶ ರಘುಕುಲ
ಭೂಷ ದಶವಿಧ ವೇಷಧಾರಿ ೧

ತೃತಿಯರಾಮಕೋಟಿ ಕೂಡು ಭಕ್ತ
ತತಿಗೆ ಲಭಿಸುವಂತೆಮಾಡು
ಪತಿತಪಾವನ ಪದ್ಮನಯನ
ಶತಧೃತಿ ಶಿವಸೇವ್ಯಚರಣಾ
ಸತತವೂ ತವಸೇವೆಗೆ ಮನ
ಹಿತವತೋರಿಸಿ ಸಲಹೋ ಶೌರಿ ೨

ಭರತಪೂರ್ವಜ ದೀನಪ್ರೇಮಾ ದನುಜ
ಹರಣಧುರೀಣ ನಿಸ್ಸೀಮ
ಕರಿಧ್ರುವ ಪ್ರಹ್ಲಾದ ಶಬರೀ ನರ
ಸತಿಪರಮಾರ್ಥದಾಯಕ
ನಿರುಪಮಾನದ ರಾಮಕೋಟಿಯಾ
ಚರಣ ಕೀರ್ತಿಯ ನಿಲಿಸು ಧೊರೆಯೆ ೩

ಧಾರುಣೀ ಚನ್ನಪಟ್ಣೇಶಾ ಲಕ್ಷ್ಮೀ
ನಾರಾಯಣ ಕಾಯೊ ಶ್ರೀಶಾ
ಮಾರಸುಂದರ ರಾಮನಾಮವ
ಹಾರವಾಯಾಗಿ ಸಮರ್ಪಿಸಿದೆವು
ಕೋರಿಕೆ ಸಪ್ತೋತ್ಸವಂಗಳು
ಪೂರ್ತಿಮಾಡುವರೆಂದು ನಂಬಿದೆ ೪

ಗುರುತುಲಸೀರಾಮಸ್ವರೂಪ ನಿಮ್ಮ
ಕರುಣದಿಂದಲಿಸಾರಿಭೂಪಾ
ಜರುಗಿಸಿದಿರೀ ಜಪಾಧ್ವರವನು
ಮುರಹರೀಮದ್ದುರಿತ ಹರಣನೆ

ನಿರತಭಕ್ತಿಯ ಕೊಟ್ಟು ಪ್ರಜಗಳುನು
ದ್ಧರಿಸುವ ಕರ್ತವ್ಯ ನಿನದೇ ೫

ಭೂಮಿಜನರ ಗರುಡುತುರಗಾ ರಂಗ
ಸ್ವಾಮಿದಾಸೊಲ್ಲಾಸಾ ಈಗ
ಪ್ರೇಮ ತೋರಿಸಬೇಕು ಬೇಡುವೆ
ಕಾಮಿತಾರ್ಥದ ಕಲ್ಪಭೂಜ
ಸೋಮಜಿತಮುಖ ಸಕಲ ಸುಗುಣ
ಸ್ತೋಮ ತುಲಸೀದಾಮ ಧರಣಾ * ೬

* ೨೦-೮-೧೯೩೩ ಎಂದು ದಿನಾಂಕ ಇದೆ.

(ಈ) ರಂಗಸ್ವಾಮಿದಾಸರನ್ನು ಕುರಿತ ಕೆಲವು ಕೃತಿಗಳು

೧೬

(೧) ದರಿಶಕುಪ್ಪ ವೆಂಕಟದಾಸರಿಂದ

ಗುರುರಂಗಸ್ವಾಮಿಕೃಪಾಂಗಾ ಸತ್ಕೃಪಾಂಗಾ
ಭಜಿಪೆ ವರತುಲಸೀರಾಮಪಾದ ಸಾರಸಭೃಂಗ ಪ

ಗುರ್ರಮಾಂಬ ಕುವರನೆ ಗುರುಸೇವಾ ದುರಂಧರನೆ
ಕರುಣಿಸೊಯಮ್ಮನು ನಿರುತವು ಬೇಡುವೆ ೧

ಅಗಣಿತಮಹಿಮನೆ ಭಾಗ್ಯಾದಣ್ಣಯ್ಯಸುತನೆ
ಭಗವಂತನಪ್ರಿಯನೆ ಹಗಲಿರಳು ಭಜಿಪೆವು ೨

ದುಂದುಭಿಶಾಲೆಯಂತೆ ಧನುರ್ಮಾಸಭಜನೇಗೆ
ಬಂದು ಪಾಮರರ ಭವಬಂಧನ ಬಿಡಿಸಿದ ೩

ರಾಮನ ನಾಮವ ಪ್ರೇಮಾದಿಂ ಬೊಧಿಸಿ
ನೇಮವತೋರಿಸಿ ಸ್ವಾಮೀಕೃಪೆ ಪಡೆದ ೪

ತುಲಸೀಮಹಾತ್ಮರ ತತ್ವಾಬೊಧಾನುಭವ
ತಿಳಿದುನಿರ್ಮಲ ಹೃದಯದಲ್ಲಿ ಭಕ್ತಕೃತಮುಖನೆ ೫

ಪರಿಪೂರ್ಣ ತುಲಸೀರಾಮ ಮರೆಯದೆ ಇರಿಸೆನ್ನ
ದರಿಶಕುಪ್ಪದ ದಾಸ ಕರವೆತ್ತಿ ಮುಗಿಯುವೆನೂ ೬

೧೭

(೨) ಭೈರವಗೌಡರಿಂದ

ಮುಳಬಾಗಲುರಂಗಸ್ವಾಮೀ ಯಮ್ಮ
ನುಳುಹಬೇಕು ಭಕ್ತಪ್ರೇಮೀ ಪ

ನಳಿತೋಳು ಕಳೆಮುಖ ತಲೆಗೆ ಕಿರೀಟವು
ನಳಿನಲೋಚನಮೂರ್ತಿ ಕಳೆಯಿಂದ ಬೆಳಗುವೆ ಅ.ಪ

ಅದ್ವೈತ ಶಾಸ್ತ್ರಾನುಭವರು ನಮ್ಮ
ಅಣ್ಣಯ್ಯಸ್ವಾಮಿಯ ಸುತರೂ
ಸಾಧ್ವೀಗುರ್ರಮಗರ್ಭಾಂಬುಧಿ ಶಶಿಯಾಗಿ
ಸದ್ವಿಲಾಸದೊಳು ಸಂಜನಿಸಿದ ಚಲುವ ೧

ಕೃತ್ತಿಕಾನಕ್ಷತ್ರ ಪ್ರಥಮಾ ಪಾದ
ತಿಥಿಯು ದ್ವಾದಶಿ ವಿಭವನಾಮಾ
ಹಿತವಾದ ಧನುರ್ಮಾಸ ಸ್ಥಿರವಾರದುದಯದೊಳ್
ಪೃಥಿವೀಪಥನವಾದ ಪರಮಪುರುಷಮೂರ್ತಿ ೨

ಸದ್ಗುಣದಾಟಿನೋಟಗಳೂ ಶಾಸ್ತ್ರ
ವಿದ್ಯ ಸಂಯೋಗಪಾಠಗಳೂ ಸದ್

ವೃದ್ಧಿ ಸವಿಯ ವ್ಯಾಪಾರ ವರ್ಜಿತಮಾಡಿ
ಶುದ್ಧವೈಷ್ಣವ ತುಲಸಿರಾಮರ ಭಜಿಸುವ ೩

ಹರಸೀ ವಾಗೀಶಕಿರೀಟಾ ಗುರು
ಪರಂಪರೆ ಕಥೆನುಡಿದಾಟ
ಹರುಷದಿ ಮೆಚ್ಚಿಸಿ ಧರಿಸಿ ಕಿರೀಟಾ
ನಿರುಪಮ ಪರತತ್ವದೊಳಗೆ ವಿಶೇಷಾ ೪

ಪರಕಾಲಮಠಕಾಗಾಮಿಸಿದೇ ಜನರ
ತರುಣೋಪಾಯಗಳ ಮಾಡಿಸಿದೇ
ತಿರುಮಂತ್ರಸಂಸ್ಕಾರ ಚರಮಾರ್ಥದೊರಕಿಸಿ
ಪರಮಪಾವನರಾಗಿ ಮಾಡುತಲಿರುತಿಹ ೫

ವರಯತಿಗುರುಗಳ ಭಾಷಾ ಪೂರ್ಣ
ಪರತತ್ವಬೋಧೆ ಗುಣಭೂಷ
ಪರಮಾನುಭವಜ್ಞಾನ ಅರುಹಿ ಭಕ್ತರನೆಲ್ಲ
ಪರಲೋಕಸಾಧನ ಅರಿವು ತೋರಿಸುವಂಥಾ ೬

ಚನ್ನಪಟ್ಣಾದಿರಾಮಕೋಟಿ ಅಲ್ಲಿ
ಜನಕೇನೀ ತುಂಬಿದೆ ನಾಟಿ
ಮುನ್ನುಮಾಡಿದ ಪಾಪವೆಲ್ಲವು ಪರಿಹಾರ
ವುನ್ನತಮಾರ್ಗವ ತೋರಿದ ಗುರುದೇವ ೭

ರಾಮಕೃಷ್ಣೋತ್ಸವಗಳನೂ ಬಹು
ಪ್ರೇಮದಿನಡೆಸಿದಾದರನೂ
ಆಮಹಾ ಕಾರ್‍ಯಕಾತುರದುರಂಧರನೂ
ಯೀಮಹಿಯೊಳು ಪ್ರಖ್ಯಾತನಾಗಿಹನೂ ೮

ಪುರಪುರಗ್ರಾಮಗಳಲ್ಲಿ ಗುರು
ತಿರುನಕ್ಷತ್ರೋತ್ಸವವಲ್ಲಿ

ಪರಮವೈಭವದಿಂದ ಸ್ಥಿರವಾಗಿ ನಡೆಯಲು
ಹರುಷದಿ ಸೌಲಭ್ಯ ದೊರಿಕಿಸಿ ಇರುವಂಥಾ ೯

ಪ್ರತಿವರ್ಷ ಧನುರ್ಮಾಸ ಭಜನೇ ಒಳ್ಳೆ
ಶೃತಿಮೃದಂಗವು ತಾಳರಚನೇ
ಸತತವು ಹರಿಕಥೆ ತೀರ್ಥಪ್ರಸಾದವು
ಹಿತಕರಗುರುಸೇವಾ ದುರಂಧರಬಿರುದುಳ್ಳ ೧೦

ಭರತಪುರೀವಾಸಶ್ರೇಷ್ಟಾ ಗುರು
ವರತುಲಸಿರಾಮ ಪ್ರತಿಷ್ಠಾ
ಪರಿಪರಿತತ್ಸೇವಾನಿರತ ಸಂತುಷ್ಟಾ
ಗುರುಪಾದಸರಸಿಜ ಭೃಂಗಾವೆ ಸ್ವಷ್ಟಾ ೧೧

ಅಪರೋಕ್ಷಜ್ಞಾನ ಸಂಪೂರ್ಣ ಜನ್ಮ
ಸಫಲಮಾರ್ಗದಲ್ಲಿ ಉತ್ತೀರ್ಣಾ
ಅಪರಾಧಗಳನು ಮನ್ನಿಸಿ ಶ್ರಿತಜನರನ್ನು
ಸಫಲಗೊಳಿಸಿ ಜನ್ಮಸಾರ್ಥಕಪಡಿಸುವ ೧೨

ಪತಿತಪಾಮರರಿಗೆಯೆಲ್ಲಾ
ಪ್ರತಿಫಲವಿಲ್ಲಾದುಪದೇಶ ಬಲ್ಲಾ
ಹಿತಕರವಾಗಿ ತೋರ್ಪುದು ಶಿಷ್ಯಜನಕೆಲ್ಲಾ
ಸತತವು ತವಪಾದ ಗತಿಮೋಕ್ಷದಾಯಕ ೧೩

ಜ್ಞಾನಭಕ್ತಿಯು ವೈರಾಗ್ಯ ಸು
ಜ್ಞಾನದಿ ತುಳುಕುವ ಭಾಗ್ಯ
ಮಾನವ ಜನ್ಮದಿ ಅವತರಿಸಿರುತಿಹ
ದೀನರ ಮುಕ್ತಿಗೆ ಕಾರಣವಾಗಿಹ ೧೪

ಅಂಗ ದ್ವಾದಶನಾಮಧಾರಾ ಬಹು
ಶೃಂಗಾರತರ ಮಕುಟಾಂಬರಾ

ರಂಗುಮಂಟಪದಿ ಲಂಘಿಸಿ ರಾಗ ಪಾಡುತ್ತ
ಮಂಗಳಕರ ತುಲಸಿನಳಿನಾಕ್ಷಹಾರುಳ್ಳ ೧೫

ಗೃಹಮಣಿ ಸುಬ್ಬಾಂಬನವರೂ ನಿಮ್ಮ
ಮಹದಾಂಶ ಸುಗುಣವಂತೆಯರು
ಸಹಚರಿಸುತ ಪುರಗ್ರಾಮ ಮಾದರಿಯಾಗಿ
ಸಹಪತ್ನಿಸಹಿತ ಭಕ್ತರನು ಪಾಲಿಸತಿರ್ಪಾ ೧೬

ದಿನಚರಿಬರುವ ದಾಸರನೂ ಮನ
ದನುವಾರಿತಾನ್ನದಾನವನೂ
ಮನದೊಳು ಭಕ್ತರವೊಡಲ ಪರೀಕ್ಷಿಸಿ
ಘನವಾದ ಮೋಕ್ಷಾರ್ಹವಾದನರ ಕೈಪಿಡಿದ ೧೭

ಅಂಕಿತಮಾಡದೆ ಯಿಹೆನೂ ಚ
ಕ್ರಾಂಕಿತ ವಿಲ್ಲದ್ಯೋಚಿಪೆನೂ
ಕಿಂಕರನಾಗಿ ಬೇಡುವೆ ಪಾದವನೂ
ಅಂಕಿತಕನುಮತಿ ಆಗಹೊಂದುವೆನೂ ೧೮

ಸೋಮೆಗೌಡನ ಪುರವಾಸಾ ರಂಗ
ಸ್ವಾಮಿದಾಸರ ದಾಸದಾಸ
ಪ್ರೇಮಭೈರವಗೌಡನೊಳಗೆ ತೋರಿಸಬೇಕು
ಸ್ವಾಮಿನಿನ್ನಾಜ್ಞೇ ಬಾಗಿದಂಕಿತವಿದು ೧೯

೧೮

(೩) ಮೈಸೂರು ವೈಕುಂಠದಾಸರಿಂದ

ಧರಣಿಕಧಿಕವಾದ ಗುರುರಂಗಸ್ವಾಮಿಯೆ
ಚರಣಕಮಲಕೆ ನಮೊ ನಮೊ
ಭರತಪುರೀಯೊಳೂ ತುಲಸೀರಾಮರ
ಸ್ಥಿರಪಡಿಸಿದ ಗುರು ನಮೊ ನಮೊ

ವೇದಾಂತಗಳ ಭೇದವ ತಿಳಿದೂ
ಆದಿಯ ತೋರಿಸಿದೆ ನಮೊ ನಮೊ
ಸಾಧೂಜನಗಳ ಸೇವೆಯೊಳಿರಿಸಿ
ಸ್ವಾಧೀನ ಮಾಡಿಕೊಂಡೆ ನಮೊ ನಮೊ

ಬೋಧಾಮೃತವೆಂವ ನಾದವತುಂಬಿ
ಶೋಧನೆ ಮಾಡಿಕೊಂಡೆ ನಮೊ ನಮೊ
ರಾಧಾರುಕ್ಮಿಣಿರಮಣನ ಸೇವೆಯ
ಹೃದಯದೊಳಿರಿಸಿದೆ ನಮೊ ನಮೊ

ಪೂರ್ವಜನ್ಮದ ಸುಕೃತಫಲದಿ ನಿಂಮ್ಮ
[ವರ]ದಾಸನಾದೆನೊ ನಮೊ ನಮೊ
ಪರ್ವತಾಕಾರದಿ ಪಾಪವ ಮಾಡಿದೆನೂ
ಪರಿಹರಿಸೆನ್ನನು ನಮೊ ನಮೊ

ರಾಮಕೃಷ್ಣೋತ್ಸವ ನಾಮಧ್ಯಾನವ
ನೇಮದಿಪಾಡುವೆ ನಮೊ ನಮೊ
ಸೋಮಸುಂದರಾ ಜಗದಭಿರಾಮನೇ
ಪ್ರೇಮದಿಸಲಹೈ ನಮೊ ನಮೊ

ದೀನದಯಾಪರದಾಸಜನೊತ್ತಮ
ಧ್ಯಾನದೊಳಿರಿಸೆನ್ನ ನಮೊ ನಮೊ
ಸ್ವಾನುಭಾವದೀ ದಾನವ ಬೇಡುವೆ
ದೀನನ ಸಲಹೈ ನಮೊ ನಮೊ

ವರಗುರುಪಾದಕೆ ವಂದಿಪೆ ನಿರತವೂ
ವೈದಿಕೋತ್ತಮನೆ ನಮೊ ನಮೊ
ಪರಮಪುರುಷನೆ ಪತಿತೋದ್ಧಾರನೇ
ವರರಾಮದಾಸಪಾಲ ನಮೊನಮೊ

೧೯

(೪) ಆರ್. ರಾಮಕೃಷ್ಣದಾಸರಿಂದ

ಭವಭಯಹಾರ ನಮ್ಮ ಭುವಿರಂಗಸ್ವಾಮಿ ಗು
ರುವ ಭಜಿಸಿ ಪೂಜಿಪಬನ್ನಿ ಪ

ಭಾಗವತೋತ್ತಮರು ಭಾಗ್ಯದಣ್ಣಯ್ಯಸುತರು
ಭೋಗತ್ಯಾಗವಮಾಡಿದ ಭಗವತ್ಸ್ವರೂಪರು ೧

ಸಾಧ್ವೀಗುರ್ರಮ್ಮಾಂಬಾ ಗರ್ಭೋದ್ಭವರಾಗಿ
ಸದ್ವಿವೇಕವಕೊಟ್ಟು ಸರ್ವರ ಪೊರೆಯುವಾ ೨

ಸದ್ಗುರು ತುಲಸೀರಾಮರ ಸನ್ನಿಧಿಯೊಳ್ ಪ್ರತಿಷ್ಠಿಸಿ
ಸದ್ವಿಲಾಸದೊಳು ಸಂಚರಿಸುತಲಿರ್ಪಾ ೩

ಸಾರತತ್ವಾವಿಚಾರ ಸರಸದಿ ಸದಾಚಾರ
ಸೂರಿಜನಪರಿವಾರ ಸತ್ಯಾನಂದಾಧೀರಾ ೪

ಸರಳಕವಿತ್ವಧಾರಾ ಸಕಲಶಾಸ್ತ್ರಾವಿಚಾರ
ಸರಿಕಾಣದಾಯಿಹದೀ ಸರ್ವಪತಿತೋದ್ಧಾರಾ ೫

ವರಗುರು ತುಲಸೀರಾಮಾ ಚರಿತಾ ಸವಿಸ್ತರಿಸಿ
ಸಿರಿಚನ್ನಪುರಿಯಲ್ಲೀ ವರಕೀರ್ತಿ ಸ್ಥಿರದಿ ವಹಿಸಿ ೬

ವಿರಾಜಿಸುತಲಿರ್ಪಾ ವರಗುರುನಿಜವೆಂದೂ
ಪುರದಿ ಸರ್ವಜನರೂ ಪರಿಪರಿಪೊಗಳುವರೂ ೭

ರಾಮನುಪಾಸನೆಯಾ ಪ್ರೇಮದಿಮಾಡಿದಾ
ರಾಮತುಲಸೀಗುರು ಸ್ವಾಮಿಯಂದದಿಬಂದಿಹಾ ೮

ಪಾಮರನಾದ ರಾಮಕೃಷ್ಣ ದಾಸೋದ್ಧಾರಾ
ಯೀ ಮಹಿಯಲ್ಲಿ ಪ್ರಖ್ಯಾತಯಶೋಸಾರ* ೯

೨೦

ಗುರುವೆ ಪೂಜಿಪೆ ನಿಮ್ಮಯ ಚರಣಗಳನ್ನು
ಗುರುವೆ ಭಜಿಪೆ ತಮ್ಮಯ ಚರಣಗಳನ್ನೂ ಪ

ಪರಮತತ್ವದೊಳಿರುವ ನಿಜ
ಗುರು ತುಲಸಿರಾಮರತೆರದಿ ನಮ್ಮಯ
ದುರಿತಗಳ ಪರಿಹರಿಸಲೀ
ತೆರ ರಂಗಸ್ವಾಮಿಗಳಾಗಿ ಬಂದಿರಿ ೧

ಪರಿಪರಿಯ ಇಚ್ಛೆಗಳೊಳಿರ್ದ
ಸರಳಜೀವನಪಿಡಿದು ತಮ್ಮಯ
ಚರಣಗಳ ಭಜಿಪುದಕೆ ಪರಮಾನಂದವ
[ನರುಹಿ] ತೋರಿದಿರಿ ನಿಜಗುರು ೨

ಸರ್ವಜನರನು ಏಕಭಾವದಿ
ಸ್ಮರಣೆಮಾಡುವತೆರದಿ ಯೀಮಹಿ
ಪರಮಪುರುಷನ ದಿವ್ಯಮಹಿಮೆಯ
ಅರುಹಿದಿರಿ ತವಕರುಣದಿಂದಲಿ ೩

ರಾಮಕೋಟಿಯ ಸೇವೆಯನು
[ನಮ್ಮ] ಚನ್ನಪಟ್ಟದ ಭಕ್ತರೆಲ್ಲರು
ಪ್ರೇಮದಿಂದಲಿ ಭಜನೆಮಾಡಿ
ಕಾಮಜನಕನ ಕರುಣಪಡೆದರು ೪

---

* ಕೊನೆಯಲ್ಲಿ 'ಸದ್ಗುರುರಂಗಸ್ವಾಮಿದಾಸ್ ಸ್ವಾಮಿ ದಿವ್ಯ ತಿರುವಡಿಗಳೇ ಶರಣಂ' ಎಂಬ ಸಾಲು ಇದೆ. ತಿರುವಡಿ' ಎಂಬುದು "ಶ್ರೀಪಾದ' ಎಂಬುದರ ಕಂದಮಿಳು ರೂಪ.

ಪಾಮರನು ನಾನಾಗಿ ಈ ಮಹಿ[ಯೊಳು]
ಪ್ರೇಮದಿಂ ಗುರು ನಿಮ್ಮ ಕರುಣದಿ
ರಾಮಕೃಷ್ಣದಾಸ [ನೆನಿಸಿ] ನುಡಿದೆನು
ನೇಮದಿಂ ಕೀರ್ತನೆಯ ರೂಪದಿ ೫

೨೧

ದಾಸನಾಗಬೇಕು ರಂಗಸ್ವಾಮೀಗುರು ನಿಮ್ಮ ದಾಸನಾಗಬೇಕು ಪ

ದಾಸನಾಗಬೇಕು ಕ್ಲೇಶಪಂಚಕವಳಿದು
ಆಸೆಯಲ್ಲಿ ಮನಸೂಸದೆ ಸರ್ವದಾ ಅ.ಪ

ಮನದ ಕಲ್ಮಷ ಕಳೆದು ಮಹಾ ರಾಮಕೋಟಿಗಳ
ಮಹಿಮೆಗಳನು ತಿಳಿದು
ಇನಿತು ಈ ಜಗವೆಲ್ಲ ಶ್ರೀರಾಮಮಯವೆಂದು
ಘನವಾದ ಮೋಹದಾ ಗಡಿಯನು ದಾಂಟುತ್ತಾ ೧

ತನುವು ಅಸ್ಥಿರವೆನ್ನುತಾ ತಿಳಿದು ಈ ದುರ್ವ್ಯಾಧಿ
ಪ್ಲೇಗು ಭಯವಬಿಡುತಾ
ಘನವಾದ ರಾಮಕೋಟಿಯಲಿ ನೆಲೆಸುತಾ
ಬಿನಗು ಸಂಸಾರದ ಮಮತೆಯ ಬಿಡುತಾ ೨

ಆರುಚಕ್ರದಿಮೆರೆವ ಅಖಂಡನಾ
ಮೂರುಗುಣವತಿಳಿಪ
ಆರುಮೂರದಿನಾರು ತತ್ವಾತೀತನಿಜ
ತೋರಿ ರಾಮಕೃಷ್ಣದಾಸನುದ್ಧರಿಸಿದರು ೩

ಹೊಸಕೆರೆ ಚಿದಂಬರಯ್ಯನವರ ಕೀರ್ತನೆಗಳು

(ಅ) ದೈವಸ್ತುತಿಗಳು

೧

ತಾನೆ ಬಂದ ಎನ್ನ ಮನಕೆ ಗೋಪಾಲಾರ್ಯ
ಏನು ಸೇವೆ ಮಾಡಲಾತಗೆ ಪ

ಬರುತಲೊಂದು ಮುಕುತಿಮಾರ್ಗವ ಶಾಸ್ತ್ರೀಯವಾದ
ಪರಿ ಪರಿ ಸಾಧನವರ್ಗವಾ
ಅರಿಷಡ್ವರ್ಗವೆಂಬ ದುರ್ಗವಾ ತನ್ನಯ ದಿವ್ಯ
ಕರುಣಾರಸವೆಂಬ ಸ್ವರ್ಗವಾ
ಕರೆದಿತ್ತಾ ಪರಿವುತ್ತಾ ಪರವುತ್ತಾ ಅರಿಸುತ್ತಾ ೧

ಕಾಳಗತ್ತಲೆಯ ಯೂಥವಾ ಮನದೊಳಿದ್ದ
ಕೀಳು ಬುದ್ಧಿಯಪರಾಧವಾ
ಮೂಳ ವಾಸನೆಯ ಮುಖವಾ ವೇದಾಂತ ಸಂ
ಮೇಳದಿಂದ ಬಹ ಸುಖವಾ
ಪೇಳುತ್ತಾ ಸೀಳುತ್ತಾ ತಾಳುತ್ತಾ ಕೀಳುತ್ತಾ ೨

ಸಾರ ಸತ್ಸಂಗದ ದಾರಿಯಾ ಮುಂದುಗಾಣಿಸದ
ಕ್ರೂರ ಕರ್ಮಂಗಳ ಪರಿಯಾ
ಘೋರ ಮಾಯೆಯೆಂಬ ತೊರೆಯಾ ಗೋಪಾಲಾರ್ಯ
ಸಾರಾನಂದವೆಂಬ ಪುರಿಯಾ
ತೋರಿಸುತಾ ಹೀರಿಸುತಾ ಹಾರಿಸುತಾ ಸೇರಿಸುತಾ ೩

೨

ಶಾರದಾ ಸ್ತುತಿ

ನಿನ್ನನು ನಂಬಿದೆ ಶಾರದೆ ನೀನು ಪ್ರ
ಸನ್ನಳಾಗಬಾರದೆ ಪ

ನಿನ್ನನು ಬಿಟ್ಟರ ಎನ್ನಯ ದುಃಖಗ
ಳನ್ನು ಕಳೆಯುವರಿನ್ನಾರಿರುವರು ಅ.ಪ

ಹೇಳಿಕೊಳ್ಳುವೆ ತಾಯೇ ದುಃಖವ
ಕೇಳು ಮಹಾಮಾಯೆ
ಹಾಳು ವಿಷಯಗಳ ಜಾಲದಿ ಸಿಕ್ಕಿಹ
ಗೋಳನು ನಾನೀಗ ತಾಳಲಾರೆನು ಹಾಯ್ ೧

ಆಟದ ವಸ್ತುಗಳ ಕೊಟ್ಟು ಚೆ
ಲ್ಲಾಟವಾಡುವೆಯಾ
ಸಾಟಿ ಇಲ್ಲದೀಆಟವ ಸಾಕು ಸಾಕು
ಕಾಟವಕಳೆನೀಂ ಭೇಟಿಯ ಕೊಟ್ಟು ೨

ಹರಿಹರಿಯೆನ್ನದೆ ಈ ನಾಲಿಗೆಯ
ನರಗಳು ಸೊಕ್ಕಿಹವು
ನಿರುತವು ಹರಿನಾಮ ಭರವೆಡೆಬಿಡದಂತೆ
ಹರಸಿ ಕಾಯೆ ಚಿಟ್ಟರೀರದ ತಾಯೆ ೩

೩

ರಾಮ

ದಾಸ್ಯವನೆ ಬೇಡುವೆ ನಿನ್ನ
ಬ್ರಹ್ಮೇಂದ್ರ ವಿನುತ ಸೀತಾಪತೇ ಪ

ಮೌನಿಗಳು ಹೃದಯದಲಿ
ಧ್ಯಾನಿಸುವ ಪಾದಾರವಿಂದದ ಅ.ಪ

ಭೂಮಿಭಾರವನು ಕಳೆದು ಭಕ್ತರಿಗೆ
ಪ್ರೇಮದಿಂದ ತನ್ನ ರೂಪವನು ತೋರಿ
ಈ ಮಹಿಗೆಲ್ಲ ಮುಖ್ಯದೈವವಾದ
ಕೋಮಲಾಂತಃಕರಣದ ನಿನ್ನ ಪಾದ ೧

ಹುಟ್ಟುಸಾವುಗಳ ಸುಳಿಯಲಿ ಸಿಕ್ಕಿ
ಕಷ್ಟದಿಂದ ದುಃಖಪಡುತಿರುವರ
ಕಷ್ಟವನು ಹೋಗಲಾಡಿಸುವ
ಸೃಷ್ಟಿಗೆಲ್ಲ ಮುಖ್ಯದೈವವಾದ ನಿನ್ನ ೨

ಹೊಟ್ಟೆಬಟ್ಟೆಗಾಗಿ ನಾ ಮಾಡಿದ
ಕೆಟ್ಟಜನಗಳ ಸೇವೆ ಸಾಕುಮಾಡಿ
ಇಷ್ಟದೈವದ ಚಿದ್ರೂಪವ
ನೆಟ್ಟನರಿಯುವ ದೃಷ್ಟಿಯಿಂದ ನಿನ್ನ ೩

೪

ಗಂಗಾ ಸ್ತುತಿ

ಗಂಗಾ ಗಂಗಾ ಎಂದು ನಿನ್ನ ಸಾನ್ನಿಧ್ಯದಲ್ಲಿಯೇ
ಇರುವೆನೋ? ಸುಖದಿ ಗಂಗಾ ಪ

ಧರೆಗೊಪ್ಪುವ ಹಾರವಿದೆಂಬಂದದಿ
ಮೆರೆಯುತ್ತಿರುವಾ ಪರಮಪಾವನೆಯೆ ೧

ಸುರಲೋಕಕೆ ಹತ್ತುವದನು ಸೂಚಿಸು
ತಿರುವ ಪತಾಕೆಯ ಪರಿಯಳೊಪ್ಪಿರುವ ೨

ಹರಿಚರಣಾಂಬುಜದಿಂದ ಹೊರಡುತ
ಹರನಶಿರಸ್ಯಂ ಹರಿಯುತಾ ಇರುವ ೩

ಮುಳುಗಿದವರ ಪಾಪಗಳನೆಲ್ಲವನು
ತೊಳೆಯುವ ಚಿನ್ಮಯೆ ಕಲಿಮಲಾಪಹರೆ ೪

೫

ಸೂರ್ಯ ಸ್ತುತಿ

ಕರುಣದಿಂದ ಪೊರೆವುದೆನ್ನ
ಪರಮಪುರುಷ ಸೂರ್ಯದೇವ ಪ

ಗಾಲಿಯೊಂದೆ ಇರುವ ರಥವು
ಕಾಲುಕುಂಟನಾದ ಸಾರಥಿ
ಏಳುಕುದುರೆ ಇರಲು ನಡೆವ
ಕಾಲಚಕ್ರ ನಿಯಂತಾರ ೧

ಲೋಕಕೆಲ್ಲ ಕಣ್ಣೆನಿಸುತ
ಭೀಕರಾಂಧಕಾರವನು
ನೂಕಿ ಜಗಕೆಬೆಳಕನೀವ
ಸಾಕಾರ ಪರಬ್ರಹ್ಮ ೨

ಸರ್ವಸೃಷ್ಟಿಕರ್ತನಾಗಿ
ಸರ್ವಸ್ಥಿತಿಗೆ ಕಾರಣನಾಗಿ
ಉರ್ವಿಯೊಳಗೆ ಬೆಳಗುತಿರುವ
ಸರ್ವದೇವ ಚಿತ್ಸ್ವರೂಪ ೩

೬

ಈಶ್ವರಸ್ತುತಿ

ಗಿರಿಶಾ ಗೌರೀಪ್ರಾಣಾಧೀಶ ಜಯ ಜಯ
ದುರಿತ ವಿನಾಶ ಮಹೇಶ ಪ

ದಕ್ಷಯಜ್ಞ ವಿಧ್ವಂಸಕಾರಿ ಸುರ
ಪಕ್ಷಪಾತಿ ಕಾಮಾರಿ ದುಃಖಹರ ೧

ಘೋರಪಾಪ ಸಂದೋಹನಾಶನ
ಭೂರಿ ದಯಾಳೋ ಭೋಗಿಭೂಷಣ ೨

ಈಶಗಿರೀಶ ಧನೇಶ್ವರ ಮಿತ್ರ
ಕಾಶೀಶ್ವರ ಸುರಸನ್ನುತಿ ಪಾತ್ರ ೩

ವಾಸವಾದಿನುತ ದುಷ್ಟಭಯಂಕರ
ವೇಷ ಜಟಾಧರ ಚಂದ್ರಶೇಖರ ೪

ಕಲಭಪ್ರೌಢ ಮಹಾನಾಟ್ಯೇಶ್ವರ
ಅವಿಮುಕ್ತೇಶ್ವರ ಪ್ರಮಥ ಗಣೇಶ್ವರ ೫

ಕಾಳಿಂದೀಪ್ರಿಯ ಕಮಲನಯನಸಖ
ಕಾಲಕಾಲ ಕಾಲಾಗ್ನಿ ಪಂಚಮುಖ ೬

ನೀಲಕಂಠ ನಿಖಿಲಾಮರ ರಕ್ಷಕ
ಫಾಲಚಂದ್ರ ಸಂಸ್ಕೃತಿ ವಿಷಭಕ್ಷಕ ೭

ಶಾಂತಮೂರ್ತಿವರಕಾಂತಿ ಗುಣಪ್ರಿಯ
ಶಾಂತಿದಾಯಕಾ ಶಾಂತ ಸಂಶಯ ೮

ಕುಂಭಜಾತ ನುತನಟನವಿಲಾಸ
ಶಂಭು ಹರ ಚಿದಾಕಾಸ ನಿವಾಸ ೯

ಪರಿಶಿಷ್ಟ

ಶಾಮಸುಂದರವಿಠಲರನ್ನು ಕುರಿತ ಹಾಡುಗಳು

ಶಾಮಸುಂದರವಿಠಲರನ್ನು ಕುರಿತ ಹಾಡುಗಳು

೧

ಜಗನ್ನಾಥ ಗುರೋರ್ದಾಸಂ । ಜಗದಾನಂದಕಾರಕಂ ॥
ಶಾಮಸುಂದರ ದಾಸಾರ್ಯಂ । ವಂದೇ ಸುಜ್ಞಾನದಾಯಕಂ ॥
ಶಾಮಸುಂದರದಾಸರಡಿಗಳ ನೇಮದಿಂ । ನೆನೆ ಮಾನವಾ ।
ಶ್ರೀಮನೋಹರ ವಲಿದು ಪಾಲಿಪ । ನೇಮದಿಂ ಸುಜ್ಞಾನವ ಪ

ಧರೆಯೊಳಗೆ ಬಲ್ಲಟಗಿ ಗ್ರಾಮದೊಳಿರುತ ಮಾನವಿ ದಾಸರ ।
ಕರುಣದಿಂದಂಕಿತ ಪಡೆದು । ಪರಿ ಪರಿಯ ಪದಗಳ ರಚಿಸಿದ ೧

ನಾಟಕ ಬಯಲಾಟಗಳ ಬಹು । ಮಾಟದಿಂದಲಿ ರಚಿಸುತ ॥
ನೋಟಕರಿಗತಿ ಮುಗ್ಧರಂತಿ । ದರ್ಾಟ ಪಾಟಗಳಾಡಿದ ೨

ಆಶುಕವಿತದಿ ವಾಸುದೇವನ । ಲೇಸು ಮೋದವ ಬಡಿಸಿದ ।
ಶ್ರೀಶ ವೆಂಕಟಾಧೀಶನಡಿಗಳ । ತೋಷದಿಂದಲಿ ಸೇರಿದ ೩

– ಶ್ರೀ ರಾಘವೇಂದ್ರಾಚಾರ್ಯ ಗುಡಿಬಲೂರು (ವೆಂಕಟಾಧೀಶ)

೨

ತೆರಳಿದರು ಹರಿಪುರಕೆ ಶಾಮಸುಂದರದಾಸರು ।
ಸಿರಿವರನ ಧೇನಿಸುತ । ಪರಮ ಸಂತೋಷದಲಿ ಪ

ಬಲ್ಲಟಗಿ ಗ್ರಾಮದೊಳು ಬಂದು ನೆಲಸುತ ಸಿರಿ ।
ವಲ್ಲಭನ ದೂತ ಶ್ರೀ ಹನುಮಂತನ ॥
ಚೆಲ್ವಮೂರ್ತಿಯ ನಿಲಿಸಿ ಮೂರು ಕಾಲದಿ ಸೇವೆ
ಸಲ್ಲಿಸುತಲಾನಂದ ಪಡುತಿಪ್ಪರಿಂದ । ೧

ಧರೆಯೊಳಗೆ ಮೆರೆಯುತಿಹ ಮಾನವಿಪುರ ನಿಲಯ ।
ಧರೆನಾಥ ದಾಸಾರ್ಯರತಿ ಕರುಣದಿಂದ ।
ಹರಿನಾಮ ಸುಧೆಯನ್ನು ಪದ ಸುಳಾದಿಗಳಿಂದ ।
ಬರೆದುಣಿಸಿ ಸುಜನರಿಗೆ ನಿಜಮಾರ್ಗ ತೋರಿ ೨

ಮರುತ ಮತ ತತ್ವಗಳ ಸುಲಭದಿಂ ತಿಳಿಸುತಲಿ
ದುರ್ಮುಖಿ ಸಂವತ್ಸರದಿ ವೈಶಾಖ ಶುದ್ಧ
ವರ ನವಮಿ ದಿನ ದಿವ್ಯಲಯ ಚಿಂತನೆಯ ಮಾಡಿ
ಸಿರಿ ಪದುಮನಾಭನನು ಮನದೊಳಗೆ ನೆನೆದು ೩

– ಉಕ್ಕಲಿ ಕುಪ್ಪೆರಾವ ಲಿಂಗಸೂಗೂರು (ಪದುಮನಾಭ)

೩

ಕಾಯೊ ಶಾಮಸುಂದರ ದಾಸಾರ್ಯ ಕವಿವರ ಪ

ಮಾಯವಾದಿಗಳ ಹಲ್ಲು ಮುರಿದ । ವಾಯುಮತ ।
ಸಾಗರಕೆ ಮೀನನೆ । ನೋಯಲಾರೆನೋ ಭವವ ।
ಗೆಲುವ ಉಪಾಯವ ತೋರಿಸೋ ವರ್ತುಲಾರ್ಯನೆ ೧

ಮಾನವಿಯೋಳ್ ಜನಿಸಿ ಶಾಮಾಚಾರ್ಯಸುತನಾಗಿ । ಮಾನವೀಶರ
ವಲಿಸಿ ಹರಿಚರಿತೆ ಸುಧಾ ಸಾರ । ಪಾನಮತ್ತನು ಎಂದೆನಿಸಿ
ಜ್ಞಾನಪುಂಜನನೆನಿಸಿ । ಏನು ಅರಿಯದ ಮನುಜರಂದದಿ
ಹೀನ ಜನರಿಗೆ ತೋರಿ ಧರೆಯೊಳು । ಜಾನಕೀಶನ
ಬಿಂಬಕ್ರಿಯಗಳ । ಧ್ಯಾನ ಮಾಡುತ ಮೆರೆದ ಗುರುವರ ೧

ಕವಿತದಿ ಚತುರ ರತ್ನನಾ ಸ್ತುತಿಸಿ ತೋರಿಸೆ ।
ರವಿಯನೋಡಿಸಲು ಯತ್ನ । ಭೇದಜ್ಞಾನ ಜಿತ್ನ ।
ಅವನಿಯೊಳು ನೀ ಮಾಡು ಎನ್ನಲಿ ।
ದಿವಿಜ ಯತಿಗಳ ದಾಸವರ್ಯರ । ಕವನ ತರತಮ
ಸ್ತುತಿಗಳ ರಚಿಸುತಾ । ಸವಿದು ಸವಿ ನೀಡಿದ ಮಹಾತ್ಮನೇ ೨

ಹಿಂದೆ ಎನ್ನನು ಕರೆದು ।ಅಂಧಕಿಯಲ್ಲಿರೆ ।
ತಂದೆ ನೀ ಹರುಷ ಸುರಿದು
ಬಲ್ಲಟಗಿ ಸದನಕೆ । ಅಂದು ಎನ್ನನು ಕರದೊಯ್ದು ।
ಸಂದ ನಾನಾ ಜನ್ಮ
ವೃಂದಘ ಬೆಂದು ಪೋಗಲು ಹರಿಕಥಾಮೃತ ಸಂಧಿ
ಪೂರ್ವೋತ್ತರದ ಸಾರವ । ಕಂದ ಪಠಿಸಾನಂದವೆಂದೆ ೩

ಆವ ಜನ್ಮದ ಸುಕೃತವೋ । ತ್ವತ್ವಾದ ಸಂಗವು ।
ಗೋವಕಾವನ ದಯವು । ಅದಕಿಂತ ಅಧಿಕವು ॥
ಭಾವ ಶುದ್ಧಿಯೊಳಿದನು । ಪೇಳಿದೆ । ಶ್ರೀವಧು ।
ವಲ್ಲಭನ ಗುಣಗಳ । ದೇವಿ ಭಾರತಿ ಪ್ರಿಯನ ॥
ಮತದಲಿ । ಠಾವು ತೋರಿಸಿ ಸ್ತುತಿಗಳ ನುಡಿಸಿದೆ ೪

ದುಷ್ಟವದನ ವತ್ಸರದಿ ವೈಶಾಖ ಶುದ್ಧದ । ಅಷ್ಟಮಿ ।
ಮರುದಿನ ಶುಕ್ರವಾರದಿ ಶುಕ್ರವಾರದಿ ।
ಔತ್ಕೃಷ್ಟ ಉತ್ತರಾಯಣದಿ । ಭವತಾಪ ॥
ಮೋಹದಿ ಬಿಟ್ಟು ದ್ವಾದಶಪುಂಡ್ರವ ಇಟ್ಟು ।
ಶ್ರೀಲಕುಮೀಶನಂಘ್ರಿಯ ಥಿಟ್ಟ ಧ್ಯಾನಿಸಿ ಲಯವ
ಚಿಂತಿಸಿ । ಪುಟ್ಟಿ ಎನ್ನನು ಅಗಲಿ ಹರಿಪಾದಾ
ಪಟ್ಟಣವ ನೀ ಸೇರಿದಾತನೇ ೫

– ಶ್ರೀ ರಾಘವೇಂದ್ರಾಚಾರ್ಯಕುರ್ಡಿ (ಶ್ರೀಲಕುಮೀಶ)

೪

ತೆರಳಿದರು ತೆರಳಿದರು ಹರಿಯ ಪುರಕೆ
ಪುರ ಬಲ್ಲಟಗಿಯ ವರಕವಿ ಶಾಮಸುಂದರರು ಪ

ವೀರವೈಷ್ಣವರಲ್ಲಿ ಜನಿಸುತಲಿ ಮಾನವಿಯ ಧಾರುಣಿಪ
ದಾಸರ ಒಲಿಮೆ ಪಡೆದು । ಈರಮತ ತತ್ವಗಳಪಾರ
ಮಹಿಮೆಗಳ ಚಾರು ಪದ ಪದ್ಯದಿಂ ಸಾರಿ ನಲಿದವರು ೧

ಮೂಕ ಬಧಿರರ ತೆರದಿ ಲೋಕಕ್ಕೆ ತೋರುತಲಿ ।
ಕಾಕುವೃತ್ತಿಗಳನ್ನು ನೂಕಿ ಮೆಟ್ಟಿ । ಈ ಕುಂಭಿನಿಯೊಳು ಸಾಕೆಂದು
ತ್ವರಿತದಲಿ । ಕಾಕೋದರಾಗ್ರಜನ ನಾಮ ಘರ್ಜನೆಗೈದು ೨

ದುರ್ಮುಖ ಸಂವತ್ಸರದಿ ವೃಷಭಮಾಸದ ಶುಕ್ಲ ಮೂರು ತಿಥಿ
ಶುಕ್ರವಾರದ ಹಗಲು ನಿರ್ಮಲಾನಂದದಿ ಲಯವನ್ನು
ಚಿಂತಿಸುತ ಭರ್ಮಪಿತ ಅಭಿನವ ಪ್ರಾಣೇಶವಿಠಲನ್ನ ನೆನೆಯುತಲಿ ೩

– ಹನುಮಂತರಾಯ ಅರ್ಚಕರು ಲಿಂಗಸೂಗೂರು
(ಅಭಿನವ ಪ್ರಾಣೇಶವಿಠಲ)

೫

ವಂದಿಸುವೆ ವರ್ತುಳಾಚಾರ್ಯ ಕೋವಿದಗೆ ಪ

ವಂದಿಸುವೆ ಶ್ರೀ ಶಾಮಸುಂದರಾಭಿದಗೆ ಅ.ಪ

ಪ್ರಾಚೀನರಂತೆ ಅರ್ವಾಚೀನರೊಳಗೆ ಕಾ ।
ವ್ಯಾಚಾರ್ಯನೆನಿಸಿ ದ್ವಂದ್ವಾಚರಣೆಯೋಳ್ ।
ನೀಚೋತ್ತಮಾಂತರ ವಿವೇಚಿಸುತ ವಿಷ್ಣು ನಾ ।
ರಾಚನಂತರ್ಯಾಮಿ ಲೋಚಕರಿಗೆ ೧

ವೇದ ವೇದಾಂತ ವೈಷ್ಣವ ತಂತ್ರ ರಹಸ್ಯ
ಸಾಧಿಸಿರೆ ಗುರುಮುಖದಿ ಪ್ರಾಜ್ಞನ್ಮದಿ ॥
ಆ ದಿವ್ಯ ಗುರು ಮುಖೋದ್ಗೀತ ತತ್ವಾಮೃತವ ।
ನೀ ದಯದೊಳೆರೆವೆ ಸುಬೋಧ ವಾಣಿಯಲಿ ೨

ಮಾನವೀ ಗುರುಪದ ಪ್ರಸೂನ ಷಟ್ಚರಣ ಕವಿ
ಭಾನು ಹೃದ್ಯಾನವದ್ಯಾಭಿಮನ್ಯು
ಪ್ರಾಣಪ್ರಿಯ ತಂದೆವೆಂಕಟೇಶವಿಠಲನ್ನ ಪದ
ರೇಣಿನವನಿವನೆಂದು ಸುಮುಖನಾಗೋ ೩

– ತಂದೆ ವೆಂಕಟೇಶವಿಠಲ : ಚಿತ್ರದುರ್ಗ

೬

ಶಾಮಸುಂದರ ದಾಸರು ಹರಿಪುರಕೆ ಇಂದು
ಪ್ರೇಮದಿ ತೆರಳಿದರು ಶ್ರೀಹರಿಯ ಸ್ಮರಿಸುತ
ಕಾಮಿತ ಕೊಡುವವರು ಮೋದ ಪಡಿಸುವರು ಪ

ಭೂಮಿಪತಿ ದಾಸಾರ್ಯರನು ಬಲು ।
ಪ್ರೇಮದಿಂದಲಿ ಸೇವೆಗೈಯುತ
ಶಾಮಸುಂದರನೆಂದು ಅಂಕಿತ ನೇಮದಿಂ ಸ್ವಪ್ನದಲಿ ಪಡೆದ ಅ.ಪ

ಪ್ರಾಣದೇವನ ಮೂರ್ತಿಯ ಬಲ್ಲಟಗಿ ಗ್ರಾಮ ।
ಸ್ಥಾನದೊಳಗೆ ಪೂಜೆಯಗೈಯುತ್ತ ಮೋದದಿ ॥
ಧ್ಯಾನ ಮಾಡಿದ ಸುಪ್ರಿಯ ವರ್ತುಳಾಚಾರ್ಯ ॥
ಶ್ರೀನಿವಾಸನ ಕರುಣ ಪಡೆದಿಹ । ಮಾನವಿ ನಿಲಯಾಖ್ಯ ।
ರಾಜ್ಞದಿ ಕ್ಷೋಣಿಯೊಳು ನಿಜತತ್ವ ಬೀರುತ ದೀನ ಜನರನು
ಪೊರೆದ ವರ ಗುರು ೧

ಹರಿಮತಸಾರವನು ಭರದಿಂದಲನುದಿನ
ಗರೆಯುತ ಮೋದವನು ಧರೆಯೊಳು ಚರಿಸುತ
ನರಹರಿಯ ಭಕುತರನು ತ್ವರಿತ ಸಲಹಿದನು
ಬರೆದು ಪಾಡುತ ಪದ ಸುಳಾದಿಯ ತರ ತಮದ
ತತ್ವವನು ಬೋಧಿಸಿ । ಮುರಹರನ ಚರಣಕರ್ಪಿಸಿ
ವರಕವಿಗಳೆಂದೆನಿಸಿ ಮೆರೆದ ೨

ಹರಿಮತಲಾಂಛನದಿ ಶೋಭಿತ ಮುದದಿ
ದುರ್ಮುಖಿ ವತ್ಸರದಿ ವೈಶಾಖ ಶುದ್ಧದಿ
ಎರಡೇಳನೆ ದಿನದಿ ಶುಕ್ರವಾಸರದಿ

ಪರಮ ಸಂತೋಷದಲಿ ಪ್ರಾಣವ । ಇರಿಸಿ ನಾಶಿಕ ।
ಮಧ್ಯದಲಿ ಮುರ । ಹರನ ಧೇನಿಸಿ ಲಯವ ಚಿಂತಿಸಿ ।
ವರದವಿಠಲನ ಭಕ್ತಿ ಶ್ರೇಷ್ಠ ೩

– ಶ್ರೀನಿವಾಸದಾಸರು (ಸೀಮಾಮ) ಲಿಂಗಸೂಗೂರು (ವರದವಿಠಲ)

೭

ಸಾರಿದರು ಹರಿಕಥಾ ಸಾರವನು ಧರೆಯೊಳಗೆ ।
ಬೀರಿದರು ವರಭಾಗವತರ ಮನೆ ಮನೆಗೆ ಪ

ಮಾನವೀ ರಾಯರ ಮೌನದಿಂದಲಿ ಮನದಿ ಧ್ಯಾನಿಸುತ
ಚರಣದಿ ತನುಮನವರ್ಪಿಸಿ ಅ.ಪ

ಜ್ಞಾನ ನಿಧಿ ಸಿರಿ ಶಾಮಸುಂದರನ ಅಂಕಿತದಿ
ಕೊರವಿ ಪ್ರಾಣೇಶನೊಲಿಸಿದನೆ ೧

ಅನನ್ಯ ಭಕುತಿಲಿ ಅರ್ಥಿಲಿ ಬಲ್ಲಟಗಿ ।
ವರ್ತುಳಾಚಾರ್ಯರ ಪಾದ ಅರ್ತಿಯಿಂದಲಿ
ಮೂರಾವರ್ತಿ ಭಜಿಸೋ ॥
ಕರ್ತು ಶ್ರೀಹರಿ ಕೀರ್ತನೆಗಳನೆ ರಚಿಸಿ ।
ಕೀರ್ತಿ ಪಡೆದರು ತಾವು ಧಾತ್ರಿಯೊಳಗೆ ೨

ಮಂದಿಯೊಳಗೆ ನಮ್ಮ ಮುಂದೆ ।
ಸುಳಿದಾಡಿದರು ಒಂದು ತಿಳಿಯಲಿಲ್ಲ ॥
ಮಂದಭಾಗ್ಯರಿಗೆ ಛಂದಾಗಿ ಇವರ ಕೃತ
ಪದ ಸುಳಾದಿಗಳನ್ನ ಒಂದೆ ಮನದಿ ಭಜಿಸೆ ಶ್ರೀರಂಗನೊಲಿವ ೩

– ಕುರಕುಂದಿಗ್ರಾಮದ ದಾಸರು

೮

ಹರಿಕಥಾಮೃತ ವಕ್ತಾರಃ
ಪರಮಾನುಗ್ರಹ ಸೂನುವೇ
ವರಕವಿ ಪಂಡಿತಾಚಾರ್ಯ ನಮೋ ನಮಃ

ವಂದಿಸುವೆ ಗುರುಶಾಮಸುಂದರ ಕವಿಗೆ ।
ಮಂದಭಾಗ್ಯನ ಕರುಣೆಯಿಂದ ಕಾಪಾಡೆಂದು ॥
ತಂದೆ ತಾಯಿಯು ನೀನೆ । ಬಂಧು ಬಳಗವು ನೀನೆ ।
ಛಂದಾಗಿ ಕೈಪಿಡಿದು ಕಾಯ್ವ ಗುರು ನೀನೆ ।
ತಂದೆ ವೆಂಕಟೇಶಪ್ರಿಯ ವರ್ತುಳಾಚಾರ್ಯ
ಅಂಧಪುರದಾರ್ಯ ಕವಿ ಗುಂಡಾಚಾರ್ಯರಿಗೆ ೧

ಕಾಮಕ್ರೋಧವಿಜೇತ । ಭೂಮಿಪ ದಾಸರ ಪ್ರೀತ ।
ಶಾಮಸುಂದರನ ಗುಣ ರೂಪ ವರ್ಣನೆಯಾ ॥
ನೇಮದಲಿ ಮರುತ ಮತಕನುಸಾರ ರಚಿಸುತ್ತ ।
ಪಾಮರನಂತೆ ನೀ ಕಂಡೆ ವರಕವಿ ಗೇಯಾ ೨

ನಾನು ನನ್ನದು ಎಂಬ ಹೀನ ಗುಣಗಳ ಬಿಡಿಸೋ ।
ತಾಮಸಾದಿ ಆರು ದುರ್ಗುಣಗಳ ಅಳಿಸೋ ॥
ಶ್ರೀಹರಿ ಸರ್ವೋತ್ತಮನೆಂಬ ಸು ।
ಜ್ಞಾನವನು ಸ್ಥಿರಗೊಳಿಸಿ ಮಾನವನ ಮಾಡಯ್ಯೋ ॥ ೩

ಸೃಷ್ಟಿ ಸ್ಥಿತಿಲಯಕೆ ಕಾರಣ ಕರ್ತ ಹರಿ ಎಂಬ ।
ಶ್ರೇಷ್ಠ ತತ್ವವ ಸ್ಪಷ್ಟ ಮನದಟ್ಟು ಮಾಡಿ ॥
ದುಷ್ಟ ಶಿಕ್ಷಣ ಶಿಷ್ಟ ಪಾಲನೆಗೋಸುಗ ।
ಹತ್ತಾವತಾರ ತಾಳಿದನ ಭಕ್ತಾಗ್ರಣೀ ೪

ತಂದೆಯಲಿ ಶಾಮಸುಂದರನ ನೀ ಕಂಡೆ ।
ರಂಗೋಲಿ ದಾಸರನುಗ್ರಹ ಪಡದೇ ॥
ಮಂದಭಾಗ್ಯನಾದ ಎನ್ನ ಮೊರೆ ಕೇಳಿ ನೀ ।
ಇಂದಿರೇಶ ವಿಜಯಸಾರಥಿಯ ತೋರಿಸಿದೆ
ವಂದಿಸುವೆ ಗುರುಶಾಮಸುಂದರ ಕವಿಗೇ ೫

– ಕಿಷನರಾವ ದೇಸಾಯಿ ಮರಕಟುದಿನ್ನಿ (ವಿಜಯಸಾರಥಿ)

೯

ಸ್ತುತಿಸಿರೆ ಅನುದಿನಾ । ಹಿತದಿ ನೀಡ್ವ ಗುರುಗಳ ಪ

ಮಾನವಿಯ ಸನಿಹದಿ । ಬಲ್ಲಟಗಿ ಗ್ರಾಮದಿ । ಅನಿಲಶಾಸ್ತ್ರ
ಪ್ರೇಮದಿ । ನೆನೆವ ದಯಾವಾರಿಧಿ ೧

ಧಾರುಣಿಪ ದಾಸರ । ಕಾರುಣ್ಯಕೆ ಪಾತ್ರರ । ಧಾರುಣಿಯೋಳ್
ಮಂದರಂತೆ । ತೋರ್ವ ಜ್ಞಾನಶೀಲರ ೨

ಹರಿಕಥಾಮೃತ ಕವನವ । ಅರಿತು ಸುಖವ ಪಡೆಯುವ ।
ಗರೆದು ಜ್ಞಾನಾಮೃತವ । ಪೊರೆದ ಛಾತ್ರ ನಿವಹವ ೩

ಒಡನೆಯ ಹರಿಕಥೆ । ಸಡಗರದಲಿ ಪೊಗಳಿದ ।
ತಡೆಯದೇ ಪದಗಳ । ಬಿಡದೆ ಮಾಡ್ವ ದ್ವಿಜರನ ೪

ಶಾಮಸುಂಧರ ನಾಮದಿ । ಹೇಮೋದರಪಿತನಡಿ ।
ಪ್ರೇಮದಿ ಕೊಂಡಾಡಿದ । ಕೋಮಲ ಮನವುಳ್ಳವರ ೫

ಮಾನವಿ ಶ್ರೀರಾಯರ । ಸ್ಥಾನದಿಂ ಬಂದೆವೆನಲು । ಮಾನ್ಯ
ಶ್ರೀರಂಗ ಇವರ್ಗೆ । ತನ್ನ ದರ್ಶನ ನೀಡಿದ ೬

ಲಕುಮಿಪ್ರಿಯನ ಸ್ತೋತ್ರವ । ಭಕುತಿಲಿ ನಿತ್ಯ ।
ತುತಿಪರ । ಲೋಕದ ಪಾಮರಿಗೆ । ಮೂಕನಂತೆ ತೋರ್ದರ ೭

– ಲಕ್ಷ್ಮಿಬಾಯಿ ನರಸಿಂಹಾಚಾರ್ ಕುಷ್ಟಗಿ (ಲಕುಮಿ ಪ್ರಿಯ)

೧೦

ನಿರುತದಿ ಪಿಡಿ ಕೈಯ ಗುರುವರ್ತುಳಾರ್ಯ ॥
ವರಕವಿಯು ಎಂದು ಪಡೆದೆ ಖ್ಯಾತಿಯ ಪ

ನೆರೆನಂಬಿ ತುತಿಪರ ಕೇಳುತಲಿ ಪೊರೆಯ
ಹೇ ಮಾಡು ನೀ ದಯ ಅ.ಪ

ಮೋದಮುನಿ ಮತ ಮರ್ಮವರಿದಾತಾ ।
ಭೇದ ಬೋಧಕ ಕವನ ವಿರಚಿತ ।
ಸಾಧುಸಂತರ ವರ್ಗದೊಳು ನಿರುತ ನೀ ಸೇರಿದಾತಾ ೧

ಒಂದು ಮೂರವತಾರ ಧರಿಸಿದನೆ । ಬಂದು
ನಿಂದಿಹ ಸ್ತಂಭ ಮಂದಿರನೆ । ತಂದೆ
ಯೆಂದು ಭಾವಿಸುತ ನೀನೆ । ಹೇ ವರ್ಣಿಸಿದವನೆ ೨

ಮಾನವಿಯ ಧಾಮರಾ ಪ್ರೇಮದಾಸೂನು ।
ನೀನೆಂದು ಭಾವಿಸಿ ಸ್ತುತಿಪ ಜನರನ್ನು ತಾನೆ
ಶ್ರೀಕರವಿಠಲ ಪೊರೆಯುವನು । ವರ ಕಾಮಧೇನು ೩

– ಕಲ್ಲೂರು ಮಹಾಲಕ್ಷ್ಮಿಯ ಅರ್ಚಕರು (ಶ್ರೀಕರವಿಠಲ)

೧೧

ಲೇಸಾಗಿ ನಮಿಸುವೆ । ಶ್ರೀ ಶಾಮಸುಂದರ ದಾಸರಾಯ
ಶ್ರೀಶನ ಭಜಿಸಲು । ಮೀಸಲ ಮನ ಕೊಡು ದಾಸರಾಯ ಪ.

ಸ್ಮರಿಪೆ ನಾನನುದಿನ । ದುರಿತ ನಿವಾರಿಸೊ ದಾಸರಾಯ
ಧರೆನಾಥ ದಾಸರ । ಕರುಣವ ಪಡೆದಂಥ ದಾಸರಾಯ ೧

ಶಿಷ್ಟರ ಸಂಗದೊಳಿಟ್ಟೆನ್ನ ಪಾಲಿಸೊ ದಾಸರಾಯ
ನಿಷ್ಟೆಯಲಿ ತುತಿಸುವೆ ಶ್ರೇಷ್ಟ ವಂಶೋದ್ಭವ ದಾಸರಾಯ ॥ ೨

ಪೊಂದಿದೆ ತವ ಪಾದ ಬಂಧನ ಬಿಡಿಸಯ್ಯ ದಾಸರಾಯ ॥
ತಂದೆ ಶ್ರೀರಾಮನ ಛಂದದಿ ಭಜಿಸುವ ದಾಸರಾಯ ೩

ಕಾಮಿತಾರ್ಥವನಿತ್ತು । ಪ್ರೇಮದಿಪೊರೆ ಎನ್ನ ದಾಸರಾಯ ।
ಭೂಮಿಜೆ ಪತಿ ಶ್ರೀ ಶಾಮಸುಂದರ ಪ್ರೀತ ದಾಸರಾಯ ೪

ಪದ್ಮನಾಭನ ಪಾದ । ಪೊದ್ದಿಕೊಂಡಿರುವಣತೆ । ದಾಸರಾಯ
ಶುದ್ಧ ಪಂಥವ ತೋರಿ ಉದ್ಧರಿಸಬೇಕೆನ್ನ ದಾಸರಾಯ ೫

– ಉಕ್ಕಲ ಕುಪ್ಪೆರಾವ ಲಿಂಗಸೂಗೂರು (ಪದುಮನಾಭ)
ಶ್ರೀ ಪದುಮನಾಭದಾಸರು

ಅನುಬಂಧಗಳು

೧. ಕಠಿಣ ಶಬ್ದಗಳ ಅರ್ಥ

೨. ಟಿಪ್ಪಣಿಗಳು

೩. ಕೀರ್ತನೆಗಳ ಅಕಾರಾದಿ

ಅನುಬಂಧ-೧

೧. ಕಠಿಣ ಶಬ್ದಗಳ ಅರ್ಥ

(ಅ) ಶಾಮಸುಂದರವಿಠಲರ ಕೀರ್ತನೆಗಳು

ಅ–ಆ

ಅಂಡಜ – ಗರುಡ
ಅಂಬರಾಧಿಪ – ದೇವತೆಗಳ ಒಡೆಯ
ಅಂಬಿಕಾ – ಪಾರ್ವತಿ
ಅಂಭೃಣಿ – ಸರಸ್ವತಿ, ಲಕ್ಷ್ಮಿ
ಅನಿಶ – ಮಾರುತಿ
ಅವಲಬೋಧಮತಿ – ವಾಯುಮತಿ
ಆಖಾ – ಇಲಿ

ಇ–ಈ

ಇಂದ್ರಕ್ಷೇತ್ರ – ಉಡುಪಿ
ಇಂದಿರ – ಲಕ್ಷ್ಮಿ
ಇಂದುಕುಲ – ಚಂದ್ರವಂಶ
ಈರಮತ – ದ್ವೈತಮತ

ಎ–ಐ

ಎಲರುಣಿ – ಹಾವು
ಐಕೂರಾರ್ಯ– ಐಕೂರು ನರಸಿಂಹಾ–ಚಾರ್ಯರು

ಒ–ಓ

ಒಂದೂರು – ಐಕೂರು
ಒಂದೆಂದು
ನಡಿ – ಅದ್ವೈತ ತತ್ವ ಒಂದೆರಡು
ಭರಿತ – ಭಕ್ತಿ, ಜ್ಞಾನ, ವೈರಾಗ್ಯ ಮೂರು ಭರಿತ
ಒಂದೆಂಟು
ಸದ್ಭಕ್ತಿ – ನವವಿಧ ಭಕ್ತಿ
ಒಂದೆರಡು
ರೂ – ವಿಶ್ವ, ತೇಕಸ್, ಪ್ರಾಜ್ಞ ರೂಪಗಳು
ಓರಂತೆ – ಒಂದೇ ಪ್ರಕಾರ

ಕ–ಖ

ಕಂತುಹರ – ಈಶ್ವರ
ಕುಂಭಿಣಿಜೆ – ಸೀತೆ
ಕಾರ್ಪರ – ಕೊಪದಪರ
ಕೀಶ – ವಾಯು
ಕೋಲತನಯೆ – ವರಹದೇವರ ಮಗಳು ತುಂಗಾನದಿ
ಖೇಟ – ಗರುಡ

ಗ–ಘ

ಗಥವಾಹನ – ವಾಯುದೇವರು
ಗರ – ವಿಷ
ಗೋನದತರು – ಹೋಂದದಮರ
ಘೋಟಕವದನ – ಹಯವದನ

ಚ–ಛ

ಚತುರಾನನ – ನಾಲ್ಕು ಮುಖವುಳ್ಳ ಬ್ರಹ್ಮ
ಚೈಲಭೂಕ್ಷಿತ – ಚರ್ಮದ ಉಡುಗೆ ತೊಟ್ಟ, ಈಶ್ವರ
ಛಳಿಗಿರೀಶ – ಹಿಮವಂತರಾಜ

ಜ–ಝ

ಜಂಭಾರಿ – ದೇವೇಂದ್ರ
ಜವನಾರಿ – ಕಾಲಕಾಲ, ಈಶ್ವರ
ಝಂಜಾವಾತ – ವಾಯುದೇವರು

ತ–ಥ

ತಟಿತ – ಮಿಂಚು
ತರುಚರವರ – ಕಪಿಶ್ರೇಷ್ಠ, ಹನುಮಂತ
ತ್ರಿದಶಾಲಯಪತಿ – ದೇವೇಂದ್ರ

ದ–ಧ

ದಶಕಂಧರ – ರಾವಣ
ದಶವರೂಥಜ – ದಶರಥನ ಮಗ, ಶ್ರೀರಾಮ
ದೇವತಟಿನಿ – ದೇವನದಿ, ಗಂಗೆ
ಧನುಸ್ಸು – ಬಿಲ್ಲು

ನ

ನಂದಜ – ನಂದಕುಮಾರ, ಕೃಷ್ಣ
ನಂದಿಶ್ಯಂದನ – ನಂದಿವಾಹನ, ಈಶ್ವರ
ನಡುಮನಿ ಸುತ – ಮಧ್ಯಗೇಹಸುತ, ಮಧ್ವಮುನಿ
ನಳಿವಾರಿ – ಚಂದ್ರ
ನಾಕೇಶ – ಇಂದ್ರ

ಪ–ಫ

ಪಂಚಾನನ – ಐದು ಮುಖವುಳ್ಳ, ಈಶ್ವರ
ಪಕ್ಷೀಂದ್ರ – ಗರುಡ
ಪಾವಕ – ಅಗ್ನಿ
ಪಿನಾಕಿ – ಈಶ್ವರ
ಪೋತ – ಮಗ
ಫಾಲನೇತ್ರ – ಹಣೆಯಲ್ಲಿ ಕಣ್ಣುಳ್ಳ ಈಶ್ವರ

ಬ–ಭ

ಬಂಡಿ ಅಸುರ – ಹಿಡಂಬ
ಬಂಡಿಕಾಲ – ಶಕಟಾಸುರ
ಬಂಡಿನಡಿಸಿ – ಸಾರಥಿಯಾಗಿ
ಬಧಿರ – ಕಿವುಡ
ಭೇಶ – ವೈದ್ಯ

ಮ

ಮಂದಾಕಿನಿ – ದೇವನದಿ, ಗಂಗೆ
ಮಂದಜಾಸನಪಿತ – ಬ್ರಹ್ಮನ ತಂದೆ, ವಿಷ್ಣು
ಮಕರಧ್ವಜ – ಮನ್ಮಥ
ಮದಡ – ಮಂದ, ಅಜ್ಞಾನಿ
ಮೂರೆರಡುಲಕ್ಷ – ಆರುಲಕ್ಷ

ಯ

ಯಕುಲವಂದನ – ಕೃಷ್ಣ
ಯಾಮ – ಜಾವ

ರ

ರಕುತಾಂಬರ - ಕೆಂಪುವಸ್ತ್ರ, ಪೀತಾಂಬರ
ರಜನೀಶ - ಚಂದ್ರ
ರವಿಜ - ಶನಿದೇವರು
ರವಿಸುತ - ಯಮ

ವ

ವೃಂದಾಕರ ಪತಿ - ದೇವೇಂದ್ರ
ವಸುದಿಶ - ಎಂಟು ದಿಕ್ಕುಗಳು
ವನಧಿ - ಸಮುದ್ರ
ವರಹಜೆ - ವರಹದೇವರ ಕೋರೆಯಿಂದ ಜನಿಸಿದ ತುಂಗಾನದಿ
ವಾಮದೇವ - ಈಶ್ವರ
ವಾಮಾಕ್ಷಿ - ಲಕ್ಷ್ಮಿ
ವ್ಯಾಳ - ಸರ್ಪ
ವ್ಯೂಮಕೇಶ - ಈಶ್ವರ
ವಿಜಿತ - ಗೆದ್ದ
ವಿರಂಚಿ - ಬ್ರಹ್ಮ

ಶ

ಶ್ಯಂದನ - ರಥ, ವಾಹನ
ಶತಮಖ - ದೇವೇಂದ್ರ
ಶಾತಕುಂಭೋಧರ - ಬ್ರಹ್ಮ
ಶುಕ - ಒಬ್ಬ ಋಷಿ

ಸ

ಸಂಜೆಚರರಾರಿ - ನಿಶಾಚರರ ವೈರಿ, ಮಾರುತಿ
ಸಿಂಧು ಬಂಧನ - ಶ್ರೀರಾಮ
ಸಿಂಧುರ - ಆನೆ
ಸಿಂಧೂರ - ಕೆಂಪುಬಣ್ಣ
ಸಹ್ಲಾದ - ಪ್ರಹ್ಲಾದರಾಜರ ತಮ್ಮ
ಅಂಜಶ - ಜಗನ್ನಾಥದಾಸರು
ಸಾಸಿರಾನನ - ಆದಿಶೇಷ
ಸಾಮಗಾನ ಪ್ರಿಯ - ಸಂಗೀತಲೋಲ, ಶ್ರೀಕೃಷ್ಣ
ಸಾಮಜ - ಆನೆ
ಸುತ್ರಾಮ - ದೇವೇಂದ್ರ
ಸುಖತೀರಥರು - ಆನಂದತೀರ್ಥರು, ಮಧ್ವಮುನಿ
ಸ್ವೇತವಾಹನ - ಅರ್ಜುನ
ಸ್ತಂಭಸಂಭವ - ಕಂಭದಲ್ಲಿ ಜನಿಸಿದ, ನರಸಿಂಹದೇವರು
ಸ್ಥಾಣಂ - ಈಶ್ವರ

ಹ

ಹತ್ತೆರಡು ಮತ್ತೈದುಗಾತ್ರ - ಊರ್ಧ್ವಪುಂಡ್ರ ನಾಮ (ಮುದ್ರೆ)
ಹೃತಾಶನ - ಅಗ್ನಿ
ಹೇನೋದರ - ಬ್ರಹ್ಮ
ಹೇರಂಬ - ವಿನಾಯಕ

(ಆ) ಶ್ರೀ ತಿಮ್ಮಪ್ಪದಾಸರು ಹಾಗೂ ಇತರ ಹರಿದಾಸರ ಕೀರ್ತನೆಗಳಿಗೆ ಸಂಬಂಧಿಸಿದಂತೆ

ಅಘ – ಪಾಪ
ಅಡಸಿ – ಆಕ್ರಮಿಸಿ
ಅನೃತ – ಕೆಟ್ಟದ್ದು
ಅಟ್ಟಿಸು – ತೋರು, ಕಾಣು
ಅಳವಡು – ಹೊಂದು, ಸೇರು, ಕೂಡು
ಅಸಿತ – ಕಪ್ಪಾದ
ಆಗುಪೋಗು – ಆಗುಹೋಗುಗಳು, ಸಂಗತಿಗಳು
ಆನತ – ಬೇಡುವವ
ಆರ್ಜಿತ – ಗಳಿಕೆ
ಆಢ್ಯ – ಬಲ, ಶಕ್ತಿ
ಇಚ್ಛಿತ – ಮನಸ್ಸಿಗೆ ಬಂದಿದ್ದು
ಉರ – ಎದೆ
ಉಪಾದೇಯ – ಸ್ವೀಕಾರಾರ್ಹ
ಊರು – ತೊಡೆ
ಒಗುಮಿಗೆ – ಅಧಿಕ
ಕಂದರ್ಪ – ಮನ್ಮಥ
ಕಡ – ಸಾಲ
ಕಳಾವಿಶೇಷ – ಕಲೆ, ಬೆಳಕು, ಪ್ರಭೆ
ಕದಪು – ಕೆನ್ನೆ
ಕಾಂಚಿಯಧಾಮ – ಒಡವೆ
ಕಾಕೋದರ – ನೀಚ
ಕಾಪಥ – ಕೆಟ್ಟದಾರಿ
ಕಾಸು – ಹಣ
ಕುಂದಣ – ಚಿನ್ನ
ಕುಂಭಿನಿ – ಭೂಮಿ, ಪ್ರಪಂಚ
ಕೇಳಿಕೆ – ನಾಟಕ
ಖಗ – ಪಕ್ಷಿ
ಗಳಹು – ಪ್ರಲಾಪ
ಗುರುದಾರಗಾಮಿದೋಷ – ?
ಗೇಹ – ದೇಹ
ಗುಪಿತ – ಗೋಪ್ಯ
ಚೋಹ – ಚೋದ್ಯ, ಅಚ್ಚರಿ
ಜಂಘ – ತೊಡೆ
ಜಾನು – ಮಂಡಿ
ಜಾಯೆ – ಪತ್ನಿ
ತೊತ್ತಳದುಳಿ – ನಾಶ
ದಿಂಡುಗೆಡ – ಅಡ್ಡಬೀಳು
ದುರಿತ – ಕಷ್ಟ
ದೂರ್ವೆ – ಗರಿಕೆಹುಲ್ಲು
ನತಜನ – ಭಕ್ತಜನ
ನಾಕ – ಸ್ವರ್ಗ
ನೀಕರಿಸು – ತಿರಸ್ಕರಿಸು
ಪಾರ್ವ – ಬ್ರಾಹ್ಮಣ
ಪ್ರಾಕು – ಹೀನ
ಪೊಡಮಡು – ನಮಸ್ಕರಿಸು
ಬನ್ನ – ಕಷ್ಟ
ಬಾಯಬಡುಕ – ವಾಚಾಳಿ
ಬಿನಗು – ಅಲ್ಪ, ಕೀಳು
ಬೇಳುವೆ – ಭಿಕ್ಷೆ
ಮಂದಲಿಸು – ಆದರಿಸು
ಮಜ್ಜೆ – ಕೊಬ್ಬು (ಫ್ಯಾಟ್)
ಮನಗುತೆ – ಶ್ರದ್ಧೆ, ಮನಸ್ಸಿನಲ್ಲಿ ತುಡಿಕೆ
ಮಶಕ – ಸೊಳ್ಳೆ

ಮಕ್ಷುಕ – ನೊಣ
ಮಾಗಾಯಿ – ಕಿವಿಯ ಆಭರಣ (ಮಾವಿನಕಾಯಿ-ಯಾಕಾರದ)
ಮುಂಗೆಡು – ಹಾಳಾಗು
ಮುರಜ – ವಾದ್ಯ
ಮೂಕೊರೆಯ
ಮಂಡರು – ಮೂರ್ಖರು
ಮೂಳ – ದಡ್ಡ
ರೇಣುಜಾಲ – ಧೂಳು
ವಾಂತ್ಯಾಶನ – ವಾಂತಿಮಾಡಿದುದು
ವಿದುಗಳು – ಪಂಡಿತರು
ವಿಭು – ಒಡೆಯ
ವಿಕಳ – ಚಂಚಲ
ವ್ರಜಜ – ಗುಂಪು, ಸಮೂಹ
ವ್ಯಾಳ – ಹಾವು, ಮೋಸಗಾರ, ಮದಿಸಿದ ಆನೆ
ಸಂಜನಿಸು – ಸೇರು, ಒಟ್ಟಾಗು, ಗುಂಪು
ಸಂಸೃತಿ – ಸಂಸಾರ
ಸಂದಣಿ – ಗುಂಪು
ಸಂಕ್ಲೇಶ – ಕಷ್ಟ
ಸಟೆ – ಸುಳ್ಳು
ಸತ್ರಬುದ್ಧಿ – ಧರ್ಮಬುದ್ಧಿ (?)
ಸಿಂಜಿತ – ಒಡವೆ
ಸೂಕರ – ಹಂದಿ, ವರಾಹ
ಹದನು – ಸಂಗತಿ
ಹವಣ – ರೀತಿ, ಕಾರ್ಯ
ಹಲ್ಲಣ – ಜೀನು

(ಇ) ತಿಮ್ಮಪ್ಪದಾಸರ ಪೂಜಾವಿಧಾನದ ಕೀರ್ತನೆಗಳು

ಅಘ – ಪಾಪ
ಅಂಕ – ತೊಡೆ
ಅದ್ದು – ಮುಳುಗಿಸು
ಅನವರತ – ಯಾವಾಗಲೂ
ಅನುತಪಿಸು – ಮರುಗು
ಅನುಕಟ್ಟಿ – ಸರಿಯಾಗಿ ಕಟ್ಟಿ
ಅನುಲೇಪ – ತೊಡೆತ
ಅಪವರ್ಗಧಸಿಗೆ – ಮೋಕ್ಷದ ಹಂಚಿಕೆ
ಅಸದಳ – ಅಸಾಧ್ಯ
ಅಭೀಷ್ಟ – ಬಯಕೆ
ಅಮರಿಸು – ಸೇರು
ಅಂಸ – ಹೆಗಲು
ಅರ್ಭಕತ್ವ – ಮಗುತನ, ಶೈಶವ
ಅವನಿ – ಧರಣಿ, ಭೂಮಿ
ಅಳಿ – ನಾಶವಾಗು
ಅಹಿ – ಹಾವು
ಇಂದುಬಿಂಬ – ಚಂದ್ರಬಿಂಬ
ಇನ – ಸೂರ್ಯ
ಇಷ್ಟಾರ್ಥ ಧೇನು – ಕಾಮಧೇನು
ಈಕ್ಷಣ – ನೋಟ
ಉಡುಪತಿ – ಚಂದ್ರ
ಉತ್ಸಂಗ – ತೊಡೆಯ ಮೇಲೆ
ಉದ್ಗಾತೃ – ಸಾಮವೇದವನ್ನು ಗಾನ ಮಾಡುವವನು
ಉನ್ನಿಸು – ಮುಳುಗಿಸು

ಏಣಕುಣಕ - ಜಿಂಕೆಯ ಮರಿ
ಒಗುಮಿಗೆ - ಹೆಚ್ಚಿಗೆ
ಒಗುವ - ಉಕ್ಕುವ, ಸೂಸುವ
ಒಡಬ - ಹೋಲಿಸಿ
ಕಂಜಾಕ್ಷ - ಕಮಲಾಕ್ಷ
ಕಣ್ದೆರವು - ಕಣ್ತೆರೆದು
ಕನಲು - ಕೆರಳು
ಕರಣ - ದಶೇಂದ್ರಿಯ
ಕರೋಟಿ - ತಲೆಬುರುಡೆಯ ಮಾಲೆ, ಸ್ಥಳ
ಕ್ರಮುಕ - ಅಡಕೆ
ಕಾಕೋದರ - ಕಿವಿಯಲ್ಲಿ ಹಾವನ್ನು ಒಡೆವೆಯಾಗಿ ಉಳ್ಳವನು
ಕಾಕೋಲ - ಹಾವನ್ನು ಕೊರಳ ಒಡವೆಯಾಗಿ ಉಳ್ಳವನೆ
ಕಾಮಿತಾರ್ಥ - ಇಷ್ಟಾರ್ಥ
ಕಾಳಾಗು - ಕಂಗೆಡು
ಕೀಳ್ವಾಯ - ಕೆಳಗಿನ, ನೆಲಮಟ್ಟ
ಕುಂದಣ - ಅಪ್ಪಟ ಚಿನ್ನ
ಕೈಟಭರಿಪು - ಕೈಟಭನೆಂಬ ರಾಕ್ಷಸನ ಶತ್ರು, ವಿಷ್ಣು
ಕೋಳ್ವಿಡಿ - ಸೆರೆಯ ಹಿಡಿತ
ಕೋಳ್ವೋದ - ಸೆರೆ ಸಿಕ್ಕಿದ
ಗಂಭೀರ ರಸ - ಗಂಭೀರಭಾವ
ಚಳೆಯ - ಚಿಮುಕಿಸಿ
ಚಿದ್ರೂಪ - ಚೈತನ್ಯ ಸ್ವರೂಪ
ಚಿನುಮಯ - ಚೈತನ್ಯಪೂರ್ಣ ಚಿತ್ ಸ್ವರೂಪದಿಂದ ಕೂಡಿದ
ಜಂಘ - ಮೊಣಕಾಲು
ಜಾಂಬೂನದ - ಚಿನ್ನ
ಜಾನು - ಮಂಡಿ
ಠಾವು - ಎಡೆ, ಸ್ಥಳ, ತೆರವು
ತಂದ್ರಿ - ಆಲಸ್ಯ, ಜಡತೆ
ತನು - ದೇಹ, ಒಡಲು
ತನಯ - ಮಗ
ತರುಬಿ - ತಬ್ಬಿಕೊಂಡು, ಅಪ್ಪಿಕೊಂಡು
ತೀವಿಕೊಂಡು - ತುಂಬಿಕೊಂಡು, ವ್ಯಾಪಿಸಿಕೊಂಡು
ದರ - ಸೀಳು
ದಿನಮಣಿ - ಸೂರ್ಯ
ದೇವಕ್ಕಳು - ದೇವರುಗಳು
ದ್ರಷ್ಟಾರ - ಕವಿ, ಕ್ರಾಂತದರ್ಶಿ
ನಸಿಯದೆ - ಸವೆದುಹೋಗದೆ, ಜೀರ್ಣವಾಗದೆ
ನಾಗವಲ್ಲಿ - ವೀಳ್ಯದೆಲೆ
ನಾಗಾರಿ - ಗರುಡ
ನಾಗೋತ್ತರೀಯ - ಶಿವ, ನಾಗರಹಾವನ್ನು ಉತ್ತರೀಯವಾಗುಳ್ಳವ
ನ್ಯಾಸ - ಪ್ರತಿಷ್ಠಾಪನೆ
ನಿರ್ಜರ - ಮುಪ್ಪಿಲ್ಲದವನು
ನಿಷ್ಕೃತಿ - ಪ್ರಾಯಶ್ಚಿತ್ತ
ನಿಷೂದನ - ಕೊಂದವ
ನಿಹಿತಸುಖ - ಶಾಶ್ವತಸುಖ
ನೆಗ್ಗು - ಪುಡಿಗುಟ್ಟು
ನೆರೆ - ಚೆನ್ನಾಗಿ
ಪದರ - ಒಂದಾದ ಮೇಲೆ ಒಂದು

ಪರ್ಣ - ಎಲೆ
ಪರಾಕು - ಎಚ್ಚರಿಕೆ
ಪ್ರಣವ - ಓಂಕಾರ
ಪ್ರಾಕ್ - ಹಿಂದಿನ
ಪುರ - ದೇಹ
ಪುರ್ಬ - ಹುಬ್ಬು
ಪುಸಿ - ಮಿಥ್ಯ, ಸುಳ್ಳು
ಪೊಡಮಡು - ನಮಸ್ಕರಿಸು
ಬೀಜನಾಮ - ಓಂಕಾರ
ಬೋಧವಿಗ್ರಹ - ಜ್ಞಾನಸ್ವರೂಪ
ಭಣಿತೆ - ಮಾತು, ಹೇಳಿಕೆ
ಭರ್ಜಿಸು - ನಾಶ ಮಾಡು
ಭಸಿತ - ವಿಭೂತಿ
ಮಂಜೀರ - ಕಾಲಿನ ಒಡವೆ
ಮಂತ್ರಿಸು - ಮಂತ್ರಾನುಷ್ಠಾನ
ಮಾರ್ಜಿಸಿ - ಪವಿತ್ರ ಮಾಡಿ
ಮೂಡೆ - ದಿಂಬು
ಮೂಲಾಧಾರ ಚಕ್ರ - ಪ್ರಕೃತಿಯ ನೆಲೆ
ಮೂಲಾವಿದ್ಯೆ - ಮಾಯೆ
ಮೋಕ್ಷದ - ಮೋಕ್ಷವನ್ನು ಕೊಡುವವನು
ರಜ್ಜು - ಹಗ್ಗ
ರಾಗ ಐಹಿಕ ಪ್ರೇಮ, ಆಸೆ
ರುಚಿರ - ಕಾಂತಿ
ವಟಪತ್ರ - ಆಲದೆಲೆ
ವತ್ಸಪಾಲ - ಗೋಪಾಲ, ಕೃಷ್ಣ

ವನಜಾರಿದರ - ವಿಷ್ಣು
ವಸು - ನಿಜವಾದ ಐಶ್ವರ್ಯ
ವಿಕಳ - ಲೋಪ
ವಿಭವ - ಘನತೆ
ವಿಪ್ರ - ಬ್ರಾಹ್ಮಣ
ವೇದವಿತ್ - ವೇದಗಳನ್ನು ಬಲ್ಲವನು
ವ್ಯವಹಾರ ದೆಸೆ - ಆಚರಣೆಯ ಕ್ರಮ
ಶ್ರುತಿವಿಧಿತ - ವೇದಗಳು ವಿಧಿಸಿರುವ ಸಂಪ್ರದಾಯ
ಷಟಚಕ್ರ - ಯೋಗಪರಿಭಾಷೆ
ಸಂವಿದ್ರೂಪ - ಪರಮಜ್ಞಾನಿ, ಸರ್ವಜ್ಞ
ಸಜ್ಜಿಸು - ಸಜ್ಜುಗೊಳಿಸಿ
ಸಸಿನೆಬಿಡೆ - ನೇರವಾಗುವುದಕ್ಕೆ
ಸಾಂಬರಾಲಂಕಾರ - ವಸ್ತ್ರಭೂಷಣ
ಸಿಂಧು - ಸಮುದ್ರ
ಸುಷುಮ್ನ - ವೇಗ ಮಾಡಿ
ಸೊಮ್ಮು - ಒಡವೆ
ಸೊಲ್ಲು - ಮಾತು
ಸೋವು - ಅಪ್ಪಿಕೊಂಡು ಬರು
ಹದನು - ಸಂಗತಿ
ಹಸರು - ಪುಸರಿಸು, ಹರಡು
ಹಸಗೆಡಿಸು - ಒಪ್ಪಗೆಡಿಸು
ಹುರಿಬಲೆ - ಹಗ್ಗದ ಬಲೆ
ಹೊಂಕಡ - ಕಡಿಮೆಯಾಗದ, ಕುಗ್ಗದ
ಹೊಂದು - ಮರಣ
ಹೊಗು - ಪ್ರವೇಶಿಸು
ಹೊದ್ದಿ - ಸೇರಿ, ಹೊಂದಿ
ಹೊರೆ - ಕಾಪಾಡು

ಅನುಬಂಧ-೨

ಟಿಪ್ಪಣಿಗಳು

(೧) ಶಾಮಸುಂದರವಿಠಲದಾಸರು ಕೀರ್ತನೆಗಳು

ಇಳಿಯ ವರೂಥ – ತ್ರಿಪುರಾಂತಕ

ಪರಮೇಶ್ವರನು ಭೂಮಿಯನ್ನು ರಥವನ್ನಾಗಿ ಮಾಡಿಕೊಂಡು ತ್ರಿಪುರಗಳನ್ನು ಸಂಹಾರ ಮಾಡಿದ ಅದ್ಭುತವಾದ ಕಥೆ ಭಾರತ – ಭಾಗವತ – ಮತ್ಸ್ಯಪುರಾಣಗಳಲ್ಲಿ ವರ್ಣಿತವಾಗಿದೆ.

ತಾರಕಾಸುರನ ವಧೆಯ ನಂತರ ಆತನ ಮೂವ್ವರು ಮಕ್ಕಳಾದ ತಾರಕ್ಷ, ಕಮಲಾಕ್ಷ ಮತ್ತು ವಿದ್ಯುನ್ಮಾಲಿಗಳು ತಾವು ಮೂರು ಪುರಗಳನ್ನು ಕಟ್ಟಿಕೊಂಡು ಭೂಮ್ಯಾಕಾಶದಲ್ಲಿ ಸಂಚರಿಸುವಂತೆಯೂ ಮತ್ತು ತಮಗೆ ಯಾರಿಂದಲೂ ಮರಣವಾಗದಂತೆಯೂ ಬ್ರಹ್ಮನಿಂದ ವರ ಪಡೆದರು. ಆಗ ಬ್ರಹ್ಮನು ಅವರು ದೇವವನ್ನು ಮರೆತು, ಲೋಕಕಂಟಕರಾಗಿ ವರ್ತಿಸಿದಾಗ ಒಬ್ಬನೇ ಮೂರು ಪುರಗಳನ್ನು ಒಂದೆಡೆ ಸೇರಿಸಿ, ಒಂದೇ ಬಾಣದಿಂದ ಏಕಕಾಲದಲ್ಲಿ ಹೊಡೆಯಲು ಮರಣವುಂಟಾಗುವುದೆಂದು ಅವರಿಗೆ ಎಚ್ಚರಿಸಿದನು. ಮಯನು ನಿರ್ಮಿಸಿಕೊಟ್ಟ ಕಬ್ಬಿಣ, ಬೆಳ್ಳಿ ಮತ್ತು ಬಂಗಾರದ ಲೋಹಗಳ ಪುರಗಳಲ್ಲಿ ರಾಕ್ಷಸರು ಪುರಪ್ರವೇಶ ಮಾಡಿ ಕೆಲಕಾಲ ಸುಖಭೋಗಗಳನ್ನು ಅನುಭವಿಸಿದರು. ನಂತರ ಅವರು ಬ್ರಹ್ಮನು ಹೇಳಿದ ಮಾತನ್ನು ನಿರ್ಲಕ್ಷಿಸಿ ಸ್ವೇಚ್ಛೆಯಾಗಿ ವರ್ತಿಸುತ್ತ ಮೂರು ಲೋಕಗಳಿಗೆ ಕಂಟಕರಾಗಲು ದೇವತೆಗಳು ಶಿವನಲ್ಲಿ ಮೊರೆಹೋದರು.

ಆಗ ಶಿವನು ಭೂಮಿಯನ್ನು ರಥವನ್ನಾಗಿ ಮಾಡಿ, ನಾಲ್ಕು ವೇದಗಳನ್ನು ನಾಲ್ಕು ಕುದುರೆಗಳಾಗಿ ರಥಕ್ಕೆ ಹೂಡಿ, ಮಂದರಪರ್ವತವನ್ನು ಬಿಲ್ಲಾಗಿ, ಸಮುದ್ರವನ್ನು ಬತ್ತಳಿಕೆಯಾಗಿ, ಆದಿಶೇಷನನ್ನು ಬಿಲ್ಲಿನ ಹೆದೆಯಾಗಿ, ವಿಷ್ಣುವನ್ನು ಬಾಣವಾಗಿ ಮಾಡಿಕೊಂಡು ಕಾರ್ತಿಕ ಶುಕ್ಲ ಪುಷ್ಯ ನಕ್ಷತ್ರಯೋಗದಲ್ಲಿ ಮೂರೂ ಪುರಗಳು ಒಂದೆಡೆ ಸೇರಿದ ಸಂಧಿಯನ್ನು ಸಾಧಿಸಿ, ಒಂದೇ ಬಾಣದಿಂದ ಒಂದೇ ಹೊಡೆತಕ್ಕೆ ಪುರಗಳನ್ನು ಸುಟ್ಟು ಹಾಕಿದನು. ತ್ರಿಪುರಗಳನ್ನು

ಸಂಹಾರಮಾಡಿದ ಶಿವನು ತ್ರಿಪುರಾಂತಕನೆನಿಸಿಕೊಂಡನು. ತ್ರಿಪುರ ಸಂಹಾರವು ಶಿವನ ಪಂಚವಿಂಶತಿ ಲೀಲೆಗಳಲ್ಲಿ ಒಂದು.

ಪಂಚಭೇದಜ್ಞಾನ

ಶ್ರೀಮದ್ವಾಚಾರ್ಯರಿಂದ ಸ್ಥಾಪಿತವಾದ ದ್ವೈತಮತದ ಸಿದ್ಧಾಂತ ಪ್ರಮೇಯಗಳಲ್ಲಿ 'ಭಿನ್ನಾ ಜೀವಗಣಾ' – "ಜೀವಗಣಗಳು ಭಿನ್ನವಾದವು" ಎಂಬುದು ಒಂದು. ಅವು ಐದು ಭೇದಗಳು. ಅವುಗಳೆಂದರೆ, ೧. ಜೀವ–ಜೀವ ಭೇದ, ೨. ಜಡ–ಜಡ ಭೇದ ೩. ಜೀವಜಡ ಭೇದ. ೪. ಜೀವ–ಈಶಗೆ ಭೇದ ಮತ್ತು ೫. ಜಡ–ಈಶಗೆ ಭೇದ. ಈ ಭೇದಗಳು ತಾರತಮ್ಯದಿಂದುಂಟಾಗುತ್ತವೆ. ಈ ತಾರತಮ್ಯ ಭೇದವು ಜೀವರಾಶಿಯಿಂದ ಪರಮಾತ್ಮನವರೆಗೂ ಕಾಣುವುದು. ಇದರಿಂದ ಉಚ್ಚ–ನೀಚ ಭಾವಗಳುಂಟಾಗುತ್ತವೆ. ಜೀವರಾಶಿಗಳು ಹಾಗೂ ಬ್ರಹ್ಮಾದಿದೇವತೆಗಳು ಸರ್ವೋತ್ತಮನಾದ ಹರಿಯ ಸಮಾನವಾಗಲಾರರು. ಏನಿದ್ದರೂ ಅವರೆಲ್ಲರು ಪರಮಾತ್ಮನ ಸೇವಕರು. ಶ್ರೀ ವ್ಯಾಸರಾಯರು "ಭಿನ್ನಾ ಜೀವಗಣಾ ಹರೇರನುಚಾರಾ ನೀಚೋಚ್ಚಭಾವಂಗತಾಃ" ಎಂಬ ಉಕ್ತಿಯು ಪಂಚಭೇದ ಜ್ಞಾನವನ್ನು ವಿವರಿಸುತ್ತದೆ.

ಕಾಲಯವನ

ಶ್ರೀ ಕೃಷ್ಣನ ವೈರಿ. ಕೃಷ್ಣ ಈತನನ್ನು ಉಪಾಯವಾಗಿ ಮುಚಕುಂದನಿಂದ ಕೊಲ್ಲಿಸುತ್ತಾನೆ. ಯಾದವರ ಪುರೋಹಿತ ಗರ್ಗಮುನಿಯು ಒಮ್ಮೆ ಯಾದವರಿಂದ ಅಪಹಾಸ್ಯಗೊಳ್ಳಲು, ತನಗಾದ ಅಪಮಾನದ ಪ್ರತಿಯಾಗಿ ಅವನು ಯಾದವ ವಂಶವನ್ನು ನಾಶಮಾಡುವ ಮಗನನ್ನು ಪಡೆಯಲು ಶಿವನಿಂದ ವರ ಪಡೆದ. ಕಾಲಾಂತರದಲ್ಲಿ, ಆತನಿಗೆ ಕಾಲನೆಂಬ ಮಗ ಜನಿಸಿದ. ಯಾದವರ ವೈರಿಯಾದ ಯವನ ರಾಜನು ಗರ್ಗಮುನಿಯನ್ನು ಮತ್ತು ಕಾಲನನ್ನು ತನ್ನ ರಾಜ್ಯದಲ್ಲಿ ಸಂರಕ್ಷಿಸಿದನು. ಶಿವನ ವರದಿಂದ ಹುಟ್ಟಿದ ಕಾಲಯವನು ಬಹು ಬಲಶಾಲಿಯಾದ. ಅವನು ಯಾದವರಿಗೆ ಅನೇಕ ರೀತಿಯ ತೊಂದರೆಗಳನ್ನು ಕೊಟ್ಟ. ಒಮ್ಮೆ ದ್ವಾರಕೆಯವರೆಗೂ ಹೋಗಿ ಯಾದವರಲ್ಲಿ ಭೀತಿಯುಂಟುಮಾಡಿದ. ಶ್ರೀ ಕೃಷ್ಣನು ಅವನನ್ನು ಎದುರಿಸಲು ಸಾಧ್ಯವಾಗಲಿಲ್ಲ. ಒಮ್ಮೆ ಶ್ರೀ ಕೃಷ್ಣ ಕಾಲಯವನಿಂದ ಸೋತು ಓಡುತ್ತ ಮುಚಕುಂದನು ಇದ್ದ ಗವಿಯೊಳಗೆ ಹೋಗಿ ಮಲಗಿದ್ದ ಮುಚಕುಂದನ ಹಿಂದೆ ಅಡಗಿ ಕುಳಿತ. ಶ್ರೀಕೃಷ್ಣನನ್ನು ಬೆನ್ನಟ್ಟಿಕೊಂಡು ಬಂದ ಕಾಲಯವನ ಗವಿಯನ್ನು ಹೊಕ್ಕು, ಮಲಗಿದ್ದ ಮುಚಕುಂದನನ್ನು ಕೃಷ್ಣನೆಂದು ಭ್ರಮಿಸಿ, ಆತನನ್ನು ತನ್ನ ಎಡಗಾಲಿನಿಂದ ಒದ್ದ. ನಿದ್ದೆಯಿಂದ ಎಚ್ಚೆತ್ತ ಮುಚಕುಂದನ ದೃಷ್ಟಿಘಾತದಿಂದ ಕಾಲಯವನ ಸುಟ್ಟು ಬೂದಿಯಾದ. ಅಲ್ಲಿಗೆ ಶ್ರೀ ಕೃಷ್ಣನ ಒಬ್ಬ ವೈರಿ ನಾಶವಾದ.

ನಿನ್ನ ನಾಮದ ಭೂಸುರ

ಪತಿತನಾದ ಬ್ರಾಹ್ಮಣ ಅಜಾಮಿಳನು ಪ್ರಾಣೋತ್ತಮಣದ ಸಮಯಕ್ಕೆ ತನ್ನ ಮಗ ನಾರಾಯಣನನ್ನು ಕರೆದು, ನಾರಾಯಣ ನಾಮಸ್ಮರಣೆಯಿಂದ ಸದ್ಗತಿ ಪಡೆದ ಕಥೆ ಭಾಗವತದಲ್ಲಿ ವರ್ಣಿಸಲಾಗಿದೆ. ಕನ್ಯಾಕುಜ್ಜದಲ್ಲಿದ್ದ ಅಜಾಮಿಳನೆಂಬ ವಿಪ್ರನು ತಂದೆತಾಯಿಗಳನ್ನು, ಧರ್ಮಪತ್ನಿಯನ್ನು ತೊರೆದು, ಪರಸ್ತ್ರೀಯಲ್ಲಿ ಗಮಿಸಿ ಅನೇಕ ರೀತಿಯ ದುರಾಚಾರದಿಂದ ಧರ್ಮಭ್ರಷ್ಟನಾದನು. ತಾನು ಸಾಯುವ ಕಾಲಕ್ಕೆ ತನ್ನ ಮಗನಾದ ನಾರಾಯಣನನ್ನು ಕರೆದ. ನಾರಾಯಣನ ನಾಮಸ್ಮರಣೆ ಮಾತ್ರದಿಂದ ಅಜಾಮಿಳನು ಸದ್ಗತಿ ಹೊಂದಿದನು.

ಹಿತ್ತಲ ಬಣವಿ ಬುಡದಲಿ

ವರದೇಂದ್ರರು ದೇಹತ್ಯಾಗ ಮಾಡಿದ ಮೇಲೆ ಪ್ರಾಣೇಶದಾಸರ ಮನೆಯ ಹಿತಲಿನ ಬಣವಿಯ ಕೆಳಗೆ ತುಳಸಿಯ ರೂಪದಲ್ಲಿ ಕಾಣಿಸಿಕೊಳ್ಳುವುದನ್ನು ದಾಸರ ಸ್ವಪ್ನದಲ್ಲಿ ಕಂಡ ಘಟನೆ ಇಂದಿಗೂ ನಿಜವಾಗಿ ತೋರಿದೆ.

ಶ್ರೀ ರಾಯರ ಮದದ ಪರಂಪರೆಯ ವರದೇಂದ್ರ ಯತಿಗಳು ಮಾನವಿಯ ದಾಸರಿಗೆ ಬಹು ಪ್ರಿಯಪಾತ್ರರು. ಲಿಂಗಸುಗೂರಿನ ಪ್ರಾಣೇಶದಾಸರು ಅವರಿಂದ ಅನುಗ್ರಹಿತರಾಗಿದ್ದರು. ವರೇಂದ್ರರು ಪೂಣೆ ನಗರದಲ್ಲಿ ದೇಹತ್ಯಾಗ ಮಾಡಿದ ನಂತರ ಲಿಂಗಸೂಗೂರಿನ ದಾಸವರೇಣ್ಯರಿಗೆ ಅನುಗ್ರಹಿಸಲೆಂದು ಪ್ರಾಣೇಶದಾಸರ ಹಿತ್ತಲದಲ್ಲಿ ಬಣವಿಯ ಕೆಳಗೆ ತುಳಸಿರೂಪದಲ್ಲಿ ತಾವು ಪ್ರಕಟವಾಗಿರುವುದಾಗಿ ಪ್ರಾಣೇಶದಾಸರ ಸ್ವಪ್ನದಲ್ಲಿ ತಮ್ಮ ಕುರುಹನ್ನು ತಿಳಿಸಿದರು. ತಮಗಾದ ಸ್ವಪ್ನದ ವಿಚಾರವನ್ನು ಜನರಿಗೆ ತಿಳಿಸಿದ ಪ್ರಾಣೇಶದಾಸರು ಮನೆಯ ಹಿತ್ತಲದ ಬಣವಿಯನ್ನು ತೆಗೆಸಿ ನೋಡಲಾಗಿ ಸ್ವಪ್ನದಲ್ಲಿ ತಿಳಿಸಿದ ಪ್ರಕಾರ ಅಲ್ಲಿ ತುಳಸಿಗಿಡ ಕಾಣಿಸಿತು. ಸಂತೋಷಭರಿತರಾದ ಪ್ರಾಣೇಶದಾಸರು ಆ ಸ್ಥಳದಲ್ಲಿ ಬೃಂದಾವನವನ್ನು ಕಟ್ಟಿಸಿ ಪೂಜಾವಿಧಿಗಳನ್ನು ಕೈಕೊಂಡರು. ಯತಿಗಳ ವೃಂದಾವನ ಕಸಬಾ ಲಿಂಗಸುಗೂರಿನಲ್ಲಿ ಇಂದಿಗೂ ಕಾಣಬಹುದು. ಸಂತೆಕೆಲೂರಿನ ವರದೇಶವಿಠಲರು ತಮ್ಮದೊಂದು ಸುಳಾದಿಯಲ್ಲಿ ಈ ಸ್ವಪ್ನಮಹಿಮೆಯನ್ನು ಹೇಳಿರುವರು.

ವರದೇಂದ್ರರು ಕನ್ನಡದಲ್ಲಿ ಹಲವು ಕೃತಿಗಳನ್ನು ರಚಿಸಿರುವುದಾಗಿ ಹೇಳುತ್ತಾರೆ. ರಾಯಚೂರು ಜಿಲ್ಲೆಯ ಹರಿದಾಸಸಾಹಿತ್ಯ ಪ್ರಕಟಣೆಗೆ ವರದೇಂದ್ರಯತಿಗಳ ಪ್ರೇರಣೆ

ಅನುಪಮವಾಗಿದೆ. ದಾಸಸಾಹಿತ್ಯದ ಸಂಶೋಧಕರಾದ ಗೊರೆಬಾಳ ಹನುಮಂತರಾಯರು ಲಿಂಗಸೂಗೂರಿನಲ್ಲಿ "ವರದೇಂದ್ರ ಗ್ರಂಥ ಪ್ರಕಾಶನ" ವನ್ನು ಸ್ಥಾಪಿಸಿ, ಆ ಮೂಲಕ ದಾಸಸಾಹಿತ್ಯದ ಅನೇಕ ಕೃತಿಗಳನ್ನು ಪ್ರಕಟಿಸಿರುವರು.

ರೋಮರೋಮ ವ್ಯೋಮಕೇಶ

ಪ್ರತಿ ರೋಮಗಳಲ್ಲಿ ಈಶ್ವರಾಂಶವನು ಹೊಂದಿದವನು ವಾಯುಪುತ್ರ. ವಾಯುದೇವರಿಗೂ ಮಹಾದೇವರಿಗೂ ಅಂಶರೂಪದಲ್ಲಿ ಸಂಬಂಧವಿದೆ. ಅಂತೆಯೆ ಮಧ್ವಮತದಲ್ಲಿ ಈಶ್ವರನು ಮನೋನಿಯಾಮಕನಾಗಿ ಭಜಿಸಿಕೊಳ್ಳುತ್ತಾನೆ.

ಭೀಮಸೇನಾಚಾರ್ಯರು

ಕಾರ್ಪುರಕ್ಷೇತ್ರ – ಕೊಪ್ಪರದ ನರಸಿಂಹದೇವರ ಅರ್ಚಕರಾದ ಭೀಮಸೇನಾಚಾರ್ಯರು ಶಾಮಸುಂದರದಾಸರ ಸಮಕಾಲೀನರು. ದೈವಭಕ್ತರಾದ ಅವರು ಸಂಸ್ಕೃತ ಮತ್ತು ಕನ್ನಡ ಭಾಷೆಗಳೆರಡರಲ್ಲಿ ಕೆಲವು ಕೃತಿ ರಚಿಸಿರುವರು. ಅವರು ಹಲವು ಕೀರ್ತನೆಗಳನ್ನು ರಚಿಸಿದ್ದರಿಂದ ಭೀಮಸೇನಾಚಾರ್ಯರು ಹರಿದಾಸರ ಪರಂಪರೆಗೆ ಸೇರುತ್ತಾರೆ.

ವರದೇಶವಿಠಲರು

ಚಂತೆಕೆಲೂರಿನ ವಕೀಲರಾದ ಹನುಮಂತರಾಯರು 'ವರದೇಶವಿಠಲ' ಅಂಕಿತದಲ್ಲಿ ಹಲವಾರು ಸುಳಾದಿಗಳನ್ನು ಮತ್ತು ಹಾಡುಗಳನ್ನು ರಚಿಸಿದ್ದಾರೆ. ಇವರು ಲಿಂಗಸೂಗೂರಿನ ಪ್ರಾಣೇಶದಾಸರ ಪ್ರಶಿಷ್ಯರಾಗಿದ್ದು, ಶಾಮಸುಂದರದಾಸರ ಸಮಕಾಲೀನರು. ವರದೇಂದ್ರರ ಸ್ವಪ್ನವೃತ್ತಾಂತವನ್ನು ತಮ್ಮ ಒಂದು ಸುಳಾದಿಯಲ್ಲಿ ಬರೆದಿದ್ದಾರೆ.

(೨) ವೆಂಕಟದಾಸರ ಕೀರ್ತನೆಗಳು

೩

ವೆಂಕಟದಾಸರ ವಂಶಸ್ಥರಲ್ಲಿ ಬರುವ ಶ್ರೀಮತಿ ಗೌರಮ್ಮ ಅವರು ನೆನಪಿನಿಂದ ಹೇಳಿದ ಪರಂಪರೆಯ ಹಾಡುಗಳು, ಚಿಕ್ಕನಾಯ್ಕನಹಳ್ಳಿಯಲ್ಲಿರುವ ಗುರುಗಳಾದ ವಾಸುದೇವಾರ್ಯರ

ಆರಾಧನೆಯ ಸಂದರ್ಭದಲ್ಲಿ ನಡೆಯುವ ಪೂಜಾಕಾಲದಲ್ಲಿ ಹಾಡಲಾಗುತ್ತದೆಂದೂ ನಿತ್ಯಪೂಜೆಯ ಸಂದರ್ಭಗಳಲ್ಲೂ ಹಾಡುವ ಸಂಪ್ರದಾಯವಿದೆ ಎಂದೂ ಹೇಳುತ್ತಾರೆ. ಮೊದಲನೆಯ ಹಾಡಿನಲ್ಲಿ ಎಲ್ಲ ದೈವಗಳನ್ನು ಜೊತೆಜೊತೆಯಲ್ಲಿ ಸ್ತುತಿಸಲಾಗಿದೆ. ಯಾವ ನುಡಿಗಳಲ್ಲೂ ಪ್ರಾಸ ಕಂಡುಬರುತ್ತಿಲ್ಲ. ಮೂಲದ ರಚನೆ ಸಾಕಷ್ಟು ಬದಲಾವಣೆಯಾಗಿರುವಂತೆ ತೋರುತ್ತದೆ. ಕೊನೆ ನುಡಿಯ ಕೊನೆಯ ಸಾಲುಗಳು ಅವರ ನೆನಪಿನಲ್ಲಿಲ್ಲವಾದ್ದರಿಂದ ಈ ನುಡಿಯ ಅಂಕಿತವೂ ಸ್ಪಷ್ಟವಾಗುತ್ತಿಲ್ಲ. ಅವರ ನೆನಪಿನಲ್ಲಿ ಈ ಕೃತಿ ವೆಂಕಟದಾಸಾರ್ಯರದ್ದು ಎಂಬುದು ಖಚಿತವಾಗಿರುವ ಹಿನ್ನೆಲೆಯಲ್ಲಿ ವೆಂಕಟದಾಸಾರ್ಯರದ್ದೆಂದು ಪರಿಗಣಿಸಿದೆ.

ತಿಮ್ಮಪ್ಪದಾಸರು ಮತ್ತು ವೆಂಕಟದಾಸರ ಕೃತಿಗಳ ಅಂಕಿತದಲ್ಲಿ ಸ್ವಲ್ಪ ಗೊಂದಲವಿದೆ. ಇಬ್ಬರೂ 'ಚಿಕನಾಗಪುರವಾಸ'ವನ್ನು ಬಳಸಿದ್ದಾರೆ. ಆದರೆ ತಿಮ್ಮಪ್ಪದಾಸರು ಅದರ ಜೊತೆಗೆ 'ತಿರುಪತಿ ವೆಂಕಟ' ಅಂಕಿತವನ್ನು ತಪ್ಪದೆ ತರುತ್ತಾರೆ. ಎಷ್ಟೋ ವೇಳೆ 'ತಿರುಪತಿ ವೆಂಕಟ'ವೊಂದೇ ಬಂದಿದೆ. ಆದ್ದರಿಂದ ತಿಮ್ಮಪ್ಪದಾಸರ ಅಂಕಿತವನ್ನು 'ತಿರುಪತಿ ವೆಂಕಟ'ವೆಂದೂ ಅದಿಲ್ಲದಿರುವ ಕೇವಲ 'ಚಿಕನಾಗಪುರವಾಸ' ಎಂದಷ್ಟೇ ಇರುವ ಅಂಕಿತದ ಕೃತಿಗಳನ್ನು ಮಾತ್ರ ವೆಂಕಟದಾಸರದ್ದೆಂದು ಪರಿಗಣಿಸಲಾಗಿದೆ. ವೆಂಕಟದಾಸರ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಾಗುವವರೆಗೆ 'ಚಿಕನಾಗಪುರವಾಸ' ಅಂಕಿತವನ್ನೇ ವೆಂಕಟದಾಸರದ್ದು ಎಂದು ಪರಿಗಣಿಸುವುದು ಸೂಕ್ತವೆನಿಸುತ್ತಿದೆ.

೪

ಇದೂ ಸಹ ಶ್ರೀಮತಿ ಗೌರಮ್ಮ ಅವರು ನೆನಪಿನಿಂದ ಹೇಳಿದ ಹಾಡು. ನಾಲ್ಕು ನುಡಿಗಳ ಈ ರಚನೆ ಪೂರ್ಣವಾಗಿದ್ದರೂ ಅಂಕಿತ ಸ್ಪಷ್ಟವಿಲ್ಲ. ಆದರೂ ಸಂಪ್ರದಾಯದ ಹೇಳಿಕೆಯ ಆಧಾರದ ಮೇಲೆ ವೆಂಕಟದಾಸರದ್ದೆಂದು ಪರಿಗಣಿಸಿದೆ. ಚಿಕ್ಕನಾಯಕನಹಳ್ಳಿಯಲ್ಲಿ ಗುರುಗಳ ಸಮಾಧಿಯಲ್ಲಿ ನಡೆಯುತ್ತಿದ್ದ ಈಗಲೂ ನಮ್ಮ ಮನೆಗಳಲ್ಲಿ ನಡೆಯುತ್ತಿರುವ ಗುರುಗಳ ಆರಾಧನೆಯ ಕೊನೆಯಲ್ಲಿ ಅಪರಾಧ ಕ್ಷಮಾಪಣೆಯ ಸಂದರ್ಭದಲ್ಲಿ ಇದನ್ನೂ ಹಾಡುತ್ತಿರುವುದಾಗಿ ತಿಳಿಸಿದ್ದಾರೆ.

ಇದರಲ್ಲಿ ವಾಸುದೇವಾರ್ಯರ ಆಧ್ಯಾತ್ಮ ಸಾಧನೆಯ ಮಹಿಮೆ ಮತ್ತು ಭಕ್ತನ ಲೌಕಿಕ ಜೀವನಾಸಕ್ತಿಯ ಸೆಳೆತದಿಂದ ಬಿಡಿಸಿಕೊಳ್ಳಲಾಗದ ತೊಳಲಾಟದ ಸ್ಥಿತಿಯನ್ನು ಇದು ಹೇಳುತ್ತದೆ. ಕೊನೆಯಲ್ಲಿ 'ನರಸಾರ್ಯ ಅಮರಗಿರಿನಿಲಯ' ಎಂದಿರುವುದು ನರಸಾರ್ಯರ

(ಕೃಷ್ಣಯೋಗೀಂದ್ರ–ವಾಸುದೇವಾರ್ಯರ ಶಿಷ್ಯರು)ರ ಸ್ತುತಿಯೋ ಅಥವ ಅವರ ಅಂಕಿತವೋ ತಿಳಿಯುತ್ತಿಲ್ಲ. ನರಸಾರ್ಯರ ಕೆಲವು ಸಂಸ್ಕೃತ ರಚನೆಗಳು ದೊರಕಿದ್ದು ಅವುಗಳಲ್ಲಿ ಬೇರೆ ಅಂಕಿತವಿರುವುದರಿಂದ ಇದನ್ನು ಅವರ ಅಂಕಿತವೆಂದೂ ಹೇಳಬರುವುದಿಲ್ಲ. ಸಂಪ್ರದಾಯದ ಅಭಿಪ್ರಾಯದಂತೆ ಸದ್ಯಕ್ಕೆ ವೆಂಕಟದಾಸರದ್ದೆಂದು ಪರಿಗಣಿಸಿದೆ.

೬

ಗುರು ವಾಸುದೇವಾರ್ಯರಲ್ಲಿ ಶಿಷ್ಯವೃತ್ತಿ ಸ್ವೀಕರಿಸಿರುವ, ಭಕ್ತಜೀವನದ ನಿಷ್ಠೆಯನ್ನು ವ್ಯಕ್ತಪಡಿಸುತ್ತಿರುವ ಪ್ರತಿಜ್ಞಾನರೂಪದಲ್ಲಿ ಈ ಕೃತಿಯಿದೆ.

'ಪರರ ದೂಷಣೆಯ ನಾ ಮಾಡಿದರೆ
ಪರರೊಳು ಬರಿದೆ ದ್ವೇಷವನೆಸಗಿದರು ಮಂದೆ
ಹಿರಿಯರ ವಚನವ ಹಳಿದರು ಸಭೇಯನು
ಚರಿಸಿದರಾಗಲೆನಗೆ ವಿಪ್ರಹತಿ ದೋಷ'

ಎಂಬಂತಹ ಶುದ್ಧಜೀವನನಿಷ್ಠೆಯನ್ನು ಗುರುಗಳೆದುರಲ್ಲಿ ಸ್ವೀಕರಿಸಿದ್ದಾರೆ. 'ಸ್ವರ್ಣಹಸ್ತಿಯ ದೋಷ', 'ಗುರುದಾರಗಾಮಿದೋಷ'ಗಳಂತಹ ವಿಶಿಷ್ಟ ದೋಷಗಳನ್ನೂ ಹೆಸರಿಸಿದ್ದಾರೆ. ಸುರೆಯನ್ನಂಟಿದ ದೋಷದಂತಹ ಸಾಮಾಜಿಕವನ್ನು ಸೂಚಿಸಿದ್ದಾರೆ. ಇಲ್ಲಿ ದಾಸರಿಗಿರುವ ಸಾಮಾಜಿಕಪ್ರಜ್ಞೆ, ನಡವಳಿಕೆಗಳ ಬಗೆಗಿನ ಕಟ್ಟೆಚ್ಚರ ಯಾವುದೇ ಒಬ್ಬ ಹರಿದಾಸರಲ್ಲಿರುವ 'ಭಕ್ತಿನಿಷ್ಠೆ'ಯ ದ್ಯೋತಕವಾಗಿದೆ.

ಎನ್ನ ಜನನಿ ಜನಕರು ನಿನ್ನ ಚರಣದೊ
ಳ್ಚೆನ್ನಾಗಿನಿಂದರು ಸದ್ಗುರುವೆ
ನಿನ್ನವನಾದೆ ನಾನಿಲ್ಲ ಜನಮನ
ಗೆನ್ನುತಿದ್ದರು ರಾಗಾದಿಗಳಾಶೆ ಬಲುಹಯ್ಯ'

ಎಂಬ ನುಡಿ ಇವರ ಜೀವನ ವಿವರದ ಮೇಲೆ ಬೆಳಕು ಚೆಲ್ಲುತ್ತದೆ. ಇವರ ತಂದೆತಾಯಿಗಳು ವಾಸುದೇವಾರ್ಯರ ನಿಷ್ಠಾವಂತ ಶಿಷ್ಯರಾಗಿದ್ದುದರ ಮತ್ತು ಇವರನ್ನು ಶಿಷ್ಯರಾಗಿಸಿದುದರ ಅದರಿಂದ ತಮ್ಮ ಮಗನನ್ನು ಕಳೆದುಕೊಳ್ಳಬೇಕಾಗಿದ್ದುದರ ಪುತ್ರವ್ಯಾಮೋಹದ ತೊಳಲಾಟವನ್ನು ಇದು ಚಿತ್ರಿಸುತ್ತಿದೆ.

ವೆಂಕಟದಾಸರ ಆತ್ಮನಿವೇದನೆ ಕೃತಿಗಳೆಲ್ಲ ಗುರುಗಳಲ್ಲಿ ತೋಡಿಕೊಂಡಿವೆ. ದೇವರಲ್ಲಿ ಮೊರೆಯಿಟ್ಟಿರುವ ಕೃತಿಗಳು ಕಡಮೆ. ಸಾಮಾಜಿಕ ಕೃತಿಗಳಲ್ಲೂ ಗುರುದರ್ಶನದಲ್ಲೇ ಕಂಡಿದ್ದಾರೆ. ಮಾನವ ಜೀವನದ ನಡಾವಳಿಗಳ ಒಳಿತು ಕೆಡುಕುಗಳನ್ನು ಮನಮುಟ್ಟುವಂತೆ ಬಿಡಿಸಿಡುತ್ತಾರೆ.

(೩) ತಿಮ್ಮಪ್ಪದಾಸರು

೧೭

ಚಿಕ್ಕನಾಯ್ಕನಹಳ್ಳಿಯ ವಾಸುದೇವಾರ್ಯರಲ್ಲಿ ಮತ್ತು ಅವರ ರೂಪದಲ್ಲೆ ಕಾಣುವ ಕೃಷ್ಣಯೋಗೀಂದ್ರ ರಾಮಕೃಷ್ಣರ್ಯ, ವೆಂಕಟದಾಸರದಲ್ಲೆ, ಭಗವಂತನನ್ನೆ ಕಾಣುವ ತಿಮ್ಮಪ್ಪದಾಸರು ಆತ್ಮನಿವೇದನೆಯನ್ನು ಅವರಲ್ಲೇ ಮಾಡುತ್ತಾರೆ.

'ಪಾದುಕೆಯೊಳಿಗವಿದು ಪಾವನವ ಮಾಡಿದುದು' ಎಂಬುದು ವಾಸುದೇವಾರ್ಯರ-

ದ್ದೆಂದು ತಲೆಮಾರುಗಳಿಂದ ಬಂದಿರುವ ಪಾದುಕೆಗಳನ್ನು ದೈವಸನ್ನಿಧಿಯಲ್ಲಿಟ್ಟು ನಿತ್ಯಪೂಜೆ ಮಾಡುವ ಸಂಪ್ರದಾಯುವನ್ನು ಹೇಳುತ್ತದೆ. ಇವರ ವಂಶಸ್ಥರಾದ ಎಂ.ವಿ.ಸೀತಾರಾಮಯ್ಯನವರ ಮಗ ಭಾಸ್ಕರ್ ಅವರ ಮನೆಯಲ್ಲಿ ಈ ಪಾದುಕೆಗಳು ಪೂಜೆಗೊಳ್ಳುತ್ತಿರುವುದನ್ನು ನೋಡುಬಹುದು.

'ನೀ ದಯಾದಿ ಮಾತ್ರ ರಾಜದ ಹಾದಿ ತೋರ್ಪಂತೆಸೆದುದು' ಎಂಬ ಸಾಲಿನಲ್ಲಿರುವ ಮಂತ್ರರಾಜನೆಂದರೆ ಅದ್ವೈತ ಸಂಪ್ರದಾಯದಲ್ಲಿ ರೂಢಿಯಿರುವ "ಓಂ ನಮೋ ಭಗವತೆ ವಾಸುದೇವಾಯ' ಎಂಬುದು.

೧೮

ತಿಮ್ಮಪ್ಪದಾಸರು ಆತ್ಮನಿವೇದನೆಯ ಸ್ವರೂಪದ ಕೀರ್ತನೆಗಳಲ್ಲಿ ಅಧಿಕವಾಗಿ ಋಣಬಾಧೆ ಪರಿಹರಿಸುವ ಮೊರೆಯನ್ನೇ ತಂದಿದ್ದಾರೆ. ಅದಕ್ಕಾಗಿ ಅವರು ಪರಿತಪಿಸಿರುವ ರೀತಿ ಅದರಿಂದೊದಗುವ ಕ್ಲೇಶ, ಅದುಳಿದರಾಗುವ ದೋಷ ಇತ್ಯಾದಿಗಳನ್ನು ಅತ್ಯಂತ ವೇದನೀಯವಾಗಿ ದಾಖಲಿಸಿದ್ದಾರೆ. ತಂದೆಯ ಋಣದ ಶಿಲ್ಕು ೨,೧೦೦ರೂ.ಗಳನ್ನು ತಾವು ಹೊರಬೇಕಾಯಿತೆಂದು ಇವರ ಮಕ್ಕಳಾದ ನಾರಾಯಾಣದಾಸರೂ ಒಂದು ಕೀರ್ತನೆಯಲ್ಲಿ ದಾಖಲಿಸುವ ಮೂಲಕ ತಿಮ್ಮಪ್ಪದಾಸರು ಋಣಕ್ಕಾಗಿ ಹೆಣಗಾಡಿರುವುದನ್ನು ದೃಢೀಕರಿಸುತ್ತದೆ.

ಕೊನೆಯುವರೆಗೂ ಈ ಋಣಬಾಧೆ ನಿವಾರಣೆಗಾಗಿಯೇ ತೊಳಲಾಡಿರುವುದನ್ನು ಸಮರ್ಥಿಸುತ್ತದೆ.

ಇಲ್ಲಿಂದ ಮುಂದಿನ ಐದಾರು ಕೀರ್ತನೆಗಳಲ್ಲಿ ಇದನ್ನು ಕಾಣಬಹುದು. ಈ ಕೀರ್ತನೆಯಲ್ಲಿ 'ಜನಿಸಿದ ಮೂರು ವರುಷಕೆ ನಿನ್ನಯ ದಾಸನೆನುತ ಮಾತುಳನಿಂದ ನಿಡಿಸಿದೆ' ಎಂಬುದು ಇವರ ಜೀವನ ಸಂಗತಿಯ ಮೇಲೆ ಬೆಳಕು ಚೆಲ್ಲುತ್ತದೆ. ದಾಸರು ಸಣ್ಣವಯಸ್ಸಿನಲ್ಲೇ ತಂದೆತಾಯಿಗಳಿಂದ ದೂವಾಗಿರುವ ಮೂರನೇ ವರ್ಷದಿಂದಲೇ ಹರಿದಾಸರೂ ಮಾವಂದಿರೂ ಆಗಿದ್ದ ವೆಂಕಟದಾಸರ ಆಶ್ರಯದಲ್ಲಿ ಬೆಳೆದಿರುವ, ವೆಂಕಟದಾಸರು ತಿಮ್ಮಪ್ಪದಾಸರನ್ನು ಬಾಲ್ಯದಿಂದಲೇ ಹರಿದಾಸರನ್ನಾಗಿ ರೂಪಿಸಿರುವ ಸಂಗತಿಯನ್ನು ಇದು ಹೇಳುತ್ತದೆ.

೩೦

ಗುರುಕರುಣೆಯ ಹಾಡುಗಳಾಗಿ ಇವು ಕಾಣಿಸಿಕೊಂಡಿವೆ. ಶ್ರೀರಂಗಪಟ್ಟಣದ ಸಮೀಪ ಲಿಂಗಾಭಟ್ಟರ ಅಗ್ರಹಾರದಲ್ಲಿ ಈಶ್ವರ ದೇವಾಲಯದ ಮುಂದಿನ ಮಠದಲ್ಲಿ ತಂಗಿದ್ದ ಗುರುಗಳು (ವಾಸುದೇವಾರ್ಯರು?) ಏಕಾದಶಿ ದಿವಸ ಸೂರ್ಯಾಸ್ತ ಸಮಯದಲ್ಲಿ ಅವರೊಂದಿಗಿದ್ದ ಇಬ್ಬರು ವಿಪ್ರರನ್ನು ಮೀರಿ ತಮ್ಮನ್ನು ಆದರಿಸಿ ಸನ್ಮಂತ್ರ ಬೋಧಿಸಿದರೆಂದೂ (೩೦).

ಶ್ರೀರಂಗಪಟ್ಟಣಕ್ಕೆ ಬಂದು ಚಾತುರ್ಮಾಸ್ಯ ಮುಗಿಸಿ ಮತ್ತೆ ಲಿಂಗಾಭಟ್ಟರಗ್ರಹಾರದ ಮಠದಲ್ಲಿರುವಾಗ ಮತ್ತೆ ತಮ್ಮನ್ನಾದರಿಸಿ ಕ್ಷೇಮ ವಿಚಾರಿಸುತ್ತ ಬರುವಾಗ ಪಕ್ಕದ ಮಹಡಿಮನೆಯಲ್ಲಿದ್ದ ವಿಪ್ರನೊಬ್ಬ ತಾಂಬೂಲ ಉಗಿಯಲು ಅದು ಗುರುಗಳ ಮೇಲೆ ಬೀಳಲು ಜೊತೆಯಲ್ಲಿದ್ದ ಕೇಶವಮೂರ್ತಿಯೆಂಬುವವರು ಆ ವಿಪ್ರನನ್ನು ಗದರಿಸುತ್ತಾರೆ. ಆ ವಿಪ್ರ ಒಡನೆ ಓಡಿಬಂದು ಗುರುಗಳ ಕ್ಷಮೆ ಕೋರುತ್ತಾನೆ. ಗುರುಗಳು ಅವನನ್ನು ಕ್ಷಮಿಸಿ ಕೃಪೆದೋರಿ ಉಪದೇಶ ಮಾಡುತ್ತಾರೆ. ಪ್ರಭಾವಿತನಾದ ವಿಪ್ರನು ಸನ್ಯಾಸ ಸ್ವೀಕರಿಸಿ ಶಿಷ್ಯನಾಗುತ್ತಾನೆ. ಕಾವೇರಿ ತೀರಕ್ಕೆ ಬಂದ ಗುರುಗಳು ಸ್ನಾನ ಸಮಯದಲ್ಲಿ ತಮಗೆ ಮೃತ್ತಿಕೆ ಹೊಂದಿಸಲು ತಿಳಿಸಿ ತಾವು ಧ್ಯಾನಾಸಕ್ತರಾಗಿದ್ದಾಗ ಉಗುಳಿದ್ದ ವಿಪ್ರನಿಗೆ ಮಗನಾಗುವೆನೆಂದು ಆಶೀರ್ವದಿಸಲು ಗುರು ತಿಳಿಸಿದ ದಿನಕ್ಕೆ ಸರಿಯಾಗಿ ಅವನಿಗೆ ಮಗ ಜನಿಸುತ್ತಾನೆ.

ಸ್ನಾನಾನಂತರ ಮಠಕ್ಕೆ ಬಂದು ಎಲ್ಲ ವಿಪ್ರರನ್ನು ಕಳುಹಿಸಿ ತಮಗೂ ಹೋಗಲು ತಿಳಿಸಲು ಬಂದು ಮಾರನೆದಿನ ಬೆಳಗ್ಗೆಯೇ ಗುರುಗಳಿಗೆ ನಮಸ್ಕರಿಸಿ ಬರಲು ಹೋಗಲು ಅಲ್ಲಿ ಗುರು ಕಾಣದಿರಲು ಸ್ನಾನಕ್ಕೆ ಹೋಗಿರಬಹುದೆಂದು ಕಾಯಲು ಮಧ್ಯಾಹ್ನ-ಸಂಜೆಗೂ ಬರದಿರೆ,

ಇರುವ ಪಾದುಕೆಗಳನ್ನು ಕಂಡು ಪೂಜಿಸಿ ತನ್ನ ದಿನಚರಿ ಎಂತೆಂದು ರೋಧಿಸಲು ನಿಮ್ಮ ವಾಗಾಮೃತದಿಂದಲೇ ತಣಿಯುತಿದ್ದೆನು. ನಾನೇನೂ ಅಧ್ಯಯನ ಮಾಡಿಲ್ಲ ನನ್ನ ಮುಂದಿನ ಗತಿ ಏನು ಎಂದು ತೊಳಲುತ್ತಿರುವಾಗ ಪಾದುಕ ಸೇವೆಯನ್ನು ಕರುಣಿಸಿರುವುದನ್ನು ಸ್ವೀಕರಿಸಿ ಅನುಸರಿಸುತ್ತಿರುವುದನ್ನು ಸ್ಮರಿಸಿಕೊಂಡಿದ್ದಾರೆ.

೩೨

ಗುರುವಿನ ನಿಜರೂಪಕ್ಕಾಗಿ ಹಾತೊರೆವ ದೇಹ–ಜೀವ ಸಂಬಂಧದಾಚೆಗಿನ 'ದೇವ' ಸ್ವರೂಪದ ದರ್ಶನವನ್ನು ಕಾಣುವ ಮನಸ್ಸಿನ ಹಳಹಳಿಕೆಯಿದೆ.

೩೩

ಅದೇ ಗುಂಗಿನಲ್ಲಿ ಮಲಗಿದ್ದ ದಾಸರಿಗೆ ಬೆಳಗಿನ ಜಾವದಲ್ಲಿ ಗುರುವೇ ಬಂದು ಸಂತೈಸಿರುವ ತಾನು ಗಿರಿಗುಹೆಗೆ ಹೋಗಲಿರುವ, ತನ್ನನ್ನು ಹಂಬಲಿಸದೆ ಮಂತ್ರ ಜಪಿಸುತ್ತ ಈ ಪಾದುಕೆ ಪೂಜಿಸುತ್ತಾ ದೈವ ಧ್ಯಾನದಲ್ಲಿರು. ನಾನು ಸದಾ ನಿನ್ನೊಂದಿಗೇ ಇರುತ್ತೇನೆ. ವಿಜಯದಶಮಿಯ ದಿನ ನಿನಗೊದಗಿರುವ ಈ ಮಂತ್ರಸಿದ್ಧಿಯಿಂದ ನಿನ್ನ ಕುಲ ವೃದ್ಧಿಸುತ್ತದೆಂದು ಹೇಳಿ ಅಂತರ್ಧಾನವಾಗುವ, ಜನಗಳ ಧ್ವನಿ ಕೇಳಿ ಎಚ್ಚರಗೊಂಡು ತಬ್ಬಿಬ್ಬಾಗಿ ತಲೆಯಡಿಯಲ್ಲಿದ್ದ ಪಾದುಕೆಗಳನ್ನು ಶಿರದಲ್ಲಿ ಧರಿಸಿ ಮನೆಗೆಹೋದ ಘಟನೆಯನ್ನು (ಕನಸನ್ನು) ಹೇಳಿದ್ದಾರೆ.

ಮುಂದಿನ ಎರಡು ಕೀರ್ತನೆಗಳಲ್ಲಿ ಧನ್ಯತೆಯ ಭಾವವನ್ನು ತೋರಿದ್ದಾರೆ. ಇದರಲ್ಲಿ ೩೫ನೇ ಕೀ. ಪರಂಪರೆಯ ಗುರುಸ್ತುತಿಯಾಗಿದೆ. (ಇದನ್ನು 'ಅರ್ಚನ' ದಿಂದ ತೆಗೆದುಕೊಂಡಿದೆ). ೩೬,೩೭ ನೇ ಕೀ.ಗಳು ಸಂಕೀರ್ಣಸ್ವರೂಪದಲ್ಲಿದ್ದು ಅಂಕಿತದ ಬಗೆಗೇಗೊಂದಲವಿದೆ.

ಪೂಜಾವಿಧಾನದ ಕೀರ್ತನೆಗಳು

೩೭

ಇಲ್ಲಿಂದ ಒಟ್ಟು ೧೦೮ ಕೀರ್ತನೆಗಳನ್ನು ಪೂಜಾವಿಧಾನದ ಕೀರ್ತನೆಗಳೆಂದು ದಾಸರೇ ಇದನ್ನು ವಿಭಾಗಿಸಿದ್ದಾರೆ. ದಾಸರ ಸ್ವಹಸ್ತಾಕ್ಷರ ಓಲೆಗರಿ ಹಸ್ತಪ್ರತಿ ಲಭ್ಯವಿದ್ದು ಅದನ್ನು ಅದರಿಂದ ಪ್ರತಿಯಾಗಿರುವ ಕಾಗದದ ಹಸ್ತಪ್ರತಿಗಳನ್ನು ಬಳಸಿಕೊಂಡು ಎಂ.ವಿ.ಸೀತಾರಾಮಯ್ಯನವರು 'ಅರ್ಚನ' ಹೆಸರಿನಲ್ಲಿ ೧೯೭೪ರಲ್ಲಿ ಬೆಂ.ವಿ.ವಿ.ದಿಂದ ಇವನ್ನು ಸಂಪಾದಿಸಿದ್ದು ಅವುಗಳನ್ನು ಅದೇ ಕ್ರಮದಲ್ಲಿ ಇಲ್ಲಿ ಅಳವಡಿಸಿದೆ. ಅವರು ಸ್ವೀಕರಿಸಿರುವ ಪಾಠವನ್ನು ಮಾತ್ರ ಸ್ವೀಕರಿಸಿ ಪಾಠಾಂತರಗಳನ್ನು ಕೈಬಿಟ್ಟಿದೆ ಯೋಜನೆಯ ನಿಯಮದಂತೆ.

ಈ ಕೀರ್ತನೆಗಳಿಗೆ ಹಸ್ತಪ್ರತಿಯಲ್ಲಿ "ಶ್ರೀಕೃಷ್ಣಾಷ್ಟೋತ್ತರ ಶತನಾಮಾಭಿರ್ವಾಕ್ ಪುಷ್ಪಪೂಜಾ" ಎಂದು ಹೆಸರಿದೆ. ಪ್ರತಿಯೊಂದು ಕೀರ್ತನೆಯ ಕೊನೆಯಲ್ಲಿ ನೂರೆಂಟು ಅಷ್ಟೋತ್ತರ ಶತ(೧೦೮) ನಾಮಾವಳಿಯ ಹೆಸರುಗಳಿವೆ. ಷೋಡಷಪೂಜಾಕ್ರಮವನ್ನು ಅಳವಡಿಸಿಕೊಂಡು ಒಂದೊಂದು ಸೇವೆಗೂ ಹಲವು ಕೀರ್ತನೆಗಳನ್ನು ಹಾಡಿದ್ದಾರೆ. ಅದ್ವೈತ ಸಂಪ್ರದಾಯದಂತೆ ಪೂಜಾರಂಭ (ಯಾವುದೇ ಕಾರ್ಯಾರಂಭ)ದಲ್ಲಿ ವಿಘ್ನೇಶ ಸ್ತುತಿಯನ್ನು ನಂತರ ಶಾರದಾಸ್ತುತಿಯನ್ನು ಮಾಡಿದ್ದಾರೆ. ತದನಂತರ ಗುರುಸ್ತುತಿಗಳಿದ್ದು ವಾಸುದೇವಾರ್ಯ-ನೀಲಕಂಠಾರ್ಯ-ರಾಮಕೃಷ್ಣಾರ್ಯರನ್ನು ಸ್ತುತಿಸಿದ್ದು, ನಂತರ ಕೃಷ್ಣಸ್ತುತಿ ಮಾಡುವ ಮೂಲಕ ಪೂಜಾವಿಧಾನಕ್ಕೆ ತೊಡಗುತ್ತಾರೆ ಇಲ್ಲಿಯ ಟಿಪ್ಪಣಿಗಳಿಗೆ ಅರ್ಚನದಲ್ಲಿರುವ ಕೀರ್ತನ ದೀಪಿಕಾದ ನೆರವನ್ನು ಪಡೆದುಕೊಂಡಿದೆ.

ಅದ್ವೈತ ದೃಷ್ಟಿಯಂತೆ ಮೊದಲು ಗಣೇಶವನ್ನು ಸ್ತುತಿಸಿದೆ. ಗಣಪತಿ ಸ್ತೋತ್ರಗಳಲ್ಲೆಲ್ಲ ಸಾಮಾನ್ಯವಾಗಿ ಪುರಾಣಗಳನ್ನುನುಸರಿಸಿ ಗಣಪತಿಯ ವರ್ಣನೆ ಕಂಡುಬರುತ್ತದೆ. ಆದರೆ ಈ ಗಣಪತಿ ಯೋಗಶಾಸ್ತ್ರೋಕ್ತ ಗಣಪತಿ. ಯೋಗಶಾಸ್ತ್ರದ ಪ್ರಕಾರ 'ಷಟ್‌ಚಕ್ರ'ಗಳಲ್ಲಿ ಒಂದಾದ ಮೂಲಾಧಾರ ಚಕ್ರದ ಅಧಿಷ್ಠಾತೃವಾದ 'ಪುಷ್ಟಿ ಗಣಪತಿ', ಬ್ರಹ್ಮಜ್ಞಾನ ವರಪ್ರದಾಯಕ. ಇಲ್ಲಿನದು ಯೋಗಶಾಸ್ತ್ರಾನುಗುಣವಾದ ಗಣಪತಿ ಸ್ತೋತ್ರ. ಯೋಗಶಾಸ್ತ್ರದ ಅನೇಕ ಪರಿಭಾಷೆಗಳು ಇಲ್ಲಿ ಬರುತ್ತವೆ. 'ವರದ ಗಣಪತಿ, ರಾಮೇಶನಾಲಯಾವಾಸ' : 'ರಾಮ'ನೆಂದೂ 'ಈಶ'ನೆಂದೂ ವ್ಯವಹರಿಸಲ್ಪಡುವ ಪರಬ್ರಹ್ಮನ ಆಲಯವಾದ 'ಮೂಲಾಧಾರ ಚಕ್ರ'ದಲ್ಲಿ ನೆಲಸಿರುವವನಾದ (=ರಾಮ+ಈಶ+ಆಲಯ+ಆವಾಸ) 'ಪುಷ್ಟಿ ಗಣಪತಿ': ಪರಬ್ರಹ್ಮ ಜ್ಞಾನವೆಂಬ ವರವನ್ನು ಕರುಣಿಸುವವನಾದ್ದರಿಂದ, ವರದ ಗಣಪತಿ.

೩೮

ಶಾರದ ಸ್ತುತಿ: ಇದು ಸಹ ಅದ್ವೈತ ನಿಷ್ಠೆಯ ಕ್ರಮದಂತೆ ಬಂದಿರುವ ಸ್ತುತಿ. ಗಣಪತಿ ಸ್ತುತಿಯು ಹಾಗೆ ಇದೂ ಅಪೂರ್ವವಾದ ಶಾರದಾಸ್ತುತಿ. ವಾಕ್‌ದೇವಿಯೂ ನಾದಸ್ವರೂಪಿಣಿಯೂ ಆದ ಶಾರದೆಯನ್ನು ರೂಪನಿಷ್ಠವಾಗಿ ವರ್ಣಿಸದೆ, ತತ್ವನಿಷ್ಟವಾಗಿಯೂ ವರ್ಣಿಸಿದೆ. ಪರಮ ಜಿನೇಂದ್ರ ವಾಣಿಯೆ ಸರಸ್ವತಿ, ಬೇರದು ಪೆಣ್ಣ ರೂಪಮಂ ಧರಿಯಿಸಿ ನಿಂದುದಲ್ತು' ಎಂಬ ಪಂಪನ ಉಕ್ತಿಯನ್ನು ಇಲ್ಲಿ ನೆನೆಯಬಹುದು ಎಂದು ಎಂ.ವಿ.ಸೀ.ಯವರ 'ಕೀರ್ತನ ದೀಪಿಕಾ'ದಲ್ಲಿ ಹೇಳಿದ್ದಾರೆ.

೩೯

ವಾಸುದೇವಾರ್ರ್ಯರು ತಿಮ್ಮಪ್ಪದಾಸರ ಗುರುಗಳಾಗಿದ್ದು ಇವರನ್ನು ಹಲವಾರು ಕೃತಿಗಳಲ್ಲಿ ಸ್ತುತಿಸಿದಾರೆ. ಇಲ್ಲಿರುವುವು ನೇರ ಗುರುಸ್ತುತಿಗಳು. ಅಂಕಿತದಲ್ಲೇ ಈ ಗುರುಗಳನ್ನು ಸ್ಮರಿಸುತ್ತಾ ಆತ್ಮನಿವೇದನೆಯಲ್ಲಿ ಸ್ತುತಿಸುವ ಅನೇಕ ಕೀರ್ತನೆಗಳೂ ಇವೆ.

೪೧

ಶ್ರೀ ವಾಸುದೇವಾರ್ರ್ಯರು ತಿಮ್ಮಪ್ಪದಾಸರಿಗೆ ಮಂತ್ರೋಪದೇಶ ಮಾಡಿ, ಸಾಧನಾ ಮಾರ್ಗವನ್ನು ಅರುಹಿದ ಗುರುವಾಗಿ ಕಂಡುಬಂದರೆ ಈ ಕೀರ್ತನೆಗಳಲ್ಲಿ ಸ್ತೋತ್ರ ಮಾಡಿರುವ ಶ್ರೀ ನೀಲಕಂಠಾರ್ಯರು ವೇದ, ಉಪನಿಷತ್ತು, ಮತ್ತು ಶಾಸ್ತ್ರಗಳ ಪಾಠವನ್ನು ಹೇಳಿದ ಗುರುಗಳಾಗಿ ವ್ಯಕ್ತಪಡುತ್ತಾರೆ. ಈ ನೀಲಕಂಠರು ಯಾರೆಂಬುದು ತಿಳಿಯುತ್ತಿಲ್ಲ. "ಇವರು ಆಗಿನ ಕಾಲದಲ್ಲಿ ಮಹಾವಿದ್ವಾಂಸರೆನಿಸಿ, ಅನೇಕರಿಗೆ ಪಾಠ ಪ್ರವಚನ ಮಾಡುತ್ತ ಜ್ಞಾನ ಭಕ್ತಿ ಮಾರ್ಗಗಳೆರಡನ್ನೂ ಬೋಧನೆ ಆಚರಣೆಗಳಿಂದ ತೋರಿಸಿಕೊಟ್ಟ ಮಹಾನುಭಾವರಾಗಿ ಕಂಡುಬರುತ್ತಾರೆ. ಹಾಗಿಲ್ಲದಿದ್ದಲ್ಲಿ, ಇವರನ್ನು ತಿರುಪತಿ ವೆಂಕಟರಮಣನಿಗೆ ಸಮನೆಂದು ಭಾವಿಸಿ, 'ಹರಿಹರಾತ್ಮಕ ನೀಲಕಂಠಾರ್ಯ' ಎಂದು ಸಂಬೋಧಿಸುತ್ತಿರಲಿಲ್ಲ. 'ಹರಿಹರಾತ್ಮಕ' ಎಂದು ವಿಶೇಷಿಸಿರುವುದರಿಂದ, ನೀಲಕಂಠರು ಭಾಗವತ ಸಂಪ್ರದಾಯದ ಸ್ಮಾರ್ತರಾಗಿದ್ದರೆಂದು (ಅದ್ವೈತ) ಊಹಿಸಬಹುದು. ಕೀರ್ತನೆಯಿಂದ, ಇವರ ವಾಸಸ್ಥಳ ಕೌಶಿಕಪುರ ಎಂದು ತಿಳಿದು ಬರುತ್ತದೆ. ಇದು ಹಾಸನ ಜಿಲ್ಲೆಯಲ್ಲಿ ಈಗ ಮೈಸೂರು ಅರಸೀಕೆರೆ ರೈಲು ಮಾರ್ಗದಲ್ಲಿರುವ 'ಕೌಶಿಕ' ವೆಂಬುದೇ ಆಗಿರಬೇಕು. 'ಕೌಶಿಕ ಸಂಕೇತಿ'ಗಳೆಂಬ ಬ್ರಾಹ್ಮಣರ ಪಂಗಡದವರು ಅಲ್ಲಿ ವಿಶೇಷವಾಗಿ ನೆಲಸಿದ್ದರು; ಸಂಸ್ಕೃತ ಭಾಷಾ ಪಾಂಡಿತ್ಯಕ್ಕೆ ಹೆಸರಾಗಿದ್ದರು. ತಿಮ್ಮಪ್ಪದಾಸರು ಕೌಶಿಕದಲ್ಲಿಯೆ ಗುರುಕುಲವಾಸ ಮಾಡಿ ವೇದ ಶಾಸ್ತ್ರಾಧ್ಯಯನ ಮಾಡಿರಬಹುದು ವಿಚಾರಿಸಿದ್ದರಲ್ಲಿ, ಕೌಶಿಕದಲ್ಲಿ ನೀಲಕಂಠ ಎಂಬವರು ಬಲು ಹಿಂದೆ ಇದ್ದರೆಂದು ಸ್ಥಳಿಕರಿಂದ ತಿಳಿದುಬರುತ್ತದೆ." (ಎಂ.ವಿ.ಸೀ. ಅರ್ಚನ ಪು. ೧೭೫) ಎಂಬ ಟಿಪ್ಪಣಿ ಹೊರತಾಗಿ ಇವರ ವಿಚಾರವೇನೂ ತಿಳಿದುಬಂದಿಲ್ಲ.

೪೩

ಈ ಕೀರ್ತನೆಯಲ್ಲಿ, 'ಷೋಡಶೋಪಚಾರ' ವಿಧಾನದಲ್ಲಿ ಗುರು ರಾಮಕೃಷ್ಣಾರ್ಯರ ಮಾನಸ ಪೂಜೆಯನ್ನು ವಿವರಿಸಿದೆ. ಇವರ ಬಗೆಗೂ ಹೆಚ್ಚಿನ ಮಾಹಿತಿ ಲಭ್ಯವಿಲ್ಲ. ಅ.ನ.ಕೃ.ರವರ ವಂಶೀಕರೊಬ್ಬರು ಇದೇ ಹೆಸರಿನವರಿದ್ದಾರೆ. ಅವರು ಇವರು ಒಬ್ಬರೋ ಬೇರೆಬೇರೆಯವರೋ ಪರಿಶೀಲಿಸಬೇಕಾಗಿದೆ. ಇವರ ಸ್ಥಳವೂ ಸ್ಪಷ್ಟವಿಲ್ಲ. 'ದೃಷದ ಪುರ' ಯಾವುದೋ ತಿಳಿಯದು:

'ಕಲ್ಲಹಳ್ಳಿ' ಅಥವಾ 'ಕಲ್ಲೂರು', ಅಥವಾ ಅರಕಲುಗೂಡು, ಎಂಬುದರ ಸಂಸ್ಕೃತೀಕರಣವಾಗಿ ಕಾಣುತ್ತದೆ. (ದೃಷತ್ = ಕಲ್ಲು). "ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿ ಒಂದು ಕಲ್ಲೂರು ಇದೆ; ಕುಣಿಗಲ್ ತಾಲ್ಲೂಕಿಗೆ ಸೇರಿದ ಕಲ್ಲೂರು ಒಂದು ಇದೆ. ಇವುಗಳಲ್ಲಿ ಒಂದು ಶ್ರೀ ರಾಮಕೃಷ್ಣಾರ್ಯರ ಸ್ಥಳವಿದ್ದಿರಬಹುದು" ಎಂದು ಎಂ.ವಿ.ಸೀ. ಹೇಳುತ್ತಾರೆ. ತ್ರಿಜಗದೊಡೆಯನೆ ಗುರು ರಾಮಕೃಷ್ಣಾರ್ಯರ ರೂಪಿನಲ್ಲಿ ಇದ್ದನೆಂಬುದರಲ್ಲಿ, ತಿಮ್ಮಪ್ಪದಾಸರು ಅವರಲ್ಲಿ ಇಟ್ಟಿದ್ದ ಅಪಾರ ಗುರುಭಕ್ತಿ ವ್ಯಕ್ತಪಟ್ಟಿದೆ. ಇವರನ್ನು ರಾಮ ಮತ್ತು ಕೃಷ್ಣರ ಅಂಶಸಂಭೂತರೆಂದೂ ಈ ಕೀತನೆ ಹೇಳುತ್ತವೆ.

೪೯

ಇದು ದಶಾವತಾರ ವರ್ಣನೆಯಾಗಿದ್ದು ಅಂಕಿತದೇವರನ್ನು ನೇರವಾಗಿ ದಶಾವತಾರದ ಸ್ತುತಿಯ ಮೂಲಕ ವರ್ಣಿಸಿದೆ. 'ಕೈಟಭರಿಪು'–ಕೈಟಭನೆಂಬ ರಾಕ್ಷಸನ ಶತ್ರು, ವಿಷ್ಣು (ಕಲ್ಪಾದಿಯಲ್ಲಿ ವಿಷ್ಣು ವಟಪತ್ರಶಾಯಿಯಾಗಿ ಮಲಗಿದ್ದಾಗ, ಅವನ ಕಿವಿಯ ಮಲದಿಂದ ಮಧು–ಕೈಟಭರೆಂಬ ಇಬ್ಬರು ರಾಕ್ಷಸರು ಹುಟ್ಟಿ, ನಾಭಿ ಕಮಲದಲ್ಲಿದ್ದ ಚತುರ್ಮುಖ ಬ್ರಹ್ಮನಿಗೆ ಹಿಂಸೆ ಮಾಡತೊಡಗಿದರು. ವಿಷ್ಣು ಅವರಿಬ್ಬರನ್ನೂ ಕೊಂದನು.)

'ಜಮದಗ್ನಿಸುತ'–ಜಮದಗ್ನಿಯ ಮಗ : ಪರಶುರಾಮಾವತಾರ. 'ಪುರಮೂರಗೆಲಿದಗೆ'– ಪುರಮೂರು ; ತಾರಾಕ್ಷ, ಕಮಲಾಕ್ಷ, ವಿದ್ಯುನ್ಮಾಲಿ ಎಂಬವರು ತಾರಕಾಸುರನ ಮೂವರು ಮಕ್ಕಳು. ಇವರು ಬ್ರಹ್ಮನ ವರದಿಂದ ಅಭೇದ್ಯಗಳಾದ ಪುರಗಳ ನಿರ್ಮಾಣ ಸಾಮರ್ಥ್ಯವನ್ನು ಪಡೆದು, ಅಂತರಿಕ್ಷದಲ್ಲಿ ಕಬ್ಬಿಣ, ಬೆಳ್ಳಿ, ಚಿನ್ನಗಳಿಂದ ಮೂರು ಪುರಗಳನ್ನು ನಿರ್ಮಿಸಿಕೊಂಡು, ಕಾಲಕ್ರಮದಲ್ಲಿ ದೇವತೆಗಳಿಗೆ ಹಿಂಸೆ ಕೊಡತೊಡಗಿದರು. ದೇವತೆಗಳ ಮೊರೆಯನ್ನು ಕೇಳಿ, ಶಿವನು ಮೂರು ಪುರಗಳನ್ನೂ ನಾಶಮಾಡಿದ. ('ಪುರಮೂರಗೆಲಿದ'ವನು ಶಿವನಾದರೂ, ಅವನು ವಿಷ್ಣುವನ್ನೇ ಬಾಣವಾಗಿ ಮಾಡಿಕೊಂಡಿದ್ದರಿಂದ, ಇಲ್ಲಿ ವಿಷ್ಣುವನ್ನೇ ಕೀರ್ತನಕಾರರು ಉದ್ದೇಶಿಸಿದ್ದಾರೆ. ಸಾಮಾನ್ಯವಾಗಿ ಎಲ್ಲ ಹರಿದಾಸರೂ ತ್ರಿಪುರಾಂತರನನ್ನಾಗಿ ವಿಷ್ಣುವನ್ನು ಸ್ತುತಿಸುತ್ತಾರೆ.

೫೦

ನಿರ್ಗುಣ ಬ್ರಹ್ಮೋಪಾಸನೆಯನ್ನು ಸಗುಣ ಬ್ರಹ್ಮೋಪಾಸನೆಯ ಕ್ರಮದೊಂದಿಗೆ ಅಳವಡಿಸಿ, ಅರ್ಥಪೂರ್ಣವಾಗಿ, ತಾತ್ತ್ವಿಕ ನೆಲೆಗಟ್ಟಿನಲ್ಲಿ ವರ್ಣಿಸಿದೆ. ಇಲ್ಲಿ ಸಗುಣ ಬ್ರಹ್ಮ ಇಷ್ಟದೈವವಾದ ತಿರುಪತಿಯ ವೆಂಕಟರಮಣ. ಈ ಕೀರ್ತನೆಯಲ್ಲಿ, ಕ್ರಮನಾಗಿ ಅವಾಹನೆ, ಆಸನ ಪಾದಯ, ಅರ್ಘ್ಯ, ಆಚಮನ, ಮಧುಪ, ಸ್ನಾನ, ವಸನ, ಆಭರಣ, ಗಂಧ, ಪುಷ್ಪ,

ಧೂಪ-ದೀಪ, ನೈವೇದ್ಯ, ತಾಂಬೂಲ- ಹೀಗೆ 'ಷೋಡಶೋಪಚಾರ ಪೂಜೆಯನ್ನು ಹೇಳಿದೆ. ಮುಂದೆ ಒಂದೊಂದು ಉಪಚಾರವನ್ನೂ ಕೀರ್ತನ ರೂಪದಲ್ಲಿ ಕ್ರಮವಾಗಿ ವಿವರಿಸಲಾಗಿದೆ.

ಷೋಡಶೋಪಚಾರ ಪೂಜೆ :
"ಆಸನಂ ಸ್ವಾಗತಂ ಪಾದಯಮರ್ಘ್ಯಮಾಚಮ ನೀಯಕಂ
ಮಧುಪರ್ಕಾಚಮ ಸ್ನಾ ನಂ ವಸನಾಭರಣಾನಿ ಚ ಗಂಧಪುಷ್ಪೇ
ಧೂಪದೀಪೌ ನೈವೇದ್ಯಂ ವಂದನಂ ತಥಾ॥

ಇಲ್ಲಿ ೧೫ ಉಪಚಾರಗಳನ್ನು ಮಾತ್ರ ಉಲ್ಲೇಖಿಸಿದೆ; ತಾಂಬೂಲವನ್ನು ಸೇರಿಸಿಲ್ಲ. ಕೀರ್ತನೆಯಲ್ಲಿ 'ವಂದನ'ದ ಬದಲಾಗಿ ತಾಂಬೂಲವಿದೆ. ಕೀರ್ತನೆಯಲ್ಲಿ ಹೇಳಿರುವ 'ಪೀಠ' – 'ಆಸನ' ಎರಡೂ ಒಂದೇ ಉಪಚಾರ. ಮುಂದಿನ ಕೀರ್ತನೆಗಳಲ್ಲಿ ಇವಷ್ಟೇ ಅಲ್ಲದೆ ಇನ್ನೂ ಅನೇಕ ಪೂಜಾ ವಿಧಾನಗಳಿವೆ.

ಕೊನೆಯ ನುಡಿಯಲ್ಲಿ ಯತಿಗಳಾದ ವಾಸುದೇವಾರ್ಯರು ಶ್ರೀರಂಗಪಟ್ಟಣಕ್ಕೆ ಚಾತುರ್ಮಾಸಕ್ಕೆ ಬಂದಿದ್ದಾಗ ಕೀತನಕಾರರಿಗೆ ರಹಸ್ಯ ಮಂತ್ರೋಪದೇಶವನ್ನು ಮಾಡಿ, ಪಾದುಕೆಗಳನ್ನು ಬಿಟ್ಟುಹೋದ ಸನ್ನಿವೇಶವನ್ನು ಹೇಳುತ್ತಾರೆ. ಇದನ್ನು ಕೆಲವು ಷಟ್ಪದಿಗಳಲ್ಲಿಯೂ ಒಂದೆರಡು ಕೀರ್ತನೆಗಳಲ್ಲಿಯೂ ನಿರೂಪಿಸಿದೆ. (ನೋಡಿ : ಗುರುಕರುಣೆಯ ಕೀತನೆಗಳು) ತಿರುಪತಿಯ ಶ್ರೀ ವೆಂಕಟರಮಣ ಸ್ವಾಮಿಯೇ ಗುರು ವಾಸುದೇವಾರ್ಯರ ರೂಪದಲ್ಲಿ ದಯಮಾಡಿಸಿದ್ದನೆಂದು ಕೀರ್ತನಕಾರರು ಇಲ್ಲಿ ಧ್ವನಿಸಿದ್ದಾರೆ.

೫೯

ಶೋಡಷೋಪಚಾರದ ಒಂದು ವಿಧಾನವಾದ ನೈವೇದ್ಯ ಕ್ರಮವನ್ನು ತಾತ್ತ್ವಿಕ ನೆಲೆಗಟ್ಟಿನಲ್ಲಿ ಜೋಡಿಸಿ, ಈ ಕೀರ್ತನೆಯಲ್ಲಿ ವರ್ಣಿಸಿದೆ.

ನೈವೇದ್ಯ ಕ್ರಮ : ಭೂಶುದ್ಧಿಗಾಗಿ ಭೂಮಿಯನ್ನು ಸಂಪ್ರೋಕ್ಷಿಸಿ, ಜಲದಿಂದ ಚತುರಸ್ರ ಮಂಡಲವನ್ನು ಮಾಡಿ, ಅದರ ಮೇಲೆ ಪೀಠ ಹಾಕಿ, ಅದರ ಮೇಲೆ ತಟ್ಟೆಯನ್ನಿರಿಸಿ, ಅದರಲ್ಲಿ ಅನ್ನ ಮುಂತಾದ ಭಕ್ಷ್ಯಭೋಜ್ಯಗಳನ್ನು ದೇವರಿಗೆ ಒಪ್ಪಿಸುವುದು.

ಇದಕ್ಕೆ 'ಕೀರ್ತನ ದೀಪಿಕಾ'ದಲ್ಲಿ ತಾತ್ತ್ವಿಕ ದೃಷ್ಟಿಯ ದೀರ್ಘ ಟಿಪ್ಪಣಿಯಾಗಿದೆ. ಪರಬ್ರಹ್ಮಸ್ವರೂಪನಾದ ದೇವರ ಮುಂದೆ ಸಕಲ ವಿಶ್ವವೆ ಅವನ 'ಭೋಜನ ಸಾಮಗ್ರಿ' (=ಭೋಗ್ಯ)

ಯಾಗಿರುವಲ್ಲಿ ನಾವು ಮಾಡುವ ನೈವೇದ್ಯ ಕೇವಲ ಉಪಚಾರವಷ್ಟೆ. ಸಗುಣೋಪಾಸನೆ ನಿರ್ಗುಣೋಪಾಸನೆಗಳೆರಡಕ್ಕೂ ಅನ್ವಯವಾಗುವಂತೆ 'ಆತ್ಮನೈವೇದ್ಯ'ವನ್ನು ಈ ಕೀರ್ತನೆಯಲ್ಲಿ ನಿರೂಪಿಸಿದೆ.

"ಭೋಗ್ಯ=ಭೋಕ್ತೃ: ಭೋಗಕ್ಕೆ ವಿಷಯವಾದದ್ದು ಭೋಗ್ಯ; ಭೋಗಿಸುವವನು ಭೋಕ್ತೃ. ಈ ಜಗತ್ತನ್ನು ಭೋಗಿಸುವವರು ಜೀವಾತ್ಮರುಗಳಾದರೂ, ಜೀವಾತ್ಮ ಪರಮಾತ್ಮನ ಅಂಶವಾದ್ದರಿಂದ, ಪರ್ಯಾಯದಲ್ಲಿ ಪರಮಾತ್ಮನೆ ಭೋಕ್ತೃ ಎಂದು ಗ್ರಹಿಸಬೇಕು. 'ಪ್ರಾಜ್ಞರೂಪದಿ ... ರೂಪನೆ' – (ಶರೀರಗಳು ಸ್ಥೂಲ, ಸೂಕ್ಷ್ಮ, ಕಾರಣ ಎಂಬ ಭೇದದಿಂದ ಮೂರು ಬಗೆಯದಾಗಿರುವುದಷ್ಟೆ. ಜೀವನಿಗೆ (ಅಥವಾ ಜೀವಾತ್ಮನಿಗೆ) ಈ ಶರೀರತ್ರಯಗಳಲ್ಲಿ ಸತ್ತ್ವ ರಜಸ್ತಮೋಗುಣಗಳ ಉಪಾಧಿಯಿಂದಾಗಿ ಜಾಗ್ರತ್ ಸ್ವಪ್ನ ಸುಷುಪ್ತಿ ಎಂಬ ಮೂರು ಅವಸ್ಥೆಗಳುಂಟಾಗುವುವು; ತನುತ್ರಯಗಳ ಅಭಿಮಾನ ನಿಮಿತ್ತದಿಂದಾಗಿ, ಜೀವಾತ್ಮನಿಗೆ ಜಾಗ್ರದವಸ್ಥೆಯಲ್ಲಿ ವಿಶ್ವನೆಂದೂ, ಸ್ವಪ್ನಾವಸ್ಥೆಯಲ್ಲಿ ತೈಜಸನೆಂದೂ, ಸುಷುಪ್ತ್ಯವಸ್ಥೆಯಲಿ ಪ್ರಾಜ್ಞನೆಂದೂ ಹೆಸರು. (ಇದೇ ಜೀವನಿಗೆ, ಬೇರೆ ನಿಮಿತ್ತಗಳಿಂದ, ವ್ಯಾವಹಾರಿಕ ಪ್ರಾತಿಭಾಸಿಕ ಪಾರಮಾರ್ಥಿಕ ಎಂದೂ, ಚಿದಾಭಾಸ ಸ್ವಪ್ನಕಲ್ಪಿತ ಅವಚ್ಛಿನ್ನ ಎಂದೂ ಮೂರು ಮೂರು ಹೆಸರುಗಳಿವೆ. ಈ ರೀತಿ, ಜೀವಾತ್ಮನಿಗೆ ಒಂಬತ್ತು ಹೆಸರುಗಳು). ಸುಷುಪ್ತಿಯ ಅವಸ್ಥೆಯಲ್ಲಿ ಜೀವನು ಪ್ರಾಜ್ಞರೂಪದಲ್ಲಿ ಸುಪ್ತಿಸುಖವನ್ನು (ಕೇವಲ ಸ್ಮರಣ ರೂಪದಲ್ಲಿ) ಅನುಭವಿಸುತ್ತಿದ್ದರೂ, ಉಪಾಧಿ ನಿಮಿತ್ತದಿಂದ ಸುಖಾನುಭವವೆ ಹೊರತು, ಉಪಾಧಿರಹಿತನಾಗಿ ಜೀವಾತ್ಮನು ಸಾಕ್ಷಿರೂಪನಾಗಿಯೇ ಇರುವನು. ಸುಷುಪ್ತಿಯಲ್ಲಿ ಉಪಾಧಿಗಳಿಲ್ಲದ್ದರಿಂದ, ಆತ್ಮನು ಅಭಿಮಾನರಹಿತನಾಗಿ, ಸಾಕ್ಷಿರೂಪದಲ್ಲಿರುವನು. (ಯಾವುದಕ್ಕೂ ಅಂಟಿಕೊಳ್ಳದೆ ಎಲ್ಲವನ್ನು ನೋಡುತ್ತಿರುವವನು).

'ಜಡಪ್ರಕೃತಿ ...ಪೀಠವು': ಭೂಮಿ, ನೀರು, ಅಗ್ನಿ, ವಾಯು, ಆಕಾಶ, ಮನಸ್ಸು, ಬುದ್ಧಿ, ಅಹಂಕಾರ ಇವು ಎಂಟೂ ಕೂಡಿ ಜಡಪ್ರಕೃತಿ (ಅಥವಾ ಅಪರಾಪ್ರಕೃತಿ) ಇದೆ ಪರಮಾತ್ಮನ ನೈವೇದ್ಯಕ್ಕೆ ಎಂಟು ಕಾಲಿನ ಪೀಠ. 'ಜಡವಿರಹಿತವಾದ ಪ್ರಕೃತಿ ತಾ ಮಣೆ' – ಜಡದ ಸಂಪರ್ಕವಿಲ್ಲದೆ, ಅದರಿಂದ ಭಿನ್ನವೂ 'ಜೀವಭೂತ'ವಾದದ್ದೂ, ಈ ಜಗತ್ತನ್ನು ಧರಿಸಿರತಕ್ಕದ್ದೂ ಆದ ಪ್ರಕೃತಿ (=ಪರಾಪ್ರಕೃತಿ, ಚಿತ್‌ಪ್ರಕೃತಿ) (ಇಲ್ಲಿ, ಪರಾಪ್ರಕೃತಿ ಜಡಪ್ರಕೃತಿಗೆ ಆಧಾರಭೂತವಾಗಿದೆ ಎಂಬ ತಪ್ಪು ಗ್ರಹಿಕೆಗೆ ಅವಕಾಶವಿದೆ. ಪಾದವೆಂಟರ ಪೀಠ ಮತ್ತು ಮಣೆ ಎಂದು ಎರಡನ್ನೂ ರೂಪಕ ಮಾಡಿರುವುದರಿಂದ, ಮಣೆ ಪೀಠದ ಮೇಲಿನದಾದ್ದರಿಂದ

ಪರಾಪ್ರಕೃತಿ ಜಡಪ್ರಕೃತಿಗಿಂದ ಮೇಲಿನದು, ಅದನ್ನು ಮೀರಿದ್ದು ಎಂದು ಅರ್ಥ ಹಿಡಿಯಬೇಕು). 'ಇಡಗೂಡುವನುಭವ' – ಪರಬ್ರಹ್ಮದಲ್ಲಿ ಐಕ್ಯವಾಗುವ ಅನುಭವ. (ಜೀವಬ್ರಹ್ಮೈಕ್ಯವು ಅನುಭವಕ್ಕೆ ಬಂದಾಗಲೇ ಬ್ರಹ್ಮ ಸಾಕ್ಷಾತ್ಕಾರವಾಗುವುದು; ಬ್ರಹ್ಮವಿಷಯಕ ಶಾಸ್ತ್ರಜ್ಞಾನವೊಂದೇ ಸಾಲದು).

'ಇಪ್ಪತ್ತು ನಾಲ್ಕು ತತ್ವಂಗಳೆ ಶಾಕಂಗಳು' – ಸಾಂಖ್ಯಯೋಗದ ಪ್ರಕಾರ, ೨೪ ತತ್ವಗಳ ನಿರೂಪಣೆ ಹೀಗಿದೆ (ಕೀರ್ತನಕಾರರು ಇಲ್ಲಿ ಇದನ್ನೇ ಅನುಲಕ್ಷಿಸಿರುವ ಹಾಗೆ ತೋರುತ್ತದೆ): ಪ್ರಧಾನ (ತತ್ತ್ವ) ಅಥವಾ ಪ್ರಕೃತಿ, ೧; ಮಹತ್ (ತತ್ತ್ವ) ಅಥವಾ ಬುದ್ಧಿ ೧; ಅಹಂಕಾರ, ೨; ಮನಸ್ಸು, ೧; ಪಂಚತನ್ಮಾತ್ರೆಗಳು ಅಥವಾ ಸೂಕ್ಷ್ಮ ಭೂತಗಳು (ಶಬ್ದ, ಸ್ಪರ್ಶ, ರೂಪ, ರಸ, ಗಂಧ), ೫; ಪಂಚ ಮಹಾಭೂತಗಳು (ಆಕಾಶ, ವಾಯು, ಅಗ್ನಿ, ಅಥವಾ ತೇಜ, ಜಲ, ಪೃಥ್ವೀ) ೫; ಜ್ಞಾನೇಂದ್ರಿಯಗಳು (ಶ್ರೋತ್ರ, ತ್ವಕ್, ಚಕ್ಷು, ರಸನ, ಘ್ರಾಣ), ೫; ಕರ್ಮೇಂದ್ರಿಯಗಳು (ವಾಕ್, ಪಾಣಿ, ಪಾದ, ಉಪಸ್ಥಾ, ಪಾಯು), ೫. ಇವುಗಳ ಜೊತೆಗೆ ಪುರುಷನೂ ಕೂಡಿದರೆ ೨೫ ತತ್ತ್ವಗಳೂ (ಪ್ರಕೃತಿಯಿಂದ ಪ್ರಪಂಚವು ಸೃಷ್ಟಿಯಾಗುವ ಕ್ರಮವನ್ನು ಈ ತತ್ತ್ವ ವಿತರಣೆ ನಿರೂಪಿಸುತ್ತದೆ. (ಅರ್ಚನ, ಪು.೧೯೬)

೬೦

ಮೊದಲ ಕಂದಪದ್ಯಗಳು 'ಪಂಚಾಯತನ ಪೂಜೆ'ಯನ್ನು ಹೇಳಿದೆ. ಆದಿತ್ಯ, ಅಂಬಿಕೆ, ವಿಷ್ಣು ಗಣನಾಥ, ಮಹೇಶ್ವರ – ಇವರೇ ಪಂಚಾಯತನರು.

ಆಗ್ನೇಯ ದಿಕ್ಕಿನಲ್ಲಿ ಗಣಪತಿ, ಈಶಾನ್ಯದಲ್ಲಿ ಶಂಕರ, ನೈಋತ್ಯದಲ್ಲಿ ಇನ(=ಸೂರ್ಯ); ವಾಯುವ್ಯ(=ಮರುತ)ದಲ್ಲಿ ಅಂಬಿಕೆ(=ಪಾರ್ವತಿ). ಮಧ್ಯದಲ್ಲಿ ಪೂಜಾಮೂರ್ತಿಯಾದ 'ತಿರುಪತಿಯೊಡೆಯ' ಇದು ವಿಷ್ಣು ಪಂಚಾಯತನ. ಶಿವ ಪಂಚಾಯತನವಾದರೆ, ವಿಷ್ಣು ಈಶಾನ್ಯದಲ್ಲಿದ್ದು ಶಿವ ಮಧ್ಯೆ ಇರುತ್ತಾನೆ.

೨ನೆಯ ಕಂದಪದ್ಯದಲ್ಲಿ ಗಣಪತಿ ಮುಂತಾಗಿ ಸರ್ವದೇವತೆಗಳೂ ನೀನೆ; ಮಾತ್ರಲ್ಲ, 'ನಾನೂ ನೀನಾಗಿ ನಿನ್ನ ಭಜಿಸಿದೆ' ಎಂಬಲ್ಲಿ, ಅದ್ವೈತ ಸಿದ್ಧಾಂತದ 'ಸರ್ವಂಖಲ್ವಿದಂ ಬ್ರಹ್ಮ' ಹಾಗೂ 'ಅಹಂಬ್ರಹ್ಮಾಸ್ಮಿ' ಎಂಬ ಶ್ರುತಿವಾಕ್ಯಗಳ ವಾಕ್ಯವೆ ಇದೆ. ಇದಕ್ಕೆ 'ಕೀರ್ತನ ದೀಪಿಕಾ'ದಲ್ಲಿ ಗೀತೆಯ ನಿದರ್ಶನವಿದೆ.

> "... ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ
> ಜ್ಞಾನಿತ್ವಾತ್ಮೈವ ಮೇಮತಂ" – ಗೀತೆ ೭-೧೭-೧೮.

೬೨

ದೇವತಾರ್ಚನೆಯಲ್ಲಿ ಷೋಡಶೋಪಚಾರ ವಿಧಾನವಲ್ಲದೆ, ಚತುಷ್ಷಷ್ಟಿ ವಿಧಾನವೂ ಇದೆ. ಕೆಲವರು ಷೋಡಶೋಪಚಾರವು ಚತುಷ್ಷಷ್ಟ್ಯುಪಚಾರದಲ್ಲೆ ಸಮಾವೇಶಗೊಂಡಿದೆ ಎನ್ನುತ್ತಾರೆ. ಇಲ್ಲಿಂದ ಮುಂದೆ, ಈ ಕೆಳಗೆ ಉಲ್ಲೇಖಿಸಿರುವ ಉಪಚಾರಗಳಲ್ಲಿ ಕೆಲವನ್ನು ಕೀರ್ತನಕಾರರು ಕೀರ್ತನರೂಪದಲ್ಲಿ ವಿವರಿಸಿದ್ದಾರೆ. ಅವಯವೋಪಚಾರ, ಕಿರೀಟ, ಪಾದುಕೆ, ನೀರಾಜನ ಆರತಿ, ಛತ್ರ, ಚಾಮರ, ದರ್ಪಣ, ವ್ಯಜನ, ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣ, ಉಪನಿಷತ್ತು, ಪುರಾಣ, ಇತಿಹಾಸ, ಪಂಚಾಂಗಶ್ರವಣ, ಚೂರ್ಣಿಕೆ, ಅಷ್ಟಪದಿ (ಅಷ್ಟಕ) ಸಂಗೀತ, ಶೋಭನ, ಮಂಗಳ, ಲಾಲಿ, ಜೋಜೋ, ಮಂತ್ರಪುಷ್ಪ, ಆಂದೋಳನ, ಅಶ್ವಾರೋಹಣ, ಗಜಾರೋಹಣ, ನೃತ್ಯ, ವಾದ್ಯ, ವೀಣಾನಾದ, ನಮಸ್ಕಾರ, ಭಕ್ತ್ಯುಪಚಾರ, ಶಕ್ತ್ಯುಪಚಾರ, ಶಯನ, ಉತ್ತರ ನೀರಾಜನ ಇತ್ಯಾದಿ.

೮೮

ಆಗಮೋಕ್ತ ಪೂಜಾವಿಧಾನದಲ್ಲಿ 'ನರ್ತನಸೇವೆ'ಯೂ ಒಂದು. ಇದು ಸಾಧಾರಣವಾಗಿ ದೇವಾಲಯಗಳಲ್ಲಿ ಮಾತ್ರ ಆಚರಣೆಯಲ್ಲಿ ಇದ್ದದು ಕಂಡುಬರುತ್ತದೆ. ಭಕ್ತರ ಪರವಾಗಿ ನರ್ತನ ಸೇವೆಯನ್ನರ್ಪಿಸಲು ದೇವದಾಸಿಯರು ಇರುತ್ತಿದ್ದರು. ಭಕ್ತಿಪಂಥದಲ್ಲಿ – ವಿಶೇಷವಾಗಿ ವೈಷ್ಣವ ಭಕ್ತಿಪಂಥದಲ್ಲಿ–ಭಗವದ್ಭಕ್ತರು ಭಗವಂತನ ನಾಮಸಂಕೀರ್ತನೆ ಮಾಡುವಾಗ, ತಾಳ ತಂಬೂರಿ ಹಿಡಿದು, ಗೆಜ್ಜೆ ಕಟ್ಟಿಕೊಂಡು ನರ್ತನ ಮಾಡುತ್ತಿದ್ದರು. ಶ್ರೀವೈಷ್ಣವ ಸಂಪ್ರದಾಯದ ದೇವಾಲಯಗಳಲ್ಲಿ ಇದಕ್ಕಾಗಿ 'ಅರೆಯುರ್' ಎಂಬ ವೃತ್ತಿ ನರ್ತಕರೇ ಇದ್ದಾರೆ. ದಾಸಸಾಹಿತ್ಯದಲ್ಲಿಯೂ ಈ ಸಂಪ್ರದಾಯವಿದ್ದು, 'ಮಧುಕರ', ವೃತ್ತಿಗೆ ಸಂಚಾರ ಹೊರಟಾಗ ಹರಿದಾಸರು ಗೆಜ್ಜೆ ಕಟ್ಟಿಕೊಂಡು, ಸಂಚಾರಕಾಲದಲ್ಲಿ ಭಿಕ್ಷೆ ನೀಡುವ ಗೃಹಸ್ಥರ ಮನೆಗಳಲ್ಲಿ ಕೀರ್ತನೆಗಳ ಹಾಡಿನ ಲಯಕ್ಕೆ ಅನುಸಾರವಾಗಿ ಕುಣಿಯುವ ಪದ್ಧತಿ ಇದ್ದಂತೆ ಕಾಣುತ್ತದೆ. "ತಿಮ್ಮಪ್ಪದಾಸರು ಅವರ ವಂಶಜರೂ ಸಂಜೆಯ ಪೂಜೆಯಾದ ಮೇಲೆ (ವಿಶೇಷವಾಗಿ ಶನಿವಾರದಂದು), 'ಪೂಜಾವಿಧಾಸ ಕೀರ್ತನೆ'ಗಳನ್ನು ಹಾಡುತ್ತಿದ್ದರು. ನರ್ತನ ಸೇವೆಯ ಸರತಿ ಬಂದಾಗ ದಾಸರು ಅಥವಾ ಅವರ ಮಕ್ಕಳು ಯಾರಾದರೂ ಗೆಜ್ಜೆ ಕಟ್ಟಿಕೊಂಡು ತಾಳಗತಿಗೆ ತಕ್ಕ ಹಾಗೆ ಕುಣಿಯುತ್ತಿದ್ದರು" (ಅರ್ಚನ ಪು.೨೨೨) ಎಂಬ ಅಂಶವನ್ನು ಗಮನಿಸಬಹುದು.

ಈ ಕೀರ್ತನೆಯಲ್ಲಿಯೂ, ಮುಂದಿನ ಕೀರ್ತನೆಯಲ್ಲಯೂ ಮಾಯೆಯನ್ನೇ ನರ್ತಕಿಯನ್ನಾಗಿಯೂ, ಮಾಯಾಧೀನವಾದ 'ಲೋಕದ ನಟನೆ'ಗಳನ್ನೇ ಅವಳ

ನೃತ್ಯವನ್ನಾಗಿಯೂ, ಪರಮಾತ್ಮನನ್ನೇ ನರ್ತನಕರ್ತ (ಸೂತ್ರಧಾರ)ನನ್ನಾಗಿಯೂ ರಘೂಕ ಮಾಡಿ, ಅದ್ವೈತಸಿದ್ಧಾಂತವನ್ನು ಕೀರ್ತನಕಾರರು ಮನೋಜ್ಞವಾಗಿ, ಶ್ಲೇಷಾತ್ಮಕವಾಗಿ ಪ್ರತಿಪಾದಿಸಿದ್ದಾರೆ.

೯೬

ಹೊನ್ನಾದೇವಿಯ ದೇವಸ್ಥಾನ ಶಿವಗಂಗೆ ಬೆಟ್ಟದಲ್ಲಿದೆ. ಗಂಗಾಧರೇಶ್ವರನ ಗುಡಿ ಇರುವುದೂ ಅಲ್ಲೇ. ಶಿವಗಂಗೆಯ ಪಾರ್ವತಿದೇವಿಗೆ 'ಹೊನ್ನಾಂಬಾ' ಎಂದು ಹೆಸರು. ಗಂಗಾಧರೇಶ್ವರನನ್ನು ಅನೇಕ ಕಡೆ ಸ್ತೋತ್ರ ಮಾಡಿರುವ ಕೀರ್ತನಕಾರರು ಇಲ್ಲಿ ಅವನ ಪತ್ನಿ ಸ್ವರ್ಣಾಂಬಿಕೆಯನ್ನು ಸ್ತೋತ್ರ ಮಾಡಿದ್ದಾರೆ.

೧೦೩

'ಜಗನ್ಮಯೆ' – ಜಗತ್ತನ್ನೆಲ್ಲಾ ಯಾವಳು ವ್ಯಾಪಿಸಿ ಕೊಂಡಿರುವಳೋ ಜಗತ್ತನ್ನೆಲ್ಲಾ ಯಾವಳು ಒಳಗೊಂಡಿರುವಳೋ, ಆದರೂ ಈ ಜಗತ್ತಿಗೆ ಅತೀತವಾಗಿದ್ದುಕೊಂಡು ಯಾವಳು ಜಗತ್ಸೃಷ್ಟಿಗೆ ಕಾರಣಳಾಗಿರುವಳೋ ಆ ಆದಿಶಕ್ತಿ ಎಂಬ ಅರ್ಥದಲ್ಲಿ ಇಲ್ಲಿ ದೇವಿಸ್ತುತಿಯಿದ್ದು ಪಾರ್ವತಿ–ಲಕ್ಷ್ಮಿ ಎರಡೂ ಅರ್ಥವಿದೆ. ನಿರ್ಗುಣ ಬ್ರಹ್ಮನು ಸಗುಣರೂಪದಲ್ಲಿ ಈಶ್ವರನೆನಿಸಿ ಜಗತ್ಸೃಷ್ಟ್ಯಾದಿ ಕಾರ್ಯಗಳಲ್ಲಿ ತೊಡಗಿದಾಗ, ಸೃಷ್ಟಿಕರ್ತನಾಗಿ ಬ್ರಹ್ಮನೆಂದೂ, ಸ್ಥಿತಿಕರ್ತನಾಗಿ ವಿಷ್ಣುವೆಂದೂ, ಲಯಕರ್ತನಾಗಿ ಶಿವನೆಂದೂ ವ್ಯವಹರಿಸಲ್ಪಡುವನು. ಆದಿಶಕ್ತಿ ಪರಬ್ರಹ್ಮನ ಚಿಚ್ಛಕ್ತಿ; ಪರಬ್ರಹ್ಮನಿಂದಲೇ ಹುಟ್ಟಿದ್ದು. ಪರಬ್ರಹ್ಮನ ಸೃಷ್ಟಿ ಸ್ಥಿತಿ ಲಯ ಕಾರ್ಯಗಳಲ್ಲಿ ಪಾಲುಗೊಂಡಿರುವ ಈ ಆದಿಶಕ್ತಿಯೆ ಬ್ರಹ್ಮನ ಪತ್ನಿ ಎನಿಸಿ ಸರಸ್ವತಿ ಎಂದೂ, ವಿಷ್ಣುವಿನ ಪತ್ನಿಯೆನಿಸಿ ಲಕ್ಷ್ಮಿ ಎಂದೂ, ಶಿವನ ಪತ್ನಿಯೆನಿಸಿ ಪಾರ್ವತಿಯೆಂದೂ ವ್ಯವಹರಿಸಲ್ಪಡುವಳು. ಆದ್ದರಿಂದಲೇ, ಕೀರ್ತನಕಾರರು 'ಜಗನ್ಮಾಯೆ'ಯನ್ನು ವಾಗೀಶ್ವರಿ, ಕಮಲಾನಯೆ, ಗಿರಿಸುತೆ, ಜಾನಕಿ ಎಂದೆಲ್ಲ ಹೇಳಿದ್ದಾರೆ.

೧೧೯

ಇದೂ ಒಂದು ಪೂಜಾವಿಧಾನವಾಗಿದೆ. ಇದರಲ್ಲಿ ಮೊದಲ ಚರಣದಲ್ಲಿ ಛತ್ರ ಸಮರ್ಪಣವನ್ನು ತಾತ್ತ್ವಿಕವಾಗಿ ವರ್ಣಿಸಿದೆ. "ಸಹಸ್ರಾರ ಚಕ್ರ (ಸಾವಿರ ದಳದ ಕಮಲದ ರೂಪದಲ್ಲಿದೆ; 'ಷಟ್‌ಚಕ್ರ'ಗಳ ಮೇಲೆ ಇರುವುದು, ಚಕ್ರಸಪ್ತಕದಲ್ಲಿ ಕೊನೆಯದು; ಇದೇ ನಿರ್ಗುಣ ಬ್ರಹ್ಮನಿವಾಸ). ಇದೇ ಛತ್ರ. 'ಶಕ್ತಿಸಾವಿರದ ಮೌಕ್ತಿಕ(=ಮುತ್ತಿನ) ಸರಗಳೊಪ್ಪಿಹವು–

ಸಹಸ್ರಾರ ಚಕ್ರದ ಕೆಳಗಿನದು ಆಜ್ಞಾಚಕ್ರ; ಇದು ಸೂರ್ಯಚಕ್ರ; ಸೂರ್ಯನ ಸಹಸ್ರ ಕಿರಣಗಳೇ 'ಶಕ್ತಿಸಾವಿರ'; ಈ ಶಕ್ತಿಸಾವಿರದ ಮುತ್ತುಗಳ ಸರಗಳಿಂದ ಛತ್ರ ಅಲಂಕೃತ. 'ಕಾವಿಹುದು ಸಕಲ ದೇವಾತ್ಮಕದ ಶಾರದೆಯು'–ಶಾರದೆ ಶಕ್ತಿಸ್ವರೂಪಿಣಿಯಾದ್ದರಿಂದ ಎಲ್ಲ ದೇವರನ್ನೂ ಒಳಕೊಂಡವಳು; ಈ ಶಾರದೆಯೇ ಛತ್ರದ ಕಾವು(=ದಂಡ, ಕೋಲು). 'ತುರಿಯ ಕಲಶದ'– ಈ ಛತ್ರಕ್ಕೆ 'ತುರಿಯ'ವೇ ಕಲಶ. (ಯೋಗದಲ್ಲಿ ಬ್ರಹ್ಮದೊಂದಿಗೆ ಐಕ್ಯವಾಗುವ ಅವಸ್ಥೆಯೇ 'ತುರ್ಯ'='ತುರಿಯ')" ಎಂಬ ವಿವರಣೆ (ಅರ್ಚನ, ಪು.೨೫೩). ಇದಕ್ಕೊಂದು ಯೋಗ ಪರಿಭಾಷೆಯನ್ನು ತಂದುಕೊಡುತ್ತದೆ.

ಎರಡನೇ ಚರಣದಲ್ಲಿ "ಬ್ರಹ್ಮವಸ್ತುವಿನಿಂದ ಒಗೆದ ಮಾಯೆಯ ಆವರಣ ವಿಕ್ಷೇಪ ಎಂಬ ಎರಡು ಶಕ್ತಿಗಳನ್ನು ಪರಬ್ರಹ್ಮನ ಸಗುಣ ರೂಪದ ವೆಂಕಟರಮಣನ ಎರಡು ಪಕ್ಕಗಳಲ್ಲಿಯೂ ಗಾಳಿ ಹಾಕುತ್ತ ಅತ್ತಿತ್ತ ಆಡುತ್ತಿರುವ (='ಒಲವುತಿಹ') ಎರಡು ಚಾಮರಗಳೆಂದು ಕಲ್ಪನೆಯಾಗಿದೆ". ಇಲ್ಲಿಯೂ ಅದ್ವೈತ ಸಿದ್ಧಾಂತದ ಅಭಿವ್ಯಕ್ತಿಯನ್ನು ಕಾಣಬಹುದು.

ಮೂರನೇ ಚರಣದಲ್ಲಿ ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು ಅಂತಃಕರಣ ಚತುಷ್ಟಯ – ಇವುಗಳನ್ನು ೧೪ ಮಂದಿ ನರ್ತಕಿಯರಾಗಿ ರೂಪಕ ಮಾಡಿದೆ. ಐಹಿಕ ಭೋಗವಿಲಾಸದಲ್ಲಿ ನಲಿಯುವ ಇಂದ್ರಿಯಗಳ ಸುಖಾನುಭವವನ್ನು 'ನಲಿವ ನರ್ತನ' ಎಂದಿರುವುದು ಮನೋಜ್ಞವಾಗಿದೆ.

ಮುಂದಿನ ಚರಣಗಳಲ್ಲಿ ಗೀತ ಮತ್ತು ವಾದ್ಯಗಳ ಸಮರ್ಪಣದ ಉಪಚಾರ ವರ್ಣನೆ ಇವೆ. ತಾಳ, ಮದ್ದಳೆ, ಘಂಟೆ, ಭೇರಿ, ಶಂಖ, ವೀಣೆ, ವೇಣು, ಮೇಘಧ್ವನಿ ಮತ್ತು ಛಿಣಿಛಿಣೀ ಛಿಣಿ (ಮತ್ತು ಕಿಣಿಕಿಣಿ ಕಿಣಿ) ನಾದ – ಈ ದಶನಾದಗಳ ವಿಚಾರವಿದೆ. ಅಶ್ವಾರೋಹಣ, ಗಜಾರೋಹಣ, ಸಮರ್ಪಣೆಯ ಉಪಚಾರವಿದೆ, "ಸುಖ ದುಃಖಗಳಿಂದ ಕೂಡಿರುವದೂ, ಕಾಮನಿಷ್ಠವೂ, ಧರ್ಮಾರ್ಥ ಕಾಮಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥ (=ಫಲ ಚತುಷ್ಟಯ) ಸಮನ್ವಿತವೂ ಆದ ಪ್ರಾಪಂಚಿಕ ಜೀವನವನ್ನು ಸತ್ಯವೆಂದು ತಿಳಿಯುವುದಕ್ಕೆ ಮಾಯೆಯ ಆವರಣವೇ, ಗಜವೆಂದು ರೂಪಕ ಮಾಡಿದೆ". (ಅತ್ತ ಇತ್ತ ಒಲೆದಾಡುತ್ತಿರುವ ಚಲಿಸುತ್ತಿರುವ 'ಫಲ ಚತುಷ್ಟಯ ... ದಿಂದ' ಧರ್ಮಾಥ ಕಾಮ ಮೋಕ್ಷಗಳೆಂಬ ಚತುರ್ವಿಧ ಫಲಗಳೆ ಆನೆಯ ಮೇಲಿನ (ಮಂಟಪ ರೂಪದ) ಅಂಬಾರಿ ಎಂಬುದೂ ವಿಶೇಷವಾಗಿದೆ. ಇವುಗಳೊಂದಿಗೆ ಪಲ್ಲಕ್ಕಿಯ ಸೇವೆ (ಅರಿಷಡ್ವರ್ಗ ಮನಸ್ಸು, ವಿಷಯಸುಖ – ಇವುಗಳ ಸಮಷ್ಟಿಯೆ ಇಲ್ಲಿ ರೂಪಕವಾಗಿರುವ ಪಲ್ಲಕ್ಕಿ) ಇತ್ಯಾದಿ 'ಚತುಷ್ಷಷ್ಟ್ಯುಪಚಾರಗಳಲ್ಲಿ ಸೇರಿರುವ

ಅನೇಕ ಸೇವೆಗಳನ್ನು ಅದರಲ್ಲಿ ಸೇರಿಲ್ಲದ 'ರಥಾರೋಹಣ'ವನ್ನೂ ನಿರೂಪಿಸಿದೆ. ಇಲ್ಲಿ, ದೇಹವೇ, ರಥ: ಅದರಲ್ಲಿ ಪರಮಾತ್ಮ ಕುಳಿತಿದ್ದಾನೆ ಎಂಬ ಭಾವವಿದೆ.

೧೩೧

ಇದೊಂದು ತಾತ್ತ್ವಿಕ ಕೃತಿ. ಅದ್ವೈತ ತತ್ತ್ವವು ಇಲ್ಲಿ ಪಡಿಮೂಡಿದೆ. "ಜಗತ್ತೆಲ್ಲವೂ ಬ್ರಹ್ಮಮಯ. ಒಂದೇ ಚಿನ್ನದ ಗಟ್ಟಿಯಿಂದ ಬೇರೆ ಬೇರೆ ಒಡವೆಗಳನ್ನು ಮಾಡಿದ ಹಾಗೆ, ಎಲ್ಲ ದೇವರುಗಳೂ ಗ್ರಹಗಳೂ ಪರಮಾತ್ಮನ ಅಂಶರೂಪಗಳು. ಪರಮಾತ್ಮನ ಕೃಪೆಗೆ ಪಾತ್ರನಾದ ಭಕ್ತನಿಗೆ ಯಾವುದರ ಭಯವೂ ಇರದು.

ಬ್ರಹ್ಮಬೀಜದಿಂದ ಈ ವಿಶ್ವವೃಕ್ಷ: ಪರಮಾತ್ಮನೇ ವಿಶ್ವತರುಮೂಲ. ಮಾಯೆಯೆಂಬ ಕ್ಷೇತ್ರವನ್ನು ನಿರ್ಮಿಸಿದವನೂ ಪರಬ್ರಹ್ಮ; ಆ ಕ್ಷೇತ್ರದಲ್ಲಿ ಬ್ರಹ್ಮಚೈತನ್ಯವೇ ಬೀಜ (='ನಿನ್ನ ಬಿತ್ತೊಂದು ಬೀಜ). ಹೀಗೆ, ಉತ್ತಮನು, ಬೀಜ ಬಿತ್ತಿದವನು, ಫಲವನ್ನು ಅನುಭೋಗಿಸುವವನು (ಭೋಗ್ಯ-ಭೋಕ್ತೃ, ಕ್ಷೇತ್ರ=ಕ್ಷೇತ್ರಜ್ಞ) ಎಲ್ಲವೂ ಬ್ರಹ್ಮವೇ.

ಜಗತ್ತಿನ ವ್ಯಾಪಾರವೆಲ್ಲ ಈಶ್ವರಾಜ್ಞೆಯಿಂದ ನಡೆಯುತ್ತದೆ. ಯುದ್ಧದಲ್ಲಿ ಹಲವರು ನಾಯಕರಾದರೆ ಯುದ್ಧನೀತಿ ಕೆಡುವಂತೆ, ಹಲವರು ಒಡೆಯರಾದರೆ ಜಗದ್ವ್ಯವಹಾರ ನೀತಿಯೂ ಕೆಡುವುದು. ಅಜ್ಞಾನಿಗಳು ತಾವು ಆರಾಧಿಸುವ ದೈವವೇ ಶ್ರೇಷ್ಠವೆಂದು ವಾದ ಮಾಡುತ್ತ ದೇವರುಗಳು ಅನೇಕ ಎಂಬ ತಪ್ಪು ತಿಳಿವಳಿಕೆಗೆ ಎಡೆಗೊಟ್ಟು ಭೇದಬುದ್ಧಿಯುಳ್ಳವರಾಗಿದ್ದಾರೆ. ಈ ಭೇದಬುದ್ಧಿಯನ್ನು ಬಿಡಿಸಿ, ಜಗದೀಶ್ವರನೊಬ್ಬನೇ ಎಂದು ಸಾರುವ ವೇದವಾಕ್ಯ ('ಏಕಂ ಸತ್ ವಿಪ್ರಾಬಹುಧಾ ವದಂತಿ') ನಿಲ್ಲತಕ್ಕದ್ದು" ಎಂಬ ಎಂ.ವಿ.ಸೀ ಅವರ ವ್ಯಾಖ್ಯಾನವನ್ನು ಗಮನಿಸಬಹುದು (ಅರ್ಚನ ಪು.೨೬೩)

೧೩೯

ಚತುರ್ಮುಖ ಬ್ರಹ್ಮನ ಒಂದು ಹಗಲಿನಲ್ಲಿ ಈ ೧೪ ಮಂದಿಯೂ ಭೂಲೋಕದಲ್ಲಿ ರಾಜ್ಯಭಾರ ಮಾಡುತ್ತಾರೆ. ಇಂದ್ರನೆಂಬ ಹಾಗೆ ಮನುವೆಂಬುದೂ ಪದವಿಯ ಹೆಸರು. ಮನುಗಳು: ಸ್ವಯಂಭೂ, ಸ್ವಾರೋಚಿಷ, ಉತ್ತಮ, ತಾಮಸ, ರೈವತ, ಚಾಕ್ಷುಷ, ವೈವಸ್ವತ (ಈಗ ರಾಜ್ಯಭಾರ ಮಾಡುತ್ತಿರುವ ಮನು: ಆದ್ದರಿಂದ ಈಗಿನದು ವೈವಸ್ವತ ಮನ್ವಂತರ). ಸಾವರ್ಣಿ, ದಕ್ಷ ಸಾವರ್ಣಿ, ಬ್ರಹ್ಮ ಸಾವರ್ಣಿ, ಧರ್ಮ ಸಾವರ್ಣಿ, ರುದ್ರ ಸಾವರ್ಣಿ. ದೇವ ಸಾವರ್ಣಿ, ಇಂದ್ರ ಸಾವರ್ಣಿ. (ಅರ್ಚನ ಪು.೨೭೨)

೧೪೨

ಶ್ರೀಹರಿಯ 'ರಂಗನಾಥ'ನ ರೂಪದ ಶಮನ ಸ್ಥಿತಿಯನ್ನು ಯೋಗದೃಷ್ಟಿಯಿಂದ ನೋಡಿ 'ಯೋಗನಿದ್ರೆ'ಯನ್ನಾಗಿ ಕಲ್ಪಿಸಿದ್ದಾರೆ. 'ಭೋಗಿಶಯನ' – ಶೇಷಶಾಯಿಯಾದ ವಿಷ್ಣು. 'ಏಳುಸುತ್ತಿನಪುರ'–ಸಪ್ತ ಚಕ್ರ(=ಸುತ್ತು)ಗಳಿಂದ ಕೂಡಿರುವ ದೇಹ(=ಪುರ) (ಸಪ್ತ ಚಕ್ರ) 'ಎಂಟು ಪಾಲಾಗಿ ರಮಣಿ ... ಅದನು'–ಪೃಥ್ವೀ, ಜಲ, ಅಗ್ನಿ, ವಾಯು, ಆಕಾಶ, ಬುದ್ಧಿ, ಮನಸ್ಸು, ಅಹಂಕಾರ–ಈ ಎಂಟು ತತ್ತ್ವಗಳಿಂದ ಕೂಡಿ ಆದ ಜಡ ಪ್ರಕೃತಿ ಅಥವಾ ಅಪರಾ ಪ್ರಕೃತಿ (=ಮಾಯೆ, ಇಲ್ಲಿ ಹೇಳಿರುವ 'ರಮಣಿ') 'ಬಾಲಕನೊಬ್ಬ ಪಾಲಿಪನು'–ಸಪ್ತಚಕ್ರಗಳಲ್ಲಿ, ಮೂಲಾಧಾರಚಕ್ರದಲ್ಲಿದ್ದುಕೊಂಡು ಸ್ಥೂಲ ಸೂಕ್ಷ್ಮ ಶರೀರದ್ವಯಕ್ಕೂ ಸ್ವಾಮಿಯಾಗಿರುವವನು, ಗಣಪತಿ (ಈಶ್ವರ ಪುತ್ರನಾದ ಗಣಪತಿ 'ಬಾಲಕ' ಎಂಬ ಎಣಿಕೆಯಿಂದ, ಇಲ್ಲಿನ 'ಗಣಪತಿ'ಯನ್ನೂ ಬಾಲಕ ಎಂದು ಭಾವಿಸಿದೆ) ಎಂಬ ಅರ್ಚನದ ವಿವರಣೆಯನ್ನು ನೋಡಬಹುದು (ಪು.೨೭೬)

೧೪೩

ಅದ್ವೈತದ ಪರಮ ಸತ್ಯವಾದ ಪರಮಾತ್ಮನ ಅಭಯಪೂರ್ವವಾದ ಪೂರ್ಣಕೃಪೆ ತಮ್ಮ ಮೇಲೆ ನೆಲಸಿರುವುದರಿಂದ, ತಾವು ಈಗ ಪರಿಶುದ್ಧರಾಗಿ, ತಾವು ಬೇರೆ ಅಲ್ಲ, ಈಶ್ವರ ಬೇರೆ ಅಲ್ಲ – ಎಂಬ ಅದ್ವೈತಾನಂದದ ಅನುಭೂತಿಯನ್ನು ಕೀರ್ತನಕಾರರು ಈ ಕೀರ್ತನೆಯಲ್ಲಿ ವ್ಯಕ್ತಪಡಿಸಿದ್ದಾರೆ.

೧೪೪

ಈ ಕೀರ್ತನೆಯಲ್ಲಿ, ತಮಗೆ ಗುರುರೂಪದಲ್ಲಿ ಒಲಿದು ತಮ್ಮ ಹೃದಯಕಮಲದಲ್ಲಿ ನೆಲಸಿರುವ ತಿರುಪತಿಯ ವೆಂಕಟರಮಣನು–ಸಗುಣಬ್ರಹ್ಮನು–ತನ್ನ ನಿರ್ಗುಣಸ್ವರೂಪದಲ್ಲಿ ಎಂದರೆ ತನ್ನ ಸತ್–ಚಿತ್–ಆನಂದ ಸ್ವರೂಪದಲ್ಲಿದ್ದುಕೊಂಡೆ ಸಕಲ ಚರಾಚರ ಜಗತ್ತಿನ ಒಳಗೂ ಹೊರಗೂ ವ್ಯಾಪಿಸಿಕೊಂಡು, ದೇಶಕಾಲಾತೀತನಾಗಿ ಮೆರೆಯುತ್ತಿದ್ದಾನೆ ಎಂಬ ಅದ್ವೈತದ ನಿಲುವನ್ನು – "ನಿಂತ ಭಾವದ ಬಗೆಯನ್ನು" – ಮನಮುಟ್ಟುವಂತೆ ಕೀರ್ತನಕಾರರು ವರ್ಣಿಸಿದ್ದಾರೆ.

೧೪೫

ಇಲ್ಲಿ ದೇಹದ ನವದ್ವಾರಗಳ ಮೂಲಕ ತತ್ವ ನಿರೂಪಣೆಯಿದೆ. 'ಪುರ' – ದೇಹ. 'ಮುಂಭಾಗದಲಿ ... ದ್ವಾರಗಳೈದು' – ಎರಡ ಕಣ್ಣು, ಎರಡು ನಾಸಾಪುಟಗಳು (ಮೂಗಿನ

ಹೊಳ್ಳೆಗಳು) ಮತ್ತು ಬಾಯಿ; 'ಹೊರಗುಭಯ ... ಎರಡು' – ಎರಡು ಪಕ್ಕಗಳಲ್ಲಿರುವ ಎರಡು ಕಿವಿಗಳು; 'ತತ್ಪಶ್ಚಿಮನೆರಡು' – ಜನನೇಂದ್ರಿಯ ಮತ್ತು ಪಾಯ (ಗುದದ್ವಾರ). (ಇವು ಒಂಬತ್ತೂ ಕೂಡಿ ದೇಹದ 'ನವದ್ವಾರ'ಗಳೆಂದು ರೂಢಿ. ದೇಹವನ್ನು ಪರಮಾತ್ಮನಿರುವ ಅರಮನೆಯೆಂದೂ, ಈ 'ನವದ್ವಾರ'ಗಳು ಒಂಬತ್ತು ಬಾಗಿಲುಗಳೆಂದೂ ರೂಪಕ ಮಾಡಿದೆ.

೬ನೇ ನುಡಿಯಲ್ಲಿ ಬರುವ 'ಯೋಗನಿದ್ರೆ'ಗೆ – "ಜಾಗ್ರತ್, ಸ್ವಪ್ನ, ಸುಷುಪ್ತಿ – ಇವು ಎಲ್ಲ ಜೀವಿಗಳು ಅನುಭವಿಸುವ ಮೂರು ಅವಸ್ಥೆಗಳು. ಸುಷುಪ್ತಿಯಲ್ಲಿ ಜೀವಾತ್ಮನು ಪ್ರತ್ಯಗಾತ್ಮನೆನಿಸಿಕೊಂಡು ಸಾಕ್ಷಿರೂಪದಲ್ಲಿರುವನು. ಯೋಗಿಯು ಪರಮಾತ್ಮನ ಧ್ಯಾನದಲ್ಲಿ ಈ ಮೂರು ಅವಸ್ಥೆಗಳನ್ನು ದಾಟಿ, ಸಮಾಧಿಸ್ಥಿತಿಯಲ್ಲಿ ತಾನೆ ಪರಬ್ರಹ್ಮ ಸ್ವರೂಪನೆಂಬ ಅರಿವಿನ ಆನಂದದಲ್ಲಿ ನಿರುಪಾಧಿಕನಾಗಿ ನಿಲ್ಲುವುದೇ ಯೋಗ. ನಿದ್ರೆಯಲ್ಲಿ (ಸುಷುಪ್ತಿ) ಹೇಗೋ ಹಾಗೆ ಯೋಗದಲ್ಲಿರುವ ಬಾಹ್ಯಪ್ರಜ್ಞೆ ಇಲ್ಲದಿರುವುದರಿಂದ ಯೋಗವೂ ಒಂದು ಬಗೆಯ ನಿದ್ರೆಯೆಂದು ವ್ಯವಹರಿಸಲ್ಪಡುವುದು" ಎಂಬ ಭಾವವನ್ನು 'ಕೀರ್ತನ ದೀಪಿಕಾ ಹೇಳುತ್ತದೆ (ಪು.೨೭೯)

೧೪೭–೧೬೦ ಒಟ್ಟು ೧೪ ಕೀರ್ತನೆಗಳ ಈ ಗುಚ್ಛಕ್ಕೆ 'ಕಾಯ–ಜೀವ ಸಂಪಾದ' ಎಂದು ಹಸ್ತಪ್ರತಿಯಲ್ಲೇ ಹೆಸರಿದೆ. ಕೊನೆಯ ಕೀರ್ತನೆ ಅಸಮಗ್ರವಾಗಿರುವದರಿಂದ ಇನ್ನೂ ಕೆಲವು ಇದ್ದಿರಬೇಕೆಂದು ತೋರುತ್ತವೆ. ಒಂದೊಂದು ಕೀರ್ತನೆಯು ಸಂಭಾಷಣಾಶೈಲಿಯಲ್ಲಿದ್ದ ಕಾರಣ (ದೇಹ) ಜೀವ (ಆತ್ಮ)ಗಳು ಪರಸ್ಪರ ಸಂಭಾಷಿಸುತ್ತವೆ. ಪ್ರತಿ ಕೀರ್ತನೆಯ ಕೊನೆಯಲ್ಲಿ ಬರುವ 'ಕಂಡ' ಸೇತುವೆಯಾಗಿದೆ. ಅದ್ವೈತ ತತ್ವವನ್ನು ಮಾನವ ಜೀವನದ ಮಹತ್ವವನ್ನು ಸಾರುವ ವಿಶಿಷ್ಟ ಕೃತಿಗಳಾಗಿ ಕಾಣಿಸಿಕೊಳ್ಳುತ್ತವೆ.

(೪) ನಾರಾಯಣದಾಸರು

೧

ಇದು ಶ್ರೀ ಶೃಂಗೇರಿಯ ೨೩ನೆಯ ಜಗದ್ಗುರುಗಳಾದ ಶ್ರೀನೃಸಿಂಹಭಾರತಿ ಸ್ವಾಮಿಗಳ ಮೂರ್ತಿಸ್ವರೂಪದ ವರ್ಣನೆ. ತಿಮ್ಮಪ್ಪದಾಸರು ಮತ್ತು ಅವರ ಪುತ್ರಪೌತ್ರರು ದಾಸಸಂಪ್ರದಾಯಕ್ಕೆ ಅನುಗುಣವಾಗಿ (ಆದರೆ, ಶ್ರಾವಣಶನಿವಾರ ಹಾಗೂ ಕೆಲವು ಗೊತ್ತಾದ ದಿನಗಳಲ್ಲಿ ಮಾತ್ರ) ಮಧುಕರ ವೃತ್ತಿಗೆ ಹೊರಡುತ್ತಿದ್ದರು. ಮನೆಮನೆಗಳಲ್ಲಿ ನೀಡುತ್ತಿದ್ದ ಅಕ್ಕಿಯ ಭಿಕ್ಷೆಯನ್ನು ಹಾಕಿಸಿಕೊಳ್ಳಲು ದಾಸರ ಪುತ್ರರಲ್ಲಿ ಒಬ್ಬನು 'ಅಕ್ಷಯಪಾತ್ರೆ' ಎಂದು ಕರೆಯುತ್ತಿದ್ದ ಪಾತ್ರೆಯನ್ನು ಹಿಡಿದಿರುತ್ತಿದ್ದನು. "ಶೃಂಗೇರಿಯ ಶ್ರೀಗಳವರು ಮೈಸೂರಿಗೆ ಆಗಮಿಸಿದಾಗ ಒಂದೆರಡು

ಸಲ ಮೈಸೂರು ಕೋಟೆಯಲ್ಲಿ ತ್ರಿನಯನೇಶ್ವರ ಸ್ವಾಮಿ ದೇವಸ್ಥಾನದ ಹೊರ ಅಂಗಳದಲ್ಲಿದ್ದ ದಾಸರ ನಿವಾಸದಲ್ಲಿಯೇ ನೆಲಸಿದ್ದರೆಂದು ತಿಳಿದುಬರುತ್ತದೆ. ದಾಸರ ದೈವನಿಷ್ಠೆಯನ್ನೂ 'ಮಂಚಾರ'ಪದ್ಧತಿಯನ್ನೂ ಗಮನಿಸಿದ ಶ್ರೀಗಳವರು ಅಕ್ಷಯಪಾತ್ರೆಗೆ ಹಿಡಿಯಲು ಬೆಳ್ಳಿಯ ಕಲಶವಿದ್ದ, ಕೆಂಪು ಬನಾತು ಬಟ್ಟೆಯ ದೊಡ್ಡ ಛತ್ರವೊಂದನ್ನು (ಸನ್ನದು ಸಮೇತ) ಅನುಗ್ರಹಿಸಿದ್ದರು. ನಾರಾಯಣದಾಸರ ಕಾಲದಲ್ಲೂ ಶ್ರೀಗಳವರು ದಾಸರ ನಿವಾಸಕ್ಕೆ ದಯಮಾಡಿಸಿದ್ದರೆಂದು ಕಾಣುತ್ತದೆ. ಅದು ಹೇಗಿದ್ದರೂ, ದಾಸರ ಹಾಗೂ ಅವರ ವಂಶಜರ ವಿಷಯದಲ್ಲಿ ಶ್ರೀ ಶೃಂಗೇರಿಮಠದ ಅನುಗ್ರಹ ಒಂದೇ ಸಮನಾಗಿ ನಡೆದುಬರುತ್ತಿದೆ ಎಂಬ ಸೂಚನೆಯ ಹಿನ್ನೆಲೆಯಲ್ಲಿ ಈ ಕೀರ್ತನೆಯ ವೈಶಿಷ್ಟ್ಯವನ್ನು ಗಮನಿಸಬೇಕು.

ಚಿನ್ಮುದ್ರೆ (ಚಿತ್=ಮುದ್ರೆ)-ದೇವತಾಪೂಜೆ, ಜಪತಪೋನುಷ್ಠಾನಗಳಲ್ಲಿ ಒಂದು ಗೊತ್ತಾದ ವಿನ್ಯಾಸದಲ್ಲಿ ಕೈಬೆರಳುಗಳನ್ನು ಪ್ರದರ್ಶಿಸುವ ಹಸ್ತಭಂಗಿ. ಮುದ್ರೆಗಳಲ್ಲಿ ತಾರ್ಕ್ಷ್ಯಮುದ್ರೆ, ಧೇನುಕಮುದ್ರೆ, ಘೋಟಕಮುದ್ರೆ ಮುಂತಾಗಿ ಹಲವು ಬಗೆಗಳುಂಟು. ಚಿನ್ಮುದ್ರೆ ಇವುಗಳಲ್ಲಿ ಒಂದು. ಇದನ್ನು ಜ್ಞಾನಮುದ್ರೆ ಅಥವಾ ವ್ಯಾಖ್ಯಾನಮುದ್ರೆ ಎಂದೂ ಕರೆಯಲಾಗುತ್ತದೆ. ಈ ಮುದ್ರೆಯಲ್ಲಿ ಹೆಬ್ಬೆರಳೂ ತರ್ಜನಿ(ತೋರು)ಬೆರಳೂ ಸಂಧಿಸಿದ್ದು, ಉಳಿದ ಬೆರಳುಗಳು ನೇರ ನಿಂತಿರುತ್ತವೆ.

೬

ರಾಘವ ಸ್ಮರಣೆ : ವರಚುಂಚಸೇತುವಾಸಂ : ಮೈಸೂರು ಜಿಲ್ಲೆಯಲ್ಲಿರುವ ಚುಂಚನಕಟ್ಟೆಯಲ್ಲಿ ಶ್ರೀ ಸೀತಾರಾಮನ ದೇವಾಲಯವಿದೆ. ದಾಸರು ಈ ಕ್ಷೇತ್ರವನ್ನು ಸಂದರ್ಶನ ಮಾಡಿದ ಮೇಲೆ ರಚಿಸಿದ ಕೀರ್ತನೆ.

೧೫

ಈ ಕೀರ್ತನೆಯೂ ಮುಮ್ಮಡಿ ಕೃಷ್ಣರಾಜರ ಕಾಲದಲ್ಲೇ ರಚಿತವಾದದ್ದು. ತಿಮ್ಮಪ್ಪದಾಸರಿಗೆ ಮುಮ್ಮಡಿಯವರು ತಮ್ಮ ಅರಮನೆ-ಕೋಟೆಯ ಆವರಣದಲ್ಲಿದ್ದ ತ್ರಿನಯನೇಶ್ವರನ ಸನ್ನಿಧಿಯಲ್ಲೇ ನಿವಾಸವನ್ನು ಕಲ್ಪಿಸಿಕೊಟ್ಟಿದ್ದರು. ತಮ್ಮ ಆಶ್ರಯದಲ್ಲಿ ಅವರು ಶ್ರೀ ವೆಂಕಟರಮಣಸ್ವಾಮಿಯ ಪೂಜೆ ಮಾಡಿಕೊಂಡಿರಲೆಂಬುದು ಅಷ್ಟೆ ಪ್ರಭುಗಳ ಉದ್ದೇಶವಾಗಿತ್ತು.

ಈಶ್ವರ ದೇವಸ್ಥಾನದಲ್ಲಿ ವಿಷ್ಣುದೇವರು (ನಾರಾಯಣ) ಇರಬೇಕೆಂದು ಒಂದು ವಿಧಿ. ಆದಿಶಂಕರರು ಪ್ರವರ್ತನ ಮಾಡಿದ ಪಂಚಾಯತನ ಪೂಜಾವಿಧಿಯಲ್ಲಿ ಶಿವ ಪಂಚಾಯತನ, ವಿಷ್ಣು ಪಂಚಾಯತನ ಎಂದು ಎರಡು ತೆರ. ತ್ರಿನಯನೇಶ್ವರನ ಗುಡಿಯಲ್ಲಿ ಗಣಪತಿ, ಸೂರ್ಯನಾರಾಯಣ, ಪಾರ್ವತಿ-ಇದ್ದು, ವಿಷ್ಣುದೇವರಿರಲಿಲ್ಲ. ಈ ಕೊರತೆಯನ್ನು

ತುಂಬುವುದಕ್ಕಾಗಿ, ಭಕ್ತಾಗ್ರೇಸರರರೆಂದು ಗಮನಕ್ಕೆ ಬಂದ, ಚಿಕ್ಕನಾಯಕನಹಳ್ಳೀಯಲ್ಲಿದ್ದ ತಿಮ್ಮಪ್ಪದಾಸರನ್ನು ಮುಮ್ಮಡಿಯವರು ಮೈಸೂರಿಗೆ ಬರಮಾಡಿಕೊಂಡು, ತ್ರಿನಯನ ದೇವಸ್ಥಾನದ ಮುಂಭಾಗದಲ್ಲಿ ಅವರ ಇಷ್ಟದೈವ ಶ್ರೀವೆಂಕಟರಮಣಸ್ವಾಮಿಗೆ ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದರು.

ದಾಸರು ಪ್ರತಿ ಶನಿವಾರವೂ ಭಜನೆ ಮಾಡಿಕೊಂಡು ಸಾಂಕೇತಿಕವಾಗಿ ಮಧುಕರ ವೃತ್ತಿಯನ್ನು ಆಚರಿಸುತ್ತಿದ್ದರು. ಆಗ, ತ್ರಿನಯನೇಶ್ವರನಿಗೆ ಪ್ರದಕ್ಷಿಣೆ ಹಾಕಿ, ಸಂಚಾರ ಹೊರಡುತ್ತಿದ್ದರು.

ತಿಮ್ಮಪ್ಪದಾಸರು ತರುವಾಯ ದಾಸದೀಕ್ಷೆ ವಹಿಸಿದ್ದ ನಾರಾಯಣದಾಸರು ಅವರ ಪದ್ಧತಿಯನ್ನೆ ಅನುಸರಿಸಿಕೊಂಡು ಬಂದರು. ಪ್ರದಕ್ಷಿಣಾಕಾಲದಲ್ಲಿ ಆ ಸಂದರ್ಭಕ್ಕೆಂದೇ ರಚಿತವಾದ ಈ ಹಾಡನ್ನು ಹಾಡುತ್ತಿದ್ದರು.

೨೧

ತ್ರಿನಯನೇಶ್ವರನ ದೇವಸ್ಥಾನದ ಈಶಾನ್ಯ ದಿಕ್ಕಿನಲ್ಲಿ ಪಾರ್ವತಿ ಅಮ್ಮನವರ ಸನ್ನಿಧಿ ಇದೆ. ವಸ್ತ್ರಾಭರಣಭೂಷಿತವಾದ ಅಮ್ಮನವರ ಕರಿಯ ಕಲ್ಲಿನ ವಿಗ್ರಹ ಬಹಳ ಚೆಲುವಾಗಿದೆ. ಈ ಕೀರ್ತನೆಯಲ್ಲಿ ಪಾರ್ವತಿಯದು ವಿಗ್ರಹವಲ್ಲ, ಪ್ರತ್ಯಕ್ಷಳಾದ ದೇವಿ ಎನ್ನುವಂತೆ ದಾಸರು ಭಕ್ತಿಭಾವದಿಂದ ವರ್ಣಿಸಿದ್ದಾರೆ. ಕೀರ್ತನೆಯ ಪದಲಾಲಿತ್ಯ ಮೆಚ್ಚುವಂತಿದೆ. ಮುಡಿಯಿಂದ ಅಡಿಯವರೆಗೆ ಅನುಕ್ರಮವಾಗಿ ದೇವಿಯ ದಿವ್ಯ ಸೌಂದರ್ಯದ ವರ್ಣನೆಯಿದೆ.

೨೨-೨೭

ಮೈಸೂರು ದೊರೆಯಾದ ಮುಮ್ಮಡಿ ಕೃಷ್ಣರಾಜರಿಂದ ಬ್ರಿಟಿಷ್ (ಕಂಪನಿ) ಸರ್ಕಾರದವರು ರಾಜ್ಯಾಡಳಿತವನ್ನು ವಹಿಸಿಕೊಂಡಿದ್ದರು (೧೮೩೧); ೧೮೮೧ರಲ್ಲಿ ಆಡಳಿತವನ್ನು ದೊರೆಗಳಿಗೆ ಮತ್ತೆ ವಹಿಸಿ ಕೊಡಲಾಯಿತು. (ಮುಮ್ಮಡಿಯವರು ೧೮೬೮ರಲ್ಲಿ ಕಾಲವಾದರು). ಮೈಸೂರಿನ ಅಖಂಡರಾಜ್ಯವು ಒಡೆಯರ ಕುಲದೇವಿಯಾದ ಶ್ರೀಚಾಮುಂಡೇಶ್ವರಿ ಕೃಪೆಯಿಂದ ಮತ್ತೆ ದೊರೆಯಿತು ಎಂದು ಇಲ್ಲಿಯ ತಾತ್ಪರ್ಯ.

೩೦

ಈ ಕೀರ್ತನೆಯಲ್ಲಿ ಶ್ರೀವಿಷ್ಣುವಿನ ದಶಾವತಾರಗಳನ್ನು ವರ್ಣಿಸಿದ ಬಳಿಕ, ಆತ್ಮನಿವೇದನೆ, ಗುರುಸ್ಮರಣೆ ಬರುತ್ತದೆ.

ಸ್ತ್ರೀರ ಮಧ್ಯೆ ನಿರ್ವಾಣದಿ ನಿಂತ ಬುದ್ಧನೆ : ಪುರಂದರದಾಸರ ಒಂದು ದಶಾವತಾರ ವರ್ಣನೆಯ ಕೀರ್ತನೆಯಲ್ಲಿಯೂ 'ಬತ್ತಲೆ ನಿಂತಿಹ ಬುದ್ಧನಿಗೆ' ಎಂಬ ಮಾತು ಬರುತ್ತದೆ. ಬೌದ್ಧಸಾಹಿತ್ಯದಲ್ಲಿ ಈ ಕಲ್ಪನೆಗೆ ಆಧಾರವಿಲ್ಲ. ಬಾಹುಬಲಿಯ ತಪೋಮೂರ್ತಿ ನಿರ್ವಾಣವಾಗಿ ನಿಂತ ಬೆಳ್ಗೊಳದ ಶಿಲ್ಪ ಬಲು ಪ್ರಾಚೀನವಾದುದು. ಇದು ಬುದ್ಧವಿಗ್ರಹ ಎಂಬ ತಪ್ಪು ತಿಳಿವಳಿಕೆಯೆ ಈ ಹೇಳಿಕೆ ಜನಜನಿತವಾಗಿ ಪ್ರಚಲಿತವಾಗಿದ್ದಿರಲು ಕಾರಣವಾಗಿರಬಹುದು.

ತರುಣನಾಗಾಖ್ಯಪುರದ ಮಧ್ಯದೊಳಿಹ ಗುರು ವಾಸುದೇವಾರ್ಯ : ವಾಸುದೇವಾರ್ಯರ ತವರೂರು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ. ಇದನ್ನು ಚಿಕ್ಕನಾಗಪುರ, ತರುಣನಾಗಪುರ ಎಂದು ತಮ್ಮ ಕೀರ್ತನೆಗಳಲ್ಲಿ ಕರೆದಿದ್ದಾರೆ. ಅವರ ಸಮಾಧಿ (ಬೃಂದಾವನ) ಚಿಕ್ಕನಾಯುಕನಹಳ್ಳಿಯಲ್ಲಿದೆ. ತಿಮ್ಮಪ್ಪದಾಸರ ವಂಶಜರೆಲ್ಲರೂ ವಾಸುದೇವಾರ್ಯರನ್ನು ಗುರುವನ್ನಾಗಿ ಸ್ವೀಕರಿಸಿ, ಆರಾಧಿಸುತ್ತಿದ್ದರು. ಈ ಕೀರ್ತನೆಯಲ್ಲಿ ಸಮಾಧಿಸ್ಥರಾದ ಗುರು ವಾಸುದೇವರನ್ನು ದಾಸರು ದೈವ ಭಾವನೆಯಲ್ಲಿ ವ್ಯಕ್ತಪಡಿಸಿದ್ದಾರೆ.

೫. ಮಳಿಗೆ ರಂಗಸ್ವಾಮಿದಾಸರು

೧೦

ಇದು ತುಳಸಿರಾಮದಾಸರ ಮಹಿಮೆಗಳನ್ನು ಹೇಳುವ ಕೃತಿ. ರಂಗಸ್ವಾಮಿದಾಸರು ತುಳಸಿದಾಸರ ಶಿಷ್ಯರಾಗಿ ಅವರ ಜನನದಿಂದ ಹಿಡಿದು ಮುಳಬಾಗಿಲಿನಲ್ಲಿ ಭಜನಮಂದಿರ ಸ್ಥಾಪನೆಯವರೆಗೆ ಜೀವನ–ವಿವರಗಳನ್ನು ಹೇಳಿದ್ದಾರೆ. ಸಿದ್ಧವಟ್ಟಂನ ತುಳಸಿಕುಲದಿಂದ ಜನಿಸಿದರೆಂಬುದನ್ನೂ, ಬೆಂಗಳೂರಿನ ತುಳಸೀವನದಲ್ಲಿ ರಾಮೋತ್ಸವ ಆರಂಭಿಸಿದುದನ್ನೂ ಇಲ್ಲಿ ದಾಖಲಿಸಿದೆ.

ತುಳಸಿರಾಮದಾಸರು ಬೆಂಗಳೂರನ್ನು ಕೇಂದ್ರವಾಗಿಟ್ಟುಕೊಂಡು ೧೯ನೇ ಶತಮಾನದಲ್ಲಿ ಇನ್ನೊಂದು ಹರಿದಾಸ ಆಂದೋಲನವನ್ನೇ ನಡೆಸಿದ ಪ್ರಮುಖ ಹರಿದಾಸರು. ಇವರ ಆಂದೋಲನ ವೈಶಿಷ್ಟ್ಯವೆಂದರೆ ಸಾಮಾಜಿಕ ಬದ್ಧತೆ ಮತ್ತು ಜಾತಿ ಮತ ಭೇದವಿಲ್ಲದ ಸರ್ವ ಜನಾದರಣೀಯತೆ ಸಮಾಜದ ಎಲ್ಲ ಜಾತಿವರ್ಗದವರೂ ಇವರ ಶಿಷ್ಯರೆಲ್ಲ ಲಭ್ಯವಿದ್ದು ಅವರೆಲ್ಲರೂ ಹರಿದಾಸರಾಗಿ ಕೀರ್ತನೆ ರಚಿಸಿದ್ದಾರೆ. ಕೋಲಾರದಿಂದ ಮೈಸೂರಿನವರಿಗೆ ಎಲ್ಲ ಜಿಲ್ಲಾ ತಾಲ್ಲೂಕುಗಳಲ್ಲಿ ರಾಮಮಂದಿರ ನಿರ್ಮಿಸಿ – ರಾಮೋತ್ಸವಗಳನ್ನು ಆಚರಿಸಿದ್ದಾರೆ. ಅದರ ಸೂಚನೆ ಈ ಕೀರ್ತನೆಯಲ್ಲಿದ್ದು ಆಸಂಬಂಧದ ವಿವರವಾದ ಪಟ್ಟಿಯನ್ನು ನೋಡಬಹುದು.

ತುಳಸಿರಾಮದಾಸರು ಕೈಗೊಂಡ ಪ್ರವಾಸ ಮತ್ತು ಚಟುವಟಿಕೆಗಳ ವಿವರ

ಕ್ರ.ಸಂ.	ಭೇಟಿ ನೀಡಿದ ಸ್ಥಳ	ಸಂವತ್ಸರ / ವರ್ಷ	ಶಿಷ್ಯರು / ಸೇವಾಕರ್ತರು
೧	ಕರಣೆಪಾಳ್ಯ / ಕಾಚರಪಾಳ್ಯ (ಬೆಂಗಳೂರು ಸಮೀಪ)	ಶ್ರೀಮುಖ (೧೮೭೩)	ಸೂರಯ್ಯ ಶಾನುಬೋಗ, ಪಟೇಲ
೨	ಚಿಕ್ಕಬಳ್ಳಾಪುರ	ಭಾವ (೧೮೭೪)	ಯರ್ರಗೂಲು ನರಸಿಂಹಯ್ಯ
		ಮನ್ಮಥ (೧೮೯೫)	ಬಟ್ಲೂರಿ ರಾಚಯ್ಯ
		ಯುವ (೧೮೭೫)	ಬಾರಾಮಾರ್ಗಂ ಅಣ್ಣಯ್ಯ ಶೆಟ್ಟಿ
		ಸರ್ವಜಿತ (೧೮೮೮)	ಎಲೆ ಗೋವಿಂದಪ್ಪಯ್ಯ
		ವಿಕೃತಿ (೧೮೯೦)	ದಯಾದಾಕ್ಷಿಣ್ಯಶೀಲ
			ರಾಮೇಗೌಡ (ಅಲಂಗೂರು)
೩	ಚಿಂತಾಮಣಿ		ಬಶೆಟ್ಟಿ ಚಂಗಲರಾಯಪ್ಪ
೪	ಯೆಲದೂರು	ಯುವ (೧೮೭೫)	ರಾಮಯ್ಯ
೫	ಮುಳಬಾಗಿಲು (ಶಕಟನಾಟಪುರ)		ಮುಳಬಾಗಿಲಿನ ಶಿಷ್ಯರು
೬	ಗಂಡಗುಂಟೆಪಾಳ್ಯ		
೭	ಶಿಡ್ಲಘಟ್ಟ	ಧಾತು (೧೮೭೬)	ಬೆಸ್ತ ಅಂಕನಬೋಯಿ
		ವಿರೋಧಿ (೧೮೮೯)	ಓಲೇಟಿ ಸುಬ್ಬಶೆಟ್ಟಿ ರಾಮಚಂದ್ರಯ್ಯ
			(ಕ್ಷಾಮ ಸೂಚನೆಯಿದ್ದರೂ)
			ಬ್ರಾಹ್ಮಣಾದಿ ಗೋಷ್ಠಿ
೮	ಚನ್ನಪಟ್ಟಣ	ಈಶ್ವರ/ಬಹುಧಾನ್ಯ	ಯಜಮಾನ್ ನರಸಿಂಹಯ್ಯ
			ಕೃಷ್ಣಯ್ಯ
೯	ಮದ್ದೂರು	(೧೮೭೭/೭೮)	ಕ್ಷಾಮಪೀಡಿತರಿಗೆ, ಬಡಜನರಿಗೆ ದವಸಧಾನ್ಯ ಬಟ್ಟೆಗಳನ್ನು ದಾನವಾಗಿ ಕೊಡಿಸಿದ್ದು
			ಅಷ್ಟಾಕ್ಷರಿ, ದ್ವಾದಶಕ್ಷರಿ ಕಥಾ ಪ್ರಭಾವಗಳಿಂದ ನೊಂದವರಿಗೆ ವೀರವೈಷ್ಣವದೀಕ್ಷೆ ಕೊಡಿಸಿದ್ದು

ಕ್ರ.ಸಂ.	ಭೇಟಿ ನೀಡಿದ ಸ್ಥಳ	ಸಂವತ್ಸರ / ವರ್ಷ	ಶಿಷ್ಯರು / ಸೇವಾಕರ್ತರು
೧೦	ಕಲ್ಯಾಣನಗರಿ	ಪ್ರಮಾಧಿ (೧೮೭೯)	ಅಪ್ಪಣ್ಣಗಾರಿ, ವೆಂಕಟಪ್ಪ
			ಅಣ್ಣಯ್ಯ, ವೀರುಸ್ವಾಮಿ
		ಸರ್ವಜಿತು (೧೮೮೭)	ಮಳ್ಳೂರು ನಂಜಯ್ಯ
		ಸರ್ವಧಾರಿ (೧೮೮೮)	ಬಾಣಾವರ ನರಸಿಂಹಯ್ಯ
		ದುರ್ಮುಖಿ (೧೮೯೬)	ಮುತ್ತೋಭಿರಾವ್, ವೇಲುಪಿಳ್ಳೆ
		ಶಾರ್ವರಿ (೧೯೦೦)	ಗಿರೆಪ್ಪಯ್ಯ
		ಶುಭಕೃತು (೧೯೦೨)	೧೯೦೦ರ ಪ್ಲೇಗ್‌ಮಾರಿ ಕಾಲದಲ್ಲಿ
		ಶೋಭಕೃತು (೧೯೦೩)	ಹೆಣಗಳಿಗೆ ಸಂಸ್ಕಾರ,
			ನೊಂದವರಿಗೆ ಧರ್ಮಶ್ರದ್ಧೆಯ
೧೧	ಮೈಸೂರು	ವಿಕ್ರಮ (೧೮೮೦)	ಪರಕಾಲಮಠದ
			ಸ್ವಾಮಿಗಳಿಂದಸತ್ಕಾರ,
		ವಿಷು (೧೮೮೧)	ಶ್ರೀಮುಖ ಮಹಾರಾಜರಿಂದ
			ಬಿರುದು, ಗೌರವ, ನಿತ್ಯಕಟ್ಟಲೆಗಳಿಗೆ
			ರಾಮೋತ್ಸವಕ್ಕೆ 'ನೂರೆಯ್ತೆಬದಿ'
			(೧೫೦ ರೂ.) ವರ್ಷಾಶನ;
		ಚಿತ್ರಭಾನು (೧೮೮೯)	ಯೂರೋಪಿಯನ್ 'ಡಿ' ಸಾಹೇಬ
			ಆಂಗ್ಲೇಯನಿಂದಲೂ ಸಹಾಯ
		ಶುಭಕೃತು (೧೯೦೨)	ಮಠಕ್ಕೆ ಭೇಟಿ, ಸತ್ಕಾರ
			(ಶೋಭಕೃತು
		ಶೋಭಕೃತು (೧೯೦೩)	ಮಾಘ ಶುದ್ಧ ದ್ವಾದಶಿಯಿಂದ
			ಭಾನುವಾರದವರೆಗ ೪ ದಿನ
			ಮಹಾಯಾತ್ರೆಗೆ ಅನುಜ್ಞೆ
೧೨	ಕೋಲಾರ (ಕಠೆರುಪಾಳ್ಯ)	ಸ್ವಭಾನು (೧೮೮೩)	ಪಟೇಲ ಅಪ್ಪಾಜಿ
			ಚೇರ್ಮೆನ್ ವೆಂಕಟರಮಣಪ್ಪ
		ನಂದನ (೧೮೯೨)	ಹಾರುವ ಪಲ್ಲಿ ಅಪ್ಪಾಜಿ,
		ಜಯ (೧೮೯೪)	ಭಜನೆ ಗಿಡ್ಡಪ್ಪ
೧೩	ತಿಪಟೂರು	ತಾರಣ (೧೮೮೪)	ರಾಮಯ್ಯ
೧೪	ತ್ಯಾಮಗೊಂಡಲು		ಗ್ರಂಥೀಪುಟ್ಟಸ್ವಾಮಿ

ಕ್ರ.ಸಂ.	ಭೇಟಿ ನೀಡಿದ ಸ್ಥಳ	ಸಂವತ್ಸರ / ವರ್ಷ	ಶಿಷ್ಯರು / ಸೇವಾಕರ್ತರು
೧೫	ಪಟ್ರಪಲ್ಲಿ	ಪಾರ್ಥಿವ (೧೮೮೫)	ವಿ. ರಾಘವಯ್ಯ, ಟಿ. ವೆಂಗಯನಾಯ್ಡು, ರಂಗೇಗೌಡ
೧೬	ಮಿರ್ಲೆಗ್ರಾಮ (ನೀರ್ಲೆ)	ವ್ಯಯ (೧೮೮೬)	ಲಕ್ಕೇಗೌಡ, ರಾಮೇಗೌಡ, ದೇವೇಗೌಡ
೧೭	ಆಲಂಗೂರು	ವಿರೋಧಿ (೧೮೯೦) ಜಯ, ನಂದನ, ವಿಜಯ, ಜಯ	ರಾಮೇಗೌಡ
೧೮	ರಾಜಾಪೇಟೆ (ಕೆ.ಜಿ.ಎಫ್.) (ಆಲಂಗೂರಿನ ಕಂಗುಂದಿ ಸಂಸ್ಥಾನ)	೧೮೯೧ ನಂದನ (೧೮೯೨) ಚೈತ್ರ ಶುದ್ಧ ಬಿದಿಗೆ ವಿಜಯ (೧೮೯೩)	ಹನುಮಂತರೆಡ್ಡಿ, ರಾಮರೆಡ್ಡಿ, ಸುಬ್ಬರೆಡ್ಡಿ, ಅಹೋಬಲರೆಡ್ಡಿ, ರೆಡ್ಡಪ್ಪ, ಮುಂತಾದ ಶಿಷ್ಯರಿಗೆ ದಾಸತ್ವ ನೀಡಿದ್ದು
೧೯	ದಮ್ಮಸಂದ್ರ	ವಿಜಯ (೧೮೯೩) (ಆಲಂಗೂರು ಸಮೀಪ)	ಮಹಾಲಕ್ಷ್ಮೀ ದರ್ಶನ.
೨೦	ಸೀರ್ಕ್ಯಾಪವಳ್ಳಿ (ಸಾಪೂರು) (ಆವಣಿ ಮಠ)	ಜಯ (೧೮೯೪)	ದೀಕ್ಷಿತರಿಗೆ ತತ್ತ್ವೋಪದೇಶ, ಸಿದ್ಧಾಂತ ನಿರ್ಧಾರಣ ಮಾಡಿದ್ದು
೨೧	ವಡ್ಡಿಪಲ್ಲಿ (ಚಿಂತಾಮಣಿ)	ದುರ್ಮುಖಿ (೧೮೯೬)	ಕಬೀರ–ರೋಹಿದಾಸ ಸಂವಾದ ಕಾಹಾಳ ಭೈರವ ಕವೀಶ್ವರ (ತೋರಬೆಯ್ಯರೆಡ್ಡಿ)ದಾಸರಿಂದ ಸ್ತುತಿ ಶ್ರೀನಿವಾಸದಾಸರನ್ನು ಹನುಮಂತನಿಗೂ ಬೆಂಗಳೂರು ಗಿರಿಯಪ್ಪನನ್ನು ಆದಿಶೇಷನಿಗೂ ಹೋಲಿಕೆ
೨೨	ಬವರಿಂಗೆಪೇಟೆ (ಕೆ.ಜಿಎಫ್.–ಬಂಗಾರಪೇಟೆ)	ಹೇವಿಳಂಬಿ (೧೮೯೭)	ರಾಜಾಪೇಟೆ ಮುನಿಸ್ವಾಮಿರೆಡ್ಡಿ ಹಾ.ವೀ.ಶೇಷಪ್ಪರೆಡ್ಡಿ
೨೩	ಕಾಗೆರೆ (ಚಿಂತಾಮಣಿ ಸಂಕಾಪ)	ವಿಳಂಬಿ (೧೮೯೮)	ಕೋಡಿಪಲಣಶೆಟ್ಟಿ, ಸಿಂಹಪ್ಪ ಜಿ.ರೆಡ್ಡಿ ಸಿದ್ದಪ್ಪ

ಕ್ರ.ಸಂ.	ಭೇಟಿ ನೀಡಿದ ಸ್ಥಳ	ಸಂವತ್ಸರ / ವರ್ಷ	ಶಿಷ್ಯರು / ಸೇವಾಕರ್ತರು
೨೪	ದರಿಶಕುಪ್ಪೆ	ಚಿತ್ರಭಾನು (೧೮೮೨) ವಿಕಾರಿ (೧೮೯೯) ಶುಭಕೃತು (೧೯೦೨)	ಕುಳ್ಳೇಗೌಡ, ಚೆಲುವೇಗೌಡ, ತಿಮ್ಮೇಗೌಡ
೨೫	ಹೊನ್ನಬಳ್ಳಿ (ಹೊಸಹಳ್ಳಿ) (ಶ್ರೀರಂಗಪಟ್ಟಣ ಸಮೀಪ)	ಪ್ಲವ (೧೯೦೧)	ತೊಟ್ಟಿ ಮನೆ ಬೈರಿಶೆಟ್ಟಿ (ಸಾಕೇ) ನಾರ್ವೆ ಹನುಮಂತಶೆಟ್ಟಿ
೨೬	ತುಳಸಿತೋಟ (ಬೆಂಗಳೂರು)	ಶುಭಕೃತು (೧೯೦೨)	ತೊಪ್ಪಲ್ ವೆಂಕಟಾಚಾರ್ಯಸಾಹುಕಾರ್ ಗರುಡಾಚಾರ್ಯರಿಂದ ಜೊತೊಯಲ್ಲಿ ಕೊಂಡೊಯ್ಯುತ್ತಿದ್ದ ದೇವತಾ ಮೂರ್ತಿಗಳಿಗೆ ಶಾಶ್ವತ ಸೇವೆ.
೨೭	ಕಾವೇರಿ ತೀರದ ಲಕ್ಷ್ಮೀಕ್ಷೇತ್ರ (ಗಂಜಾಂ ಬಳಿ)	ಶುಭಕೃತು (೧೯೦೨)	ಲಕ್ಷ್ಮೀಸ್ತುತಿ ಸಂಕೀರ್ತನೆ ಸಿರಿತಾರಾವಳಿ ಕೃತಿರಚನೆ
೨೮	ಕನ್ನೇಗೌಡನ ಕೊಪ್ಪಲು (ಶ್ರೀರಂಗಪಟ್ಟಣ ಸಮೀಪ)	ಶುಭಕೃತು (೧೯೦೨) (ಚೈತ್ರ ಶುದ್ಧ ನವಮಿ ಇಂದ ೧೦ ದಿನ)	ಪರಕಾಲಮಠದ ಸ್ವಾಮಿಗಳ ಆಗಮನ, ಮಂಗಳಾಶಾಸನ ಸ್ತುತಿ
೨೯	ಭರತಪುರದ ಮಠ ಫ್ರೇಜರ್ ಟೌನ್ ಬೆಂಗಳೂರು)	ಶುಭಕೃತು (೧೯೦೨)	ಶಿಷ್ಯ ನರಸಿಂಹದಾಸರು ಮತ್ತು ಸ್ವತಃ ಮತ್ತು ದಾಸರಿಗೆ ಕೊಟ್ಟಿದ್ದರತ್ನ ಖಚಿತ ಕಿರೀಟವನ್ನು ಕೈಯಲ್ಲಿ ಧಾರಣೆಮಾಡಿ ದೇವರಲ್ಲಿ ಅಂತಿಮಪಯಣಕ್ಕೆ ವಿಜ್ಞಾಪನೆ. (೩೧ ವರ್ಷ ಸೇವೆಯ ನಿವೇದನೆ) ಸಾಹುಕಾರ್ ಗುರಡಾಚಾರ್ಯರಿಗೆ ದೇವಾಲಯ ಸೇವೆಯನ್ನು ರಾಘವಭಟ್ಟರಿಗೆ ವಹಿಸಿ, ಮಠದಲ್ಲಿದ್ದ ಜಗನ್ನಾಥ ಸಾಧುಗಳ ಆತಿಥ್ಯವನ್ನು ಬಿ.ವೆಂಕೋಜಿರಾಯನಿಗೆ ವಹಿಸಿದ್ದು, ಶಾಶ್ವತಸೇವೆಗೆ ವ್ಯವಸ್ಥೆ ಅರಮನೆಯಿಂದ ವರ್ಷಾಸನವನ್ನು ಉಳಿಸಲು ರಾಯಸದ ಏರ್ಪಾಡು.

ಕ್ರ.ಸಂ.	ಭೇಟಿ ನೀಡಿದ ಸ್ಥಳ	ಸಂವತ್ಸರ / ವರ್ಷ	ಶಿಷ್ಯರು / ಸೇವಾಕರ್ತರು
೩೦	ತಿರುಪತಿ (ತಿರುಮಲ)	ಶೋಭಕೃತು (೧೯೦೩)	ತಿರುನಕ್ಷತ್ರ ಸೇವೆ, ನಿತ್ಯಭಜನೆ, ಪ್ರಾಕಾರ ಪ್ರದಕ್ಷಿಣೆಯ ಸೇವೆಗೆ ವ್ಯವಸ್ಥೆ ಅಂತರಂಗ ದರ್ಶನ, ಸೇವೆ ವೇದಾಂತ ದೇಶಿಕರ ಸನ್ನಿಧಿ
೩೧.	ಶ್ರೀರಂಗ		ದರ್ಶನ, ಭಜನೆ
೩೨	ತಿರುಚ್ಚಾನೂರು		ಶುಕ್ರವಾರದ ಭಜನೆಗೆ ಏರ್ಪಾಡು ತಾಯಾರ್ ಸನ್ನಿಧಿ
೩೩	ಮೈಸೂರು ಪರಕಾಲಮಠ	ಶೋಭಕೃತು (೧೯೦೨) ಮಾಘ ಶುದ್ಧ ದ್ವಾದಶಿ-ಚತುರ್ದಶಿ ಭಾನುವಾರ	ಗಂಜಾಂನ ಸಾಹುಕಾರ ಮಲ್ಲಯ್ಯನ ಜಮೀನನ್ನು ತುಳಸಿವನಕ್ಕೆ ದಾನ ಪಡೆದು ಪ್ರತಿವರ್ಷ ಧಾನ್ಯ ಕಳಿಸಲು ಏರ್ಪಾಡು ಶ್ರೀ ಶ್ರೀಗಳಿಂದ ಮಹಾಯಾತ್ರೆಗೆ ಅನುಮತಿ
೩೪	ದರಿಶಕುಪ್ಪೆ ಚೌಡನಪಲ್ಲಿ	ಶೋಭಕೃತು (೧೯೦೩) ಮಾಘ ಬಹುಳ ಪಾಡ್ಯ ಮಂಗಳವಾರ	ಶಿಷ್ಯನಿಗೆ ಸ್ವಸ್ಥಾನಕ್ಕೆ ತೆರಳಲು ಸೂಚನೆ ಶಿಷ್ಯ ಶ್ರೀನಿವಾಸದಾಸರಿಂದ ಸನ್ಮಾನ
೩೫	ವಿದ್ವಜ್ಜನರಸಭೆ	ಶೋಭಕೃತು ಮಾಘ ಬಹುಳ ಬಿದಿಗೆ ಬುಧವಾರ	ಶಿಷ್ಯಾ ಲಿಂಗಮ್ಮನ ಮನೆಯಲ್ಲಿ ಧ್ಯಾನ, ಭಜನೆಗಳ ನಡುವೆ ಪದ್ಮಾಸನ ಸ್ಥಿತಿಯಲ್ಲಿ ಧ್ಯಾನಸಕ್ತರಾಗಿ ದೇಹತ್ಯಾಗ.

ಈ ಎಲ್ಲ ವಿವರಗಳನ್ನು ತುಳಸಿರಾಮದಾಸರ ಚರಿತ್ರೆ' ಎಂಬ ಹರಿಕಥಾಕೃತಿಯಲ್ಲಿ ದಾಖಲಾಗಿದ್ದಂತೆ ಕೊಟ್ಟಿದೆ. ಇದರ ಸೂಚನೆಯನ್ನು ಈ ಕೃತಿ ಕನ್ನಡ ಸಂಸ್ಕೃತ ಭಾಷೆಗಳ ಸುಂದರ ಮಿಶ್ರಣದಲ್ಲಿ ಇದ್ದರೂ ಅಲ್ಲೊಂದು ಇಲ್ಲೊಂದು ತೆಲುಗು ಪದಗಳೂ ನುಸುಳಿದೆ. (ಇದ್ದರ, ತೆಮುನವೆಪ್ಪುಡು, ಪುತ್ತುಡಿಗುರು, ಇತ್ಯಾದಿ) ೧೪ನೇ ನುಡಿ ಪೂರ್ತಿ ತೆಲುಗಿನಲ್ಲಿದ್ದುದರಿಂದ ಪಠ್ಯದಲ್ಲಿ ಬಿಟ್ಟಿದೆ. ಅದು ಹೀಗಿದೆ.

"ಅನೇಕ ಸ್ಥಳ ಮೂಲಕದ ತಿರುತಾರೊತ್ಸವಮುಲು ಲಾಲೀ
ಕೊನಿಕಿಂಕರಜನ ಕಾಮಿತ ಘನಪ್ರದುಡೈತಿವಿಲಾಲೀ"

೧೭

ಈ ಕೀರ್ತನೆಯು ರಂಗಸ್ವಾಮಿದಾಸರ ಶಿಷ್ಯ ಬೈರವಗೌಡರ ಸ್ತುತಿ. ಮೈಸೂರು ಸಮೀಪದ ಸೋಮೇಗೌಡನ ಕೊಪ್ಪಲಾಗಿರುವ ಈಗಿನ ಕೂರಗಳ್ಳಿಯ ವಾಸಿಯಾದ ಈತ ೧೯ ನುಡಿಗಳಲ್ಲಿ ರಂಗಸ್ವಾಮಿದಾಸರ ಸಂಪೂರ್ಣ ಚರಿತ್ರೆ–ಮಹಿಮೆಗಳನ್ನು ದಾಖಲಿಸಿದ್ದಾರೆ. ಇದರಲ್ಲಿ ದಾಸರ ಜನನ ದಿನಾಂಕದ ಸೂಚಿಸಿರುವುದಲ್ಲದೆ ಹರಿಕಥೆಯ ಕಾಲದ ವೇಷಭೂಷಣ–ಭಾವ–ಭಂಗಿಗಳನ್ನು ದಾಖಲಿಸಿರುವುದು ಗಮನಿಸಬೇಕಾದ ಅಂಶ. ರಂಗಸ್ವಾಮಿದಾಸರಿಗೆ 'ಗುರುಸೇವಾದುರಂಧರ' ಎಂಬ ಬಿರುದಿದ್ದುದನ್ನು ಪರಕಾಲಮಠದಲ್ಲಿ ಬೆಳ್ಳಿಕಿರೀಟ ಧಾರಣೆಯಾದುದನ್ನು ಈ ಕೀರ್ತನೆ ಹೇಳುತ್ತದೆ.

ಈ ಕೃತಿಯಲ್ಲಿ ತುಳಸಿರಾಮದಾಸರ ಚಟುವಟಿಕೆಗಳ ವಿವರಗಳ ಸೂಚನೆ ಬಂದಿದ್ದು, ಆ ವಿವರಗಳು ತುಳಸಿರಾಮದಾಸರ ಹರಿಕಥಾಕೃತಿಯಲ್ಲಿ ದಾಖಲಾಗಿದೆ. ಅದನ್ನು ಹಿಂದಿನ ಟಿಪ್ಪಣಿಯಲ್ಲಿ ನೀಡಿದೆ.

ಮುಖ್ಯವಾಗಿ ಕೀರ್ತನಕಾರರಾದ ಬೈರವಗೌಡ ಅಂಕಿತರಹಿತನಾಗಿ ದಾಸರಿಂದ ಅಂಕಿತಾ–ಕಾಂಕ್ಷಿಯಾಗಿ ಈ ಕೃತಿಯನ್ನು ರಚಿಸಿರುವುದು ವಿಶಿಷ್ಟವಾದುದಾಗಿದೆ. ತುಳಸಿರಾಮದಾಸರ ಶಿಷ್ಯಪರಂಪರೆಯಲ್ಲಿ ಹರಿದಾಸರಾಗುವುದಕ್ಕೆ ಒಂದು ನಿರ್ದಿಷ್ಟದೀಕ್ಷಾಪದ್ಧತಿಯಿತ್ತೆಂಬುದನ್ನು ಇದು ಸ್ಪಷ್ಟಪಡಿಸುತ್ತದೆ. ಚಕ್ರಾಂಕನ–ಮಂತ್ರೋಪದೇಶ ಮಾಡುವ ಮೂಲಕ ಅಂಕಿತ ನೀಡುವ ಸಂಪ್ರದಾಯವೊಂದು ಇಲ್ಲಿ ಇರುವುದನ್ನು ಇದು ಹೇಳುತ್ತಿದೆ ಇದನ್ನು, ಈ ರೀತಿ ದಾಸದೀಕ್ಷೆ ಪಡೆದು ಈ ಪರಂಪರೆಯನ್ನು ಮುಂದುವರಿಸುತ್ತಿರುವ ಶಿಷ್ಯ ಚೌಡಯ್ಯದಾಸರೂ ಖಚಿತಪಡಿಸುತ್ತಾರೆ.

ಅನುಬಂಧ–೩

ಕೀರ್ತನೆಗಳ ಅಕಾರಾದಿ ಸೂಚಿ

ಕ್ರಮ ಸಂಖ್ಯೆ	ಕೀರ್ತನೆಯ ಮೊದಲಸಾಲು	ಕೀರ್ತನೆ ಸಂಖ್ಯೆ
೨೧.	ಎಂಥ ದಯವಂತನೋ ಮಂತ್ರ	೧೩೫
೨೨.	ಎಂದು ಕಾಂಬೆನು ನಂದಗೋಪನ	೮೯
೨೩.	ಎನಗ್ಯಾಕೆ ಕವಿಯೆಂಬ ಶ್ರೇಷ್ಠ	೨೦೫
೨೪.	ಏಕೆ ನೀ ಮರುಳಾದೆ ನಾಕೇಶ	೯೮
೨೫.	ಏನು ಧನ್ಯರೋ ಜಗದಿ	೧೨೫
೨೬.	ಏಳಯ್ಯ ಸದ್ಗುರುರಾಯ ಈಗ	೨೪೪
೨೭.	ಓ ಎನ್ನ ಬಂಧುಗಳೇ	೨೨೮
೨೮.	ಕಂಡೆ ನಾ ಕಣ್ಣಾರೆ ನಾ	೧೧೧
೨೯.	ಕಂತು ಜನಕ ಶ್ರೀಕಾಂತನ	೬೫
೩೦.	ಕಂಬು ಕಂಧರ ಸತತ ಬಿಡದೆ	೭೯
೩೧.	ಕರ್ಪೂರದಾರುತಿ ತಾರೆ	೭೬
೩೨.	ಕರವ ಪಿಡಿ ಗುರುರಾಯ	೧೮೦
೩೩.	ಕರುಣದಿ ಕೊಡು ವರವಾ	೧೧
೩೪.	ಕರುಣದಿ ಪಾಲಿಸೆನ್ನ ಶ್ರೀ	೭೭
೩೫.	ಕರುಣದಿ ಪಿಡಿ ಕೈಯ್ಯ ಸಿರಿ	೭೦
೩೬.	ಕರುಣಾಕರ ದೇವಾಧಿ ದೇವಾ	೧೦೩
೩೭.	ಕರುಣಾವಾರುಧೀಶ	೪೭
೩೮.	ಕರುಣಿಸಿ ಪಿಡಿಯೊ ಕೈಯಾ	೧೭೩
೩೯.	ಕರುಣಿಸು ಗುರುವರ ಪರಿಮಳಾರ್ಯ	೧೩೬
೪೦.	ಕರುಣಿಸೋ ಗುರು ಮಾರುತಿ	೪೪
೪೧.	ಕಳೆಯಬ್ಯಾಡವೋ ಇಂಲವ ತಿಳಿ	೧೮೪
೪೨.	ಕಾಮಿನಿ ಮಣಿ ಗರಿಗಾಮಿನಿ	೨೨೩
೪೩.	ಕಾಯೆ ದುರ್ಗಾಂಭ್ರಣಿಯೆ	೫೮
೪೪.	ಕಾಯೊ ಕಪಿವರ ಕಾಯಜ ವೈರಿ	೪೬
೪೫.	ಕಾಯೊ ಕಾಯೊ ಕಾಯೊ ಕಾಯೊ	೧೦೪
೪೬.	ಕಾಯೊ ಕಾಯೊ ಜಿತಕಾಯ	೧೬೦
೪೭.	ಕಾಯೋ ಕಾವೇರಿರಂಗ	೧೦೭
೪೮.	ಕಾಯೊ ಜಿತಾಮಿತ್ರ ಯಮಿಕುಲ	೧೫೮
೪೯.	ಕಾಯೋ ದಯಾಭರಿತ ಮಾರುತಿ	೪೫

ಕ್ರಮ ಸಂಖ್ಯೆ	ಕೀರ್ತನೆಯ ಮೊದಲಸಾಲು	ಕೀರ್ತನೆ ಸಂಖ್ಯೆ
೧೩೬.	ಪೊಂದಿದ ಭಕುತರ ತ್ವರದಿ	೯೫
೧೩೭.	ಪೊಂದಿ ಭಜಿಸು ಸತತ ಒಂದೇ ಮನದಿ	೨೫೩
೧೩೮.	ಪೊಂದಿ ಭಜಿಸು ಸುಶೀಲೇಂದ್ರರ	೧೫೦
೧೩೯.	ಪೊಂದಿ ಭಜಿಸೊ ನಿರುತ	೨೦೧
೧೪೦.	ಪೊಗಳು ಮನವೆ ನೀ	೧೯೨
೧೪೧.	ಪೋತನ ಪಾಲಿಸೋ ಪವಮಾನ	೨೯
೧೪೨.	ಪೋದರಯ್ಯ ತೆರಳಿ ಪೋದರು	೨೪೦
೧೪೩.	ಪೋಷಿಸು ಎನ್ನಯ ದೋಷಗಳೆಣಿಸದೆ	೨೩೫
೧೪೪.	ಪೋಷಿಸೆನ್ನ ಜೀಯ ಶ್ರೀ	೨೩೨
೧೪೫.	ಪೋಷಿಸೆನ್ನ ದಾಸಶ್ರೇಷ್ಠನೆ	೧೯೬
೧೪೬.	ಪೋಷಿಸೆನ್ನನು ನಿರುತ ಶೇಷದೇವ	೧೮
೧೪೭.	ಪ್ರಥಮಾಂಗ ಪ್ರಥಮಾಂಗ	೩೨
೧೪೮.	ಪ್ರಭುರಾಯ ಪ್ರಭುರಾಯ	೨೩೩
೧೪೯.	ಬಂದೆನ್ನ ಕಾಯೊ ಕರುಣದಿಂದ	೨೫೪
೧೫೦.	ಬಸವನೆಂದರೆ ಪಾಪ ಬಾಹೋದೇನಯ್ಯ	೨೦೩
೧೫೧.	ಬಲುಕಷ್ಟ ಬರಗಾಲ ಬಂದಿತಯ್ಯ	೨೦೧
೧೫೨.	ಬಾಗಿ ಬೇಡುವೆ ಪಿಡಿಯೊ ಬೇಗ	೧೬೮
೧೫೩.	ಬಾರೆ ಬೇಗನೆ ವಾರಿಜಾಮುಖಿ	೨೧೮
೧೫೪.	ಬಾರೆ ಭಾಗ್ಯದ ನಿಧಿಯೆ	೫೪
೧೫೫.	ಬಾರೈ ಪ್ರಭುವೆ ಬಾರೈ	೧೮೮
೧೫೬.	ಬಾರೈ ಬಾರೈ ಭಾರತಿ ಮನೋಹರ	೨೮
೧೫೭.	ಬಾರೈಯ ಬಾರೈಯ	೨೪೩
೧೫೮.	ಬಾರೈಯ್ಯಾ ಬಾರೈಯ್ಯಾ	೩೭
೧೫೯.	ಬಾರೋ ಬಾರೋ ಶ್ರೀ ಗುರುರಾಯ	೧೩೦
೧೬೦.	ಬಾಲನೆ ಬಹು ವಿಭವದಲಿ	೨೧೨
೧೬೧.	ಬೆಳಗಿರೆ ಗೋಪಾಲ ಬಾಲಗೆ	೯೨
೧೬೨.	ಬೆಳಗಿರೆ ಹರುಷದಿ ಆರತಿ	೯೩
೧೬೩.	ಬೆಳಗಿರೆ ಶ್ರೀಹರಿಗೆ ಆರುತಿಯಾ	೬೯
೧೬೪.	ಬೆಳಗೆ ಬೇಗ ಭ್ರಮರ ವೇಣಿ	೮೬

ಗೋಪಾಲದಾಸರ ಕೀರ್ತನೆಗಳು

ವೆಂಕಟದಾಸರ ಕೀರ್ತನೆಗಳು

ತಿಮ್ಮಪ್ಪದಾಸರ ಕೀರ್ತನೆಗಳು

ನಾರಾಯಣದಾಸರ ಕೀರ್ತನೆಗಳು

ಕ್ರಮ ಸಂಖ್ಯೆ	ಕೀರ್ತನೆಯ ಮೊದಲಸಾಲು	ಕೀರ್ತನೆ ಸಂಖ್ಯೆ
೩	ಒಂದೆ ಸಾಕೆನಗೆ ನಿನ್ನಯ ಸೇವೆ	೩೧
೪	ಗಿರಿಜಾಕಾಂತನೆ ನಿನ್ನ ಶುಭ	೧೫
೫	ಗುರುವರನನು ಭಜಿಪೆ ಶ್ರೀ ಶೃಂಗೇರಿ ಗುರುವರನನು ಭಜಿಪೆ	೨೮
೬	ಚಾಮುಂಡೇಶ್ವರಿ ಚಾಮೇಂದ್ರನೃಪನನ್ನು	೨೨
೭	ಚಾಮುಂಡೇಶ್ವರಿ ಪಾಲಿಸು ಬೇಗದಿಂ	೨೩
೮	ಚಾಮುಂಡೇಶ್ವರಿ ಪಾಲಿಸೆ ನಮ್ಮ	೨೪
೯	ಜಯಮಂಗಳಂ ನಿತ್ಯ ಶುಭಮಂಗಳಂ	೧
೧೦	ಜಯಮಂಗಳಂ ನಿತ್ಯ ಶುಭಮಂಗಳಂ	೨೧
೧೧	ನಿನ್ನ ನಂಬಿದೆ ಕಮಲದಳಾಕ್ಷನೆ	೩೨
೧೨	ನೀನೇ ಗತಿ ಎನಗೆ ವೆಂಕಟರಾಯ ನೀನೇ ಗತಿ ಎನಗೆ	೩೩
೧೩	ಪಾಲಯಮಾಂ ಶ್ರೀ ಚಾಮುಂಡೇಶ್ವರಿ	೨೫
೧೪	ಬಾರಯ್ಯ ಭಕ್ತವತ್ಸಲ ನೀನು	೧೭
೧೫	ಬಾರೊ ಬಾರೊ ಭಾಗ್ಯದ ನಿಧಿಯೆ	೩
೧೬	ಬಾರೊ ಬಾರೊ ಮನೆಗೆ ಬಾರೊ ಬಾರೊ	೧೮
೧೭	ಬಾರೊ ಬಾರೊ ಶ್ರೀ ವೇಣುಗೋಪಾಲ ಎನಗೆ ನೀ	೧೩
೧೮	ಬಿಟ್ಟಿರಲಾರೆ ನಿನ್ನ	೪
೧೯	ಬೇಗ ಬಾರೊ ರಂಗ ಕುಣಿಕುಣಿಯುತ	೧೪
೨೦	ಮಂಗಳ ತಿರುಪತಿನಾಥನಿಗೆ ಜಯ	೩೫
೨೧	ಮಂಗಳ ತ್ರಿನಯನೇಶ್ವರನಿಗೆ ಜಯ	೩೬
೨೨	ಮಂಗಳ ಶ್ರೀ ಚಾಮುಂಡೇಶ್ವರಿಗೆ ಜಯ	೨೬
೨೩	ಮಂಗಳಂ ಮಂಗಳಂ ದಾಶರಥಿಗೆ	೫
೨೪	ಯಾಕೆ ದಯ ಬಾರದೊ ದಾಸನ	೩೪
೨೫	ರಕ್ಷಮಾಂ ಶಿವಶಂಕರ ಸ್ವಾಮಿನ್	೧೯
೨೬	ರಕ್ಷಿಸಮ್ಮ ರಕ್ಷಿಸಮ್ಮ ಎನ್ನ	೨೭
೨೭	ರಕ್ಷಿಸು ಎನ್ನನು ನರಸಿಂಹ	೨
೨೮	ರಜತಾದ್ರಿಪನೆ ನೀನು ರಮಣೀಯ ಮೂರ್ತಿಯಿಂ	೧೬
೨೯	ರಾಘವಂ ಸ್ಮರಾಮಿ ಸತತಂ ರಾಘವಂ	೬

ಮಳಿಗೆ ರಂಗಸ್ವಾಮಿದಾಸರ ಕೀರ್ತನೆಗಳು

ಕ್ರಮ ಸಂಖ್ಯೆ	ಕೀರ್ತನೆಯ ಮೊದಲಸಾಲು	ಕೀರ್ತನೆ ಸಂಖ್ಯೆ
	ಹೊಸಕೆರೆ ಚಿದಂಬರಯ್ಯನವರ ಕೀರ್ತನೆಗಳು	
೧	ಕರುಣದಿಂದ ಪೊರೆವುದೆನ್ನ	೫
೨	ಗಂಗಾ ಗಂಗಾ ಎಂದು ನಿನ್ನ	೪
೩	ಗಿರಿಶಾಗೌರಿ ಪ್ರಾಣಾಧೀಶ	೬
೪	ಹಾಸ್ಯವನೆ ಬೇಡುವೆ ನಿನ್ನ	೩
೫	ನಿನ್ನನು ನಂಬಿದೆ ಶಾರದೆ	೨
೬	ಶ್ರೀ ಗಿರಿಜಾತನಯಾ ಮಹೋದಯ	೧

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ
ಹರಿದಾಸ ಸಾಹಿತ್ಯ ಒಂದು ಪ್ರಮುಖ ಮಜಲು.
ಹರಿದಾಸರು ರಚಿಸಿರುವ ವಿಪುಲ ಕೀರ್ತನೆಗಳು
ಕರ್ನಾಟಕ ಸಾಂಸ್ಕೃತಿಕ ತವನಿಧಿಗಳಾಗಿವೆ.
ದಾಸ ಸಾಹಿತ್ಯದಲ್ಲಿ ಕಂಡುಬರುವ
ಭಾಷಿಕ ಹಾಗೂ ಸಾಹಿತ್ಯಕ ಸೊಬಗು,
ಆಧ್ಯಾತ್ಮಿಕ ಬೆಡಗು, ಸಂಗೀತದ ಮೆರುಗು ಅನನ್ಯ.
ದಾಸ ಸಾಹಿತ್ಯವು ಜ್ಞಾನ, ಮನೋಲ್ಲಾಸ
ಮತ್ತು ಜೀವ ಸಂಸ್ಕಾರಗಳ ತ್ರಿವೇಣಿ ಸಂಗಮ.
ಇಂಥ ದಾಸ ಸಾಹಿತ್ಯವನ್ನು
ಸಮಗ್ರವಾಗಿ ಸಂಗ್ರಹಿಸಿ, ಸಂಪಾದಿಸಿ,
ಬಹುಮಾಧ್ಯಮದಲ್ಲಿ ಹಾಗೂ ಸುಲಭ ಬೆಲೆಯಲ್ಲಿ
ಕನ್ನಡ ಜನತೆಗೆ ನೀಡುವ ಮಹತ್ವದ ಆಶಯವೇ
ಸಮಗ್ರ ದಾಸ ಸಾಹಿತ್ಯ ಯೋಜನೆ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು